
ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು

ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ. ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ



ಸಂಶೋಧಕ
ಕಿಶೋರ ಎನ್. ದಾಟನಾಳ

ಮಾರ್ಗದರ್ಶಕರು
ಡಾ. ಎಸ್.ಸಿ. ಪಾಟೀಲ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

೨೦೦೧

ಲಲಿತಕಲಾ ನಿಕಾಯ, ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

393

ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು

ಒಂದು ಅಧ್ಯಯನ

ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಮಹಾಪ್ರಬಂಧ

೨೦೧೦

ಸಂಶೋಧಕ

ಕಿಶೋರ. ಎನ್. ದಾಟನಾಳ

ಮಾರ್ಗದರ್ಶಕರು

ಡಾ. ಎಸ್.ಸಿ. ಪಾಟೀಲ

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಲಲಿತಕಲಾ ನಿಕಾಯ

ದೃಶ್ಯಕಲಾ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಘೋಷಣಾ ಪತ್ರ

ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು – ಒಂದು ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ **ಡಾ. ಎಸ್.ಸಿ. ಪಾಟೀಲ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದ ಮುಖ್ಯಸ್ಥರ ಮೂಲಕ ಲಲಿತಕಲಾ ನಿಕಾಯಕ್ಕೆ ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಇನ್ನಿತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

(ಕಿಶೋರ. ಎನ್. ದಾಟನಾಳ)
ದೃಶ್ಯಕಲಾ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸ್ಥಳ : ವಿದ್ಯಾರಣ್ಯ

ದಿನಾಂಕ : 13-9-2010

ಪ್ರಮಾಣ ಪತ್ರ

ಕಿಶೋರ. ಎನ್. ದಾಟನಾಳ ಇವರು ನನ್ನ ಮಾರ್ಗದರ್ಶನದಲ್ಲಿ **ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು – ಒಂದು ಅಧ್ಯಯನ** ಎಂಬ ಶಿರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಸಿದ್ಧಪಡಿಸಿದ್ದು, ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಸದರಿ ಮಹಾಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು ಇದರ ಯಾವುದೇ ಭಾಗ ಮತ್ತು ವಿಷಯವನ್ನು ಯಾವುದೇ ಉದ್ದೇಶಕ್ಕೆ ಬಳಸಿಕೊಂಡಿಲ್ಲ ಮತ್ತು ಈ ಮೊದಲು ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

(ಡಾ. ಎಸ್. ಸಿ. ಪಾಟೀಲ)
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸ್ಥಳ : ವಿದ್ಯಾರಣ್ಯ
ದಿನಾಂಕ : 13-9-2010

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಯಾವುದೇ ಕಲೆ, ಕಲಾಪ್ರಕಾರಗಳು ನಿರ್ದಿಷ್ಟ ಜ್ಞಾನದ ಚೌಕಟ್ಟಿನಲ್ಲಿ ಹುಟ್ಟು ಹಾಕಲ್ಪಡುವುದಿಲ್ಲ. ಸಂದರ್ಭ ಹಾಗೂ ಅನುಭವದ ಅಭಿವ್ಯಕ್ತಿಯಿಂದ ಅವು ಬದುಕಿನಲ್ಲಿ ತಮ್ಮನ್ನು ಸೀಮಿತಗೊಳಿಸಿಕೊಂಡು ಬೆಳೆಯುತ್ತ ಬಂದಿವೆ. ಈ ರೀತಿಯ ಬೆಳವಣಿಗೆಯ ನೆಲೆಯಲ್ಲಿ ಅನೇಕ ಆಯಾಮಗಳನ್ನು ಸಹಜವಾಗಿಯೇ ಕಲೆಗಳು ವಿಭಿನ್ನ ಮಾಧ್ಯಮಗಳ ಮೂಲಕ ರೂಢಿಸಿಕೊಂಡು ಬೆಳೆದು ಬಂದಿವೆ. ಈ ದಿಸೆಯಲ್ಲಿಯೇ ಸಂಸ್ಕೃತಿಯ ಹುಟ್ಟು ಕೂಡ ಪ್ರಕೃತಿಯ ವೈವಿಧ್ಯತೆಯೊಂದಿಗೆ ಭಿನ್ನ ಭಿನ್ನ ದೃಷ್ಟಿಗಳನ್ನು ಸೂಕ್ಷ್ಮಪ್ರಜ್ಞೆಯ ರೀತಿ ನೀತಿ ನಿಯಮಗಳನ್ನು ಸಮನ್ವಯಗೊಳಿಸಿಕೊಂಡಿರುವುದು ಅದರ ಅನನ್ಯತೆಗೆ ಸಾಕ್ಷಿಯಾಗಿದೆ. ಸಾಮಾಜಿಕ ಜೀವನ ಮತ್ತು ಬದುಕಿನ ನೆಲೆಗಳಲ್ಲಿ ವ್ಯವಸ್ಥೆ ಅಥವಾ ಶಿಕ್ಷಣಗಳಿಂದ ಚಿಗುರೊಡೆಯುವ ಶಿಸ್ತು, ಕ್ರಮಬದ್ಧತೆಯನ್ನನುಸರಿಸುತ್ತದೆ. ಇದರ ಆಶಯದೊಂದಿಗೆ ಕಲೆಯ ಸತತ ಬೆಳವಣಿಗೆ, ಅಭಿವೃದ್ಧಿ, ಹೊಸ ಹೊಸ ನೋಟಗಳು, ವೈವಿಧ್ಯತೆಯ ಸ್ಥಿತಿಗತಿಗಳ ಮೇಲೆಯೇ ಅವಲಂಬಿತವಾಗಿರುತ್ತವೆ. ಅಷ್ಟೇ ಅಲ್ಲ ಅದು ಸಂಸ್ಕೃತಿಯ ಮೂಲದೊಂದಿಗೆ ಪರಂಪರೆಯ ಸೃಷ್ಟಿಗೂ ಕಾರಣವಾಗುತ್ತದೆ.

ಇದಕ್ಕೆ ಸಂಬಂಧಪಟ್ಟ ಹಾಗೆ ಕಲೆಗಳನ್ನು ಒಂದು ಸಂಸ್ಕೃತಿಯ ಮೂಲದಿಂದ ಹುಡುಕುವುದಾದರೆ ಅಲ್ಲಿ ಕಲೆಯ ಇತಿಹಾಸವನ್ನೂ ಗಮನಿಸಬೇಕಾಗುತ್ತದೆ. ಸಂಸ್ಕೃತಿ ಅಥವಾ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಕಲೆಯೂ ಭಿನ್ನ ನೆಲೆಯಲ್ಲಿ ಬೆಳೆದಿದ್ದನ್ನು ಇತಿಹಾಸದಿಂದ ಹಂತಹಂತವಾಗಿ ಗುರುತಿಸುತ್ತೇವೆ.

ಪ್ರಸ್ತುತ ಸಂದರ್ಭದಲ್ಲಿ ಕಲಾ ಪರಂಪರೆಯ ಕೊಡುಗೆ ಹಾಗೂ ಬೆಳೆದುಬಂದ ಬಗೆಯನ್ನು ಗಮನಿಸಿದಾಗ ಅದರ ಆಳ ಅಗಲ ವಿಸ್ತಾರವಾಗುತ್ತ ಹೋಗುತ್ತದೆ. ಮುಖ್ಯವಾಗಿ ಒಂದು ಕಲಾಪರಂಪರೆಯು ತನ್ನ ಕಾಲ ಸಂದರ್ಭದ ಉಪಯುಕ್ತ ಕೊಡುಗೆಯನ್ನು ಹೆಚ್ಚಾಗಿ ಕಲೆಗಳಿಂದಲೇ ನೀಡಿದೆ.

ಯಾವುದೇ ದೇಶದ ನಾಗರಿಕತೆಯನ್ನು ಗುರುತಿಸುವಲ್ಲಿ ಆ ದೇಶದ ಸಾಂಸ್ಕೃತಿಕ ಸಂಪತ್ತಾದ ಲಲಿತಕಲೆಗಳನ್ನು ಪ್ರಮುಖವಾಗಿ ಪರಿಗಣಿಸಲಾಗುತ್ತದೆ. ಅದರ ಪ್ರಮುಖ ಪ್ರಕಾರಗಳಾದ ಚಿತ್ರ, ಶಿಲ್ಪ ಕಲಾಕೃತಿಗಳು ಆಯಾ ಸಂಸ್ಕೃತಿಯ ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುತ್ತವೆ.

ಕಲಾಕ್ಷೇತ್ರದಲ್ಲಿ ನಮ್ಮ ನಾಡಿನ ಸಂಸ್ಕೃತಿಯನ್ನು ಅಧ್ಯಯನ ಮಾಡುವಲ್ಲಿ ದೃಶ್ಯಕಲೆಯು ಬಹುಮುಖ್ಯ ಪಾತ್ರ ವಹಿಸಿರುವುದು ಕಂಡುಬರುತ್ತದೆ. ಕಲಾಪರಂಪರೆಯ ಬೆಳವಣಿಗೆಯ ಹಿಂದೆ ಆಯಾ ಪ್ರದೇಶದ ಸಂಸ್ಕೃತಿಯ ಕುರುಹುಗಳನ್ನು ಆ ಕಲೆಯಲ್ಲಿ ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ನಮ್ಮ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಗಮನಿಸಿದಾಗ ದೃಶ್ಯಕಲೆಯ ಪಾತ್ರ ಮತ್ತು ಕೊಡುಗೆಗಳು ಮಹತ್ವಪೂರ್ಣವಾದವುಗಳಾಗಿವೆ.

ದೃಶ್ಯಕಲೆಯಲ್ಲಿ ಪ್ರಮುಖವಾಗಿ ಮೂರು ಅಂಗಗಳ ಒಂದು ಸಮ್ಮಿಲನವಿರುತ್ತದೆ. ೧. ಅಭಿವ್ಯಕ್ತಿ, ೨. ಮಾಧ್ಯಮ, ೩. ಕಲಾವಿದ. ಹೀಗೆ ಅಭಿವ್ಯಕ್ತಿಗೆ ಮಾಧ್ಯಮ, ಮಾಧ್ಯಮಕ್ಕೆ ಕಲಾವಿದ ಮತ್ತು ಕಲಾವಿದನಿಂದ ಅಭಿವ್ಯಕ್ತಿ. ಈ ಮೂರು ಸಂಕೀರ್ಣವಾದ ಸಂಬಂಧಗಳಿಂದ ದೃಶ್ಯಕಲೆಯು ಮೈದಳೆದಿದೆ. ದೃಶ್ಯಕಲೆಗಳಲ್ಲಿ ಒಂದು ಪ್ರಮುಖವಾದ ಅಂಗ ಚಿತ್ರಕಲೆ.

ನಮ್ಮ ನಾಡಿನ ಚಿತ್ರಕಲೆ ಇದುವರೆಗೆ ನಡೆದು ಬಂದ ದಾರಿಯನ್ನು ಗಮನಿಸಿದರೆ ಇಲ್ಲಿ "ಪ್ರತಿಭೆಗಳ" ಭಂಡಾರವೇ ಸಿಗುವುದು. ಹಲವಾರು ಪ್ರತಿಭಾವಂತರು ಸೂಕ್ತ ಸಮಯದಲ್ಲಿ ತಮ್ಮ ಪ್ರತಿಭೆಯನ್ನು ಒರೆಗೆ ಹಚ್ಚಿ ಈ ನಾಡಿಗೆ ಹಾಗೂ ಕಲಾಕ್ಷೇತ್ರಕ್ಕೆ ಶಾಶ್ವತ ಕೊಡುಗೆಯನ್ನು ನೀಡಿದ್ದಾರೆ. ಇಂದು ನಮ್ಮ ರಾಜ್ಯದ ಪ್ರಸ್ತುತ ಕಲಾವಲಯವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇಂತಹ ಪ್ರತಿಭಾವಂತ ಕಲಾವಿದರ ಸಂಖ್ಯೆ ನಮ್ಮನ್ನು ಬೆರಗುಗೊಳಿಸುತ್ತದೆ. ಅಲ್ಲದೆ ದೇಶದ ವಿವಿಧ ರಾಜ್ಯಗಳಿಗೆ ಹೋಲಿಸಿ ನೋಡಿದರೆ ಕನ್ನಡದ ಶ್ರೇಷ್ಠ ಪ್ರತಿಭಾನ್ವಿತ ಕಲಾವಿದರುಗಳ ಸಂಖ್ಯೆಯೇ ಹೆಚ್ಚು. ಈ ನಿಟ್ಟಿನಲ್ಲಿ ನಮ್ಮ ಸಂಸ್ಕೃತಿ ಪರಂಪರೆಯ ಹಿಂದೆ ಈ ಪ್ರತಿಭಾನ್ವಿತ ಅನೇಕ ಕಲಾವಿದರ ಸೇವೆ ಮತ್ತು ಕಲಾಕೃತಿಗಳ ಕೊಡುಗೆಯೂ ಬಹುಮುಖ್ಯವಾದ ಅಂಶಗಳಾಗುತ್ತವೆ.

ಪ್ರಸ್ತುತ ಇಂದು ವಿವಿಧ ಕ್ಷೇತ್ರಗಳಲ್ಲಿ ವ್ಯಾಪಕವಾದ ಸಂಶೋಧನೆ ನಡೆಯುತ್ತಿದ್ದರೂ, ಕಲಾಕ್ಷೇತ್ರದಲ್ಲಿ ದೃಶ್ಯಕಲೆಯ ಕುರಿತು ಸಂಶೋಧನೆಗಳು ಇತ್ತೀಚಿನ ವರ್ಷಗಳಲ್ಲಿ ತೀವ್ರಗೊಂಡಿರುವುದು ಗಮನಾರ್ಹವಾಗಿ ಕಂಡುಬರುವ ಸಂಗತಿಯಾಗಿದೆ. ಈ ಅಲ್ಪ ಕಾಲಾವಧಿಯಲ್ಲಿ ಈ ಕಲಾಕ್ಷೇತ್ರದ ಕೊಡುಗೆ ಅಪಾರ. ಬಹುಪಾಲು ಕಲಾವಿದರು ಉನ್ನತ ಶಿಕ್ಷಣದ ಕೊರತೆಯಿಂದಾಗಿ ಮತ್ತು ಕಲಾಕೃತಿಗಳ ರಚನೆಯೆಡೆಗೆ ಹೆಚ್ಚು ಒಲವು ನೀಡಿದ ಕಾರಣದಿಂದಾಗಿ ಈ ಕಲಾಕ್ಷೇತ್ರದಲ್ಲಿ ಸಂಶೋಧನಾತ್ಮಕ ಅಧ್ಯಯನಗಳು ಮಂದಗತಿಯಲ್ಲಿ ನಡೆದು ಬರಲು ಕಾರಣವಾಗಿದೆಯೆನ್ನಬಹುದು.

ಕರ್ನಾಟಕದಲ್ಲಿ ಚಿತ್ರಕಲಾ ಕ್ಷೇತ್ರದಲ್ಲಿ ಕಲಾವಿದರ ಕುರಿತು ಕರ್ನಾಟಕ ಲಲಿತಕಲಾ ಅಕಾಡೆಮಿ ದೃಶ್ಯಕಲಾವಿದರ ಪರಿಚಯಾತ್ಮಕ ಪ್ರಕಟಣೆಗಳನ್ನು ಹೊರಡಿಸಿದೆ. ಕೆಲವು ಕಲಾವಿದರ ಜೀವನ, ವಿಚಾರದೊಂದಿಗೆ ಕಲಾಕೃತಿಗಳ ವಿಮರ್ಶೆಯನ್ನು ಅಲ್ಲಲ್ಲಿ ಸ್ಥೂಲವಾಗಿ ಮಾಡಿದ್ದರೂ ಅವುಗಳ ಸಮಗ್ರವಾದ ಅಧ್ಯಯನಗಳು ನಡೆದಿಲ್ಲ. ಆದ್ದರಿಂದ ಈ ನಿಟ್ಟಿನಲ್ಲಿ ಕಲಾಕ್ಷೇತ್ರದಲ್ಲಿ ಅಧ್ಯಯನ ನಡೆಯಬೇಕಾಗಿದೆ. ಕರ್ನಾಟಕದ ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಪ್ರಾಚೀನ ಕಾಲದಿಂದಲೂ ಮಹತ್ವದ ಕಲಾಸಾಧಕರು ಇದ್ದುದನ್ನು ಮತ್ತು ಅಪೂರ್ವ ಕಲಾಕೃತಿಗಳನ್ನು ರಚಿಸಿ ನಾಡಿಗೆ ನೀಡಿದ್ದನ್ನು ಕಾಣುತ್ತೇವೆ. ನಮ್ಮ ರಾಜ್ಯದ ಸಾಂಸ್ಕೃತಿಕ ಪರಂಪರೆಯ ಕಲಾಮಹೋನ್ನತಿಯನ್ನು ಮೈಗೂಡಿಸಿಕೊಳ್ಳುವುದರ ಜೊತೆಗೆ ಅನೇಕ ಕಾಲಘಟ್ಟಗಳಲ್ಲಿ ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಮೈದೋರಿದ ಹೊಸ ಹೊಸ ಕಲಾಪಂಥಗಳನ್ನು, ಚಿಂತನೆಗಳನ್ನು, ತಂತ್ರಗಳನ್ನು, ಮಾಧ್ಯಮಗಳನ್ನು ರೂಢಿಸಿಕೊಂಡು ರಾಷ್ಟ್ರೀಯ, ಅಂತರಾಷ್ಟ್ರೀಯ ಕೀರ್ತಿಯನ್ನು ಪಡೆದ ಕಲಾವಿದರು ಎಲೆಮರೆಯ ಕಾಯಿಯಂತೆ ನಮ್ಮಲ್ಲಿರುವುದು ತುಂಬಾ ಅಭಿಮಾನದ ಸಂಗತಿಯಾಗಿದೆ. ಈ ಎಲ್ಲ ಕಲಾವಿದರ ಜೀವನ ಸಾಧನೆಗಳ ಕುರಿತು ಅಧಿಕೃತ ದಾಖಲೆಗಳು ಅಧಿಕ ಪ್ರಮಾಣದಲ್ಲಿ ನಮಗೆ ಅವರ ಜೀವಿತದ ಅವಧಿಯಲ್ಲಿಯೇ ಸಿಕ್ಕರೆ ಹೆಚ್ಚು ಸೂಕ್ತವಾಗುತ್ತದೆ. ಅವರ ವೈವಿಧ್ಯಮಯವಾದ ಕಲೆ, ಸಾಹಿತ್ಯ ಸಾಧನೆಯನ್ನು ಕುರಿತು ಸಂಶೋಧನೆಗಳು ಗಂಭೀರವಾಗಿ ನಡೆಯಬೇಕಾಗಿದೆ. ಕಲಾಕ್ಷೇತ್ರದ ಹಿರಿಯ ಕಲಾಸಾಧಕರ ಬದುಕನ್ನು ಅಧ್ಯಯನ ಮಾಡುವುದರಿಂದ ನಮ್ಮ ಕಲಾಪಂಥದ ದಿಕ್ಕುದೆಸೆಗಳನ್ನು ಸ್ಪಷ್ಟವಾಗಿ ಕಂಡುಕೊಳ್ಳಬಹುದಾಗಿದೆ.

ಹೀಗೆ ಚಿತ್ರಕಲಾ ಕ್ಷೇತ್ರದಲ್ಲಿ ಅತ್ಯಂತ ಉನ್ನತ ಮಟ್ಟದಲ್ಲಿ ಸಾಧನೆಗೈದ ಹಿರಿಯ ಕಲಾವಿದರಲ್ಲಿ ಶ್ರೀ ಶಂಕರ ಪಾಟೀಲ ಅವರು ಮಹತ್ವದ ಕಲಾವಿದರಾಗಿದ್ದು ಅವರ ಜೀವನ, ಸಾಧನೆಯ ಹಾದಿ,

ಚಿತ್ರಕಲಾ ಕ್ಷೇತ್ರಕ್ಕೆ ನೀಡಿದ ಕೊಡುಗೆಯ ಕುರಿತು ಅಧ್ಯಯನಕ್ಕೆ ಒಳಪಡಿಸುವ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಶಂಕರ ಪಾಟೀಲರ ಹೆಸರು ಇಂದು ಕರ್ನಾಟಕದ ಕಲಾಪರಂಪರೆಯಲ್ಲಿ ಗಮನಾರ್ಹವಾಗಿ ಉಳಿದಿದೆ. ಕ್ರಿ.ಶ. ೧೯೪೭ ರಲ್ಲಿ ಧಾರವಾಡ ಜಿಲ್ಲೆಯ ಗರಗ ಗ್ರಾಮದಲ್ಲಿ ಜನಿಸಿದ ಇವರು ಚಿತ್ರಕಲೆಯ ಉನ್ನತ ವ್ಯಾಸಂಗವನ್ನು ಮುಂಬೈನ ಸರ್ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್‌ನ ಅಪ್ಲೈಡ್ ಆರ್ಟ್ ವಿಭಾಗದಲ್ಲಿ ಕಲಾಧ್ಯಯನ ಮಾಡಿದ್ದಾರೆ ಮತ್ತು ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಡಿಪ್ಲೋಮಾ ಪೇಂಟಿಂಗ್ ಪದವಿಯನ್ನು ಉನ್ನತ ದರ್ಜೆಯಲ್ಲಿ ಪಡೆದಿದ್ದಾರೆ.

೧೯೬೮ ರಲ್ಲಿ ಕುವೆಂಪು ವಿಶ್ವವಿದ್ಯಾಲಯದ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿ ನಂತರ ೧೯೭೨ ರಲ್ಲಿ ಅಲ್ಲಿಯೇ ಅಪ್ಲೈಡ್ ಆರ್ಟ್ ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡು ಸೇವೆ ಸಲ್ಲಿಸಿದ್ದಾರೆ. ಅವರ ವಿದ್ಯಾರ್ಥಿ ಜೀವನ ಮತ್ತು ವೃತ್ತಿ ಜೀವನದಲ್ಲಿ ಹಲವಾರು ಪ್ರಶಸ್ತಿಗಳು ಲಭಿಸಿವೆ. ಇವರು ತಮ್ಮ ಕಲಾಕೃತಿಗಳನ್ನು ದೇಶದ ವಿವಿಧ ಭಾಗಗಳಲ್ಲಿ ಪ್ರದರ್ಶನ ಮಾಡಿ ಶ್ರೇಷ್ಠ ಕಲಾಕೃತಿಗಳ ಜನಕನೆಂಬ ಖ್ಯಾತಿಯನ್ನು ಪಡೆದಿದ್ದಾರೆ. ಮತ್ತು ಇವರ ಕಲಾಕೃತಿಗಳು ಕೇಂದ್ರ ಲಲಿತಕಲಾ ಅಕಾಡೆಮಿ ದೆಹಲಿ, ಆಂಧ್ರಪ್ರದೇಶದ ಲಲಿತಕಲಾ ಅಕಾಡೆಮಿ ಹೈದರಾಬಾದ್, ವೆಂಕಟಪ್ಪ ಆರ್ಟ್ ಗ್ಯಾಲರಿ, ಲಲಿತಕಲಾ ಅಕಾಡೆಮಿ ಬೆಂಗಳೂರು, ಮೈಸೂರು ವಿಶ್ವವಿದ್ಯಾಲಯದ ಜನಪದ ಮ್ಯೂಸಿಯಂ, ಮೈಸೂರು, ಕರ್ನಾಟಕ ವಿಶ್ವವಿದ್ಯಾಲಯದ ಧಾರವಾಡ, ಬ್ರಿಟಿಷ್ ಕೌನ್ಸಿಲ್ ಮದ್ರಾಸ್, ಏರ್ ಇಂಡಿಯಾ ಮುಂಬೈ ಹಾಗೂ ಯು.ಎಸ್.ಎ., ಕೆನಡಾ ಮುಂತಾದ ಪ್ರಮುಖ ದೇಶ ವಿದೇಶಗಳ ಸ್ಥಳಗಳಲ್ಲಿ ಇವರ ಕೃತಿಗಳು ಸಂಗ್ರಹಗೊಂಡಿವೆ.

ಶಂಕರ ಪಾಟೀಲರು ಒಬ್ಬ ಚಿತ್ರಕಲಾವಿದ ಮಾತ್ರ ಅಲ್ಲ, ಒವರೊಬ್ಬ ಕವಿ, ಬರಹಗಾರ, ಛಾಯಾಚಿತ್ರಕಾರರೂ ಹೌದು. ಇವರು ರಚಿಸಿದ ಕವನಗಳು, ವಿಮರ್ಶೆಗಳು ಅನೇಕ ಪುಸ್ತಕಗಳಲ್ಲಿ ಮತ್ತು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ೧೯೯೦–೯೪ ರವರೆಗೆ ದಾವಣಗೆರೆಯಲ್ಲಿ 'ಹೊಯ್ಸಳ' ಕನ್ನಡ ದಿನಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರು ತೆಗೆದ ಛಾಯಾಚಿತ್ರಗಳು ರಾಜ್ಯದ ವಿವಿಧ ಕಡೆಗಳಲ್ಲಿ ಪ್ರದರ್ಶಿತವಾಗಿವೆ. ಅವುಗಳು ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆಯನ್ನು ಪಡೆದಿವೆ.

ಶಂಕರ ಪಾಟೀಲರು ೧೯೭೬ ರಲ್ಲಿ ದಾವಣಗೆರೆಯಲ್ಲಿ 'ಕಲಾಗುರು ಆರ್ಟ್ ಗ್ಯಾಲರಿ'ಯನ್ನು ಸ್ಥಾಪಿಸಿದರು. ಈ ಮೂಲಕ ಕರ್ನಾಟಕದ ಚಿತ್ರಕಲಾ ಕ್ಷೇತ್ರಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು

ನೀಡಿದ್ದಾರೆ. ಚಿತ್ರಕಲೆಯಲ್ಲಿ ತುಂಬ ಅನನ್ಯವಾಗಿ ಕಾರ್ಯ ಮಾಡಿರುವ ಇವರು ಸಾಂಸ್ಕೃತಿಕ, ಸಾಹಿತ್ಯಿಕ ಕ್ಷೇತ್ರಗಳಲ್ಲಿ ಗಮನಾರ್ಹವಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಕುರಿತು ಇದುವರೆಗೂ ಆಳವಾದ ಯಾವುದೇ ಬಗೆಯ ಅಧ್ಯಯನಗಳು ಆಗದೇ ಇರುವ ಹಿನ್ನೆಲೆಯಲ್ಲಿ ಚಿತ್ರಕಲಾವಿದ ಂಕರ ಪಾಟೀಲರ ಜೀವನ ಕಲಾಸಾಧನೆ, ಒಂದು ಅಧ್ಯಯನ ಎಂಬ ವಿಷಯದ ಕುರಿತು ್ಯಯನವನ್ನು ಕೈಗೊಳ್ಳಲಾಗಿದೆ.

ಯನದ ಉದ್ದೇಶ :

ೆಯು ಮಾನವ ಜೀವನದ ಅವಿಭಾಜ್ಯ ಅಂಗವಾಗಿದ್ದು ಆತನ ಜೀವನವನ್ನು ಪರಿವರ್ತಿಸುವ ಕೆಲ ್ನ ಮಾಡುತ್ತದೆ. ಹಾಗೆಯೇ ಕೆಲವು ಕಲಾವಿದರುಗಳು ಕಲೆಗಾಗಿ ತಮ್ಮ ಜೀವನವನ್ನು ಮುಡಿ ಟ್ಟಿರುವುದು ಇತಿಹಾಸದ ಪುಟಗಳಲ್ಲಿ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಕಲಾವಿದ ಶಂಕರ ೀಲರು ಕಲೆಗಾಗಿಯೇ ತಮ್ಮನ್ನು ಅರ್ಪಿಸಿಕೊಂಡವರು. ಮಾತ್ರವಲ್ಲದೆ ತಮ್ಮ ಕಲೆಯನ್ನು ಅತ್ಯುತ್ತಮ ಾಕೃತಿಗಳ ಮೂಲಕ ಅಭಿವ್ಯಕ್ತಿಪಡಿಸಿ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ಖ್ಯಾತಿಯ ಡೆದಿದ್ದಾರೆ. ಇವರು ರಚಿಸಿರುವ ರೇಖಾಚಿತ್ರಗಳು ನೈಜಶೈಲಿಯ ಚಿತ್ರಗಳು ಹಾಗೂ ಆಧುನಿಕ ಿತ್ರಗಳು ಜನಸಾಮಾನ್ಯರಿಂದ ಹಿಡಿದು ಕಲಾವಿದ್ವಾಂಸರ ಅಪಾರ ಮೆಚ್ಚುಗೆಗೆ ಪಾತ್ರವಾಗಿವೆ. ನಿಕ ಶೈಲಿಯಲ್ಲಿ ಸಮಾಜಮುಖಿಯಾದ ರೇಖಾಚಿತ್ರಗಳನ್ನು ರಚಿಸುವುದರ ಮೂಲಕ ಸುಸ ಸಮಾಜದ ನಿರ್ಮಾಣಕ್ಕೆ ಕಲಾಕೃತಿಗಳ ಮೂಲಕ ಸ್ಪಂದಿಸಿದ್ದಾರೆ.

ಶಂಕರ ಪಾಟ ಕಲಾಕೃತಿಗಳು ಯುವ ಕಲಾವಿದರಿಗೆ ಸ್ಫೂರ್ತಿಯನ್ನು ನೀಡುವ ಸತ್ವವನ್ನು ಹೊಂದಿದ್ದು, ಕಲಾ , ವರ್ಣಛಾಯೆ, ಕಲಾಕೌಶಲ್ಯ ಇನ್ನೂ ಮುಂತಾದ ರಚನಾತಂತ್ರಗಳು ವಿಭಿನ್ನವಾಗಿ ಪ್ರಕಟಗೊ . ಇವರು ಒಂದೇ ಬಗೆಯ ಚಿತ್ರಗಳನ್ನು ರಚಿಸದೆ ಚಿತ್ರ ಸಂಯೋಜನೆಯಲ್ಲಿ ಧಾರ್ಮಿಕ, ಆಧ್ಯಾತ್ಮಿಕ. ಾಣಿಕ, ಭಾವಚಿತ್ರ, ಪ್ರಕೃತಿಚಿತ್ರಣ, ರೇಖಾಚಿತ್ರಣ ಹೀಗೆ ವಿವಿಧ ಬಗೆಯ ಸಾವಿರಾರು ಗಳನ್ನು ರಚಿಸಿದ್ದು, ಇಂತಹ ಸಾವಿರಾರು ಕಲಾಕೃತಿಗಳು ವೈವಿಧ್ಯಮಯವಾಗಿದ್ದು, ಸ ಪಾಟೀಲರ ಅಂತರಂಗದ ತುಡಿತಗಳನ್ನು ವ್ಯಕ್ತಪಡಿಸುತ್ತವೆ. ಇವರು ತಮ್ಮ ಕಲಾಕೃತಿಗಳ ಮೂಲಕ ಅಲ್ಲದೆ ತಮ್ಮ ಕಲಾಶಾಲೆಯ ಮೂಲಕ ನೂರಾರು ಕಲಾವಿದರನ್ನು ನಾಡಿಗೆ ಕೊಡುಗೆಯಾಗಿ ನೀಡಿದ್ದಾರೆ. ಅವರ ಈ ಕಲಾಚಟುವಟಿಕೆಯ ಕೊಡುಗೆಯನ್ನು ಗುರುತಿಸುವುದು ಈ ಅಧ್ಯಯನದ ಉದ್ದೇಶಗಳಲ್ಲೊಂದಾಗಿದೆ.

ಶಂಕರ ಪಾಟೀಲರು ಕೇವಲ ಒಬ್ಬ ಚಿತ್ರಕಲಾವಿದ, ಕಲಾಶಿಕ್ಷಕನಾಗಿರದೆ ಒಬ್ಬ ಕವಿಯಾಗಿ, ಸಾಹಿತಿಯಾಗಿ, ಕಲಾವಿಮರ್ಶಕರಾಗಿ, ಕಲಾಚಿಂತಕರಾಗಿ ಸಲ್ಲಿಸಿದ ಕಾರ್ಯಚಟುವಟಿಕೆಗಳನ್ನು ಪರಿಚಯಿಸುವುದು ಸಹ ಈ ಅಧ್ಯಯನದ ಉದ್ದೇಶಗಳಲ್ಲೊಂದಾಗಿದೆ.

ಕಲಾಕ್ಷೇತ್ರಕ್ಕೆ ಶಂಕರ ಪಾಟೀಲರ ಸಾಧನೆಯ ವಿವಿಧ ಕೊಡುಗೆಗಳನ್ನು ಕಲಾವಿದರಾಗಿ ಅವರ ಸ್ಥಾನಮಾನಗಳನ್ನು, ಕಲಾಕ್ಷೇತ್ರದಲ್ಲಿ ಅವರ ಬೆಳವಣಿಗೆಯ ವಿವಿಧ ಹಂತಗಳು ಹಾಗೂ ಕಲಾಕೃತಿ ರಚನೆಯಲ್ಲಿ ಅವರು ತೋರುವ ಭಾವನಾತ್ಮಕ ವಿಚಾರಗಳನ್ನು ದಾಖಲಿಸುವ ಮಹತ್ವದ ಕಾರ್ಯಚಟುವಟಿಕೆಯನ್ನು ಈ ಪ್ರಸ್ತುತ ಅಧ್ಯಯನವು ಹೊಂದಿದೆ. ಇವರ ಕಲಾಕೃತಿಗಳ ಪ್ರಮುಖ ಧೋರಣೆಗಳನ್ನು ಗುರುತಿಸುವ ಮತ್ತು ಅವರ ಕಲಾಕೃತಿಗಳು ಸಮಾಜದ ಮೇಲೆ ಮೂಡಿಸಿದ ಪರಿಣಾಮದ ಸೂಕ್ಷ್ಮವಾದ ಒಳನೋಟವನ್ನು ಗುರುತಿಸುವ ಹಾಗೂ ಒಂದೆಡೆಗೆ ಅವರ ಕಲಾಕೃತಿಗಳನ್ನು ದಾಖಲಿಸುವ ಪ್ರಯತ್ನವನ್ನು ಸಹ ಇಲ್ಲಿ ಮಾಡಲಾಗುವುದು.

ಈ ಹಿನ್ನೆಲೆಯಲ್ಲಿ ಸಮಕಾಲೀನ ಕಲಾಸಂದರ್ಭದಲ್ಲಿ ಶಂಕರ ಪಾಟೀಲರ ಜೀವನ, ಸಾಧನೆ, ಕೊಡುಗೆಗಳ ಕುರಿತು ಅಧ್ಯಯನ ಮಾಡುವ ಪ್ರಮುಖ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

ದೃಶ್ಯಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳು :

ಕರ್ನಾಟಕದ ಸಂದರ್ಭದಲ್ಲಿ ಚಿತ್ರಕಲಾ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನಾ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದಾಗಿದೆ. ಏಕೆಂದರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಗಳ ಕುರಿತಾದ ಅಧ್ಯಯನಕ್ಕೆ ಅವಕಾಶ ದೊರಕಿದ್ದು ತೀರ ಇತ್ತೀಚೆಗಷ್ಟೆ. ೧೯೯೦ ರ ದಶಕದಲ್ಲಿ ಈ ಅಧ್ಯಯನಗಳು ತೀವ್ರಗೊಂಡು ಈಗಷ್ಟೇ ತನ್ನ ಶೈಶವಾವಸ್ಥೆಯನ್ನು ಕಳೆದು ಯೌವ್ವನಕ್ಕೆ ಕಾಲಿಡುತ್ತಿವೆ. ೧೯೮೦ ರ ದಶಕದಿಂದ ಕರ್ನಾಟಕದಲ್ಲಿ ನಡೆದ ದೃಶ್ಯಕಲಾ ಅಧ್ಯಯನಗಳ ಸ್ಥೂಲವಾದ ವಿವರವನ್ನು ಈ ಕೆಳಗೆ ಸಮೀಕ್ಷಿಸಿ ಕೊಡಲಾಗಿದೆ.

ಪಿಎಚ್.ಡಿ. ಮಹಾಪ್ರಬಂಧಗಳು

೧೯೮೦ ರ ದಶಕದಿಂದ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಮೊದಲಬಾರಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆ ಕುರಿತು ಸಂಶೋಧನಾತ್ಮಕ ಅಧ್ಯಯನ ಪ್ರಾರಂಭಗೊಂಡಿರುವುದು ಕಂಡುಬರುತ್ತದೆ. ಡಾ. ಎಸ್.ಸಿ.ಪಾಟೀಲರು ೧೯೮೩ ರಲ್ಲಿ ಕರ್ನಾಟಕ ವಿ.ವಿ.ಯ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ

ಮಂಡಿಸಿದ ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ : ಒಂದು ಅಧ್ಯಯನ[೧] ಎಂಬ ಸಂಶೋಧನ ಕಿರುಪ್ರಬಂಧವು ಈ ಕ್ಷೇತ್ರದ ಪ್ರಥಮ ಅಧ್ಯಯನದ ಕಾರ್ಯವೆಂದು ದಾಖಲಾಗಿದೆ. ೧೯೮೭ ರಲ್ಲಿ ಡಾ.ಬಿ.ಕೆ.ಹಿರೇಮಠರು ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ[೨] ಎಂಬ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ ಹಸ್ತಪ್ರತಿ ಚಿತ್ರಕಲೆ ಕುರಿತಂತೆ ಕೆಲವು ಅಧ್ಯಾಯಗಳನ್ನು ಮೀಸಲಾಗಿಟ್ಟು ಅಧ್ಯಯನ ಮಾಡಿದ್ದಾರೆ. ಇದರ ನಂತರ ೧೯೯೧ ರಲ್ಲಿ ಕರ್ನಾಟಕದಲ್ಲಿ ಜನಪದ ಚಿತ್ರಕಲೆಯನ್ನೇ ಸಂಶೋಧನೆಯ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿ.ವಿ.ಗೆ ಮಂಡಿಸಿದ ಪಿಹೆಚ್.ಡಿ. ಮಹಾಪ್ರಬಂಧ ಕರ್ನಾಟಕ ಜನಪದ ಚಿತ್ರಕಲೆ[೩] ಈ ಮಹಾಪ್ರಬಂಧವನ್ನು ಡಾ. ಎಸ್.ಸಿ.ಪಾಟೀಲರು ಸಿದ್ಧಪಡಿಸಿದ್ದು ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಂತರದ ದಿನಗಳಲ್ಲಿ ೧೯೯೫ ರಲ್ಲಿ ಡಾ. ಅ.ಲ.ನರಸಿಂಹನ್ ಅವರು ಬೆಂಗಳೂರು ವಿ.ವಿ.ಗೆ ಮಂಡಿಸಿದ ಪಿಎಚ್.ಡಿ. ಮಹಾಪ್ರಬಂಧ ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು[೪], ೧೯೯೭ ರಲ್ಲಿ ಡಾ. ಸಂಪದಾ ಭಟ್ ಅವರ ಹಿಂದೂಸ್ತಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು[೫], ಕನ್ನಡ ವಿಶ್ವವಿದ್ಯಾಲಯಕ್ಕೆ, ೧೯೯೭ ರಲ್ಲಿ ಡಾ. ಪುಷ್ಪಾ ದ್ರಾವಿಡ ಇವರು ಮಂಡಿಸಿದ ಅನಿವಾಸಿ ಭಾರತೀಯ ಕಲಾವಿದ ದಿ.ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು[೬], ೨೦೦೧ ರಲ್ಲಿ ಡಾ. ಯಾದಪ್ಪ ಪರದೇಶಿಯವರ ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ[೭], ೨೦೦೨ ರಲ್ಲಿ ಡಾ. ಶಿವಾನಂದ ಬಂಟನೂರು ಇವರ ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ[೮], ೨೦೦೨ ರಲ್ಲಿ ಡಾ. ಗಿರೀಶ ಅವರ ಬುಡಕಟ್ಟು ಚಿತ್ರಕಲೆ[೯], ೨೦೦೨ ರಲ್ಲಿ ಡಾ. ಲಕ್ಷ್ಮಿದೇವಿ

---

೧. ಡಾ. ಎಸ್.ಸಿ.ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿ.ವಿ., ೧೯೮೩.
೨. ಡಾ.ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು, ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ., ೧೯೮೭
೩. ಡಾ. ಎಸ್.ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ , ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ., ೧೯೯೧.
೪. ಅ.ಲ.ನರಸಿಂಹನ್ : ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೧೯೯೮.
೫. ಡಾ. ಸಂಪದಾ ಭಟ್ : ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೧೯೯೮.
೬. ಡಾ. ಪುಷ್ಪಾ ದ್ರಾವಿಡ : ಅನಿವಾಸಿ ಭಾರತೀಯ ಕಲಾವಿದ ದಿ ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೧೯೯೭.
೭. ಡಾ. ಯಾದಪ್ಪ ಪರದೇಶಿ :ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೧.
೮. ಡಾ. ಶಿವಾನಂದ ಬಂಟನೂರು :ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ೨೦೦೨.
೯. ಡಾ. ಗಿರೀಶ : ಬುಡಕಟ್ಟು ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೨.

ಗವಾಯಿಯವರ ಕಲಾವಿದ ಎಂ.ಎ.ಚೆಟ್ಟಿಯವರ ಜೀವನ– ಕಲಾಕೃತಿಗಳು : ಒಂದು ಅಧ್ಯಯನ[೧೦], ೨೦೦೨ ರಲ್ಲಿ ಶರಣಪ್ಪ ಕೋಲ್ಕಾರ ಅವರ ಕೊಪ್ಪಳ–ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ[೧೧], ೨೦೦೨ ರಲ್ಲಿ ಡಾ. ಸೌಮ್ಯ ಅವರ ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್[೧೨], ೨೦೦೨ ರಲ್ಲಿ ಡಾ. ಪ್ರಮಿಳಾ ಲೋಚನ ಅವರ ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಆಂಡ್ ಕಾಂಟೆಂಪರರಿ ಪೇಂಟಿಂಗ್[೧೩], ೨೦೦೩ ರಲ್ಲಿ ಡಾ. ವೀಣಾ ಶೇಖರ ಮಂಡಿಸಿದ ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦ –೧೮೨೦)[೧೪], ೨೦೦೩ ರಲ್ಲಿ ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ ಅವರ ಕಲಾವಿದ ಆರ್.ಎಮ್.ಹಡಪದ : ಒಂದು ಅಧ್ಯಯನ[೧೫], ೨೦೦೩ ರಲ್ಲಿ ಡಾ. ಎಸ್.ಸಿ.ಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯುಕೇಶನ್ ಎಟ್ ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರನ್ಸ್ ಟು ಡ್ರಾಯಿಂಗ ಆಂಡ್ ಪೇಂಟಿಂಗ್[೧೬], ೨೦೦೪ ರಲ್ಲಿ ಡಾ. ವಿ.ಎಮ್.ಬಾಗಾಯತ್ ಅವರ ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಒಂದು ಅಧ್ಯಯನ (೧೪೦೦–೧೮೦೦)[೧೭], ೨೦೦೪ ರಲ್ಲಿ ಡಾ. ಶಿವಕುಮಾರ ಜಿ.ಓ. ಅವರ ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು[೧೮], ೨೦೦೪ ರಲ್ಲಿ ಡಾ. ಪಿ.

---

೧೦. ಡಾ. ಲಕ್ಷ್ಮಿದೇವಿ ಗವಾಯಿ :ಕಲಾವಿದ ಎಂ.ಎ.ಚೆಟ್ಟಿಯವರ ಜೀವನ– ಕಲಾಕೃತಿಗಳು : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೨.

೧೧. ಶರಣಪ್ಪ ಕೋಲ್ಕಾರ : ಕೊಪ್ಪಳ–ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೨.

೧೨. ಡಾ. ಸೌಮ್ಯ : ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೨.

೧೩. ಡಾ. ಪ್ರಮಿಳಾ ಲೋಚನ : ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಆಂಡ್ ಕಾಂಟೆಂಪರರಿ ಪೇಂಟಿಂಗ್, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೨.

೧೪. ಡಾ. ವೀಣಾ ಶೇಖರ ಮಂಡಿಸಿದ ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦ –೧೮೨೦), ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೩.

೧೫. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾವಿದ ಆರ್.ಎಮ್.ಹಡಪದ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೩.

೧೬. ಡಾ. ಎಸ್.ಸಿ.ಪಾಟೀಲ : ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯುಕೇಶನ್ ಎಟ್ ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರನ್ಸ್ ಟು ಡ್ರಾಯಿಂಗ ಆಂಡ್ ಪೇಂಟಿಂಗ್, ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ., ೨೦೦೨.

೧೭. ಡಾ. ವಿ.ಎಮ್.ಬಾಗಾಯತ್ :ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಒಂದು ಅಧ್ಯಯನ (೧೪೦೦–೧೮೦೦), ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೪.

೧೮. ಡಾ. ಶಿವಕುಮಾರ ಜಿ.ಓ. : ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು, ಪಿಹೆಚ್.ಡಿ. ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ., ೨೦೦೪.

ಗೌರೀಶ ಅವರ ಮೈಸೂರು ಜಿಲ್ಲೆಯ ಜನಪದ ಚಿತ್ರಕಲೆ[೧೯], ೨೦೦೫ ರಲ್ಲಿ ಡಾ. ಶಶಿಕಲಾ ಹೂಗಾರ ಅವರ ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ[೨೦], ೨೦೦೫ ರಲ್ಲಿ ಡಾ. ಶಿವಪ್ರಕಾಶ ತುಕ್ಕಣ್ಣವರ ಅವರ ಕರ್ನಾಟಕ ರಥ ಶಿಲ್ಪಕಲೆ[೨೧], ೨೦೦೫ ರಲ್ಲಿ ಡಾ. ಎಚ್.ಎನ್.ಚಿತ್ರಗಾರ ಅವರ ಕರ್ನಾಟಕ ಹಸ್ತಪ್ರತಿ ಚಿತ್ರಕಲೆ[೨೨], ೨೦೦೫ ರಲ್ಲಿ ಡಾ. ಎಸ್.ವಿ.ವೆಂಕಟೇಶಯ್ಯ ಅವರ ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು ಒಂದು ಅಧ್ಯಯನ[೨೩], ೨೦೦೬ ರಲ್ಲಿ ಡಾ. ವಿಶ್ವೇಶ್ವರಿ ತಿವಾರಿ ಅವರ ರಂಗೋಲಿ ಕಲೆ[೨೪], ೨೦೦೭ ರಲ್ಲಿ ಡಾ. ಮಲ್ಲಿಕಾರ್ಜುನ ಬಾಗೋಡಿ ಅವರ ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ[೨೫],ಡಾ. ಗೀತಾಂಜಲಿ ಬಿ.ಆರ್. ಅವರ ಐತಿಹಾಸಿಕ ದೀಪಸ್ತಂಭಗಳು[೨೬], ೨೦೦೭ ರಲ್ಲಿ ಡಾ. ರಾಠೋಡ್ ಅವರ ಅನ್ವಯಿಕ ಕಲೆ – ಹಿಂದಿನಿಂದ ಇಂದಿನವರೆಗೆ[೨೭], ೨೦೦೮ ರಲ್ಲಿ ಮೋಹನ್ ಪಂಚಾಳ ಅವರ ಕಲಾವಿದ ಎಸ್.ಎಮ್.ಪಂಡಿತ – ಬದುಕು ಮತ್ತು ಕಲೆ[೨೮], ೨೦೦೮ ರಲ್ಲಿ ವಿಶ್ವನಾಥ ಎ.ಎಸ್. ಅವರ ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು[೨೯], ಡಾ. ರವೀಂದ್ರ ಎಸ್. ಕಮ್ಮಾರ ಅವರ ಕಲಾವಿದ ವಿ.ಬಿ.ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು,[೩೦] ಡಾ. ಪ್ರೇಮಾನಂದ ಲಕ್ಕಣ್ಣನವರ ಅವರ ಕರ್ನಾಟಕದ ದೃಶ್ಯಕಲಾ ಸಾಹಿತ್ಯ : ಒಂದು ವೈಚಾರಿಕ

---

೧೯. ಡಾ. ಪಿ. ಗೌರೀಶ : ಮೈಸೂರು ಜಿಲ್ಲೆಯ ಜನಪದ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ., ೨೦೦೪.

೨೦. ಡಾ. ಶಶಿಕಲಾ ಹೂಗಾರ : ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೪.

೨೧. ಡಾ. ಶಿವಪ್ರಕಾಶ ತುಕ್ಕಣ್ಣವರ :ಕರ್ನಾಟಕ ರಥ ಶಿಲ್ಪಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೪.

೨೨. ಡಾ. ಎಚ್.ಎನ್.ಚಿತ್ರಗಾರ :ಕರ್ನಾಟಕ ಹಸ್ತಪ್ರತಿ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೫.

೨೩. ಡಾ. ಎಸ್.ವಿ.ವೆಂಕಟೇಶಯ್ಯ :ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೫.

೨೪. ಡಾ. ವಿಶ್ವೇಶ್ವರಿ ತಿವಾರಿ : ರಂಗೋಲಿ ಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ., ೨೦೦೬.

೨೫. ಡಾ. ಮಲ್ಲಿಕಾರ್ಜುನ ಬಾಗೋಡಿ : ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ., ೨೦೦೭.

೨೬. ಡಾ. ಗೀತಾಂಜಲಿ ಬಿ.ಆರ್. : ಐತಿಹಾಸಿಕ ದೀಪಸ್ತಂಭಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೭.

೨೭. ಡಾ. ರಾಠೋಡ್ : ಅನ್ವಯಿಕ ಕಲೆ – ಹಿಂದಿನಿಂದ ಇಂದಿನವರೆಗೆ, ಪಿಹೆಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ., ೨೦೦೭.

೨೮. ಮೋಹನ್ ಪಂಚಾಳ : ಕಲಾವಿದ ಎಸ್.ಎಮ್.ಪಂಡಿತ – ಬದುಕು ಮತ್ತು ಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ., ೨೦೦೮.

೨೯. ವಿಶ್ವನಾಥ ಎ.ಎಸ್. : ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೮.

೩೦. ಡಾ. ರವೀಂದ್ರ ಎಸ್. ಕಮ್ಮಾರ : ಕಲಾವಿದ ವಿ.ಬಿ.ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೮.

ಅಧ್ಯಯನ,[೩೧] ೨೦೦೯ರಲ್ಲಿ ಡಾ.ಜಿ. ಲಕ್ಷ್ಮೀಪತಿಯವರ ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ,[೩೨] ಡಾ.ಸೂರ್ಯಕಾಂತ ಮಂಟಗಿಯವರ ಕಲಾವಿದ ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ : ಒಂದು ಅಧ್ಯಯನ,[೩೩] ಡಾ.ರೆಹಮಾನ ಪಟೇಲ್ ಅವರ ಕರ್ನಾಟಕದ ಬಿದ್ರಿ ಕಲೆ ಒಂದು ಅಧ್ಯಯನ : ವಿಶೇಷವಾಗಿ ಬೀದರ ಜಿಲ್ಲೆಯನ್ನು ಅನುಲಕ್ಷಿಸಿ,[೩೪] ೨೦೧೦ ಶ್ರೀಮತಿ ಸುನಿತಾ ಪಾಟೀಲ ಅವರ ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು,[೩೫] ನಿಂಗಪ್ಪ ಎಂ.ಅಂಗಡಿ ಅವರ ಕರ್ನಾಟಕದ ಗಾಜಿನ ಮೇಲಿನ ಚಿತ್ರಗಳು ಒಂದು ಅಧ್ಯಯನ,[೩೬] ಸಣ್ಣಮದಗಪ್ಪ ಎಸ್. ಗಡ್ಡಿಯವರ ಕಲಾವಿದ ಎಂ.ಬಿ.ಪಾಟೀಲ ಜೀವನ ಮತ್ತು ಕಲಾಕೃತಿಗಳು ಒಂದು ಅಧ್ಯಯನ[೩೭] ಇವು ದೃಶ್ಯಕಲೆಗಳ ಕುರಿತು ಸಲ್ಲಿಕೆಯಾದ ಪಿಹೆಚ್.ಡಿ. ಮಹಾಪ್ರಬಂಧಗಳು.

ಡಿ.ಲಿಟ್.ಮಹಾಪ್ರಬಂಧಗಳು :

೨೦೦೧ರಲ್ಲಿ ಡಾ. ದೇವದಾಸ ಕಸದ ಅವರ ಕನ್ನಡ ವೃತ್ತಿ ರಂಗಭೂಮಿ ಹಾಗೂ ರಂಗವಿನ್ಯಾಸ, ೨೦೦೫ರಲ್ಲಿ ಡಾ. ಆನಂದ ಕೆ. ಪೂಜಾರ ಅವರ ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ,[೩೮] ೨೦೦೫ರಲ್ಲಿ ಡಾ.ಡಿ.ಎ.ಉಪಾಧ್ಯ ಅವರ ದೃಶ್ಯಕಲೆಗಳ ತೌಲನಿಕ ಅಧ್ಯಯನ,[೩೯] ೨೦೦೯ರಲ್ಲಿ ಡಾ.ಎಂ.ಎಸ್.ಮೂರ್ತಿಯವರ ಮಕ್ಕಳ ಮನಸ್ಸಿನ ಚಿತ್ರಗಳು ಡಿ.ಲಿಟ್. ಮಹಾಪ್ರಬಂಧಗಳಾಗಿವೆ.

---

೩೧. ಡಾ. ಪ್ರೇಮಾನಂದ ಲಕ್ಕಣ್ಣನವರ : ಕರ್ನಾಟಕದ ದೃಶ್ಯಕಲಾ ಸಾಹಿತ್ಯ : ಒಂದು ವೈಚಾರಿಕ ಅಧ್ಯಯನ,ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೮.

೩೨. ಡಾ. ಜಿ. ಲಕ್ಷ್ಮೀಪತಿ : ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೯.

೩೩. ಡಾ.ಸೂರ್ಯಕಾಂತ ಮಂಟಗಿ: ಕಲಾವಿದ ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ., ೨೦೦೯.

೩೪. ಡಾ.ರೆಹಮಾನ ಪಟೇಲ್ ಅವರ ಕರ್ನಾಟಕದ ಬಿದ್ರಿ ಕಲೆ ಒಂದು ಅಧ್ಯಯನ : ವಿಶೇಷವಾಗಿ ಬೀದರ ಜಿಲ್ಲೆಯನ್ನು ಅನುಲಕ್ಷಿಸಿ, ಪಿಹೆಚ್.ಡಿ. ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ., ೨೦೦೯.

೩೫. ಶ್ರೀಮತಿ ಸುನಿತಾ ಪಾಟೀಲ : ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೧೦.

೩೬. ನಿಂಗಪ್ಪ ಎಂ.ಅಂಗಡಿ : ಕರ್ನಾಟಕದ ಗಾಜಿನ ಮೇಲಿನ ಚಿತ್ರಗಳು ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೧೦.

೩೭.ಸಣ್ಣಮದಗಪ್ಪ ಎಸ್. ಗಡ್ಡಿ : ಕಲಾವಿದ ಎಂ.ಬಿ.ಪಾಟೀಲ ಜೀವನ ಮತ್ತು ಕಲಾಕೃತಿಗಳು ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೧೦.

೩೮. ಡಾ. ಆನಂದ ಪೂಜಾರ : ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ, ಡಿ.ಲಿಟ್ ಮಹಾಪ್ರಬಂಧ,ಕನ್ನಡ ವಿ.ವಿ., ೨೦೦೫.

೩೯. ಡಾ. ಡಿ.ಎ. ಉಪಾಧ್ಯ : ದೃಶ್ಯಕಲೆಗಳ ತೌಲನಿಕ ಅಧ್ಯಯನ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೫.

ಎಂ.ಫಿಲ್. ಪ್ರಬಂಧಗಳು

೨೦೦೨ ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರು ಎಂ.ಫಿಲ್. ಪದವಿಗಾಗಿ ಮಂಡಿಸಿದ ಚಿತ್ರಕಲಾವಿದ ಜೆ.ಎಸ್.ಖಂಡೇರಾವ – ಒಂದು ಅಧ್ಯಯನ[೪೦], ಮತ್ತು ೨೦೦೩ ರಲ್ಲಿ ಎ.ಎಸ್.ವಿಶ್ವನಾಥ ಅವರ ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು[೪೧], ೨೦೦೫ ರಲ್ಲಿ ಶಂಕರಪ್ಪ ಎಂ. ಕುಂದಗೋಳ ಅವರ ಕಲಾವಿದ ಡಿ.ವಿ.ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು[೪೨], ಸಿ.ಡಿ.ಜಟ್ಟೆಣ್ಣವರ ಅವರ ಕಲಾವಿದ ಡಾ. ಎಂ.ವಿ.ಮಿಣಜಿಗಿಯವರ ಜೀವನ ಮತ್ತು ಕಲಾಕೃತಿಗಳು[೪೩], ೨೦೦೬ ರಲ್ಲಿ ಸುಚಿತ್ರಾ ಗ. ಲಿಂಗದಳ್ಳಿ ಇವರ ವಿಜಯನಗರದ ಭಿತ್ತಿಚಿತ್ರಕಲೆ ಒಂದು ಅಧ್ಯಯನ[೪೪], ರವಿ ವಸರಾಮ ನಾಯಕ ಇವರ ಕಿನ್ನಾಳ ಕಲೆ ಒಂದು ಅಧ್ಯಯನ[೪೫], ೨೦೦೭ ರಲ್ಲಿ ಬಿ.ಎಮ್.ಪಾಟೀಲ ಅವರ ನಿಪ್ಪಾಣಿ ವಾಡೆಯ ಭಿತ್ತಿಚಿತ್ರಗಳು[೪೬], ಶೈಲಾ ಬರಡೋಲ ಅವರ ಸಂತ ಕಲಾವಿದ ಶುಭರಾಯರ ಜೀವನ ಮತ್ತು ಕಲಾಕೃತಿಗಳು[೪೭], ಉಮೇಶ ಎಸ್. ಅವರ ಕರ್ನಾಟಕ ಜೈನ ಚಿತ್ರಕಲೆ[೪೮], ಶಶಿಕಾಂತ ಬಸರಿಕಟ್ಟಿ ಅವರ ಕಲಘಟಗಿ ಕಲೆ[೪೯], ೨೦೦೮ರಲ್ಲಿ ಕೃಷ್ಣವೇಣಿ ಅವರ ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ[೫೦], ಯೋಗೀಶ ಹೆಚ್. ಅವರ ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ[೫೧], ಮಹಾಕೋಟೇಶ್ವರಗೌಡ ಪಾಟೀಲ ಅವರ ಬೆಳಗಾವಿ ಜಿಲ್ಲೆಯ ಚಿತ್ರಕಲೆ[೫೨], ಸುರೇಶ ಬಡಿಗೇರ ಅವರ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ[೫೩],

---

೪೦. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ.ಎಸ್.ಖಂಡೇರಾವ – ಒಂದು ಅಧ್ಯಯನ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೨.

೪೧. ಎ.ಎಸ್.ವಿಶ್ವನಾಥ : ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೩.

೪೨. ಶಂಕರಪ್ಪ ಎಂ. ಕುಂದಗೋಳ : ಕಲಾವಿದ ಡಿ.ವಿ.ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೫.

೪೩. ಸಿ.ಡಿ.ಜಟ್ಟೆಣ್ಣವರ : ಕಲಾವಿದ ಡಾ. ಎಂ.ವಿ.ಮಿಣಜಿಗಿಯವರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೫.

೪೪. ಸುಚಿತ್ರಾ ಗ. ಲಿಂಗದಳ್ಳಿ : ವಿಜಯನಗರದ ಭಿತ್ತಿಚಿತ್ರಕಲೆ ಒಂದು ಅಧ್ಯಯನ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೬.

೪೫. ರವಿ ವಸರಾಮ ನಾಯಕ : ಕಿನ್ನಾಳ ಕಲೆ ಒಂದು ಅಧ್ಯಯನ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೬.

೪೬. ಬಿ.ಎಮ್.ಪಾಟೀಲ : ನಿಪ್ಪಾಣಿ ವಾಡೆಯ ಭಿತ್ತಿಚಿತ್ರಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೭.

೪೭. ಶೈಲಾ ಬರಡೋಲ : ಸಂತ ಕಲಾವಿದ ಶುಭರಾಯರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೭.

೪೮. ಉಮೇಶ ಎಸ್. : ಕರ್ನಾಟಕ ಜೈನ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೭.

೪೯. ಶಶಿಕಾಂತ ಬಸರಿಕಟ್ಟಿ : ಕಲಘಟಗಿ ಕಲೆ, ಎಂ.ಫಿಲ್. ಪ್ರ., ಕನ್ನಡ ವಿ.ವಿ. ೨೦೦೭.

೫೦. ಕೃಷ್ಣವೇಣಿ : ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್. ಪ್ರ., ಕನ್ನಡ ವಿ.ವಿ. ೨೦೦೮.

೫೧. ಯೋಗೀಶ ಹೆಚ್. : ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರ., ಕನ್ನಡ ವಿ.ವಿ. ೨೦೦೮.

೫೨. ಮಹಾಕೋಟೇಶ್ವರಗೌಡ ಪಾಟೀಲ : ಬೆಳಗಾವಿ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರ., ಕನ್ನಡ ವಿ.ವಿ. ೨೦೦೮.

೫೩. ಸುರೇಶ ಬಡಿಗೇರ : ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ, ಎಂ.ಫಿಲ್. ಪ್ರ., ಕನ್ನಡ ವಿ.ವಿ. ೨೦೦೮.

ಸಂತೋಷಕುಮಾರ ಕುಲಕರ್ಣಿ ಅವರ ದಾವಣಗೆರೆ ಜಿಲ್ಲೆಯ ಚಿತ್ರಕಲೆ[೫೪], ಜಯರಾಜ ಚಿಕ್ಕಪಾಟೀಲರ ಅವರ ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು[೫೫], ಮಹೇಶ ಉಮತಾರ ಅವರ ಬಿ.ಪಿ.ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ[೫೬], ಗಿರಿಜಾ ಬಿರಾದಾರ ಅವರ ಬಿಜಾಪೂರ ಜಿಲ್ಲೆಯ ಚಿತ್ರಕಲೆ[೫೭], ಬಸಯ್ಯ ಗವಿಮಠ ಅವರ ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ[೫೮], ಕೃಷ್ಣೇಗೌಡ ಹೆಚ್.ಎನ್.ಅವರ ಕರ್ನಾಟಕದಲ್ಲಿ ಟಿಬೆಟಿಯನ್ನರ ಚಿತ್ರಕಲೆ[೫೯], ಮಹಾಂತೇಶ ಎಂ. ಪಲದಿನ್ನಿ ಅವರ ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು[೬೦], ಈ ಪ್ರಬಂಧಗಳು ಕರ್ನಾಟಕ ದೃಶ್ಯಕಲೆಯ ಕುರಿತಾಗಿ ಬಂದ ಸಂಶೋಧನಾ ಅಧ್ಯಯನಗಳಾಗಿವೆ.

ಹೀಗೆ ಗುಲ್ಬರ್ಗಾ, ಬೆಂಗಳೂರು, ಕರ್ನಾಟಕ ವಿ.ವಿ. ಮತ್ತು ಕನ್ನಡ ವಿ.ವಿ.ಗಳಲ್ಲಿ ಪಿಹೆಚ್.ಡಿ. ಪದವಿಗಾಗಿ ೩೦ ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಈ ನಿಟ್ಟಿನಲ್ಲಿ ೧೫ ಕ್ಕೂ ಹೆಚ್ಚು ಸಂಶೋಧಕರು ಈಗ ಅಧ್ಯಯನ ನಿರತರಾಗಿದ್ದಾರೆ. ಇದಲ್ಲದೇ ವಿಶ್ವವಿದ್ಯಾಲಯಗಳ ಬಿ.ಎಫ್.ಎ. ಪದವಿ ಹಾಗೂ ಸ್ನಾತಕೋತ್ತರ ಹಂತದಲ್ಲಿ ಸುಮಾರು ೪೦೦ ಕ್ಕೂ ಹೆಚ್ಚಿನ ಲಘುಶೋಧ ಪ್ರಬಂಧಗಳು ರಚನೆಗೊಂಡಿವೆ. ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಸಂಶೋಧನ ಪ್ರಕಾರವು ದೃಶ್ಯಕಲಾ ಕ್ಷೇತ್ರದಲ್ಲಿ ಅನಿವಾರ್ಯ ಅಧ್ಯಯನವಾಗಿ ಬೆಳೆಯುತ್ತಿದೆ. ಹೀಗೆ ಈ ಕ್ಷೇತ್ರದಲ್ಲಿ ಸಂಶೋಧನೆಗಳು ತೀವ್ರವಾಗಿ ಮುನ್ನಡೆಯುತ್ತಲಿದ್ದು, ಭವಿಷ್ಯತ್ತಿನಲ್ಲಿ ಕಲಾಕ್ಷೇತ್ರವು ಸಂಶೋಧನಾತ್ಮಕವಾಗಿಯೂ ಬಲಗೊಳ್ಳುವ ಆಶಯವನ್ನು ನಿರೀಕ್ಷಿಸಬಹುದು.

ಶಂಕರ ಪಾಟೀಲರ ಕುರಿತು ನಡೆದ ಅಧ್ಯಯನಗಳು :

ಕಲಾವಿದ ಶಂಕರ ಪಾಟೀಲರ ಕುರಿತು ಅಷ್ಟೊಂದು ಗಂಭೀರವಾದ ಅಧ್ಯಯನಗಳು ನಡೆದಿಲ್ಲವೆಂದು ಹೇಳಬಹುದು. ೨೦೦೯ ರಲ್ಲಿ ಹರೀಶ ಇವರು 'ಶಂಕರ ಪಾಟೀಲರ ಬದುಕು

---

೪೦. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ.ಎಸ್.ಖಂಡೇರಾವ – ಒಂದು ಅಧ್ಯಯನ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೨.

೫೪. ಸಂತೋಷಕುಮಾರ ಕುಲಕರ್ಣಿ : ದಾವಣಗೆರೆ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರ, ಕನ್ನಡ ವಿ.ವಿ. ೨೦೦೮.

೫೫. ಜಯರಾಜ ಚಿಕ್ಕಪಾಟೀಲರ : ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು, ಎಂ.ಫಿಲ್. ಪ್ರ, ಕನ್ನಡ ವಿ.ವಿ. ೨೦೦೮.

೫೬. ಮಹೇಶ ಉಮತಾರ : ಬಿ.ಪಿ.ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ, ಎಂ.ಫಿಲ್. ಪ್ರ, ಕನ್ನಡ ವಿ.ವಿ. ೨೦೦೮.

೫೭. ಗಿರಿಜಾ ಬಿರಾದಾರ : ಬಿಜಾಪೂರ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರ, ಕನ್ನಡ ವಿ.ವಿ. ೨೦೦೮.

೫೮. ಬಸಯ್ಯ ಗವಿಮಠ : ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರ, ಕನ್ನಡ ವಿ.ವಿ. ೨೦೦೮.

೫೯. ಕೃಷ್ಣೇಗೌಡ ಹೆಚ್.ಎನ್. : ಕರ್ನಾಟಕದಲ್ಲಿ ಟಿಬೆಟಿಯನ್ನರ ಚಿತ್ರಕಲೆ, ಎಂ.ಫಿಲ್. ಪ್ರ, ಕನ್ನಡ ವಿ.ವಿ. ೨೦೦೮.

೬೦. ಮಹಾಂತೇಶ ಎಂ. ಪಲದಿನ್ನಿ : ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು, ಎಂ.ಫಿಲ್. ಪ್ರ, ಕನ್ನಡ ವಿ.ವಿ. ೨೦೦೮.

ಮತ್ತು ಕಲೆ' ಎಂಬ ಶೀರ್ಷಿಕೆಯಡಿ ಬಿ.ವಿ.ಎ. ದೃಶ್ಯಕಲೆ ಪದವಿಗೆ ಲಘು ಸಂಶೋಧನಾ ಪ್ರಬಂಧವನ್ನು ದಾವಣಗೆರೆಯ ಕುವೆಂಪು ಲಲಿತಕಲಾ ಮಹಾವಿದ್ಯಾಲಯಕ್ಕೆ ಸಲ್ಲಿಸಿದ್ದುತ ಸದರಿ ಪ್ರಬಂಧವನ್ನು ನಾಲ್ಕು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡಿದ್ದು, ಒಂದನೇ ಅಧ್ಯಾಯದಲ್ಲಿ ಪಾಟೀಲರ ಬಾಲ್ಯಜೀವನ ಮತ್ತು ವಿದ್ಯಾಭ್ಯಾಸ ಕುರಿತು ತಿಳಿಸಲಾಗಿದ್ದು, ಎರಡನೇ ಅಧ್ಯಾಯದಲ್ಲಿ ಶಂಕರ ಪಾಟೀಲರ ಕಲಾಚಟುವಟಿಕೆ (ಸಾಧನೆ) ಕುರಿತಾದ ಮಾಹಿತಿಯನ್ನು ನಮೂದಿಸಲಾಗಿದೆ. ಮೂರನೇ ಅಧ್ಯಾಯದಲ್ಲಿ ಪಾಟೀಲರ ಕಲಾಕೃತಿ, ವಿಷಯವಸ್ತು ಹಾಗೂ ಮಾಧ್ಯಮಗಳ ಕುರಿತಾಗಿದ್ದು ನಾಲ್ಕನೆಯ ಅಧ್ಯಾಯದಲ್ಲಿ ಶಂಕರ ಪಾಟೀಲರು ಸಮಾಜಮುಖಿಯಾಗಿ ಕೈಗೊಂಡ ಕಾರ್ಯಚಟುವಟಿಕೆಗಳ ಕುರಿತು ವಿವರಿಸಿದ್ದಾರೆ. ಒಟ್ಟಾರೆ ಪದವಿಗೆ ಸಲ್ಲಿಸಿದ ಈ ಲಘುಪ್ರಬಂಧವು ಶಂಕರ ಪಾಟೀಲರ ಸ್ವ ಮಾಹಿತಿ (ಬಯೋಡಾಟಾ) ಮಾದರಿಯಲ್ಲಿದ್ದು ಇನ್ನೂ ಗಂಭೀರವಾದ ಸಮಗ್ರತೆಯ ನೆಲೆಯಲ್ಲಿ ಅಧ್ಯಯನ ಕೈಗೊಳ್ಳಬೇಕಾಗಿದೆ.

ಪತ್ರಿಕಾ ಲೇಖನಗಳು :

ಕಲಾವಿದ ಶಂಕರ ಪಾಟೀಲರು ರಚಿಸಿದ ಕಲಾಕೃತಿಗಳ ಸಂಖ್ಯೆ ಸಾವಿರಕ್ಕೂ ಹೆಚ್ಚು. ಅವರ ಕೃತಿನಿಷ್ಠ ಅಧ್ಯಯನಗಳು ತೀರ ವಿರಳ. ಆದರೂ ಪಾಟೀಲರ ಕುರಿತು ಪ್ರಕಟಗೊಂಡ ಲೇಖನಗಳು ಹತ್ತು ಹಲವಾರು. ಶಂಕರ ಪಾಟೀಲರು ಕಲಾವಿದ್ಯಾರ್ಥಿಯಾಗಿ, ಕಲಾವಿದರಾಗಿ, ಶಿಕ್ಷಕರಾಗಿ, ವಿಭಾಗದ ಮುಖ್ಯಸ್ಥರಾಗಿ, ಸಾರ್ವಜನಿಕ ಕ್ಷೇತ್ರ, ಕಲಾಕ್ಷೇತ್ರದಲ್ಲಿ ಅವರ ಕೊಡುಗೆ ಅಮೂಲ್ಯ ಈ ಕುರಿತಾಗಿ ಸಂಕ್ಷಿಪ್ತ ವಿವರಗಳು ಕೆಲವು ಲೇಖನಗಳಲ್ಲಿ ಪ್ರಕಟಗೊಂಡು ವಿಶೇಷವಾಗಿ ಅವರು ಪ್ರದರ್ಶನ ನೀಡಿದ ಸಂದರ್ಭದಲ್ಲಿ ಕೆಲವು ಪತ್ರಿಕೆಗಳಲ್ಲಿ ವಿಶೇಷ ಲೇಖನಗಳು ಪ್ರಕಟಗೊಂಡಿವೆ. ಅವುಗಳ ವಿವರ ಈ ಕೆಳಗಿನಂತಿದೆ.

೧೯೭೮ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ 'ಕವಿ-ಕಲಾವಿದ ಶಂಕರ ಪಾಟೀಲ' ಲೇಖನ – ಈಶ್ವರಪ್ರಸಾದ. ೧೯೮೬ ಕನ್ನಡ ಪತ್ರಿಕೆಯಲ್ಲಿ ಗಡಕರರವರ 'ಪ್ರತಿಭಾವಂತ ಕಲಾವಿದನ ಹೊಸ ಮಾದರಿಯ ಪ್ರದರ್ಶನ', ೧೯೮೬ ನವೋದಯ ಪತ್ರಿಕೆಯಲ್ಲಿ ಕೆ.ವಿ.ಎಸ್. ಅವರ 'ಖುಷಿಪಡಿಸುವ ಕೃತಿಗಳು', ೧೯೮೭ ಪ್ರಜಾವಾಣಿ ಪತ್ರಿಕೆಯಲ್ಲಿ 'ಪಳಗಿದ ಸುಡುಚಿತ್ರ ಮಾಧ್ಯಮ', ಗೋಮಾಂತಕ ಮರಾಠಿ ದಿನಪತ್ರಿಕೆಯಲ್ಲಿ 'ಏಕ ಉಮದಾ ಚಿತ್ರಕಾರ ಶಂಕರ ಪಾಟೀಲ'– ಲೇಖನ. ರ.ವಿ. ಪ್ರಭಗಾಂವಕರ, ೧೯೮೦ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ 'Evocative Paintings by Art Teacher', ೧೯೭೪ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ 'Colour Explotation in Patil's Paintings", ೧೯೮೭

ಇಂಡಿಯನ್ ಎಕ್ಸಪ್ರೆಸ್ ಪತ್ರಿಕೆಯಲ್ಲಿ 'Experimental Imagery', ೧೯೮೭ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ 'Patterngonwood', ೧೯೭೯ ಪ್ರಪಂಚ ಪತ್ರಿಕೆಯಲ್ಲಿ ಪಾಟೀಲ ಪುಟ್ಟಪ್ಪ ಅವರು 'ಬಂದನಕ್ಕೆ ಒಳಗಾದ ಕಲಾವಿದ ಶಂಕರ ಪಾಟೀಲ', ೧೯೮೦ ಪ್ರಜಾವಾಣಿ ಪತ್ರಿಕೆಯಲ್ಲಿ ಚಂದ್ರಶೇಖರ ಅವರ 'ಸ್ಫೂರ್ತಿ ಭಾವೋದ್ವೇಗದ ಹಲವು ಮುಖ', ೧೯೮೭ ಉದಯವಾಣಿ ದಿನಪತ್ರಿಕೆಯಲ್ಲಿ ಕುಳೂರು ಗೋಪಾಲ ಅವರ 'ಚಿತ್ರಕಲೆಯಲ್ಲಿ ಹೊಸ ಪ್ರಯೋಗ', ೧೯೭೫ ಪ್ರಪಂಚ ಪತ್ರಿಕೆಯಲ್ಲಿ ಎಸ್. ಸಾಲಿಮಠ ಅವರ 'ಪ್ರತಿಭಾವಂತ ಯುವ ಕಲಾವಿದ ಶಂಕರ ಪಾಟೀಲ'.

ಅಲ್ಲದೇ ಇನ್ನೂ ಹಲವಾರು ಸಂಶೋಧಕರು ಕನ್ನಡ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯಗಳಲ್ಲಿ ಎಂ.ಫಿಲ್, ಪಿಹೆಚ್.ಡಿ ಹಾಗೂ ಡಿ.ಲಿಟ್ ಪದವಿಯಲ್ಲಿ ಅಧ್ಯಯನ ನಿರತರಾಗಿದ್ದಾರೆ. ಅದು ಅಲ್ಲದೆ ಸ್ನಾತಕ ಹಾಗೂ ಸ್ನಾತಕೋತ್ತರ ತರಗತಿಗಳಲ್ಲಿ ಅಧ್ಯಯನದ ಒಂದು ಭಾಗವಾಗಿ ನೂರಾರು ಕಿರು ಪ್ರಬಂಧಗಳು ಹೊರಬರುತ್ತಲಿವೆ. ಹಿಂದಿನ ದಿನಮಾನಗಳಿಗೆ ಹೋಲಿಸಿದರೆ ಇಂದು ಈ ಕ್ಷೇತ್ರದಲ್ಲಿ ಸಂಶೋಧನೆಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆದಿವೆ ಎನ್ನಬಹುದು.

ಅಧ್ಯಯನದ ಸ್ವರೂಪ :

ಪ್ರಸ್ತುತ ಅಧ್ಯಯನವನ್ನು ಎಂಟು ಅಧ್ಯಾಯಗಳಾಗಿ ವಿಂಗಡಿಸಿಕೊಂಡು ಸಂಕ್ಷಿಪ್ತ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

ಒಂದನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ವೈಧಾನಿಕತೆಗಳನ್ನು ಮತ್ತು ಆಕರ ಸಾಮಗ್ರಿಗಳನ್ನು ಕುರಿತಾದ ವಿವರಣೆಯನ್ನು ನೀಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಶಂಕರ ಪಾಟೀಲರ ಜೀವನ ಕಲಾ ಅಧ್ಯಯನ ಮತ್ತು ಅಧ್ಯಾಪಕ ವೃತ್ತಿ ಕುರಿತು ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಶಂಕರ ಪಾಟೀಲರ ರಚಿಸಿದ ರೇಖಾಚಿತ್ರಗಳನ್ನು ವಿವಿಧ ಮಾಧ್ಯಮಗಳಲ್ಲಿ ವಿಂಗಡಿಸಿಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಶಂಕರ ಪಾಟೀಲರು ರಚಿಸಿದ ವರ್ಣಚಿತ್ರಗಳನ್ನು ಮಾಧ್ಯಮವಾರು ವರ್ಗೀಕರಿಸಿಕೊಂಡು ಅಧ್ಯಯನ ನಡೆಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಶಂಕರ ಪಾಟೀಲರು ತೆಗೆದ ಛಾಯಾಚಿತ್ರಗಳ ಅಧ್ಯಯನವನ್ನು ನಡೆಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಶಂಕರ ಪಾಟೀಲರ ಕಲಾಕೃತಿಗಳ ತಂತ್ರ, ಅನುಸರಿಸಿದ ಶೈಲಿ, ಕಲಾಕೃತಿಗಳ ಮೇಲಾದ ಪ್ರಭಾವ ಪೇರಣೆಗಳ ಕುರಿತು ವಿಸ್ತೃತ ಅಧ್ಯಯನ ಮಾಡಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಶಂಕರ ಪಾಟೀಲರ ಕಲಾಸಾಹಿತ್ಯ ಮತ್ತು ಕಲಾಚಟುವಟಿಕೆಗಳ ಕುರಿತು ಅಧ್ಯಯನ ಕೈಗೊಳ್ಳಲಾಗಿದೆ.

ಎಂಟನೆಯ ಅಧ್ಯಾಯವು ಪ್ರಸ್ತುತ ಒಟ್ಟು ಅಧ್ಯಯನದ ಫಲಿತಗಳ ಕುರಿತಾದ ಸಮೀಕ್ಷೆಯನ್ನು ಒಳಗೊಂಡಿದೆ.

ಅಧ್ಯಯನದ ವೈಧಾನಿಕತೆ :

ಪ್ರಸ್ತುತ ಅಧ್ಯಯನದಲ್ಲಿ ವ್ಯಕ್ತಿ ಅಧ್ಯಯನದ (Case Study) ವಿಧಾನದಲ್ಲಿ ಚಿತ್ರಕಲಾವಿದ ಶಂಕರ ಪಾಟೀಲರವರ ಅಧ್ಯಯನವನ್ನು ಕೈಗೊಳ್ಳಲಾಗಿದ್ದು ಇಲ್ಲಿ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿ

೨. ಆನುಷಂಗಿಕ ಸಾಮಗ್ರಿ

ಈ ಎರಡು ರೀತಿಯ ಆಕರ ಸಾಮಗ್ರಿಗಳಿಂದ ವಿಷಯ ಸಂಗ್ರಹ ಮಾಡಲಾಗಿದೆ.

೧. ಮೂಲ ಆಕರ ಸಾಮಗ್ರಿ :

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದುದು ಕ್ಷೇತ್ರಕಾರ್ಯ. ಕಲಾವಿದ ಪತ್ನಿ, ಮಕ್ಕಳು, ಸಹೋದರರು, ಸಹಪಾಠಿಗಳು ಮತ್ತು ಕಲಾವಿದರಿಗೆ ಸಂಬಂಧಪಟ್ಟವರಿಂದ ಹಾಗೂ ಕಲಾಸಮೀಪವರ್ತಿಗಳು ಅವರ, ಗುರುಗಳು, ವಿದ್ಯಾರ್ಥಿಗಳನ್ನು ಸಂದರ್ಶನ ಮಾಡಿ ಮಾಹಿತಿ ಸಂಗ್ರಹಿಸಲಾಗಿದೆ. ದೇಶದ ವಿವಿಧ ಕಡೆಗಳಲ್ಲಿ ಸಂಗ್ರಹಿತವಾದ ಇವರ ಮೂಲ ಕಲಾಕೃತಿಗಳನ್ನು ಅಲ್ಲಿನ ಕಲಾವಿದರುಗಳೊಡನೆ ಸಂದರ್ಶಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅ. ಸಂದರ್ಶನ :

ಧಾರವಾಡ ಜಿಲ್ಲೆಯ ಗರಗ ಗ್ರಾಮದಲ್ಲಿ ಜನಿಸಿದ ಕಲಾವಿದ ಶಂಕರ ಪಾಟೀಲರ ಕುಟುಂಬದವರನ್ನು ಸಂದರ್ಶಿಸಿ ಅವರ ಕೌಟುಂಬಿಕ ಹಿನ್ನೆಲೆ, ಬಾಲ್ಯದ ದಿನಗಳು, ಪ್ರಾಥಮಿಕ ಶಿಕ್ಷಣ, ಅಂದಿನ ದಿನಗಳಲ್ಲಿ ಕಲೆಗೆ ಆಕರ್ಷಿತರಾಗಲು ಕಾರಣ, ಪ್ರೇರಣೆ ನೀಡಿದ ವ್ಯಕ್ತಿಗಳು, ಕೌಟುಂಬಿಕ ಪರಿಸರ, ಶಾಲಾಪರಿಸರ, ಆ ಪ್ರದೇಶದ ಸಾಂಸ್ಕೃತಿಕ ಪರಿಸರ ಇವರ ಮೇಲೆ ಹೇಗೆ ಪ್ರಭಾವ ಬೀರಿದವು ಎಂಬುದರ ಕುರಿತು ವಿಷಯ ಸಂಗ್ರಹಣೆ ಮಾಡಲಾಗಿದೆ. ಹಾಗೂ ಪ್ರೌಢಶಾಲಾ ಶಿಕ್ಷಣ, ಕಲಾವ್ಯಾಸಂಗ ಮತ್ತು ಆ ಸಂದರ್ಭದಲ್ಲಿ ರಚಿಸಿದ ಕಲಾಕೃತಿಗಳ ಕುರಿತಾದಂತಹ ಅವರ ಅನುಭವಗಳನ್ನು, ಮಾಹಿತಿಯನ್ನು ಅವರ ನಿಕಟವರ್ತಿಗಳಿಂದ ಸಂಗ್ರಹಿಸಲಾಗಿದೆ. ಅಲ್ಲದೆ ಶಂಕರಪಾಟೀಲರ ಕಲಾಕೃತಿಗಳಲ್ಲಿ ಮೂಡಿದ ಅಭಿವ್ಯಕ್ತಿಯ ಕುರಿತು ಅವರ ವಿಚಾರಗಳನ್ನು ಕಲಾರಚನೆಯ ಹಿನ್ನೆಲೆಯಲ್ಲಿ ಸಂಪೂರ್ಣ ಮಾಹಿತಿಯನ್ನು ಹೊಂದಿದ ಪ್ರಮುಖ ವ್ಯಕ್ತಿಗಳಿಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

ಅ. ಛಾಯಾಚಿತ್ರಣ, ಸ್ಲೈಡ್ ಮತ್ತು ವೀಡಿಯೋಗ್ರಾಫಿ :

ಶಂಕರ ಪಾಟೀಲರು ಚಿತ್ರಕಲಾ ಅಧ್ಯಯನ ಮಾಡುತ್ತಿರುವಾಗ ಅಧ್ಯಯನ ನಂತರದ ಜೀವನದುದ್ದಕ್ಕೂ ರಚಿಸಿದ ಎಲ್ಲಾ ಮಾಧ್ಯಮದ ಕಲಾಕೃತಿಗಳ ಛಾಯಾಚಿತ್ರಣ ಮತ್ತು ಪ್ರಮುಖ ಕಲಾಕೃತಿಗಳ ಸ್ಲೈಡ್ಸ್ ಮಾಡಲಾಗಿದೆ. ಮತ್ತು ಮಹತ್ವದ ಆಕರಗಳ ಸಂದರ್ಶನದ ಜೊತೆಗೆ ವೀಡಿಯೋಗ್ರಾಫಿ ಕೂಡ ಮಾಡಲಾಗಿದೆ.

೨. ಆನುಷಂಗಿಕ ಆಕರ ಸಾಮಗ್ರಿ :

ಈ ಹಿಂದಿನ ಸಂಶೋಧನಾ ಮಹಾಪ್ರಬಂಧಗಳು, ಅಪ್ರಕಟಿತ, ಪ್ರಕಟಿತ ಕೃತಿಗಳು, ನಿಘಂಟುಗಳು, ವಿಶ್ವಕೋಶಗಳು, ಪತ್ರಿಕೆಗಳು, ಕಲಾವಿದರ ಕಲಾಕೃತಿಗಳ ಕುರಿತು ಪ್ರಕಟವಾದ ಕಲಾವಿಮರ್ಶೆ ಮತ್ತು ಅಭಿಪ್ರಾಯಗಳು, ಲೇಖನ, ಅಭಿನಂದನ ಗ್ರಂಥಗಳು ಮುಂತಾದ ಹಲವು ರೀತಿಯ ಆನುಷಂಗಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ.

ಹೀಗೆ ಈ ಮೇಲಿನ ಎರಡು ಮೂಲಗಳಿಂದ ವಿಷಯ ಸಂಗ್ರಹಣ ಮಾಡಿ ಪ್ರಸ್ತುತ ಈ ಅಧ್ಯಯನವನ್ನು ರೂಪಿಸಲಾಗಿದೆ.

ಅಧ್ಯಾಯ ಎರಡು :

ಶಂಕರ ಪಾಟೀಲರ ಜೀವನ ಕಲಾಅಧ್ಯಯನ ಮತ್ತು ಅಧ್ಯಾಪಕ ವೃತ್ತಿ

ಈ ಅಧ್ಯಾಯದಲ್ಲಿ ಜನನ, ಊರು, ಅಲ್ಲಿನ ಪರಿಸರ, ತಂದೆ–ತಾಯಿಗಳು, ಕೌಟುಂಬಿಕ ಹಿನ್ನೆಲೆ, ಬಾಲ್ಯದ ದಿನಗಳು, ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ಕಲೆಯ ಕಡೆಗೆ ಪರಿವರ್ತಿತವಾದ ಅವರ ಮನಸ್ಸು, ಕಲೆಯ ಕುರಿತಾದ ಪ್ರೇರಣೆ ನೀಡಿದ ವ್ಯಾಸಂಗದ ದಿನಗಳು, ಕಲಾಚಟುವಟಿಕೆಗಳು, ಕಲಾಭ್ಯಾಸದಲ್ಲಿ ಪ್ರೇರಣೆ ನೀಡಿದ ಗುರುಗಳು, ಸರ್ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್ ಮತ್ತು ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಪೇಂಟಿಂಗ್‌ನಲ್ಲಿ ಡಿಪ್ಲೋಮಾ ಉನ್ನತ ಕಲಾವ್ಯಾಸಂಗ ಪೂರ್ಣಗೊಳಿಸಿದ ಕುರಿತು ಸಮಗ್ರ ಮಾಹಿತಿಯನ್ನು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗುವುದು. ಇದರ ಜೊತೆಯಲ್ಲಿಯೇ ಅವರ ಸಾಂಸ್ಕೃತಿಕ ಪರಿಸರದ ಮಹತ್ವದ ವಿವರಗಳು ಹಾಗೂ ಶಂಕರ ಪಾಟೀಲರು ೧೯೬೮ರಲ್ಲಿ ಕುವೆಂಪು ವಿ.ವಿ.ಯ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಮತ್ತು ೧೯೭೨ ರಲ್ಲಿ ಅದೇ ಕಲಾಶಾಲೆಯ ಮುಖ್ಯಸ್ಥರಾಗಿ ನೇಮಕಗೊಂಡು ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿರುವ ಕುರಿತು ಹಾಗೂ ೧೯೭೬ ರಲ್ಲಿ ದಾವಣಗೆರೆಯಲ್ಲಿ 'ಕಲಾಗುರು ಆರ್ಟ ಗ್ಯಾಲರಿ'ಯನ್ನು ಸ್ಥಾಪಿಸಿ ಕಲಾಕ್ಷೇತ್ರಕ್ಕೆ ನೀಡಿದ ಅತ್ಯಮೂಲ್ಯ ಕೊಡುಗೆಯನ್ನು ಹಾಗೂ ಅವರ ಕಲಾಚಟುವಟಿಕೆಯನ್ನು ದಾಖಲಿಸಲಾಗುವುದು. ಅಲ್ಲದೆ ಇವರು ಈ ಕಲಾಕ್ಷೇತ್ರದಲ್ಲಿ ಮಾಡಿದ ಕಲಾಸಾಧನೆಯನ್ನು ಹಾಗೂ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಲಭಿಸಿದ ಪ್ರಶಸ್ತಿ ಇವೆಲ್ಲವುಗಳ ಕುರಿತು ಪ್ರಸ್ತುತ ಈ ಅಧ್ಯಾಯದಲ್ಲಿ ಚರ್ಚೆ ಮಾಡಲಾಗಿದೆ.

ಅಧ್ಯಾಯ ಮೂರು :

ಶಂಕರ ಪಾಟೀಲರ : ರೇಖಾಚಿತ್ರಗಳು

ರೇಖೆಗಳು ಚಿತ್ರಕಲೆಯ ಮೂಲ ತಳಹದಿಯಾಗಿದ್ದು, ರೇಖೆಗಳಿಲ್ಲದೆ ಯಾವುದೇ ಒಂದು ಚಿತ್ರ ಸಂಪೂರ್ಣವೆಂದೆನಿಸಿಕೊಳ್ಳುವುದಿಲ್ಲ. ಅದು ಅಪೂರ್ಣ ಕಲಾಕೃತಿಯಾಗುವುದು. ಸೃಜನಶೀಲ ವರ್ಣಚಿತ್ರಣ, ಅಬಸ್ಟ್ರಾಕ್ಟ್, ಕ್ಯೂಬಿಸಂ, ಮಾಡರ್ನ್ ಆರ್ಟ್ ಇನ್ನಾವುದೇ ವರ್ಣಚಿತ್ರವಾಗಿರಲಿ ಅಲ್ಲಿ ರೇಖೆಯ ಸಾಂಗತ್ಯ ಇರಲೇಬೇಕು. ಕಲಾವಿದನೊಬ್ಬ ಬೆಳಕಿನೆಡೆಗೆ ಸಾಗಲು ಆತನ ರೇಖಾಚಿತ್ರಗಳೇ ಪ್ರಮುಖವಾದ ಪಾತ್ರ ವಹಿಸುತ್ತವೆ ಎಂಬುದು ಈ ಕಲಾಕ್ಷೇತ್ರದಲ್ಲಿ ಪ್ರಚಲಿತವಾದ ವಿಷಯವಾಗಿದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಶಂಕರ ಪಾಟೀಲರ ರೇಖಾಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಶಂಕರ ಪಾಟೀಲರು ರಚಿಸಿದ ಅಸಂಖ್ಯಾತ ರೇಖಾಚಿತ್ರಗಳು ಇವರ ಕಲಾಭಿವ್ಯಕ್ತಿಗೆ ಬೆನ್ನೆಲುಬಾಗಿ ಅವರ ಕಲಾಸಾಧನೆಗೆ ಕನ್ನಡಿ ಹಿಡಿದಂತಿದೆ. ಶಂಕರ ಪಾಟೀಲರು ವಿವಿಧ ಮಾಧ್ಯಮಗಳನ್ನು ಬಳಸಿ ವಿವಿಧ ಶೈಲಿಯಲ್ಲಿ ರಚಿಸಿದ ಕಲಾಕೃತಿಗಳು ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಜೀವನವನ್ನು ಬಿಂಬಿಸುವ ರೇಖಾಚಿತ್ರಗಳನ್ನು ಈ ಅಧ್ಯಾಯದಲ್ಲಿ ಸಮಗ್ರವಾಗಿ ವಿಮರ್ಶಾತ್ಮಕವಾಗಿ ವಿವರಿಸಲಾಗಿದೆ.

ಅಧ್ಯಾಯ ನಾಲ್ಕು :

ಶಂಕರ ಪಾಟೀಲರ : ವರ್ಣಚಿತ್ರಗಳು

ಶಂಕರ ಪಾಟೀಲರು ರೇಖಾಚಿತ್ರಗಳಂತೆ ಸಾವಿರಾರು ವರ್ಣಚಿತ್ರಗಳನ್ನು ರಚಿಸಿದ್ದಾರೆ. ಇವರು ರಚಿಸಿರುವ ವರ್ಣಚಿತ್ರಗಳು ಸಮಾಜದ ಸಂಸ್ಕೃತಿಯ ಪರಂಪರೆಯನ್ನು ಬಿಂಬಿಸುವಂತಹುಗಳಾಗಿವೆ. ಅಲ್ಲದೆ ಪ್ರಯೋಗಾತ್ಮಕವಾಗಿ ರಚಿತಗೊಂಡಿವೆ. ರಾಜಕೀಯ, ಸಾಮಾಜಿಕ, ಶೃಂಗಾರಾತ್ಮಕ ಬದುಕಿನ ನೋವು-ನಲಿವು, ವೈಯಕ್ತಿಕ ಬದುಕು, ಸಮುದಾಯ ಬದುಕಿನ ಭಾವನಾತ್ಮಕ ವಿಚಾರಗಳನ್ನು ಸೃಜನಶೀಲವಾಗಿ ಕೃತಿರೂಪದಲ್ಲಿ ರಚನೆಯಾಗಿದೆ. ಧಾರ್ಮಿಕೇತರ ಚಿತ್ರಗಳು, ನಿಸರ್ಗ ಚಿತ್ರಗಳು, ಭಾವಚಿತ್ರ, ನವ್ಯಕಲಾಕೃತಿಗಳನ್ನೊಳಗೊಂಡ ಚಿತ್ರಗಳನ್ನು ಹೀಗೆ ವಿಷಯವಾರು ವಿವೇಚನೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಮುಂಬೈ, ಕಲ್ಕತ್ತಾ, ಮದ್ರಾಸ್, ಹೈದರಾಬಾದ್, ಗೋವಾ, ಕೊಚ್ಚಿನ್, ಬೆಂಗಳೂರು, ಮೈಸೂರು, ಹುಬ್ಬಳ್ಳಿ, ದಾವಣಗೆರೆ, ಧಾರವಾಡ ಹಾಗೂ ಅಮೇರಿಕ, ಕೆನಡಾ ಮುಂತಾದ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶನಗೊಂಡ ಮತ್ತು ಸಂಗ್ರಹಿತ ಕಲಾಕೃತಿಗಳ ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಐದು :

ಶಂಕರ ಪಾಟೀಲರ : ಛಾಯಾಚಿತ್ರಗಳು

ಶಂಕರ ಪಾಟೀಲರು ವರ್ಣಚಿತ್ರಕಲೆಯ ಜೊತೆಗೆ ಛಾಯಾಚಿತ್ರಣ ಕಲೆಯ ಬಗ್ಗೆ ಆಸಕ್ತಿಯನ್ನುವಹಿಸಿ ಭಾರತೀಯ ಶಾಸ್ತ್ರೀಯ ಸಂಗೀತಕ್ಕೆ ಸಂಬಂಧಿಸಿದಂತೆ ಶ್ರೇಷ್ಠ ಛಾಯಾಚಿತ್ರಗಳನ್ನುಸೆರೆಹಿಡಿದಿದ್ದು ಅಲ್ಲದೆ ವಿವಿಧ ಜನಸಮುದಾಯದ ತಾತ್ವಿಕ, ಮನೋವೈಜ್ಞಾನಿಕ, ಧಾರ್ಮಿಕೇತರ ವಿಷಯಗಳನ್ನು ತಮ್ಮ ಛಾಯಾಚಿತ್ರಗಳಲ್ಲಿ ಭಿನ್ನ ಭಿನ್ನವಾಗಿ ಸೆರೆಹಿಡಿದಿದ್ದಾರೆ.

ಇಂತಹ ಚಿತ್ರಗಳು ದೇಶದ ವಿವಿಧ ಭಾಗಗಳಲ್ಲಿ ಪ್ರದರ್ಶನಗೊಂಡಿವೆ. ಅಂತಹ ಛಾಯಾಚಿತ್ರಗಳ ಕುರಿತು ಈ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

ಅಧ್ಯಾಯ ಆರು :

ಶಂಕರ ಪಾಟೀಲರ ಕಲಾಕೃತಿಗಳ ಮೇಲಾದ ಪ್ರಭಾವ ಮತ್ತು ಪ್ರೇರಣೆ : ಅನುಸರಿಸಿದ ಶೈಲಿ ಮತ್ತು ತಂತ್ರ

ಪ್ರತಿಯೊಂದು ಕಲಾಕೃತಿಯ ನಿರ್ಮಾಣದ ಹಿಂದೆ ಅನುಭವ, ಪ್ರಭಾವ, ಪ್ರೇರಣೆ ಇದ್ದೇ ಇರುತ್ತದೆ. ಶಂಕರ ಪಾಟೀಲರ ಬಹುತೇಕ ಕಲಾಕೃತಿಗಳಲ್ಲಿ ಈ ಪ್ರಭಾವಗಳು ಕಂಡುಬಂದಿವೆ. ಪಾಟೀಲರು ಕೇವಲ ಒಂದೇ ಮಾಧ್ಯಮದಲ್ಲಿ ಕಲಾಕೃತಿಯನ್ನು ರಚಿಸಿರದೆ ವಿವಿಧ ಮಾಧ್ಯಮಗಳನ್ನು ಬಳಸಿ ಚಿತ್ರರಚನೆ ಮಾಡಿರುವುದು ಗೋಚರಿಸುತ್ತದೆ. ಮತ್ತು ಕಾಲಕ್ಕನುಗುಣವಾಗಿ ಅವರ ಕಲಾಕೃತಿಗಳಲ್ಲಿ ಶೈಲಿಯು ಬದಲಾಗುತ್ತಾ ಹೋಗಿದೆ. ಹೀಗೆ ಇವೆಲ್ಲವುಗಳ ಮಧ್ಯೆ ತಮ್ಮ ಶೈಲಿಯನ್ನು ಬೆಳೆಸಿ ಅದನ್ನು ತಮ್ಮ ಎಲ್ಲ ಕಲಾಕೃತಿಗಳಲ್ಲಿ ನಿಚ್ಚಳವಾಗಿ ಗೋಚರಿಸುವಂತೆ ತೋರಿಸಿದ್ದಾರೆ. ಈ ಎಲ್ಲ ಅಂಶಗಳ ಕುರಿತು ಸೋದಾಹರಣವಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಏಳು :

ಶಂಕರ ಪಾಟೀಲರ ಕಲಾಸಾಹಿತ್ಯ ಮತ್ತು ಕಲಾಚಟುವಟಿಕೆಗಳು

ಶಂಕರ ಪಾಟೀಲರು ಒಬ್ಬ ಅಧ್ಯಾಪಕರಾಗಿ ಹಾಗೂ ವಾಣಿಜ್ಯ ಕಲೆ ವಿಭಾಗದ ಮುಖ್ಯಸ್ಥರಾಗಿ ಮತ್ತು ಅಂತರಾಷ್ಟ್ರೀಯ ರೋಟರಿ ಕ್ಲಬ್‌ನ ಸದಸ್ಯರಾಗಿ ನಿರ್ವಹಿಸಿದ ಕಾರ್ಯಚಟುವಟಿಕೆಗಳನ್ನು ಈ ಅಧ್ಯಾಯದಲ್ಲಿ ದಾಖಲು ಮಾಡಲಾಗಿದೆ. ಅವರ ಬದುಕಿನುದ್ದಕ್ಕೂ ರಚಿಸಿದ ಹಾಗೂ ವಿವಿಧ ಸ್ಥಳಗಳಲ್ಲಿ ನೀಡಿದ ಕಲಾಪ್ರಾತ್ಯಕ್ಷಿಕೆ, ಪ್ರದರ್ಶನಗಳನ್ನು ಇಲ್ಲಿ ದಾಖಲಿಸಲಾಗುವುದು. ಶಂಕರ ಪಾಟೀಲರು ಒಬ್ಬ ಲೇಖಕರಾಗಿ ಕಲೆ ಮತ್ತು ಕಲಾವಿಮರ್ಶೆಯ ಕುರಿತು ಪ್ರಬುದ್ಧವಾಗಿ ಮಾತನಾಡುವ ಮೃದು ಸ್ವಭಾವದವರಾಗಿದ್ದು ಕರ್ನಾಟಕದುದ್ದಕ್ಕೂ ಹೆಸರುವಾಸಿಯಾದ ಕಲಾವಿದರು. ಅವರ ಸಾಹಿತ್ಯ ಕೃತಿಗಳ ಬಗ್ಗೆ, ಸಾಹಿತ್ಯ ಕೃತಿಗಳಿಗೆ ಸಂದ ಪ್ರಶಸ್ತಿಗಳ ಕುರಿತು ಹಾಗೂ ಕಲೆಯ ಬಗೆಗಿನ ಅವರ ಗಂಭೀರ ಚಿಂತನೆಗಳು, ಕಲಾಶಿಕ್ಷಣದ ಕುರಿತಾದ ಮಹತ್ವದ ಅಂಶಗಳನ್ನು ಈ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

ಅಧ್ಯಾಯ ಎಂಟು :

ಸಮಾರೋಪ

ಪ್ರಸ್ತುತ ಅಧ್ಯಾಯದಲ್ಲಿ ಈ ಮಹಾಪ್ರಬಂಧದ ಎಲ್ಲ ಅಧ್ಯಾಯಗಳ ಸಮೀಕ್ಷೆಯನ್ನು ಮಾಡಿ ಶಂಕರ ಪಾಟೀಲರ ವ್ಯಕ್ತಿತ್ವ, ಅವರ ಕಲಾಕೃತಿಗಳ ತಂತ್ರ, ವರ್ಣಶೈಲಿ, ಸಮಕಾಲೀನ ಕಲಾಕ್ಷೇತ್ರಕ್ಕೆ ನೀಡಿದ ಕೊಡುಗೆ, ಸಾಮಾಜಿಕ, ಧಾರ್ಮಿಕ ಚಿಂತನೆಗಳ ವಿವಿಧ ಮಗ್ಗಲುಗಳ ಅಧ್ಯಯನಗಳಿಂದ ದೊರೆತ ಫಲಿತಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ.

❖ ❖ ❖

ಅಧ್ಯಾಯ : ಎರಡು

ಶಂಕರ ಪಾಟೀಲರ ಜೀವನ, ಕಲಾ ಅಧ್ಯಯನ ಮತ್ತು ಅಧ್ಯಾಪಕ ವೃತ್ತಿ





ಶಂಕರ ಪಾಟೀಲರ ಪೂರ್ವಜರು ಮೂಲತಹ ಇಂದಿನ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಹಿರೇಒಡ್ಡಟ್ಟಿ ಗ್ರಾಮದವರಾಗಿದ್ದು ಸುಸಂಸ್ಕೃತ ಕುಟುಂಬದ ಪರಿಸರ ಇವರದಾಗಿತ್ತು. ವಿದ್ಯಾವಂತರಾಗಿದ್ದ ತಂದೆ ಶ್ರೀ ಚಂದ್ರಶೇಖರ ಅಮರಪ್ಪ ಅವರು ಪ್ರಾಥಮಿಕ ಹಂತದ ಶಿಕ್ಷಣವನ್ನು ಪೂರೈಸಿ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದರು. ನಂತರದ ದಿನಗಳಲ್ಲಿ ಚಂದ್ರಶೇಖರವರು ಹೆಸರಾಂತ ಕವಿ ನಾಡೋಜ ಶ್ರೀ ಚನ್ನವೀರ ಕಣವಿಯವರ ಅಕ್ಕ ಸಾವಿತ್ರಿದೇವಿಯವರನ್ನು ೧೯೪೪ರಲ್ಲಿ ವಿವಾಹವಾದರು. ಚಂದ್ರಶೇಖರರವರು ಶಿಕ್ಷಕರಾಗಿ ಮುಂಡರಗಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮತ್ತು ಬೇರೆ ಬೇರೆ ಊರುಗಳಿಂದ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು ಪಡೆಯಲು ಬರುತ್ತಿದ್ದರು. ಹೀಗೆ ಬಂದಂತಹ ಮಕ್ಕಳಿಗೆ ಅಲ್ಲಿನ ಅನ್ನದಾನೇಶ್ವರ ಮಠದಲ್ಲಿ ವಾಸ್ತವ್ಯ ಮತ್ತು ಉಚಿತ ಅನ್ನ ಪ್ರಸಾದವನ್ನು ನೀಡಲಾಗುತ್ತಿತ್ತು. ಹೀಗೆ ಸುತ್ತಮುತ್ತಲಿನ ಪ್ರದೇಶಗಳಿಂದ ಬಂದಂತಂಹ ವಿದ್ಯಾರ್ಥಿಗಳಿಗೆ ಚಂದ್ರಶೇಖರರು ವಿದ್ಯಾರ್ಜನೆ ಮಾಡುವುದರ ಜೊತೆಗೆ ವಿದ್ಯಾರ್ಥಿಗಳ ಜೊತೆಗೂಡಿ ಶಾಲಾ ಆವರಣದಲ್ಲಿ ಸಸಿಗಳನ್ನು ನೆಟ್ಟು ಸುಂದರವಾದ, ಸ್ವಚ್ಛಂದವಾದ ಶಾಲಾ ಕೈತೋಟವನ್ನು ನಿರ್ಮಿಸುತ್ತಿದ್ದರಂತೆ. ಅವರ ಶಿಸ್ತುಬದ್ಧ ಜೀವನ ಇನ್ನೊಬ್ಬರಿಗೆ ಮಾದರಿಯಾಗಿತ್ತು.



ಶಂಕರ ಪಾಟೀಲರ ತಂದೆ ಚಂದ್ರಶೇಖರ ಪಾಟೀಲ



ಶಂಕರ ಪಾಟೀಲರ ತಾಯಿ ಸಾವಿತ್ರಿದೇವಿ

ಚಂದ್ರಶೇಖರ ಅವರು ಮುಂಡರಗಿಯಲ್ಲಿ ಶಿಕ್ಷಕರಾಗಿ ಸೇವೆಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಭಾರತದ ಪ್ರಸಿದ್ಧ ಯಾತ್ರ ಕ್ಷೇತ್ರಗಳಾದ ಕಾಶಿ, ಹರಿದ್ವಾರ, ಋಷಿಕೇಶ್, ಕನ್ಯಾಕುಮಾರಿ ಮುಂತಾದ ಸುಪ್ರಸಿದ್ಧ ಐತಿಹಾಸಿಕ ಮತ್ತು ಪುಣ್ಯ ಕ್ಷೇತ್ರಗಳಿಗೆ ಪ್ರವಾಸವನ್ನು ಕೈಗೊಂಡಿದ್ದರು. ಪ್ರವಾಸದ ದಿನಗಳಲ್ಲಿ ಆಯಾ ಪ್ರದೇಶದ ಸಮುದ್ರ ತೀರದಲ್ಲಿ ಶಂಖ, ಕಪ್ಪೆ ಚಿಪ್ಪು, ವಿವಿಧ ಜಲಚರ ವಸ್ತುಗಳನ್ನು ಸಂಗ್ರಹಿಸುವುದು ಇವರ ಹವ್ಯಾಸವಾಗಿತ್ತು. ಹೀಗೆ ಸಂಗ್ರಹಿಸಿದ ವಸ್ತುಗಳನ್ನು ಶಾಲೆಗೆ ತಂದು ಪ್ರದರ್ಶನಕ್ಕಿಡುತ್ತಿದ್ದರು. ಹೀಗೆ ಪ್ರಾಥಮಿಕ ಶಾಲಾ ಶಿಕ್ಷಕರಾಗಿ, ವಿವಿಧ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ವಿದ್ಯಾರ್ಥಿಗಳಿಗೆ ಒಬ್ಬ ಒಳ್ಳೆಯ ಶಿಸ್ತುಬದ್ಧ ಶಿಕ್ಷಕರಾಗಿರುವುದಲ್ಲದೆ ಅವರು ಚಿತ್ರಕಲೆಯಲ್ಲಿಯೂ ಆಸಕ್ತಿವುಳ್ಳವರಾಗಿದ್ದರು. ಇವರು ಮೂರು ವರ್ಷಗಳ ಕಾಲ ಧಾರವಾಡ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜ, ಆದರ್ಶ ಪಾಠಾಭ್ಯಾಸ ಪ್ರಾಥಮಿಕ ಶಾಲೆಯಲ್ಲಿ (ಡೈಯಟ್) ಶಿಕ್ಷಕರಾಗಿ ಕಾರ್ಯನಿರ್ವಹಿಸಿ ನಂತರದಲ್ಲಿ ಪ್ರಮೋಷನ್ (ಹೆಚ್ಚಿನ ಹುದ್ದೆ) ಮೂಲಕ ವರ್ಗವಾಗಿ ಗರಗ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಮುಖ್ಯಾಧ್ಯಾಪಕರಾಗಿ ವರ್ಗಾವಣೆಯಾಗಿ ಹೋಗುತ್ತಾರೆ. ಅಂದಿನ ಸಂದರ್ಭದಲ್ಲಿ ಬಡ್ತಿ (ಪ್ರಮೋಷನ್) ಆಗಿ ಬಂದಾಗ ಚಂದ್ರಶೇಖರವರಿಗೆ ಪೋಸ್ಟಮಾಸ್ಟರ ಇನ್‌ಚಾರ್ಜ್ ಮತ್ತು ದವಾಖಾನೆಯ ಆಡಳಿತವನ್ನುಸಹ ವಹಿಸಲಾಗಿತ್ತು. ಇವೆರಡರಲ್ಲೂ ಚಂದ್ರಶೇಖರರು ಪಾಲುದಾರರಾಗಿ ಕಾರ್ಯವನ್ನು ನಿರ್ವಹಿಸುತ್ತಾರೆ. ಆಗಿನ ಕಾಲದ ಸಂದರ್ಭವೇ ಹಾಗಿತ್ತೆಂದು ಖ್ಯಾತ ಕವಿಗಳಾದ ಚನ್ನವೀರ ಕಣವಿಯವರು ಅಬಿಪ್ರಾಯ ವ್ಯಕ್ತಪಡಿಸಿದ್ದಾರೆ.[೧]

ವೃತ್ತಿಯಲ್ಲಿ ಶಿಕ್ಷಕರಾಗಿದ್ದರೂ ಇವರು ಅಪ್ಪಟಗಾಂಧಿವಾದಿಯಾಗಿದ್ದರು. ಗರಗದಲ್ಲಿ ಅಂದಿನ ಸಂದರ್ಭದಲ್ಲಿ ಸ್ವಾತಂತ್ರ್ಯ ಚಳುವಳಿಯ ಬಿಸಿ ಹೆಚ್ಚುತ್ತಿದ್ದ ಸಂದರ್ಭದಲ್ಲಿ ಮಾಡು ಇಲ್ಲವೆ ಮಡಿ ಆಂದೋಲನದ ಚಳುವಳಿಯಲ್ಲಿ ಇವರು ಭಾಗವಹಿಸಿದ್ದರು. ಅಂತಹ ಸಂದರ್ಭದ ದಿನಗಳಲ್ಲಿ ಇವರು ೮ ತಿಂಗಳ ಕಾರಾಗೃಹವಾಸವನ್ನು ಅನುಭವಿಸುತ್ತಾರೆ .ಮುಂದೆ ಚಂದ್ರಶೇಖರರು ಅದೇ ವೃತ್ತಿಯಲ್ಲಿ ಅಂದರೆ ಶಿಕ್ಷಕರಾಗಿ ಸೇವೆಸಲ್ಲಿಸುತ್ತಾರೆ. ಸ್ಕೌಟ್‌ನಲ್ಲಿ ತಮ್ಮನ್ನು ಬಹುವಾಗಿ ತೊಡಗಿಸಿಕೊಂಡು, ಒಬ್ಬ ಶಿಸ್ತುಬದ್ಧ ವ್ಯಕ್ತಿಯಾಗಿ ಗುರುತಿಸಿಕೊಳ್ಳುತ್ತಾರೆ.

ಇವರ ತಂದೆ ಚಂದ್ರಶೇಖರವರ ಕಾಲದಲ್ಲಿ ಇವರು ಅಡ್ಡಹೆಸರು ಪಾಟೀಲ ಎಂದು ಬದಲಾವಣೆಗೊಂಡಿರುವದಾಗಿ ತಿಳಿದು ಬರುತ್ತದೆ. ಮೂಲ ಅಡ್ಡ ಹೆಸರು ಗೋಗೋರಿ ಎಂದು

---

೧. ಸಂದರ್ಶನ- ಚನ್ನವೀರ ಕಣವಿ, ದಿನಾಂಕ : ೨೪-೦೮-೨೦೦೯.

ಇದ್ದಿತೆಂದು ಮಾಹಿತಿ ಸಿಗುತ್ತದೆ. ಈಗ ಪಾಟೀಲ ಎಂದೇ ರೂಢಿಯಲ್ಲಿದ್ದು, ಅವರ ಪ್ರಮಾಣ ಪತ್ರಗಳಲ್ಲಿ ಸಹ ಅದೇ ಅಡ್ಡ ಹೆಸರು ಇರುವುದನ್ನು ಕಾಣುತ್ತೇವೆ.[೨]

ಕಲೆ ಮತ್ತು ಸಾಂಸ್ಕೃತಿಕ ನಗರಿಯಾದ ಧಾರವಾಡದಿಂದ ಸುಮಾರು ೧೨ ಕಿ.ಮೀ. ದೂರದ ಗರಗ ಗ್ರಾಮದಲ್ಲಿ ಶ್ರೀಯುತ ಶಂಕರ ಪಾಟೀಲರು ೧ನೇ ಜೂನ್ ೧೯೪೭ ರಂದು (ತಂದೆ ಚಂದ್ರಶೇಖರ ಗೌಡ, ತಾಯಿ ಸಾವಿತ್ರಿದೇವಿಯವರ ಉದರದಲ್ಲಿ) ಜನಿಸುತ್ತಾರೆ. ಅಲ್ಲದೆ ಪಾಟೀಲ ದಂಪತಿಗಳಿಗೆ ಒಟ್ಟು ಮೂವರು ಗಂಡು ಮಕ್ಕಳು. ಮೂವರಲ್ಲಿ ಮನೆಯ ಹಿರಿಯ ಮಗನಾಗಿ ಶಂಕರ, ಎರಡನೆ ಮಗನಾಗಿ ಅನ್ನದಾನಿ ಮತ್ತು ಮೂರನೆಯವನಾಗಿ ಲಿಂಗರಾಜ ಹೀಗೆ ಮೂರುಜನ ಸಹೋದರರು. ಪಾಟೀಲರು ಆರ್ಥಿಕವಾಗಿ ಅಷ್ಟೇನೂ ಸಬಲರಾಗಿರಲಿಲ್ಲವಾದರೂ ಲಿಂಗಾಯತ ಕುಟುಂಬದವರಾಗಿದ್ದು ಆಧ್ಯಾತ್ಮಿಕ-ಧಾರ್ಮಿಕ ಆಚರಣೆಗಳನ್ನು ಆಚರಿಸುವ ಸರ್ವಧರ್ಮ ಪಾಲನೆಯ ಮನೋಧರ್ಮದ ಸುಸಂಸ್ಕೃತ ಕುಟುಂಬದಿಂದ ಬಂದವರಾಗಿದ್ದರು, ನಯ, ವಿನಯ, ಶ್ರದ್ಧೆ, ಶಿಸ್ತಿನಿಂದ ಬೆಳೆದು ಬಂದ ಸಂಸ್ಕಾರ ಇವರದಾಗಿತ್ತು. ಕೆಲವು ವರ್ಷಗಳ ನಂತರ ಮತ್ತೇ ಪಾಟೀಲರಿಗೆ ಸರಕಾರದಿಂದ ಎ.ಡಿ.ಎ.ಐ. (ಅಸಿಸ್ಟೆಂಟ್ ಡೆಪ್ಯೂಟಿ ಎಜ್ಯುಕೇಶನ್ ಇನಸ್ಪೆಕ್ಟರ್) ಆಗಿ ಸೇವೆ ಸಲ್ಲಿಸುವ ಭಾಗ್ಯ ಒಲಿದು ಬಂದಿತು. ಈ ಸೇವೆಯಲ್ಲಿ ತಾವು ಹಳ್ಳಿ ಹಳ್ಳಿಗೆ ಹೋಗಿ ಪ್ರಾಥಮಿಕ ಶಾಲೆಗಳಿಗೆ ಬೇಟಿಕೊಟ್ಟು ಶಾಲೆಯ ಪರಿಸರ, ಆಡಳಿತ, ವಿದ್ಯಾರ್ಥಿಗಳ ಕುರಿತು ಮತ್ತು ಪರೀಕ್ಷೆಯ ದಿನಗಳಲ್ಲಿ ಮೇಲ್ವಿಚಾರಕರಾಗಿ ಸೇವೆಸಲ್ಲಿಸಬೇಕಾಗುತ್ತಿತ್ತು. ಅದನ್ನು ಅತ್ಯಂತ ಉತ್ಸಾಹದಿಂದ ನೇರವೇರಿಸುತ್ತಾರೆ.

೧೯೫೩ ರಲ್ಲಿ ಬಾಲಕ ಶಂಕರ ಪಾಟೀಲರ ತಾಯಿ ಸಾವಿತ್ರಿದೇವಿ ತೀರಿಹೋಗುತ್ತಾರೆ ತಮ್ಮ ಆರನೇ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡ ಪಾಟೀಲರು ತಮ್ಮನ್ನು ತಾವು ಸದಾ ಕ್ರಿಯಾಶೀಲತೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಆ ಅನಾಥಪ್ರಜ್ಞೆಯನ್ನು ಮರೆತು ಬೆಳೆದರು. ಇವರು ಬಾಲ್ಯದಲ್ಲಿ ಚಿತ್ರ ಗೀಚುವುದು, ಹಳೆಯ ಪತ್ರಿಕೆಗಳನ್ನು ಚಿತ್ರಮಯವಾಗಿ ಕತ್ತರಿಸುವುದು ಹಾಗೂ ಕ್ರೀಡೆ ಮತ್ತು ಕಲೆಯ ಪ್ರದರ್ಶನದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದನ್ನು ಕಂಡು ಇವರ ತಂದೆ ಚಂದ್ರಶೇಖರಗೌಡರು ಶಂಕರನಲ್ಲಿರುವ ಕಲೆಯ ಉತ್ಸಾಹಕ್ಕೆ ಪ್ರೋತ್ಸಾಹ ನೀಡುತ್ತಾರೆ. ತಂದೆಯ ಉತ್ತೇಜನದಿಂದ, ಸಹಕಾರದಿಂದ ಶಂಕರ ಪಾಟೀಲರಲ್ಲಿ ಕಲೆಯ ಬೀಜಾಂಕುರವಾಗುತ್ತದೆ.

---

೨. ಸಂದರ್ಶನ- ನಯನ ಎಸ್. ಪಾಟೀಲ, ದಿನಾಂಕ : ೧೨-೦೫-೨೦೦೮.

ಬಾಲ್ಯ ಪರಿಸರ :

ಸರಕಾರಿ ನೌಕರಿಯಂದರೆ ಸಹಜವಾಗಿ ವರ್ಗಾವಣೆ ಇದ್ದೆ ಇರುತ್ತದೆ. ಇವರ ತಂದೆಯವರನ್ನು ವಿಜಾಪುರಕ್ಕೆ ವರ್ಗಾವಣೆ ಮಾಡುತ್ತಾರೆ. ಹಿಂದೂ-ಮಹಮ್ಮದೀಯ ಶೈಲಿಯ ಹಲವು ಅತ್ಯುತ್ತಮ ವಾಸ್ತುಶಿಲ್ಪಗಳನ್ನೊಳಗೊಂಡ ಐತಿಹಾಸಿಕ ನಗರಿಯಾದ ಬಿಜಾಪುರಕ್ಕೆ ಕುಟುಂಬ ಸಮೇತ ಬರುತ್ತಾರೆ. ಅವರೊಂದಿಗೆ ತೆರಳಿದ ಶಂಕರ ಪಾಟೀಲರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಸಿದ್ದೇಶ್ವರ ಸಂಸ್ಥೆಯ ಸಿದ್ಧೇಶ್ವರ ಹೈಸ್ಕೂಲಿನಲ್ಲಿ ಮೆಟ್ರಿಕ್‌ವರೆಗೆ ಓದುತ್ತಾರೆ. ವಿದ್ಯಾರ್ಥಿ ದೆಸೆಯಲ್ಲಿ ಪಾಟೀಲರು ಕಲೆಯ ಕುರಿತಾಗಿ ಅದಮ್ಯ ಆಸಕ್ತಿ ಹೊಂದಿದ್ದರು. ಐತಿಹಾಸಿಕ ಕಲಾವಂತಿಕೆಯ ಬಿಜಾಪುರ, ಅಲ್ಲಿನ ಕಲಾತ್ಮಕ ಕಟ್ಟಡಗಳು, ಬಾಲಕನಾಗಿದ್ದ ಪಾಟೀಲರಿಗೆ ಒಂದು ರೀತಿಯಲ್ಲಿ ಕಲಾತ್ಮಕ ಬದುಕಿಗೆ ಪ್ರೇರಣೆಯಾದವು. ಹೀಗೆಯೇ ಒಮ್ಮೆ ಮುಂಬೈ ನಗರದ ಕಲಾಶಾಲೆಯ ಕಲಾವಿದರ ತಂಡವೊಂದು ಬಿಜಾಪುರಕ್ಕೆ ನಿಸರ್ಗಚಿತ್ರ ಬಿಡಿಸಲು ಬಂದಾಗ, ಬಾಲಕ ಶಂಕರ ಮುಂಬೈನ ಕಲಾವಿದರು ರಚಿಸುವಂತ ಚಿತ್ರಗಳನ್ನು ನೋಡಿ ಆ ಕಲಾವಿದರೊಂದಿಗೆ ಅವರು ಹೋದ ಕಡೆಗೆಲ್ಲಾ ಹೋಗಿ ಅವರೊಂದಿಗೆ ಸುತ್ತುತ್ತಿದ್ದರು. ಮುಂಬೈನ ಕಲಾವಿದರು ಚಿತ್ರ ಬಿಡಿಸುವಾಗ ಏಕಾಗ್ರತೆಯಿಂದ ಅವಲೋಕಿಸುತ್ತ ಚಿತ್ರದ ರೇಖಾವಿನ್ಯಾಸ, ಸಂಯೋಜನೆ, ವರ್ಣಗಳ ಬಳಕೆ ಇನ್ನಿತರ ನಿಯಮಗಳನ್ನು ಸೂಕ್ಷ್ಮವಾಗಿ ಗ್ರಹಿಸುತ್ತಿದ್ದರು. ಹೀಗೆ ಶಂಕರರು ಆ ಕಲಾತಂಡ ಮುಂಬೈಗೆ ಹೋಗುವವರೆಗೂ ಪ್ರತಿದಿನವೂ ಅವರೊಂದಿಗೆ ತನಗರಿವಿಲ್ಲದಂತೆಯೇ ಕಾಲ ಕಳೆಯುತ್ತಿದ್ದರು. ಆ ಕಲಾತಂಡದವರು ಹಿಂದಿರುಗುವಾಗ ಇವರಿಗೆ ಬಣ್ಣ, ಕುಂಚ, ಡ್ರಾಯಿಂಗ್ ಪೇಪರ್‌ಗಳನ್ನು ಚಿತ್ರಿಸಲು ನೀಡಿದರು. ಹೀಗೆ ಬಾಲಕ ಪಾಟೀಲರು ಬಿಜಾಪುರದ ಪರಿಸರಕ್ಕೆ ಆಕರ್ಷಿತರಾಗಿ ಚಿತ್ರಕಲೆಯ ನಂಟುತನವನ್ನು ಬೆಳೆಸಿಕೊಳ್ಳುತ್ತಾರೆ.

ಇದೇ ದೆಸೆಯಲ್ಲಿ ಅಲ್ಲಿನ ಸಿದ್ದೇಶ್ವರ ಹೈಸ್ಕೂಲಿನ ಚಿತ್ರಕಲಾ ಗುರುಗಳಾದ ಎಂ.ಎಸ್.ಜತ್ತಿಯವರು ಬಾಲಕ ಶಂಕರನಲ್ಲಿ ಗೌಪ್ಯವಾಗಿ ಅಡಗಿದ್ದ ಕಲಾಸಕ್ತಿಯನ್ನು ದೀರ್ಘವಾಗಿ ಪರಿಶೀಲಿಸಿ, ಪ್ರೋತ್ಸಾಹ ನೀಡುತ್ತಾರೆ. ಶಂಕರ ಪಾಟೀಲರ ಚಿತ್ರಕಲಾ ಶಿಕ್ಷಣಕ್ಕೆ ಕಲೆಯ ದೀಕ್ಷೆಯನ್ನು ನೀಡುತ್ತಾರೆ. ಹೀಗೆ ಚಿತ್ರಕಲೆಯ ಹುಚ್ಚು ಶಂಕರ ಪಾಟೀಲರಲ್ಲಿ 'ಬೆಳೆವ ಸಿರಿ ಮೊಳಕೆಯಲ್ಲಿ' ಎಂಬಂತೆ ಬಾಲ್ಯದಲ್ಲಿ ಚಿಗುರೊಡೆಯುತ್ತದೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತಗಳಲ್ಲಿ ಪಾಟೀಲರು ಅತ್ಯಂತ ಆಸಕ್ತಿಯಿಂದ ಸೂಕ್ಷ್ಮಸಂವೇದನಾಶೀಲರಾಗಿ ಸ್ವಯಂಸ್ಫೂರ್ತಿ ಉಳ್ಳವರಾಗಿ ಸ್ವತಂತ್ರವಾಗಿ ಚಿತ್ರರಚನೆಯಲ್ಲಿ ತೊಡಗಿಸಿಕೊಂಡರು. ಈ ರೀತಿಯಾಗಿ ಚಿತ್ರಕಲೆಯ ವ್ಯಾಕರಣ ತಿಳಿದುಕೊಳ್ಳುತ್ತ ಮುಂದುವರೆಯುತ್ತಾರೆ.

ಇದರಿಂದ ಇವರಲ್ಲಿ ಆತ್ಮವಿಶ್ವಾಸ ಚಿಗುರುತ್ತದೆ; ಮನಸ್ಸಿಗೆ ಹೊಸ ಹೊಸ ಅಲೋಚನೆಗಳು ಹೊಳೆದಂತೆಲ್ಲಾ ಚಿತ್ರರಚನೆ ಮಾಡುತ್ತಾ ಹೋಗುತ್ತಾರೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯಾದ ಸಿದ್ದೇಶ್ವರ ಹೈಸ್ಕೂಲ ಮತ್ತು ಕಲಾಗುರುಗಳಾದ ಎಂ.ಎಸ್.ಜತ್ತಿಯವರು ಇವರ ಕಲಾಅಸಕ್ತಿಗೆ ನೀಡಿದ ಪ್ರೋತ್ಸಹ ಇವರ ಬದುಕಿನಲ್ಲಿ ಮಹತ್ವದ ಘಟ್ಟವಾಗಿದೆ.

೧೯೬೨ ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಪಾಟೀಲರ ತಂದೆ ಚಂದ್ರಶೇಖರ ಗೌಡರು ತಮ್ಮ ಮಗನನ್ನು ಡಾಕ್ಟರ್, ಇಂಜಿನೀಯರ್‌ನಾಗಿ ಕಾಣುವ ಬಯಕೆಯನ್ನಿಟ್ಟುಕೊಂಡಿದ್ದರು. ಮಗನಿಗೆ ಓದಿನಲ್ಲಿ ಅಷ್ಟೊಂದು ಆಸಕ್ತಿ ಇಲ್ಲದಿದ್ದರೂ ಸಹ ಬಿಜಾಪೂರದಿಂದ ಸುಮಾರು ೨೦೦ ಕಿ.ಮೀ. ದೂರದ ವಿದ್ಯಾನಗರಿ ಎಂದು ಪ್ರಸಿದ್ಧಿ ಪಡೆದ ಧಾರವಾಡಕ್ಕೆ ಕರೆತಂದು 'ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ' ಇದರ ಅಧೀನದಲ್ಲಿ ನಡೆಯುತ್ತಿದ್ದ 'ಕರ್ನಾಟಕ ಕಾಲೇಜ್'ಗೆ ಸೇರಿಸುತ್ತಾರೆ. ಪಿ.ಯು.ಸಿ. ಪ್ರಥಮ ವರ್ಷಕ್ಕೆ ವಿಜ್ಞಾನ ವಿಷಯವನ್ನು ಐಚ್ಛಿಕ ವಿಷಯವನ್ನಾಗಿ ಆಯ್ಕೆ ಮಾಡಿ ತರಗತಿಗೆ ಸೇರಿಸಿದರು. ಆದರೆ ಪಾಟೀಲರಿಗೆ ಓದಿಗಿಂತ ಕಲೆಯ ಒಲವು, ಚಿತ್ರ ಬಿಡಿಸುವ ಗೀಳೋ ಅಥವಾ ಚಿತ್ರಕಲೆ ಇವರನ್ನು ಇನ್ನೊಂದೆಡೆ ಕೈಮಾಡಿ ಕರೆಯುತ್ತಿತ್ತೋ ಗೊತ್ತಿಲ್ಲ, ತಂದೆಯವರು ಮಗನನ್ನು ಡಾಕ್ಟರ್‌ನಾಗಿ ಅಥವಾ ಇಂಜಿನಿಯರ್‌ನಾಗಿ ಕಾಣುವ ಆಸೆಗೆ ತಣ್ಣೀರೆರಚಿ ಪಿ.ಯು.ಸಿ. ವಿಜ್ಞಾನ ತರಗತಿಯನ್ನು ಪೂರ್ತಿಗೊಳಿಸದೆ ಅರ್ಧಕ್ಕೆ ನಿಲ್ಲಿಸಿ, ತಮ್ಮ ತಂದೆಯವರಲ್ಲಿ ನಾನು ಅಭ್ಯಾಸ ಮಾಡುವುದಾದರೆ ಚಿತ್ರಕಲೆಯನ್ನೇ ಹೊರತು ಬೇರಾವ ಪದವಿ ಬೇಡ ಎಂದು ಹಠ ಹಿಡಿದರು. ಕೊನೆಗೂ ತಂದೆಯನ್ನು ಒಪ್ಪಿಸಲು ಸಮರ್ಥರಾಗಿ ತಮ್ಮ ಇಚ್ಛೆಯಂತೆ ಕಲೆಯ ಉನ್ನತ ವ್ಯಾಸಂಗಕ್ಕೆ ಮುಂಬೈಗೆ ತೆರಳಿದರು. ಬ್ರಿಟೀಷರು ಭಾರತಕ್ಕೆ ಬಂದು ನೆಲೆಯೂರಿ ಸುಮಾರು ಎರಡು ನೂರು ವರ್ಷಗಳ ಕಾಲ ಭಾರತವನ್ನು ತಮ್ಮ ಸ್ವಾಧೀನಕ್ಕೆ ಒಳಪಡಿಸಿಕೊಂಡ ಸಂದರ್ಭ ೧೮ನೇ ಶತಮಾನದಲ್ಲಿ ಕೇಂದ್ರೀಕೃತ ಆಡಳಿತ ವ್ಯವಸ್ಥೆ ಆಡಳಿತದ ಚುಕ್ಕಾಣಿ ಹಿಡಿದ ಕಾಲ ಕೊನೆಗೊಂಡಿತು. ಸಾಮಂತರು ಅಥವಾ ಸ್ಥಳೀಯ ಅಧಿಕಾರಿ ವರ್ಗದವರು ಅಂದಿನ ಸಾಮ್ರಾಜ್ಯಗಳಲ್ಲಿ ಸ್ಥಾಪನೆಯಾಗಿದ್ದ ಚಿತ್ರಕಲಾಶಾಲೆಗಳು ರಾಜಾಶ್ರಯವಿಲ್ಲದೇ ಮುಚ್ಚತೊಡಗಿದವು. ಇದರಿಂದಾಗಿ ಈ ಚಿತ್ರಕಲಾ ಶಾಲೆಗಳಿಂದ ಕಲಾವಿದರು ಸಣ್ಣಪುಟ್ಟ ಅರಸರ ಆಶ್ರಯವನ್ನು ಪಡೆದರು. ಇನ್ನು ಕೆಲವರು ಅದೀಗ ತಾನೆ ಅಧಿಕಾರಕ್ಕೆ ಬರತೊಡಗಿದ್ದ ಐರೋಪ್ಯ ಕಂಪನಿ ಅಧಿಕಾರಿಗಳ ಆಶ್ರಯವನ್ನು ಪಡೆಯತೊಡಗಿದರು. ಪಾಶ್ಚಾತ್ಯ ಕಲಾ ಸಂಸ್ಕೃತಿ ಭಾರತದಲ್ಲಿ

ಹರಡಿಕೊಂಡಿರುವ ಕಾರಣವೇ ಇದು. ಇದುವೇ ಕಂಪನಿ ಚಿತ್ರಕಲೆಗೆ ನಾಂದಿಯಾಯಿತು. ಅದುವರೆಗೂ ಕೇವಲ ಬಾಹ್ಯ ಪರಿಪಾಠಗಳೊಂದಿಗೆ ಆರಂಭಗೊಂಡಿದ್ದ ಕಂಪನಿ ಚಿತ್ರಕಲೆಯ ೧೭೭೦ ರಿಂದ ೧೮೮೦ರ ವರೆಗೆ ಅದೊಂದು ಶೈಲಿಯಾಗಿ ಬೆಳೆಯತೊಡಗಿತು.

ಈಸ್ಟ್ ಇಂಡಿಯಾ ಕಂಪನಿ ಕಾಲದಲ್ಲಿ ಈ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದು ದೇಶದ ವಿವಿಧ ಭಾಗಗಳಲ್ಲಿ ಆಶ್ರಯಿಸಿಕೊಂಡಿತು. ಇಸ್ಟ್ ಇಂಡಿಯಾ ಕಂಪನಿ ಅಧಿಕಾರ ವರ್ಗದವರು ಈ ಕಲಾವಿದರಿಂದ ತಮ್ಮ ವಯಕ್ತಿಕ ಚಿತ್ರಗಳನ್ನು ಚಿತ್ರಿಸಿಕೊಳ್ಳತೊಡಗಿದರು. ಈ ಚಿತ್ರಗಳಲ್ಲಿ ತಮಗೆ ಮೆಚ್ಚಗೆಯಾಗುವಂತಹ ಪ್ರಾಣಿ,ಪಕ್ಷಿ, ನಿಸರ್ಗಚಿತ್ರಣಗಳು, ಐತಿಹಾಸಿಕ ಸ್ಮಾರಕಗಳ ಚಿತ್ರ ಇತ್ಯಾದಿ ಚಿತ್ರಗಳನ್ನು ಈ ಕಲಾವಿದರಿಂದ ರಚಿಸಿಕೊಳ್ಳುತ್ತ ಬಂದರು.

ಅಂದು ಕಂಪನಿ ಅಧಿಕಾರಿಗಳ ಕೇಂದ್ರ ಸ್ಥಾನವಾದ ಕಲ್ಕತ್ತಾ, ಭಾರತದ ಕರಾವಳಿ ತೀರದ ಪ್ರದೇಶಗಳಾದ ವಿಶಾಖಪಟ್ಟಣ, ಮದ್ರಾಸ್, ಮಚಲಿಪಟ್ಟಣ, ಗೋವಾ, ಮುಂಬೈ, ಅಲ್ಲದೇ ತಂಜಾವೂರು, ಹೈದರಾಬಾದ್ ಮುಂತಾದ ಸ್ಥಳಗಳು ಕಂಪನಿ ಚಿತ್ರಕಲೆಯ ಕೇಂದ್ರಗಳಾಗಿದ್ದವು. ಇದೇ ವೇಳೆಯಲ್ಲಿ ದಕ್ಷಿಣ ಭಾರತದ ಸಾಂಪ್ರದಾಯಿಕ ಕಲಾವಿದರು ಕಂಪನಿ ಸರಕಾರದ ಭೂ ಸರ್ವೆ, ಐತಿಹಾಸಿಕ ಸ್ಮಾರಕಗಳ ಸರ್ವೆ ಮುಂತಾದ ಇಲಾಖೆಗಳಲ್ಲಿ ನಕ್ಷಾ ರಚನಾಕಾರರಾಗಿಯೂ ಸೇವೆಗೆ ಸೇರಿದರು. ಈ ಕಲಾವಿದರು ಐರೋಪ್ಯ ಕಲೆಯ ಹೊಸ ತಂತ್ರಗಳನ್ನು ಮತ್ತು ವಿವಿಧ ಬಗೆಯ ರಸಾಯನಿಕ ವರ್ಣಗಳನ್ನು ತಮ್ಮ ಕೃತಿಗಳಲ್ಲಿ ಬಳಸಿಕೊಂಡರು. ಕಂಪನಿ ಸರಕಾರದ ಅಧಿಕಾರಿ ವರ್ಗದ ಅಭಿರುಚಿ ಹಾಗೂ ಐರೋಪ್ಯ ಶೈಲಿಯ ಲಕ್ಷಣಗಳಿಂದ ಕೂಡಿದ ಕಲಾಶೈಲಿಯನ್ನು ನಮ್ಮ ಭಾರತೀಯ ಕಲಾವಿದರು ಮೈಗೂಡಿಸಿಕೊಂಡರು.

ಭಾರತೀಯ ಕಲಾವಿದರು ಐರೋಪ್ಯ ಶೈಲಿಯ ಚಿತ್ರಗಳನ್ನು ರಚಿಸಿಕೊಂಡು ಅಂತಹ ಚಿತ್ರಗಳಲ್ಲಿ ಐರೋಪ್ಯ ಮಾದರಿಯ ಉಡುಪುಗಳನ್ನು ತೊಟ್ಟಿರುವಂತೆಯೂ, ಹಿನ್ನೆಲೆಯಾಗಿ ಅಲಂಕಾರಿಕ ಪರದೆ, ಕುಳಿತಿರುವ ಸೋಫಾ ಮಾದರಿಯ ಆಸನ ಪಕ್ಕದಲ್ಲಿ ಸುಂದರವಾಗಿ ಮಾಡಲಾದ ಕಟ್ಟಿಗೆಯ ಟೇಬಲ್ ಅದರ ಮೇಲ್ಗಡೆ ಹೂ ಗುಚ್ಚಗಳನ್ನು ಇಟ್ಟು ಚಿತ್ರಿಸುವ ಶೈಲಿಯನ್ನು ಕಾಣಬಹುದಾಗಿದೆ.

೧೯ನೇ ಶತಮಾನದ ಪ್ರಾರಂಭದ ಕೈಗಾರಿಕೆ ಕ್ರಾಂತಿಯ ಪರಿಣಾಮವಾಗಿ ಅನೇಕ ಬದಲಾವಣೆಗಳು ಉಂಟಾದವು. ಇದರಿಂದಾಗಿ ಬ್ರಿಟೀಷ ಪದ್ಧತಿಯ ಕಲಾಶಿಕ್ಷಣ ಭಾರತಕ್ಕೆಪ್ರವೇಶಿಸಿತು. ತತ್ಪರಿಣಾಮವಾಗಿ

ಶಿಸ್ತುಬದ್ಧ ಕಲಾಶಿಕ್ಷಣವನ್ನು ನೀಡಿವ ಉದ್ದೇಶದಿಂದ ಬ್ರಿಟೀಷರು ಅಂದು ಕಲ್ಕತ್ತಾ, ಮದ್ರಾಸ್, ಮುಂಬೈ, ಲಾಹೋರಗಳಲ್ಲಿ ಬ್ರಿಟೀಷ ಪದ್ಧತಿಯ ಕಲಾ ಶಿಕ್ಷಣ ನೀಡುವ ಕಲಾಶಾಲೆಗಳು ಹುಟ್ಟಿಕೊಂಡವು.

ಭಾರತದಲ್ಲಿ ಕಲಾಶಾಲೆಗಳ ಹುಟ್ಟು :

ಪ್ರಾಚೀನ ಭಾರತದಲ್ಲಿ ಚಿತ್ರಕಲೆ, ಶಿಲ್ಪಕಲೆ, ಸಂಗೀತ ಮುಂತಾದ ಕಲಾಪ್ರಕಾರಗಳು ಗುರುಕುಲ ಪದ್ಧತಿಯಲ್ಲಿ ಕಲಿಸಲ್ಪಡುತ್ತಿದ್ದವು. ನಂತರದ ದಿನಗಳಲ್ಲಿ ಗುರುವನ್ನು ಆಶ್ರಯಿಸಿ ಮನಃ ಪರಿವರ್ತನೆಯ ಮೂಲಕ ಕಲಾಶಿಕ್ಷಣವನ್ನು ಆಸಕ್ತರು ಪಡೆದುಕೊಳ್ಳುತ್ತಿದ್ದರು. ಆದರೆ ಬ್ರಿಟೀಷ ಆಗಮನದಿಂದ ಭಾರತದ ಎಲ್ಲ ರಂಗಗಳಲ್ಲಿ ಬದಲಾವಣೆಗಳು ಉಂಟಾದಂತೆ ಶಿಕ್ಷಣ ಕ್ಷೇತ್ರದಲ್ಲಿಯೂ ಕ್ರಾಂತಿಕಾರಕ ಬದಲಾವಣೆಗಳು ಗೋಚರಿಸಿದವು. ಇದು ಕಲಾಶಿಕ್ಷಣಕ್ಕೂ ಪ್ರವೇಶಿಸಿತು. ಬ್ರಿಟೀಷರು ಭಾರತಕ್ಕೆ ಬರುವುದಕ್ಕೂ ಮೊದಲು ನಮ್ಮಲ್ಲಿ ಚಿತ್ರಕಲೆಯನ್ನು ಕಲಿಯುವುದಕ್ಕೆ ವ್ಯವಸ್ಥಿತ ಶಾಲೆಗಳಿರಲಿಲ್ಲ. ಅಂದು ಚಿತ್ರಕಲೆಯನ್ನು ಕಲಿಯುವವರು ಸಾಮಾಜಿಕವಾಗಿ ಕೀಳರಿಮೆ ಎಂಬುದಾಗಿ ಭಾವಿಸುತ್ತಿದ್ದ ಸಂದರ್ಭವೊಂದಿತ್ತು. ಅದುವರೆಗೂ ಕೇವಲ ಅರಮನೆ, ಮಠ–ಮಂದಿರಗಳಿಗೆ ಸೀಮಿತವಾಗಿದ್ದ ಚಿತ್ರಕಲೆಯು ಬ್ರಿಟೀಷರ ಆಗಮನದಿಂದ ಸಾರ್ವತ್ರಿಕವಾಯಿತೆಂದೇ ಹೇಳಬಹುದು.

ಭಾರತದಲ್ಲಿ ಬ್ರಿಟೀಷ ಆರಂಭಿಸಿದ ಮೊಟ್ಟ ಮೊದಲ ಕಲಾಶಾಲೆಯು ೧೮೫೪ರಲ್ಲಿ ಕಲ್ಕತ್ತಾದಲ್ಲಿ ಅದೇ ವರ್ಷ ಮದ್ರಾಸಿನಲ್ಲಿಯೂ ಕಲಾಶಾಲೆಯನ್ನು ಪ್ರಾರಂಭಿಸಿದರು. ಆನಂತರದಲ್ಲಿ ೧೮೫೭ರಲ್ಲಿ ಮುಂಬೈನ ಜೆ.ಜೆ.ಕಲಾಶಾಲೆ ಹಾಗೂ ೧೮೭೮ರಲ್ಲಿ ಲಾಹೋರದಲ್ಲಿ ಮಾಯೋ ಕಲಾಶಾಲೆಗಳು ಬ್ರಿಟೀಷರಿಂದ ಪ್ರಾರಂಭವಾದವು.

ಕಲಾಶಾಲೆಗಳ ಹುಟ್ಟಿಗೆ ಕಾರಣಗಳು :

೧೮೫೪ರಲ್ಲಿ ಕಲ್ಕತ್ತಾದಲ್ಲಿ ಪ್ರಾರಂಭಿಸಲ್ಪಟ್ಟ ಕಲಾಶಾಲೆಯು ಪ್ರತ್ಯೇಕ ಕಟ್ಟಡವಿಲ್ಲದೇ ಕಲ್ಕತ್ತಾದ ಶ್ರೀಮಂತ ವ್ಯಕ್ತಿ ರಾಜಾ ಪ್ರತಾಪಸಿಂಗ್ ಎನ್ನುವವರ ಮನೆಯಲ್ಲಿ ತನ್ನ ಕಲಾ ಚಟುವಟಿಕೆಗಳನ್ನು ಆರಂಭಿಸಲಾಯಿತು. ಕಲ್ಕತ್ತಾ ಕಲಾಶಾಲೆಯಲ್ಲಿ ಮೊದಲಿಗೆ ಎಲಿಮೇಂಟರಿ ಡ್ರಾಯಿಂಗ್ ಮತ್ತು ಪೇಂಟಿಂಗ್ ಅಲ್ಲದೇ ಮಾಡೆಲಿಂಗ್ ವಿಭಾಗಗಳಲ್ಲಿ ಒಂದು ವರ್ಷದ ತರಬೇತಿ ನೀಡತೊಡಗಿದರು. ಇಲ್ಲಿ ಪ್ರಮುಖವಾಗಿ ಹೇಳಲ್ಪಡುವ ವಿಷಯವೆಂದರೆ, ಬ್ರಿಟೀಷರು ತಾವು ಕಲಾಶಾಲೆಗಳನ್ನು ಪ್ರಾರಂಭ ಮಾಡಿದ ಉದ್ದೇಶವೇ ಕೈಗಾರಿಕೆ ಮತ್ತು ವಾಣಿಜ್ಯ ಹಿನ್ನೆಲೆಯಲ್ಲಿ ಅಂದು ತಾವು ಪ್ರಾರಂಭಿಸಲ್ಪಟ್ಟ

ಕೈಗಾರಿಕೆಗಳಲ್ಲಿ ಅಲ್ಲಿನ ಯಂತ್ರೋಪಕರಣಗಳ ಬಿಡಿ ಭಾಗಗಳ ತಯಾರಿಕೆ ಡ್ರಾಯಿಂಗ ಅವಶ್ಯಕತೆ ಇರುವ ಕಾರಣದಿಂದ ಈ ಯಂತ್ರೋಪಕರಣಗಳ ಬಿಡಿ ಭಾಗಗಳ ಡ್ರಾಯಿಂಗ್ ರಚಿಸಲು ಕಲಾವಿದರು ಅವರಿಗೆ ಅವಶ್ಯಕವಾಗಿ ಬೇಕಾಗಿದ್ದರು. ವ್ಯವಸ್ಥಿತ ಚಿತ್ರಕಲಾ ಶಿಕ್ಷಣ ನೀಡುವ ಸಂಸ್ಥೆಗಳಿರದೇ ಇರುವುದರಿಂದ ಮತ್ತು ತಮಗೆ ಈ ರೀತಿಯ ಕಲಾವಿದರ ಅವಶ್ಯಕತೆ ಇರುವ ಕಾರಣದಿಂದ ಅವರು ಕಲಾಶಾಲೆಗಳನ್ನು ಹುಟ್ಟುಹಾಕಿ ಕಲಾಶಿಕ್ಷಣವನ್ನು ನೀಸತೊಡಗಿದರು.

ಅದರಂತೆಯೇ ಕಲ್ಕತ್ತಾದಲ್ಲಿ ಅಂದು ಪ್ರಾರಂಭಿಸಲ್ಪಟ್ಟ ವಿಶೇಷವಾಗಿ ಕೈಗಾರಿಕೆಯ ಹಿನ್ನೆಲೆಯಲ್ಲಿ ಯಂತ್ರೋಪಕರಣಗಳ ವಿಷಯಗಳನ್ನು ಬೋದಿಸುತ್ತಿದ್ದರು. ಅದರೊಂದಿಗೆ ಯಥಾದರ್ಶನ, ನಿಸರ್ಗಚಿತ್ರಣ, ಪೂರ್ಣಭಾವಚಿತ್ರಣ ಇವುಗಳ ಜೊತೆಗೆ ತೈಲವರ್ಣದ ಬಳಕೆಯನ್ನು ಕುರಿತು ಹೇಳಿಕೊಡುತ್ತಿದ್ದರು. ವಿಶೇಷವಾಗಿ ಕಮ್ಮಾರ, ಬಡಿಗ, ಕುಂಬಾರ, ಅಕ್ಕಸಾಲಿಗ, ಪಟುವಾಗಳಂತಹ ಜನಾಂಗದವರೇ ಇಲ್ಲಿ ಚಿತ್ರಕಲೆಯನ್ನು ಕಲಿಯಲು ಬರುತ್ತಿದ್ದುದ್ದನ್ನು ಗಮನಿಸಬಹುದಾಗಿದೆ. ಮುಖ್ಯವಾಗಿ ಬ್ರಿಟೀಷರು ಈ ಕಲಾಶಾಲೆಗಳನ್ನು ಪ್ರಾರಂಭಿಸಿದರು ಉದ್ದೇಶ ತಮ್ಮ ಕೈಗಾರಿಕೆ ಹಾಗೂ ವಾಣಿಜ್ಯದ ದೃಷ್ಟಿಕೋನಗಳಿಂದ ಎನ್ನುವುದು ಸರ್ವವಿಧಿತವಾದುದು. ಕೈಗಾರಿಕೆಗೆ ಸಂಬಂಧಿಸಿದಂತೆ ವಿವಿಧ ಬಗೆಯ ಯಂತ್ರೋಪಕರಣಗಳಿಗೆ ಸಂಬಂಧಿಸಿದ ಬಿಡಿ ಭಾಗಗಳ ಮಾದರಿಗಳನ್ನು ಇಲ್ಲಿ ಚಿತ್ರಿಸಲು ಕಲಿಸುತ್ತಿದ್ದರು. ಹಾಗೇಯೇ ಇಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಮುಂದೆ ವಿವಿಧ ಕೈಗಾರಿಕಾ ಕ್ಷೇತ್ರದಲ್ಲಿ ಪರಿವೀಕ್ಷಣೆಗಾರರನ್ನಾಗಿ ನೇಮಿಸಿಕೊಳ್ಳುತ್ತಿದ್ದರು. ಇದೇ ರೀತಿಯ ಪಠ್ಯಕ್ರಮ, ಅಧ್ಯಯನದ ಶಿಸ್ತನ್ನು ಮದ್ರಾಸ್ ಕಲಾಶಾಲೆಯಲ್ಲಿ ಬೋಧಿಸಲಾಗುತ್ತಿತ್ತು.

ಕಲಾಶಿಕ್ಷಣ ಪದ್ಧತಿ :

ಕಲ್ಕತ್ತಾ ಕಲಾಶಾಲೆಯಲ್ಲಿ ೧೮೬೪ರಲ್ಲಿ ಎಚ್.ಎಚ್.ಲೋಕೆ ಅವರು ಪ್ರಾಚಾರ್ಯರಾಗಿ ಬಂದಮೇಲೆ ಈ ಕಲಾಶಾಲೆಯ ಪಠ್ಯ ವಿಷಯಗಳಲ್ಲಿ ಅನೇಕ ಬದಲಾವಣೆಗಳನ್ನು ತಂದರು. ಈ ಹಿಂದೆ ಇವರು ಇಂಗ್ಲೆಂಡಿನ ಕಿಂಗ್‌ಸ್ಟನ್‌ನಲ್ಲಿರುವ ಕಲಾಶಾಲೆಯಲ್ಲಿ ಸೇವೆ ಸಲ್ಲಿಸಿ ಅಪಾರ ಅನುಭವವನ್ನು ಹೊಂದಿದವರಾರಿದ್ದರು ಈ ಹಿಂದೆ ಇದ್ದ ಒಂದು ವರ್ಷದ ಎಲಿಮೆಂಟರಿ ತರಬೇತಿಯನ್ನು ಎರಡು ವರ್ಷಕ್ಕೆ ನಿಗದಿಗೊಳಿಸಿದರು. ಅಲ್ಲದೇ ಡ್ರಾಯಿಂಗ್, ಪೇಂಟಿಂಗ್ ಮತ್ತು ಮಾಡೆಲಿಂಗ್ ವಿಷಯಗಳ ಜೊತೆಗೆ ಗ್ರಾಫಿಕ್ ಮಾಧ್ಯಮದ ಲಿಥೋಗ್ರಾಫ್ ಮತ್ತು ಉಡ್‌ಕಟಿಂಗ್‌ನ ವಿಷಯಗಳ ಬೊಧನೆಗೆ ಅವಕಾಶ ಮಾಡಿಕೊಟ್ಟರು.

೧೯ನೇ ಶತಮಾನದ ಕೊನೆಯ ಹೊತ್ತಿಗೆ ಭಾರತದಲ್ಲಿದ್ದ ಪ್ರಮುಖ ನಾಲ್ಕು ಕಲಾಶಾಲೆಗಳು ಸಂದರ್ಭಕ್ಕನುಸಾರವಾಗಿ ತಮ್ಮ ಶಿಕ್ಷಣ ಕ್ರಮದಲ್ಲಿ ಬದಲಾವಣೆಯನ್ನು ಮಾಡಿಕೊಂಡವು. ಈ ಅವಧಿಯಲ್ಲಿ ಮದ್ರಾಸ್ ಮತ್ತು ಲಾಹೋರ್ ಕಲಾಶಾಲೆಗಳು ಈ ಹಿಂದೆಯೇ ಪ್ರಚಲಿತದಲ್ಲಿದ್ದ ಕೈಗಾರಿಕಾ ಹಿನ್ನೆಲೆಯ ಶಿಕ್ಷಣ ಪದ್ಧತಿಯನ್ನೇ ಇನ್ನಷ್ಟು ಸುದಾರಿಸಿಕೊಂಡವು. ಅಲ್ಲದೇ ಕಲೆಗೆ ಸಂಬಂಧಿಸಿದಂತೆ ಉದ್ಯೋಗವನ್ನು ಸೃಷ್ಟಿಸುವಲ್ಲಿ ಅನ್ವಯ ಕಲೆ ಅಥವಾ ವಾಣಿಜ್ಯ ಕಲೆಗಳ ಅಧ್ಯಯನದ ಕಡೆಗೆ ಹೆಚ್ಚಿಗೆ ಗಮನಹರಿಸಿದವು. ಆದರೆ ಮುಂಬಯಿಯ ಜೆ.ಜೆ.ಕಲಾಶಾಲೆ ಮತ್ತು ಕಲ್ಕತ್ತಾ ಕಲಾಶಾಲೆಗಳು ಮೊದಲಿಗಿಂತ ಭಿನ್ನವಾದ ನಿಲುವಿಗಳನ್ನು ತಾಳಿ ಲಲಿತಕಲೆಗಳಿಗೆ ವಿಶೇಷ ಪ್ರಧಾನ್ಯತೆಯನ್ನು ನೀಡಕೊಡಗಿದವು. ಈ ಲಲಿತಕಲೆಗಳ ಅಂಶಗಳನ್ನು ರೂಢಿಸಿಕೊಂಡು ಕೃತಿ ರಚನೆಯಲ್ಲಿ ತೊಡಗಿದ ಮುಂಬಯಿ ಮತ್ತು ಕಲ್ಕತ್ತಾ ಕಲಾಶಾಲೆಗಳ ವಿದ್ಯಾರ್ಥಿಗಳು ಒಂದು ವಿನೂತನವಾದ ಶೈಲಿಯನ್ನು (Angloindian) ರೂಢಿಸಿಕೊಂಡರು. ಈ ವಿನೂತನ ಕಲಾಶೈಲಿಯನ್ನು ಗುರುತಿಸಿ ಅವುಗಳ ಪ್ರದರ್ಶನಕ್ಕೆಂದೇ ಕಲ್ಕತ್ತಾ ಕಲಾಶಾಲೆಗಳಲ್ಲಿ ಪ್ರತ್ಯೇಕವಾದ ಕಲಾಗ್ಯಾಲರಿಯನ್ನು ಆರಂಭಿಸಲಾಯಿತು.

ಅಂದಿನ ಬ್ರಿಟೀಷ ವೈಸ್‌ರಾಯ್ ಅವರ ಸಹಾಯದಿಂದ ಈ ಗ್ಯಾಲರಿಯು ಸ್ಥಾಪಿಸಲ್ಪಟ್ಟಿತು. ಈ ಗ್ಯಾಲರಿಯಲ್ಲಿ ೧೮೭೬ರಲ್ಲಿ ಯುರೋಪಿನ ಉತ್ತಮ ಕಲಾವಿದರ ಕಲಾಕೃತಿಗಳನ್ನು ಆಮಂತ್ರಿಸಿ ಅವುಗಳ ಪ್ರದರ್ಶನವನ್ನು ಏರ್ಪಡಿಸಲು ಇವರು ಸಹಾಯ ಮಾಡಿದರು. ಅಲ್ಲದೇ ಕಲ್ಕತ್ತಾ ಕಲಾಶಾಲೆಯಲ್ಲಿ ವಿದ್ಯಾರ್ಜನೆ ಮಾಡುತಿದ್ದ ವಿದ್ಯಾರ್ಥಿಗಳಿಗೆ ಈ ಯುರೋಪಿಯನ್ ಕಲಾವಿದರ ಕಲಾಕೃತಿಗಳ ನಕಲು ಮಾಡಲು ಸೂಚಿಸಿ ಅವಿಗಳಲ್ಲಿನ ಕಲಾ ತಂತ್ರ ಮತ್ತು ಶೈಲಿಗಳನ್ನು ವಿದ್ಯಾರ್ಥಿಗಳಿಗೆ ಕರಗತಮಾಡಿಕೊಡಲಾಯಿತು.

ಮುಂದೆ ಬ್ರಿಟೀಷ ಕಲಾವಿದರ ಕಲಾಕೃತಿಗಳೊಂದಿಗೆ ಇಟಲಿಯ ಪ್ರಮುಖ ಕಲಾವಿದರ ಕಲಾಕೃತಿಗಳು ಅದರಂತೆ ಸಿಝಾನ್, ರೂಬೆನ್ಸ್ ಮೊದಲಾದ ಶ್ರೇಷ್ಠ ಕಲಾವಿದರ ಕಲಾಕೃತಿಗಳನ್ನು ಈ ಕಲಾಗ್ಯಾಲರಿಯಲ್ಲಿ ಸಂಗ್ರಹಿಸಿಡಲಾಯಿತು. ಇಂತಹ ಒಂದು ಕಲಾಬೆಳವಣಿಗೆಯ ನಡುವೆಯೂ ೧೮೮೬-೮೭ರ ಸುಮಾರಿಗೆ ಮತ್ತೆ ಕೈಗಾರಿಕಾ ಹಿನ್ನೆಲೆಯ ಕಲಿಕೆಯೆಡೆಗೆ ಗಮನ ಹರಿಸಲಾಯಿತು. ಈ ಹಿನ್ನೆಲೆಯಲ್ಲಿ ಈ ಕಲಾಶಾಲೆಗಳ ಪಠ್ಯವಿಷಯಗಳಲ್ಲಿ ವಸ್ತು ಅಲಂಕರಣ, ಮಣ್ಣಿನಿಂದ ಕೃತಿಗಳನ್ನು ರೂಪಿಸುವುದು, ಮರಗೆತ್ತನೆ ಮುಂತಾದ ಕಲಾಪ್ರಕಾರಗಳನ್ನು ಇಲ್ಲಿನ ವಿದ್ಯಾರ್ಥಿಗಳಿಗೆ ತರಬೇತಿಯನ್ನು

ನೀಡಲು ಆರಂಭಿಸಿದರು, ೧೮೮೬-೮೭ನೇ ವರ್ಷವೇ ಈ ಮೊದಲು ಔಬಜಾರ ಪ್ರದೇಶದಲ್ಲಿದ್ದಂತಹ ಕಲ್ಕತ್ತಾ ಕಲಾಶಾಲೆ ಮತ್ತು ಅದರ ಅಂಗವಾಗಿರುವಂತಹ ಕಲಾಗ್ಯಾಲರಿಯನ್ನು ಇಂಡಿಯನ್ ಮ್ಯೂಜಿಯಂ ಇದ್ದ ಚೌರಂಗಿ ಎಂಬ ಸ್ಥಳದಲ್ಲಿ ಸ್ಥಳಾಂತರಿಸಲಾಯಿತು. ಕಲಾಶಾಲೆ ಮತ್ತು ಕಲಾ ಗ್ಯಾಲರಿಗಳು ಒಂದೆಡೆಯೇ ಆದಂತಾಗಿ ಕಲ್ಕತ್ತಾ ಪ್ರದೇಶದ ಕಲೆಯು ವೃದ್ಧಿಗೊಳ್ಳಲು ಅನುಕೂಲವಾಯಿತು.

೧೮೮೭-೮೮ರ ಸಂದರ್ಭದಲ್ಲಿ ಓ ಗಿಲಾರ್ಡ್ (O Gilard) ಎನ್ನುವವರು ಈ ಕಲಾಶಾಲೆಗೆ ಉಪ ಪ್ರಾಚಾರ್ಯರಾಗಿ ಬಂದ ನಂತರ ಈ ಮೊದಲು ಬೋಧಿಸುತ್ತಿದ್ದ ವಿಷಯಗಳೊಂದಿಗೆ ಭಿತ್ತಿಚಿತ್ರ ರಚನೆಯ ಪ್ರತ್ಯೇಕ ತರಗತಿಗಳನ್ನು ಆರಂಭೀಸಿದರು. ಇದರಲ್ಲಿ ಪ್ರಾಚೀನ ಭಾರತೀಯ ಭಿತ್ತಿಚಿತ್ರ ರಚಲೆಯ ಕ್ರಮಗಳನ್ನು ಮುಖ್ಯವಾಗಿ ಹೇಳಿಕೊಡಲಾಗುತ್ತಿತ್ತು. ಓ ಗಿಲಾರ್ಡ್ ಮೂಲತಃ ಇಟಲಿಯ ಕಲಾವಿದರಾಗಿದ್ದು, ನಕ್ಷಾಚಿತ್ರಣದ ಬಗ್ಗೆ ವಶೇಷ ಆಸಕ್ತಿಯುಳವರಾಗಿದ್ದರು. ಇವರ ಕಾಲಕ್ಕೆ ರಾಜೇಂದ್ರಲಾಲ್ ಮಿತ್ತಾ ಎನ್ನುವವರ ಮೇಲ್ವಿಚಾರಣೆಯಲ್ಲಿ ಭುವನೇಶ್ವರ ದೇವಾಲಯಗಳಲ್ಲಿ ಅಲಂಕಾರಿಕ ನಕ್ಷಾವಿನ್ಯಾಸಗಳ ಮಾದರಿಗಳನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಮಾಡಿಸಲಾಗುತ್ತಿತ್ತು.ಅದೇ ರೀತಿ ಜಾನ್ ಗ್ರಿಫ್ಫಿಥ್(John griffith)ರವರು ಈ ಡೆಕೋರೇಟಿವ್ ಆರ್ಟ್‌ನ ಬಗ್ಗೆ ವಿಶೇಷ ಆಸಕ್ತಿಯುಳ್ಳವರಾಗಿದ್ದರಲ್ಲದೇ ಈ ವಿಷಯದ ಕುರಿತು ಇವರು ಜೆ.ಜೆ.ಕಲಾಶಾಲೆಯಲ್ಲಿ ಬೋಧನೆಯನ್ನುಮಾಡುತ್ತಿದ್ದರು.

ಅದೇ ರೀತಿ ಮದ್ರಾಸ್ ಕಲಾಶಾಲೆಯಲ್ಲಿ ೧೮೯೭-೯೮ರ ಸುಮಾರಿಗೆ ಅಲಂಕಾರಿಕ ನಕ್ಷಾಚಿತ್ರಣ ವಿಷಯುವನ್ನು ಕಡ್ಡಾಯುಗೊಳಿದಲಾಯಿತು. ಹೀಗೆ ಬ್ರಿಟೀಷರು ಭಾರತದಲ್ಲಿ ತಮುಗೆ ಅನುಕೂಲತೆಯನ್ನುಬಯಸಿ ಪ್ರಾರಂಭಿಸಿದ ಕಲಾಶಾಲೆಗಳು ಇಂದು ವಿಶ್ವವಿಖ್ಯಾತಿ ಗಳಿಸಿದ್ದಲ್ಲದೇ ಅನೇಕ ಶ್ರೇಷ್ಠ ಕಲಾವಿದರನ್ನು ಹುಟ್ಟುಹಾಕಿ ಭಾರತದ ಕೀರ್ತಿಯನ್ನು ಹೆಚ್ಚಿಸಿದವರೆಂದರೆ ತಪ್ಪಾಗಲಾರದು. ಕೇವಲ ತಮ್ಮ ಅನುಕೂಲತೆಗಳಿಗೆ ಸೀಮಿತವಾಗಿ ಅಂದು ಕಲಾಧಾಲೆಗಳನ್ನು ಹುಟ್ಟುಹಾಕಿದರೂ ಅದರ ಪ್ರಯೋಜನವು ನಮ್ಮ ಭಾರತ ಕಲಾಕ್ಷೇತ್ರಕ್ಕೆ ಬ್ರಿಟೀಷರ ಕೊಡುಗೆ ಅತಿ ದೊಡ್ಡದು ಎಂದೇ ಹೇಳಬಹುದು.

ಚಿತ್ರಕಲಾ ಶಿಕ್ಷಣ :

ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಲಂಡನ್ನಿನ ರಾಯಲ್ ಅಕಾಡೆಮಿ ಆಫ್ ಆರ್ಟ್ಸ್ ಸಂಸ್ಥೆಯ ಮಾದರಿಯಲ್ಲಿ ಬ್ರಿಟಿಷರು ಸ್ಥಾಪನೆ ಮಾಡಿದ ಭಾರತದ ಏಕೈಕ ಕಲಾಶಾಲೆ ಎಂದರೆ ಮುಂಬೈಯ 'ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ಆ್ಯಂಡ್ ಕ್ರಾಫ್ಟ್' ಈ ದಿಸೆಯಲ್ಲಿ ಕಲಾವಿದನಾಗುವ ಅಪೇಕ್ಷೆಯುಳ್ಳ ಪ್ರತಿಯೊಬ್ಬನಿಗೂ ಸರ್ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್ ಮಹತ್ತರವಾದ ಆಕರ್ಷಣೆಯ ಕೇಂದ್ರ ಸ್ಥಾನವಾಗಿತ್ತು. ಈ ಕಲಾಶಾಲೆಯ ಸ್ಥಾಪನೆಗೆ ಮೊದಲೇ ಭಾರತೀಯ ಕಲಾ ಸಂಪ್ರದಾಯ ನಿಚ್ಛಾಯ (ಅದೋಗತಿ) ಸ್ಥಿತಿಗೆ ತಲುಪಿತ್ತು. ಈಸ್ಟ್ ಇಂಡಿಯಾ ಕಂಪನಿ ಬರುವುದಕ್ಕೆ ಮೊದಲು ನಮ್ಮಲ್ಲಿ ರೂಢಿಯಲ್ಲಿದ್ದ ಜೈನ, ರಜಪೂತ್ ಮತ್ತು ಮೊಘಲ್ ಕಲೆಯಲ್ಲಿ ತನ್ನ ಪರಮೋಚ್ಚ ಸಿದ್ಧಿಯನ್ನು ಪಡೆದಿದ್ದ ಭಾರತೀಯ ಕಲಾಪರಂಪರೆ ಕುಸಿದು ಹೋಗಿತ್ತು. ಬ್ರಿಟಿಷರ ಆಳ್ವಿಕೆಯನ್ನೊಪ್ಪಿಕೊಂಡ ದೇಸೀಯ ಅರಸರಿಗೆ ಕುಸರಿಕೆಲಸ, ಚಿತ್ತಾರ, ಕಸುಬುಗಾರಿಕೆಗಳೇ ಕಲೆಯ ಸಿದ್ಧಿಕಾರ್ಯಗಳೆಂದೆನಿಸುವ ವಸ್ತುಗಳೇ ಪ್ರಿಯವಾದವು. ಮನೆಯಂಗಳದಲ್ಲಿ ಹಾಕುವ ರಂಗೋಲಿಯೇ ಕಲೆ ಎಂದು ಮೆರೆಯುವ ಕಾಲ ಬಂದಿತು. ಎರಡು ರೂಪಾಯಿಗು ಸಿಗುವ ಮುದ್ರಿತ ಚಿತ್ರಗಳಲ್ಲಿಯೇ ಭಾರತೀಯ ಚಿತ್ರರಸಿಕರು ಲೋಲುಪರಾದರು. ಇಂತಹ ಅವನತ ಸನ್ನಿವೇಶದಲ್ಲಿ ಹುಟ್ಟಿದ ಜೆ.ಜೆ.ಕಲಾಶಾಲೆ ನೀಡುವ ಶಿಕ್ಷಣವಾದರೂ ವಾಸ್ತವ ಚಿತ್ರಕಲೆಯ ಮಾರ್ಗದಲ್ಲೇ ಇತ್ತು. ಬ್ರಿಟಿಷರು ಸ್ಥಾಪಿಸಿದರೂ ಮುಂಬಯಿಯ ಪಾರ್ಸಿಗಳು ಶಾಲೆಗೆ ಸಾಕಷ್ಟು ರೀತಿಯಲ್ಲಿ ದಾನ (ಹಣಕಾಸಿನ ನೆರವು) ನೀಡಿದ್ದರು. ಐತಿಹಾಸಿಕ ಹಿನ್ನೆಲೆಯುಳ್ಳ ಚಿತ್ರಗಳು, ಸ್ಥಿರಚಿತ್ರಗಳು ಇವೆಲ್ಲವನ್ನು ಅಭ್ಯಸಿಸಿ ಕಲಿತುಕೊಂಡರೆ ಯಥೇಷ್ಟವೆಂಬ ಭಾವನೆ ಅಂದಿನ ವಿದ್ಯಾರ್ಥಿಗಳ ಹೇಳಿಕೆಯಾಗಿತ್ತು. ಇದನ್ನೆಲ್ಲವನ್ನು ಅರಿತ ಶ್ರೀಯುತ ಚಂದ್ರಶೇಖರಗೌಡರು ಮಗ ಶಂಕರನೊಂದಿಗೆ ಕಲೆ ಅಧ್ಯಯನ ಕುರಿತು ಚರ್ಚಿಸಿ ಕೊನೆಗೂ ಮಗನ ಇಚ್ಛೆಯಂತೆ ೧೯೬೮ರಲ್ಲಿ ಮುಂಬಯಿಯ 'ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್'ಗೆ ಹೋಗಲು ಧಾರವಾಡ ಜಿಲ್ಲೆಯ ಒಬ್ಬ ಹಿರಿಯ ಕಲಾವಿದರಲ್ಲಿ ವಿಚಾರಿಸಿದರು. ಆದರೆ ಆ ಕಲಾವಿದರು ತಮಗೇನೂ ಗೊತ್ತಿಲ್ಲವೆಂದು ಅವರು ತಮ್ಮ ಅಸಹಾಯಕತೆ ತೋರಿಸುತ್ತಾರೆ. ಮುಂಬಯಿಗೆ ಶಂಕರರು ಹೋದಾಗ ಪ್ರವೇಶ ಬಯಸಿ ಬಂದಿದ್ದ ಅಭ್ಯರ್ಥಿಗಳಲ್ಲಿ ಆ ಕಲಾವಿದರ ಮಗನೂ ಒಬ್ಬನಾಗಿದ್ದ. ಆದರೆ ಅವನಿಗೆ ಪ್ರವೇಶ ಸಿಗದೆ ವಂಚಿತನಾಗಿ ಶಂಕರ ಪಾಟೀಲರು ಜೆ.ಜೆ. ಕಲಾಶಾಲೆಯಲ್ಲಿ ಪ್ರವೇಶತ್ತಾರೆ. ಇದು ಹಿರಿಯ ಕಲಾವಿದನಿಗೆ ತುಂಬಾ ಮುಖಭಂಗವಾಗಿತ್ತಂತೆ

ಪ್ರವೇಶ ಪಡೆಯಲು ಶಂಕರ ಪಾಟೀಲರಿಗೆ ಎಲ್ಲ ಅರ್ಹತೆಗಳು ಇದ್ದವಾದರೂ, ಅವರಲ್ಲಿ ಮುಖ್ಯವಾದ ಒಂದು ಅರ್ಹತೆ ಇರಲಿಲ್ಲ. ಅದು ಅವರು ಮಹಾರಾಷ್ಟ್ರದವರಾಗಿರಲಿಲ್ಲ. ಅರ್ಹತೆಯ ಹಾದಿಯಲ್ಲಿ ಅವರ ಸ್ಥಾನ ಮೇಲೆ ಇದ್ದರೂ ಅವರಿಗೆ ಪ್ರವೇಶವನ್ನು ನಿರಾಕರಿಸಲಾಗಿದ್ದಿತು. ಆಗ ಶಂಕರ ಪಾಟೀಲರ ಪರವಾಗಿ ಶಂಕರರ ಕಲೆ–ಕಲಾಸಕ್ತಿ, ಕಲೆಯ ಆದರ್ಶವನ್ನು ತಿಳಿದ ಅಂದಿನ ಇಂಡಿಯನ್ ಎಕ್ಸಪ್ರೆಸ್ ಪತ್ರಿಕೆಯ ಪ್ರೆಸ್ಸಿನ ರಾಮಕೃಷ್ಣ ಎಂಬ ಪತ್ರಿಕೋದ್ಯಮಿ ಪ್ರವೇಶ ನಿರಾಕರಣೆಯ ಪ್ರಶ್ನೆಯನ್ನು ಗಂಭೀರವಾಗಿ ತೆಗೆದುಕೊಂಡು ಮಂತ್ರಿಗಳವರೆಗೆ ಹೋಗಿ ವಿಷಯ ಕುರಿತು ಚರ್ಚಿಸಿ ನ್ಯಾಯ ದೊರಕಿಸಿಕೊಡುವಂತೆ ಕೇಳಿಕೊಂಡು ಹೊರಾಡುತ್ತಾರೆ. ನ್ಯಾಯಕ್ಕೆ ಸಿಕ್ಕ ಪ್ರತಿಫಲ ಎಂಬಂತೆ ಶಂಕರ ಪಾಟೀಲರಿಗೆ ಜೆ.ಜೆ.ಕಲಾಶಾಲೆಯಲ್ಲಿ ಪ್ರವೇಶ ದೊರೆಯುತ್ತದೆ. ಜೆ.ಜೆ. ಕಲಾಶಾಲೆಯಲ್ಲಿ ಅಧ್ಯಯನ ಕೈಗೊಂಡ ಪ್ರಾರಂಭದಲ್ಲಿ ಶಿಕ್ಷಕರು ಭಾಷೆಯ ಆಧಾರದ ಮೇಲೆ ವಿದ್ಯಾರ್ಥಿಗಳಲ್ಲಿ ತಾರತಮ್ಯ ಮಾಡುವುದನ್ನು ಕಂಡು ತುಂಬಾ ವಿಷಾದಗೊಂಡರು. ಪಾಟೀಲರು ಕನ್ನಡಿಗರೆಂದು ನಿರುತ್ಸಾಹಗೊಳಿಸಿದ ಶಿಕ್ಷಕರೂ ಅಲ್ಲಿ ಇದ್ದರು. ಆದರೆ ಒಂದೇ ನಾಣ್ಯದ ಇನ್ನೊಂದು ಮುಖ ಎಂಬಂತೆ ಅಲ್ಲಿ ಒಳ್ಳೆಯ ಶಿಕ್ಷಕರೂ ಇದ್ದು ಪಾಟೀಲರ ಅಧ್ಯಯನಕ್ಕೆ ಸಹಕರಿಸಿ ಪ್ರೋತ್ಸಾಹ ನೀಡುತ್ತಾರೆ.

ಸರ್ ಜೆ.ಜೆ. 'ಸ್ಕೂಲ್ ಆಫ್ ಆರ್ಟ್ಸ್ ಆಂಡ್ ಕ್ರಾಫ್ಟ್' ಕಲಾ ಮಹಾವಿದ್ಯಾಲಯದಲ್ಲಿ ಅಪ್ಲೈಡ್ ಆರ್ಟ ವಿಭಾಗದಲ್ಲಿ ಅಧ್ಯಯನ ಮಾಡಲು ಅನುವು ಮಾಡಿಕೊಟ್ಟರು. ಇಂತಹ ಮಹಾನ್ ಕಲಾಶಾಲೆಯಲ್ಲಿ ಕಲೆಯ ಅಧ್ಯಯನ ಕೈಗೊಂಡ ಶಂಕರ ಪಾಟೀಲರು ಜಿ.ಎಸ್. ದಂಡಾವತಿಮಠ, ಶ್ರೀ ಎಂ.ವಿ.ಮಿಣಜಗಿ, ಪ್ರೊ. ತಿರುವೊದಕರ, ಪ್ರೊ. ಸಾಠೆ, ಪ್ರೊ. ವಿ.ಆರ್.ಅಂಬೇಕರ, ಮುಂತಾದ ಹಿರಿಯ ಕಲಾಗುರುಗಳ ಸಮ್ಮುಖದಲ್ಲಿ ಕಲಾಧ್ಯಯನವನ್ನು ಹಿರಿಯ ಕಲಾಗುರುಗಳ ಮಾರ್ಗದರ್ಶನ ಪಡೆಯುತ್ತಾರೆ. ಬೆಳೆದ ಪಾಟೀಲರು ಕಲಾಶಾಲೆಯಲ್ಲಿ ಒಬ್ಬ ಶ್ರೇಷ್ಠ ಕಲಾವಿದ್ಯಾರ್ಥಿಯಾಗಿ ಪಾಟೀಲರು ಗುರುತಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ.

ಶಂಕರ್ ಪಾಟೀಲರ ಕಲಾಬದುಕಿನಲ್ಲಿ ಮಹತ್ವದ ಪಾತ್ರವಹಿಸಿದ ಹಲವು ಪ್ರಮುಖ ವ್ಯಕ್ತಿ, ಸಂಸ್ಥೆಗಳಿವೆ. ಅವುಗಳನ್ನು ಸ್ಥೂಲವಾಗಿ ಹೇಳುವದಾದರೆ, ಜಿ.ಎಸ್.ದಂಡಾವತಿಮಠ, ಎಂ.ವಿ. ಮಿಣಜಗಿ, ಡಿ.ವಿ. ಹಾಲಭಾವಿ ಹಾಗೂ ಜೆ.ಜೆ ಸ್ಕೂಲ್ ಆಫ್ ಆರ್ಟ್ ಹಾಲಭಾವಿ ಸ್ಕೂಲ್ ಆಫ್ ಆರ್ಟ್, ನಲ್ಲಿ ಇವರ ವಿದ್ಯಾಭ್ಯಾಸ ಮತ್ತು ಮೇಲೆ ಹೇಳಿದ ಕಲಾವಿದರ ಮಾರ್ಗದರ್ಶನದಲ್ಲಿ ಶಂಕರ ಪಾಟೀಲ ಕಲಾಬದುಕು ಅರಳಿ ನಿಂತಿದೆ.

ಕಲಾಗುರು ಜಿ.ಎಸ್.ದಂಡಾವತಿಮಠ :

ಕಲಾ ಸೇವೆಯನ್ನು ಮಾಡುತ್ತ ಬಂದ ದಂಡಾವತಿಮಠ ಹೆಸರು ಗಂಗಾಧರಯ್ಯ. ಬೈಲಹೊಂಗಲದ ಸುಸಂಸ್ಕೃತ ಜಂಗಮ ಮನೆತನದ ದೈವಭಕ್ತಿ, ಧರ್ಮನಿಷ್ಠ ಸಾತ್ವಿಕ ಜೀವನ ನಡೆಸುತ್ತಿದ್ದ ಶಂಕರಯ್ಯ ಹಾಗೂ ಗಂಗಾಬಾಯಿಯವರ ಉದರದಲ್ಲಿ ೧೯೧೦ ನೇ ಇಸ್ವಿ ಅಗಸ್ಟ್ ತಿಂಗಳ ೨೧ನೇ ದಿನಾಂಕದಂದು ಜನ್ಮತಾಳಿದರು.

ದಂಡಾವತಿಮಠರು ಹುಟ್ಟು ಕಲಾವಿದರೆಂಬುದನ್ನು ಅವರು ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಗಳಿಸಿದ ಕೀರ್ತಿಯಿಮದಲೇ ಕಂಡುಕೊಳ್ಳಬಹುದು. ಉಚ್ಚ ಕಲಾ ಪರೀಕ್ಷೆಗಳಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ಸ್ಮರಣಚಿತ್ರದಲ್ಲಿ ಪ್ರಾವಿಣ್ಯತೆ ಹೊಂದಿ ಪಾರಿತೋಷಕ ಪಡೆದಿದ್ದರು. ೧೯೨೩ ಮತ್ತು ೧೯೨೪ ರಲ್ಲಿ ಇವರ ಜಲವರ್ಣದ ಚಿತ್ರವೊಂದಕ್ಕೆ ಮುಂಬಯಿ ಆರ್ಟ್ ಸೊಸೈಟಿಯವರು ಪ್ರಥಮ ಬಹುಮಾನವನ್ನು ಕೊಡಮಾಡಿದರು. ೧೯೩೮ಜಲ್ಲಿ ಕ್ರಮವಾಗಿ ಮದ್ರಾಸ್ ಮತ್ತು ಮುಂಬಯಿ ಆರ್ಟ್ ಸೊಸೈಟಿಯವರು ಇವರ ಬಳಪದ (Pastel) ವರ್ಣಚಿತ್ರವೊಂದಕ್ಕೆ ಪಾರಿತೋಷಕ ಕೊಟ್ಟು ಪುರಸ್ಕರಿಸಿದರು. ಇದೇ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಏರ್ಪಡಿಸಿ ಚಿತ್ರಕಲಾ ಪ್ರದರ್ಶನದಲ್ಲಿ ಸುವರ್ಣ ಪದಕವನ್ನೂ ಪಡೆದರು.

"ಜ್ಞಾನಕ್ಕಾಗಿ ಸದಾ ಹಂಬಲಿಸುವ ನಿರುತ್ಸಾಹವನ್ನು ಅರಿಯದ ಮನಸ್ಸು ಗುರುವಾದವನಿಗೆ ಅಗತ್ಯ. ಬಿಂಕ–ಅಹಂಕಾರಗಳು ಗುರು ಚೈತನ್ಯಕ್ಕೆ ಹೊರತಾದ ಗುಣಗಳು, ಸಚ್ಚಾರಿತ್ರ್ಯ ಆತ್ಮೀಯತೆ, ವಾತ್ಸಲ್ಯಗಳು ವ್ಯಕ್ತಿಯಲ್ಲಿ 'ಗುರುತ್ವ' ವನ್ನು ತುಂಬುವ ಗುಣಗಳು" ಅಂತಹ ಒಬ್ಬ ಸದ್ಗುಣಗಳ ಕಲಾಗುರುವಾದವರು. ಈಗಾಗಲೇ ತಿಳಿಸಿದಂತೆ ಶ್ರೀ. ಡಿ. ಜಿ. ಬಡಿಗೇರ ಅವರು ಸ್ಥಾಪಿಸಿದ 'ನೂತನ ಕಲಾಮಂದಿರ' ವ್ಹಿ. ಆರ್. ರಾವ್ ಅವರು ನೋಡಿಕೊಳ್ಳುತ್ತಿದ್ದರು. ಆದರೆ ಅವರು ತಮ್ಮ ಕುಟುಂಬ ಸಮೇತವಾಗಿ ವಿದೇಶದಲ್ಲಿ ನೆಲೆಸುವ ವಿಚಾರ ಮಾಡಿದಾಗ ಆ ಜವಾಬ್ದಾರಿ ಕೆಲಸ ದಂಡಾವತಿಮಠರರಿಗೆ ವಹಿಸಿ ಕೊಡಲಾಯಿತು. ಸ್ವತಂತ್ರ ಕಲಾವಿದರಾಗಿಯೋ ಅಥವಾ ಬೇರೆ ಸರಕಾರಿ ನೌಕರಿಯನ್ನು ಮಾಡಬಹುದಾಗಿತ್ತು. ಆದರೆ ಕಲಾಸೇವೆಯೇ ತಮ್ಮ ಧ್ಯೇಯವಾಗಿ ನಿಶ್ಚಯಿಸಿಕೊಂಡ ಅವರು ನೂತನ ಕಲಾಮಂದಿರ ಪ್ರಿನ್ಸಿಪಾಲರಾದರು. ಶಿಕ್ಷಕರೂ ಆದರು. ಕಲಾಮಂದಿರದ ಆಧಾರಸ್ಥಂಭವಾದರು, ಜೆ. ಜೆ. ಸ್ಕೂಲಿಗೆ ಸರಿಸಮಾನವಾಗಿ ನಿಲ್ಲುವಂಥ ಭದ್ರಬುನಾದಿಗೆ ಕಲಾಬೋಧೆಯನ್ನು ಮಾಡಿದರು.

ಮುಂಬಯಿಯಂತಹ ಪಟ್ಟಣದಲ್ಲಿ ಬಡತನವನ್ನು ಅಂಟಿಸಿಕೊಂಡು ಕಲಾ ಅಧ್ಯಯನ ಮಾಡಲು ಬಂದ ವಿದ್ಯಾರ್ಥಿಗಳಿಗೆ ತಮ್ಮಿಂದ ಸಾಧ್ಯವಾದ ಎಲ್ಲ ಅನುಕೂಲತೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಿ ಕೊಡುತ್ತಿದ್ದರೆ ವಿನಃ ಶುಲ್ಕಕ್ಕಾಗಿ ಅವರನ್ನೆಂದೂ ನೋಯಿಸಲಿಲ್ಲ. ಈ ವಿಚಾರದಲ್ಲಿ ಅವರ ಪ್ರತಿಯೊಬ್ಬ ಶಿಷ್ಯರೂ ಅವರಿಗೆ ಚಿರಋಣಿ.

"ವಿದ್ಯಾರ್ಥಿಗಳ ಅಭಿಲಾಷೆಯಂತೆ ಬೇರೆ ಬೇರೆ ಪ್ರಾಂತದ ವೇಷ-ಭೂಷಣಗಳನ್ನು ರೂಪದರ್ಶಿಗಳಿಗೆ ತೊಡಿಸಿ ಭಾವಚಿತ್ರಕ್ಕೆ ಆಸ್ಪದ ಮಾಡಿಕೊಡುತ್ತಿದ್ದರು. ಹಾಗೆಯೇ ವಿದ್ಯಾರ್ಥಿಗಳ ಬೇರೆ ಬೇರೆ ಗುಂಪುಗಳನ್ನು ಮಾಡಿ ನಿಸರ್ಗ ಚಿತ್ರಣಕ್ಕೂ, ರೇಖಾ ಚಿತ್ರಣಕ್ಕೂ ಸ್ವತಃ ತಾವೇ ಕರೆದುಕೊಂಡು ಹೋಗುತ್ತಿದ್ದರು. ಹೀಗೆ ಮುಂಜಾನೆಯಿಂದ ಸಂಜೆಯವರೆಗೂ ವಿದ್ಯಾರ್ಥಿ ಸಮೂಹದೊಡನಿದ್ದು ಶಿಕ್ಷಣವನ್ನು ನೀಡುತ್ತಿದ್ದರು." ಇಂತಹ ಗುರುವರ್ಯರು ಗಳಿಸಿದ ಶಿಷ್ಯವೃಂದ ಅಪಾರ. ಅವರಲ್ಲಿ ಶ್ರೀ. ಕೆ. ಕೆ. ಹೆಬ್ಬಾರ, ಶ್ರೀಯುತರುಗಳಾದ ಎ. ಎ. ಅಲಮೇಲಕರ ಎಸ್. ಎಂ. ಪಂಡಿತ, ರಘೂ. ಲಕ್ಷ್ಮಣ ಪೈ, ಗಾಯತೊಂಡೆ, ಬರಾಸ್ಕಾರ್, ದಯಾನಂದ ಶೆಟ್ಟಿ, ಡಿಕೋಸ್ಟಾ ಸಾಬನ್ನವರ ಮುಂತಾದ ಕಲಾವಿದರ ಸಾಲಿನಲ್ಲಿ ಶಂಕರ ಪಾಟೀಲರು ಬರುತ್ತಾರೆ.

ದಂಡಾವತಿಮಠರು ಕಲಾವಿದರಾಗಿಯೂ ಕೂಡಾ ಪರಿಸ್ಥಿತಿಯ ಅನಾನುಕೂಲದಿಂದ ಅಷ್ಟೊಂದು ಕೃತಿಗಳನ್ನು ರಚಿಸಲಿಲ್ಲ. ನೈಜವಾಗಿ (Realistic) ಚಿತ್ರಗಳನ್ನು ಬರೆಯುವುದರಲ್ಲಿ, ಅದರಲ್ಲಿಯೂ ಭಾವಚಿತ್ರಗಳನ್ನು ರಚಿಸುವುದರಲ್ಲಿಯೇ ತಮ್ಮ ಕಲಾ ಪ್ರೌಢಿಮೆಯನ್ನು ತೋರಿಸಿದ್ದಾರೆ. ಅಂದಿನ ಶತಕಗಳ ಯುಗಧರ್ಮದಿಂದ ಇವರೇನೂ ಬೇರೆಯಾಗಿರಲಿಲ್ಲ. ಮುಂಬಯಿ ಜೆ. ಜೆ. ಕಲಾ ಶಾಲೆಯ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ವಿಷಯಗಳಿವು. ಇವರ ಕಲಾತಂತ್ರ ಶೈಲಿಯನ್ನು ಇವರು ರಚಿಸಿದ ಭಾವ ಚಿತ್ರಗಳ ಮೂಲಕವೇ ತಿಳಿಯಲು ಸಾಧ್ಯ. ಇವರ ಚಿತ್ರಗಳಲ್ಲಿ ದಟ್ಟವಾದ ಕುಂಚದ ಎಳೆತಗಳು, ನೇರ ಮತ್ತು ಪ್ರಜ್ವಲ ಬಣ್ಣಗಳ ಲೇಪನ, ಪುನರುಜ್ಜೀವನ ಕಾಲದ ಕಲಾವಿದರ ಕೃತಿಗಳಂತೆ ಕಾಣುತ್ತವೆ.

"ಕಟ್ಟುನಿಟ್ಟಿನ ಸಂಪ್ರದಾಯ ಪದ್ಧತಿಯಲ್ಲಿ ಅವರು ಕಲಾ ಶಿಕ್ಷಣವನ್ನು ಪಡೆದಿದ್ದರೂ ನವ್ಯಕಲೆಯ ಬಗ್ಗೆ ತಾತ್ಸಾರದ ಮಾತನ್ನಾಡಿದವರಲ್ಲ. ಮೂಲ ತತ್ವವನ್ನರಿಯದೇ ಅಡ್ಡಾದಿಡ್ಡಿಯಾಗಿ ಬೆಳೆಯುವ ನವ್ಯ ಕಲೆಯನ್ನು ಮಾತ್ರ ಅವರು ಒಪ್ಪಿದವರಲ್ಲ, ಭದ್ರವಾದ ತಳಹದಿಯ ಮೇಲೆ ಹೊಸ ಅವಿಷ್ಕಾರಗಳು, ನವೀನ ಪ್ರಯೋಗಗಳು ನಡೆಯಬೇಕು. ಅದೇ ಕಲೆಯ ನಿಜವಾದ ವಿಕಾಸ ಎಂಬುದೇ ಅವರ

ನಂಬಿಕೆ." ಕರ್ನಾಟಕದವರಾದ ದಂಡಾವತಿಮಠರು ಮುಂಬಯಿಯಂಥ ಪ್ರದೇಶದಲ್ಲಿ ಅತ್ಯುತ್ತಮವಾದ ಕಲಾ ಶಾಲೆಯನ್ನು ನಿರ್ಮಿಸಿ ಕರ್ನಾಟಕ ಜನತೆಯ ಹೆಮ್ಮೆಗೆ ಪಾತ್ರರಾಗಿದ್ದಾರೆ. ಇವರು ೧೯೭೮ ನವ್ಹೆಂಬರ್ ೧೫ ರಂದು ಶಿವಾಧೀನರಾಗುತ್ತಾರೆ. ಮುಂಬಯಲ್ಲಿ ಶಂಕರ ಪಾಟೀಲರು ಇವರ ಸಾಮಿಪ್ಯದಲ್ಲಿ ಹಲವಾರು ವರ್ಷ ಇದ್ದು ಕಲಾ ಅಧ್ಯಯನ ಮಾಡಿ ಬಂದಿದ್ದಾರೆ.

ಎಂ. ಎ. ಮಿಣಜಗಿ :

ಶ್ರೀ ಮಡಿವಾಳಪ್ಪ ಮಿಣಜಗಿ ಅವರು ವ್ಯಾಪಾರಸ್ಥ ಶ್ರೀಮಂತ ಮನೆಯಲ್ಲಿ ಶ್ರೀಯುತ ವೀರಪ್ಪ, ಶ್ರೀಮತಿ ಶರಣವ್ವ ದಂಪತಿಗಳ ಮಗನಾಗಿ ೧೯೦೧ ಜನೇವರಿ ೨೦ ರಂದು ವಿಜಾಪುರದಲ್ಲಿ ಜನಿಸಿದರು. ೧೧-೧೨ ವರ್ಷದ ವಿದ್ಯಾರ್ಥಿ ಜೀವನದಲ್ಲಿಯೇ ಸಂಗೀತ, ಚಿತ್ರ ಬಿಡಿಸುವುದು, ತಮ್ಮ ಪ್ರಾಥಮಿಕ ಮಾಧ್ಯಮಿಕ ಓದನ್ನು ವಿಜಾಪೂರದಲ್ಲೇ ಮುಗಿಸಿದರು. ಓದಿದ್ದು ಮರಾಠಿ ಮಾಧ್ಯಮ. ತಂದೆಗೆ ಮಗನು ವಕೀಲನಾಗಬೇಕೆಂಬ ಆಸೆ. ಆದರೆ ಅವರ ಮನಸ್ಸಿಗೆ ವಿರೋಧವಾಗಿ ತಮ್ಮ ಗುರಿಯತ್ತ ಸಾಗಿದ ಮಿಣಜಗಿಯವರು ೧೯೨೧ ರಲ್ಲಿ ಉನ್ನತ ಕಲಾ ಶಿಕ್ಷಣಕ್ಕಾಗಿ ಮುಂಬಯಿಯ ಸರ್. ಜೆ. ಜೆ. ಸ್ಕೂಲ್ ಆಫ ಆರ್ಟ್‌ನ್ನು ಸೇರಿದರು.

'ಅಲ್ಲಿ ಪರಿಣಿತ ಅತ್ಯಂತ ಉತ್ಕೃಷ್ಟ ಕಲಾ ಶಿಕ್ಷಕರಾದ ದಿ. ಅಗಸಕರ, ತಿರಂದಾದೆ, ರಾವ್ ಬಹದ್ದೂರ ದುರಂಧರ ತಾಸ್ಕರ ಹಾಗೂ ಚೂಡೇಕರ ಮತ್ತಿತರ ವಿದ್ಯಾರ್ಥಿಯಾಗಿ ಡ್ರಾಯಿಂಗ್ ಮತ್ತು ಪೇಂಟಿಂಗ್ ಕಲಿತರು.' "ಆಗ ಕಲಾ ಶಲೆಯಲ್ಲಿದ್ದ ಪ್ರಿನ್ಸಿಪಾಲ್ ಗ್ಲ್ಯಾಡ್‌ಸನ್ ಸಲೋಮನ್ನೆರು ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ತಾವು ಕ್ಯೂರೇಟರ್ ಆಗಿದ್ದ 'ಪ್ರಿನ್ಸ್ ಆಫ್ ವೇಲ್ಸ್' ಮ್ಯೂಸಿಯಂನಲ್ಲಿ ಭಾರತೀಯರ ಕಲಾಕೃತಿಗಳನ್ನು ಸಂಗ್ರಹಿಸಿ ಇಡುತ್ತಿದ್ದರು." ಈ ಚಿತ್ರಗಳನ್ನು ಅಲ್ಲಿಯ ವಿದ್ಯಾರ್ಥಿಗಳು ಅಭ್ಯಾಸ ಮಾಡಿ ತಮಗೆ ಬೇಕಾದ ಹಾಗೆ ತಮ್ಮ ಚಿತ್ರಗಳಲ್ಲಿ ಅದನ್ನು ಅಳವಡಿಸಿಕೊಳ್ಳುತ್ತಿದ್ದರು. ಅಂತೆಯೇ "ಮಿಣಜಗಿಯವರು ಸಹ ಹಳೆಯ ಕಲಾವಿದರ (Old Masters) ಚಿತ್ರಗಳು ಹಾಗೂ ರಾಗಮಾಲಾ ಚಿತ್ರಗಳನ್ನು ಅಭ್ಯಸಿಸಲು ಅನೇಕ ಸಾರಿ 'ಪ್ರಿನ್ಸ್ ಆಫ್ ವೇಲ್ಸ್' ಮ್ಯೂಜಿಯಂಗೆ ಭೇಟಿ ನೀಡುತ್ತಿದ್ದರು." ಅಂತೆಯೇ ಮಿಣಜಗಿಯವರ ಸೃಜನ ಶಕ್ತಿ ಗುರುತಿಸುವ ಉತ್ಕೃಷ್ಟ ಚಿತ್ರಗಳೆಂದರೆ ರಾಗಮಾಲಾ ಚಿತ್ರಗಳು.

೧೯೩೦ ರಲ್ಲಿ ಅವರು ಉಚ್ಚ ಶಿಕ್ಷಣಕ್ಕಾಗಿ ಲಂಡನ್ನಿನ "ರಾಯಲ್ ಕಾಲೇಜ್ ಆಫ್ ಆರ್ಟ್ಸ್"ನಲ್ಲಿ ಪ್ರವೇಶ ಪಡೆದರು. "ಅಲ್ಲಿ ಬರೀ ಚಿತ್ರಕಲೆಯನ್ನಷ್ಟೇ ಕಲಿಯದೇ, ಫೋಟೋಲಿಥೋ

ಕ್ರೊಮೋಲಿಥೋಗ್ರಾಫ್ ಅಭ್ಯಸಿಸಿ ಅದರಲ್ಲಿತೂ ಪ್ರಶಸ್ತಿ ಪಡೆದು, ಪ್ರಖ್ಯಾತ ವಿಲಿಯಂ ರಾಥನ್‌ಸ್ಟೆನ್ ಅವರ ಶಿಷ್ಯರಾಗಿ ಮೆಚ್ಚುಗೆಯನ್ನು ಗಳಿಸಿದರು." ತಾರುಣ್ಯದಲ್ಲಿಯೇ ಕಲಾ ಪ್ರೌಢಿಮೆಯ ಉನ್ನತ ನಿಲುವನ್ನು ಸಂಪಾದಿಸುದ ಶ್ರೇಯಸ್ಸು ಈ ಕಲಾವಿದರದು. "ಲಂಡನ್ನಿನ ಇಂಡಿಯನ್ ಹೌಸ್, ಇಂಪೀರಿಯಲ್ ಆರ್ಟ್ ಗ್ಯಾಲರಿ ಮತ್ತು ಇನ್ನಿತರ ಅನೇಕ ಪ್ರಮುಖ ಸ್ಥಳಗಳಲ್ಲಿ ಇವರ ಚಿತ್ರಗಳು ಪ್ರದರ್ಶಿಸಲ್ಪಟ್ಟು ಅನೇಕ ಸಹೃದಯಿಗಳ ಮನಸ್ಸನ್ನು ಸೂರೆಗೊಂಡವಲ್ಲದೇ" ಅನೇಕ ಬಹುಮಾನ ಪ್ರಶಸ್ತಿಗಳನ್ನು ಪಡೆದವು.

೧೯೫೦ ರಲ್ಲಿ ಹುಬ್ಬಳ್ಳಿಯ 'ಫೈನ್ ಆರ್ಟ್ ಸೊಸೈಟಿ'ಯ ಆಶ್ರಯದೊಂದಿಗೆ ಒಂದು ಕಲಾ ಶಾಲೆಯನ್ನು ಪ್ರಾರಂಭಿಸಿದರು. ಈಗ ಅದೇ ವಿಜಯ ಮಹಾಂತೇಶ ಕಲಾಮಂದಿರವಾಗಿದೆ. ಮಿಣಜಗಿಯವರು ಭಾವಚಿತ್ರ, ನಿಸರ್ಗಚಿತ್ರ ಅನೇಕ ಸಾಮಾನ್ಯ ವಿಷಯಗಳನ್ನೊಳಗೊಂಡ ಸಂಯೋಜನಾ ಚಿತ್ರಗಳನ್ನು ಚಿತ್ರಿಸಿದ್ದಾರೆ. ಈ ಚಿತ್ರಗಳು ಸಮಪೂರ್ಣವಾಗಿ ಯುರೋಪಿಯನ್ ಶೈಲಿ ತಂತ್ರಗಳನ್ನು ಒಳಗೊಂಡಿವೆಯಾದರೂ ಅವರ ಪ್ರತಿಭೆಯನ್ನು ಸ್ಪಷ್ಟಪಡಿಸುತ್ತವೆ.

ಕನ್ನಡದ ಹಿರಿಯ ಸಾಹಿತಿ, ದಿ. ಅ. ನ. ಕೃಷ್ಣರಾಯರು ಹೇಳಿರುವಂತೆ ಮಿಣಜಗಿಯವರ ಚಿತ್ರಕಲೆ ಸಾಮರಸ್ಯ ಸಿದ್ಧಾಂತದ ಪ್ರತೀಕ. ಅವರ ಚಿತ್ರಗಳಲ್ಲಿ ವ್ಯಕ್ತಿಗಳಷ್ಟೇ ನಿಸರ್ಗವೂ ಚೇತನಗೊಂಡಿದೆ. ಅವುಗಳ ಒಂದೊಂದು ಚಲನವಲನವೂ ಯುಗಯುಗಗಳ ಅನುಭವವನ್ನು ಸಾರುತ್ತದೆ. ಮಿಣಜಗಿಯವರು ಸಂಗೀತ ಪ್ರಿಯರಾಗಿದ್ದರಿಂದ ಸಂಗೀತದ ಜ್ಞಾನವನ್ನು ಪಡೆದುಕೊಂಡಂಥ ಇವರು ಆ ರಾಗಗಳ ಭಾವನೆಯನ್ನೂ ತಮ್ಮ ಚಿತ್ರಗಳಲ್ಲಿ ಸೆರೆಹಿಡಿದಿದ್ದಾರೆ. ಇವರ ರಾಗ ಮಾಲಾ ಚಿತ್ರಗಳು ರಜಪೂತ ಚಿತ್ರಗಳನ್ನು ಮತ್ತೆ ನೆನಪಿಸುತ್ತವೆ. ಮಾಲಕಂಸ, ತೋಡಿ, ಮೇಘಮಲ್ಹಾರ, ಭೂಪಾಲಿ ಪಟಮಂಜರಿ, ಸೌರಭ ಹೀಗೆ ೧೫ ರಾಗಗಳ ಮೇಲೆ ಚಿತ್ರಿಸಿರುವ ಚಿತ್ರಗಳು ಅಭೂತಪೂರ್ವ ಭಾರತೀಯ ಮತ್ತು ಪಾಶ್ಚಾತ್ಯ ಶೈಲಿಗಳನ್ನೊಳಗೊಂಡ ತಮ್ಮದೇ ಆದ ರೀತಿಯಲ್ಲಿ ಹಿಂದುಸ್ತಾನಿ ರಾಗ ರಾಗಣಿಯರ ಮೇಲೆ ಚಿತ್ರಗಳನ್ನು ಚಿತ್ರಿಸಿದ್ದಾರೆ. ಈ ಎಲ್ಲ ಚಿತ್ರಗಳು ರಜಪೂತ ಶೈಲಿಯ ಪ್ರಭಾವವನ್ನು ಹೊಂದಿವೆ. ಈ ರಾಗಮಾಲಾ ಚಿತ್ರಗಳಲ್ಲಿ "ಶಕ್ತಿಪೂರ್ಣವಾದ ರೇಖೆಯೇ ತಳಹದಿಯಾಗಿದೆ." "ಇದರ ಮೂಲವು ಅಜಂತದ ಕಲೆಯಲ್ಲಿದೆಯೆಂಬುದು ನಿರ್ವಿತವಾದದ ಸಂಗತಿ. ಅಜಂತದ ಚಿತ್ರಗಳಷ್ಟು ಇವು ದೊಡ್ಡವಲ್ಲ ನಿಜ. ಆದರೆ ಲೇಖನ ಪದ್ಧತಿ ಮುಖ್ಯವಾಗಿ ರೇಖಾಬಲ ಇವು ಅಜಂತದ ಪರಂಪರೆಯವು. ಇವೇ ಚಿತ್ರಗಳನ್ನು ವಿಶಾಲೀಕರಿಸಿದರೆ, ಅಜಂತದ

ರೇಖೆಗಳ ಜೀವವೇ ಇವುಗಳಲ್ಲಿಯೂ ಕಾಣುವುದು." ಈ ರೀತಿಯ ಚಿತ್ರಗಳನ್ನು ಚಿತ್ರಿಸಲು ಇದೇ ರೀತಿಯ ತಂತ್ರವನ್ನು ಮಿಣಜಗಿಯವರು ಬಳಸಿದ್ದಾರೆ. ಇವರ ಚಿತ್ರಗಳಲ್ಲಿಯೂ ದಟ್ಟವಾದ ಹೊರ ರೇಖೆಯನ್ನು ಕಾಣಬಹುದು.

ಹೀಗೆ ವಿವಿಧ ರಾಗಗಳ ಚಿತ್ರಗಳ ಸಂಗೀತ, ಸಾಹಿತ್ಯ ಮತ್ತು ಚಿತ್ರಗಳನ್ನೊಳಗೊಂಡ ಆ ರಾಗಗಳೂ ಸೂಚಿಸುವ ವಿರಹ, ವಾತ್ಸಲ್ಯ, ಪ್ರೇಮ, ಸಂಭ್ರಮಗಳನ್ನು ಕಾಣುತ್ತೇವೆ. ಮಿಣಜಗಿ ಅವರು ಜಲವರ್ಣ ಹಾಗೂ ತೈಲವರ್ಣ ಈ ಎರಡು ಮಾಧ್ಯಮದಲ್ಲೂ ಸಿದ್ಧಹಸ್ತರು. ಇವರ ಮಾರ್ಗದರ್ಶನದಲ್ಲಿ ಶಂಕರ ಪಾಟೀಲರ ಚಿತ್ರಕಲಾ ಅಧ್ಯಯನ ಮಾಡಿದ್ದಾರೆ. ಅವರ ಪ್ರಭಾವ ಇವರ ಮೇಲೆ ಸಾಕಷ್ಟು ಪ್ರಮಾಣದಲ್ಲಿ ಆಗಿದೆ.

ಡಿ. ವಿ. ಹಾಲಭಾವಿಯವರ ಕಲಾಶಾಲೆ :

ಆಂಗ್ಲರು ಭಾರತೀಯರನ್ನು ಆಳುತ್ತಿರುವಾಗಲೇ ತಮ್ಮದೇ ಆದ ಶೈಕ್ಷಣಿಕ ಪದ್ಧತಿಯನ್ನು ಒತ್ತಾಯವಾಗಿ ಭಾರತದಲ್ಲಿ ಬಿತ್ತಿದರು. ಅದರ ಪರಿಣಾಮವಾಗಿ ಮದ್ರಾಸ, ಮುಂಬಯಿ, ಕಲ್ಕತ್ತಾಗಳಲ್ಲಿ ಆಂಗ್ಲ ಕಲಾವಿದರ, ಅಧಿಕಾರಿಗಳ ಉಸ್ತುವಾರಿಯಲ್ಲಿ ಕಲಾಶಾಲೆಗಳು ಹುಟ್ಟಿಕೊಂಡವು. ನಂತರದ ದಿನಗಳಲ್ಲಿ ಕರ್ನಾಟಕ ರಾಜ್ಯ ಧಾರವಾಡದಲ್ಲಿ ಕಲಾಗುರುಗಳಾದ ಡಿ.ವಿ.ಹಾಲಭಾವಿಯವರು 'ಸ್ಕೂಲ್ ಆಫ್ ಆರ್ಟ್ಸ್' ಎಂಬ ಕಲಾ ಸಂಸ್ಥೆಯೊಂದನ್ನು ಉತ್ತರ ಕರ್ನಾಟಕದ ಧಾರವಾಡದಲ್ಲಿ ಸ್ಥಾಪಿಸಿದ ಮೊದಲ ಕನ್ನಡಿಗರೆನ್ನಬಹುದು. 'ಸ್ಕೂಲ್ ಆಫ್ ಆರ್ಟ್ಸ್' ಸಂಸ್ಥೆಯಲ್ಲಿ ಡಿ.ವಿ.ಹಾಲಭಾವಿಯವರು ಸಹ ಮುಂಬೈ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್‌ದ ಪಠ್ಯಕ್ರಮ ಮತ್ತು ಪರೀಕ್ಷಾ ಕ್ರಮಗಳನ್ನೇ ಅನುಸರಿಸುತ್ತಿದ್ದರು. ತನ್ಮೂಲಕ ಉತ್ತರ ಕರ್ನಾಟಕದಲ್ಲಿ ಮೊದಲ ಕಲಾಶಾಲೆಯನ್ನು ಪ್ರಾರಂಭಿಸುವುದರೊಂದಿಗೆ ಕಲಾಶಿಕ್ಷಣ ಪಡೆಯಬಯಸಿದ್ದ ವಿದ್ಯಾರ್ಥಿಗಳಿಗೆ ದಾರಿದೀಪವಾದರು.

೧೯೩೫ ರಲ್ಲಿ ಮುಂಬೈಯ ಸರ್. ಜೆ. ಜೆ. ಸ್ಕೂಲ್ ಆಪ್ ಆರ್ಟನಲ್ಲಿ ಅಧ್ಯಯನ ಮಾಡಿ ಮರಳಿ ತವರಿಗೆ ತೆರಳಿದ ಹಾಲಭಾವಿಯವರು "ಧಾರವಾಡದಲ್ಲಿ ಖಾಸಗಿಯಾದ ಚಿತ್ರಕಲಾ ಶಾಲೆಯೊಂದನ್ನು ನಿರ್ಮಿಸಿದರು. ಮತ್ತು ಉತ್ತರಕರ್ನಾಟಕದಲ್ಲಿ ಮೊಟ್ಟಮೊದಲ ಚಿತ್ರಕಲಾ ಶಾಲೆಯನ್ನು ಪ್ರಾರಂಭಿಸಿದ ಹೆಗ್ಗಳಿಕೆ ಹಾಲಭಾವಿಯವರಿಗೆ ಸಲ್ಲುತ್ತದೆ. ಜೊತೆಗೆ ಕಲಾಕ್ಷೇತ್ರಕ್ಕೆ ಮಹತ್ವವಾದ ಕೊಡುಗೆಯನ್ನು ನೀಡಿದರು." ಇಂಥ ಹಿರಿಯ ಕಲಾವಿದರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿದವರಲ್ಲಿ ಶ್ರೀಯುತ ಶಂಕರರು ಒಬ್ಬರು.

ಇವರು ಅನೇಕ ಭಾವ ಚಿತ್ರ, ಸಂಯೋಜನಾ ಚಿತ್ರ, ನಿಸರ್ಗ ಚಿತ್ರಗಳನ್ನು ತೈಲ ಹಾಗೂ ಜಲವರ್ಣಗಳಲ್ಲಿ ಚಿತ್ರಿಸಿದ್ದಾರಲ್ಲದೇ ಚೆನ್ನಬಸವ ಪುರಾಣ, ಪ್ರಭುಲಿಂಗಲೀಲೆ, ಶಂಕರದಾಸಿಮಯ್ಯ, ಗೋರಖನಾಥ ಮತ್ತು ಬಸವೇಶ್ವರ ವಾಕ್ ಯುದ್ಧದ ಚಿತ್ರ ಮತ್ತು ಇತರ ಅನೇಕ ಕಾವ್ಯಗಳಿಗೆ ಕಲ್ಪನಾ ಚಿತ್ರ ಒದಗಿಸಿದ್ದಾರೆ.

ಜೆ.ಜೆ.ಕಲಾಶಾಲೆಯ ಕುರಿತು ಹೇಳುವುದಾದರೆ ಈ ಕಲಾಶಾಲೆಯಲ್ಲಿ ಕಲೆಯ ಕುರಿತು ಬೇರೆ-ಬೇರೆ ಐಚ್ಛಿಕ ವಿಷಯಗಳನ್ನೊಳಗೊಂಡ ವಿಭಾಗಗಳಿದ್ದವು. ಉದಾ : ಮಾನವನ ದೇಹದ ಅಂಗಾಂಗಗಳ ಕುರಿತ ಚಿತ್ರ ಬಿಡಿಸುವಲ್ಲಿ ಅದಕ್ಕಾಗಿ ಮೆಡಿಕಲ್ ಕಾಲೇಜಿನ ಅನಾಟಮಿ ಪ್ರಾಧ್ಯಾಪಕನು ಪಾಠಕ್ಕೆ ಬರುತ್ತಿದ್ದರಂತೆ. ನಂತರ ಪ್ರಬಂಧ ಕಾಂಪೊಜೀಶನ್ ಅಂದರೆ ಬೇರೆ ಬೇರೆ ಪದಾರ್ಥಗಳನ್ನು ಒಟ್ಟಾಗಿ ಸೇರಿಸಿ ಎದುರುಗಡೆ ಇಟ್ಟು ಬಿಡಿಸುವ ಚಿತ್ರಪದ್ಧತಿ, ಅಲ್ಲದೆ ನೋಡಿದ್ದನ್ನು ಇದ್ದಂತೆ ಚಿತ್ರಿಸುವುದು, ರೇಖೆಯಲ್ಲಿ, ವರ್ಣದಲ್ಲಿ ಕಲೆಯ ಹೊಸ ಹೊಸ ತಿರುಳುಗಳನ್ನು ಕಂಡುಕೊಳ್ಳುವುದು, ಜೊತೆಗೆ ಭಾರತೀಯ ಕಲೆ ಸಂಸ್ಕೃತಿಯಲ್ಲಿ ಬ್ರಿಟಿಷ್ ಸಾರ್ವಭೌಮರ ವಿಕ್ಟೋರಿಯನ್ ಯುಗದ ದೃಷ್ಟಿಕೋನವನ್ನಿಟ್ಟುಕೊಂಡು ಕಲೆಯ ಕುರಿತ ಅಧ್ಯಯನಕ್ಕೆ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್‌ನ ಖ್ಯಾತಿ ದೇಶಾದ್ಯಂತ ಹೆಸರುವಾಸಿಯಾಗಿತ್ತು. ಆಗ ಮಹಾರಾಷ್ಟ್ರ ಸರಕಾರದ ಇಂಟರ ಮಿಡಿಯೇಟ್ ಪರೀಕ್ಷೆಯಲ್ಲಿ ಶಂಕರ ಪಾಟೀಲರ ಕಲಾಕೃತಿಗಳು ಕಲಾಚಟುವಟಿಕೆ, ಕಲೆಯಲ್ಲಿಯ ಪ್ರಯೋಗಶೀಲತೆ ಇವುಗಳೆಲ್ಲವನ್ನು ಪರೀಕ್ಷಿಸಿ ಐದು ವರ್ಷದ ಇಂಟರಮೀಡಿಯಟ್ ಶಿಕ್ಷಣವನ್ನು ಕೇವಲ ನಾಲ್ಕು ವರ್ಷಕ್ಕೆ ಮುಗಿಸಲು ಅನುಮತಿ ನೀಡಿತು. ಈ ಪರೀಕ್ಷೆಯಲ್ಲಿ ನಾಲ್ಕು ಪ್ರಶಸ್ತಿಗಳನ್ನು ಪಡೆದರು. ಹಾಗೂ ಕಮರ್ಶಿಯಲ್ ಆರ್ಟ್ ದ್ವಿತೀಯ ವರ್ಷದ ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದು ನಾಲ್ಕು ಪ್ರಶಸ್ತಿಗಳನ್ನು ಪಡೆದರು. ಜೆ.ಜೆ. ಕಲಾಶಾಲೆಯ ಹಳೆಯ ಎಲ್ಲ ದಾಖಲೆಗಳನ್ನು ಮುರಿದು ಅತಿ ಹೆಚ್ಚು ಅಂಕಗಳನ್ನು ಪಡೆದು ಮೊದಲ ಸ್ಥಾನ ಪಡೆದರು.

ಪಾಟೀಲರು ಚಿತ್ರಕಲೆಯ ಜೊತೆಗೆ ಛಾಯಾಚಿತ್ರಣದಲ್ಲೂ ಸಹ ಉನ್ನತ ವ್ಯಾಸಂಗವನ್ನು ಮಾಡಿದರು. ಇವರು ಬಾಲಕನಿರುವಾಗಲೇ ಚಿತ್ರಕಲೆಯ ಜೊತೆಗೆ ಛಾಯಾಚಿತ್ರಗಳ ಕುರಿತು ಆಸಕ್ತಿಯನ್ನು ಹೊಂದಿದ್ದರು. ಪಾಟೀಲರು ಚಿತ್ರಕಲೆ, ವಾಣಿಜ್ಯಕಲೆ, ಛಾಯಾಚಿತ್ರಣ ಜೊತೆ-ಜೊತೆಗೆ ಸಾಹಿತ್ಯ, ಸಂಗೀತ, ನಾಟಕ ಇವೆಲ್ಲವುಗಳನ್ನು ವಿದ್ಯಾರ್ಥಿ ದೆಸೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಅಚ್ಚುಕಟ್ಟಾಗಿ ಅಧ್ಯಯನವನ್ನು ಕೈಗೊಂಡಿದ್ದಾರೆ. ಇವರಿಗೆ ಪುಸ್ತಕ ಓದುವುದೆಂದರೆ ತುಂಬಾ ಆಸಕ್ತಿ. ಮುಂಬೈಯಲ್ಲಿ

ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ ಇವರು 'ದಿ ಫಿಲಾಸಫಿ ಆಫ್ ಮಾಡರ್ನ್' ಎಂಬ ಶೀರ್ಷಿಕೆಯ ಹರ್ಬರ್ಟರಿಡ್ ಎಂಬ ಪ್ರಸಿದ್ಧ ವಿದೇಶಿ ಲೇಖಕ ಬರೆದಂತಹ ಪುಸ್ತಕವನ್ನು ಓದುತ್ತಿದ್ದರು. ಈ ಪುಸ್ತಕವನ್ನು ಓದಲು ಪ್ರಾರಂಭಿಸಿದಾಗಿನಿಂದ ಪಾಟೀಲರಿಗೆ ಕಲೆಯ ಬಗ್ಗೆ ಮತ್ತು ತಾವು ರಚಿಸುತ್ತಿರುವ ಕಲಾಕೃತಿಗಳಿಗೆ ವಿವಿಧ ಬಗೆಯ ವಿಷಯಗಳಾಗಿ ಅವರ ಗಮನ ಸೆಳೆದವು. ವಿದ್ಯಾರ್ಥಿ ದಿಸೆಯಲ್ಲಿ ಆ ವಯೋಮಾನಕ್ಕೆ ತಕ್ಕಂತೆ ಅರ್ಥೈಸಿಕೊಳ್ಳುವಂತಹ ಈ ಪುಸ್ತಕವನ್ನು ಓದಿ ಮುಗಿಸಿದರಾದರೂ ಮನಸ್ಸಿನಲ್ಲಿ ಕೆಲವು ಪ್ರಶ್ನೆಗಳು ಆಗಾಗ್ಗೆ ಕಾಡುತ್ತಿದ್ದವೆಂದು ಪಾಟೀಲರು ಹೇಳುತ್ತಿದ್ದರಂತೆ.

ಕ್ರಿ.ಶ. ೧೯೬೮ ರಲ್ಲಿ ಪದವಿ ಪಡೆದ ನಂತರ ಇದೇ ಕಾಲೇಜಿನಲ್ಲಿ ಏಕವ್ಯಕ್ತಿ ಚಿತ್ರ ಪ್ರದರ್ಶನ ಕೈಗೊಂಡು ಪದವಿಯಲ್ಲಿ ವ್ಯಾಸಂಗ ಮಾಡುತ್ತಾ ರಚಿಸಿದ ತಮ್ಮ ವರ್ಣಕಲಾಕೃತಿಗಳನ್ನು ಪ್ರದರ್ಶಿಸಿ ಪಾಟೀಲರು ನಾಡಿನ ಅನೇಕ ಹಿರಿಯ ಕಲಾವಿದರುಗಳ ಮೆಚ್ಚುಗೆಗೆ ಪಾತ್ರರಾಗಿ ಅವರ ವರ್ಣ ಕಲಾಕೃತಿಗಳು ಜನಸಾಮಾನ್ಯರ ಗಮನ ಸೆಳೆಯುವಂತಾಯಿತು.

ಶಂಕರ ಪಾಟೀಲರು ತಮ್ಮ ವಿದ್ಯಾರ್ಥಿ ಜೀವನದ ಸಮಯದಲ್ಲಿ ಕಾಲಹರಣ ಮಾಡದೇ ಸಿಕ್ಕ ಸಮಯದಲ್ಲಿ ಕಲಾಗುರುಗಳಾದ ಎಂ.ವಿ.ಮಿಣಜಗಿ, ಪ್ರೊ. ಸಾಠೆ, ಪ್ರೊ. ಅಂಬೇಕರ, ಪ್ರೊ. ದಂಡಾವತಿಮಠ ಮತ್ತು ಡಿ.ವಿ.ಹಾಲಭಾವಿ ಗುರುಗಳ ಮಾರ್ಗದರ್ಶನದಲ್ಲಿ ಪಠ್ಯಕ್ಕನುಗುಣವಾಗಿ ಚರ್ಚಿಸಿ ಅಧ್ಯಯನ ಕೈಗೊಂಡು ಕಲಾಕೃತಿಗಳನ್ನು ರಚಿಸುತ್ತಿದ್ದರು. ಸತತ ಅಧ್ಯಯನ ಮತ್ತು ಸ್ಪರ್ಧಾತ್ಮಕ ಚಟುವಟಿಕೆ, ಕಲಾಪ್ರದರ್ಶನದಲ್ಲಿ ಭಾಗವಹಿಸುವುದು ಪಾಟೀಲರಲ್ಲಿ ಸಮಯಪ್ರಜ್ಞೆಯನ್ನು ಮೂಡಿಸಿ ಒಬ್ಬ ಉತ್ತಮ ವಿದ್ಯಾರ್ಥಿ ಎಂದು ಗುರುತಿಸಿಕೊಳ್ಳುವಲ್ಲಿ ಸಹಕಾರಿಯಾದವು. ವಿದ್ಯಾರ್ಥಿ ದೆಸೆಯಲ್ಲಿ ಇವರು ಕಲಾಕೃತಿಗಳನ್ನು ವಿವಿಧ ಮಾಧ್ಯಮದಲ್ಲಿ ಚಿತ್ರಿಸುತ್ತಾ ಕಲಾಕೃತಿಗಳಲ್ಲಿ ಹಲವಾರು ಪ್ರಯೋಗಗಳನ್ನು ಮಾಡುತ್ತಾ ಯಾವುದೇ ಒಂದು ಶೈಲಿಗೆ ಬದ್ಧರಾಗದೆ ಹಲವಾರು ವಿಭಿನ್ನ ಶೈಲಿಗಳಲ್ಲಿ ಕಲಾಕೃತಿಗಳನ್ನು ರಚಿಸುತ್ತಿದ್ದರು. ೧೯೭೨ ರಲ್ಲಿ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯ ಆರ್ಥಿಕ ನೆರವಿನಿಂದ ಹುಬ್ಬಳ್ಳಿಯ 'ಚೇಂಬರ್ ಆಫ್ ಕಾಮರ್ಸ್' ಹಾಲ್‌ನಲ್ಲಿ ಇವರು ಎರಡನೇ ಬಾರಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಿದರು ಮತ್ತು ೧೯೭೦ ರಲ್ಲಿ ಹೈದರಾಬಾದನಲ್ಲಿ ನಿಸರ್ಗ ಚಿತ್ರಣಗಳ ಭೂದೃಶ್ಯಗಳ ಪ್ರದರ್ಶನ ಏರ್ಪಡಿಸಿದರು. ಈ ಭೂದೃಶ್ಯ ಕಲಾಕೃತಿಗಳನ್ನು ಜಲವರ್ಣ ಮಾಧ್ಯಮವಾದ ಅಕ್ರೆಲಿಕ್ ಮತ್ತು ಇಂಡಿಯನ್ ಇಂಕ್ ಮಾಧ್ಯಮಗಳಲ್ಲಿ ರಚಿತಗೊಂಡಿದ್ದು,



ಭಾವಚಿತ್ರ ಪ್ರಾತ್ಯಕ್ಷಿಕೆ ನೀಡುತ್ತಿರುವ ಕಲಾವಿದ ಶಂಕರ ಪಾಟೀಲರು



ಚಿತ್ರರಚನೆಯಲ್ಲಿ ನಿರತ ಯುವ ಕಲಾವಿದ ಶಂಕರ ಪಾಟೀಲರು

ಹೆಚ್ಚಿನ ಸಂಖ್ಯೆಯಲ್ಲಿ ಕಲಾರಸಿಕರ ಗಮನ ಸೆಳೆದವು. ಹೀಗೆಯೇ ಪಾಟೀಲರು ೧೯೭೩ ರಲ್ಲಿ ಮುಂಬಯಿಯ ಪ್ರಸಿದ್ಧ ಆರ್ಟ್ ಗ್ಯಾಲರಿಯಾದ 'ತಾಜ್ ಆರ್ಟ್ ಗ್ಯಾಲರಿ'ಯಲ್ಲಿ ತಾವು ತೆಗೆದ ಛಾಯಾಚಿತ್ರಗಳ ಪ್ರದರ್ಶನ ಏರ್ಪಡಿಸಿದರು. ದೇಶ-ವಿದೇಶ ಕಲಾವಿದರುಗಳ ಪ್ರಶಂಸೆಗೆ ಪಾತ್ರರಾದರು. ಈ ರೀತಿಯಾಗಿ ಶ್ರೀ ಶಂಕರ ಪಾಟೀಲರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಅಧ್ಯಯನದ ಜೊತೆಗೆ ಇಂತಹ ಹಲವಾರು ಕಲಾಚಟುವಟಿಕೆ, ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿ ಹಿರಿಯ ಕಲಾವಿದ, ಕಲಾಗುರುಗಳ ಮೆಚ್ಚುಗೆಯ ವಿದ್ಯಾರ್ಥಿಯಾಗಿ ಹೆಸರು ಗಳಿಸಿದ್ದರು.

ಅಧ್ಯಾಪಕ ವೃತ್ತಿ :

ವೃತ್ತಿ ಜೀವನ ಎಂಬುದು ಪ್ರತಿಯೊಬ್ಬ ಮನಷ್ಯನ ಜೀವನದ ಮಹತ್ವದ ಹಂತ ಎಂದು ಹೇಳಬಹುದು ವಿದ್ಯಾರ್ಥಿಜೀವನ ಮೊದಲ ಮೆಟ್ಟಿಲಾದರೆ, ಬದುಕು ಸಾಗಿಸಲು ವೃತ್ತಿ ಜೀವನ ಎರಡನೇ ಮೆಟ್ಟಿಲು. ಶಂಕರ ಪಾಟೀಲರು ತಮ್ಮ ವಿದ್ಯಾರ್ಥಿ ಜೀವನವನ್ನು ಶ್ರೀ ಜಿ.ಎಸ್.ದಂಡಾವತಿಮಠ ಮತ್ತು ಶ್ರೀ ವಿ.ಆರ್. ಅಂಬೇಕರರವರ ಮಾರ್ಗದರ್ಶನಲ್ಲಿ ಉತ್ತಮವಾದ ಶಿಕ್ಷಣವನ್ನು ಪಡೆದು ಗುರುಗಳ ಪ್ರೀತಿ-ಪಾತ್ರರಾಗಿ ಮುಂದಿನ ವೃತ್ತಿ ಜೀವನದ ದಾರಿಯನ್ನು ಹುಡುಕುವ ಮೊದಲೆ ವೃತ್ತಿಯೇ ಇವರನ್ನು ಹುಡುಕಿಕೊಂಡು ಬಂದಿತೆಂದರೆ ತಪ್ಪಾಗಲಾರದು. ೧೯೬೪ ರಲ್ಲಿ ಅಂದಿನ ರಾಜ್ಯದ ಮುಖ್ಯ ಮಂತ್ರಿಗಳಾದ ಎಸ್.ನಿಜಲಿಂಗಪ್ಪ ಮತ್ತು ಶೀಕ್ಷಣ ಸಚಿವರಾದ ಎಸ್.ಆರ್. ಕಂಠಿಯವರು ಕಲೆ ಕುರಿತು ಸಾಕಷ್ಟು ಆಸಕ್ತಿವುಳ್ಳವರಾಗಿದ್ದರು ಹಾಗೂ ಇವರ ಕಠಿಣ ಪರಿಶ್ರಮದಿಂದ ಕೇಂದ್ರಸರಕಾರದ ಮೂರನೇ ಪಂಚವಾರ್ಷಿಕ ಯೋಜನೇಯ ಅಡಿಯಲ್ಲಿ ಕರ್ನಾಟಕದಲ್ಲಿ ಒಂದೆರಡು ಕಲಾಶಾಲೆಗಳು ಮಂಜೂರಾದವು. ಕರ್ನಾಟಕದ ಕೇಂದ್ರ ಸ್ಥಳವಾದ ದಾವಣಗೇರಿಯಲ್ಲಿ ಕಲಾ ಶಾಲೆಯೊಂದನ್ನು ಪ್ರಾರಂಭಿಸಬೇಕೆಂದು ಹಿರಿಯ ಕಲಾವಿದ ಡಾ.ಎಂ.ವಿ. ಮಿಣಜಗಿ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿತು. ಅಂತೆಯೇ ೧೩ ಲಕ್ಷ ಅನುದಾನದೊಂದಿಗೆ ೧೯೬೪ರಿಂದಲೇ "ಸರಕಾರ ಚಿತ್ರಕಲೆ ಮತ್ತು ಕರಕುಶಲ ಶಾಲೆ" ಎಂಬ ಹೆಸರಿನ ಕಟ್ಟಡ ಕಾಮಗಾರಿ ಪ್ರಾರಂಭಗೊಂಡು ೨೨ ಎಕರೆ ೨೨ ಗುಂಟೆಗಳ ವಿಸ್ತಾರವಾದ ಜಾಗೆ ಮತ್ತು ೭ಲಕ್ಷ ರೂಪಾಯಿ ಅನುದಾನದೊಂದಿಗೆ ೧೯೬೮ರ ಹೊತ್ತಿಗೆ ಪೂರ್ಣಗೊಂಡಿತು. ಮುಂದಿನ ಪ್ರಕ್ರಿಯೇಯಾಗಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಅಹ್ವಾನಿಸಿದಾಗ ಶಂಕರ ಪಾಟೀಲರು ಅರ್ಜಿಸಲ್ಲಿಸಿದ್ದರು ಜೊತೆಗೆ ಕಲಾಧ್ಯಯನ ಪೂರ್ಣಗೊಳಿಸಿದ ಬಹಳಷ್ಟು ಕಲಾವಿದರುಗಳು ಅರ್ಜಿಸಲ್ಲಿಸಿದ್ದರು ಡಾ.ಎಂ.ವಿ.

ಮಿಣಜಗಿಯವರು ಸಂದರ್ಶನ ಸಮಿತಿಯ ಅಧ್ಯಕ್ಷತೆಯನ್ನು ವಹಿಸಿದ್ದರು ಈ ಸಮಿತಿಯ ಸಂದರ್ಶನ ಹಾಗೂ ಪ್ರಾಯೋಗಿಕ ಪರೀಕ್ಷೆಯಲ್ಲಿ ಶಂಕರ ಪಾಟೀಲ ಅವರ ಅರ್ಹತೆಯನ್ನು ಪರಿಗಣಿಸಿ ಉಪನ್ಯಾಸಕ ಹುದ್ದೆಗೆ ೧೯೬೪ರಲ್ಲಿ ನೇಮಕಮಾಡಿದರು ದಾವಣಗೇರೆಯ "ಸರಕಾರಿ ಚಿತ್ರಕಲೆ ಮತ್ತು ಕರಕುಶಲ ಕಲಾಶಾಲೆಯಲ್ಲಿ ಸೇವೆ ಪ್ರಾರಂಭವಾಗುತ್ತದೆ. ಕಲಾಶಾಲೆಯ ಪ್ರಾರಂಭದಲ್ಲಿ ವಿದ್ಯಾರ್ಥಿಗಳ ಕಲಾ ಅಧ್ಯಯನಕ್ಕೆ ಬೇಕಾಗುವ ಸಲಕರಣೆ, ಪೀಠೋಪಕರಣಗಳ ಸೌಲಭ್ಯ, ಕಲಾಸಾಮಗ್ರಿ ಇನ್ನಿತರ ಸೌಲಭ್ಯಗಳ ಕೊರತೆಯನ್ನು ಎದುರಿಸುತ್ತಿತ್ತು. ಆದರೂ ಮುಂದಿನ ದಿನಗಳಲ್ಲಿ ಸರಕಾರ ಸೌಲಭ್ಯವನ್ನು ಪಡೆಯುವಲ್ಲಿ ಕಲಾಶಾಲೆಯ ಪ್ರಾಚಾರ್ಯರ ಹಾಗೂ ಇನ್ನಿತರ ಉಪನ್ಯಾಸಕರ ಸಹೋದ್ಯೋಗಿಗಳ ನೇರವಿನಿಂದ ಯಶಸ್ವಿಯಾದರು ಪಾಟೀಲರು ಕಲಾಶಾಲೆಯಲ್ಲಿ ತಮ್ಮ ವಿದ್ಯಾರ್ಥಿಗಳ ಜೊತೆ ಚಿತ್ರಕಲಾ ಶಿಕ್ಷಣದ ಮಹತ್ವದ, ಚಿತ್ರಕಲಾ ಶಿಕ್ಷಣದಲ್ಲಿಯ ಹಂತಗಳು ಇವುಗಳ ಕುರಿತು ತಾವು ಅಧ್ಯಾಯನ ಮುಗಿಸಿಬಂದ ಸರ್.ಜೆ.ಜೆ. ಸ್ಕೂಲ್ ಆಫ್ ಆರ್ಟ್ ಮತ್ತು ಹಾಲಬಾವಿ ಸ್ಕೂಲ್ ಆಫ್ ಆರ್ಟ್‌ನಲ್ಲಿ ಅಧ್ಯಾಯನ ಮಾಡಿಬಂದ ಅನುಭವದಲ್ಲಿ ವಿದ್ಯಾರ್ಥಿಗಳಿಗೆ ಚಿತ್ರಕಲಾ ಶಿಕ್ಷಣದ ಮಹತ್ವವನ್ನು ತಿಳಿಸುತ್ತ ಹಾಗೂ ಚಿತ್ರಕಲೆಯ ಪ್ರಾಯೋಗಿಕ ತರಗತಿಗಳನ್ನು ಪ್ರಾರಂಭಿಸಿದರು. ಚಿತ್ರಕಲಾ ಶಿಕ್ಷಣಕ್ಕೆ ಆಸಕ್ತಿವಹಿಸಿ ಈ ಕಲಾಶಾಲೆಯತ್ತ ಆಕರ್ಷಿತರಾಗಿ ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ತರಗತಿಗಳಿಗೆ ಪ್ರವೇಶ ಪಡೆದು ಶಂಕರ ಪಾಟೀಲರ ಮಾರ್ಗದಶನದಲ್ಲಿ ಕಲಾಅಧ್ಯಯನದಲ್ಲಿ ಸಾಕಷ್ಟು ವಿದ್ಯಾರ್ಥಿಗಳು ಪಾಲ್ಗೊಳುತ್ತಾರೆ.

ಕಲಾಶಾಲೆಯ ವಿವಿಧ ವಿಭಾಗದ ವಿದ್ಯಾರ್ಥಿಗಳನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯ ಚಿತ್ರಕಲಾ ಸ್ಪರ್ಧೆ ಮತ್ತು ಇನ್ನು ಹಲವಾರು ಸಂಘಟನೆಗಳು ಏರ್ಪಡಿಸುವ ಕಲಾ ಸ್ಪರ್ಧೆ ಮೈಸೂರು ದಸರಾ ಚಿತ್ರಕಲಾ ಪ್ರದರ್ಶನಗಳಲ್ಲಿ ಕಲಾಶಾಲೆಯ ತಮ್ಮ ಸಹಉಪನ್ಯಾಸಕ ಮಿತ್ರರೊಂದಿಗೆ, ವಿದ್ಯಾರ್ಥಿಗಳೊಂದಿಗೆ ಪಾಲ್ಗೊಂಡು ಸ್ಪರ್ಧೆ, ಪ್ರದರ್ಶನಗಳ ಮಹತ್ವವನ್ನು ತಿಳಿಹೇಳುವದರೋಂದಿಗೆ ಸಂಪೂರ್ಣ ಸದುಪಯೋಗವನ್ನು ವಿದ್ಯಾರ್ಥಿಗಳಿಗೆ ಮಾಡಿಕೊಡುತ್ತಾರೆ ಅಲ್ಲದೆ ವಿದ್ಯಾರ್ಥಿಗಳ ಅಧ್ಯಯಕ್ಕೆ ಹಾಗೂ ಅವರ ಪ್ರತಿಭಾ ಸಾಮಾರ್ಥ್ಯಕ್ಕೆ ಸೂಕ್ತವಾದ ವೇದಿಕೆಯನ್ನು ನಿರ್ಮಾಣ ಮಾಡುವದರಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರು. ಮತ್ತು ವಿದ್ಯಾರ್ಥಿಗಳೊಂದಿಗೆ ಪ್ರಕ್ರತಿ ಚಿತ್ರಣ (ಲ್ಯಾಂಡಸ್ಕೇಪ)ದಂಥಹ ಚಿತ್ರಗಳನ್ನು ಬಿಡಿಸಲು ಹಂಪೆ, ಬಾದಾಮಿ, ಬಿಜಾಪೂರದಂತಹ ಐತಿಹಾಸಿಕ ಪ್ರವಾಸಿ ಸ್ಥಳಗಳಿಗೆ ಸುಮಾರು ಒಂದು ವಾರದ ಪ್ರವಾಸ ಕೈಗೊಂಡು ಶೈಕ್ಷಣಿಕ ಪ್ರವಾಸದ ಜೊತೆಗೆ

ಅಲ್ಲಿನ ಪ್ರಕೃತಿ ಚಿತ್ರಣಗಳನ್ನು ನೋಡಿ ಸ್ಥಳದಲ್ಲಿಯೇ ಕುಳಿತು ಪ್ರಾತ್ಯಕ್ಷಿಕೆಯನ್ನು ನೀಡಿದದ್ದನ್ನು ಅವರ ವಿದ್ಯಾರ್ಥಿಗಳು ಇಂದಿಗೂ ಸ್ಮರಿಸಿಕೊಳ್ಳುತ್ತಾರೆ. ವಿದ್ಯಾರ್ಥಿಗಳು ಚಿತ್ರಿಸಿದ ಚಿತ್ರಗಳನ್ನು ಪರಿಶೀಲಿಸಿ ತಪ್ಪು ಒಪ್ಪುಗಳನ್ನು ತಿಳಿಹೇಳುತ್ತಿದ್ದರು. ಇಂತಹ ನಿರಂತರ ಕಲಾಚಟುವಟಿಕೆಯ ಮೂಲಕ ಕಲಾಶಾಲೆಯ ಅನೇಕ ವಿದ್ಯಾರ್ಥಿಗಳು ರಾಜ್ಯ ರಾಷ್ಟ್ರ-ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ-ಪುರಸ್ಕಾರಗಳನ್ನು ಪಡೆದು ಕಲಾ ಮಹಾವಿದ್ಯಾಲಯದ ಕೀರ್ತಿಗೆ ಪಾತ್ರರಾಗಿದ್ದಾರೆ ಕಲಾಶಾಲೆಯ ಕೀರ್ತಿ ಉತ್ತುಂಗಕ್ಕೇರಲು ಶಂಕರ್ ಪಾಟೀಲರ ಪಾತ್ರವು ಗಣನೀಯವಾಗಿದೆ. ಎಂದು ಅವರ ಸಹಉಪನ್ಯಾಸಕರು ಹೇಳುತ್ತಾರೆ. ಇಂತಹ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳೊಂದಿಗೆ ತಮ್ಮನ್ನು ತೊಡಗಿಸಿಕೊಂಡು ವಿದ್ಯಾರ್ಥಿಗಳ ಪ್ರೀತಿ ಪಾತ್ರರಾಗಿ ಆದರ್ಶ ಶಿಕ್ಷಕರಾಗಿ ಗುರುತಿಸಿಕೊಂಡಿದ್ದರು. ೧೯೭೫ ರಲ್ಲಿ ಕಲಾಶಾಲೆ ಪ್ರಾಚಾರ್ಯ ಹುದ್ದೆಗೆ ಲೋಕಸೇವಾ ಆಯೋಗವು ಅರ್ಜಿ ಅಹ್ವಾನಿಸಿತ್ತು ಆ ಸಂದರ್ಭದಲ್ಲಿ ಶಂಕರ ಪಾಟೀಲರು ಹುದ್ದೆಗೆ ಅರ್ಜಿಸಲ್ಲಿಸಿದ್ದರು ಜೊತೆಗೆ ಸಹ ಉಪನ್ಯಾಸಕರಾದ ವೈ. ಎಚ್. ಸೂಗೂರು. ವಿ. ಬಿ. ಹಿರೇಗೌಡರ ಟಿ. ವಿ. ಗಣೇಶಗುಡಿ. ಶಿರ್ಕೆ. ಮತ್ತು ರಾಜ್ಯದ ೧೫ ಇತರೆ ಹಿರಿಯ ಕಲಾವಿದರು ಸಹ ಪ್ರಾಚಾರ್ಯರ ಹುದ್ದೆಗೆ ಅರ್ಜಿಸಲ್ಲಿಸಿದ್ದರು. ಪ್ರಾಚಾರ್ಯರ ಹುದ್ದೆಯಲ್ಲಿ ಸಂಪೂರ್ಣ ಯಶಸ್ವಿಯಾಗಿ ಇನ್ನೇನು ಹುದ್ದೆಯ ಸ್ಥಾನವನ್ನು ಅಲಂಕರಿಸುವ ಆಶಾವಾದವನ್ನು ಹೊಂದಿದ್ದ ಪಾಟೀಲರಿಗೆ ಅದು ಕೈತಪ್ಪಿಹೋಯಿತಂತೆ ನಂತರ ಪ್ರಾಚಾರ್ಯರ ಹುದ್ದೆಗೆ ಅದೇ ಕಾಲೇಜಿನ ವಿ. ಬಿ. ಹಿರೇಗೌಡರರವರು ನೇಮಕಗೊಂಡರು. ಆದರೂ ತಮ್ಮ ಸರಳ ಸಜ್ಜನಿಕೆಯ ಪ್ರಾಮಾಣಿಕ ನಿಷ್ಠೆ ಸಮಯ ಪ್ರಜ್ಞೆಯಿಂದ ಪಾಟೀಲರು, ಆ ಸಂಸ್ಥೆಯಲ್ಲಿ ಸೇವೆಸಲ್ಲಿಸಿದ್ದಾರೆ.

"ಮಕ್ಕಳಿಗೆ ಸ್ವಾತಂತ್ರ್ಯ ಕೊಡಬೇಕು ಎಂದು ನಾವು ಬರಿ ಹೇಳುತ್ತೇವೆ, ಎಷ್ಟೋ ಬಗೆಯ ಒತ್ತಾಯಗಳನ್ನು ಹೇರುತ್ತೇವೆ. ಇಂತಹದ್ದೇ ತರದಲ್ಲಿ ಚಿತ್ರರಚನೆ ಆಗಬೇಕು ಎಂದು ಹೇಳುತ್ತೇವೆ. ಅನೇಕ ನಿಯಮಗಳನ್ನು ಹಾಕಿಕೊಟ್ಟು ಅವರಲ್ಲಿರುವ ಪ್ರತಿಭೆ, ಸ್ವಂತಿಕೆಯನ್ನು ಹೊರಬರದಂತೆ ಮಾಡುತ್ತೇವೆ. ಶಿಸ್ತು ಕಲಿಸುವ ಮಹಾದಾಸೆಯಲ್ಲಿ ವ್ಯಕ್ತಿತ್ವ ವಿಕಾಸ ಆಗದ ಹಾಗೇ ಶಿಸ್ತಿನಿಂದ ನೋಡಿಕೊಳ್ಳುತ್ತೇವೆ. ಆದರೆ ಮನಸ್ಸಿನ ಆಳದಲ್ಲಿ ಅಡಗಿದ ಅನುಭವಗಳು ಮೇಲಕ್ಕೆ ಬರಲು ಸ್ವಾತಂತ್ರ್ಯವಿರಬೇಕು. ಶರೀರ ಮತ್ತು ಮನಸ್ಸು ಇವೆರಡನ್ನೂ ಮೀರಿದ ಒಳ ಅರಿವಿನಲ್ಲಿ ಕಲೆ ಹುಟ್ಟುವುದರಿಂದ ಕಲಾಶಿಕ್ಷಣವೆಂದರೆ ಬರಿ ಪಾಠ ಹೇಳುವುದಲ್ಲ. ಚಿತ್ರಬಿಡಿಸಲು ಕಲ್ಪಿಸುವುದಲ್ಲ,

ಸಂಯೋಜನಾ ನಿಯಮಗಳನ್ನು ಹೇಳಿಕೊಡುವುದಲ್ಲ"[೩] ಎಂಬಂತೆ ಪಾಟೀಲರು ತಮ್ಮ ಅಧ್ಯಾಪಕ ವೃತ್ತಿಯಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ಒತ್ತಡಗಳನ್ನು ಹೇರದೆ, ಕಟ್ಟುಪಾಡುಗಳನ್ನು, ನಿಯಮಗಳನ್ನು ಹೇರದೆ ಕಲಾಕೃತಿ ರಚನೆ ಮತ್ತು ಪ್ರಾಯೋಗಿಕ ಚಟುವಟಿಕೆಗಳಲ್ಲಿ ಪೂರ್ತಿ ಸ್ವಾತಂತ್ರ್ಯ ಮತ್ತು ಸಹಕಾರವನ್ನು ನೀಡುತ್ತಿದ್ದರು.

"ಕಲಾ ಶಾಲೆಗಳು ಕಲಾವಿದರನ್ನು ಸೃಷ್ಟಿಸುವ ಮಹತ್ವದ ಸ್ಥಳಗಳು"[೪] ಎಂದು ನಂಬಿದ್ದ ಪಾಟೀಲರು ಅವುಗಳ ಸುಧಾರಣೆಯ ಬಗ್ಗೆ ಆಲೋಚಿಸಿ ತಮ್ಮನ್ನು ಆದಿಸೆಯಲ್ಲಿ ತೊಡಗಿಸಿಕೋಳ್ಳುತ್ತಾರೆ, ವಿದ್ಯಾರ್ಥಿಗಳು ಇರುವಲ್ಲಿಗೆ ಹೋಗಿ ವಿದ್ಯಾರ್ಥಿಗಳಿಗೆ ಹೊಸ ಹೊಸ ಅನೇಕ ವಿಚಾರಗಳನ್ನು ತಿಳಿಸುವ ಕಾಯಕವನ್ನು ಮಾಡುತ್ತಾರೆ. ವಿದ್ಯಾರ್ಥಿಗಳ ಮನಸ್ಸಿನಲ್ಲಿ ಮೂಡುವ ಹಲವಾರು ಪ್ರಶ್ನೆಗಳಿಗೆ, ಅನುಮಾನಗಳಿಗೆ ಸಂವಾದದಿಂದ ತಿಳುವಳಿಕೆ ಮತ್ತು ಚೈತನ್ಯವನ್ನು ನೀಡುತ್ತಿದ್ದರು. ಇದರಿಂದಾಗಿ ಹಲವಾರು ವಿದ್ಯಾರ್ಥಿಗಳು ಇವರ ಶಿಷ್ಯತ್ವವನ್ನು ಪಡೆಯುತ್ತಿದ್ದರಂತೆ ಅಂತಹ ಆಕರ್ಷಕ ವ್ಯಕ್ತಿತ್ವವನ್ನು ಪಾಟೀಲರು ಹೊಂದಿದ್ದರು.

"ಕಲೆಯ, ಕಾಲದ ಕನ್ನಡಿ ಎನ್ನುವುದಾದರೆ ಕಲಾ ಪ್ರಜ್ಞೆಯುಳ್ಳ ಪ್ರತಿಯೊಬ್ಬನು ಸಮಕಾಲಿನ ನವ್ಯ ಕಲೆಯನ್ನು ತಿಳಿಯಲು ಬಯಸುತ್ತಾನೆ. ನವ್ಯಕಲೆ ಎಂದರೇನು ಮತ್ತು ನವ್ಯಕಲೆ ಏನನ್ನು ಹೇಳಲು ಹವಣಿಸುತ್ತದೆ"[೫] ಎಂಬ ಪ್ರಶ್ನೆಗಳು ಸಾಮಾನ್ಯವಾಗಿ ವಿದ್ಯಾರ್ಥಿಗಳಲ್ಲಿ ಕಾಡುತ್ತಿದ್ದು, ಈ ಪ್ರಶ್ನೆಗಳಿಗೆ ಶಂಕರ ಪಾಟೀಲರು ಸಮಕಾಲೀನ ಕಲೆಯ ಬಗ್ಗೆ ಸರಳವಾದ ತಿಳುವಳಿಕೆಯನ್ನು ಮಾಡಿಸಿ ಅದರ ಹೆಚ್ಚಳದ ಬಗ್ಗೆ ತಮ್ಮ ಕಲಾವಿದ್ಯಾರ್ಥಿಗಳಿಗೆ ಅರಿವನ್ನು ಮೂಡಿಸುತ್ತಾರೆ ನವ್ಯಕಲೆಯ ಕುರಿತು ಕನ್ನಡದಲ್ಲಿ ಕಲಾ ಗ್ರಂಥಗಳ ಕೊರತೆಯಿದ್ದು ಚಿತ್ರಕಲಾ ಶಾಲೆಗಳಿಗೆ, ಕಲಾ ಸಂಗ್ರಹಾಲಯಗಳಿಗೆ ಮತ್ತು ಕಲಾಪ್ರದರ್ಶನಾಲಯಗಳಿಗೆ ವಿದ್ಯಾರ್ಥಿಗಳನ್ನು ಕರೆದೊಯ್ದು ಸಮಯೋಚಿತವಾಗಿ ತಮ್ಮ ವಿಶೇಷ ಆಸಕ್ತಿ ಹಂಬಲ ತೋರಿಸಿ ಪಾಟೀಲರು ಸಮಕಾಲೀನ ಕಲೆಯ ಬಗೆಗಿನ ತೊಡಕುಗಳನ್ನು ನಿವಾರಿಸುತ್ತಿದ್ದರು. ಪಾಟೀಲರು ಸರ್. ಜೆ. ಜೆ. ಸ್ಕೂಲ್ ಆಫ್ ಆರ್ಟ್ ಮುಂಬಯಿಯಲ್ಲಿ ಅಕಾಡೆಮಿಕ್ ಪದ್ಧತಿಯಲ್ಲಿ ವ್ಯಾಸಂಗ ಮಾಡಿದ್ದು, ನವ್ಯ ಕಲೆಯ ಹಲವಾರು ವಿಷಯಗಳ ಬಗ್ಗೆ

---

೩. ಶಂಕರ ಪಾಟೀಲ (ಸಂ) ಚಿತ್ರಕಲಾ ಚಿಂತನೆ, ಪು. ೧೦೦.
೪. ಅದೇ, ಪು. ೧೦೧.
೫. ಅದೇ, ಪು. ೯೮.

ಪ್ರಯೋಗಗಳ ಬಗ್ಗೆ ತಿಳಿದವರಾಗಿದ್ದು, ವಿದ್ಯಾರ್ಥಿಗಳಿಗೆ ಅಷ್ಟೇ. ಅಲ್ಲದೆ ಕಲಾಸಕ್ತರಿಗೂ ಆಸಕ್ತಿ ಮೂಡಿಸುವ ಶ್ರದ್ಧೆ, ಉತ್ಸಾಹ ಹಾಗೂ ಲವಲವಿಕೆ ಉಳ್ಳವರಾಗಿದ್ದರು.

ಹೀಗೆ ಪಾಟೀಲರು ತಮ್ಮ ಅಧ್ಯಾಪಕ ವೃತ್ತಿಯಲ್ಲಿ ತರಗತಿಯಲ್ಲಿ ಮಾಧ್ಯಮ ಹಾಗೂ ಪರಿಕರಗಳ ಯೋಗ್ಯ ಬಳಕೆಯ ಜೊತೆಗೆ ತೋರಿರುವ ಕಲಾಕೌಶಲ್ಯ ಅನುಕರಣೆಯೆ. ಅಲ್ಲದೆ ಅವರು ಕಲಾಶಿಕ್ಷಣ ಸಂಸ್ಥೆಗಳ ಜೊತೆ ಕಲಾ ಸಂಗ್ರಹಾಲಯ ಹಾಗೂ ಪ್ರದರ್ಶನಾಲಯ ಮತ್ತು ಜನಸಂಪರ್ಕ ಸಭೆಗಳಲ್ಲಿ, ಚರ್ಚಾಸ್ಪರ್ಧೆ, ಪ್ರದರ್ಶನಗಳಲ್ಲಿ, ವರ್ಷದುದ್ದಕ್ಕೂ ಒಂದಲ್ಲ ಒಂದು ರೀತಿಯಲ್ಲಿ ಸತತವಾಗಿ ವಿದ್ಯಾರ್ಥಿಗಳೊಡನೆ ಭಾಗವಹಿಸುತ್ತಿದ್ದರು.

"ಮಕ್ಕಳ ಶಿಕ್ಷಣದಲ್ಲಿ ಕಲೆಗೆ ಹೆಚ್ಚಿನ ಸ್ಥಾನವಿದೆ ಎಂದಾಕ್ಷಣ, ಮಕ್ಕಳನ್ನು ಕಲಾವಿದರನ್ನಾಗಿ ಮಾಡುವ ಶಿಕ್ಷಣ ಎಂದೇನೂ ಅರ್ಥವಲ್ಲ. ಆದರೆ ಈ ಕಲಾಶಿಕ್ಷಣದಿಂದ ಮಕ್ಕಳಲ್ಲಿ ತಮ್ಮ ಭಾವನೆಗಳಿಗೆ ರೂಪಕೊಡುವ ಒಂದು ಶಿಸ್ತು ಹಾಗೂ ಸರಣಿ ಬೆಳೆಯುತ್ತದೆ. ವಸ್ತು ಹಾಗೂ ಅದರ ಗುಣ, ರೂಪ, ಸ್ವರೂಪ ಇವೆರಡನ್ನೂ ಅರ್ಥಮಾಡಿಕೊಳ್ಳುವ ಒಳ ಅರಿವು ಹಾಗೂ ಚೇತನ ಮೂಡುವಲ್ಲಿ ಸಹಕಾರಿಯಾಗುತ್ತದೆ."[೬] ಆದ್ದರಿಂದ ಶಿಕ್ಷಣ ಎಂದರೆ ನಿರ್ದೇಶಿಸುವುದಲ್ಲ. ಸಂತೋಷದಲ್ಲಿ ಮುಕ್ತವಾದ ಸಾಮರಸ್ಯದಿಂದ ಅಭಿವ್ಯಕ್ತಿಯನ್ನು ವ್ಯಕ್ತಪಡಿಸುವದಾಗಿದೆ ಅಲ್ಲದೆ ಪರಿಸರವೇ ನಿಜವಾದ ಶಿಕ್ಷಣವಾಗಿದ್ದು, ಅಂತಹ ಸ್ಥಳವನ್ನು ವ್ಯವಸ್ಥಿತಗೊಳಿಸಿ ಪ್ರತಿಭಾವಂತ ಕಲಾವಿದ್ಯಾರ್ಥಿಗಳನ್ನು ಸಂಘಟಿಸುವದರ ಜೊತೆಗೆ ಮುಖ್ಯಸ್ಥರಾಗಿ, ಮಾರ್ಗದರ್ಶಿಯಾಗಿ, ಸಲಹೆಗಾರರಾಗಿ, ಸಹವಾಸಿ ಸಂಗಾತಿಯಾಗಿ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಿ ಕಲ್ಪನಾಶಕ್ತಿ ಅಭಿವೃದ್ಧಿಗೆ ಮತ್ತು ಕಲಾ ಸೃಷ್ಟಿಗೆ ಅವಕಾಶ ಕಲ್ಪಸುವ ಮನೋಭಾವನ್ನು ಹೊಂದಿರಬೇಕಾಗುತ್ತದೆ. ಹೀಗೆ ವಿದ್ಯಾರ್ಥಿಗಳಿಗೆ ಅಂತರ್ ಶಿಸ್ತೀಯ ಶಿಕ್ಷಣದ ಜೊತೆಗೆ ಹೊರ ಜಗತ್ತಿನಲ್ಲಿ ಸಂಪರ್ಕವನ್ನು ಕಲ್ಪಿಸಿ ಸಂಬಂಧ ಬೆಳೆಸುವ ಸ್ಥಿತಿಯನ್ನು ತಮ್ಮ ಅಧ್ಯಾಪಕ ವೃತ್ತಿಯಲ್ಲಿ ಮಾಡುತ್ತಾಬಂದಿರುವುದು ಪಾಟೀಲರ ವಿಶೇಷ ಗುಣವಾಗಿದೆ. ಅಲ್ಲದೆ ಪಾಟೀಲರು ಶಿಕ್ಷಣದಲ್ಲಿ ಕಲೆಯ ಉದ್ದೇಶ ಅಥವಾ ಗುರಿ ಏನು? ಎಂಬುದರ ಕುರಿತು ಇಡಿಯಾಗಿ ಕಲಾಕೃತಿಗಳ ಮೂಲಕ ಸಂಪೂರ್ಣ ಮಾರ್ಗದರ್ಶನ ಪದ್ಧತಿಯಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ.

---

೬. ಶಂಕರ ಪಾಟೀಲ (ಸಂ) ಚಿತ್ರಕಲಾ ಚಿಂತನೆ, ಪು. ೪೮.

ದಾವಣಗೆರೆಯ ಚಿತ್ರಕಲಾ ಮಹಾವಿದ್ಯಾಲಯದ “ವಾಣಿಜ್ಯೋದ್ಯಮ ಕಲಾ” ವಿಭಾಗದ ಮುಖ್ಯಸ್ಥರಾಗಿದ್ದಾಗ ಪಾಟೀಲರಿಗೆ ಸಮಗ್ರ ಜೀವನದ ದಟ್ಟವಾದ ಅನುಭವಗಳು ಇದ್ದಾಗ್ಯೂ, ಅವರೊಬ್ಬ ಕಲಾಶಿಕ್ಷಕರಾಗಿ ಅನೇಕ ಕಲಾ ಪ್ರಕಾರಗಳ ಬಗೆಗೆ ವಿದ್ಯಾರ್ಥಿಗಳಿಗೆ ತಿಳಿಸಬೇಕೆನ್ನುವ ಮಹದಾಸೆಯನ್ನು ಹೊಂದಿದ್ದರು. ಜಗತ್ತಿನ ಶ್ರೇಷ್ಠ ಕಲಾವಿದರ ಕೃತಿಗಳ ಹಿರಿಮೆಯನ್ನು ಗುರುತಿಸಿ ವಿದ್ಯಾರ್ಥಿಗಳಿಗೆ ಹೇಳಲು ಹೊರಟು ಸ್ವತಃ ತಾವೇ ಕಾಲಕಾಲಕ್ಕೆ ಆಯಾ ಕಲಾವಿದರ ಪ್ರಭಾವಕ್ಕೆ ಒಳಗಾಗಿದ್ದರು ಎನ್ನುವುದು ಅವರನ್ನು ಸುಮಾರು ವರ್ಷಗಳಿಂದ ಬಲ್ಲ ಸಹ ಅದ್ಯಾಪಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಪಾಟೀಲರ ಸರಳ ಹಾಗೂ ಸಾಧು ಸ್ವಭಾವ ಅವರನ್ನು ವಿಸ್ಮಯದ ಕಣ್ಣುಗಳಿಂದ ಪರಿಸರವನ್ನು, ವಿದ್ಯಾರ್ಥಿಗಳನ್ನು, ಶಾಲಾ ಪರಿಸರವನ್ನು, ಜನರನ್ನು, ಜಗತ್ತನ್ನು ನೋಡುವಂತೆ ಮಾಡಿದೆ. ಏಕೆಂದರೆ ಅವೇ ಕಣ್ಣುಗಳು ಅವರನ್ನು ಕಲಾಶಿಕ್ಷಕರನ್ನಾಗಿ, ಒಬ್ಬ ಕಲಾವಿದರನ್ನಾಗಿ ಮಾಡಿದೆ.

“ನಿಷ್ಕಪಟ ಹಾಗೂ ಪರಿಶುದ್ಧವಾದ ಮನಸುಳ್ಳವನಿಗೆ ಜೀವನ ನಡೆಸುವುದು ಕಷ್ಟವಾದರೂ ಕಲಾವಿದನಾಗುವುದು ಸುಲಭದ ಕೆಲಸವಾಗುತ್ತದೆ.”[೭] ಇವೆರಡನ್ನೂ ಸಮನ್ವಯಗೊಳಿಸಿ ಸಾಧಿಸಿಕೊಂಡು ಕಲಾಶಾಲೆಯಲ್ಲಿ ಸುದೀರ್ಘ ಅವಧಿಯವರೆಗೆ ಅಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಸೇವೆಯನ್ನು ಸಲ್ಲಿಸಿ ಸಫಲತೆಯನ್ನು ಪಡೆದಿದ್ದಾರೆ.

“ಪಾಟೀಲರು ಅಧ್ಯಾಪಕರಾಗಿ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿರುವ ಸಂದರ್ಭದಲ್ಲಿ ಸಹ ಅಧ್ಯಾಪಕರಲ್ಲಿ ಅಷ್ಟೇ ವಿನಮ್ರದಿಂದ ನಡೆದುಕೊಳ್ಳುತ್ತಿದ್ದರು. ಮತ್ತು ಅವರಲ್ಲಿರುವ ಭೋದನಾ ವಿಷಯದ ಕುರಿತಾದಲ್ಲಿ ಸ್ವಭಾವಗಳಲ್ಲಿನ ವಿಶಿಷ್ಟತೆಗಳನ್ನು ಗಮನಿಸಿ ಪ್ರೋತ್ಸಾಹಿಸುವುದರ ಜೊತೆಗೆ ಅಂತಹವುಗಳನ್ನು ತಮ್ಮಲ್ಲಿಯೂ ಸಹ ಅಳವಡಿಸಿಕೊಳ್ಳುತ್ತಿದ್ದರು.”[೮] ಸದಾಕಲಿಯುವ ಹಂಬಲ ಪಾಟೀಲರಲ್ಲಿತ್ತು.

“ಪಾಟೀಲರು ಕಲಾಶಾಲೆಯ ವೇಳಾವಧಿಯ ನಂತರದಲ್ಲಿ (ಕಾಲೇಜ ಸಮಯವನ್ನು ಹೊರತುಪಡಿಸಿ) ಮೂರು, ನಾಲ್ಕು ಗಂಟೆಗಳಕಾಲ ಕಲೆ, ಸಂಗೀತ, ಸಾಹಿತ್ಯಿಕ ಹೀಗೆ ಇನ್ನಿತರ ವಿಷಯಗಳ ಕುರಿತು ಆಪ್ತರೊಡನೆ ಮತ್ತು ವಿದ್ಯಾರ್ಥಿಗಳೊಡನೆ ಸುದೀರ್ಘವಾಗಿ ಚರ್ಚಿಸುತ್ತಿದ್ದರು.

---

೭ ಸಂದರ್ಶನ -ಮಲ್ಲಿಕಾರ್ಜುನ ಜಾಧವ, ದಿನಾಂಕ : ೧೫-೦೫-೨೦೦೭.
೮. ಅದೇ.





ಕಲಾವಿದ ಶಂಕರ ಪಾಟೀಲರ ಮದುವೆ ಸಮಾರಂಭ

ಹೀಗೆ ಒಮ್ಮೆ ಪಾಟೀಲರು ಅವರ ವಿದ್ಯಾರ್ಥಿ ಮತ್ತು ಸಹಅಧ್ಯಾಪಕರಾಗಿ ಅವರ ಜೊತೆ ಸೇವೆ ಸಲ್ಲಿಸುತ್ತಿದ್ದ ಮಲ್ಲಿಕಾರ್ಜುನ ಜಾಧವರ ಮನೆಗೆ ಹೋಗಿ ಕಲೆಯ ವಿಷಯದ ಕುರಿತು ರಾತ್ರಿ ೯:೩೦ರ ಸುಮಾರು ಚರ್ಚಿಸುತ್ತಾ ಕುಳಿತವರು ಬೆಳಗಿನ ಸುಮಾರು ೪:೩೦ ರ ವರೆಗೆ ಸುದೀರ್ಘವಾದ ಚಿಂತನೆಯಲ್ಲಿ ಜಾದವ್ ಅವರು ಈಗಲೂ ಸ್ಮರಿಸಿಕೊಳ್ಳುತ್ತಾರೆ. ಹೀಗೆ ತಮ್ಮ ವೃತ್ತಿಜೀವನದಲ್ಲಿ ಎಷ್ಟೇ ತೊಡಕುಗಳು ಎದುರಾದರೂ ಅವುಗಳನ್ನು ಬದಿಗೊತ್ತಿ ಕಲಾಶಾಲೆಯ ಹಾಗೂ ವಿದ್ಯಾರ್ಥಿಗಳ ಜೊತೆ ಒಳ್ಳೆಯ ಆಶಾವಾದವನ್ನು ಹೊಂದಿ ಅಧ್ಯಾಪಕ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಅಧ್ಯಾಪಕರಾಗಿ ವಿದ್ಯಾರ್ಥಿಗಳಿಗೆ ಅಧ್ಯಯನ ನೀಡುವುದರ ಜೊತೆಗೆ ಪಾಟೀಲರ ಕಾರ್ಯಕ್ಷೇತ್ರ ಅವರ ಕಲಾಚಟುವಟಿಕೆ ಸತತ ಪರಿಶ್ರಮ ಕಲಾಕೃತಿಗಳಲ್ಲಿ ಹೊಸ ಹೊಸ ಪ್ರಯೋಗಗಳು ಇವರಿಗೆ ಅರಿವಿಲ್ಲದಂತೆಯೇ ಉನ್ನತಿಗೆ ದಾರಿದೀಪವಾಯಿತು. ಇದರ ಫಲವೇ ಇದೆ ಕಲಾಶಾಲೆಯಲ್ಲಿ (Promotion) ನೀಡಿ ಕಲಾಶಾಲೆಯ ಅನ್ವಯಿಕಕಲಾ ಅಪ್ಲೈಡ್ ಆರ್ಟ ವಿಭಾಗದ ಮುಖ್ಯಸ್ಥರಾನ್ನಾಗಿ ನೇಮಕಗೊಂಡರು. ಉನ್ನತ ಹುದ್ದೆಯನ್ನು ಅಲಂಕರಿಸಿದ ಪಾಟೀಲರು ತಮ್ಮ ಕೃತಿ ರಚನೆ ತೊಡಗಿಸಕೊಂಡು ವಿದ್ಯಾರ್ಥಿಗಳ ಜೊತೆ ತಮ್ಮ ಅಧ್ಯಾಪನ ಕಾರ್ಯವನ್ನು ಮುಂದುವರೆಸುತ್ತಾ ಪ್ರಾಯೋಗಿಕ ಪಾಠಗಳನ್ನು ಭೋಧಿಸುತ್ತಿದ್ದರು.

ವಿವಾಹ :

ಪಾಟೀಲರು ವಿದ್ಯಾರ್ಥಿ ಜೀವನದ ದಿನಗಳಲ್ಲಿ ಕರ್ನಾಟಕ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಸಂದರ್ಭದಲ್ಲಿ ಒಂದು ಹುಡುಗಿಯ ಗೆಳೆತನವಾಯಿತು. ನಂತರದ ದಿನಗಳಲ್ಲಿ ಗೆಳೆತನ ಗಟ್ಟಿಗೊಂಡು ಪ್ರೀತಿಯಲ್ಲಿ ಅಂಕುರಿಸಿ ೧೯೬೮ರಲ್ಲಿ ಮದುವೆಯೂ ಆಯಿತು.

ಪಾಟೀಲರು ದಾವಣಗೆರೆಯ ಚಿತ್ರಕಲೆ ಮತ್ತು ಕರಕುಶಲ ಕಲಾ ಶಾಲೆಯಲ್ಲಿ ವೃತ್ತಿ ಜೀವನವನ್ನು ಆರಂಭಿಸಿದ ಹಲವು ತಿಂಗಳ ನಂತರ ಕುಟುಂಬದ ಹಿರಿಯರೊಡನೆ ಹಾವೇರಿ ಜಿಲ್ಲೆಯ ತುಂಗಭದ್ರಾನದಿ ತೀರಿದ ಚೌಡದಾನಪುರ ಕ್ಷೇತ್ರದಲ್ಲಿ ಧಾರ್ಮಿಕ ವಿಧಿ ವಿಧಾನಗಳ ಮೂಲಕ ಸಂಪ್ರದಾಯಬದ್ಧವಾಗಿ ವಿವಾಹವಾದರು. ಇವರ ಮದುವೆಯನ್ನು ಖ್ಯಾತ ಕವಿ ಚೆನ್ನವೀರ ಕಣವಿಯವರು, ಬಸವರಾಜ ಕಟ್ಟಿಮನಿಯವರು ನಿಂತು ನೆರವೇರಿಸಿದ್ದಾರೆ.



ಶಂಕರ್ ಪಾಟೀಲ ದಂಪತಿಗಳ ದಾಂಪತ್ಯದ ಇಪ್ಪತ್ತೈದನೆಯ ವಾರ್ಷಿಕೋತ್ಸವ



ಶಂಕರ್ ಪಾಟೀಲರ ಪತ್ನಿ ಶ್ರೀಮತಿ ಪಾರ್ವತಿ, ಪುತ್ರರಾದ ನಯನ್ ಮತ್ತು ಸಫನ್

ಇವರ ಪತ್ನಿ ಪಾರ್ವತಿದೇವಿಯುವರು ದಾವಣಗೇರಿಯ ಮಹಿಳಾ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ಸೇವೆಯನ್ನು ಸಲ್ಲಿಸಿ ತಮ್ಮ ಕ್ಷೇತ್ರದಲ್ಲಿ ಆದರ್ಶ ಉಪನ್ಯಾಸಕಿ ಎಂದು ಗುರುತಿಸಿಕೊಂಡಿದ್ದಾರೆ.

ಪಾಟೀಲರ ಕಲೆಯ ಹಾಗೂ ಇನ್ನಿತರ ಕಾರ್ಯಚಟುವಟಿಕೆಗಳಲ್ಲಿ ಶ್ರೀಮತಿ ಪಾಟೀಲರ ಸಹಕಾರ ಗಣನೀಯವಾದದ್ದು ಪಾಟೀಲರ ಕಲಾಕೃತಿ ಕುರಿತು ಇನ್ನಿತರ ಚಟುವಟಿಕೆಗಳ ಕುರಿತು ಚರ್ಚಿಸಲು ಕಾಣಲು ಬರುವ ಪ್ರತಿಯೊಬ್ಬನನ್ನು ಗೌರವಿಸಿ ಬಂದವರನ್ನು ಆತ್ಮೀಯತೆಯಿಂದ ಮಾತನಾಡುವ ಸರಳ, ಸೌಜನ್ಯಪೂರ್ಣ ವ್ಯಕ್ತಿತ್ವದವರು. ಒಟ್ಟಾರೆಯಾಗಿ ಪಾಟೀಲರ ಕುಟುಂಬವು ಕಲೆಯನ್ನು ಗೌರವ ಪೂರ್ಣವಾಗಿ ಸ್ವೀಕರಿಸಿದ ಕುಟುಂಬ ಹೀಗಾಗಿ ಅದೊಂದು ಕಲಾವಿದರ ಕೂಡುಕುಟುಂಬ. ಮನೆಯ ಹೆಸರು ಕಲಾಭವನ.

"ವ್ಯಕ್ತಿಯ ಮಹತ್ವವಿರುವುದು ಅವನು ಎಂದೊ ಒಮ್ಮೆ ಸಾಧಿಸುವ ಮಹತ್ಕಾರ್ಯದಲ್ಲಲ್ಲ ಅದು ಅವನ ನಿತ್ಯ ಜೀವನದ ಸಾಮಾನ್ಯ ಘಟನೆಗಳಲ್ಲಿಯೂ ಅದು ವ್ಯಕ್ತವಾಗುತ್ತದೆ" ಪಾಟೀಲರ ಬದುಕಿನಲ್ಲಿಯೂ ನಾವು ಈ ಮಾತನ್ನು ಗುರುತಿಸುತ್ತೇವೆ ಪಾಟೀಲರ ವ್ಯಕ್ತಿತ್ವ ಅವರು ಜೀವನದಲ್ಲಿ ಪಾಲಿಸಿಕೊಂಡು ಬಂದ ಶಿಸ್ತು ಇವರು ಚಿತ್ರ ರಚಿಸುವಾಗಲೂ ಇಂತಹ ನಿಯಮವನ್ನು ಪಾಲಿಸಿಕೊಂಡು ಬಂದಿದ್ದರು. ಶುಭ್ರವಾದ ಬಿಳಿ ಶರ್ಟ (ಅಂಗಿ) ಅದರ ಮೇಲೆ ಕೋಟು ಟೈ ಪ್ಯಾಂಟ (ಸೂಟ್)ನ್ನು ಧರಿಸುತ್ತಿದ್ದರು ಕಪ್ಪು ವರ್ಣದ ಚರ್ಮದ ಬೂಟನ್ನು (ಶೂ)ಧರಿಸುತ್ತಿದ್ದರು. ಪಾಟೀಲರ ದಿನಚರಿಯ ಚಟುವಟಿಕೆಗಳು ಅಷ್ಟೇ ಅಚ್ಚುಕಟ್ಟಾಗಿವೆ ಬೆಳಿಗ್ಗೆ ಬೇಗನೆ ಎದ್ದು ದೈನಂದಿನ ಕೆಲಸಗಳನ್ನು ಮುಗಿಸಿ ಕೆಲ ಹೊತ್ತು ಹೊರಗೆ ಸುತ್ತಾಡಿಕೊಂಡು ವಾಯುವಿಹಾರಕ್ಕೆ ಹೋಗಿ ಬರುತ್ತಿದ್ದರು. ನಂತರ ಚಿತ್ರ ರಚಿಸಲು ಬೇಕಾಗುವ ಸಲಕರಣೆಗಳೊಂದಿಗೆ ಸಿದ್ಧವಾಗುತ್ತಿದ್ದರು.

ಸಾಮಾನ್ಯವಾಗಿ ವ್ಯಕ್ತಿಗಳು ಯಾವುದಾದರೊಂದು ಹವ್ಯಾಸಕ್ಕೆ ಆಧೀನರಾಗುವುದು ಸಾಮಾನ್ಯ ಸಂಗತಿ ಇದಕ್ಕೆ ಕಲಾವಿದರು ಹೊರತಾಗಿಲ್ಲ. ಈ ವಿಶಿಷ್ಟ ಜನರು ಸಂಗೀತಗಾರರಿರಬಹುದು. ಇವರಿಗೆ ಯಾವುದಾದರೊಂದು ಹವ್ಯಾಸ ಅಂಟಿಕೊಂಡಿರುವುದು ಸಾಮಾನ್ಯ ಪಾಟೀಲರು ಬಿಡುವಿನ ವೇಳೆಯಲ್ಲಿ ಆಗಾಗ್ಗೆ ಸಿಗರೇಟ್ ಸೇವನೆಯನ್ನು ಹವ್ಯಾಸವಾಗಿಟ್ಟು ಕೊಂಡಿದ್ದರು. ಪಾಟೀಲರ ಇನ್ನೊಂದು ಹವ್ಯಾಸವೆಂದರೆ ಸಂಗೀತ ಕೇಳುವುದರ ಜೊತೆಗೆ ವೀಣೆಯನ್ನು ನುಡಿಸುತ್ತಿದ್ದರು.[೭]

---

೭ ಸಂದರ್ಶನ -ಮಲ್ಲಿಕಾರ್ಜುನ ಜಾಧವ, ದಿನಾಂಕ : ೧೫-೦೫-೨೦೦೭

ಬೆಂಗಳೂರು, ಮೈಸೂರು, ಧಾರವಾಡ, ಗದಗ, ಹುಬ್ಬಳ್ಳಿ, ಬೆಳಗಾಂವ, ಗುಲ್ಬರ್ಗಾ, ರಾಜ್ಯ ಇನ್ನಿತರೆ ಪ್ರದೇಶಗಳಿಂದ ಇವರ ಮಾರ್ಗದರ್ಶನದಲ್ಲಿ ಅನ್ವಯಿಕ ಕಲಾ ವಿಭಾಗದಲ್ಲಿ ಅಧ್ಯಯನ ಕೈಗೊಳ್ಳಲು ಆಸಕ್ತ ಕಲಾ ವಿದ್ಯಾರ್ಥಿಗಳ ಸಂಖ್ಯೆಯು ಸರ್ಕಾರ ನಿಗದಿ ಪಡಿಸಿದ್ದ ಪ್ರವೇಶ ಮಿತಿಯಗಳ ಸಂಖ್ಯೆಯನ್ನು ಮೀರಿ ಅರ್ಜಿಗಳು ಬರಲಾರಂಭಿಸಿದವು. ಪ್ರಾರಂಭದಲ್ಲಿ ಪ್ರವೇಶಕ್ಕೆ ವಿದ್ಯಾರ್ಥಿಗಳ ಮನವೊಲಿಸಿ ಪ್ರವೇಶ ಪಡೆಯಲು ಒತ್ತಾಯಿಸುತ್ತಿದ್ದ ದಿನ ದೂರಾಗಿ ಪ್ರವೇಶಕ್ಕೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಅದರಲ್ಲಿ ತೆರ್ಗಡೆ ಹೊಂದಿದವರನ್ನು ಅರ್ಹತೆಯ ಆಧಾರದ ಮೇಲೆ ಪ್ರ ವೇಶ ನೀಡುವಂತಹ ನಿಯಮಾವಳಿಯನ್ನು ರೂಪಿಸಲಾಯಿತಂತೆ ಆಸಕ್ತ ಕಲಾ ವಿದ್ಯಾರ್ಥಿಗಳಿಗೆ ಅಧ್ಯಯನದಿಂದ ವಂಚಿತರಾಗದಂತೆ ಆಡಳಿತಾತ್ಮವಾಗಿ ಪಾಟೀಲರು ಪ್ರಾಚಾರ್ಯರ ಮಧ್ಯಸ್ಥಿಕೆಯಲ್ಲಿ ಚರ್ಚಿಸಿ ಪ್ರತಿಭಾವಂತರಿಗೆ ಪ್ರವೇಶ ದೊರಕಿಸಿ ಅಧ್ಯಯನವನ್ನು ಪ್ರಾರಂಭಿಸಲು ಅವರು ಸದಾವುಕಾಲವು ಪ್ರಯತ್ನಿಸುತ್ತಿದ್ದುದನ್ನು ವಿದ್ಯಾರ್ಥಿಗಳು ಈಗಲೂ ಸ್ಮರಿಸುತ್ತಾರೆ.

೧೯೮೭ರಲ್ಲಿ ಸರಕಾರಿ ಚಿತ್ರಕಲಾ ಮತ್ತು ಕರಕುಶಲ ಕಲಾಶಾಲೆಗೆ ೧೯೮೭ರಲ್ಲಿ ಆರ್ಥಿಕ ಸಹಾಯ ಒದಗಿ ಬಂತು ಶಿವಮೊಗ್ಗ ಜಿಲ್ಲೆಯಲ್ಲಿ ಶಂಕರ ಘಟ್ಟದಲ್ಲಿ ಬಿ.ಆರ್.ಪ್ರಾಜೆಕ್ಟನಡಿಯಲ್ಲಿ ಕನ್ನಡದ ಮೇರು ಕವಿ ಕುವೆಂಪುರವರ ಹೆಸರಿನಲ್ಲಿ "ಕುವೆಂಪು ವಿಶ್ವವಿದ್ಯಾಲಯ" ಸ್ಥಾಪನೆಗೊಂಡಿತು. ಆಗ ತಾನೆ ಅಂಬೆಗಾಲಿಡುತ್ತ ಸಾಗುತ್ತಿದ್ದ ವಿಶ್ವ ವಿದ್ಯಾಲಯದ ಅಭಿವೃದ್ಧಿಗೆ ಕಲಾಶಾಲೆಯ ಸ್ತಿರಾಸ್ಥಿಯನ್ನು ಮತ್ತು ಅಗತ್ಯ ಮಾಹಿತಿಯನ್ನು ಯು.ಜಿ.ಸಿಗೆ ತೋರಿಸಿ ಈ ಎಲ್ಲ ಮಾಹಿತಿಯನ್ನು ಪರಿಶೀಲಿಸಿ ಯು.ಜಿ.ಸಿ. ಅನುಮೋದನೆ ನೀಡಿ ಧನ ಸಹಾಯ ನಿಡುವಂತಾಯಿತು. ಈ ಹಿನ್ನಲೆಯಲ್ಲಿ "ಸರ್ಕಾರಿ ಬಿ.ಡಿ.ಟಿ. ಇಂಜನಿಯರಿಂಗ್ ಕಾಲೇಜು ಮತ್ತು "ಸರ್ಕಾರಿ ಚಿತ್ರಕಲೆ ಮತ್ತು ಅನ್ವಯಿಕ ಕಲಾಶಾಲೆ"ಗಳನ್ನು ಇವುಗಳ ಸಂಪೂರ್ಣ ಆಸ್ತಿಗಳ ಸಹಿತವಾಗಿ ಸರಕಾರವು ಕುವೆಂಪು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಿತು ಆದಕಾರಣ ೧೯೮೭ ಕರ್ನಾಟಕ ಸರಕಾರದ ತಾಂತ್ರಿಕ ಶಿಕ್ಷಣ ಮಂಡಳಿ ಸ್ಥಾಗಿತಗೊಂಡು "ಸರಕಾರಿ ಚಿತ್ರಕಲೆ ಮತ್ತು ಕರಕುಶಲಕಲೆ" ಎಂಬ ಕಲಾ ಶಾಲೆಯ ಹೆಸರು ಪರಿವರ್ತಿತಗೊಂಡು "ಕುವೆಂಪು ಲಲಿತಕಲಾ ಮಹಾವಿದ್ಯಾಲಯವೆಂದು, ಹೆಸರು ಪಡೆಯಿತು. ಡಿಪ್ಲೋಮ ಬದಲು ಪದವಿಮಟ್ಟದಲ್ಲಿ ತರಗತಿಗಳು ಪ್ರಾರಂಭವಾದವು "ಕುವೆಂಪು ವಿಶ್ವವಿದ್ಯಾಲಯ ಲಲಿತಕಲಾ ಮಹಾವಿದ್ಯಾಲಯ" ಎಂದು ಮರುನಾಮಕರಣಗೊಂಡು ಪ್ರಚಲಿತದಲ್ಲಿದ್ದ ಚಿತ್ರಕಲೆ, ವಾಣಿಜ್ಯ ಕಲೆಯ ಜೊತೆಗೆ ಹೆಚ್ಚುವರಿಯಾಗಿ ಗ್ರಾಫಿಕ್, ಶಿಲ್ಪಕಲಾ ವಿಭಾಗಳನ್ನು ಆರಂಭಿಸಿ ಬಿ.ಎಫ್.ಎ ತರಗತಿಗಳನ್ನು

ಆರಂಬಿಸಲಾಯಿತ್ತು. ಹೀಗೆ ಡಿಪ್ಲೋಮಾ ಹಂತದಿಂದ ಪದವಿ ಹಂತಕ್ಕೆ ಬಂದು ಪದವಿಯ ತರಗತಿಗಳಿಗನುಸಾರವಾಗಿ ಶಿಕ್ಷಣ ಮಾದರಿಯನ್ನು ಮತ್ತು ಪ್ರಾಯೋಗಿಕ ವಿಷಯಗಳನ್ನು ಬದಲಾಯಿಸಿ ಜೊತೆಗೆ ಹೊಸಹೊಸ ಪಠ್ಯಕ್ರಮ ಮತ್ತು ವಿಷಯಗಳನ್ನು ಸೇರ್ಪಡಿಸುವ ಸಮೀತಿಯಲ್ಲಿ ಪಾಟೀಲರ ಪಾತ್ರವು ಮಹತ್ವದ್ದಾಗಿದೆ. ಇಲ್ಲಿನ ಕಲಾಶಾಲೆಯ ವಿದ್ಯಾರ್ಥಿಗಳು ಭೌತಿಕ ಬೆಳವಣಿಗೆ ಹೊಂದಿ ರಾಷ್ಟ್ರ-ಅಂತರಾಷ್ಟ್ರೀಯ ಮಟ್ಟದಲ್ಲಿ ಅಪಾರ ಕೊಡುಗೆಯನ್ನು ನೀಡಲು ಬೌದ್ಧಿಕವಾಗಿ ಬೆಳೆಯಲು ಕುವೆಂಪು ವಿಶ್ವವಿದ್ಯಾಲಯ ಸಹಾಯ ಸಹಕಾರದ ಪಾತ್ರ ಗಣನೀಯವಾಗಿದೆ. ಇದೀಗ ದಾವಣಗೆರೆಯಲ್ಲಿಯೇ ಸ್ವತಂತ್ರವಾದ ವಿಶ್ವವಿದ್ಯಾಲಯ ಸ್ಥಾಪನೆಗೊಂಡಿದೆ. ಈ ಕಲಾ ಮಹಾವಿದ್ಯಾಲಯ ಕುವೆಂಪು ವಿ.ವಿ.ಯಿಂದ ದಾವಣಗೆರೆ ವಿಶ್ವವಿದ್ಯಾಲಯಕ್ಕೆ ಮತ್ತೆ ಹಸ್ತಾಂತರಗೊಂಡು ಈಗ ದಾವಣಗೆರೆ ವಿಶ್ವವಿದ್ಯಾಲಯದ ಲಲಿತಕಲಾ ಮಹಾವಿದ್ಯಾಲಯವಾಗಿದೆ.

ಕೇವಲ ಬಣ್ಣ ಮತ್ತು ಇನ್ನಿತರೆ ಕಚ್ಚಾ ಸಾಮಾಗ್ರಿಗಳಿಂದ ಚಿತ್ರ ರಚಿಸುತ್ತಿದ್ದ ಅಪ್ಲೈಡ್ ಆರ್ಟ ವಿದ್ಯಾರ್ಥಿಗಳಿಗೆ ಶಂಕರ ಪಾಟೀಲರು ಛಾಯಾಚಿತ್ರಣ ತರಬೇತಿಯನ್ನು ನೀಡಿ ಛಾಯಾಚಿತ್ರಣದಲ್ಲಿ ನೇರಳು ಬೆಳಕು ಅಂತರ ಇನ್ನಿತರ ತಂತ್ರಗಳ ಕುರಿತು ಚರ್ಚಿಸಿ ಮಾರ್ಗದರ್ಶನ ನೀಡುತ್ತಿದ್ದರು.

ಕಲಾ ಪ್ರಕಾರಗಳಾದ ನಿಸರ್ಗಚಿತ್ರ ತಾಂತ್ರಿಕಕಲೆ, ಸಂಯೋಜನಾಚಿತ್ರ, ಛಾಯಾಚಿತ್ರಣ, ಭಾವಚಿತ್ರಣಗಳಲ್ಲಿದೆ ಮಾಧ್ಯಮಗಳ ದೃಷ್ಟಿಯಿಂದ ವರ್ಣಚಿತ್ರ, ಗ್ರಾಫಿಕ್ ಭಿತ್ತಿ, ಶಿಲ್ಪ, ರೇಖಾಚಿತ್ರ ಸೇರಿದಂತೆ ಸಮಕಾಲಿನ ಕಲೆ ಹೆಚ್ಚಿನ ಎಲ್ಲಾ ಕಲಾಪ್ರಕಾರಗಳಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತೊಡಗಿಸಿಕೊಳ್ಳುವಂತೆ ಮಾರ್ಗದರ್ಶನ ನೀಡಿದ್ದಾರೆ. ಅವರ ಕಲಾಚಿಂತನೆಯ ಸಮಕಾಲಿನ ಕರ್ನಾಟಕದ ಕಲಾವಿದರಿಗೆ ಹೋಲಿಸಿದರೆ ಇವರು ತಮ್ಮದೇ ಆದ ಭಿನ್ನವಾದ ನೆಲೆಯನ್ನು ಕಂಡುಕೊಂಡಿದ್ದಾರೆ. ಆಡುಮಟ್ಟದ ಗಿಡವಿಲ್ಲ ಎನ್ನುವಂತೆ ವಿವಿಧ ಮಾಧ್ಯಮ ತಂತ್ರಗಳಲ್ಲಿ ಕೈಯಾಡಿಸಿದ್ದಾರೆ. ಈ ದಿಸೆಯಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಚಲಾವಣೆಗೆ ಬಂದ ಎಲ್ಲ ಮಾಧ್ಯಮಗಳನ್ನು ತಂತ್ರಗಳನ್ನು ಅವರು ಅಭ್ಯಾಸಿಸುವುದು ಅನಿವಾರ್ಯವಾಗಿತ್ತು. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಜೊತೆ ಕೇವಲ ತರಗತಿಗಳ ಪಾಠಕ್ಕೆ ಮಾತ್ರ ಸೀಮಿತಗೊಳ್ಳದೇ ವಿದ್ಯಾರ್ಥಿಗಳ ಕ್ರಿಯಾತ್ಮಕ ಚಟುವಟಿಕೆಗಳಿಗೆ ಅನುಕೂಲವಾಗುವ ಉದ್ದೇಶವನ್ನು ಹೊಂದಿ ರಾಜ್ಯ ಹೊರರಾಜ್ಯಗಳ ಕಲಾವಿದರುಗಳಿಂದ ಪ್ರಾತ್ಯಕ್ಷಿಕೆ ಉಪನ್ಯಾಸ, ಚರ್ಚಾಗೋಷ್ಠಿಗಳನ್ನು ಏರ್ಪಡಿಸುವಲ್ಲಿ ಪಾಟೀಲರು ಹೆಚ್ಚಿನ ಆಸಕ್ತಿವಹಿಸುತ್ತಿದ್ದರು. ೧೯೭೭ರಲ್ಲಿ ದಾವಣಗೇರೆ ನಗರದ ಮಧ್ಯಭಾಗವಾದ ಜಯದೇವ ವೃತ್ತ (ಸರ್ಕಲ್)ದಲ್ಲಿ "ನಯನ

ಸ್ಟುಡಿಯೋ" ಸ್ಥಾಪಿಸಿದರು. ಹೆಸರಿಗೆ ತಕ್ಕಂತೆ ಕಲಾಕೃತಿಗಳ ವೈಭವವು ಕಲಾಸಕ್ತರ ಮನಸೆಳೆಯುತ್ತಿತ್ತು ಮತ್ತು ನೋಡುಗರಿಗೆ ನಯನ ಮನೋಹರವಾಗಿತ್ತು. ೧೯೭೫ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕಲೆ ಮತ್ತು ಕರಕುಶಲ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಣೆ ಮಾಡಿದ್ದಾರೆ. ೧೯೭೬ರಲ್ಲಿ ದಾವಣಗೇರೆಯ ಜಯದೇವ ಸರ್ಕಲ್‌ನಲ್ಲಿ "ಕಲಾಗುರು" ಎಂಬ ಹೆಸರಿನ ಆರ್ಟ ಗ್ಯಾಲರಿಯನ್ನು ಸ್ಥಾಪಿಸಿದರು. ೧೯೭೮ರಲ್ಲಿ ಲಲಿತಕಲೆ ಮತ್ತು ವಾಣಿಜ್ಯ ಕಲೆಗಳ ಪಠ್ಯಕ್ರಮವನ್ನು ರಚಿಸುವ ರಚನಾ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಾರೆ. ೧೯೭೮ರಲ್ಲಿ ಪದವಿ ಪೂರ್ವ ತರಗತಿಗಳ ವೃತ್ತಿ ಶಿಕ್ಷಣದಲ್ಲಿ ವಾಣಿಜ್ಯಕಲೆ ಮತ್ತು ಲಲಿತಕಲೆ ವಿಭಾಗಕ್ಕೆ ಪಠ್ಯಕ್ರಮ ರಚನಾ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ೧೯೭೮ರಲ್ಲಿ ರೋಟರಿ ಇಂಟರ ನ್ಯಾಶನಲ್ ಸಂಸ್ಥೆಯ "ಕಲೆ ಮತ್ತು ಸಾಂಸ್ಕೃತಿಕ ವಿಷಯಗಳ ಪ್ರತಿನಿದಿಯಾಗಿ ಉಪನ್ಯಾಸ ನೀಡಿದ್ದಾರೆ.ಹೈದರಾಬಾದ, ಸಾಲರಜಂಗ ಪ್ರಾಚ್ಯವಸ್ತು ಸಂಗ್ರಹಾಲಯದ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ದಾವಣಗೇರೆಯಲ್ಲೂ "ಕ್ರಿಯೇಟಿವ್ ಆರ್ಟ್ಸ ಕೌನ್ಸಿಲ್ ದಾವಣಗೇರೆ" ಎಂಬ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ. ೧೯೮೬ರಲ್ಲಿ ಕಲಾಭವನ ಶಿಕ್ಷಣ ಸಂಸ್ಥೆಯನ್ನು ದಾವಣಗೇರೆಯಲ್ಲಿ ಸ್ಥಾಪಿಸಿದ್ದಾರೆ. ೧೯೮೯ರಲ್ಲಿ ಮುಂಬೈ ಆರ್ಟ ಸೊಸೈಟಿಯ ಆಜೀವ ಸದಸ್ಯತ್ವ ಪಡೆದಿದ್ದಾರೆ. ೧೯೯೦ರಲ್ಲಿ ಇಂಡಿಯನ್ ಇಂಟರನ್ಯಾಷನಲ್ ಪೋಟೋಗ್ರಾಪಿಕಲ್ ಕೌನ್ಸಿಲ್ ನ ಆಜೀವ ಸದಸ್ಯತ್ವ ಹೊಂದಿದ್ದಾರೆ. ೧೯೯೨ರಲ್ಲಿ ಪೆಡರೇಷನ್ ಆಪ್ ಇಂಡಿಯನ್ ಪೋಟೋಗ್ರಾಫಿಯ ಸದಸ್ಯರಾಗುತ್ತಾರೆ. ೧೯೯೩ರಲ್ಲಿ ಅಖೀಲ ಭಾರತ ವೀರಶೈವ ಮಹಾಸಭೆ ಸಂಸ್ಥೆಯ ಅಜೀವ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಈ ರೀತಿಯಾಗಿ ಶೈಕ್ಷಣಿಕ ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಪಾಟೀಲರ ಪಾತ್ರ ಅವಿಸ್ಮರಣೀಯ ಹೀಗೆ ತಮ್ಮ ಶೈಕ್ಷಣಿಕ ವೃತ್ತಿ ಬದುಕಿನಲ್ಲಿ ಕಲಾವಿದ್ಯಾರ್ಥಿಗಳ ಪ್ರಗತಿ ಮತ್ತು ಅವರ ಪ್ರತಿಭೆಗೆ ಅನುಸಾರವಾಗಿ ಒಂದು ಸೂಕ್ತವಾದ ವೇದಿಕೆಯನ್ನು ಕಲ್ಪಿಸಿಕೊಡುವಲ್ಲಿ ಸಮರ್ಪಕ ಕಾರ್ಯನಿರ್ವಹಣೆಯನ್ನು ಕೈಗೊಂಡಿದ್ದನ್ನು ಸಹೋದ್ಯೋಗಿಗಳಾಗಿದ್ದ ಶ್ರೀ ಸೂಗೂರು. ಗಣೇಶಗುಡಿ ಮುಂತಾದ ಕಲಾವಿದರು ಸ್ಮರಿಸಿಕೊಂಡಿದ್ದಾರೆ.

ಕಲಾವಿದರಾಗಿ, ಕಲಾ ಅಧ್ಯಾಪಕರಾಗಿ, ಪತ್ರಿಕಾ ಸಂಪಾದಕರಾಗಿ, ಕಲಾ ಸಾಹಿತಿಯಾಗಿ, ಕವಿಯಾಗಿ ಹೀಗೆ ನಿರಂತರ ಕಾರ್ಯಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಬಹುಮುಖ ಪ್ರತಿಭೆಯುಳ್ಳ ಪಾಟೀಲರು ೧೫ ಮೇ, ೨೦೦೦ ರಂದು ತಮ್ಮ ಐವತ್ಮೂರನೆಯ ವಯಸ್ಸಿನಲ್ಲಿ ಹೃದಯಾಘಾತದಿಂದ ನಿಧನರಾದರು. ಶ್ರೀಯುತ ಪಾಟೀಲರು ನಮ್ಮನ್ನು ಅಗಲಿದರೂ ಅವರು ರಚಿಸಿದ ಕೃತಿಗಳ ಮೂಲಕ ದೇಶ-ವಿದೇಶಗಳಲ್ಲಿ ಇಂದಿಗೂ ಚಿರಸ್ಮರಣೀಯರಾಗಿ ಉಳಿದಿದ್ದಾರೆ.

❖ ❖ ❖

ಅಧ್ಯಾಯ : ಮೂರು

ಶಂಕರ ಪಾಟೀಲರ ರೇಖಾಚಿತ್ರಗಳು

ವಿಷ್ಣುಧರ್ಮೋತ್ತರ ಪುರಾಣದಲ್ಲಿ "ರೇಖಾಂ ಪ್ರಶಂಸತಾಚಾರ್ಯ"[೧] ಎನ್ನುವ ಸಂಸ್ಕೃತ ಮಾತೊಂದು ದೃಶ್ಯ ಕಲಾವಿದನ ಪ್ರೌಢಿಮೆಯನ್ನು ಅಳೆಯಲು ಇರುವ ಒಂದು ಮಾನದಂಡವಾಗಿದೆ. ಒಳ್ಳೆಯ ಕಲಾವಿದನಾಗಲು ಅವನು ಮೂಡಿಸಿರುವ ರೇಖೆಗಳೇ ಸಾಕು, ರೇಖೆಗಳು ದೃಶ್ಯಕಲೆಯ ತಾಯಿ ಬೇರು ಇದ್ದಂತೆ ರೇಖೆಗಳೇ ಚಿತ್ರ, ಶಿಲ್ಪ ವಾಸ್ತುಶಿಲ್ಪಕ್ಕೆ ಮೂಲ, ಚಿತ್ರವೊಂದರ ನಿರ್ಮಾಣ ರೇಖೆಯಿಂದ, ವರ್ಣಲೇಪನವಾದಮೇಲೂ ತನ್ನ ಅಸ್ತಿತ್ವವನ್ನು ಸದಾಕಾಲ ಇದು ಕಾಪಾಡಿಕೊಂಡಿರುತ್ತದೆ.

ರೇಖೆ ಮಾನವ ಇತಿಹಾಸದಷ್ಟು ಪ್ರಾಚೀನವಾದುದು. "ಗೆರೆ ರೇಖೆಯಕ್ಕು"[೨] ಎಂದಿದ್ದಾನೆ ಮಂಗರಾಜ ತನ್ನ ನಿಘಂಟಿನಲ್ಲಿ. ಆದ್ದರಿಂದ ರೇಖಾಚಿತ್ರ ಕಲೆಯ ಉಗಮ, ವಿಕಾಸ, ವೈವಿಧ್ಯ, ಕಾಲದೇಶಾನುಗುಣವಾದ ಪರಿಕಲ್ಪನೆಗಳನ್ನು ತಿಳಿಯಲು ತುಂಬ ಕುತೂಹಲಕಾರಿಯಾಗಿರುವಂತೆ ಅದರ ಅಧ್ಯಯನದಿಂದ ದೃಶ್ಯಕಲೆಗಳಲ್ಲಿ ಅದರ ಅನನ್ಯ ಸ್ಥಾನವನ್ನೂ ಮಹತ್ವವನ್ನು ಪಡೆದಿದೆ.

---

೧. ಬಿ.ವಿ.ಕೆ.ಶಾಸ್ತ್ರಿ (ಸಂ.) : ರೇಖಾಚಿತ್ರ, ಪು. ೪.
೨. ಅದೇ.

ರೇಖಾಚಿತ್ರ ಕಲೆಯನ್ನು ಒಂದು ಸ್ವಯಂಪೂರ್ಣ ಕಲೆಯೆಂದು ಬಾವಿಸುವ ಪರಿಕಲ್ಪನೆ ಇತ್ತೀಚಿನದು, ಆಧುನಿಕ ಎನ್ನಬಹುದಾದದ್ದು. ಏಕೆಂದರೆ ಪ್ರಾಚೀನ ಕಾಲದಲ್ಲಿ ವರ್ಣಚಿತ್ರಗಳಿಗಿಂತ ಅದು ವಿಭಿನ್ನವೆಂದು ಭಾವಿಸಿರಲಿಲ್ಲ. ಚಿತ್ರ ಎಂದಾಗ ಅದೊಂದು ಸಮಗ್ರ ರಚನೆ, ರೇಖಾಚಿತ್ರ ಎಂದಾಗ ರೇಖೆಗಳಿಂದ ಮೂಡಿಸಿದ ಚಿತ್ರ. ಯಾವುದೇ ವಸ್ತುವಿನ ಅಥವಾ ಆಧಾರ ಭೂಮಿಕೆಯ ಮೈಮೇಲೆ ಅದು ಹಿನ್ನಲೆಯಾಗಿ ಮೂಡಿಸುವ ಗುರುತುಗಳು, ಅದು ಗೆರೆ ಆಗಬಹುದು, ಕಲೆಯಾಗಬಹುದು, ಕೊರೆದದ್ದಾಗಬಹುದು, ಹಾಗೆ ಮಾಡಿದ ಗುರುತುಗಳು ಸರಳವಾಗಿರಬಹುದು, ವಿವರ ಪೂರ್ಣವಾಗಿರಬಹುದು, ಆದರೆ ಆಯಾಮ ಮಾತ್ರ ಉಳ್ಳದ್ದಾಗಿರಬೇಕು. ರೇಖೆಯ ಸಮತಲದ ಮೇಲೆ ಮೂರು ಆಯಾಮಗಳ ಸೂಚನೆ ಇಲ್ಲದೆಯು ರೂಪ ತಳೆಯಬಹುದು. ಲಯಬದ್ಧವಾಗಿ ಹರಿಯುವ ಮೂಲಕ ಅಥವಾ ಅಂಕುಡೊಂಕಾಗಿ, ವಕ್ರವಾಗಿ ತಡೆತಡೆದು ನಿಂತು ಹೋಗಬಹುದು. ದಪ್ಪ, ತೆಳು, ನವಿರಾಗಬಹುದು. ಅಥವಾ ನೆರಳು-ಬೆಳಕಿನ ಸೂಚನೆಯನ್ನು ನೀಡುವಂತೆ ಕಾಣಿಸಿ ಮರೆಯಾಗಬಹುದು. ಹೀಗಾಗಿ ರೇಖೆಗೆ ಅದರದೆ ಆದ ಚೈತನ್ಯವಿದೆ. ವೈವಿಧ್ಯಮಯ ವರ್ತನೆಯಿದೆ. ಸ್ವತಂತ್ರ ವ್ಯಕ್ತಿತ್ವವಿದೆ. ಅದು ಸ್ವತಂತ್ರ ಕಲೆಯಾಗಿ ಕಲಾತ್ಮಕ, ಸೌಂದರ್ಯಾತ್ಮಕ ಮೌಲ್ಯವನ್ನು ಒಳಗೊಂಡಿರುತ್ತದೆ.

ಚಿತ್ರಕ್ಕೆ ರೇಖೆಯೇ ಜೀವಾಳ. ಅದಕ್ಕೆ ತನ್ನದೇ ಆದ ಮಹತ್ವವಿದ್ದು ಅದು ಕಲಾವಿದನ ಮಾನಸಿಕ ಉದ್ದೇಶವನ್ನು ಅದರ ತೀವ್ರತೆಯೊಂದಿಗೆ ಪರಿಶುದ್ಧ ಸ್ಥಿತಿಯಲ್ಲಿ ವ್ಯಕ್ತ ಪಡಿಸುವುದಷ್ಟೇ ಅಲ್ಲದೆ ಚಿತ್ರ ಸೃಷ್ಟಿಕಾಲದ ಅವನ ಮನಃಸ್ಥಿತಿಯನ್ನು ಚಿತ್ತ ವೃತ್ತಿಯನ್ನು, ಭಾವನೆಗಳನ್ನೂ ಆ ಕ್ಷಣಕ್ಕೆ ನಮ್ಮ ಮುಂದೆ ತೆರೆದಿಡುತ್ತದೆ.

ಕಲಾವಿದನನ್ನು ನಿಜಕ್ಕೂ ಬಯಲು ಮಾಡುವುದು ರೇಖಾಚಿತ್ರಗಳೇ ಅದು ಅವನ ಸಹಿ ಇದ್ದಂತೆ"[೩] ಎನ್ನುವ ಮಾತುಂಟು ವ್ಯಕ್ತಿಯೊಬ್ಬನ ಕೈಬರವಣಿಗೆಯಂತೆಯೇ ರೇಖಾಚಿತ್ರವೊಂದು ಕಲಾವಿದನ ಆ ಸಂದರ್ಭದ ಚಿಂತನೆ ಮತ್ತು ಮನಃಸ್ಥಿತಿಗಳನ್ನು ಪ್ರತಿಬಿಂಬಿಸುತ್ತದೆ. ಕಲಾವಿದನೊಬ್ಬನನ್ನು ಅರ್ಥ ಮಾಡಿಕೊಳ್ಳಲು ಅವನ ರೇಖಾಚಿತ್ರಗಳನ್ನು ವಿಶ್ಲೇಷಿಸಬೇಕು. ಅಂತೆಯೇ ಭಾರತೀಯ ಕಲೆಗಳಲ್ಲಿ ರೇಖೆಗಳೇ ಸಂವಹನಕ್ಕೆ ತಳಹದಿಯಾಗಿವೆ. ಭಾರತೀಯ ಕಲೆಯಲ್ಲಿ ಶೈಲಿ, ವಸ್ತು ಚಳುವಳಿಗಳ ದೃಷ್ಟಿಯಿಂದ ಸಾಕಷ್ಟು ಚಿಂತನೆಗಳು ನಡೆದಿದೆಯಾದರೂ ಮಾಧ್ಯಮಗಳ ನೆಲೆಯಲ್ಲಿ

---

೩. ಚಿ.ಸು.ಕೃಷ್ಣಸೆಟ್ಟಿ (ಸಂ.) : ಚಿತ್ರ-ಚಿತ್ರ, ಪು. ೯೯.

ವಿಶ್ಲೇಷಣೆ ಅಷ್ಟಾಗಿ ನಡೆದಿಲ್ಲ. ಹಾಗಾಗಿ ರೇಖಾಚಿತ್ರ ಮಾಧ್ಯಮದ ವಿವಿಧ ಅವ್ಯವಸ್ಥೆಗಳ ಬಗೆಗೆ ಮಾಹಿತಿ ವಿರಳವಾಗಿ ಕಂಡು ಬರುತ್ತದೆ. ಈಗಲಾದರೂ ಈ ದಿಸೆಯಲ್ಲಿ ತೀವ್ರವಾದ ಅಧ್ಯಯನ ನಡೆದು ರೇಖಾಚಿತ್ರ, ಮತ್ತು ರೇಖಾಚಿತ್ರ ಮಾಧ್ಯಮದಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡ ಕಲಾವಿದರನ್ನು ಪರಿಚಯಿಸುವುದು ಅತ್ಯಗತ್ಯವಾಗಿದೆ.

"ರೇಖೆಗೆ ಸಂಗೀತದಂತೆ ಲಯಬದ್ಧತೆ ಇದೆ. ನೃತ್ಯದಂತೆ ಛಂದೋಬದ್ಧಚಲನೆ ಇದೆ ಕಾವ್ಯದಂತೆ ಅಂತರ್ ಪ್ರೇರಣೆ ಇದೆ. ರೇಖೆಗಳ ಸಮ್ಮಿಳನದಲ್ಲಿ ಸಾಹಿತ್ಯದ ಸಾಂಗತ್ಯವಿದೆ"[೪] ಶಂಕರ ಪಾಟೀಲರು ಇಂತಹ ರೇಖೆಗಳ ಸಮ್ಮಿಳನದಿಂದ ಸ್ಪಷ್ಟವಾದ ಆಕೃತಿ ನಿಖರವೆನಿಸುವ ವಿವರಗಳು, ಕಲಾವಿದನ ಆಂತರಿಕ ಕಲಾಪ್ರಜ್ಞೆಯನ್ನು ಸಹಜವಾಗಿ ವೀಕ್ಷಕ ಗುರುತಿಸಬಹುದಾಗಿದೆ. ಸೌಂದರ್ಯ ಪ್ರಜ್ಞೆಯ ಹಿನ್ನಲೆಯಲ್ಲಿ ನಿಸರ್ಗ, ವ್ಯಕ್ತಿ, ಸಮಾಜ, ಧಾರ್ಮಿಕತೆ, ಇವುಗಳ ಸಂಬಂಧಗಳ ಸೂಕ್ಷ್ಮತೆಯನ್ನು ಅವರ ಚಿತ್ರಗಳ ಭಾವ ಸಂಪದದ ಮೂಲಕ ಗುರುತಿಸಲಾಗುತ್ತದೆ.

ಪ್ರಮುಖ ರೇಖಾಚಿತ್ರ ಕಲಾವಿದರುಗಳು ಕರ್ನಾಟಕದಲ್ಲಿ ಇದ್ದರೂ ಇಂತಹ ರೇಖಾಚಿತ್ರಕಾರರು ಬೆರಳಣಿಕೆಯಷ್ಟು ಮಾತ್ರ. ಅಂತವರ ಸಾಲಿನಲ್ಲಿ ಶಂಕರ ಪಾಟೀಲರೂ ಒಬ್ಬರು ಅಷ್ಟೇ ಅಲ್ಲದೆ ವರ್ಣಚಿತ್ರಕಾರರಾಗಿ ಕಲೆಯ ಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಇವರ ರೇಖಾಚಿತ್ರಗಳಲ್ಲಿನ ಲಾಲಿತ್ಯ, ತನ್ಮಯತೆ, ಬಹುಛಾಯೆಗಳ ಅವರ ರೇಖಾಚಿತ್ರ ಮತ್ತು ಮನೋಕ್ರೋಮ್ ಚಿತ್ರಗಳಲ್ಲೂ ಕಾಣಬಹುದು. ಇದರಿಂದಾಗಿಯೇ ಪಾಟೀಲರು ಕಲೆಯ ಕ್ಷೇತ್ರದಲ್ಲಿ ಕಲಾವಿದರ, ಕಲಾ ವಿದ್ಯಾರ್ಥಿಗಳ ಮಧ್ಯ, ಕಲಾಶಿಕ್ಷಕರಾಗಿ ಸೃಜನಶೀಲ ಕಲಾವಿದರಾಗಿ, ಆಡಳಿತಗಾರರಾಗಿ ಗುರುತಿಸಿಕೊಂಡಿದ್ದಾರೆ.

ಇಂತಹ ಸ್ವತಂತ್ರ ವ್ಯಕ್ತಿತ್ವ ಹೊಂದಿದ ರೇಖೆಗಳನ್ನು ಪಾಟೀಲರು ತಮ್ಮ ಪ್ರತಿಭೆಗೆ ತಕ್ಕಂತೆ ರೂಪಕೊಟ್ಟಿದ್ದಾರೆ. ಈ ರೇಖಾಚಿತ್ರಗಳು ಪೆನ್ಸಿಲ್, ಶಾಹಿ (ಇಂಕ್) ನಂತಹ ಮಾಧ್ಯಮಗಳಿಂದ ರಚಿಸಲ್ಪಟ್ಟವೆ. ಇವು ಕೆಲವು ಸಲ ತಿದ್ದಿ ಬದಲಾಗಿ ಪುನರ್‌ಸೃಷ್ಟಿಗೊಂಡ ಅಪೂರ್ವಕಲಾಕೃತಿಗಳಾಗಿವೆ.

ಈ ರೀತಿಯಾಗಿ ರಚಿಸಿದ ರೇಖಾ ಚಿತ್ರಗಳಲ್ಲಿ ಭಾವಚಿತ್ರ, ನಿಸರ್ಗ ಚಿತ್ರ, ಸಂಯೋಜನಾ ಚಿತ್ರಗಳು, ಪ್ರಾಣಿ–ಪಕ್ಷಿಗಳ ಚಿತ್ರಗಳೂ ಇವೆ. ಹೀಗೆ ವೈವಿಧ್ಯಮಯ ವಿಷಯಗಳನ್ನೊಳಗೊಂಡ ರೇಖಾಚಿತ್ರಗಳನ್ನು ಕಾಣಬಹುದು. ಕಲಾವಿದನ ಕಲೆಯ ಅಭಿವ್ಯಕ್ತಿ ಕುರಿತ ತುಡಿತಕ್ಕೆ ಸಮಯ

೪. ಶಂಕರ ಪಾಟೀಲ : ಚಿತ್ರಕಲಾ ಚಿಂತನೆ, ಪು. ೭೮.

ಪರಿಸರಗಳ ನಿರ್ಬಂಧವಿಲ್ಲ. ಒಂದು ಕ್ಷಣ ಗಮನ ಸೆಳೆಯುವ ಯಾವುದೇ ವಸ್ತು ವಿಷಯವಿರಲಿ ಆಗ ಕಲಾವಿದನಲ್ಲಿಯ ಸೃಜನಶೀಲ ಪ್ರಜ್ಞೆ ಜಾಗೃತವಾಗಿ ತನ್ನಷ್ಟಕ್ಕೆ ತಾನೇ ರೇಖೆಗಳ ಮುಖಾಂತರ ಅಭಿವ್ಯಕ್ತಿಗೊಳ್ಳುತ್ತದೆ. ಪಾಟೀಲರ ರೇಖಾಚಿತ್ರಗಳು ಈ ಎಲ್ಲ ಆಯಾಮಗಳಲ್ಲಿ ನೆಲೆಯನ್ನು ಕಂಡುಕೊಂಡು ರಚಿತವಾದುವುಗಳಾಗಿವೆ.

"ಆಕ್ಸಫರ್ಡ್ ಯುನಿವರ್ಸಲ್ ಡಿಕ್ಷನರಿಯ ಪ್ರಕಾರ ರೇಖಾಚಿತ್ರಗಳೆಂದರೆ ಪೆನ್ಸಿಲ್ ಅಥವಾ ಕ್ರೇಯಾನ್‌ನಿಂದ ರೂಪಿಸುವುದು ಎಂದು ಹೇಳುತ್ತಾ ಮುಂದೆ ವರ್ಣಚಿತ್ರದಿಂದ ಭಿನ್ನವಾದ ರೀತಿಯಲ್ಲಿ ರೂಪಣೆ ಎನ್ನುತ್ತದೆ."[೫] ಹೀಗೆ ಲೇಖನಿ ಪೆನ್ಸಿಲ್‌ನಿಂದ ಸಾವಿರಾರು ಚಿತ್ರಗಳನ್ನು ರಚಿಸಿರುವ ಪಾಟೀಲರ ರೇಖಾಚಿತ್ರಗಳನ್ನು ಕುರಿತೇ ಪ್ರತ್ಯೇಕವಾದ ಅಧ್ಯಯನವನ್ನು ಮಾಡಬಹುದು. ಈ ದಿಸೆಯಲ್ಲಿ ಪಾಟೀಲರ ಕೆಲವು ರೇಖಾಚಿತ್ರಗಳನ್ನು ಮಾತ್ರ ಆಯ್ದುಕೊಂಡು ವರ್ಗೀಕರಿಸಿ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ರೇಖಾಚಿತ್ರಗಳ ವರ್ಗೀಕರಣ

ರೇಖಾಚಿತ್ರಗಳು

ಅ. ಪೆನ್ಸಿಲ್ ಮತ್ತು ಪೇನ್ ಮಾಧ್ಯಮದ ರೇಖಾಚಿತ್ರಗಳು	ಬ. ಇಂಕ್ ಮಾಧ್ಯಮದ ರೇಖಾಚಿತ್ರಗಳು
೧. ಪ್ರಾಣಿ ಪಕ್ಷಿಗಳ ಚಿತ್ರಗಳು	೧. ಭಾವಚಿತ್ರಗಳು
೨. ಭಾವಚಿತ್ರಗಳು	೨. ಸಂಯೋಜನಾಚಿತ್ರಗಳು
೩. ಸಂಯೋಜನಾ ಚಿತ್ರಗಳು	೩. ನಿಸರ್ಗ ಚಿತ್ರಗಳು
೪. ಶಿಲ್ಪ ಮಾದರಿಯ ರೇಖಾಚಿತ್ರಗಳು	೪. ಶಿಲ್ಪಗಳ ರೇಖಾಚಿತ್ರಗಳು

ಅ. ಪೆನ್ಸಿಲ್ ಮತ್ತು ಪೆನ್ ಮಾಧ್ಯಮದ ರೇಖಾಚಿತ್ರಗಳು :

ಪ್ರಾಣಿ, ಪಕ್ಷಿಗಳ ಚಿತ್ರಗಳು

ಚಿತ್ರ ೧. ಆಡುಗಳ ಗುಂಪೊಂದರ ದೃಶ್ಯದಲ್ಲಿ ವಿವಿಧ ಭಂಗಿಗಳಲ್ಲಿ ಜ್ಯಾಮಿತಿಕ ಆಕಾರಗಳಲ್ಲಿ ಚಿತ್ರ ರಚಿತವಾಗಿದೆ. ಪಾಟೀಲರು ಸರಳವಾದ ಹೊರರೇಖೆಗಳನ್ನು ಬಳಸಿ ನೆರಳು ಬೆಳಕಿನ ಕಲ್ಪನೆ

---


೫. ಬಿ.ವಿ.ಕೆ.ಶಾಸ್ತ್ರಿ (ಸಂ.) : ರೇಖಾಚಿತ್ರ, ಪು. ೯೯.

ಪ್ರಾಣಿ ಮತು ಪಕ್ಷಿಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)




ಚಿತ್ರ ೧

ಪ್ರಾಣಿ ಮತು ಪಕ್ಷಿಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)



ಚಿತ್ರ ೨

ಪ್ರಾಣಿ ಮತು ಪಕ್ಷಿಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)



ಚಿತ್ರ ೧

ನೀಡದೆ ಸಹಜವಾದ ರೀತಿಯಲ್ಲಿ ಘನಾಕೃತಿ ಶೈಲಿಯಲ್ಲಿ ಚಿತ್ರವನ್ನು ರಚಿಸಿದ್ದಾರೆ. ಈ ಚಿತ್ರವು ಪಾಟೀಲರ ಅಕಾಡೆಮಿಕ ಶಿಕ್ಷಣದ ದಿನಗಳಲ್ಲಿ ರಚಿತಗೊಂಡಿದೆ. ಚಿತ್ರದಲ್ಲಿ ಸರಳರೇಖೆಗಳು ಸಾಮಾನ್ಯವಾಗಿ ಕಂಡುಬಂದರು ಪಾಶ್ಚಾತ್ಯ ಕಲೆಯ ಪ್ರಭಾವ ಎದ್ದು ಕಾಣುತ್ತದೆ.


ಚಿತ್ರ ೨. ಈ ಚಿತ್ರದಲ್ಲಿ ವಿವಿಧ ಭಂಗಿಗಳಲ್ಲಿರುವ ಕೊಕ್ಕರೆಯನ್ನು ಏಕರೇಖೆಯಿಂದ (ಕೊಕ್ಕರೆಯ ಮೈವಳಿಕೆಯನ್ನು) ರಚಿಸಿದ್ದಾರೆ. ಕೊಕ್ಕರೆಯು ತನ್ನ ಆಹಾರಕ್ಕಾಗಿ ಹವಣಿಸುವ ಭಂಗಿ ಹಾಗೂ ಒಂದೆಡೆಯಿಂದ ಇನ್ನೊಂದೆಡೆಗೆ ಪಯಣಕ್ಕಾಗಿ ಹಾರಿ ಹೋಗುವ ದೃಶ್ಯಾವಳಿಯಲ್ಲದೆ ತಮ್ಮಲ್ಲಿಯೇ ಸಂತೋಷ ಹಂಚಿಕೊಂಡು ವಿಚಾರ ವಿನಿಮಯಮಾಡಿಕೊಳ್ಳುತ್ತವೆ ಎನ್ನುವಂತಿವೆ.

ಸರಳ ರೇಖೆಗಳ ಆಕೃತಿಗಳು, ಕೊಕ್ಕರೆಯ ಆಹಾರವಾದ ಚಿಕ್ಕ ಚಿಕ್ಕ ಮೀನುಗಳು ನೀರಿನ ಅಲೆಗಳ ಲಾಲಿತ್ಯ ಸುಂದರವಾದ ರೇಖೆಗಳನ್ನು ಕಲಾವಿದ ಪಾಟೀಲರು ಚಿತ್ರಿಸಿದ್ದಾರೆ.

ಭಾವ ಚಿತ್ರಗಳು:

ಚಿತ್ರ ೧. ಈ ಬೈರಾಗಿ ಭಾವಚಿತ್ರವನ್ನು ಪೆನ್ನಿನಿಂದ ನೆರಳು ಬೆಳಕನ್ನು ತೋರಿಸುವುದರಿಂದ ಆತನ ಮೂಖದ ಭಾವನೆಯನ್ನು ತಮ್ಮ ಲೇಖನಿಯ ಮೂಲಕ ದೃಶ್ಯತ್ಮಕವಾಗಿ ಕಂಡುಕೊಂಡಿದ್ದಾರೆ. ಈ ಭಾವಚಿತ್ರ ರಚನೆಯಲ್ಲಿ ಬೈರಾಗಿಯ ವೇಷಭೂಷಣ, ಕೇಶಾಲಂಕಾರ, ನೀಳವಾದ ಗಡ್ಡ, ಸುಕ್ಕುಗಟ್ಟಿದ ಆತನ ವಯೋಮಾನವನ್ನು ಗುರುತಿಸುವಲ್ಲಿ ರಚನಾ ತಂತ್ರದ ದೃಷ್ಟಿಯಿಂದ ಭಿನ್ನವಾಗಿ ಇಲ್ಲಿನ ರೇಖೆಗಳು ಹರಿದಾಡಿದ ಬಗೆಯನ್ನು ಕಾಣಬಹುದು. ಈ ಭಾವಚಿತ್ರದಲ್ಲಿ ನೆರಳಿನ ಭಾಗವನ್ನು ಪೂರ್ಣವಾಗಿ ರೇಖೆಗಳಿಂದ ಆವೃತ್ತಿ ಗೋಳಿಸುವ ಮತ್ತು ರೂಪದರ್ಶಿಯ ಪ್ರತಿಯೊಂದು ಭಾಗವನ್ನು ತುಂಬಾ ಸೂಕ್ಷ್ಮ ಕುಶಲತೆಯಿಂದ ರಚಿಸಿದ ಆಸಕ್ತಿಯನ್ನು ಕಾಣಬಹುದು. ಪಾಟೀಲರ ಈ ಭಾವಚಿತ್ರದಲ್ಲಿ ರೇಖಾಲಾಲಿತ್ಯದ ಹರಿವು ಕಾಗದದ ಸ್ಥಳಾವಕಾಶದಲ್ಲಿ ಸಮರ್ಪಕವಾಗಿ ನಿರುಪಣೆ ಗೊಂಡಿದೆ.

ಚಿತ್ರ ೨. ಈ ಚಿತ್ರವು ಸಹ ಮೇಲಿನ ರೂಪದರ್ಶಿಯ ಚಿತ್ರಣವಾಗಿದ್ದು, ನಿರಾಳ ಭಾವದ ಈ ವ್ಯಕ್ತಿಯ ಭಾವನೆಯಲ್ಲಿ ಒಂದು ಘಟನೆಯನ್ನು ವಿವರಿಸುವಂತೆ ನಿಯೋಜಿತಗೊಂಡಿದೆ. ವೈರಾಗ್ಯದ ಸಂಕೇತವೆಂಬಂತೆ ಗಡ್ಡ-ಮೀಸೆ ಇವುಗಳ ಸ್ಪಷ್ಟತೆಯ ವಿವರಣಾತ್ಮಕ ರೇಖಾ ಲಾಲಿತ್ಯವನ್ನು ಈ ಕೃತಿಯಲ್ಲಿ ಕಾಣುತ್ತೇವೆ. ಆತನ ಮುಖದ ಭಾವ ಭಂಗಿಗೆ ಹೋಲುವ ಹಾಗೂ ಸರಿ ಹೊಂದುವ



ಚಿತ್ರ ೧

ಭಾವಚಿತ್ರಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)



ಚಿತ್ರ ೨

ಭಾವಚಿತ್ರಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)




ಚಿತ್ರ ೨

ಭಾವಚಿತ್ರಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)



ಚಿತ್ರ ೪

ಭಾವಚಿತ್ರಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)



ಚಿತ್ರ ೫

ಸರಿಹೊಂದುವ ಒಂದರ ಮೇಲೊಂದು ಹರಿದಾಡಿದ ರೇಖೆಗಳು ಭಾವ ಸ್ಫುರಣೆಗೆ ಅನುವಾಗುವಂತೆ ಅಲ್ಲಲ್ಲಿ ವಯಸ್ಸಿನ ಗುಣಕ್ಕನುಗುಣವಾಗಿ ಚರ್ಮದ ಸುಕ್ಕುಗಳು ಪ್ರಮಾಣ ಬದ್ಧವಾಗಿ ಮೂಡಿವೆ. ಕೇಶವಿನ್ಯಾಸದಲ್ಲಿ ಅತ್ಯಂತ ಸೂಚವಾಗಿ ಅಲ್ಪ ರೇಖೆಗಳನ್ನು ಮೂಡಿಸುವದರೊಂದಿಗೆ ಆತನ ವಯೋಮಾನವನ್ನು ತೋರ್ಪಡಿಸಲು ಯತ್ನಿಸಿದ್ದಾರೆ. ಹೀಗೆ ಈ ಭಾವಚಿತ್ರದಲ್ಲಿ ಭಾವಚಹರೆಯನ್ನು ವಿವರವಾಗಿ ಪ್ರಕಟಿಸುವ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಚಿತ್ರ ೩. ಈ ಭಾವ ಚಿತ್ರವು ಪಾಟೀಲರ ಅಲ್ಪ ಸಮಯದಲ್ಲಿ ವೃದ್ಧನನ್ನು ಅತ್ಯಂತ ಸುಂದರವಾದ ರೇಖೆಗಳಿಂದ ರಚಿಸಿದ್ದಾರೆ. ಮಾನವ ಅಂಗಾಂಗ ಶಾಸ್ತ್ರದ (ಅನಾಟಮಿ) ಅಂಶಗಳನ್ನು ಅನುಸರಿಸಿ ಬೆಳಕು ನೆರಳಿನ ಛಾಯೆಯನ್ನು ಮೂಡಿಸದೆ ಸ್ನಾಯುಗಳ ಸ್ಪಷ್ಟರೂಪವನ್ನು ಚಿತ್ರದಲ್ಲಿ ಮೂಡಿಸಿದ್ದಾರೆ. ರೂಪದರ್ಶಿಗೆ ಬಾಹ್ಯರೇಖೆಯನ್ನು ಎಳೆದಿದ್ದರೂ ಕೂಡ ಅದು ಪ್ರತ್ಯೇಕವಾಗಿ ಗೋಚರವಾಗುವುದಿಲ್ಲ. ದೇಹದ ಒಟ್ಟು ಭಾಗವನ್ನು ಕಾಣುವ ಈ ಚಿತ್ರದಲ್ಲಿ ಅತನ ಉಡುಗೆ ತೊಡುಗೆಗಳ ಮೂಲಕ ಆತನ ಗಂಭಿರಭಾವವನ್ನು ಪ್ರಕಟಿಸಿದ್ದಾರೆ.

ಚಿತ್ರ ೪. ಈ ಹಿಂದಿನ ಭಾವಚಿತ್ರಗಳಿಗಿಂತ ಭಿನ್ನವಾಗಿ ಪೆನ್ಸಿಲಿನ ನೀಳವಾದ ಬೀಸುಗಳ ಮೂಲಕ ರೇಖೆಗಳನ್ನು ದುಡಿಸಿಕೊಂಡ ಮಹಿಳೆಯ ಪೂರ್ಣಪಾರ್ಶ್ವದ ರಚನೆ ಇದಾಗಿದೆ. ಮುಖದಲ್ಲಿ ಸೂಕ್ಷ್ಮವಾದ, ತೆಳುವಾದ ರೇಖೆಗಳು ಸೂಚ್ಯವಾಗಿ ಮೂಡಿದ್ದನ್ನು ಹೊರತುಪಡಿಸಿದರೆ ಬೇರೆ ಯಾವುದೇ ಬಗೆಯ ಛಾಯೆಗಳು ಕಂಡುಬರುವುದಿಲ್ಲ. ಆದರೆ ಹೊರರೇಖೆಗಳ ಮೂಲಕ ಮಹಿಳೆಯ ರೂಪಭಾವ, ಅಲಂಕಾರ ಎಂದಿನ ರೇಖಾ ಲಾಲಿತ್ಯದಂತೆ ತೆಳುವಾಗಿ ಹರಿದಾಡಿವೆ. ಒಟ್ಟಿನಲ್ಲಿ ಈ ಭಾವಚಿತ್ರವನ್ನು ಹೆಚ್ಚು ಶ್ರಮವಿಲ್ಲದೆ ಅಲ್ಪ ಸಮಯದಲ್ಲಿ ರಚಿಸಿದ ಚಿತ್ರ ಇದಾಗಿದೆ.


ಚಿತ್ರ ೫. ಈ ಭಾವಚಿತ್ರ ರಚನೆಯಲ್ಲಿ ಪಾಟೀಲರು ವಿಶಿಷ್ಟವಾಗಿ ರೂಪದರ್ಶನವನ್ನು ಆಯ್ದುಕೊಂಡಿದ್ದಾರೆ. ಭಾವಚಿತ್ರದಲ್ಲಿನ ರೇಖಾ ನಿರ್ವಹಣೆ ಇಲ್ಲಿಯೂ ಕೂಡ ಪುನರಾವರ್ತನೆಯಾಗಿದೆ. ಭಾವಸ್ಫುರಣೆಗೆ ಹೆಚ್ಚು ಒತ್ತು ನೀಡಿ ಹರಿದಾಡಿದ ಇಲ್ಲಿನ ರೇಖೆಗಳು ಸ್ಪಷ್ಟವಾಗಿ ಮೂಡಿವೆ. ಹಿನ್ನಲೆಯ ಆವಕಾಶವಾಗಿ ಯಾವುದೆ ಬಗೆಯ ವಿನ್ಯಾಸಗಳು ಮೂಡದೆ ಭಾವರೂಪ ಸ್ಪಷ್ಟತೆಯನ್ನು ಅತ್ಯಂತ ಅಲ್ಪ ರೇಖೆಗಳಿಂದಲೇ ಚಿತ್ರಿಸಲಾಗಿದೆ. ಮುಖ ಭಾವದಲ್ಲಿ ಮತ್ತು ಉಡುಪಿನಲ್ಲಿ ಯಾವುದೇ ಛಾಯೆಯನ್ನು ತೊರಿಸದೆ ಅವಕಾಶದಲ್ಲಿ ಮಾತ್ರ ಕೇವಲ ಹೊರರೇಖೆಗಳ ಮೂಲಕ ಚಿತ್ರವನ್ನು ರಚಿಸಿದ್ದಾರೆ.

ಸಂಯೋಜನಾ ರೇಖಾಚಿತ್ರಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)



ಚಿತ್ರ ೧

ಸಂಯೋಜನಾ ರೇಖಾಚಿತ್ರಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)



ಚಿತ್ರ ೨

ಸಂಯೋಜನಾ ರೇಖಾಚಿತ್ರಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)



ಚಿತ್ರ ೩

ಸಂಯೋಜನಾ ರೇಖಾಚಿತ್ರಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)




ಚಿತ್ರ ೪

ಸಂಯೋಜನಾ ರೇಖಾಚಿತ್ರಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)



ಚಿತ್ರ ೫

ಸಂಯೋಜನಾ ರೇಖಾಚಿತ್ರಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)




ಚಿತ್ರ ೬

ಸಂಯೋಜನಾ ರೇಖಾಚಿತ್ರಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)



ಚಿತ್ರ ೭



ಚಿತ್ರ ೮

ಸಂಯೋಜನ ರೇಖಾಚಿತ್ರಗಳು :

ಚಿತ್ರ ೧–೪. ಆಧುನಿಕ ನೆಲೆಯಲ್ಲಿ ರಚಿಸಿರುವ ಈ ಕಲಾವಿದರು ಕೆಲವು ಕಲಾಕೃತಿಗಳಲ್ಲಿ ಪ್ರಾಣಿ, ಪಕ್ಷಿ, ಮನುಷ್ಯ ಪ್ರಾಣಿಗಳೊಂದಿಗೆ, ಮಾನವ ಮತ್ತು ಪಕ್ಷಿಗಳ ಒಡನಾಟ, ದೈವದತ್ತ ನಿಸರ್ಗದ ಬದುಕು, ಕಾಳಿಂಗ ಸರ್ಪದೊಂದಿಗೆ ದೇವತೆಗಳು ಮತ್ತು ಹಂಸ ಈ ರೀತಿಯಾದ ವಸ್ತು ವಿಷಯಗಳನ್ನಾಯ್ದುಕೊಂಡು ಚಿತ್ರ ರಚಿಸಿದ್ದಾರೆ. ಇವೂ ಕೂಡ ಏಕ ಸರಣಿಯ ಕೃತಿಗಳಾಗಿ ಕಂಡು ಬರುತ್ತವೆ. ಒಂದಕ್ಕೊಂದು ತಳಕು–ಬಳಕು ಹೊಂದಿವೆ. ಒಂದರಲ್ಲಿ ಇನ್ನೊಂದು (ಕೃತಿ) ವಸ್ತು ಸೇರಿಕೊಂಡಂತೆ ಮತ್ತು ಹಾಗೆ ಎಲ್ಲವೂ ಒಂದೇ ಎನ್ನುವಂತೆ ಕೃತಿಯಲ್ಲಿ ರಚಿಸಿದ್ದಾರೆ. ತಮ್ಮ ಆಲೋಚನಾ ಶಕ್ತಿ ಹಾಗೂ ವಿಮರ್ಶೆಗೆ ಒಳಪಡಿಸುವ ರೀತಿಯಲ್ಲಿ ಕೃತಿಗಳನ್ನು ರಚಿಸಿದ್ದಾರೆ. ತಮ್ಮ ಅನುಭವಿ ನವಿರು ರೇಖೆಗಳಿಗೆ ಒಂದು ರೂಪವನ್ನು ಕೊಡುವ ಕಾರಣಕ್ಕಾಗಿ ಅಲಂಕಾರಿಕ ನೆಲೆಯಲ್ಲಿ ಚಿತ್ರ ಸಂಖ್ಯೆ ೧,೨,೩,೪ ಸರಣಿಚಿತ್ರಗಳಾಗಿ ರಚಿತಗೊಂಡಿವೆ. ಚಿತ್ರದಲ್ಲಿ ಮೂಖಭಾವದಲ್ಲಿ ನವಿರಾದ ರೇಖಾವಿನ್ಯಾಸ, ಸುಮದುರ ಲಯ, ಬಿಂಕ ಬಿನ್ನಾಣದ ಗುಣಲಕ್ಷಣಗಳು ಚಿತ್ರದ ಸೌಂದರ್ಯವನ್ನು ಹೆಚ್ಚಿಸಿವೆ. ಈ ಮೇಲಿನ ನಾಲ್ಕು ರೇಖಾಚಿತ್ರಗಳಲ್ಲಿ ಸಾಂಕೇತಿಕ ವಿನ್ಯಾಸಗಳನ್ನು ಬಳಸಿ ಹಾಗೂ ಪಕ್ಷಿಗಳನ್ನು ಪ್ರಾಣಿಗಳನ್ನು ಅಲಂಕಾರಿಕವಾಗಿ ಸಂಯೋಜಿಸಿದ್ದಾರೆ. ಇಲ್ಲಿ ರಚಿತಗೊಂಡ ಪಕ್ಷಿಗಳು ರೇಖಾವೈಖರಿಯಲ್ಲಿ ನೈಜವಾಗಿ ಮೂಡಿಬಂದಿವೆ. ಮಾನವ ರೂಪಗಳು ಅಮೂರ್ತಭಾವ ನೀಡಿದರೂ ನೈಜತೆಯ ಸ್ವಭಾವವನ್ನು ಮೈಗೂಡಿಸಿಕೊಂಡಿವೆ. ಹಾಗೂ ಸಂಯೋಜನ ಸತ್ವ–ತತ್ವಗಳನ್ನು ಅಳವಡಿಸುವಲ್ಲಿ ಮಿತವಾದ ರೇಖೆಗಳು ಇಲ್ಲಿ ಸಮ್ಮಿಳಿತಗೊಂಡಿವೆ.

ಚಿತ್ರ ೫–೮ ಆಧುನಿಕ ಶೈಲಿಯ, ಜಾಮಿತಿಕ ಆಕಾರಗಳನ್ನು ಹೋಲುವ ವಸ್ತು ವಿಷಯಗಳನ್ನು ಆಯ್ದುಕೊಂಡು ಬದುಕು ಮತ್ತು ಹೋರಾಟ ಈ ರೀತಿಯಾಗಿ ವಸ್ತು ವಿಷಯಗಳನ್ನು ಇಲ್ಲಿ ಕಾಣುತ್ತೇವೆ. ಕಾರ್ಮಿಕ ಬದುಕು, ಮನುಷ್ಯನ ಅಭಿವ್ಯಕ್ತಿಗಳನ್ನು ಜಾಮಿತಿಕ ರೂಪದಲ್ಲಿ ಬಳಸಿ ಸುಂದರ ರೇಖೆಗಳಿಂದ ರಚಿಸಿದ್ದಾರೆ.

ಸ್ತ್ರೀ–ಪರುಷರು ಸಂತೋಷದಲ್ಲಿ ತೇಲಿ ಹೋಗಿ ಒಂದು ಉತ್ಸವವನ್ನು ಆಚರಿಸುವಂತೆ ಗೋಚರಿಸುತ್ತದೆ. ಸುಗ್ಗಿಯ ಮತ್ತು ಹಬ್ಬದ ವಾತಾವರಣದಲ್ಲಿ ಮಹಿಳೆಯರು ಹಂಚಿಕೊಳ್ಳುವ ಸಂತೋಷವನ್ನು ಈ ರೇಖಾಕೃತಿಗಳಲ್ಲಿ ಕಾಣುತ್ತವೆ. ಇನ್ನೊಂದು ಬಗೆಯಾಗಿ ಗಮನಿಸಿ ನೋಡಿದಾಗ, ಕೋಲಾಟದಂತೆಯು ಮತ್ತು ಮಕ್ಕಳು ಹಗ್ಗದಾಟವಾಡುವಂತೆಯೂ ಕಾಣುತ್ತದೆ. ಇವುಗಳಲ್ಲಿ ರೇಖಾ


ಶಿಲ್ಪ ಮಾದರಿ ರೇಖಾಚಿತ್ರಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)




ಚಿತ್ರ ೧



ಚಿತ್ರ ೨



ಚಿತ್ರ ೩




ಚಿತ್ರ ೪

ಶಿಲ್ಪ ಮಾದರಿ ರೇಖಾಚಿತ್ರಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)



ಚಿತ್ರ ೫

ಶಿಲ್ಪ ಮಾದರಿ ರೇಖಾಚಿತ್ರಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)



ಚಿತ ೬

ಸಂಯೋಜನೆಯನ್ನು ಗಮನಿಸಿದಾಗ ನಿಸರ್ಗದಲ್ಲಿರುವ ಹೂಗಳಂತೆಯೂ ಭಾಸವಾಗುತ್ತದೆ. ನಿಸರ್ಗ ಮತ್ತು ಬದುಕು ಈ ಪಯಣದಲ್ಲಿ ಕಲಾವಿದನ ರೇಖಾ ಪ್ರಮಾಣ ಚೆನ್ನಾಗಿ ಮೂಡಿ ಬಂದಿದೆ. ಚಿತ್ರ ಸಂಖ್ಯೆ ೫,೬,೭,೮,೯ ಗಳಲ್ಲಿ ಈ ಮೇಲಿನ ವಿಷಯವನ್ನಾಧರಿಸಿ ಭಾರತಿಯ ಜನಪದ ಶೈಲಿಯಾದ ವಾರ್ಲಿ ಚಿತ್ರಕಲೆಯ ಪ್ರಭಾವದ ಹಿನ್ನಲೆಯ ರೇಖೆಗಳಿಂದ ಇವುಕೂಡಿವೆ. ಒಟ್ಟಾರೆ ಈ ಚಿತ್ರಗಳಲ್ಲಿ ಭಾರತಿಯ ಗ್ರಾಮೀಣ ಪರಿಸರದಲ್ಲಿ ಹಬ್ಬ ಹರಿದಿನ, ವ್ಯವಸಾಯದ ದಿನಗಳಲ್ಲಿ ಆಚರಿಸುವ ಧಾರ್ಮಿಕ ಮತ್ತು ಗ್ರಾಮೀಣ ಕಲೆಗಳನ್ನು ತಮ್ಮ ಚಿತ್ರದಲ್ಲಿ ಕಡಿಮೆ ರೇಖೆಗಳ ಮೂಲಕ ದೃಶ್ಯಾತ್ಮಕವಾಗಿ ಚಿತ್ರಿಸಿದ್ದಾರೆ.

ಶಿಲ್ಪ ಮಾದರಿಯ ರೇಖಾ ಚಿತ್ರಗಳು:

ಚಿತ್ರ ೧–೬. ಕಲಾವಿದ ಶಂಕರ ಪಾಟೀಲರು ಯಾವುದೇ ವಿಷಯ ಆಯ್ದುಕೊಂಡು ಅದೊಂದು ಹೊಸ ಸವಾಲಾಗಿ ಸ್ವೀಕರಿಸುವುದರೊಂದಿಗೆ ಆಯಾ ಮಾಧ್ಯಮದಲ್ಲಿ ಕಲಾಕೃತಿ ರಚಿಸುವಲ್ಲಿ ಬಹಳ ಸರಳವಾಗಿ ಆಟವಾಡಿ ಕೃತಿ ರಚಿಸಿರುವುದನ್ನು ಕಾಣುತ್ತೇವೆ. ಹಾಗೆಯೇ ವಿಷಯ ಸರಣಿ ಕೂಡಾ ಬಹಳ ಪ್ರಾಮುಖ್ಯವಾಗಿ ಆಯ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ.

ಅವರು ರಚಿಸಿರುವ ಶಿಲ್ಪ ಮಾದರಿ ಕೃತಿಗಳಲ್ಲಿ ಈ ಬಗೆಯ ಪ್ರಯೋಗಗಳು ಕಾಣಸಿಗುತ್ತದೆ. ಈ ಶಿಲ್ಪ ಮಾದರಿಯ ಕೃತಿಗಳಲ್ಲಿ ಗಣೇಶನನನ್ನು ವಿವಿಧ ಭಂಗಿಗಳಲ್ಲಿ ರಚಿಸಿದ್ದಾರೆ. ನಿಂತಿರುವ ಮತ್ತು ತೆಳ್ಳಗಿನ ಗಣಪ, ಕುಳಿತ ಕುಬ್ಜಗಣಪ, ಪ್ರಾಣಿಯ ಮೇಲೆ ಸವಾರಿ ಹೊರಟ ಗಣಪ, ನಿಂತಿರುವ ಗಣಪ ಹೀಗೆ ಹಲವಾರು ಬಗೆಯ ಗಣಪತಿಯನ್ನು ರಚಿಸಿದ್ದಾರೆ. ಹೀಗೆ ರಚಿಸಿರುವ ಕೃತಿಯಲ್ಲಿ ರೇಖಾ ವಿಧಾನ ಒಂದೆ ಆಗಿದ್ದರು ಕೂಡಾ ವಿವಿಧ ಮಾದರಿಯ ಹಾಗೂ ವಿವಿಧ ಶೈಲಿಯ ಗಣಪತಿಯ ರೇಖಾಚಿತ್ರಗಳಾಗಿವೆ. ಇವು ೧೭ನೇ ಶತಮಾನದಲ್ಲಿ ರಚಿತಗೊಂಡಿರುವ ಮೂರ್ತಿಶಿಲ್ಪಗಳಾಗಿದ್ದು ಇವು ದೇಹಲಿಯ ನ್ಯಾಶನಲ್ ಮ್ಯೂಜಿಯಂನಲ್ಲಿ ಸಂಗ್ರಹವಾದ ಕಲಾಕೃತಿಗಳ ಮಾದರಿಗಳಾಗಿವೆ. ಇವುಗಳಲ್ಲಿ ಪ್ರಮುಖವಾಗಿ ವಲ್ಲಭ ಗಣಪತಿ ಬಂಗಾಲದ ಸಂಗ್ರಹದಲ್ಲಿರುವ ಕ್ರಿ.ಶ. ೧೦ನೇ ಶತಮಾನದಲ್ಲಿ ರಚಿತಗೊಂಡಿರುವ ಗಣಪತಿಯ ಶಿಲ್ಪದ ಪ್ರತಿಕೃತಿಯ ರೇಖಾಕೃತಿ ಅಲ್ಲದೆ, ದೆಹಲಿಯ ಮ್ಯೂಸಿಯಂನಲ್ಲಿರುವ ೧೭ನೇ ಶತಮಾನದಲ್ಲಿ ರಚಿತಗೊಂಡಿರುವ ಲೋಶಿಲ್ಪದ ಗಣಪತಿಯ ಪ್ರತಿಕೃತಿಗಳ ಕಲಾಕೃತಿಗಳು ಪ್ರಮುಖವಾಗಿವೆ. ಇವುಗಳಲ್ಲಿ ಕೆಲವು ಪೆನ್ಸಿಲಿನಿಂದ ರಚನೆಮಾಡಿದ್ದಾರೆ. ಇನ್ನೂ ಕೆಲವು ಕೃತಿಗಳನ್ನು ಪೆನ್ನಿನಿಂದ ರಚನೆ ಮಾಡಿದ್ದಾರೆ.

ಶಿಲ್ಪ ಮಾದರಿ ರೇಖಾಚಿತ್ರಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)



ಚಿತ್ರ ೭

ಶಿಲ್ಪ ಮಾದರಿ ರೇಖಾಚಿತ್ರಗಳು (ಪೆನ್ಸಿಲ್ ಮತ್ತು ಪೆನ್ ಮಾಧ್ಯಮ)



ಚಿತ್ರ ೮



ಚಿತ್ರ ೯



ಚಿತ್ರ ೧೦

ಚಿತ್ರ ೭. ಬೌದ್ಧ ಶೈಲಿಯಲ್ಲಿ ರಚಿತವಾಗಿರುವ ಕೃತಿಗಳ ಪ್ರತಿ ಮಾದರಿ ರೇಖಾಕೃತಿಗಳನ್ನು ಕಲಾವಿದ ಪಾಟೀಲರು ಇಲ್ಲಿ ರಚಿಸಿದ್ದಾರೆ.

"ತ್ರಿಮೂರ್ತಿ" ಬೌದ್ಧ ಶೈಲಿಯ ಈ ಕಲಾಕೃತಿಯು ಕಲ್ಕತ್ತಾ ಆರ್ಟ್ ಗ್ಯಾಲರಿಯಲ್ಲಿ ಸಂಗ್ರಹಗೊಂಡ ತಾಮ್ರ ಮಾಧ್ಯಮದ ಮೂರ್ತಿಯಾಗಿದ್ದು, ಇದರ ಪ್ರತಿಕೃತಿ ರೇಖಾಕೃತಿಯನ್ನು ಕಾಲಾವಿದರ ಕೌಶಲ್ಯದೊಂದಿಗೆ ವಿನ್ಯಾಸಗೊಂಡಿದೆ. ಕಣ್ಣು, ಕೈ, ಬೆರಳು ಕುಳಿತ ಭಂಗಿ ಎಲ್ಲಿಯೂ ನಿಲ್ಲದ ರೇಖಾ ಚಲನೆ ಸ್ಪಷ್ಟವಾದ ವಿವರಣೆಯನ್ನು ರೇಖೆಗಳಿಂದ ಕಲಾತ್ಮಕಗೊಳಿಸಿದ್ದಾರೆ.

ಚಿತ್ರ ೮. ರಲ್ಲಿ ಬೌದ್ಧ ಶೈಲಿಯ ಶಿವನ ಕೃತಿಯೂ ಕೂಡ ಮೇಲೆ ತಿಳಿಸಿದಂತೆ ಅಷ್ಟೆ ಸೊಗಸಾಗಿ ಮೂಡಿಸಿದ್ದಾರೆ.

ಚಿತ್ರ ೯. ಮೆರವಣಿಗೆ ಹೊರಟ ಕುಬ್ಜ ಮನುಷ್ಯರ ರೇಖಾಕೃತಿಯಲ್ಲಿ ಬಹಳ ಸರಳವಾಗಿ ರೇಖೆಗಳು ಆಕಾರ ಪಡೆದಿವೆ. ಸಾಲಾಗಿ ಹೋರಟ ಈ ಕುಬ್ಜ ಮಾನವರ ರೇಖಾ ಕೃತಿಗಳ ವಿವಿಧ ಭಂಗಿಗಳಲ್ಲಿ ನವೀರಾದ ರೇಖೆಗಳು ಆಕರ್ಷಕವಾಗಿವೆ.

ಚಿತ್ರ ೧೦. ರಲ್ಲಿ ಬೌದ್ದ ಹಾಗೂ ಅಜಂತಾ ಭಿತ್ತಿಚಿತ್ರಗಳು, ಚಾಲುಕ್ಯರ ಶೈಲಿಯನ್ನು ಹೋಲುವ ಗಿರಿಜಾ ಕಲ್ಯಾಣದ ಈ ಕೃತಿಯಲ್ಲಿ ಉತ್ತಮ ಸಂಯೋಜನೆ ಇದೆ. ಕೇವಲ ಕೆಲವೇ ರೇಖೆಗಳಿಂದ ಸ್ಪಷ್ಟ ವಿವರಣೆ ನೀಡುವಂತೆ ಈ ಕೃತಿಯನ್ನು ರಚಿಸಿದ್ದಾರೆ ಇಲ್ಲಿ ರೇಖೆಯ ಲಾಲಿತ್ಯಕ್ಕೆ ಹೆಚ್ಚಿನ ಮಹತ್ವವಿದೆ. ಹಾಗೂ ಋಷಿಮುನಿಗಳು ಬ್ರಹ್ಮ, ಗಣಪತಿ ಮುಂತಾದ ದೇವತೆಗಳ ಸಮ್ಮುಖದಲ್ಲಿ ಈ ಕಲ್ಯಾಣ ಮಹೋತ್ಸವ ನಡೆಯುವ ಸನ್ನಿವೇಶವನ್ನು ತಮ್ಮ ರೇಖಾ ಪ್ರೌಢಿಮೆಯಿಂದ ವಿನ್ಯಾಸಗೊಳಿಸಿದ್ದು ಸತ್ವಶಾಲಿಯಾದ ರೇಖೆಗಳು ವಿಷಯಕ್ಕೆ ಪೂರಕವಾದ ಸಂಯೋಜನೆ ಪ್ರಮಾಣ ಬದ್ಧತೆಗೆ ಅನುಗುಣವಾಗಿ ಮೂಡಿ ಬಂದ ಈ ಚಿತ್ರ ನೋಡುಗರ ಗಮನ ಸೆಳೆಯುತ್ತದೆ.

ಪಾಟೀಲರ ಇತರೆ ಚಿತ್ರಗಳಿಗಿಂತ ಈ ಚಿತ್ರ ಕೊಂಚ ಭೀನ್ನವಾಗಿ ಮೂಡಿ ಬಂದಿದೆ. ಚಿತ್ರದಲ್ಲಿ ಚಲನೆಯೂ ಬ್ರಾಂತಿಯನ್ನುಂಟು ಮಾಡುತ್ತವೆ. ಈ ನಿಟ್ಟಿನಲ್ಲಿ ರೇಖೆಗಳ ಮೂಲಕ ರೂಪವಿನ್ಯಾಸಗಳಿಗೆ ಪೂರಕ ಸಂಭಂದವನ್ನು ಕಲ್ಪಿಸುವ ನಿಟ್ಟಿನಲ್ಲಿ ಈ ಸಂಯೋಜನ ರೇಖಾಚಿತ್ರ ರಚಿತವಾಗಿದೆ.


ಶಾಹಿ (ಇಂಕ್) ಮಾಧ್ಯಮದ ರೇಖಾಚಿತ್ರಗಳು :

ಈ ಹಿಂದೆ ಚಿತ್ರಗಳಿಗೆ ಪೂರ್ವ ಯೋಜಿತ ಅಧ್ಯಯನಶೀಲ ಸ್ಕೆಚ್‌ಗಳಂತಿದ್ದ ರೇಖಾಚಿತ್ರಗಳು ಈಗ ಸಂಪೂರ್ಣ ಕಲಾಕೃತಿಗಳಾಗಿರುವುದು ಗಮನಾರ್ಹವಾದ ವಿಷಯ. "ಸಾಂಪ್ರದಾಯಿಕ ಕಾಲದ ಎಲ್ಲಾ ಕಲಾವಿದರು ತಾವು ಉತ್ತಮ ಕಲಾವಿದರಾಗಬೇಕೆಂದೇ ಬಯಸುತ್ತಿದ್ದರು. ಪಿಕಾಸೋ, ಲಿಯಾನಾರ್ಡೊ ಡಾವಿಂಚಿ, ರೆಂಬ್ರಾಂಟ್ ನಂತವರ ರೇಖಾಚಿತ್ರಗಳು ಪೂರ್ಣಗೊಳಿಸಿದ ಕಲಾಕೃತಿಗಳೇ ಆಗಿರುತ್ತಿದ್ದವು. ಮತ್ತೆ ಕೆಲವು ಕಲಾವಿದರುಗಳು ತಮ್ಮ ಸ್ಕೆಚ್‌ಗಳನ್ನು ವರ್ಣಚಿತ್ರ, ಭಿತ್ತಿಚಿತ್ರಗಳಿಗೆ ಪೂರಕವಾಗುವಂತೆ ರಚಿಸುತ್ತಿದ್ದರು. ಆದರೆ ಈ ಎರಡರಲ್ಲೂ ಆಯಾ ಕಲಾವಿದರ ಸಾಮರ್ಥ್ಯ ಬಹುಕಾಲದ ಅನುಭವ ಒಂದೆ ಮಟ್ಟದಲ್ಲಿರುತ್ತಿತ್ತು" ಎಂದು ಕೆ.ವಿ.ಸುಬ್ರಮಣ್ಯಂರವರು ಅಭಿಪ್ರಾಯ ಈಗಲೂ ಸರಿಯನಿಸುತ್ತದೆ.


ಪಾಟೀಲರು ಸಹಿತ ವರ್ಣಚಿತ್ರಗಳಿಗೆ ಬೇಕಾಗುವಂತಹ ಅನೇಕ ರೇಖಾಚಿತ್ರಗಳನ್ನು, ಭಾವಚಿತ್ರ, ಜೀವಮಾದರಿ ಚಿತ್ರ, ನಿಸರ್ಗಚಿತ್ರ, ಮೂರ್ತಿಶಿಲ್ಪ, ದೈನಂದಿನ ಸ್ಕೆಚ್‌ಗಳನ್ನು ಶಾಹಿ ಮಾಧ್ಯಮದಲ್ಲಿ ರಚಿಸಿದ್ದಾರೆ. ಇಲ್ಲಿ ಇಂಕ್ ಎನ್ನುವ ಇಂಗ್ಲೀಷ ಪದಕ್ಕೆ ಕನ್ನಡದಲ್ಲಿ ಶಾಹಿ ಅಥವಾ ಮಸಿ ಎಂದು ಕರೆಯುತ್ತಾರೆ. ಇಂತಹ ಶಾಹಿಯನ್ನು ಲೆಕ್ಕಣಿಕೆಗೆ ತುಂಬಿ ಅಥವಾ ಕುಂಚಗಳ ಮುಖಾಂತರ ಚಿತ್ರಗಳನ್ನು ರಚಿಸುವುದು ಕಂಡು ಬರುತ್ತದೆ. ಇಲ್ಲಿ ನೆರಳ-ಬೆಳಕನ್ನು ಪೆನ್ಸಿಲ್‌ನಂತೆ ಹರಡಿ ತೋರಿಸಲು ಸಾಧ್ಯವಿಲ್ಲವಾದರೂ ಅದನ್ನೆ ರೇಖೆಗಳ ಮುಖಾಂತರ ಹತ್ತಿರ-ಹತ್ತಿರ ರಚನೆ ಮಾಡಿ ನೆರಳಿನ ಅನುಭವವನ್ನು ನೀಡಬಹುದು. ಇಂಕ್ ಮಾಧ್ಯಮದಲ್ಲಿ ರೇಖೆಗಳು ಪೆನ್ಸಿಲ್ ಮಾಧ್ಯಮದ ಹಾಗೆ ಅತೀ ತಿಳುವಾಗಿ ಮೂಡಿ ತಕ್ಕ ಮಟ್ಟಿಗೆ ದಪ್ಪಗಾಗಿ ಚಿತ್ರಗಳಲ್ಲಿ ರಚಿತಗೊಂಡಿವೆ.

ಇಂಕ್ ಮಾಧ್ಯಮದ ರೇಖಾಚಿತ್ರಗಳು :

ಹೀಗೆ ಇಂಕ್ ಮಾಧ್ಯಮದಲ್ಲಿಯೂ ಪಾಟೀಲರ ಬಹುಕಾಲದ ಸಾಮರ್ಥ್ಯ ಹೆಪ್ಪುಗಟ್ಟಿದೆ. ಇವರು ಹೆಚ್ಚಾಗಿ ಕಪ್ಪು ವರ್ಣದ ಇಂಕ್‌ನಿಂದ ಚಿತ್ರ ರಚಿಸಿದ್ದು, ಕೆಲವಡೆ ಇಂಕ್‌ನ್ನು ಕುಂಚದಿಂದ ಬಳಸಿ ನೆರಳು-ಬೆಳಕು, ಯಥಾದರ್ಶನ, ಸನಿಹ-ದೂರದ ಅನುಭವವನ್ನು ತೋರಿಸಿದ್ದಾರೆ. ಆ ಮಾಧ್ಯಮದಲ್ಲಿ ಮಧ್ಯಮ ಛಾಯೆ(ಮಿಡಲ್ ಟೋನ್) ತೋರಿಸಲು ಸ್ವಲ್ಪ ಕಷ್ಟಕರವಾದರೂ ರೇಖೆಗಳನ್ನು ದೂರ ಎಳೆದು ಅದರ ಪ್ರಭಾವವನ್ನು ತಮ್ಮ ರೇಖಾಚಿತ್ರಗಳಲ್ಲಿ ತೋರಿಸಿದ್ದಾರೆ.



ಚಿತ್ರ – ೧ ಸ್ವ – ಭಾವಚಿತ್ರ



ಚಿತ್ರ – ೨ ವೃದ್ಧ

ಈ ಮಾಧ್ಯಮದ ಚಿತ್ರಗಳನ್ನು ಅಧ್ಯಯನ ದೃಷ್ಟಿಯಿಂದ ಈ ರೀತಿ ವಿಂಗಡಿಸಿಕೊಂಡು ವಿವರಿಸಲಾಗಿದೆ.

೧. ಭಾವಚಿತ್ರಗಳು

೨. ಸಂಯೋಜನಾ ಚಿತ್ರಗಳು

೩. ನಿಸರ್ಗ ಚಿತ್ರಗಳು


೪. ಶಿಲ್ಪಗಳ ರೇಖಾಚಿತ್ರಗಳು

ಪಾಟೀಲರು ಪೆನ್ಸಿಲ್ ಮಾಧ್ಯಮ ಬಳಸಿಕೊಂಡು ಭಾವಚಿತ್ರಗಳನ್ನು ರಚಿಸಿದಂತೆ ಶಾಹಿ(ಇಂಕ್) ಮಾಧ್ಯಮವನ್ನು ಲೇಖನಿ ಮತ್ತು ಕುಂಚದ ಮುಖಾಂತರ ಸಮರ್ಥವಾಗಿ ತಮ್ಮನ್ನು ತೊಡಗಿಸಿಕೊಂಡು ಭಾವಚಿತ್ರಗಳನ್ನು ರಚಿಸಿದ್ದಾರೆ. ಅಂತಹ ಕೆಲವು ಭಾವಚಿತ್ರಗಳನ್ನು ಇಲ್ಲಿ ಆಯ್ಕೆಮಾಡಿಕೊಂಡು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಭಾವಚಿತ್ರಗಳು :

ಚಿತ್ರ ೧. ಸ್ವಭಾವಚಿತ್ರ : ಪಾಟೀಲರು ಇಂಕ್ ಮಾದ್ಯಮದಲ್ಲಿ ತಮ್ಮ ಕುಂಚದಿಂದ ತಮ್ಮ ಸ್ವಭಾವಚಿತ್ರ ರಚಿಸಿದ್ದು ಕಡುವಾದ ರೇಖೆಗಳಿಂದ ನೆರಳು-ಬೆಳಕಿನ ಛಾಯೆಯನ್ನು ತೋರಿಸುವ ಘನಾಕೃತಿಯ ಶೈಲಿಯದ್ದಾಗಿದ್ದು. ಮುಖಭಾವದಲ್ಲಿ ಪಾಟೀಲರ ಮುಗ್ದತೆ ಕೇಶವಿನ್ಯಾಸ ಮತ್ತು ಅವರ ವಯೋಮಾನವನ್ನು ಸರಳವಾಗಿ ಗುರುತಿಸಬಹುದು ಜೊತೆಗೆ ಅವರ ಕಣ್ಣಿನಲ್ಲಿಯ ಭಾವನೆ, ಚಿಂತನಾ ಶೀಲತೆ ಇವೆಲ್ಲವುಗಳನ್ನು ಕೇವಲ ಹತ್ತಾರು ಬಿಡಿ ರೇಖೆಗಳನ್ನು ಬಳಸಿ ರೇಖಾಚಿತ್ರಣ ಮಾಡಿರುವುದು ಈ ಚಿತ್ರದ ವಿಶೇಷತೆ.

ಚಿತ್ರ ೨. ವೃದ್ಧ: ವೃದ್ದನೋರ್ವ ಎದುರು ಮುಖಮಾಡಿ ಕೈಮುಷ್ಟಿಕಟ್ಟಿ ಗದ್ದದಭಾಗಕ್ಕೆ ಹಿಡಿದುಕೊಂಡು, ತಲೆಯ ಮೇಲೆ ರುಮಾಲನ್ನು ಸುತ್ತಿಕೊಂಡು, ಓರೆ ನೋಟದಲ್ಲಿ ಏನನ್ನೊ ನೋಡುತ್ತಾ ಅಥವಾ ಚಿಂತನೆಯಲ್ಲಿ ಮಗ್ನನಾಗಿರುವುದು ಕಂಡು ಬರುತ್ತದೆ. ಹೀಗೆ ಕಣ್ಣಲ್ಲಿ ತಿಕ್ಷ್ಣತೆ ಸಹಜತೆ ಬಿಂಬಿಸುವಂತಿದ್ದು ಚಿತ್ರದಲ್ಲಿ ಬೆರಳು-ಬೆಳಕಿನ ಛಾಯೆಯನ್ನು ಬಳಸದೆ ಅಸ್ಪಷ್ಟ ರೇಖೆಗಳನ್ನು ಬಳಸಿ ವ್ಯಕ್ತಿಯ ಮನಸ್ಸಿನಲ್ಲಿ ಏನೋ ಚಿಂತೆಯು ಕಾಡುತ್ತಿರುವುದನ್ನು ಚಿತ್ರಿಸಿದ್ದಾರೆ. ಕಣ್ಣಿನಲ್ಲಿ ಮುಗ್ದತೆಯ ಭಾವ ತುಂಬಿರುವುದನ್ನು ಅಭಿವ್ಯಕ್ತಿಸಿದಂತೆಯೇ, ಮುಖಭಾಗದಲ್ಲಿ ಮಾಂಸಖಂಡಗಳ



ಚಿತ್ರ – ೩ ಮಹಿಳೆ ಭಾವಚಿತ್ರ

ಉಬ್ಬುತಗ್ಗಿನ ಕುರುಹುಗಳನ್ನು ಕೇವಲ ಕಡಿಮೆ ರೇಖೆಗಳ ಮೂಲಕ ಚಿತ್ರಿಸುವದರೊಂದಿಗೆ ಆತನ ವಯೋಮಾನವನ್ನು ಗುರುತಿಸಬಹುದಾಗಿದೆ. ಒಟ್ಟು ಚಿತ್ರದಲ್ಲಿ ಕಣ್ಣಿನಲ್ಲಿ ಜೀವಕಳೆ ತುಂಬಿರುವುದರ ಜೊತೆ ನೈಜತೆಯಿಂದ ಕೂಡಿರುವುದ ಈ ಚಿತ್ರದ ವೈಶಿಷ್ಟ್ಯ.

ಚಿತ್ರ ೩. ಮಹಿಳೆಯ ಭಾವಚಿತ್ರ: ಈ ಭಾವಚಿತ್ರವು ಸಾಮಾಜಿಕವಾಗಿ ಬುಡಕಟ್ಟು ಮಹಿಳೆಯನ್ನು ಹೋಲುವಂತೆ ಕಂಡು ಬರುತ್ತದೆ. ಈ ಮಹಿಳೆಯ ಮುಖದಲ್ಲಿನ ಮಂದಹಾಸ ನಗೆ, ಅಗಲವಾದ ಹಣೆಯ ಮೇಲೆ ಕುಂಕುಮ, ಉದ್ದನೆಯ ಅಡ್ಡರೇಖೆಯುಳ್ಳ ಕೇಶವಿನ್ಯಾಸ, ನೆಟ್ಟಗಿನ ಚೂಪಾದ ಮೂಗು, ಅಗಲವಾದ ವಿಶಾಲವಾದ ಮೀನಿನಾಕೃತಿಯ ಕಣ್ಣುಗಳು, ಸಣ್ಣನೆಯ ತುಟಿ, ಮುಖದಲ್ಲಿ ಶಾಂತತೆಯ ಭಾವವನ್ನು ಚಿತ್ರಿಸಿದ್ದಾರೆ. ಒಟ್ಟಾರೆಯಾಗಿ ಈ ಮಹಿಳೆಯ ಮುಖದಲ್ಲಿ ಯಾವುದೇ ಬಗೆಯ ಛಾಯೆಗಳನ್ನು ಕಾಣದಿದ್ದರೂ ಪೂರ್ಣ ರೇಖೆಗಳನ್ನು ಬಳಸಿ ಭಾವವನ್ನು ಅಲಂಕಾರಿಕ ಮಾದರಿಯಲ್ಲಿ ಚಿತ್ರಿಸಿ ಮಹಿಳೆಯ ಧಾರ್ಮಿಕ ಬದುಕಿನ ಗಾಂಭಿರ್ಯದ ಅನುಭವವನ್ನು ಈ ಚಿತ್ರದಲ್ಲಿ ಮೂಡಿಸಿದ್ದಾರೆ.

ಸಂಯೋಜನಾಚಿತ್ರಗಳು :

ಪಾಟೀಲರ ಇಂಕ್ ಮಾಧ್ಯಮದ ಸಂಯೋಜನಾಚಿತ್ರಗಳು ಹೆಚ್ಚಾಗಿ ಪ್ರೀತಿ–ಪ್ರಣಯದ ವಿಷಯಗಳ ಕುರಿತಾಗಿದ್ದು ಅಲ್ಲದೆ ಯುದ್ಧ, ವಿಜಯ, ಭಾಗವತ್ ಪುರಾಣಗಳಲ್ಲಿನ ಕೃಷ್ಣನ ಕೆಲವು ಪ್ರಸಂಗಗಳ ಚಿತ್ರಗಳನ್ನು ರಚಿಸಿದ್ದಾರೆ. ಇವೆಲ್ಲವುಗಳೆಲ್ಲವೂ ರಚನಾ ವಿಧಾನ, ಸರಳತೆ ಹಾಗೂ ಸೌಂದರ್ಯವನ್ನು ಹೇಳುತ್ತವೆ. ಇವುಗಳಲ್ಲಿ ಹಲವು ಚಿತ್ರಗಳು ಇವರ ವಿವಿಧ ಪ್ರದೇಶಗಳ ಪ್ರವಾಸದಲ್ಲಿನ ಮತ್ತು ಕಾವ್ಯಮಯ ಸನ್ನಿವೇಶಗಳನ್ನು ಅಧರಿಸಿದ ಚಿತ್ರಗಳಾಗಿವೆ. ಇಂತಹ ದೃಶ್ಯಗಳನ್ನು ಪಾಟೀಲರು ಮೂರ್ತ ರೂಪಕ್ಕೆ ಪರಿವರ್ತಿಸುವಲ್ಲಿ ವಿಶಿಷ್ಟ ಸಂಯೋಜನಾ ಕ್ರಮವನ್ನು ಕೂಡಾ ಅನುಸರಿಸಿರುವದರಿಂದ ಕಲಾಕೃತಿಗಳು ತನ್ನದೇ ಆದ ಒಂದು ನೆಲೆಯನ್ನು ಕಂಡುಕೊಂಡಿವೆ.

ಅತೀ ಕಡಿಮೆ ರೇಖೆಗಳನ್ನು ಬಳಸಿ ರಚಿತಗೊಂಡ ಈ ರೇಖಾಚಿತ್ರಗಳಲ್ಲಿ ಕಂಡು ಬರುವ ಗಂಡು–ಹೆಣ್ಣಿನ ಅಂಗರಚನೆ ಆಧುನಿಕ ರಚನಾ ಶೈಲಿಯನ್ನು ಅನುಸರಿಸಿ ಚಿತ್ರಿಸಿದವುಗಳಾದರೂ ಸಂಯೋಜನೆಯ ದೃಷ್ಟಿಯಿಂದ ನೋಡಿದಾಗ ಪ್ರಧಾನ ಆಕೃತಿ, ಮುನ್ನೆಲೆ–ಹಿನ್ನೆಲೆಯ ಅನುಭವವನ್ನು ನೀಡುವ ನೈಜಕಲಾಕೃತಿಗಳಾಗಿವೆ. ಮತ್ತು ಪಾಟೀಲರ ಸಂಯೋಜನಾ ಚಿತ್ರಗಳನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ ಇವರ ಕಲಾಕೃತಿಗಳಲ್ಲಿ ಪಾಶ್ಚಿಮಾತ್ಯರ ಪ್ರಭಾವ ಕಂಡು ಬರುತ್ತದೆ. ಉದಾ:–ಪಾಶ್ಚಿಮಾತ್ಯ




ಚಿತ್ರ – ೧ ಕೊಳಲು ನುಡಿಸುತ್ತಿರುವ ಕೃಷ್ಣ



ಚಿತ್ರ – ೨ ಕಾಳಿಂಗ ಮರ್ಧನ



ಚಿತ್ರ – ೩. ಶೇಷಶಾಹಿ ವಿಷ್ಣು



ಚಿತ್ರ – ೪ ಜಾತ್ರೆ

ಕ್ಯೂಬಿಸಂ (ಘನಾಕೃತಿ) ಶೈಲಿಯ ಕಲಾವಿದರಾದ ಪಿಕಾಸೋ, ರೇಂಬ್ರಾಂಟ್‌ರಂತಹ ಕಲಾಕೃತಿಗಳಲ್ಲಿನ ಶೈಲಿಯನ್ನು ಇವರ ರೇಖಾಚಿತ್ರಗಳಾದ ಯುದ್ಧ, ವಿಜಯ, ಕುದುರೆ ಸವಾರಿ, ನೃತ್ಯ, ಪ್ರೇಮ-ಕಾವ್ಯ, ಧರ್ಮ, ಮಧುಚಂದ್ರ, ಸಂಯೋಜನಾ ವಿಷಯಗಳಲ್ಲಿ ಕಾಣಬಹುದು.


ಚಿತ್ರ ೧. ಕೊಳಲು ನುಡಿಸುತ್ತಿರುವ ಕೃಷ್ಣ: ಈ ಚಿತ್ರದಲ್ಲಿ ಬೃಹತ್ತಾದ ಮರದ ಅಡಿಯಲ್ಲಿ ಬಾಲಕೃಷ್ಣನು ಎಡಗೈಯಲ್ಲಿ ಕೊಳಲು ಹಿಡಿದು ಕೊಳಲು ನುಡಿಸುವದರಲ್ಲಿ ಮಗ್ನನಾಗಿರುವ ಸನ್ನಿವೇಶವನ್ನು ಕಾಣಬಹುದು. ಒಟ್ಟು ಈ ಚಿತ್ರವನ್ನು ಇಂಡಿಯನ್ ಇಂಕ್ ಮಾಧ್ಯಮದಲ್ಲಿ ದಪ್ಪನೆಯ ರೇಖೆಗಳ ಮೂಲಕ ಕುಂಚದಿಂದ ಚಿತ್ರಿಸಿದ್ದು ನೈಜ ಸ್ವರೂಪಕ್ಕೆ ತದ್ವಿರುದ್ಧವಾಗಿ ಆಧುನಿಕ ನೆಲೆಯಲ್ಲಿ ಚಿತ್ರಿತವಾಗಿದೆ ಸಾಂಕೇತಿಕ (Symbolic) ಮಾದರಿಯಲ್ಲಿ ಚಿತ್ರರಚಿಸಿದ್ದು, ಆದರೂ ನೋಡುಗನಿಗೆ ಚಿತ್ರ ಸನ್ನಿವೇಶದ ಅರಿವು ಮೂಡಿಸುತ್ತದೆ. ಚಿತ್ರದಲ್ಲಿ ಮುಖ್ಯವಾಗಿ ಕೃಷ್ಣನನ್ನು ಸ್ಪಷ್ಟವಾಗಿ ಚಿತ್ರಿಸದೆ ಕಣ್ಣು, ಮೂಗು, ಬಾಗಿ ಕೈಬೆರಳು ಮುಂತಾದ ಅಂಗಗಳನ್ನು ಚಿತ್ರಿಸದೆ ಅಸ್ಪಷ್ಟವಾಗಿದ್ದು, ಹಿನ್ನಲೆಯಲ್ಲಿ ಮರವನ್ನು ಸಹ ಇದೆ ಮಾದರಿಯಲ್ಲಿ ಅಣಬೆ ಆಕಾರದಲ್ಲಿ ವಕ್ರ ರೇಖೆಗಳಲ್ಲಿ ಚಿತ್ರಿಸಲಾಗಿದೆ.

ಚಿತ್ರ ೨. ಕಾಳಿಂಗ ಮರ್ದನ: ಈ ರೇಖಾಚಿತ್ರದಲ್ಲಿ ಕೃಷ್ಣನ ಬಾಲ್ಯಾವಸ್ಥೆಯನ್ನು ಚಿತ್ರಿಸಿದ್ದು ಬೃಹದಾಕಾರದ ಐದು ಹೆಡೆಯುಳ್ಳ ಸರ್ಪದ ಮೇಲೆ ಕುಳಿತು ಕೊಳಲನ್ನು ನುಡಿಸುತ್ತಿರುವ ದೃಶ್ಯ ಕಂಡು ಬರುತ್ತದೆ. ಹಿನ್ನಲೆಯಾಗಿ ದೂರದ ನದಿದಡದಲ್ಲಿ ಕೃಷ್ಣನ ಗೆಳೆಯರು, ಕೃಷ್ಣನು ಕಾಳಿಂಗ ಮರ್ದನ ಗೈದು ವಿಜಯಿಯಾಗಿ ಸರ್ಪದ ಮೇಲೆ ಕುಳಿತು ಕೊಳಲು ನುಡಿಸುತ್ತಿರುವುದನ್ನು ಆಶ್ಚರ್ಯ ಚಕಿತರಾಗಿ ವೀಕ್ಷಿಸುತ್ತಿರುವಂತೆ ಚಿತ್ರಿಸಿದ್ದು ಒಟ್ಟು ಚಿತ್ರವು ರೇಖಾಪ್ರಧಾನವಾಗಿದೆ. ನೆರಳು-ಬೆಳಕಿನ ಛಾಯೆಗಳ ಪ್ರಯೋಗ ಕಂಡು ಬಂದಿಲ್ಲ. ಈ ಚಿತ್ರಣದಲ್ಲಿ ಕೃಷ್ಣನನ್ನು ಅಲ್ಪ-ಮಟ್ಟಿಗೆ ಸ್ಪಷ್ಟವಾಗಿ ಚಿತ್ರಿಸಿ ಹಿನ್ನಲೆಯನ್ನು ಅಸ್ಪಷ್ಟವಾಗಿ ಚಿತ್ರಿಸಲಾಗಿದೆ. ಆದರೂ ವಸ್ತುವಿಷಯವನ್ನು ಕಂಡುಕೊಳ್ಳಲು ರೇಖೆಗಳು ಸಹಕಾರಿಯಾಗಿವೆ.


ಚಿತ್ರ ೩. ಶೇಷ ಶಾಹಿವಿಷ್ಣು: ಈ ಚಿತ್ರವು ಈ ಮೇಲಿನ ಎರಡು ಚಿತ್ರಗಳಿಗಿಂತ ಭಿನ್ನವಾಗಿ ರಚಿತವಾಗಿದ್ದು ವಿಶಿಷ್ಟವಾದ ರೇಖಾ ವಿನ್ಯಾಸಗಳಿಂದ ಕೂಡಿದೆ. ಚಿತ್ರದಲ್ಲಿ ವಿಷ್ಣು ಐದು ಹೆಡೆಯ ಸರ್ಪದ ಹಾಸಿಗೆಯ ಮೇಲೆ ಮಲಗಿದ್ದು, ತಲೆಯ ಮೇಲೆ ಕೀರಿಟವಿದೆ. ವಿಶ್ರಮಿಸುತ್ತಿರುವ ಬದಿಯಲ್ಲಿ ಸೇವಕಿಒಬ್ಬಳು ವಿಷ್ಣುವಿನ ಸೇವೆಯಲ್ಲಿ ನಿರತಳಾಗಿರುವ ವಿಷಯಾಧಾರಿತ ಚಿತ್ರವಾಗಿದೆ. ಪಾಟೀಲರು ಪೌರಾಣಿಕ ಸನ್ನಿವೇಶಗಳನ್ನಾಧರಿಸಿ ಈ ಚಿತ್ರವನ್ನು ಚಿತ್ರಿಸಿದ್ದಾರೆ. ವಿಶೇಷವಾಗಿ ಚಿತ್ರದಲ್ಲಿ



ಚಿತ್ರ –೫ ಕುದುರೆ ಸವಾರ



ಚಿತ್ರ – ೭ ವಿಶ್ರಾಂತಿ




ಚಿತ್ರ –೮ ಚರ್ಚೆ

ಹೋಲಿಕೆಯಾಗುವಂತೆ ಭಾಸವಾಗುತ್ತದೆ. ಒಟ್ಟು ಈ ಸಂಯೋಜನಾ ರೇಖಾಚಿತ್ರಣವು ಪಾಶ್ಚಿಮಾತ್ಯ ಶೈಲಿಯಲ್ಲಿ ಆಧುನಿಕ ಪ್ರಭಾವಕ್ಕೊಳಪಟ್ಟು ರಚಿತಗೊಂಡಿದೆ.

ಚಿತ್ರ ೬. ಶ್ರಮ: ಈ ಚಿತ್ರದಲ್ಲಿ ಇಬ್ಬರು ಯುವಕರು ಭಾರವಾದ ವಸ್ತುವೊಂದನ್ನು ತಲೆಯ ಮೇಲೆ ಹೊತ್ತು ಸಾಗುತ್ತಿರುವುದನ್ನು ಕಾಣಬಹುದು. ಈ ಚಿತ್ರಣವು ಘನಾಕೃತಿ ಮಾದರಿಯಲ್ಲಿಯೇ ರಚಿತವಾಗಿದ್ದು ದಪ್ಪವಾದ ರೇಖೆಗಳಿಂದ ಕೂಡಿದ್ದು ಒಂದು ನೆಲೆಯಲ್ಲಿ ನಿಲ್ಲಿಸುವಲ್ಲಿ ಜ್ಯಾಮಿತಿಕ ಆಕಾರದಲ್ಲಿ ದಪ್ಪರೇಖೆಗಳಿಂದ ಆವೃತಗೊಳಿಸಿ ಪೂರ್ಣ ಪ್ರಮಾಣದ ಕಲಾಕೃತಿಯನ್ನಾಗಿ ಚಿತ್ರಿಸುವ ಪ್ರಯತ್ನದ ಯಶಸ್ಸನ್ನು ಕಾಣಬಹುದು.

ಚಿತ್ರ ೭. ವಿಶ್ರಾಂತಿ: ಇಲ್ಲಿ ಎರಡು ಮನುಷ್ಯಾಕೃತಿಯ ಚಿತ್ರಗಳು ಮರದ ನೆರಳಿನಲ್ಲಿ ವಿಶ್ರಮಿಸುತ್ತಿರುವ ಚಿತ್ರ ಕಂಡು ಬರುತ್ತದೆ. ಗಾಢವಾದ ರೇಖೆಗಳಿಂದ ಚಿತ್ರಿಸಿದ್ದು ಜ್ಯಾಮಿತಿಕ ಆಕೃತಿಗಳನ್ನು ಬಳಸಿಕೊಂಡು ಚಿತ್ರಿಸಲಾಗಿದೆ. ಒಟ್ಟು ರೇಖಾಚಿತ್ರಣದಲ್ಲಿ ಪ್ರಯೋಗಾತ್ಮಕ ತಂತ್ರವನ್ನು ರೂಪಿಸಿ ತುಂಡು ರೇಖೆಗಳನ್ನು ಬಳಸದೆ ದೀರ್ಘವಾದ ರೇಖೆಗಳನ್ನು ಬಳಸಿ ಚಿತ್ರಿಸಿದ್ದಾರೆ. ಮರವನ್ನು ವಿಶಿಷ್ಟವಾಗಿ ಪ್ರಯೋಗಶೀಲವಾಗಿ ಚಿತ್ರಿಸಿದ ಶೈಲಿ ಅದ್ಭುತ. ಮರದ ಅಡಿಯಲ್ಲಿ ಇಬ್ಬರ ಕುಳಿತಿರುವ ಚಿತ್ರವಿದ್ದು, ಗಂಡು-ಹೆಣ್ಣಿನ ಯಾವುದೇ ಭಾವನೆಯನ್ನು ಮನುಷ್ಯಾಕೃತಿಯಲ್ಲಿ ತೋರಿಸಲು ಹೋಗಿಲ್ಲ. ಈ ಚಿತ್ರವು ನೋಡುಗನ ಪ್ರತಿಯೊಬ್ಬನಲ್ಲಿ ಬೇರೆ ಬೇರೆಯಾಗಿ ಭಾವನೆಗಳನ್ನು ಕಟ್ಟಿಕೊಡುತ್ತದೆ. ಈ ರೇಖಾಚಿತ್ರದಲ್ಲಿ ರೇಖೆಯ ಚಲನೆ ಏಕರೂಪದ್ದಾಗಿದ್ದು ಪ್ರಾರಂಭದಿಂದ ಅಂತಿಮದವರೆಗೆ ಒಂದೇ ರೇಖೆಯಿಂದಲೇ ಕೊನೆಗೊಂಡಿರುವುದು ಕಂಡು ಬರುತ್ತದೆ. ಇಂತಹ ಹಲವಾರು ರೇಖಾಚಿತ್ರಗಳನ್ನು ರಚಿಸಿದ ಪಾಟೀಲರ ಸತತ ನಿರಂತರ ರಚನೆಗೆ, ಅವರ ಕಲಾಪ್ರೌಢಿಮೆಗೆ ಸಾಕ್ಷಿಯಾಗಿದೆ.


ಚಿತ್ರ ೮. ಚರ್ಚೆ: ಈ ಚಿತ್ರದಲ್ಲಿ ಐವರು ಮಹಿಳೆಯರು ಚರ್ಚೆಯಲ್ಲಿ ತೊಡಗಿದ್ದು ಈ ಐವರ ಅಕ್ಕಪಕ್ಕದಲ್ಲಿ ಎರಡು ವಿಶಾಲವಾದ ಮರಗಳನ್ನು ಚಿತ್ರಿಸಲಾಗಿದೆ ಮತ್ತು ಐವರೂ ಮಹಿಳೆಯರು ನಿಂತ ಪೂರ್ಣ ದೇಹದ ರೇಖಾಚಿತ್ರಗಳು ಬೇರೆ ಬೇರೆ ಭಂಗಿಗಳಲ್ಲಿದ್ದು, ಈ ಸ್ತ್ರೀಯರ ಪಕ್ಕದಲ್ಲಿ ಒಂದು ನಾಯಿ ಕುಳಿತಕೊಂಡು ಅವರತ್ತ ನೋಡುತ್ತಿರುವ ಹಾಗೆ ದಪ್ಪರೇಖೆಗಳ ಮೂಲಕ ಚಿತ್ರಿಸಲಾಗಿದೆ. ಪಾಟೀಲರ ಈ ಸಂಯೋಜನಾ ಚಿತ್ರ ರಚನೆಯಲ್ಲಿ ಗಿಡ, ನಾಯಿ, ಸ್ತ್ರೀಯರನ್ನು ಸ್ಪಷ್ಟವಾಗಿ ಚಿತ್ರಿಸದೆ ಕೇವಲ ಕರಡು ಮಾಧ್ಯಮದಲ್ಲಿ ಚಿತ್ರಿಸಲಾಗಿದೆ. ಇಲ್ಲಿ ಯಾವುದೇ ಛಾಯಾಂಕಣ ಕಂಡು ಬರುವುದಿಲ್ಲ. ಇಲ್ಲಿ ಅಷ್ಟೊಂದು ವಿವರಣೆ, ವಿನ್ಯಾಸಗಳು ಇಲ್ಲದೆ ಸರಳ ರೇಖೆಯಲ್ಲಿ



ಚಿತ್ರ – ೯ ಸಂಯೋಜನೆ



ಚಿತ್ರ – ೧೦ ಸರಸ




ಚಿತ್ರ – ೧೧ ಮಧುಚಂದ್ರ

ಪ್ರಮಾಣ ಬದ್ಧವಾಗಿದ್ದು ರೇಖಾಚಿತ್ರಣದ ವಿಷಯವು ಮೂಲತಃ ಗ್ರಾಮೀಣ ಮಹಿಳೆಯರ ಬದುಕನ್ನು ನಿರೂಪಿಸುವಲ್ಲಿ ಚಿತ್ರೀತವಾಗಿದೆ.


ಚಿತ್ರ ೯. ಸಂಯೋಜನೆ : ಈ ಸಂಯೋಜನಾ ಚಿತ್ರಣಕ್ಕೆ ಶೀರ್ಷಿಕೆಯನ್ನು ಕಂಡುಕೊಳ್ಳುವದೇ ಕಷ್ಟವೆನ್ನಬಹುದು. ವಿಶಾಲವಾದ ಮರದ ಬುಡದಲ್ಲಿ ಹಲವು ಮಾನವಾಕೃತಿಗಳ ಚಿತ್ರಗಳಿದ್ದು ಅವುಗಳು ಗಂಡು-ಹೆಣ್ಣಿನ ಚಿತ್ರಗಳಾಗಿವೆ. ಈ ಐದು ಮಾನವಾಕೃತಿಗಳ ಕಾಲಿನಡಿಯಲ್ಲಿ ಶಿರವಿಲ್ಲದ ಮಲಗಿದ ಅಂಗರಚನೆಯನ್ನು ಚಿತ್ರಿಸಿದ್ದು ಅದರ ಎದುರುಗಡೆ ಒಬ್ಬ ಮಹಿಳೆ ಕುಳಿತಿರುವ ಮತ್ತು ಪುರುಷನೊಬ್ಬ ಬಾಗಿ ನಿಂತಿರುವುದನ್ನು ಕಾಣಬಹುದು. ಈ ಸಂಯೋಜನಾ ಚಿತ್ರವು ಪಾಶ್ಚಾತ್ಯ ಕಲಾವಿದ ಪಿಕಾಸೋವಿನ ವರ್ಣಚಿತ್ರಕಲೆಯ, ಮತ್ತು ಕರ್ನಾಟಕ ಕಲಾವಿದರಾದ ಕೆ.ಕೆ.ಹೆಬ್ಬಾರ ರೇಖಾಚಿತ್ರಗಳ ಪ್ರಭಾವವನ್ನು ಸೂಚಿಸುವಂತಿದೆ. ಉದ್ದನೆಯ ಮನುಷ್ಯಾಕೃತಿಗಳನ್ನು ಗಡಸು ರೇಖೆಗಳ ಮೂಲಕ ರಚಿಸಿದ್ದು ಸ್ತ್ರೀವೇದನೆ ಅಥವಾ ಕಾಮಸೂಚಕ ವಿಷಯವನ್ನು ರೇಖೆಗಳಲ್ಲಿ ಮೂಡಿಸಲಾಗಿದೆ.

ಚಿತ್ರ ೧೦. ಸರಸ: ಈ ಸಂಯೋಜನಾ ರೇಖಾಚಿತ್ರಣವು ಸ್ತ್ರೀ-ಪುರಷನ ಪ್ರೇಮ ಭಾವನೆಗಳನ್ನು ಬಿತ್ತರಿಸುವತ್ತ ರೇಖೆಗಳನ್ನು ವೈವಿದ್ಯಮಯವಾಗಿ ಬಳಿಸಿಕೊಳ್ಳುತ್ತಲೇ ಪಾಟೀಲರು ವಿಭಿನ್ನ ಪರಿಣಾಮಗಳನ್ನು ಮೂಡಿಸಿದ್ದಾರೆ. ರೇಖೆಗಳ ಓಟದಲ್ಲಿ, ವಿವಿಧ ಭಂಗಿಯಲ್ಲಿನ ವ್ಯತ್ಯಾಸಗಳು, ಅದರ ಗಾತ್ರದಲ್ಲಿನ ವ್ಯತ್ಯಾಸಗಳು, ಏರಿಳಿತಗಳ ಪರಿಣಾಮಗಳನ್ನು ಕಂಡುಕೊಳ್ಳುತ್ತ ಈ ಸಂಯೋಜನಾ ಚಿತ್ರಣದಲ್ಲಿ ವಿಶಿಷ್ಟವಾದ ಲಯಬದ್ದತೆ, ಲಾವಣ್ಯವನ್ನು ಕಂಡುಕೊಂಡು ಮೀತವಾದ ರೇಖೆಗಳನ್ನು ಬಳಸಿ ಚಿತ್ರಿಸಿರುವುದನ್ನು ಕಾಣಬಹುದು. ಈ ಚಿತ್ರದಲ್ಲಿ ಪುರುಷ ನೋರ್ವ ತನ್ನ ಸಖಿಯನ್ನು ತೊಡೆಯ ಮೇಲೆ ಕುಳ್ಳರಿಸಿಕೊಂಡು ಅಪ್ಪಿಕೊಂಡು ರತಿ ಕ್ರೀಡೆಯಲ್ಲಿ ಮಗ್ನನಾಗಿ ಮತ್ತು ಸಖಿಯ ಮೊಗದಲ್ಲಿ ವಿಶೇಷವಾದ ಶೃಂಗಾರಾತ್ಮಕ ಪ್ರೇಮ ಭಾವನೆಯ ಕಲ್ಪನೆಯನ್ನು ನೀಡುವಲ್ಲಿ ಈ ಚಿತ್ರಣವನ್ನು ತಮ್ಮ ರೇಖಾಲಾವಣ್ಯದ ಮೂಲಕ (ನಗ್ನ) ವಸ್ತ್ರರಹಿತ ಸಂಯೋಜನಾ ಚಿತ್ರದಲ್ಲಿ ಭಾರತೀಯರ ಪ್ರಣಯ ಪ್ರಸಂಗಗಳನ್ನು ಪಾಟೀಲರು ಅತೀ ಮನಮೋಹಕವಾಗಿ ಚಿತ್ರಿಸಿದ್ದಾರೆ.


ಚಿತ್ರ ೧೧. ಮಧುಚಂದ್ರ: ಈ ಸಂಯೋಜನಾ ಚಿತ್ರಣದ ಪ್ರತಿಯೊಂದು ಭಾಗವು ಕೂಲಂಕಶವಾದ ರೇಖಾನಿರ್ಣಯದ ಪ್ರಬುದ್ದತೆಯಿಂದ ಕೂಡಿದ ಉತ್ತಮ ಕೃತಿಯಾಗಿದೆ. ಅಡ್ಡ-ಉದ್ದ, ನೇರ-ವಕ್ರ ರೇಖೆಗಳಿಂದ ಕೂಡಿದ್ದು, ಸರಸ ನಿರತ ಪ್ರೇಮಿಗಳು ಕುಳಿತಿರುವ ಭಂಗಿ, ಮುಖಭಾವದಲ್ಲಿ ನೆರಳು ಬೆಳಕಿನ ಛಾಯೆಯನ್ನು ಬಳಸದೆ ಸೂಚ್ಯವಾದ ಲಾಲಿತ್ಯಪೂರ್ಣ ರೇಖೆಗಳನ್ನು ಬಳಸಿ ಚಿತ್ರಿಸಲಾಗಿದೆ.



ಚಿತ್ರ – ೧೨ ಸಂತೆ



ಚಿತ್ರ – ೧೩ ಶ್ರೀಕೃಷ್ಣ (ಸರಣಿ)




ಚಿತ್ರ – ೧೪ ವಿಶ್ರಾಂತಿ


ಈ ಕಲಾಕೃತಿಯಲ್ಲಿ ಪುರುಷ ಮಹಿಳೆಯರ ಉಡುಗೆ-ತೊಡುಗೆಗಳು ಭಾರತೀಯ ಸಂಪ್ರದಾಯ ಬದ್ಧವಾಗಿದ್ದು, ಹಿನ್ನಲೆಯಲ್ಲಿ ಮರ, ಚಂದ್ರ ಇವುಗಳನ್ನು ಕ್ಯೂಬಿಸಂ ಶೈಲಿಯಲ್ಲಿ ರಚಿಸಿದ್ದಾರೆ. ಹೀಗೆ ಪಾಟೀಲರು ತಮ್ಮ ಕಲಾಕೃತಿಯಲ್ಲಿ ಭಾರತೀಯ ಸಂಸ್ಕೃತಿಯ ವಿಷಯವನ್ನು ಮುಂದಿಟ್ಟುಕೊಂಡು ಚಿತ್ರರಚಿಸಿದ್ದಾರೆ.

ಚಿತ್ರ ೧೨. ಸಂತೆ: ಈ ರೇಖಾಚಿತ್ರಣದಲ್ಲಿ ಮಹಿಳೆಯರ ಗುಂಪೊಂದು ಕಾಣಿಸುತ್ತಿದ್ದು ಹಿಂದೆ ಬೃಹತ್ತಾದ ಮರವೊಂದನ್ನು ಚಿತ್ರಿಸಿದ್ಧಾರೆ ಮಹಿಳೆಯರನ್ನು ಚಿತ್ರಿಸುವಾಗ ಬಳಸಿದ ರೇಖೆಗಳಿಂದ ಒಂದಕ್ಕೊಂದು ಹೊಂದಿಕೆಯಾದಂತೆ ಬಾಹ್ಯರೇಖೆಗಳು ಸಂಚಲನಗೊಂಡಿವೆ. ಈ ರೀತಿ ಹೊಂದಿಕೆಯಾಗಿರುವ ಬಾಹ್ಯರೇಖೆಗಳು ಸಮೀಪ ದೂರದ ಅನುಭವನ್ನು ನೀಡುವಲ್ಲಿ ಸಮಗ್ರವಾದ ಪಾತ್ರವನ್ನು ವಹಿಸಿವೆ. ಪಾಟೀಲರು ಮರವನ್ನು ಚಿತ್ರಿಸುವಾಗ ಅಲಂಕಾರ ಶೈಲಿಯಲ್ಲಿ ಮಾಡಿ ನವಿಲುಗರಿಯಂತೆ ಅಂಕುಡೊಂಕು, ವಕ್ರ ರೇಖೆಗಳಿಂದ ಕೂಡಿದೆಯಾದರೂ ಅಮೂರ್ತತೆಯ ಅನುಭವ ನೀಡುತ್ತದೆ. ಕೇವಲ ಬಾಹ್ಯರೇಖೆಗಳಿಂದ ಚಿತ್ರಿತವಾಗಿದ್ದು ಯಾವುದೇ ಛಾಯೆಯನ್ನು ತೋರಿಸಲಾಗಿಲ್ಲ ಮತ್ತು ಆಕೃತಿಗಳು ಸ್ಪಷ್ಟವಾಗಿರದೆ ಕರಡು ಚಿತ್ರಗಳಂತೆ ಅಸ್ಪಷ್ಟತೆಯಿಂದ ಕೂಡಿವೆ. ಈ ದಪ್ಪರೇಖೆಗಳು ಬಹುತೇಕ ಪಾಶ್ವಾತ್ಯ ಎಕ್ಸ್‌ಪ್ರೆಷನಿಷ್ಟರ ರೇಖೆಗಳನ್ನು ನೆನಪಿಸುತ್ತವೆ ಈ ಚಿತ್ರವು ಬಹುಶಃ ಅವರು ಪ್ರವಾಸದ ದಿನಗಳಲ್ಲಿ ರಚಿತವಾಗಿದ್ದು ಆಯಾ ಪ್ರದೇಶದ ಮಹಿಳೆಯರ ಧರಿಸಿರುವ ವಸ್ತ್ರಾಲಂಕಾರಗಳು ಭಿನ್ನವಾಗಿದ್ದುದು ಇಲ್ಲಿ ಕಂಡು ಬರುತ್ತದೆ.


ಚಿತ್ರ ೧೩. ಕೃಷ್ಣನ ಸರಣಿ ಚಿತ್ರ: ಈ ಕಲಾಕೃತಿಯಲ್ಲಿ ಅತ್ಯಂತ ಸೂಕ್ಷ್ಮ ನವಿರಾದ ರೇಖೆಗಳಿದ್ದು ಚಿಕಣಿ ಚಿತ್ರವನ್ನು ಹೋಲುವಂತೆ ಆಧುನಿಕ ದೃಷ್ಟಿಯಿಂದ ತಮ್ಮ ಸೂಕ್ಷ್ಮರೇಖೆಗಳಿಂದ ಹೊರಹಾಕಿದ್ದಾರೆ. ಚಿತ್ರದಲ್ಲಿ ರೇಖೆಗಳನ್ನು ಸುರುಳಿಯಾಕಾರದಲ್ಲಿ ಬೆಟ್ಟದ ಹಸಿರು ವನದ ಅನುಭವವನ್ನು ನೀಡುವಂತೆ, ಬೆಟ್ಟದ ಮೇಲೆ ಕೆಲವೇ ಹೊರರೇಖೆಗಳಿಂದ ಕೃಷ್ಣನನ್ನು ಕೊಳಲು ವಾದನದಲ್ಲಿ ಮಗ್ನನಾಗಿರುವಂತೆ ಚಿತ್ರಿಸಿದ್ದಾರೆ. ಹೀಗೆ ಭಾರತೀಯ ಪೌರಾಣಿಕ ಸನ್ನಿವೇಶವನ್ನು ಮೂರ್ತರೂಪದಲ್ಲಿ ಸಾಂಕೇತಿಕವಾಗಿ ಪಾಟೀಲರು ವಿಶಿಷ್ಟವಾದ ಪ್ರಯೋಗವನ್ನು ಈ ಚಿತ್ರದಲ್ಲಿ ಕಾಣಬಹುದು. ಹೀಗೆ ಭಾರತೀಯ ಕಲೆಯು ಪಾಶ್ಚಾತ್ಯ ಕಲೆಯ ಸಂಪರ್ಕದಿಂದ ಕೂಡಿದ್ದರೂ ಅದು ಅಭಿವ್ಯಕ್ತಿಯಲ್ಲಿ ಆದ ವ್ಯತ್ಯಾಸವೆ ಹೊರತು ವ್ಯಕ್ತಿ ವಿಶಿಷ್ಟವಾದ ಅನುಭವ ಸಾಮಗ್ರಿಯಲ್ಲಿ ಎಂಬುದು ತಿಳಿದುಬರುತ್ತದೆ.




ಚಿತ್ರ – ೧೫ ವಿರಹ ವೇದನೆ



ಚಿತ್ರ – ೧೬ ಏಕಾಂತ



ಚಿತ್ರ – ೧೭ ನೃತ್ಯಗಾರ್ತಿ




ಚಿತ್ರ – ೧೮ ನೃತ್ಯಗಾರರು

ಚಿತ್ರ ೧೪. ವಿಶ್ರಾಂತಿ: ಈ ಕಲಾಕೃತಿಯು ಜನಪದ ನೆಲೆಯ ಪ್ರಾಕೃತಿಕ ಗ್ರಾಮೀಣ ಬದುಕನ್ನು ನಿದರ್ಶಿಸುವಂತಿದೆ. ಚಿತ್ರದಲ್ಲಿ ಬೃಹತ್ತಾದ ಮರದ ಕೆಳಗೆ ಒಂದು ಬದಿಯಲ್ಲಿ ಇಬ್ಬರು ನಿಂತು ಇನ್ನೊಂದು ಬದಿಯಲ್ಲಿ ಮರಕ್ಕೆ ಆಸರೆಯಾಗಿ ಕುಳಿತುಕೊಂಡು ವಿಶ್ರಮಿಸುವ ದೃಶ್ಯಕಂಡು ಬರುತ್ತದೆ. ಜೊತೆಗೆ ಇನ್ನೊಂದು ಬಗೆ ಅವರಲ್ಲಿ ಏಕಾಂತತೆ ಭಾವನೆಯು ಪಾಟೀಲರ ಚಿತ್ರರಚನೆಯಲ್ಲಿ ಕಂಡು ಬರುತ್ತದೆ. ಮಾನವಾಕೃತಿಗಳನ್ನು ಜ್ಯಾಮಿತಿಯ ಆಕೃತಿಗಳಲ್ಲಿ ರಚಿತವಾಗಿ ಘನಾಕೃತಿಯಲ್ಲಿ ರಚನೆಯಾಗಿವೆ. ಹೀಗೆ ಪಾಟೀಲರು ಈ ಚಿತ್ರ ಸಂಯೋಜನೆಯಲ್ಲಿ ಗ್ರಾಮೀಣ ಬದುಕನ್ನು ಚಿತ್ರಿಸುವಲ್ಲಿ ರೇಖೆಗೆ ಚೈತನ್ಯವನ್ನು ತುಂಬಿ ಭಾವನೆಗಳನ್ನೂ ಅಭಿವ್ಯಕ್ತಪಡಿಸಿದ್ದಾರೆ.

ಚಿತ್ರ ೧೫. ವಿರಹ ವೇದನೆ: ಈ ಚಿತ್ರವು ವಿರಹವೇದನೆಯನ್ನು ಬಿಂಬಿಸುತ್ತದೆ. ಇಲ್ಲಿ ಪುರುಷನು ಆಕಾಶದತ್ತ ಮುಖಮಾಡಿ ಅವನ ತಲೆಹಿಂಬದಿಯಲ್ಲಿ ಸುರಳಿಯಾಕಾರದ ರೇಖೆಗಳಿದ್ದು ಏನೋ ಗೊಂದಲದಲ್ಲಿ ಸಿಕ್ಕಕೊಂಡಿರುವಂತೆ ಅಥವಾ ಯಾವುದೋ ಒಂದು ಭ್ರಾಂತಿಯಲ್ಲಿ ಸಿಲುಕಿಕೊಂಡಿರುವ ಹಾಗೆ ಚಿತ್ರಿತವಾಗಿದೆ. ಕಾಲಿನಡಿಯಲ್ಲಿ ಸ್ತ್ರೀ ಒಬ್ಬಳು ಕುಳಿತಿದ್ದು ವಸ್ತ್ರವನ್ನು ಹಿಡಿದುಕೊಂಡಂತೆ ಚಿತ್ರಿಸಿದ್ದು, ನೆರಳು ಬೆಳಕಿನ ಛಾಯೆಯನ್ನು ಬಳಸದೆ ಕೇವಲ ಗಾಢವಾದ ರೇಖೆಗಳ ಬಳಕೆ ಕಂಡು ಬರುತ್ತದೆ. ಚಿತ್ರಣ ಶೈಲಿಯು ನೈಜವಾಗಿ ಮೂಡಿದ್ದರು ಪಾಟೀಲರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಕೆಲವು ವಿರಹ–ಕಾಮಾತೀತ ಸಾಂಕೇತಿಕ ಸೂಚನೆಗಳ ಮೂಲಕ ಸೃಜನಾತ್ಮಕವಾಗಿ ಚಿತ್ರಿಸಿದ್ದಾರೆ.

ಚಿತ್ರ ೧೬. ಏಕಾಂತ: ಈ ಚಿತ್ರದಲ್ಲಿ ಮಹಿಳೆಯೊಬ್ಬಳು ಕುಳಿತಿರುವ ದೃಶ್ಯವಿದ್ದು ಬಾಹ್ಯ ಪರಿಸರದಲ್ಲಿ ಅಭಿವ್ಯಕ್ತವಾಗುವಂತೆ ಘನಾಕೃತಿಯಲ್ಲಿ ಜ್ಯಾಮಿತಿ ಆಕಾರದಲ್ಲಿ ಹಂತ ಹಂತವಾಗಿ ಮೂರು ಪಟ್ಟಿಕೆಗಳನ್ನು ರಚಿಸಿ ಮನೆ ಮುಂಭಾಗದ ದೃಶ್ಯ ಗೋಚರಿಸುವಂತಾದಾಗಿದೆ. ಚಿತ್ರವು ದಪ್ಪ ಸರಳ ರೇಖೆಗಳಿಂದ ರಚಿತವಾಗಿದ್ದು ಕ್ಯೂಬಿಸಂ ಶೈಲಿಯಲ್ಲಿ ಭಾರತೀಯ ಸಂಸ್ಕೃತಿಯ ಗ್ರಾಮೀಣ ಜನಪದ ಮಹಿಳೆಯೊಬ್ಬಳ ಬದುಕನ್ನು ನಿರೂಪಿಸುವ ಚಿತ್ರ ಇದಾಗಿದೆ. ಇಂಕ್ ಮಾಧ್ಯಮದಲ್ಲಿ ಕುಂಚದ ಮೂಲಕ, ದಪ್ಪರೇಖೆಗಳನ್ನು ನೆರಳು ಬೆಳಕಿನ ಛಾಯೆಗಳನ್ನು ಬಳಸದೆ ಪಾಟೀಲರು ಈ ಚಿತ್ರವನ್ನು ಚಿತ್ರಿಸಿದ್ದಾರೆ. ಈ ಚಿತ್ರವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅವರ ಅಕಾಡೆಮಿಕ್ ವ್ಯಾಸಂಗದ ನವ್ಯ ಶೈಲಿಯ ಪ್ರಭಾವ ಕಂಡು ಬರುತ್ತದೆ.

ಚಿತ್ರ ೧೭. ನೃತ್ಯಗಾರ್ತಿ: ಈ ಚಿತ್ರಣದಲ್ಲಿ ಭಾರತೀಯ ನಾಟ್ಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತೆ ನೃತ್ಯಗಾರ್ತಿಯೊಬ್ಬಳನ್ನು ಚಿತ್ರಿಸಿದ್ದು ತಮ್ಮ ಅನುಭವಿ ಗಾಢ ರೇಖೆಗಳ ಮೂಲಕ ರೂಪವನ್ನು



ಚಿತ್ರ – ೧೯ ಸಂಯೋಜನೆ

ಕೊಡುವ ಕಾರಣಕ್ಕಾಗಿ ಅಲಂಕಾರಿಕ ನೆಲೆಯಲ್ಲಿ ಚಿತ್ರವು ರಚನೆಯಾಗಿದೆ. ಲಾಲಿತ್ಯ ಪೂರ್ಣವಾದ ರೇಖೆಗಳ ಬೆಡಗು ಸರಳವಾದ ರೇಖೆಗಳ ಸ್ಪರ್ಷದಿಂದ ನಾಟ್ಯ ಸ್ತ್ರೀಯರ ಸುಮಧುರ ಲಯ, ಅಂಗಸೌಷ್ಟವದ, ಬಿಂಕ ಭಿನ್ನಾಣದ ಸೊಬಗು, ತಾಳಬದ್ಧ ಹೆಜ್ಜೆ, ಭಾವವನ್ನು ಸೃಜನಾತ್ಮಕವಾಗಿ ಹಾಗೂ ಶೃಂಗಾರದ ನೆಲೆಯಲ್ಲಿ ಭಾವನೆಗಳನ್ನು ಸ್ಫುರಿಸುವಂತೆ ಚಿತ್ರಿಸಿರುವುದೇ ಪಾಟೀಲರ ಈ ಚಿತ್ರದ ಪ್ರಧಾನ ಲಕ್ಷಣವಾಗಿದೆ.

ನಾಟ್ಯ ಸ್ತ್ರೀಯ ಚಿತ್ರದಲ್ಲಿ ರೇಖಾತ್ಮಕ ಪ್ರಯೋಗದಲ್ಲಿ ನೀಳ ಶರೀರದ ಅಂಗಾಗಗಳಲ್ಲಿ ಸೂಚ್ಯವಾದ ರಚನೆ, ವೇಗೋತ್ಕರ್ಷ ರೇಖೆಗಳು ಯಾವುದೇ ಛಾಯೆಯನ್ನು ಬಳಸದೆ ಚಿತ್ರಿಸಿದ್ದು ಪ್ರಯೋಗಾತ್ಮಕವಾಗಿ ವಿಶಿಷ್ಟವಾಗಿ ಚಿತ್ರಿಸಿದ್ದಾರೆ.

ಚಿತ್ರ ೧೮. ನೃತ್ಯಗಾರರು: ಈ ಚಿತ್ರವು ಜನಪದ ಶೈಲಿಯ ನೃತ್ಯವನ್ನು ನಿರೂಪಿಸುವಂತಾಗಿದ್ದು ಇಬ್ಬರು ಪುರುಷರು ಶಾಸ್ತ್ರೋಕ್ತವಾಗಿ ನೃತ್ಯ ನಿರತರಾಗಿದ್ದು, ವೈವಿಧ್ಯಮಯ ವೇಷ ಭೂಷಣಗಳಿಂದ ಕೂಡಿದ್ದು, ಪ್ರಾದೇಶಿಕತೆನ್ನು ಬಿಂಬಿಸುವಂತಿದೆ. ನೃತ್ಯದ ಹೆಜ್ಜೆಗಳು ಮತ್ತು ಹಾವ ಭಾವಗಳೂ ಸಂಗೀತದ ಮೂಲಕ ಹೊರಹೊಮ್ಮುತ್ತಿರುವಂತ ನೈಜಭಾವನೆ ಮೂಡುತ್ತದೆ. ಇಲ್ಲಿ ಪಾಟೀಲರು ಇಂಕ್ ಮಾದ್ಯಮದಿಂದ ಸರಳ, ಸುಲಲಿತ ರೇಖೆಗಳ ಮೂಲಕ ಕೋಮಲ ಭಾವನೆಯ ಮೂಲಕ ಶೃಂಗಾರಮಯವಾದ ಶರೀರರಚನೆ ನೋಡುಗರಲ್ಲಿ ಶ್ರದ್ಧೆ ಭಾವನೆಯನ್ನು, ದೃಶ್ಯಮಾಧ್ಯಮದಿಂದ ಕಂಡುಕೊಳ್ಳಬಹುದಾಗಿದೆ. ಚಿತ್ರ ನೈಜತೆಯಿಂದ ಕೂಡಿವೆ. ಕಣ್ಣು, ಕಿವಿ, ಮೂಗು ಬಾಯಿ, ಕೈಬೆರಳು, ಪಾದಗಳನ್ನು ಚಿತ್ರಿಸದೆ ಅಸ್ಪಷ್ಟವಿದ್ದರೂ ನೈಜತೆಯಿಂದ ಕೂಡಿದ ರೇಖಾಚಿತ್ರ ಸಂಯೋಜನೆಯನ್ನು ಪಾಟೀಲರು ಆಕೃತಿಯ ಭಾವಕ್ಕಿಂತ ವೀಕ್ಷಕನ ಭಾವನೆಯೂ ಒಂದಾಗುವಂತೆ ಚಿತ್ರಿಸಿದ್ದಾರೆ.

ಚಿತ್ರ ೧೯. ಸಂಯೋಜನೆ: ಈ ಚಿತ್ರದ ಪ್ರಮುಖ ವಸ್ತು ಆಶಾದಾಯಕ ಭಾವ ಸೂಚಿಸುವ ಮೂವರು ವ್ಯಕ್ತಿಗಳನ್ನು ಚಿತ್ರಿಸಿದ್ದು ಒಬ್ಬನು ಏನೋ ಹೇಳುತ್ತಿರುವಂತೆ ಇನ್ನಿಬ್ಬರು ವಿಸ್ಮಿತರಾಗಿ ಗಮನಿಸುತ್ತಿರುವಂತೆ ಹಾಗೂ ಆಶಾವಾದ ಭಾವನೆಯನ್ನು ಅವರ ಮುಖಗಳಲ್ಲಿ ತೋರಿಸುವ ರೀತಿ ಹಾಗೂ ಅವರಲ್ಲಿ ಕಂಡು ಬರುವ ವಿಭಿನ್ನ ಭಾವಗಳೂ ಪ್ರತಿರೂಪಗಳೆಂದು ತಿಳಿಸುವುದೇ ಚಿತ್ರದ ಉದ್ದೇಶವಾಗಿದೆ. ಪಾಟೀಲರ ಎಂದಿನ ಶೈಲಿಯಂತೆ ಕ್ಯೂಬಿಸಂ ರಚನಾ ಕೃತಿಗಳಲ್ಲಿ ಪಾಟೀಲರ ರೇಖಾಚಿತ್ರಗಳು ರೂಪಗೊಂಡಿವೆ. ಮನುಷ್ಯರ ಬಲಿಷ್ಟ ಅಂಗರಚನೆ, ಕೇಶವಿನ್ಯಾಸದ ಹಿನ್ನಲೆಯ ಚೌಕಟ್ಟಿನಲ್ಲಿ ಆಕೃತಿಗಳು ದಟ್ಟವಾಗಿ ಮೂಡಿದ್ದರೂ. ಮುನ್ನಲೆಯ ಆಕೃತಿಗಳು ಸ್ಪಷ್ಟವಾಗಿ ಜ್ಯಾಮಿತಿಕ



ಚಿತ್ರ - ೨೦ ಮಹಿಳೆ



ಚಿತ್ರ – ೨೧ ಪ್ರಣಯ




ಚಿತ್ರ – ೨೨ ಮಧುಚಂದ್ರ

ಘನಾಕೃತಿಯಲ್ಲಿ ರಚಿತಗೊಂಡಿವೆ. ತಮ್ಮ ಅಂತರಾಳದ ಭಾವನೆಯನ್ನು ಸಂಗಡಿಗರಿಗೆ ಹೇಳಬಯಸುತ್ತಿದ್ದು, ಅದನ್ನು ಕೂತೂಹಲದಿಂದ ಆಲಿಸಿತ್ತಿರುವ ಈ ದೃಶ್ಯವು ಪಾಟೀಲರ ರೇಖಾ ಪ್ರಧಾನ ಚಿತ್ರ ಅದ್ಬುತವಾಗಿ ವಿಶಿಷ್ಟ ಅನುಭವ ನೀಡುವದರ ಜೊತೆಗೆ ಮನುಷ್ಯ ಆಕೃತಿ ಪ್ರಧಾನ ಸಂಯೋಜನೆಗೆ ಒಳಪಟ್ಟಿದೆ.


ಚಿತ್ರ ೨೦. ಮಹಿಳೆ: ಈ ಚಿತ್ರವು ಜನಪದ ಮಹಿಳೆಯ ಬದುಕಿನ ವಿಷಯ ಕುರಿತಾಗಿದ್ದು ಗ್ರಾಮೀಣ ಬದುಕನ್ನು ನಿರೂಪಿಸುತ್ತದೆ. ಚಿತ್ರಣದಲ್ಲಿ ಸಂಯೋಜನೆಯನ್ನು ಅಚ್ಚುಕಟ್ಟಾಗಿ ನೀಳ ರೇಖೆಗಳ ಮೂಲಕ ಅಲಂಕಾರಿಕ ಶೈಲಿಯಲ್ಲಿ ನೈಜವಾಗಿ ಚಿತ್ರಿಸಿದ್ದಾರೆ. ಮನೆಯ ಮುಂದೆ ಕಟ್ಟೆಯ ಮೇಲೆ ಕುಳಿತ ಮಹಿಳೆಯ ದೃಢಕಾಯದ ದೇಹ, ಕೇಶವಿನ್ಯಾಸ, ಜನಪದ ಲಂಬಾಣಿ ಸ್ತ್ರೀಯರ ಉಡುಪಿನಂತೆ ಕಂಡು ಬರುವ ವಸ್ತ್ರವಿನ್ಯಾಸ, ಆಭರಣ ಇವೆಲ್ಲವನ್ನು ಸರಳ ರೇಖೆಗಳ ಮೂಲಕ ನೆರಳು ಬೆಳಕಿನ ಛಾಯೆಯನ್ನು ಬಳಸದೆ ಚಿತ್ರಿಸಲಾಗಿದೆ ಮನೆಯ ಸುತ್ತಲಿನ ಪ್ರಕೃತಿಯನ್ನು ನಿರೂಪಿಸಿಸುವಲ್ಲಿ ಹಿಂಬದಿಯಲ್ಲಿ ಮರವನ್ನು ಸಾಂಕೇತಿಕವಾಗಿ ಚಿತ್ರಿಸಿ, ಮಹಿಳೆಯು ಯಾರದೊ ಬರುವಿಕೆಯನ್ನು ಕಾಯುತ್ತಿರುವ ಹಾಗೆ ಭಾಸವಾಗುತ್ತದೆ. ಒಟ್ಟು ಈ ಚಿತ್ರ ಸಂಯೋಜನೆಯು ನಮ್ಮ ಸಂಸ್ಕೃತಿಯ ಗ್ರಾಮೀಣ ಪ್ರದೇಶದ ಜನಪದ ಜೀವನ ಶೈಲಿಯ ಹಿನ್ನಲೆಯಲ್ಲಿ ನೈಜವಾಗಿ ಚಿತ್ರಿಸಿದ್ದಾರೆ.

ಚಿತ್ರ ೨೧. ಪ್ರಣಯ: ಈ ಸಂಯೋಜನಾ ರೇಖಾಚಿತ್ರದಲ್ಲಿ ಪ್ರೇಮಿಗಳಿಬ್ಬರು ಮರದ ಅಡಿ ಪ್ರಣಯದಲ್ಲಿ ತೊಡಗಿರುವ ದೃಶ್ಯವನ್ನು ಕಾಣಬಹುದು. ಪ್ರಕೃತಿಯ ಸೌಂದರ್ಯವನ್ನು ವ್ಯಕ್ತಪಡಿಸಲು ಲಂಬ, ಮತ್ತು ವಕ್ರರೇಖೆಗಳ ಮೂಲಕ ಮರವನ್ನು ಚಿತ್ರಿಸಿ ಮರದಲ್ಲಿ ಎರಡು ಗಿಳಿಗಳು ಒಂದಕ್ಕೊಂದು ಚುಂಬಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿ ಕಂಡು ಬಂದರು ಸಾಂಕೇತಿಕವಾಗಿ ಪ್ರೇಮಿಗಳ ಪ್ರಣಯವನ್ನು ಸಾಂಧರ್ಭಿಕವಾಗಿ ತೋರಿಸುವಲ್ಲಿ ಚಿತ್ರರಚನೆಯಾಗಿದೆ. ಮನುಷ್ಯಾಕೃತಿಗಳು ಮತ್ತು ಮರವನ್ನು ಜ್ಯಾಮಿತಿಕ ಕ್ಯೂಬಿಸಂ ಶೈಲಿಯಲ್ಲಿ ಚಿತ್ರಿತವಾಗಿದ್ದರೂ ಎರಡು ಪಕ್ಷಿಗಳು ನೈಜವಾಗಿ ಮೂಡಿ ಬಂದಿರುವುದು ಈ ಚಿತ್ರದ ವಿಶೇಷತೆಯಾಗಿದೆ. ಒಟ್ಟಾರೆ ಶೃಂಗಾರಾತ್ಮಕ ಸೌಂದರ್ಯಾನುಭವವನ್ನು ನೀಡುವ ಈ ಸಂಯೋಜನಾ ಕೃತಿ ಮುದವನ್ನು ನೀಡುತ್ತದೆ


ಚಿತ್ರ ೨೨. ಮಧುಚಂದ್ರ: ಈ ರೇಖಾ ಸಂಯೋಜನಾ ಚಿತ್ರದಲ್ಲಿ ಪ್ರೇಮಿಗಳಿಬ್ಬರು ಸ್ವಚ್ಚಂದವಾದ ಬೆಳದಿಂಗಳಿನಲ್ಲಿ ಬಾಹ್ಯ ಪರಿಸರದಲ್ಲಿ ಪರಸ್ಪರ ಪ್ರಣಯದಲ್ಲಿ ತೊಡಗಿರುವುದನ್ನು ಕಾಣಬಹುದು.



ಚಿತ್ರ – ೨೩ ಸಂಯೋಜನೆ



ಚಿತ್ರ – ೨೪ ಸಂಯೋಜನೆ




ಚಿತ್ರ – ೨೪ ಸಂಯೋಜನೆ

ಮುನ್ನಲೆಯಲ್ಲಿ ಎದುರು ಬದುರಾಗಿ ಪ್ರೇಮಿಗಳಿಬ್ಬರು ನರ್ತಿಸುತ್ತಿದ್ದಂತೆ ಹಿನ್ನಲೆಯಲ್ಲಿ ನಿಸರ್ಗದ ಭಾವನೆಯನ್ನು ಮೂಡಿಸಲು ಮರ, ಚಂದ್ರ, ಪಕ್ಷಿಗಳನ್ನು ಚಿತ್ರಿಸಿದ್ದಾರೆ. ಚಿತ್ರರಚನೆಯಲ್ಲಿ ಕಪ್ಪು ಶಾಹಿಯನ್ನು ಬಳಸಿ ದಪ್ಪ ರೇಖೆಗಳ ಮೂಲಕ ಚಿತ್ರಿಸಲಾಗಿದೆ. ಭಾರತೀಯ ಚಿತ್ರಕಲೆಯ ಭವ್ಯಪರಂಪರೆಯಲ್ಲಿ ರಾಗಮಾಲಾ ಚಿತ್ರಗಳ ಅಮೂರ್ತ ರೂಪಗಳನ್ನು ಈ ಚಿತ್ರದಲ್ಲಿ ಪಾಟೀಲರು ರೇಖೆಗಳ ಮೂಲಕ ಮೂರ್ತ ರೂಪದಲ್ಲಿ ವ್ಯಕ್ತಪಡಿಸಿದ್ದಾರೆ ದೃಗ್ಗೋಚರ, ಪ್ರತಿಮಾರೂಪ, ಸಮಯ ಸೂಚಕವಾಗಿ ಚಂದ್ರನನ್ನು ಅಂದರೆ ಬೆಳದಿಂಗಳ ರಾತ್ರಿಯ ಅನುಭವವನ್ನು ಶೃಂಗಾರಾತ್ಮಕವಾಗಿ ಚಿತ್ರಿಸಿದ್ದಾರೆ. ಕಲಾಕೃತಿಯಲ್ಲಿ ಮನುಷ್ಯಾಕೃತಿಗಳ ಅಂಗಾಂಗಗಳ, ಮರ, ನಿಸರ್ಗವು ಸ್ಪಷ್ಟವಾಗಿ ಮಾಡದೆ ಅಸ್ಪಷ್ಟತೆಯಿಂದ ಕೂಡಿದ್ದು, ನೈಜತೆಯುತ್ತ ವಾಲಿದ ಈ ಕಲಾಕೃತಿ ಸುಂದರವಾಗಿ ಮೂಡಿಬಂದಿದೆ.

ಚಿತ್ರ ೨೩. ಸಂಯೋಜನೆ: ಈ ರೇಖಾಚಿತ್ರದಲ್ಲಿ ಇಬ್ಬರ ಮನಷ್ಯಾಕೃತಿಗಳನ್ನು ಹಿನ್ನಲೆಯಾಗಿ ನಿಸರ್ಗದ ಕಲ್ಪನೆ ಮಾಡಲು ಆಕಾಶ, ಬೆಟ್ಟ, ಮರಗಳ ದೃಶ್ಯ ಕಂಡು ಬರುತ್ತದೆ. ಮನುಷ್ಯಾಕೃತಿಗಳಲ್ಲಿ ಒಬ್ಬ ಸಾಧು ಮತ್ತು ಎದುರುಗಡೆ ಮಹಿಳೆಯ ಚಿತ್ರವನ್ನು ಒರೆಯಾಗಿ ಚಿತ್ರಿಸಲಾಗಿದ್ದು, ಸಾಧು ಮುಗ್ಧನಾಗಿ ಭಿಕ್ಷೆಗೆ ಹೋಗಿರುವುದು, ಮಹಿಳೆ ಭಿಕ್ಷೆಯನ್ನು ನೀಡಲು ಸನಿಹ ಬಂದಾಗ ಸಾಧು ಎಲ್ಲಿ ಆ ಮಹಿಳೆಯತ್ತ ದೃಷ್ಟಿ ಹೋದರೆ ನನ್ನಲ್ಲಿ ಮೋಹ ಭಾವನೆ ಉಂಟಾಗುವುದೋ ಎಂದು ಓರೆಯಾಗಿ ಹೊರಳಿ ಕಣ್ಣು ಮುಚ್ಚಿನಿಂತಿರುವ ದೃಶ್ಯ ಪ್ರಾಚೀನ ಧಾರ್ಮಿಕತೆಯನ್ನು ಬಿಂಬಿಸುವಂತಿದೆ. ಜ್ಯಾಮಿತಕ ಆಕಾರಗಳಲ್ಲಿಯ ರೇಖೆಗಳ ಲಾಲಿತ್ಯಮಯ ಸಮಾಗಮಗಳೊಂದಿಗೆ ಯಾವುದೇ ಛಾಯೆಗಳನ್ನು ವ್ಯಕ್ತಪಡಿಸದೆ ಸಮಯದ ಪರಿಣಾಮವನ್ನೂ ಬಾನು, ಗಿಡ, ಚಂದಿರಗಳ ದೃಶ್ಯವನ್ನು ಸುಂದರವಾಗಿ ಪಾಟೀಲರು ತಮ್ಮ ಕುಂಚದ ಮೂಲಕ ಹೊರಹಾಕಿದ್ದಾರೆ.

ಚಿತ್ರ ೨೪. ಸಂಯೊಜನೆ: ಅಜಂತಾ ಶೈಲಿಯ ಈ ಸ್ತ್ರೀಶಿಲ್ಪ ಮಾದರಿಯ ಚಿತ್ರವು ಎಡ ಪಾರ್ಶ್ವದ ರಚನೆ ಇದಾಗಿದ್ದು ಈ ಚಿತ್ರರಚನೆಯಲ್ಲಿ ರೇಖೆಗಳು ಗೌಣ, ರೇಖೆಗಳದ್ದೇ ಪಾರುಪತ್ಯ ರೇಖೆಗಳ ಮುಖಾಂತರ ಈ ಚಿತ್ರಕ್ಕೊಂದು ರೂಪಕೊಟ್ಟಿರುವ ಶೈಲಿ, ತಂತ್ರಗಾರಿಕೆ, ಸ್ತ್ರೀಸಹಜವಾದ ಮೈಮಾಟವನ್ನು ಯಥಾವತ್ತಾಗಿ ಛಾಯೆರಹಿತವಾಗಿ ಕೇವಲ ರೇಖೆಗಳ ಮೂಲಕ ದೈಹಿಕವಾಗಿ ಅಜಾನುಬಾಹುವಾಗಿವ ನಗ್ನ ಸ್ತ್ರೀ ಚಿತ್ರಣವು ವೈವಿಧ್ಯಮಯವಾಗಿ ಚಿತ್ರೀತಗೊಂಡಿದೆ. ಅ ಹಿನ್ನಲೆಯಲ್ಲಿ ಜ್ಯಾಮಿತಿಯ ಆಕಾರದಲ್ಲಿ ನಿಸರ್ಗದ ವಾತಾವರಣವನ್ನು ಘನಾಕೃತಿ ರೇಖೆಗಳ ಮುಖಾಂತರ ಚಿತ್ರಿಸಿದ್ದಾರೆ.



ಚಿತ್ರ – ೨೫ ಸಂಯೋಜನೆ



ಚಿತ್ರ – ೨೬ ಮಧುಚಂದ್ರ

ಒಟ್ಟಾರೆ ಈ ಚಿತ್ರವು ಶಿಲಾಬಾಲಿಕೆಯನ್ನು ಹೋಲುವ ಈ ಚಿತ್ರದಲ್ಲಿ ನಗ್ನ ಸ್ತ್ರೀಯು ತಲೆಗೆ ಆಸರೆಯಾಗಿ ಕೈಹಿಡಿದುಕೊಂಡಿದ್ದು ಇನ್ನೊಂದು ಕೈ ಬೆರಳಲ್ಲಿ ಪಕ್ಷಿ ಕುಳಿತಿದ್ದು ಅದನ್ನು ಗ್ರಹಿಸುತ್ತಿರುವ ಮಹಿಳೆಯ ದೃಶ್ಯದಲ್ಲಿ ವಿರಹ ವೇದನೆಯ ಸೂಚಕ ಕೆಲವು ಸಾಂಕೇತಿಕ ಸನ್ನಿವೇಶಗಳನ್ನೊಳಗೊಂಡ ನೈಜ ಚಿತ್ರಣವಾಗಿದೆ. ಪಾಟೀಲರು ಚಿತ್ರ ಸೃಷ್ಟಿವೊಂದನ್ನು ಚಿತ್ರಿಸಿದ್ದು ರಚನಾ ತಂತ್ರವು ವಿಭಿನ್ನವಾಗಿ ಕಂಡು ಬಂದರು ಸಾಂಸ್ಕೃತಿಕ ರಂಗು ತುಂಬುವಲ್ಲಿ ಶೃಂಗಾರಾತ್ಮಕವಾಗಿ ಮೂಡಿಬಂದಿದೆ. ಕೃಶವಾದ ರೇಖೆಗಳ ಪ್ರದರ್ಶನವನ್ನು ಅದರ ಮಿತಿಯೊಳಗೆ ಕೊಂಡೂಯ್ಯುವಲ್ಲಿ ಪಾಟೀಲರು ಚಿತ್ರಗಳಲ್ಲಿನ ಬಾಹ್ಯ ರೇಖೆಗಳ ಆಕಾರಗಳನ್ನು ರೂಪಿಸುವದರೊಂದಿಗೆ ತಮ್ಮದೆ ಆದ ಲಯವನ್ನು ಸೃಷ್ಟಿಸುವದರ ಜೊತೆಗೆ ಸಂಕೇತಗಳ ಸಮನ್ವಯ ಇವರ ರೇಖಾ ಚಿತ್ರದಲ್ಲಿ ಕಂಡು ಬರುತ್ತದೆ.

ಚಿತ್ರ ೨೫. ಸಂಯೋಜನೆ : ಈ ಚಿತ್ರ ಸಂಯೋಜನೆಯು ವಿಶಿಷ್ಟವಾಗಿ ರಚಿತವಾಗಿದೆ ಕುಳಿತಿರುವ ಭಂಗಿಯಲ್ಲಿ ಎರಡು ಮಾನವಾಕೃತಿಗಳ ರಚನೆಯ ದೃಶ್ಯ ಹಾಗೂ ಹಿನ್ನಲೆಯಲ್ಲಿ ಸುತ್ತಲಿನ ಪರಿಸರವನ್ನು ತೋರಿಸುವ ಗಡಸು ರೇಖೆಗಳು ಆದಿಯಿಂದ ಅಂತ್ಯದವರೆಗೆ ಜ್ಯಾಮಿತಿಯ ಆಕಾರದಲ್ಲಿ ಒಂದಕ್ಕೊಂದು ವಿರುದ್ಧ ದಿಕ್ಕಿನಲ್ಲಿ ಸಾಗಿವೆ. ಚಿತ್ರದಲ್ಲಿ ಶಿರ್ಷಿಕೆಯನ್ನು ಹುಡುಕುವ ಪ್ರಯತ್ನ ಕಷ್ಟಕರವಾಗಿದ್ದರೂ ಅಮೂರ್ತ ಲೋಕದಲ್ಲಿ ವಾಸ್ತವದ ಪರಿಚಿತ ರೂಪಗಳನ್ನು ಸಹಜವಾಗಿ ಗುರಿತಿಸಬಹುದಾಗಿದೆ. ಒಟ್ಟಾರೆಯಾಗಿ ಈ ಚಿತ್ರದಲ್ಲಿ ಇಬ್ಬರು ಸಮುದ್ರ ದಡದಲ್ಲಿ ಕುಳಿತು ಪ್ರಕೃತಿಯ ಸೌಂದರ್ಯವನ್ನು ಸವಿಯುತ್ತಿರುವ ದೃಶ್ಯ ಇದಾಗಿದೆ. ಪಾಟೀಲರು ವಾಸ್ತವ ಲೋಕದ ಪರಿಚಿತ ರೂಪಗಳನ್ನು ಅಮೂರ್ತ ರೇಖೆಗಳನ್ನು ಆಕೃತಿಗಳಲ್ಲಿ ಚಿತ್ರಿಸಿ ಬೇತಾಳವನ್ನು ಬೆನ್ನುಟ್ಟಿದ ವಿಕ್ರಮನಂತೆ ತಮ್ಮದಾಗಿಸುವ ಪ್ರಯತ್ನವನ್ನು ಕಂಡುಕೊಂಡಿದ್ದಾರೆ.

ರೇಖೆಗಳ ಅಭಿವ್ಯಕ್ತಿ ಸಾಮರ್ಥ್ಯ ಅಪರಿಮಿತವಾದುದು, ದಪ್ಪ, ಹರಿತ, ಭಾರ, ವೇಗ, ಇವುಗಳಲ್ಲಿ ವ್ಯತ್ಯಾಸ ಕಂಡುಕೊಳ್ಳುವ ಮೂಲಕ ವಿವಿಧ ಭಾವನೆಗಳನ್ನು ವ್ಯಕ್ತಪಡಿಸಲು ವಿವಿಧ ರೇಖೆಗಳ ಮೂಲಕ ವಸ್ತುವಿಷಯದ ಸಾಧ್ಯತೆಗಳನ್ನು ವಿಸ್ತರಿಸುವ ದಿಸೆಯಲ್ಲಿ ಪಾಟೀಲರ ಎಲ್ಲ ಬಗೆಯ ಪ್ರಯತ್ನ ಸಫಲಗೊಂಡಿರುವುದನ್ನು ಗುರುತಿಸಬಹುದು.

ಚಿತ್ರ ೨೬. ಮಧುಚಂದ್ರ (ಸರಣಿಚಿತ್ರ): ಈ ಹಿಂದೆ ಮಧುಚಂದ್ರ ಚಿತ್ರದ ಕುರಿತು ವಿಶ್ಲೇಷಿಸಲಾಗಿ ಈ ಚಿತ್ರದಲ್ಲಿಯೂ ಪ್ರೇಮಿಗಳಿಬ್ಬರ ಪ್ರಣಯ ದೃಶ್ಯ ಇದಾಗಿದ್ದು ಚಿತ್ರದಲ್ಲಿ ಮುಖ್ಯವಾಗಿ ಪ್ರೇಮಿಗಳ ರಾಸಲೀಲೆಯನ್ನು ಕೇಂದ್ರಿಕರಿಸಿ, ಹಿನ್ನಲೆಯಲ್ಲಿ ಜ್ಯಾಮಿತಿಕ ಆಕಾರದಲ್ಲಿ ಚತುರ್ಭುಜ ರೇಖೆಗಳಲ್ಲಿ




ಚಿತ್ರ – ೨೭ ಧಾರ್ಮಿಕ ಹೋರಾಟ

ಅರ್ಧ ಚಂದ್ರಾಕೃತಿ ರಚಿಸಿರುವುದನ್ನು ಕಾಣಬಹುದು. ಇಲ್ಲಿ ಪಾಟೀಲರು ಸ್ತ್ರೀ-ಪುರುಷರ ಆಕೃತಿಗಳನ್ನು ಮೋಹಕ ಭಂಗಿಯಲ್ಲಿ ಸರಸ-ಸಲ್ಲಾಪದಲ್ಲಿ ಮಗ್ನರಾಗಿರುವ ಚಿತ್ರವು ಸರಳ ಜ್ಯಾಮಿತಿಕ ರೇಖೆಗಳ ಮೂಲಕ ಘನಾಕೃತಿ ಶೈಲಿಯಲ್ಲಿ ರಚನೆಗೊಂಡಿದ್ದು. ಇವರಿಬ್ಬರ ಮುಖದಲ್ಲಿ ಪ್ರೀತಿಯ ಭಾವನೆ ಮೂಡಿಸುವಲ್ಲಿ ಕೇವಲ ಗಡಸು ರೇಖೆಗಳ ಮೂಲಕ ಶೃಂಗಾರಾತ್ಮಕ ಕಾವ್ಯವಾಗಿ ಚಿತ್ರಿಸಿದ್ದಾರೆ. ಚಿತ್ರದ ಭಾವನೆ ನೈಜವಾಗಿ ಭಾರತೀಯ ಶೈಲಿಯಲ್ಲಿದ್ದರೆ ರೇಖಾ ವಿನ್ಯಾಸ ಮಾತ್ರ ಪಾಶ್ಚಿಮಾತ್ಯ ಕ್ಯೂಬಿಸಂ ಶೈಲಿಯಲ್ಲಿ ರಚಿತವಾಗಿದೆ.

ಚಿತ್ರ ೨೭. ಧಾರ್ಮಿಕ ಹೋರಾಟ: ಭಾರತ ದೇಶವು ವಿವಿಧ ಜಾತಿ, ಧರ್ಮ, ಭಾಷೆ, ಸಂಸ್ಕೃತಿಗಳಿಂದ ಕೂಡಿದ ದೇಶವಾಗಿದೆ. ಇವೆಲ್ಲವನ್ನು ರಾಜಕೀಯ ರಂಗದಿಂದ ಬದಗಿರಿಸಿ ಸಾರ್ವಜನಿಕ ರಂಗಕ್ಕೆ ಬಂದಾಗ ನಾವೆಲ್ಲ ಒಂದು, ನಾವೆಲ್ಲ ಭಾರತೀಯರು, ನಾವೆಲ್ಲರು ಭಾರತ ಮಾತೆಯ ಮಕ್ಕಳೆಂಬ ಮಾದರಿಯಲ್ಲಿ ಸರ್ವ ಧರ್ಮಗಳಲ್ಲಿ ಅನೇಕತೆಯಲ್ಲಿ ಏಕತೆಯನ್ನು ಕಂಡುಕೊಂಡು ಬಂದಿರುವುದು ಕಂಡು ಬರುತ್ತದೆ. ಆದರೆ ರಾಜಕೀಯ ರಂಗದಲ್ಲಿ ತಮ್ಮ ಉಪಯೋಗಕ್ಕಾಗಿ ಧರ್ಮಗಳ ಕುರಿತು ವಿವಿಧ ಧರ್ಮಿಯರಲ್ಲಿ ವಿಷದ ಬೀಜವನ್ನು ಭಿತ್ತಿ ತಮ್ಮ ಅನುಕೂಲಗೋಸ್ಕರ ವಿವಿಧ ಧರ್ಮಿಯರಲ್ಲಿ ಸಂಘಟನೆಯನ್ನು ಕೈಗೊಂಡು ಕೋಮಗಲಭೆಗೆ ಪರಿವರ್ತಿತಗೊಂಡು ವಿವಿಧ ಧರ್ಮದ ಸಾವಿರಾರು ಜನರು ಜಿವಕಳೆದು ಕೊಂಡಿದ್ದು ಸಾಮಾನ್ಯವಾಗಿ ನಾವೆಲ್ಲ ತಿಳಿದಿರುವ ವಿಷಯವಾಗಿದೆ. ಈ ಹಿನ್ನಲೆಯಲ್ಲಿ ಪಾಟೀಲರು ಭಾರತೀಯ ಧಾರ್ಮಿಕ ಕೋಮುಗಲಭೆಯ ಕುರಿತ ವಿಷಯವನ್ನಾಧರಿಸಿ ತಮ್ಮ ರೇಖಾ ಸಂಯೋಜನೆಯಲ್ಲಿ ವ್ಯಕ್ತಪಡಿಸಿರುವುದನ್ನು ಕಾಣಬಹುದು. ಚಿತ್ರದ ವಿಷಯವಸ್ತುವಿನಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ್, ಮುಂತಾದ ಧರ್ಮದ ಸಂಕೇತಗಳನ್ನು ಚಿತ್ರಿಸಿದ್ದು, ಮುನ್ನಲೆಯಲ್ಲಿ ವಿವಿಧ ಧರ್ಮಿಯ ಜನರು ಪರಸ್ಪರ ತಮ್ಮ ತಮ್ಮಲ್ಲಿ ಹೊಡೆದಾಡಿ ಕೋಮುಗಲಭೆಗೆ ಸಿಕ್ಕಿಕೋಂಡು ಧಾರ್ಮಿಕ ವಿವಾದಗಳು ಭುಗಿಲೆದ್ದ ಸನ್ನಿವೇಶಗಳನ್ನು ಪಾಟೀಲರು ಯಥಾವತ್ತಾಗಿ ಸರಳ ರೇಖೆಗಳ ಮೂಲಕ ತಮ್ಮ ಭಾವನೆಗಳನ್ನು ಅಭಿವ್ಯಕ್ತಪಡಿಸಿದ್ದಾರೆ. ಚಿತ್ರದಲ್ಲಿ ಸರ್ವಧರ್ಮಗಳ ಧಾರ್ಮಿಕ ಸಂಕೇತಗಳನ್ನು ಬಳಸಿ ಬೆಟ್ಟದ ಮಾದರಿಯಲ್ಲಿ ಚಿತ್ರಿಸಿದ್ದು ಮುಖ್ಯದ್ವಾರದಲ್ಲಿ ಒಬ್ಬ ವೃದ್ದನು ಕೈಯಲ್ಲಿ ಆಸರೆಯಾಗಿ ಕೋಲು ಹಿಡಿದುಕೊಂಡು ನಿಂತಿದ್ದು ಮುನ್ನಲೆಯಲ್ಲಿ ವಿವಿಧ ಧರ್ಮಿಯ ಜನರು ರಾಜಕೀಯ ಕೈವಾಡಕ್ಕೆ ಸಿಲುಕಿ ತಮ್ಮ-ತಮ್ಮಲ್ಲಿ ಹೊಡೆದಾಡುತ್ತಿರುವ ದೃಶ್ಯವನ್ನು ಕಾಣಬಹುದು. ಒಟ್ಟು ಈ ರೇಖಾ ಸಂಯೋಜನಾ ಚಿತ್ರವು ೧೯೯೦-೯೧ ಅಯೋಧ್ಯೆ



ಚಿತ್ರ ೨೮



ಚಿತ್ರ - ೨೯ ಹೋರಾಟ

ಮತ್ತು ಬಾಬರಿ ಮಸೀಧಿಯ ಕೋಮುಗಲಭೆಯನ್ನು ರಾಜಕೀಯ ಸಾಮಾಜಿಕ ಕಾರಣಗಳಿಂದಾದ ಅಶಾಂತಿಯ ರಣರಂಗ ರೇಖಾಚಿತ್ರವು ಘನಾಕೃತಿಯಿಂದ ಕೂಡಿದ್ದು ಜ್ಯಾಮಿತಿಕ ಆಕಾರಗಳಲ್ಲಿ ರಚಿತವಾಗಿವೆ. ಹೀಗೆ ಪಾಟೀಲರು ತಮ್ಮ ಚಿತ್ರ ಸಂಯೋಜನೆಯ ಮೂಲಕ ಕೋಮ-ಗಲಭೆಯ ಸನ್ನಿವೇಶದ ದೃಶ್ಯವನ್ನು ಜನಸಾಮಾನ್ಯರಲ್ಲಿ ರಾಷ್ಟ್ರೀಯ ಭಾವೈಕ್ಯತೆಯ ಬೀಜವನ್ನು ಬಿತ್ತಿ ನಾನು, ನಾವು, ನಮ್ಮವರು, ಎಂಬ ಭಾವನೆಯನ್ನು ಮೂಡಿಸುವಲ್ಲಿ, ಹಿನ್ನಲೆ ಪೂರಕವಾಗಿ ವಿವಿಧ ಧಾರ್ಮಿಕ ಸಂಕೇತಗಳನ್ನು ವಿನ್ಯಾಸದ ಮೂಲಕವಾಗಿ ಸಂಕೇತಗಳನ್ನಾಧರಿಸಿ ವಿಶೇಷವಾಗಿ ಪಟ್ಟಿಕೆಗಳ ಸಮೂಹವೆಂಬಂತೆ ಕಂಡು ಬರುವ ವಿನ್ಯಾಸವನ್ನು ಪಾಟೀಲರು ಕೇವಲ ಸರಳ ರೇಖೆಗಳಲ್ಲಿ ನೆರಳು-ಬೆಳಕಿನ ಪ್ರಯೋಗವನ್ನು ಬಳಸದೆ ಜನಸಾಮಾನ್ಯರಿಗೆ ಸಹಜವಾಗಿ ಅರ್ಥೈಸುವಂತೆ ತಮ್ಮ ಅಂತರಾಳದ ಆಶಯವನ್ನು ಕಲಾಕೃತಿಯಲ್ಲಿ ವ್ಯಕ್ತಪಡಿಸಿದ್ದಾರೆ.

ಚಿತ್ರ ೨೮. ಮಧುಚಂದ್ರ ಸರಣಿಚಿತ್ರ: ಈ ರೇಖಾ ಸಂಯೋಜನೆಯಲ್ಲಿ ಪ್ರೇಮಿಗಳಿಬ್ಬರು ಹುಲ್ಲು ಹಾಸಿನ ಮೇಲೆ ಗಿಡದ ಕೆಳಗೆ ಬೆಳದಿಂಗಳಿನ ಬೆಳಕಿನಲ್ಲಿ ಪ್ರಣಯ ನಿರತರಾಗಿರುವ ದೃಶ್ಯ ಇದಾಗಿದ್ದು, ಭಾರತೀಯ ರಾಗಮಾಲಾ ಕಾವ್ಯಮಯ ಚಿತ್ರವನ್ನು ಶಾಯಿಮಾದ್ಯಮದಲ್ಲಿ ಕುಂಚದ ಸಹಾಯದಿಂದ ದಪ್ಪ ರೇಖೆಗಳ ಮೂಲಕ ಭಾರತೀಯ ಕಲೆಯಲ್ಲಿ ನವ್ಯತೆಯನ್ನು ತಮ್ಮ ಕೃತಿಯಲ್ಲಿ ರೂಪಿಸಿಕೊಂಡ ಪಾಟೀಲರು ಅಕಾಡೆಮಿಕ್ ಆದ ಕಲಾ ವ್ಯಾಕರಣವನ್ನು ಮೀರಿದ ರೇಖೆಗಳು, ವಿಕೃತಿಯ ಸುಂದರ ಸೃಜನಶೀಲ ಕಲ್ಪನೆಗಳು, ಪಾಟೀಲರ ಸೃಷ್ಟಿಶೀಲ ರೇಖೆಗಳಲ್ಲಿ ಹೊಸತನದ ತೀವ್ರತೆಯನ್ನು ಕಾಣಬಹುದು. ಪಾಟೀಲರ ರೇಖೆಗಳು ಅಭಿವ್ಯಕ್ತಿ ಮಾಧ್ಯಮದಲ್ಲಿ ಆಕರ್ಷಕವಾಗಿ ಅಂಟಿಕೊಂಡಿರುವಂತೆ ಕಾಣುತ್ತದೆ.


ರೇಖೆಯ ಸಮತಲದ ಮೇಲೆ ಮೂರು ಆಯಾಮಗಳಲ್ಲಿ ಲಯಬದ್ಧವಾಗಿ ಹರಿಯುವ ಮೂಲಕ ಅಥವಾ ಅಂಕು ಡೊಂಕಾಗಿ ವಕ್ರವಾಗಿ ತಡೆ ತಡೆದು, ನಿಂತು ಹೋಗುವ ದಪ್ಪ ರೇಖೆಗಳನ್ನು ನೆರಳು ಬೆಳಕಿನ ಸೂಚನೆಯಿಲ್ಲದೆ ಪಾಟೀಲರು ತಮ್ಮದೆ ಆದ ವೈವಿದ್ಯಮಯ, ಸ್ವತಂತ್ರ, ಸೌಂದರ್ಯಾತ್ಮಕ ಮೌಲ್ಯವನ್ನು ತಮ್ಮ ಕಲಾಕೃತಿಯಲ್ಲಿ ಕಂಡುಕೊಳ್ಳುವಲ್ಲಿ ಪಾಟೀಲರು ಸಫಲವಾಗಿದೆ.

ಚಿತ್ರ ೨೯. ಹೋರಾಟ: ಮುಕ್ತಹಸ್ತ ರಚಿತವಾದ ವಿಸ್ತೃತವಾದ ಈ ರೇಖಾ ಸಂಯೋಜನೆಯಲ್ಲಿ ವಸ್ತುಗಳ ಸಾಲುಗಳು, ಆಕೃತಿಗಳು, ಲಂಬರೇಖೆಗಳನ್ನು ಒಂದು ಕ್ರಮದಲ್ಲಿ ಸ್ಥಳ ಬಿಟ್ಟು ರೇಖಿಸುವಲ್ಲಿ ನಡು-ನಡುವೆ ಅಡ್ಡರೇಖೆಗಳಿಂದ ಕೂಡಿರುವುದನ್ನು ಕಾಣಬಹುದಾಗಿದೆ. ಈ ಸಂಯೋಜನಾ


ಕೃತಿಯಲ್ಲಿ ಪ್ರಧಾನ ಆಕೃತಿಗಳಾದ ಅಶ್ವಾರೂಡ ಯುವ ಹೋರಾಟಗಾರರ ಆಕೃತಿಗಳು ಸಂಪ್ರದಾಯಬದ್ಧ ಶೈಲಿಯದಾಗಿದ್ದು ಒಂದು ಬಗೆಯ ಬಿಗಿಸೆಳೆತವನ್ನು ಹೊಂದಿವೆ.

ಈ ಚಿತ್ರದಲ್ಲಿ ವಿಜಯದ ಸಂಕೇತವಾಗಿ ಧ್ವಜವನ್ನು ಚಿತ್ರಿಸಿದ್ದು ಚಿತ್ರದ ಮೇಲ್ಮೈಯನ್ನು ಅಡ್ಡನೆಲೆ ಗೇರೆಗಳಾಗಿ ವಿಂಗಡಿಸಿದೆ. ಪ್ರತಿಯೊಂದು ಆಕೃತಿಯು ಗೆರೆ ಮೇಲೆ ನಿಂತಿವೆ. ಪಾಟೀಲರು ತಮ್ಮ ಈ ಚಿತ್ರರಚನೆಯಲ್ಲಿ ಸ್ಪಷ್ಟ, ಸಹಜವಾದ ಬ್ರಾಂತಿ ಉಂಟುಮಾಡಬಲ್ಲ ಸ್ಪಷ್ಟ ನೋಟವನ್ನು ಹಿನ್ನಲೆಯಲ್ಲಿ ಬೆಟ್ಟಗುಡಗಳ ಸಾಲು, ಬಾನು, ಸೂರ್ಯ ಮುಂತಾದವುಗಳನ್ನು ರಣರಂಗದ ಭಾವನೆ ಮೂಡುವಂತೆ ಸಾಂಕೇತಿಸು ಕೆಲವು ಸಂಕೇತ ಸೂಚಕಗಳನ್ನು ಬಳಸಿ ಆಧುನಿಕ ನೆಲೆಯಲ್ಲಿ ಕ್ಯೂಬಿಸಂ ಶೈಲಿಯಲ್ಲಿ ನಯವಾದ ರೇಖೆಗಳ ಮೂಲಕ ಚಿತ್ರಿಸಿರುವದನ್ನು ಕಾಣಬಹುದು.

ಚಿತ್ರ ೩೦. ಪ್ರೇಮಿಗಳು : ಪ್ರೇಮಿಗಳಿಬ್ಬರು ನಿಸರ್ಗದ ಸುಂದರ ಸಂಜೆಯಲ್ಲಿ ಏಕಾಂತವಾಗಿ ಪರಸ್ಪರ ಒಬ್ಬರಿಗೊಬ್ಬರು ವ್ಯಕ್ತಪಡಿಸುವ ದೃಶ್ಯ ತುಂಬಾ ಸುಂದರವಾಗಿ ಮೂಡಿ ಬಂದಿದೆ. ಕಲಾಕೃತಿಯ ಯಥಾದರ್ಶನದಲ್ಲಿ ಸಮತಟ್ಟಾಗಿ ರೇಖೆಗಳ ಮೂಲಕ ಬದ್ದತೆಯನ್ನು ಕಾಯ್ದುಕೊಂಡಿದ್ದಾರೆ. ಈ ಚಿತ್ರವು ನವ್ಯಪದ್ಧತಿಯಲ್ಲಿ ಬೆಳೆದರೂ ಸಮತಟ್ಟಾಗಿ ಹೊರರೇಖೆ (Outline)ಯನ್ನು ಹಾಕಿರುವುದನ್ನು ಗಮನಿಸಬಹುದು. ಲಯುದ್ಧವಾದ ಇಲ್ಲಿನ ರೇಖೆಗಳಿಗೆ ಅನನ್ಯವಾದ ಪ್ರಾಮುಖ್ಯತೆಯನ್ನು ನಿಡಿ ರೇಖೆಗಳನ್ನು ವೈವಿಧ್ಯಮಯವಾಗಿ ಬಳಸಿಕೊಳ್ಳುತ್ತಲೆ ವಿಭಿನ್ನ ಪರಿಣಾಮಗಳನ್ನು ಮೂಡಿಸಿ ರೇಖೆಗಳ ಓಟದಲ್ಲಿ ಮಾನವಾಕೃತಿಯ ತಂತ್ರ, ವ್ಯತ್ಯಾಸಭಂಗಿ, ಏರಿಳಿತಗಳು, ಇವೆಲ್ಲವನ್ನು ಪಾಟೀಲರು ರೇಖಾಚಿತ್ರಣದಲ್ಲಿ ಕಾಯ್ದುಕೊಂಡು ,ಚಿತ್ರದಲ್ಲಿ ಪ್ರಕೃತಿಯ ರಮ್ಯತೆಯನ್ನು ಮರ ಹೂ-ಬಳ್ಳಿಗಳನ್ನು, ಚಂದ್ರ, ಇವುಗಳೆಲ್ಲವನ್ನು ಸಾಂಕೇತಿಕವಾಗಿ ಪ್ರಕೃತಿಯ ಸೊಬಗಿನ ವೈಖರಿಯ ಭಾವನೆ ಮೂಡುವ ಹಾಗೆ ಮತ್ತು ರಸಿಕತೆಯ ಅಭಿವ್ಯಕ್ತಿಯನ್ನು ಕಪ್ಪುವರ್ಣದ ರೇಖೆಗಳಿಂದ ಕಾವ್ಯಮಯವಾಗಿ ಪರಿಣಮಿಸುವ ಚಿತ್ರ ಇದಾಗಿದೆ. ಹೀಗೆ ಪಾಟೀಲರು ಸಶಕ್ತವಾದ ರೇಖೆಗಳ ಮೂಲಕ ಕಲೆಯಿಂದ ಪಕ್ಷಗೊಂಡ ಮನಸ್ಸುಗಳಿಗೆ ವಿಷಯದ ಅನುಭವ ಮೂಡಿಸುವಲ್ಲಿ ಅವರು ಆಯ್ದುಕೊಂಡ ಭಾರತೀಯ ಸಂಸ್ಕೃತಿಯ ವಿಷಯ ಸೃಜನಾತ್ಮಕ ಮನಸ್ಸು ಮತ್ತು ಆಧುನಿಕ ಇವೆಲ್ಲಗಳಿಂದ ಕಲಾಕೃತಿಗೆ ಜೀವ ತುಂಬಿ ರೇಖಾಚಿತ್ರಗಳನ್ನು ರಚಿಸಿರುವ ಕಲಾಕೃತಿಗಳಲ್ಲಿ ರೇಖಾ ಕೌಶಲ್ಯ ಮತ್ತು ಅವರ ಪ್ರಾಮಾಣಿಕ ಪ್ರಯತ್ನವನ್ನು ಕಾಣಬಹುದು.



ಚಿತ್ರ – ೩೦ ಪ್ರೇಮಿಗಳು



ಚಿತ್ರ – ೩೧ ನೃತ್ಯಗಾರ್ತಿ

ಚಿತ್ರ ೩೧. ನೃತ್ಯ ಗಾರ್ತಿ: ಪಾಟೀಲರಿಗೆ ಚಿತ್ರಕಲೆ ಅಲ್ಲದೆ ಬೇರೆ-ಬೇರೆ ಕಲೆಗಳಲ್ಲಿಯೂ ಆಸಕ್ತಿ ಇತ್ತು. ಇತರ ಕಲೆ-ಕಲಾಪ್ರಕಾರಗಳ ಬಗ್ಗೆ ಪರಿಚಯವಿರಬೇಕು ಎನ್ನುವ ಅವರು ಭಾರತೀಯ ನೃತ್ಯ, ಸಂಗೀತಗಳ ಕುರಿತು ಅನೇಕ ಚಿತ್ರಗಳನ್ನು ರಚಿಸಿರುವುದನ್ನು ಕಾಣಬಹುದು. ನಾಟ್ಯ ಸ್ತ್ರೀ ಒಬ್ಬಳನ್ನು ಪೂರ್ಣ ಪ್ರಮಾಣದ ಭಂಗಿಯಲ್ಲಿ ಆಭರಣ, ವಸ್ತ್ರವಿನ್ಯಾಸ, ಆರು ಕೈಗಳನ್ನು ಚಿತ್ರಿಸಿದ್ದು, ಲೆಕ್ಕಣಿಯ ಮೂಲಕ ಸರಳವಾದ ರೇಖೆಗಳ ಮೂಲಕ ಅಲಂಕಾರಿಕ ಶೈಲಿಯಲ್ಲಿ ಅತ್ಯಂತ ಪ್ರಮಾಣ ಬದ್ಧವಾಗಿದ್ದ ಚಾಲುಕ್ಯ ಶೈಲಿಯ ನಟರಾಜ ಶಿಲ್ಪವನ್ನು ಹೋಲುವ ಚಿತ್ರ ಇದಾಗಿದ್ದು ನಾಟ್ಯ ಸ್ತ್ರೀಯಳಲ್ಲಿ ಗಾಂಭಿರ್ಯತೆಯನ್ನು ನೃತ್ಯದ ವಿವಿಧ ಭಂಗಿಗಳನ್ನು ಛಾಯಾ ರಹಿತವಾಗಿ ಕೇವಲ ರೇಖೆಗಳ ಮೂಲಕ, ಈ ನೃತ್ಯದ ಚಿತ್ರವನ್ನು ಸೃಜನಶೀಲವಾಗಿ, ತಂತ್ರಗಾರಿಕೆಯ ಮೂಲಕ ಪಾಟೀಲರು ಚಿತ್ರಿಸಿದ್ದಾರೆ. ಅನುಕರಣೆಗಿಂತ ಭಿನ್ನವಾಗಿ ಸೃಜನಾತ್ಮಕವಾಗಿ ಮಿತವಾದ ರೇಖೆಗಳಿಂದ ಭಾರತೀಯ ಸಂಪ್ರದಾಯದ ನೃತ್ಯ ಗಾರ್ತಿಯ ಶರೀರದ ಅಂಗಾಂಗಗಳ ಸುಂದರ ಹಾಗೂ ಸಂಯಮ ಚಲನೆಗೆ ಪಾಟೀಲರು ಆಕರ್ಷಿತರಾಗಿ ಕನಿಷ್ಟವಾದ ರೇಖೆಗಳನ್ನು ಬಳಸಿ ಚಿತ್ರದಲ್ಲಿ ಪರಿಣಾಮವನ್ನು ತರಲು ಪ್ರಯತ್ನಿಸಿ ಕಲಾಕೃತಿಯಲ್ಲಿ ಸ್ವಂತಿಕೆಯನ್ನು ಕಂಡುಕೊಂಡಿದ್ದಾರೆ.

ಒಟ್ಟಾರೆ ಪಾಟೀಲರು ಜೀವನದುದ್ದಕ್ಕೂ ಸಾವಿರಾರು ಸಂಖ್ಯೆಗಳಲ್ಲಿ ರೇಖಾ ಚಿತ್ರಗಳನ್ನು ರಚಿಸಿದ್ದಾರೆ. ಅಧ್ಯಯನದ ವ್ಯಾಪ್ತಿಗೆ ಪೂರಕವಾಗಿ ಪಾಟೀಲರು ಶಾಹಿಮಾಧ್ಯಮದ ಆಯ್ದ ರೇಖಾಚಿತ್ರಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಿ ಪ್ರತಿಯೊಂದು ರೇಖಾಚಿತ್ರಗಳ ವಸ್ತು-ವಿಷಯಗಳನ್ನು, ತಂತ್ರಗಳು, ಸಂಯೋಜನಾಕ್ರಮ ಮತ್ತು ರಚಿತಗೊಂಡ ಶೈಲಿಗಳ ವಿಭಿನ್ನವಾಗಿ ರಚಿತಗೊಂಡಿವೆ.

ಪಾಟೀಲರು ಶೈಕ್ಷಣಿಕ ಪ್ರವಾಸದಿಂದಾಗಿ ಆ ಪ್ರದೇಶದ ಸಂಸ್ಕೃತಿ ಹಿನ್ನಲೆ, ಧಾರ್ಮಿಕ ನೆಲೆಗಳು, ಪ್ರಾಕೃತಿಕ ಪರಿಸರ, ಗ್ರಾಮೀಣ ಕಲೆಗಳು, ಚಾರಿತ್ರಿಕ ಇನ್ನೇಲೆಯಲ್ಲಿ ಮತ್ತು ಸೃಷ್ಟಿಗೆ ಸಂಬಂಧಪಟ್ಟ ಅಂಶಗಳನ್ನು ತಮ್ಮ ಸೃಜನಶೀಲತೆಯಲ್ಲಿ ತೊಡಗಿಸಿ ಕೊಂಡಿರುವುದನ್ನು ಇಲ್ಲಿನ ಚಿತ್ರಗಳ ಅಧ್ಯಯನದಿಂದ ಕಂಡುಬರುತ್ತದೆ. ಪಾಟೀಲರು ಭಾರತೀಯ ಸಂಸ್ಕೃತಿಯಲ್ಲಿ ಘಟಿಸುವ ವಿದ್ಯಮಾನಗಳಿಗೆ ಸ್ಪಂದಿಸುವಂತವರಾಗಿದ್ದು, ಅವರು ರಚಿಸಿದ ಕಲಾಕೃತಿಗಳ ಮೂಲಕ ತಿಳಿದುಕೊಳ್ಳಬಹುದಾಗಿದೆ. ಸಂಸ್ಕೃತಿಗೆ ಪ್ರೇರಕವಾಗಿ ಅವರಲ್ಲಿರುವ ವಿದ್ವತನ್ನ ನಾವು ಕಾಣಬಹುದು. ಚಿತ್ರ ೧೧, ೨೧, ೨೨, ೨೬, ೨೮, ಚಿತ್ರಗಳು ಭಾರತೀಯ ಪೌರಾಣಿಕ ಮತ್ತು ಪ್ರೇಮಕಾವ್ಯಗಳ ಆಧಾರದಡಿಯಲ್ಲಿ ರಚಿತವಾಗಿದ್ದು ರಾಗಮಾಲಾ ಚಿತ್ರಗಳಂತೆಯೇ ಪ್ರೀತಿ, ಪ್ರೇಮ ಪ್ರಣಯ,

ರಸಿಕತೆಯನ್ನು ಸೂಚಿಸುವ ಮತ್ತು ಕಾಮಸೂಚಕಗಳ ಪ್ರಸಂಗಗಳನ್ನು ತಮ್ಮ ರೇಖಾ ಕಲಾಕೃತಿಗಳಲ್ಲಿ ವಸ್ತು ವಿಷಯವನ್ನಾಗಿ ಬಳಸಿಕೊಂಡು ಚಿತ್ರ ರಚಿಸಿರುವುದನ್ನು ನಾವು ಗುರುತಿಸಬಹುದು. ವಸ್ತು ವಿಷಯವು ಭಾರತೀಯ ನೆಲೆಗಟ್ಟಿನವುಗಳಾದರೆ ಶೈಲಿಯಲ್ಲಿ ತಮ್ಮತನವನ್ನು ಗುರುತಿಸಿಕೊಂಡು ರೇಖೆಗಳು ನೇರ ಸಮಾನ, ವಕ್ರ ರೇಖೆಗಳ ಮೂಲಕ ಚಿತ್ರದ ಕೆಳಗಿನ ಹಸ್ತಕ್ಷರವನ್ನು ಯನ್ನು ನೋಡದೆ ಈ ಚಿತ್ರಗಳು ಪಾಟೀಲರದ್ದೆ ಚಿತ್ರಗಳೆಂದು ಗುರುತಿಸವಲ್ಲಿ ಪಾಟೀಲರ ರೇಖಾ ಶೈಲಿಯನ್ನು ಗುರತಿಸಬಹುದು. ಹೀಗೆ ರೇಖೆಗಳ ಪ್ರಾಬಲ್ಯದಿಂದ ತನ್ಮೂಲಕ ಚಿತ್ರಕ್ಕೊಂದು ರೂಪವನ್ನು ಕೊಟ್ಟು ಜನ ಸಾಮಾನ್ಯರೂ ಅರ್ಥೈಸುವ ಹಾಗೆ ವಸ್ತು ವಿಷಯವನ್ನು ಅಭಿವ್ಯಕ್ತಿಗೊಳಿಸುವಲ್ಲಿ ಪಾಟೀಲರ ರೇಖಾಚಿತ್ರಗಳು ಗಮನಾರ್ಹವಾಗಿವೆ.

ಇವರ ರೇಖಾ ಸಂಯೋಜನಾ ಚಿತ್ರಗಳಾದ ಸರಸ, ಮಧುಚಂದ್ರಮ ಮತ್ತು ವಿರಹ ವೇದನ, ಪ್ರಣಯಗಳಂತಹ ಸರಣಿ ಚಿತ್ರಗಳಲ್ಲಿ ಏಕರೂಪತೆಯಿಂದ ಕೂಡಿದ್ದು, ಘನಾಕೃತಿ ಮಾದರಿಯ ಕ್ಯೂಬಿಸಂ ಶೈಲಿಯಲ್ಲಿ ರಚಿತವಾಗಿದೆ. ಹೀಗೆ ಪಾಟೀಲರು ತಮ್ಮ ಕಲಾಕೃತಿಗಳಲ್ಲಿ ರೇಖೆಗಳ ಚಲನೆ, ಮತ್ತು ಸಂಯೋಜನೆಯಲ್ಲಿ ಸಾಂಕೇತಿಕ ರೂಪಗಳು ವಿಭಿನ್ನವಾಗಿ ಹೊಸ ಹೊಸ ಆಶಯಗಳನ್ನು ಪ್ರಯೋಗಾತ್ಮಕವಾಗಿ, ಸೃಜನಶೀಲ ಸಂಯೋಜನೆಯ ಕ್ರಮವನ್ನು ತಮ್ಮದೆ ಆದ ವಿಶಿಷ್ಯ ಶೈಲಿಯಲ್ಲಿ ಬಳಸಿಕೊಂಡಿರುವುದನ್ನು ಅವರ ಇಂಕ ಮಾಧ್ಯಮದ ರೇಖಾ ಚಿತ್ರಗಳ ಅಧ್ಯಯನದಿಂದ ಕಾಣಬಹುದು.

ಶಾಹಿಮಾದ್ಯಮದ ನಿಸರ್ಗ ಚಿತ್ರಗಳು, ಪೆನ್ಸಿಲ್ ಮಾಧ್ಯಮದ ರೇಖಾಚಿತ್ರ ಮತ್ತು ಶಾಹಿ ಮಾಧ್ಯಮದ ರೇಖಾಚಿತ್ರಗಳಲ್ಲಿ, ವಿಭಿನ್ನತೆ, ಮತ್ತು ತಾಂತ್ರಿಕತೆಯನ್ನು ಈ ಹಿಂದೆ ಅಧ್ಯಾಯನ ಮಾಡಲಾಗಿದೆ.

ನಿಸರ್ಗ ಚಿತ್ರಗಳು :

ಪಾಟೀಲರು ತಮ್ಮ ವಿದ್ಯಾರ್ಥಿ ಜೀವನ ಮತ್ತು ವೃತ್ತಿಜೀವನದ ಪ್ರವಾಸದಲ್ಲಿ ಬಸ್ಸು, ಟ್ರೇನ್‌ನಲ್ಲಿ ಪ್ರಯಾಣಿಸುವಾಗ ಕೀಟಕಿಯಲ್ಲಿ ಕಂಡ ಅಲ್ಲಿನ ನಿಸರ್ಗ ಸೌಂದರ್ಯವನ್ನು ಸವಿದು ಬಿಡುವಿನ ಸಮಯದಲ್ಲಿ ನೋಡಿದ ಪ್ರಕೃತಿಯನ್ನು ರೇಖೆಗಳ ಮೂಲಕ ಚಿತ್ರಗಳನ್ನು ರಚಿಸಿದ್ದಾರೆ ಅಂತಹ ಕೆಲವು ಪ್ರಕೃತಿ ಚಿತ್ರಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಿ ವಿವರಿಸಲಾಗಿದೆ.


ಚಿತ್ರ ೧. ಸಮುದ್ರದ ತೀರ : ಈ ಚಿತ್ರದಲ್ಲಿ ವಕ್ರರೇಖೆಗಳಲ್ಲಿ ವಿಶಾಲವಾದ ಸಮುದ್ರ ದಂಡೆಯ ಬೃಹತ್ ತೆಂಗಿನ ಮರವನ್ನು ಚಿತ್ರಿಸಲಾಗಿದೆ ಪೂರ್ಣ ಚಿತ್ರ ಬಿಂದುವಿನಿಂದ ಹುಟ್ಟಿ, ಒಂದೆ



ಚಿತ್ರ – ೧ ಸಮುದ್ರತೀರ



ಚಿತ್ರ – ೨ ನಿಸರ್ಗ ಚಿತ್ರಣ



ಚಿತ್ರ – ೩ ನಿಸರ್ಗ ಚಿತ್ರಣ

ರೇಖೆಯ ಚಲನೆಯಲ್ಲಿ ಅಂತ್ಯಗೊಂಡಂತೆ ಕಾಣುತ್ತದೆ. ಈ ನಿಸರ್ಗ ಚಿತ್ರದಲ್ಲಿ ಪಾಟೀಲರು ಛಾಯಾಂಕಣಕ್ಕಿಂತ ರೇಖೆಗೆ ಪ್ರಾಮುಖ್ಯತೆ ನೀಡಿದ್ದಾರೆ. ಸಮುದ್ರದ ವಿಶಾಲತೆ, ಆಕಾರಗಳ ರೇಖಾತ್ಮಕತೆ ಒಂದಕ್ಕೊಂದು ಒತ್ತಿ ನಿಲ್ಲುವ ಬಗೆಗಳು, ಮತ್ತು ದೃಶ್ಯವನ್ನು ಬಿಡಿ-ಬಿಡಿಯಾಗಿ ಚಿತ್ರಿಸದೆ ರೇಖೆಗಳ ಒಟ್ಟು ಪರಿಣಾಮವನ್ನು ಪ್ರಯೋಗಾತ್ಮಕವಾಗಿ ಚಿತ್ರಿಸಿದ್ದಾರೆ. ಒಟ್ಟು ದೃಶ್ಯವು ಸಮುದ್ರ ತೀರದ ಚಿತ್ರವಾಗಿದ್ದು, ಸಮುದ್ರದಲ್ಲಿ ದೋಣಿಯೊಂದನ್ನು ಮತ್ತು ದೋಣಿಯೊಳಗೆ ಮಹಿಳೆಯೊಬ್ಬಳು ಸೂಚಿಸಲಾಗಿದೆ. ಹೀಗೆ ಪಾಟೀಲರು ರಚಿಸಿದ ಈ ಚಿತ್ರದಲ್ಲಿ ರೇಖೆಗಳ ಪ್ರಾಬಲ್ಯ ಎದ್ದು ಕಾಣುತ್ತದೆ.

ಚಿತ್ರ ೨. ನಿಸರ್ಗ ಚಿತ್ರ: ಈ ನಿಸರ್ಗ ಚಿತ್ರದಲ್ಲಿ ಗುಡ್ಡ ಬೆಟ್ಟಗಳ ಸಾಲು ಎರಡು ತೆಂಗಿನ ಮರಗಳನ್ನು ಮತ್ತು ಅದರ ಮಧ್ಯದಲ್ಲಿ ಸೂರ್ಯನ ಚಿತ್ರವು ಇದ್ದು ಈ ಚಿತ್ರದಲ್ಲಿ ವಿಸ್ತಾರವಾದ ಪ್ರಕೃತಿಯನ್ನು ಒಂದೆ ನೋಟದಲ್ಲಿ ಯಥಾದರ್ಶನದ ಪ್ರಭುದ್ಧ ಕೋನದಿಂದ ರಚಿಸಲಾಗಿದೆ. ಇಲ್ಲಿ ಕೇವಲ ರೇಖೆಗಳ ಮುಖಾಂತರ ಛಾಯೆಗಳನ್ನು ಬಳಸದೆ ಹೊರರೇಖೆಗಳಿಂದ ಈ ನಿಸರ್ಗ ಚಿತ್ರಕ್ಕೆ ಸ್ಪಷ್ಟರೂಪವನ್ನು ನೀಡಿದ್ದಾರೆ.

ಪಾಟೀಲರ ಈ ಕಲಾಕೃತಿ ಸೂಚ್ಯವಾಗಿರುವ ತೆಂಗಿನಮರ ಬೆಟ್ಟ, ರಸ್ತೆಯ ಅನುಭವ ನೀಡುವಲ್ಲಿ ವಕ್ರರೇಖೆಗಳ ತುಣುಕುಗಳಿಂದ ಮತ್ತು ಲಂಬರೇಖೆಗಳಿಂದ ಲೆಕ್ಕನಿಯಿಂದ ಇಂಕ ಮಾಧ್ಯಮದಲ್ಲಿ ಕೆಲವು ರಚನಾತಂತ್ರಗಳನ್ನು ಸೆರಿಸಿ ಸೂರ್ಯಾಸ್ತದ ಸಂದರ್ಭವನ್ನು ರಚಿಸಿದ್ದಾರೆ. ಅವುಗಳ ಗಾತ್ರದ ಘನತೆಯನ್ನು ನೆರಳು-ಬೆಳಕಿನ ಛಾಯೆಗಳನ್ನು ಬಳಸದೆ ಸಮೀಪ-ದೂರದ ಕಲ್ಪನೆ ನೀಡುವಲ್ಲಿ ಒಟ್ಟು ಪರಿಸರದ ಯಥಾದರ್ಶನ ಮುಖಾಂತರ ವಾತಾವರಣಕ್ಕೆ ಪೂರಕ ಭಾವಸ್ಪರ್ಷ ನೀಡಿ ಚಿತ್ರಿಸಿರುವುದನ್ನು ಈ ಕಲಾಕೃತಿಯಿಂದ ಸ್ಪಷ್ಟ ನಿಲುವನ್ನು ಕಾಣಬಹುದು. ಹೀಗೆ ದೃಶ್ಯವು ನೋಡುರಿಗೆ ಥಟಕ್ಕನೆ ಸಂಜೆಯ ಸೂರ್ಯಸ್ತದ ರಮಣಿಯತೆಯ ಭಾವನೆ ಕಲ್ಪಿಸಿ ಕೊಡುವಲ್ಲಿ ಅತ್ಯಲ್ಪ ರೇಖೆಗಳನ್ನು ಬಳಸಿ ಚಿತ್ರಬರೆದಿರುವುದನ್ನು ನಾವು ಕಾಣಬಹುದು.

ಚಿತ್ರ ೩. ನಿಸರ್ಗ ಚಿತ್ರಣ: ಪಾಟೀಲರು ಈ ಚಿತ್ರದಲ್ಲಿ ಪ್ರಕೃತಿಯಲ್ಲಿನ ಗಿಡ, ಮರ, ಬೆಟ್ಟ ಹಳ್ಳಕೊಳ್ಳಗಳನ್ನು ಒಟ್ಟು ಗೂಡಿಸಿ ನೇರ, ವಕ್ರ, ಸಮಾಂತರ ರೇಖೆಗಳನ್ನು ಬಳಸಿ ಚಿತ್ರಿಸಿದ್ದಾರೆ. ಚಿತ್ರದಲ್ಲಿ ತಮ್ಮದೆ ಆದ ಶೈಲಿಯಲ್ಲಿ ಪ್ರಯೋಗಾತ್ಮಕತೆಯಿಂದ ಮಾನವಾಕೃತಿಗಳನ್ನು ಚಿಕ್ಕಗಾತ್ರದಲ್ಲಿ ಚಿತ್ರಿಸಿದ್ದಾರೆ. ಈ ಮಾನಾವಾಕೃತಿಗಳು ಘನಾಕೃತಿಯಿಂದ ಕೂಡಿದ್ದು ಕ್ಯೂಬಿಸಂ ಶೈಲಿಯಲ್ಲಿ ರಚನೆಯಾದರೆ, ಹಿನ್ನಲೆಯಲ್ಲಿ ದೂರದ ಬೆಟ್ಟವನ್ನು ಸಮಾಂತರ ಏರಿಳಿತ ರೇಖೆಗಳನ್ನು ಬಳಸಿ

ಚಿತ್ರಿಸಿದ್ದಾರೆ. ಮತ್ತು ದೃಶ್ಯದಲ್ಲಿ ನೀರಿನಕೊಳ್ಳದ ಭಾವನೆ ಮೂಡಿಸುವಲ್ಲಿ ವಕ್ರರೇಖೆಗಳಿಂದ ಸಾಂಕೇತಿಕವಾಗಿ ಚಿತ್ರಿಸಿದ್ದಾರೆ. ಚಿತ್ರವನ್ನು ಬಹು ವಿಸ್ತಾರವಾದ ಪ್ರದೇಶವನ್ನು ಆಯ್ದುಕೊಂಡು ರಚಿಸಲಾಗಿದೆ. ಹಾಗೂ ಪ್ರತಿಯೊಂದು ವಸ್ತುವಿಗೂ ದೂರ-ಸಮೀಪದ ಹಿನ್ನಲೆ, ಕೋನದಲ್ಲಿ, ತಾಂತ್ರಿಕ ವಿನ್ಯಾಸದಲ್ಲಿ ಘನಾಕೃತಿ ರೇಖೆಗಳನ್ನು ಬಳಸಿ ಆಧುನಿಕ ನೆಲೆಯ ಹಿನ್ನಲೆಯಲ್ಲಿ ಈ ಒಂದು ನಿಸರ್ಗ ಚಿತ್ರಣದ ದೃಶ್ಯವೊಂದನ್ನು ಯಾವುದೇ ಛಾಯೆಗಳನ್ನು ಬಳಸದೆ ಪಾಟೀಲರು ಚಿತ್ರವನ್ನು ವಿಭಿನ್ನವಾಗಿ ಚಿತ್ರಿಸಿದ್ದಾರೆ.

ಒಟ್ಟಾರೆ ಪಾಟೀಲರು ಶಾಹಿ ಮಾಧ್ಯಮದಿಂದ ನಿಸರ್ಗ ದೃಶ್ಯಗಳ ರೇಖಾ ಚಿತ್ರಗಳನ್ನು ರಚಿಸಿದ್ದು, ಅವುಗಳಲ್ಲಿ ಕೆಲವು ರೇಖಾಚಿತ್ರಗಳನ್ನು ಅಧ್ಯಯನಕ್ಕೊಳಪಡಿಸಿ ಅಧ್ಯಯನ ಮಾಡಲಾಗಿದೆ. ಇವರು ಚಿತ್ರಿಸಿದ ಬೂದೃಶ್ಯದ ರೇಖಾಚಿತ್ರಗಳು ಏಕರೂಪಿಯಾಗಿ ಕಂಡರೂ ವಿಭಿನ್ನ ನೆಲೆಯಲ್ಲಿ ಸಂಯೋಜನೆಗೊಂಡಿವೆ.

ಪ್ರತಿಯೊಂದು ಕಲಾಕೃತಿಯಲ್ಲಿಯೂ ಪ್ರಕೃತಿ ಸೌಂದರ್ಯ ಭಾವನೆಯನ್ನು ವ್ಯಕ್ತಪಡಿಸುವಲ್ಲಿ ಇವರ ಚಲನಾತೀತ ರೇಖೆಗಳು ಪ್ರಮುಖ ಪಾತ್ರವಹಿಸಿವೆ.

ನಿಸರ್ಗ ಚಿತ್ರಣ ರಚನೆಗೆ ವಿಶಾಲವಾದ ಭೂಪ್ರದೇಶವನ್ನು ಅದರಲ್ಲಿ ಪ್ರಕೃತಿ ನಿರ್ಮಿತ ವಸ್ತುಗಳಾದ ಗಿಡ, ಮರ, ಬೆಟ್ಟ ಗುಡ್ಡಗಳ ಸಾಲು, ಹಳ್ಳ-ಕೊಳ್ಳಗಳ ನೈಜ ದೃಶ್ಯಗಳನ್ನು ಪ್ರಯೋಗಾತ್ಮಕವಾಗಿ ವಿಭಿನ್ನವಾದ ರಚನಾ ತಂತ್ರಗಳನ್ನು ಬಳಸಿ ಚಿತ್ರಿಸಿಸುವುದು.

ಕೇವಲ ರೇಖೆಗಳನ್ನು ಬಳಸಿ ಚಿತ್ರಿಸಿರುವುದು ಮತ್ತು ಬೆಟ್ಟಗಳ ಸಾಲು ಇವುಗಳೆಲ್ಲವನ್ನು ವಾತಾವರಣದ ಕ್ರಮಬದ್ಧತೆಯಲ್ಲಿ ಯಥಾದರ್ಶನದ ಕೋನದಲ್ಲಿ ದೃಷ್ಟಿ ಹರಿಸಿ ಚಿತ್ರಿಸಿರುವುದು ಕಂಡು ಬರುತ್ತದೆ.

ಪಾಟೀಲರ ನಿಸರ್ಗ ದೃಶ್ಯದ ರೇಖಾಚಿತ್ರಗಳಲ್ಲಿ ನೆರಳು ಬೆಳಕಿನ ವ್ಯತ್ಯಾಸಗಳನ್ನು ತೋರ್ಪಡಿಸದೆ ಅವುಗಳ ಛಾಯೆಗಳನ್ನು ಚಿತ್ರಿಸಿದೆ ಬಿಡಿರೇಖೆಗಳ ಮುಖಾಂತರ ಲಘು ಹಸ್ತರೇಖೆಗಳ ಮೂಲಕ ದೃಶ್ಯದ ನೈಜ ಶೈಲಿಯನ್ನು ವಿಭಿನ್ನ ತಂತ್ರಗಳನ್ನು ಅನುಸರಿಸಿ ಆಧುನಿಕ ನೆಲೆಯಲ್ಲಿ ಕ್ರಿಯಾತ್ಮಕವಾಗಿವೆ.

ಪ್ರಕೃತಿ ನಿರ್ಮಿತ ವಸ್ತುಗಳಿಗೆ ತಕ್ಕಂತೆ ವಿಭಿನ್ನವಾದ ರೇಖೆಗಳನ್ನು ಬಳಸಿರುವುದನ್ನು ಕಾಣಬಹುದು. ಚಿತ್ರಗಳು ಏಕರೂಪಿಯವಾಗಿದ್ದರೂ ರಚನೆಯ ಶೈಲಿ, ತಂತ್ರಗಾರಿಕೆ ಮತ್ತು ಪ್ರಾಯೋಗಿಕ ತಂತ್ರಗಳನ್ನು ಬಳಸಿ ಚಿತ್ರಿಸಿರುವ ರೇಖಾಚಿತ್ರಗಳಲ್ಲಿ ವೈವಿಧ್ಯತೆಯನ್ನು ಕಾಣಬಹುದು.

ಶಿಲ್ಪ ಮಾದರಿಯ ರೇಖಾಚಿತ್ರಗಳು :

ಭಾರತೀಯ ಕಲೆಯಲ್ಲಿ ಕರ್ನಾಟಕದ ವಾಸ್ತುಶಿಲ್ಪ-ಶಿಲ್ಪಕಲೆ ಪರಂಪರಾಗತವಾಗಿ ಬಂದ ಕಲಾ ವೈಭವ ಒಂದು ಪ್ರಧಾನ ಭಾಗವಾಗಿದೆ ಆರನೆಯ ಶತಮಾನದಲ್ಲಿ ಚಾಲುಕ್ಯರ ಆಡಳಿತದಲ್ಲಿ ಕಲೆಗೆ ವಿಶೇಷ ಪ್ರೋತ್ಸಾಹ ದೊರಕಿತು ಅಂದಿನ ಕಲಾವಿದರು ವಾಸ್ತು ಶಿಲ್ಪ, ಶಿಲ್ಪ ಕಲೆ ಕೃತಿಗಳನ್ನು ಸ್ವತಂತ್ರ ಶೈಲಿಯಿಂದ ನಿರ್ಮಿಸಿದ್ದಾರೆ. ಅಂದಿನ ಅವರ ಸೃಜನಾತ್ಮಕ ಶಿಲ್ಪ ಕಲಾಕೃತಿಗಳನ್ನು ನಾವು ಇಂದಿಗೂ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಕರ್ನಾಟಕದ ಮುಂತಾದ ಸ್ಥಳಗಳಲ್ಲಿ ಕಾಣಬಹುದು. ಪಾಟೀಲರು ಕಲಾಶಾಲೆಯಲ್ಲಿ ಉಪನ್ಯಾಸಕ ವೃತ್ತಿಯಲ್ಲಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸದ ಪರಿವೀಕ್ಷಣೆಯ ಸಂದರ್ಭದಲ್ಲಿ ತಮಗೆ ಮೆಚ್ಚುಗೆಯಾದ ಶಿಲ್ಪ ಸೌಂದರ್ಯವನ್ನು ನೋಡಿ ಇಂಕ ಮಾಧ್ಯಮದಿಂದ ರಚಿಸಿದ ಶಿಲ್ಪ ರೇಖಾ ಚಿತ್ರಗಳನ್ನು, ರೇಖೆಗಳಲ್ಲಿ ಕಾಣುವ ರೇಖಾ ವಿನ್ಯಾಸದ ಪ್ರೌಢಿಮೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.


ಚಿತ್ರ ೧. ಗಣೇಶ : ಈ ಚಿತ್ರವು ಹೊಯ್ಸಳ ಶೈಲಿಯ ಶಿಲ್ಪವನ್ನು ಅನುಸರಿಸಿದಂತೆ ಅಲಂಕಾರಿಕ ಪ್ರಮಾಣಬದ್ಧವಾದ, ಶಿಲ್ಪದ ವೈವಿಧ್ಯತೆಯಂತೆ ಚಿತ್ರಿಸುವದರ ಮೂಲಕ ರೇಖಾ ಈ ಚಿತ್ರದಲ್ಲಿ ವೇಷ ಭೂಷಣ, ಆಭರಣ, ನಾಲ್ಕು ಕೈಗಳನ್ನು ಚಿತ್ರತಿಸಿದ್ದು, ಕೈಯಲ್ಲಿ ಆಯುಧಧಾರಿ ಇಲಿಯ (ಮೂಷಿಕ) ಮೇಲೆ ಕುಳಿತುಕೊಂಡು ಸಂಚರಿಸುತ್ತಿರುವ ದೃಶ್ಯ ಕಂಡು ಬರುತ್ತದೆ. ಪಾಟೀಲರು ಈ ಶಿಲ್ಪ ರೇಖಾ ಚಿತ್ರವನ್ನು ಇಂಕ ಮಾಧ್ಯಮದಲ್ಲಿ ಕುಂಚದ ಮೂಲಕ ಸೂಕ್ಷ್ಮ ಮತ್ತು ಗಾಢವಾದ ರೇಖೆಗಳನ್ನು ಬಳಸಿದ್ದು ಅವಶ್ಯಕವೆನಿಸಿದೆ ದೇಹದ ಭಾಗಕ್ಕೆ ಸ್ವಲ್ಪ ಪ್ರಮಾಣದಲ್ಲೊ ಉಬ್ಬುಭಾಗಗಳಲ್ಲಿ ಛಾಯಾಲೇಪನ ಕಂಡು ಬರುತ್ತವೆ. ಈ ಚಿತ್ರದಲ್ಲಿ ವೇಷಭೂಷಣ, ಅಲಂಕಾರಿಕ ಆಭರಣಗಳು, ಹಿನ್ನಲೆಯಲ್ಲಿ ಅಲಂಕಾರಿಕ ಸುರಳಿ ಚಿತ್ರಗಳು ಸ್ಪಷ್ಟವಾಗಿ ಮೂಡದೆ ಗೌಣವಾಗಿದ್ದರೂ ಅವುಗಳ ಹೊರ ವಿನ್ಯಾಸಕ್ಕೆ ರೇಖೆಗಳ ಮೂಲಕ ಅಲಂಕಾರಿಕತೆ ವಿನ್ಯಾಸ, ಆಭರಣಗಳ ಭಾವನೆ ಮೂಡುವಂತೆ ಚಿತ್ರಿಸಿದ್ದಾರೆ.

ಹೀಗೆ ಪಾಟೀಲರು ದಪ್ಪ ಮತ್ತು ತೆಳುರೇಖೆಗಳಿಂದ, ಅಲ್ಲಲ್ಲಿ ದಟ್ಟವಾದ ರೇಖೆಗಳನ್ನು ನೆರಳಿನ ಭಾಗವಾಗಿ ಛಾಯೆಯ ರೂಪದಲ್ಲಿ ಗಣೇಶನ ಶಿಲ್ಪ ಅಸ್ಪಷ್ಟ ಗೀಚುರೇಖೆಗಳಿಂದ ಸುಚ್ಯವಾಗಿ ರಚಿಸಿದ್ದು ಪ್ರಮಾಣ ಬದ್ದತೆಯನ್ನು ಕಾಯ್ದುಕೊಂಡಿದೆ.



ಚಿತ್ರ – ೧ ಗಣೇಶ





ಚಿತ್ರ – ೨ ತ್ರಿಮೂರ್ತಿ

ಚಿತ್ರ ೨. ತ್ರಿಮೂರ್ತಿ: ಈ ಚಿತ್ರವು ತ್ರೀಮೂರ್ತಿಯ ಮೂರುಮುಖಗಳ ಕತ್ತಿನವರೆಗೆ ಮಾತ್ರ ಚಿತ್ರಿಸಲಾಗಿದೆ. ಈ ಶಿಲ್ಪಕ್ಕೆ ಯಾವುದೇ ವಸ್ತ್ರವಿನ್ಯಾಸ, ಆಭರಣ ವಿನ್ಯಾಸ, ಚಿತ್ರಿಸದೆ ಕೇವಲ ರೇಖೆಗಳನ್ನು ಬಳಸಿ ಯಾವುದೆ ಛಾಯೆಯನ್ನು ನೀಡದೆ, ಲೆಕ್ಕನಿಕೆಯ ಮೂಲಕ ಸ್ಪಷ್ಟವಾಗಿ ದೇಹದ ಭಾಗವನ್ನು ಚಿತ್ರಿಸಿದೆ, ಅಸ್ಪಷ್ಟವಾಗಿ ಮೂಡಿವೆ. ಆದರೂ ಚಿತ್ರದಲ್ಲಿ ಶೈವಧರ್ಮದ ಶಿವನ ಶಿಲ್ಪ ಕಾಣುವಂತೆ ಗೋಚರಿಸುತ್ತದೆ.

ಚಿತ್ರವು ರೇಖಾ ಪ್ರಾಧಾನವಾಗಿದ್ದು ಆ ಜ್ಯಾಮಿತಿಕ ವಿನ್ಯಾಸದಲ್ಲಿ ಶಿಲ್ಪದ ಅಭಿವ್ಯಕ್ತಿ ಮೂಡಿಸಲು ಆಧುನಿಕ ಶೈಲಿಯಲ್ಲಿ ಸರಳ ರೇಖೆಗಳ ಮೂಲಕ ಚಿತ್ರಿಸಿರುವ ಶಿಲ್ಪ ರೇಖಾ ಚಿತ್ರಣ ಯೋಜನಾತ್ಮಕವಾಗಿ ರೂಪಗೊಂಡಿದೆ. ಶಿಲ್ಪ ಚಿತ್ರಗಳನ್ನು ತಮ್ಮ ಕಲ್ಪನೆಯಲ್ಲಿ ಸೂಚ್ಯ ಮತ್ತು ಸೂಕ್ಷ್ಮರೇಖೆಗಳ ಬಳಕೆ ಕಾಣಬಹುದು. ತಂತ್ರಗಳ ಪ್ರಯೋಗಗಳಿಂದ ಇಂಕ್ ಮಾಧ್ಯಮದಲ್ಲಿ ಚಿತ್ರಿಸಿದ ಪಾಟೀಲರ ಕಲಾಕೃತಿಗಳ ವಿಷಯವು ಭಾರತೀಯ ನೆಲೆಯಲ್ಲಿ ಸೃಜನಾತ್ಮಕವಾಗಿ ಚಿತ್ರಿಸಿ ನೋಡುಗರಿಗೆ ವಿಶೇಷವಾದ ವಿವಿಧ ಬಗೆಯ ಭಾವನೆಯನ್ನು ಉಂಟು ಮಾಡುವ ಚಿತ್ರ ೨ರಲ್ಲಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ.

ಶಂಕರ ಪಾಟೀಲರು ತಮ್ಮ ವೃತ್ತಿ ಬದುಕಿನಲ್ಲಿ ಸಾವಿರಾರು ರೇಖಾಚಿತ್ರಗಳನ್ನು ರಚಿಸಿದ್ದಾರೆ. ಇಲ್ಲಿನ ಪ್ರತಿರೇಖಾ ಚಿತ್ರಗಳು ವಸ್ತುವಿಷಯ, ಸಂಯೋಜನೆ, ತಂತ್ರ–ಶೈಲಿ, ಕಾಲಮಾನಕ್ಕೆ ತಕ್ಕಂತೆ ಭಿನ್ನ ಭಿನ್ನವಾಗಿ ಮೂಡಿಬಂದಿವೆ. ಪಾಟೀಲರು ತಮ್ಮ ರೇಖಾಚಿತ್ರಣಗಳಲ್ಲಿ ಭಾರತೀಯ ಸಂಸ್ಕೃತಿ ಪ್ರಕೃತಿಯ ನೆಲೆಗಳನ್ನು ಗ್ರಾಮೀಣ ನೆಲೆಗಳನ್ನು, ಭಾರತೀಯ ಧಾರ್ಮಿಕ ಮತ್ತು ಕಾವ್ಯಮಯ ವಿಷಯಗಳನ್ನೊಳಗೊಂಡ ವಿಷಯಗಳನ್ನು ಬಳಸಿ ದುಡಿಸಿಕೊಂಡಿರುವುದು ಕಂಡುಬರುತ್ತದೆ. ಪಾಟೀಲರು ಬಾಹ್ಯ ಪರಿಸರಕ್ಕೆ ಸ್ಪಂದಿಸುವ ಕಲಾವಿದರು ಎಂಬುದಕ್ಕೆ ಅವರು ರಚಿಸಿರುವ ಕಲಾಕೃತಿಗಳಲ್ಲಿ ಅವರು ಸುತ್ತಲಿನ ಪರಿಸರ ಪ್ರೇರಕವಾಗಿತ್ತು ಎಂಬುದನ್ನು ಈ ಅಧ್ಯಾಯದ ಅಧ್ಯಯನದಲ್ಲಿ ತಿಳಿದುಬರುತ್ತದೆ.

ಅಧ್ಯಯನದ ಫಲಿತಗಳು :

ಭಾವಚಿತ್ರಗಳು :

ಪಾಟೀಲರು ಹೆಚ್ಚಿನ ಸಂಖ್ಯೆಯಲ್ಲಿ ಭಾವಚಿತ್ರಗಳನ್ನು ರಚಿಸಿಲ್ಲವಾದರೂ ಕೆಲವು ರೇಖಾಚಿತ್ರಗಳನ್ನು ಆಯ್ದು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪೆನ್ಸಿಲ್, ಪೆನ್ ಮಾಧ್ಯಮದ ಮತ್ತು ಇಂಕ್ ಮಾಧ್ಯಮಗಳನ್ನು ಅವುಗಳ ಸಾಧ್ಯತೆಗಳಿಗನುಸಾರವಾಗಿ ಭಾವಚಿತ್ರಗಳನ್ನು ರಚಿಸಿರುವುದು ಕಂಡುಬರುತ್ತದೆ.

- ಚಿತ್ರದಲ್ಲಿ ರೇಖೆಗಳ ಚಲನೆ, ನೆರಳು ಬೆಳಕಿನ ಕಲ್ಪನೆ, ಅಕಾಡೆಮಿಕ್ ಶೈಲಿಯದ್ದಾಗಿದೆ.
- ಚಿತ್ರ ೧ ರಲ್ಲಿ ಅಕಾಡೆಮಿಕ್ ಶೈಲಿಯ ಭಾವಚಿತ್ರವು ತ್ರಿಮಾನ ಪದ್ಧತಿಯಲ್ಲಿದೆ.
- ಚಿತ್ರ ೧ ರೇಖೆಗಳಲ್ಲಿ ವೇಗೋತ್ಕರ್ಷ (ಫೋರ್ಸ್) ಕಂಡುಬರುತ್ತದೆ.
- ಬೈರಾಗಿಯ ಭಾವಚಿತ್ರದಲ್ಲಿ ಜನಪದೀಯ ಗುಣಗಳನ್ನು ಮತ್ತು ರೇಖೆಗಳಲ್ಲಿ ತುಂಡು ಗೀಚುಗಳು (ಕಟ್‌ಲೈನ್) ಕಂಡುಬರುತ್ತವೆ.
- ಇಂಕ್ ಮಾಧ್ಯಮದಲ್ಲಿ ರಚಿಸಿದ ಸ್ವಭಾವ ಚಿತ್ರ ಮತ್ತು ವೃದ್ಧನ ರೇಖಾ ಚಿತ್ರಗಳಲ್ಲಿ ಏಕಮಾನ ರೇಖೆಗಳನ್ನು ಬಳಸಿದ ಶೈಲಿ ಸರಳೀಕೃತವಾಗಿ ಮೂಡಿಬಂದಿದೆ.

ನಿಸರ್ಗ ಚಿತ್ರಗಳು :

- ಚಿತ್ರ ಸಂ. ೧, ೨ ಚಿತ್ರವು ಸರಳ, ಲಯಬದ್ಧವಾಗಿ ರೇಖಾಲಾವಣ್ಯದಿಂದ ಕೂಡಿದೆ.
- ಪ್ರಕೃತಿಯ ದೃಶ್ಯವು ನೈಜದಿಂದ ದೂರವಾಗಿ ಪಾಟೀಲರ ಕಲ್ಪನೆಗಳು ಚಿತ್ರದಲ್ಲಿ ಮೈಗೂಡಿವೆ.
- ಗಿಡ–ಮರಗಳ ರಚನೆಯಲ್ಲಿ ಪಾಟೀಲರ ಸೃಜನಶೀಲ ಅಭಿವ್ಯಕ್ತಿ ಎದ್ದು ಕಾಣುತ್ತದೆ.
- ಚಿತ್ರದ ಸಂಯೋಜನೆಗೆ ಪೂರಕವಾಗಿ ದೀರ್ಘವಾದ ರೇಖೆಗಳಲ್ಲಿ ಪಾಟೀಲರ ಅಲಂಕರಣ ಪದ್ಧತಿ ಎದ್ದು ಕಾಣುತ್ತದೆ.
- ಚಿತ್ರಣದಲ್ಲಿ ನೆರಳು ಬೆಳಕಿನ ಛಾಯೆಗಳ ಬಳಕೆ ಕಂಡುಬರುವುದಿಲ್ಲ.
- ವಾಸ್ತವ ರೂಪವನ್ನು ಚಿತ್ರಣದಲ್ಲಿ ವಿರೂಪವಾಗಿ ಬಳಸಿಕೊಂಡು ಚಿತ್ರಣ ಮಾಡಲಾಗಿದೆ.
- ದೃಶ್ಯದ ಮುನ್ನಲೆ–ಹಿನ್ನಲೆಯ ಭಾವನೆಯನ್ನು ನೀಡಲು ದೂರ–ಸಾಮೀಪ್ಯದ ಅನುಭವವನ್ನು ಪಾಟೀಲರ ತುಂಡು ರೇಖೆಗಳು, ಗಾಢವಾದ ರೇಖೆಗಳು, ಸರಳೀಕೃತ ಶೈಲಿಯಲ್ಲಿ ಮೂಡಿಬಂದಿವೆ.
- ಪಾಟೀಲರ ಚಿತ್ರಗಳಲ್ಲಿ ರೇಖೆಗಳು ಲಯವಾಗಿ ಸಾಗುತ್ತಾ ಅಲ್ಲಲ್ಲಿ ನಿಂತು ಮತ್ತೆ ಮುಂದೆ ಸಾಗಿವೆ.
- ಚಿತ್ರಣದಲ್ಲಿ ಚಿತ್ರವಸ್ತುವಿಗೆ ಜ್ಯಾಮಿತಿಯ ರೂಪವನ್ನು ನೀಡಿ ರಚನೆಗೊಂಡಿರುವುದು.

- ಚಿತ್ರಣದಲ್ಲಿ ಕಡಲತೀರವನ್ನು ಚಿತ್ರ ವಿಷಯವನ್ನಾಗಿ ಬಳಸಿಕೊಂಡು, ಸಂಯೋಜನೆಯ ದೃಷ್ಟಿಯಿಂದ ಅಲ್ಲಲ್ಲಿ ಸಾಂಕೇತಿಕವಾಗಿ ಚಿಕ್ಕ ಗಾತ್ರಗಳಲ್ಲಿ ಮಾನವಾಕೃತಿಗಳನ್ನು ಬಳಸಿ ನೈಸರ್ಗಿಕ ಪರಿಸರವನ್ನು ಸಹಜವಾಗಿ ರೂಪಿಸಿದ್ದಾರೆ.

ಪ್ರಾಣಿ ಪಕ್ಷಿಗಳ ರೇಖಾಚಿತ್ರಣ :

- ಇಲ್ಲಿನ ಕೃತಿಗಳಲ್ಲಿ ವಿನ್ಯಾಸಕ್ಕೆ ತಕ್ಕ ಹಾಗೆ ರೇಖೆಗಳು ಚಲನಶೀಲವಾಗಿ ಮೂಡಿರುವುದರಿಂದ ಪ್ರಾಣಿ ಪಕ್ಷಿಗಳ ಚಿತ್ರಗಳು ಚಲನೆಯಿಂದ ಕೂಡಿವೆ.
- ಚಿತ್ರ ಸಂ. ೧ ಆಡುಗಳ ಗುಂಪಿನ ಚಿತ್ರಣದಲ್ಲಿ ರೇಖೆಗಳು ತಡೆತಡೆದು ಘನಾಕೃತಿಯಲ್ಲಿ ರೂಪಿತಗೊಂಡಿವೆ.
- ಪಕ್ಷಿಗಳ ರೇಖಾಚಿತ್ರಣಗಳು ಒಂದೇ ತೆರನಾಗಿ ಕಂಡರೂ ಭಾವ-ಭಂಗಿಗಳಲ್ಲಿ ಭಿನ್ನತೆಯನ್ನು ಕಾಣಬಹುದು.
- ಸರಳೀಕೃತ ರೇಖೆಗಳ ಮೂಲಕ ಅಲಂಕಾರಿಕವಾಗಿ ಮೂಡಿಬಂದಿವೆ.
- ಚಿತ್ರಗಳಲ್ಲಿ ಪಾಟೀಲರ ಅಕಾಡೆಮಿಕ್ ಶಿಕ್ಷಣದ ಗುಣಧರ್ಮಗಳ ದಟ್ಟ ಪ್ರಭಾವವಿದೆ.
- ರೇಖಾಕೃತಿಗಳಲ್ಲಿ ಹಿನ್ನೆಲೆಯಲ್ಲಿ ಏನನ್ನೂ ಚಿತ್ರಿಸದೇ ವಸ್ತು ವಿಷಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದಾರೆ.

ಶಿಲ್ಪ ಮಾದರಿಯ ರೇಖಾಚಿತ್ರಗಳು :

- ಶಿಲ್ಪ ಚಿತ್ರಗಳ ಚಿತ್ರಗಳು ಏಕಮಾದರಿಯ ಒಂಬತ್ತು ಗಣೇಶನ ಚಿತ್ರಗಳು ರಚನೆಯಾಗಿವೆ.
- ಚಿತ್ರ ಸಂ. ೩ ರ ರೇಖಾಚಿತ್ರವು ೯ನೇ ಶತಮಾನದ ಪಲ್ಲವ ಶೈಲಿಯ ಚಿತ್ರಣವಾಗಿದೆ.
- ಗಣೇಶನ ಶಿಲ್ಪಗಳನ್ನು ಯಥಾವತ್ತಾಗಿ ಚಿತ್ರಿಸುವತ್ತ ಆಸಕ್ತಿ ವಹಿಸಲಾಗಿದೆ.
- ಕೇವಲ ರೇಖೆಗಳ ಮೂಲಕ ಚಿತ್ರಣಗಳಿಗೆ ಶಿಲ್ಪದ ರೂಪವನ್ನು ನೀಡುವತ್ತ ನೆರಳು ಬೆಳಕಿನ ಛಾಯೆಯನ್ನು ಅಗತ್ಯಕ್ಕೆ ತಕ್ಕಂತೆ ಬಳಸಿಕೊಂಡಿದ್ದಾರೆ.
- 'ತ್ರಿಮೂರ್ತಿ' 'ಶಿವ' ರೇಖಾಚಿತ್ರಗಳಲ್ಲಿ ಬೌದ್ಧ ಶೈಲಿಯ ಅಜಂತೆಯ ಭಿತ್ತಿಚಿತ್ರಗಳ ಪ್ರಭಾವ ಕಂಡುಬರುತ್ತದೆ.

- ಛಾಯಾಂಕನಕ್ಕೆ ಆಸ್ಪದ ನೀಡದೇ ಕೇವಲ ರೇಖೆಗಳ ಮೂಲಕ ಚಿತ್ರಗಳ ತ್ರಿ ಆಯಾಮದ ಅನುಭವವನ್ನು ನೀಡುವ ಪಾಟೀಲರ ಪ್ರಯತ್ನವನ್ನು ಕಾಣಬಹುದು.
- 'ಕುಬ್ಜರು' ಮತ್ತು 'ಗಿರಿಜಾಕಲ್ಯಾಣ' ಸಂಯೋಜನಾ ಚಿತ್ರಗಳಲ್ಲಿ ಬಾದಾಮಿಯ ಚಾಲುಕ್ಯರ ಕಾಲದ ಶಿಲ್ಪಗಳ ಪ್ರಭಾವ ಕಾಣುತ್ತದೆ.

ಸಂಯೋಜನಾ ಚಿತ್ರಗಳು :

- ಪಾಟೀಲರು ಚಿತ್ರಿಸಿದ ಸಂಯೋಜನಾ ಚಿತ್ರಗಳು ಕಾಲಮಾನದ ಅಂತರದಲ್ಲಿ ಸಂಯೋಜನಾ ಕ್ರಮ ಮತ್ತು ತಂತ್ರಗಳು ವಸ್ತು ವಿಷಯದಲ್ಲಿ ಉಳಿದ ಚಿತ್ರಗಳಿಗಿಂತ ಭಿನ್ನವಾಗಿ ಮೂಡಿವೆ.
- ಪ್ರಕೃತಿಯಲ್ಲಿ ಘಟಿಸುವ ವಸ್ತುವಿಷಯವನ್ನಾಧರಿಸಿ ರೇಖಾಚಿತ್ರಗಳು ಸಂಯೋಜನೆಗೊಂಡಿರುವುದನ್ನು ಕಾಣಬಹುದು.
- ಚಿತ್ರ ೧, ೨, ೩, ೪ ದ ಸಂಯೋಜನಾ ಚಿತ್ರಗಳಲ್ಲಿ ಏಕರೇಖೆಯ ಲಾಲಿತ್ಯ ಕಂಡುಬರುತ್ತದೆ.
- ಸಂಯೋಜನಾ ಚಿತ್ರಗಳು ಅಲಂಕಾರಿಕ ನಕ್ಷೆಗಳಿಂದ ಮೂಡಿಬಂದಿವೆ.
- ಚಿತ್ರಣದಲ್ಲಿ ವಸ್ತುವಿನ ರೂಪವನ್ನು ಸ್ಪಷ್ಟವಾಗಿ ರೂಪಿಸದೆ ಅಸ್ಪಷ್ಟವಾಗಿ ಚಿತ್ರಿಸಿ ನೈಜತೆಯ ಭಾವನೆ ತರಲಾಗಿದೆ.
- ಭಾರತೀಯ ಪರಂಪರೆಯ ವಸ್ತು ವಿಷಯವನ್ನು ಆಧುನಿಕ ಕಲಾಶೈಲಿಯಲ್ಲಿ ಚಿತ್ರಿಸುವ ಪ್ರಯೋಗ ಕಂಡುಬರುತ್ತದೆ.
- ಚಿತ್ರ ೫, ೬, ೭, ೮, ೯ ಸಂಯೋಜನಾ ಚಿತ್ರಗಳು ಜ್ಯಾಮಿತಿಯ ರೇಖೆಗಳನ್ನು ಬಳಸಿ ಚಿತ್ರಿಸಿದವುಗಳಾಗಿವೆ.
- ಗ್ರಾಮೀಣ ಪ್ರದೇಶದ ಜನಪದ ಆಚರಣೆಗಳ ವಿಷಯವನ್ನೇ ಪ್ರಮುಖವಾಗಿ ಚಿತ್ರಣಕ್ಕೆ ಬಳಸಲಾಗಿದೆ.
- ಚಿತ್ರಕೃತಿಗಳಲ್ಲಿ ವಾರ್ಲಿ ಚಿತ್ರಕಲೆಯ ರೇಖಾವಿನ್ಯಾಸವನ್ನು ಕಲಾತ್ಮಕವಾಗಿ ಬಳಸಿಕೊಳ್ಳಲಾಗಿದೆ ಮತ್ತು ಆಧುನಿಕತೆಯ ಸ್ಪರ್ಶ ನೀಡಲಾಗಿದೆ.

❖ ❖ ❖

ಅಧ್ಯಾಯ : ನಾಲ್ಕು

ಶಂಕರ ಪಾಟೀಲರ ವರ್ಣಚಿತ್ರಗಳು

ಕಲಾವಿದರು ನಿರ್ಮಿಸಿದ ಕಲಾಕೃತಿಯ ಆಕಾರ, ವರ್ಣ, ಎತ್ತರ, ಅಗಲ, ಆಳ, ಬೇರೆ ಬೇರೆಯಾಗಿದ್ದರೂ ಎಲ್ಲದರಲ್ಲೂ ರೇಖೆಗಳು ಮತ್ತು ವರ್ಣಗಳು ಆಟವಾಡುತ್ತವೆ. "ಕಲಾಕೃತಿಯೊಂದು ತನ್ನ ಇನ್ನಿತರ ಅಂಶಗಳಿಗಿಂತಲು ವರ್ಣಸಂಯೋಜನೆಯ ತೀವ್ರತೆಯಿಂದ ನೋಡುಗನ ಪ್ರಜ್ಞೆಯನ್ನು ಕ್ಷಣಮಾತ್ರದಲ್ಲಿ ಪ್ರಭಾವಿಸಬಲ್ಲದು. ನಮ್ಮ ಪಂಚೇಂದ್ರಿಯಗಳಲ್ಲಿ ಕಣ್ಣು ಅತ್ಯಂತ ಸಂವೇಧನಾಶೀಲತೆಯನ್ನು ಹೊಂದಿದೆ. ಕಲಾವಿದಯೊಬ್ಬನು ತನ್ನ ಅಭಿವ್ಯಕ್ತಿಗೆ ಆರಿಸಿಕೊಳ್ಳುವ ಬಣ್ಣಗಳ ಛಾಯೆಗಳು, ಅವನು ನೋಡುವ, ಅನುಭವ, ಅಭ್ಯಾಸ, ಮನಸ್ಸಿನ ಪಕ್ವತೆ, ಭಾವನೆಗಳ ತೀವ್ರತೆಯನ್ನು ಅವಲಂಬಿಸಿರುತ್ತವೆ"[೧] ಎಂಬ ಮಾತು ಶಂಕರ ಪಾಟೀಲರಿಗೆ ತುಂಬಾ ಅನ್ವಯಿಸುತ್ತದೆ.

ವರ್ಣಗಳು ತಮ್ಮದೇ ಆದ ಸಾಂಕೇತಿಕ ಅರ್ಥವನ್ನು ಹೊಂದಿವೆ. ಒಂದೊಂದು ಬಣ್ಣವು ಒಂದೊಂದು ಬಗೆಯ ಭಾವೋದ್ವೇಗವನ್ನು ಮನಸ್ಸಿನಲ್ಲಿ ಮೂಡಿಸುತ್ತವೆ. "ಬಣ್ಣ ಆಕಾರಗಳು ಸೃಷ್ಟಿಯ ಅತ್ಯುತ್ಕೃಷ್ಟವಾದ ಅಂಶಗಳು, ಬಣ್ಣಗಳ ವಿವಿಧ ಛಾಯಾಮಾಲೆ ಕಲಾವಿದನ ವಿವಿಧ ಭಾವೋದ್ರೇಕಗಳೊಂದಿಗೆ ಹೊಂದಿಕೊಳ್ಳಬಲ್ಲವು. ಕೆಂಪು ಆಕ್ರೋಶಕ್ಕೆ, ಹಳದಿ ಸಂತೋಷಕ್ಕೆ, ನೀಲಿ ಹಾತೊರಯುವಿಕೆಗೆ."[೨] ಈ ಬಣ್ಣಗಳ ಗುಣಲಕ್ಷಣವನ್ನು ಗುರುತಿಸಲಾಗುತ್ತದೆ.

---

೧. ಓ. ಆರ್. ತಿಪ್ಪೇಸ್ವಾಮಿ (ಸಂ) ಚಿತ್ರಕಲಾ ಪ್ರಪಂಚ, ಪು. ೫೬೧.
೨. ಅದೇ, ಪು. ೫೬೨.

ಹೀಗೆ ಕಲಾವಿದನು ತನ್ನ ಕಲಾಕೃತಿಗಳಲ್ಲಿ ವರ್ಣ ಸಂಯೋಜನೆಯ ಪ್ರಖರತೆ ಹಾಗೂ ನೆರಳು ಬೆಳಕುಗಳ ವಿನ್ಯಾಸಕ್ಕನುಸಾರವಾಗಿ, ಆಳವಾಗಿ ಭಾವನೆಗಳ ಅಭಿವ್ಯಕ್ತಿಯ ಹಿನ್ನಲೆಯಲ್ಲಿ ದುಡಿಸಿಕೊಳ್ಳುತ್ತಾನೆ.

ವರ್ಣಚಿತ್ರಗಳಿಗೆ ತುಂಬಾ ಪ್ರಾಚೀನವಾದ ಇತಿಹಾಸವಿದೆ. ಕ್ರಿ. ಪೂ. ಕ್ಕಿಂತ ಮೊದಲು ಗುಹೆಗಳಲ್ಲಿ ಆದಿಮಾನವರಿಂದ ರೇಖಾಚಿತ್ರಗಳ ಮತ್ತು ವರ್ಣಚಿತ್ರಗಳ ರಚನೆಯಾಗಿದೆ. ಮುಂದುವರೆದ ವರ್ಣಚಿತ್ರಕಲೆ, ಧಾರ್ಮಿಕ, ಸಾಮಾಜಿಕ ಮತ್ತು ರಾಜಾಶ್ರಯವನ್ನು ಪಡೆದ ಅಗ್ರಗಣ್ಯ ಮಾಧ್ಯಮವಾಗಿ ಮೇಳೈಸಿರುವುದನ್ನು ಈ ಹಿಂದಿನ ಚರಿತ್ರೆಯ ದಾಖಲೆಗಳು ಹೇಳುತ್ತವೆ. ನಂತರದ ದಿನಗಳಲ್ಲಿ ಅದು ಅಂತರಂಗ ಮತ್ತು ಬಹಿರಂಗದ ಸ್ವರೂಪವನ್ನು ತನ್ನಿಂದ ತಾನಾಗಿಯೇ ಕಾಲಾನುಕ್ರಮವಾಗಿ ಬದಲಾವಣೆಯಾಗುತ್ತಾ ಬಂದಿದೆ.

ಕಲೆ ಎಲ್ಲರನ್ನು ಕೈಬೀಸಿ ಕರೆಯುತ್ತದೆ, ಆದರೆ, ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ ಎಂಬುದು ಲೋಕ ಪ್ರಸಿದ್ಧ ಗಾದೆಯಾಗಿದೆ. ಈ ಮಾತು ಕಲೆಯ ಮಹತ್ವವನ್ನು ವ್ಯಾಪ್ತಿಯನ್ನು, ವೈಶಿಷ್ಟ್ಯವನ್ನು, ಮತ್ತು ಅದ್ಭುತ ಪರಿಣಾಮಕಾರಿ ತತ್ವವನ್ನು ಶಕ್ತಿವತ್ತಾಗಿ ಅಭಿವ್ಯಕ್ತಿಸುತ್ತದೆ. ಕಲೆಯು ತನ್ನ ಸಂಪೂರ್ಣ ಸತ್ವದ ಅಭಿವ್ಯಕ್ತಿಗಾಗಿ ಎಲ್ಲರನ್ನು ಆಹ್ವಾನಿಸಿದರೆ ಅದರ ಮೂಲಭೂತಗಳನ್ನು ಅರಿತು ಅನುಭವಿಸಿ, ಧ್ಯಾನಿಸಿ, ಅನುಸಂಧಾನ ಮಾಡಿ ಅನವರತವೂ ಅದರ ಆರಾಧನೆಯಲ್ಲಿ ತೊಡಗಿ ತಮ್ಮನ್ನು ಸಂಪೂರ್ಣವಾಗಿ ಅದಕ್ಕೆ ತೆತ್ತುಕೊಂಡವರು ಬಹಳ ವಿರಳ. ಅಂತವರಲ್ಲಿ ಶಂಕರ ಪಾಟೀಲರೂ ಒಬ್ಬರು ಎಂದರೆ ತಪ್ಪಾಗಲಾರದು. ಈ ಕಲೆ ವ್ಯಕ್ತಿಗಳಲ್ಲಿ ಬಡವ, ಬಲ್ಲಿದರೆಂಬ ಆಳರಸರೆಂಬ ಸುಂದರ, ಅಸುಂದರವೆಂಬ ಯಾವ ಬಿನ್ನತೆಯನ್ನೂ ತಾರತಮ್ಯತೆಯನ್ನೂ ಮಾಡುವುದಿಲ್ಲ. ಒಬ್ಬೊಬ್ಬ ವ್ಯಕ್ತಿಯು ತಾನು ತನ್ನ ಕಲೆಯ ಅಭಿವ್ಯಕ್ತಿಗಾಗಿ ಆರಿಸಿಕೊಂಡ ಮಾಧ್ಯಮ, ಬೆಳಸಿಕೊಂಡ ಪ್ರವೃತ್ತಿ ಆಧರಿಸಿದ ವೃತ್ತಿ, ಗ್ರಹಿಸಿಕೊಂಡ ಅನುಭವ ಪ್ರಪಂಚ. ರೂಢಿಸಿಕೊಂಡ ಅಭ್ಯಾಸಕ್ರಮ, ಧಾರಣೆ ಮಾಡಿಕೊಂಡ ಹೊಸತನಗಳ ಮೂಲಕ ಕಲಾ ವೈಶಿಷ್ಟ್ಯವನ್ನು ಮೆರೆಯುತ್ತಾನೆ.

ಈ ದಿಸೆಯಲ್ಲಿ ಪಾಟೀಲರು ರಚಿಸಿದ ಕಲಾಕೃತಿಗಳಲ್ಲಿ ಭಾರತೀಯ ಸಂಪ್ರದಾಯದ ವಿವಿಧ ಮಾದರಿಯ ಸಂದೇಶಗಳನ್ನು ಸಮರ್ಪಕವಾಗಿ ವ್ಯಕ್ತಪಡಿಸಿದ್ದಾರೆ.

ಇಂದು ಪ್ರಾಚೀನ ಚಿತ್ರಕಲೆಯ ಮಾಹಿತಿ, ಸ್ವರೂಪ ಹೇರಳವಾಗಿ ಇಲ್ಲದಿದ್ದರೂ ಸಾಂಪ್ರದಾಯಿಕ ಸಂದರ್ಭದಲ್ಲಿ ಪ್ರಾಚೀನ ಕಲಾಶೈಲಿಯನ್ನು ಇಂದಿನ ಆಧುನಿಕ ಸಂದರ್ಭದಲ್ಲಿಯೂ ಆಗಾಗ

ಪುನರಾವರ್ತನೆಯಾಗುವುದನ್ನು ಸಾಮಾನ್ಯವಾಗಿ ನಾವು ಕಂಡಿದ್ದೇವೆ. ಇನ್ನೂ ಸರಳವಾಗಿ ಅರ್ಥೈಸಬೇಕಾದರೆ ಅತ್ಯಂತ ಪ್ರಾಚೀನ ಎನ್ನಬಹುದಾದ ಪ್ರಾಗೈತಿಹಾಸದ ಚಿತ್ರಕಲೆಯ ಕೆಲವು ರೂಪಾಂಶಗಳು ಇಂದಿನ ಆಧುನಿಕ ಕಲಾಕೃತಿಗಳಲ್ಲಿ ಕಂಡುಬರುತ್ತವೆ. ಇದೇ ರೀತಿಯಾಗಿ ಗ್ರಾಮೀಣ ಪರಿಸರದ ಜನಪದ ಕಲೆಗಳ ಕೆಲವು ದೃಶ್ಯಗಳು ಕೂಡ ಇಂದಿನ ಆಧುನಿಕ ಕಲೆಯಲ್ಲಿ ಕಂಡುಕೊಳ್ಳುವುದರ ಜೊತೆಗೆ ಆ ಕಾಲದ ಪುನರಾವರ್ತನೆ ಇಂದಿನ ಕಲಾ ಚಟುವಟಿಕೆಗಳಲ್ಲಿ ನಿರಂತರವಾಗಿ ನಡೆದಿದೆ. ಈ ರೀತಿಯ ಕಲಾ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಪಾಟೀಲರು ಕಲಾಕೃತಿ ರಚಿಸಿದ್ದಾರೆ.

ಶಂಕರ ಪಾಟೀಲರು ಅನೇಕ ವರ್ಣಚಿತ್ರಗಳನ್ನು ರಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವರ್ಣ ಚಿತ್ರಗಳನ್ನು ಅವುಗಳ ರಚನೆಗಳಿಗಾಗಿ ಬಳಸಿದ ವರ್ಣ ಮಾಧ್ಯಮವನ್ನು ಅಧ್ಯಯನದ ವ್ಯಾಪ್ತಿಗೆ ಪೂರಕವಾಗಿ ಆಯ್ದು ಕಲಾಕೃತಿಗಳನ್ನು ಈ ಕೆಳಗಿನಂತೆ ವರ್ಗಿಕರಿಸಿಕೊಂಡು ಅಧ್ಯಯನ ಮಾಡಲಾಗಿದೆ.

ವರ್ಗೀಕರಣ :

ಅ. ಜಲವರ್ಣ

೧. ಭಾವಚಿತ್ರ

೨. ನಿಸರ್ಗ ಚಿತ್ರಗಳು

೩. ಸಂಯೋಜನಾ ಚಿತ್ರಗಳು

ಬ. ತೈಲವರ್ಣ

೧. ಭಾವಚಿತ್ರ

೨. ಪೂರ್ಣಭಾವಚಿತ್ರ

೩. ಪ್ರಕೃತಿ ಚಿತ್ರಗಳು

೪. ನೈಜ ವರ್ಣಚಿತ್ರಗಳು

೫. ಆಧುನಿಕ ನೆಲೆಯ ವರ್ಣಚಿತ್ರಗಳು

೬. ಸುಡು ಚಿತ್ರಗಳು

ಅ. ಜಲವರ್ಣ ಚಿತ್ರಗಳು :

೧. ಭಾವಚಿತ್ರಗಳು

ಪೋಟೋಗ್ರಾಫಿಯ ಅನ್ವೇಷಣೆಗಿಂತ ಮೊದಲು ಭಾವಚಿತ್ರ ರಚನೆಗೆ, ರಚನಾಕಾರರಿಗೆ ದೇಶ ವಿದೇಶಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗುತ್ತಿತ್ತು. ಆಸ್ಥಾನಗಳಲ್ಲಿ ರಾಜ-ಮಹಾರಾಜರ, ರಾಣಿಯರ, ಸೈನ್ಯಾಧಿಕಾರಿಗಳ, ಮಂತ್ರಿಗಳ ಮತ್ತು ಅಂದಿನ ಸಮಾಜದ ಉನ್ನತ ವರ್ಗದವರು ಶ್ರೇಷ್ಠ ಕಲಾವಿದರಿಂದ ಸಾಕಷ್ಟು ಹಣ, ಗೌರವ ಪ್ರಶಸ್ತಿಗಳನ್ನು ನೀಡಿ ತಮ್ಮ ಭಾವಚಿತ್ರಗಳನ್ನು ರಚಿಸಿಕೊಳ್ಳುತ್ತಿದ್ದ ಕಾಲಘಟ್ಟವೊಂದಿತ್ತು.

ಜೀವಂತ ವ್ಯಕ್ತಿಗಳನ್ನು ಎದುರಿಗೆ ಕುಳ್ಳಿರಿಸಿ ಅವರ ರೂಪಗಳನ್ನು ತದ್ರೂಪವಾಗಿ ಕ್ಯಾನವಾಸ್ ಅಥವಾ ಮರದ ಹಲಗೆ, ಅಥವಾ ಹಸ್ತಿದಂತಗಳಂತಹ ಸಮತಟ್ಟಾದ ಮೇಲ್ಮೈ ಮೇಲೆ ವರ್ಣಗಳಿಂದ ಚಿತ್ರಿಸುವ ಕಲಾ ಪ್ರಕಾರವನ್ನು ಭಾವಚಿತ್ರ (ಪೋರ್ಟ್ರೇಟ್) ಎಂದು ಕರೆಯುತ್ತಾರೆ. ಭಾವಚಿತ್ರವು ಅರ್ಧ ಪ್ರಮಾಣದಲ್ಲಾಗಲಿ ಅಥವಾ ಪೂರ್ಣ ಪ್ರಮಾಣದಲ್ಲಾಗಲಿ ರಚಿತವಾಗುತ್ತದೆ.

ಭಾವಚಿತ್ರದಲ್ಲಿ ಮುಖದ ಬಾಹ್ಯ ಲಕ್ಷಣಗಳು, ಬಣ್ಣಗಳು, ವ್ಯಕ್ತಿತ್ವ ಯಥಾವತ್ತಾಗಿ ರೂಪಿತವಾಗಿರಬೇಕಾದುದು ಅವಶ್ಯಕವಾಗಿದೆ. ಮೊದಮೊದಲು ಭಾವಚಿತ್ರ ಕಲಾ ಪ್ರಕಾರವನ್ನು 'ಕಲಾಕೃತಿ' ಎಂದು ಪರಿಗಣಿಸುತ್ತಲೇ ಇರಲಿಲ್ಲ. ಇಂದು ಅವುಗಳನ್ನು ಅತ್ಯುತ್ತಮ ಕಲಾಕೃತಿಗಳೆಂದು ಕರೆಯಲಾಗುತ್ತಿದೆ. ಈ ಪ್ರಕಾರ "ಈಜಿಪ್ತ, ಅಸ್ಸಿರೀಯಾ ದೇಶಗಳಲ್ಲಿ ಪುರಾತನ ಕಲಾಕೃತಿಗಳು, ವ್ಯಕ್ತಿಗಳ ತದ್ರೂಪಿ, ಅರ್ಧಾಕೃತಿಯ ಭಾವಚಿತ್ರಗಳು ಬಹುಸಂಖ್ಯೆಯಲ್ಲಿ ಉಳಿದುಕೊಂಡು ಬಂದಿವೆ. ಕ್ರಿ. ಶ. ೧೫ನೆಯ ಶತಮಾನದ ಪುನರುಜ್ಜೀವನ ಕಾಲದಲ್ಲಿ ಇಟಲಿ ಮತ್ತು ಫ್ಲ್ಯಾಂಡರ್ಸ್‌ಗಳಲ್ಲಿ ಅಸಂಖ್ಯಾತ ಭಾವಚಿತ್ರಗಳು ರಚಿತಗೊಂಡವು. ಈ ಪುರಾತನ ಭಾವಚಿತ್ರಗಳು ಸರಳವಾಗಿ ಬಣ್ಣಗಳನ್ನು ಬಳಸಿ ಚಿತ್ರಿಸಿದವುಗಳಾಗಿವೆ."

"ಕ್ರಿ. ಶ. ೧೬ನೆಯ ಶತಮಾನದಲ್ಲಿ ಜರ್ಮನಿಯ ಕಲಾವಿದ ಲ್ಯೂಕಾಸಕ್ರನಾಷ್ ಮತ್ತು ಅವನ ಸಮಕಾಲೀನನಾದ ಮತ್ತೊಬ್ಬ ಕಲಾವಿದನಾದ ಹಾನ್ಸ ಹೋಲ್ಬೀನ್ ಇವರು ಭಾವಚಿತ್ರ ಕಲಾಕೃತಿಗಳನ್ನು ಯಥೇಚ್ಛವಾಗಿ ಚಿತ್ರಿಸಿದ್ದಾರೆ. ವೆನಿಸ್‌ನಲ್ಲಿ ರಚಿತಗೊಂಡ ಭಾವಚಿತ್ರಗಳು ಇನ್ನೊಂದು ಹೆಜ್ಜೆ ಮುಂದೆ ಸಾಗಿ ವ್ಯಕ್ತಿಯ ಯಥಾವತ್ ರೂಪದೊಂದಿಗೆ ಸಮಾಜದಲ್ಲಿರುವ ಆತನ ಸ್ಥಾನಮಾನಗಳನ್ನೂ ಸಹ ಚಿತ್ರಿಸಿದವುಗಳಾಗಿವೆ.[3]

೧೭ನೆಯ ಶತಮಾನದ ಅದ್ಭುತ ಭಾವಚಿತ್ರ ಕಲಾವಿದರೆನಿಸಿದ ಡಚ್ ಕಲಾವಿದ ರೆಂಬ್ರಾಂಟ್ ಮತ್ತು ಸ್ಪೇನಿನ ವೆಲಾಸ್ಕತ್‌ರನ್ನು ಇಂದಿಗೂ ಮೀರಿಸುವಂತಹ ಭಾವಚಿತ್ರಕಲಾವಿದರು ಈವರೆಗೆ ಕಂಡುಬಂದಿಲ್ಲ ಎಂಬ ಮಾತು ಸರಿಯೆನಿಸುತ್ತದೆ. ರೆಂಬ್ರಾಂಟನು ತನ್ನದೇ ಆದ ಅರವತ್ತಕ್ಕೂ ಹೆಚ್ಚು ಭಾವಚಿತ್ರಗಳನ್ನು ಬೇರೆ ಬೇರೆ ಕಾಲಗಳಲ್ಲಿ ಚಿತ್ರಿಸಿದ್ದು ಅವುಗಳಲ್ಲಿ ವ್ಯಕ್ತಿಯ ವಯಸ್ಸಿನ ಅಂತರದಲ್ಲಿ ಉಂಟಾಗುವ ಬದಲಾವಣೆಗಳ ಸ್ವಾಭಾವಿಕ ಮುಖ ಲಕ್ಷಣಗಳನ್ನು ಗುರುತಿಸಬಹುದಾಗಿದೆ.

---

೩. ವಿ.ಟಿ. ಕಾಳೆ (ಸಂ) ಚಿತ್ರಕಲಾ ದರ್ಪಣ, ಪು. ೧೨೭, ೧೨೮.

೧೯ನೆಯ ಶತಮಾನದ ನಂತರ ಮಾಡಿದ ಭಾವ ಚಿತ್ರಗಳು ಯಾವ ವ್ಯಕ್ತಿಯ ಚಿತ್ರ ಎಂದಷ್ಟೆ ಹೇಳದೇ, ಚಿತ್ರಣದ ಶೈಲಿ ಮತ್ತು ರೀತಿನೀತಿಗಳನ್ನು ತಿಳಿಸುತ್ತವೆ. ಈ ಚಿತ್ರಣವು ಇಂತಹುದೇ ಕಲಾವಿದನು ರಚಿಸಿದ ಚಿತ್ರವೆಂದು ಸೂಚಿಸುತ್ತಿದ್ದುದು ಗಮನಾರ್ಹ. ವ್ಯಾನಗಾಗ್, ಡಾ. ಗೆಚೆಟ್, ಟಾಂಗ್ವೆ, ಆಸ್ಕಲ್, ಕೋಕೊಶ್ಕನ್ ಇವರುಗಳು ರಚಿಸಿದ ಕಲಾಕೃತಿಗಳು ಇದಕ್ಕೆ ಉತ್ತಮ ಉದಾಹರಣೆಗಳಾಗಿವೆ.

ಭಾರತದಲ್ಲಿ ರವೀಂದ್ರನಾಥ ಟ್ಯಾಗೋರ, ಜಿ.ಎಸ್. ದಂಡಾವತಿಮಠ, ಕೆ. ಕೆ. ಹೆಬ್ಬಾರ್, ಪಿ.ಟಿ. ರೆಡ್ಡಿ, ಬಿ. ಕೆ. ಹುಬ್ಳಿ, ಪಿ. ಸಿ. ಸನ್ಯಾತ್, ಕೆ. ಬಿ. ಕುಲಕರ್ಣಿ, ಜಾನ್ ಪರ್ನಾಂಡಿಸ್, ಮುಂತಾದ ನೂರಾರು ಕಲಾವಿದರುಗಳು ಭಾವಚಿತ್ರಕಾರರಾಗಿದ್ದಾರೆ. "ಭಾವಚಿತ್ರ ಇಂದು ಅಕಾಡೆಮಿಕ್ ಸಂದರ್ಭದಲ್ಲಿ ಪಠ್ಯದ ಮುಖ್ಯ ವಿಷಯವಾಗಿ ಪ್ರಚಲಿತದಲ್ಲಿದೆ. ಶಂಕರ ಪಾಟೀಲರು ಸಹ ಮುಂಬೈಯ ಜೆ. ಜೆ. ಕಲಾಶಾಲೆ ಮತ್ತು ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನಲ್ಲಿ ಅಕಾಡೆಮಿಕ್ ಪಠ್ಯಕ್ರಮದಲ್ಲಿ ಕಲಾಶಿಕ್ಷಣವನ್ನು ಪಡೆದವರಾಗಿದ್ದು, ಸಾಕಷ್ಟು ಉತ್ತಮ ಭಾವಚಿತ್ರಗಳನ್ನು ರಚಿಸಿದ್ದಾರೆ. ಇವರಂತೆಯೇ ಕರ್ನಾಟಕದಲ್ಲಿ ಎಂ.ಬಿ. ಪಾಟೀಲ, ವಿಜಯ ಸಿಂಧೂರ, ಜೆ. ಎಸ್. ಖಂಡೇರಾವ್, ದಿ.ಎಸ್.ಎಮ್. ಪಂಡಿತ, ದಿ. ಎಂ. ಎ. ಚೆಟ್ಟಿ ಇನ್ನು ಹಲವಾರು ಕಲಾವಿದರನ್ನೂ ಹೆಸರಿಸಬಹುದಾಗಿದೆ.

ಸ್ವಾತಂತ್ರ್ಯೋತ್ತರದ ಆದಿಯಲ್ಲಿ ಒಂದೆರಡು ದಶಕಗಳ ಅವಧಿಯಲ್ಲಿ ಭಾವಚಿತ್ರವನ್ನು ಒಂದು ಗಂಭೀರ ಕಲಾ ಪ್ರಕಾರವೆಂದು ಗುರಿತಿಸಲಾಗಿತ್ತು. ಅಷ್ಟೇ ಅಲ್ಲದೆ ನಂತರದ ದಿನಗಳಲ್ಲಿ ರಾಷ್ಟ್ರಮಟ್ಟದ, ರಾಜ್ಯಮಟ್ಟದ, ಅಕ್ಯಾಡೆಮಿಕ್ ಕಲಾ ಪ್ರದರ್ಶನಗಳಲ್ಲಿಯೂ ಭಾವಚಿತ್ರ ಕಲೆಗೆ ಪ್ರಾಧಾನ್ಯತೆಯನ್ನು ನೀಡಲಾಯಿತು."[೪]

ಆದರೆ ಇಂದಿನ ಸಮಕಾಲೀನ ಸಂದರ್ಭದಲ್ಲಿ ಭಾವಚಿತ್ರದ ಜೊತೆಗೆ ನಿಸರ್ಗ ಚಿತ್ರಣ (ಲ್ಯಾಂಡ್ ಸ್ಕೇಪ್) ಸ್ಥಿರಚಿತ್ರಣ (ಸ್ಟಿಲ್ ಲೈಫ್) ಚಿತ್ರಣಗಳನ್ನು ಕಲಾಪ್ರಕಾರಗಳಲ್ಲೊಂದು ಎಂದು ಗುರುತಿಸುತ್ತಿರಲಿಲ್ಲವಾದರೂ ಇದಕ್ಕೆ ಹಲವು ಬಗೆಯ ದೋಷಾರೋಪಣೆಗಳು ಅಡ್ಡಿಯಾಗಿದ್ದವು. ವ್ಯಕ್ತಿ ಅಥವಾ ವಸ್ತುವೊಂದನ್ನು ನೇರವಾಗಿ ಅನುಕರಿಸಿ ಚಿತ್ರಿಸುವುದರಿಂದ ಸೃಜನಶೀಲತೆಯೂ ಭಾಗಶಃ ಗೌಣವಾಗುತ್ತದೆಯೇನೋ ಎಂಬ ಆತಂಕವನ್ನು ಕಾಡುತ್ತಿತ್ತು. ಉದಾ: ಪ್ರಸ್ತುತ ಸಂದರ್ಭದಲ್ಲಿ

೪. ರವೀಂದ್ರ, ಎಸ್. ಕಮ್ಮಾರ, "ಕಲಾವಿದ ಹಿರೇಗೌಡರ ಕಲಾಕೃತಿಗಳು ಒಂದು ಅಧ್ಯಯನ", ಪು. ೯೮.



ಚಿತ್ರ ೧. ಭಾವಚಿತ್ರ

ಭಾವ ಚಿತ್ರ (ಜಲವರ್ಣ ಮಾಧ್ಯಮ)

ಸೃಜನಶೀಲ ಸಂಯೋಜನೆಗಳಂತಹ (ಕ್ರಿಯೇಟಿವಿಟಿ) ಕಲಾಕೃತಿಗಳಿಗೆ ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ಕಲಾಪ್ರದರ್ಶನಗಳಲ್ಲಿ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿರುವುದು ಒಂದು ಕಾರಣವಾಗಿದೆ.

ಹೀಗೆ ಭಾವಚಿತ್ರ ಪ್ರಕಾರಗಳು ಶೈಲಿಯುಕ್ತವಾಗಿ ಅತಿ ಭಿನ್ನ ಭಿನ್ನವಾಗಿ ಸಾಗಲು ಹಲವು ಕಾರಣಗಳಿವೆ. ಇವುಗಳಲ್ಲಿ ಅತ್ಯಂತ ಪ್ರಮುಖ ಕಾರಣವೆಂದರೆ ಪೋಟೋಗ್ರಾಫಿಯ ಅನ್ವೇಷಣೆ. ಮೊದಲು ಶ್ರೀಮಂತ ವರ್ಗದವರು ಮಾತ್ರ ತಮ್ಮ ಚಿತ್ರಗಳನ್ನು ಬರೆಸಿಕೊಳ್ಳುತ್ತಿದ್ದರೆ, ಪೋಟೋಗ್ರಾಪಿ ಬಂದ ನಂತರ ಫೋಟೋಗ್ರಾಫಿಯ ಹೊಸ ಹೊಸ ಅವಿಷ್ಕಾರಗಳಿಂದ ವೈಜ್ಞಾನಿಕ ತಂತ್ರಜ್ಞಾನಗಳ ಮೂಲಕ ಜನಸಾಮಾನ್ಯರೂ ಸಹ ತಮ್ಮ ಚಿತ್ರ ತೆಗೆಸಿಕೊಳ್ಳುವಂತಾಗಿದೆ ಮತ್ತು ವೆಚ್ಚವೂ ಕೂಡ ಕಡಿಮೆ ಇದ್ದು ಕೈಗೆಟಕುವಂತಾಗಿದೆ.

ಶಂಕರ ಪಾಟೀಲರು ತಮ್ಮ ವಿದ್ಯಾರ್ಥಿ ಜೀವನದಲ್ಲಿ, ಕಲಾಶಿಕ್ಷಕರಾಗಿ, ಕಲಾಸಂಸ್ಥೆಯ ಮುಖ್ಯಸ್ಥರಾಗಿ ವಿವಿಧ ಕಲಾಶಾಲೆಗಳ ಸಭೆ – ಸಮಾರಂಭಗಳಲ್ಲಿ ಭಾವಚಿತ್ರ, ಸಂಯೋಜನಾ ಚಿತ್ರಗಳ ಪಾತ್ಯಕ್ಷಿಕೆಯನ್ನು ನೀಡಿದ್ದಾರೆ. ತಾವು ಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ ದಾವಣಗೆರೆಯ ಸರಕಾರಿ ಚಿತ್ರಕಲೆ ಮತ್ತು ಕರಕುಶಲ ಕಲಾ ಶಾಲೆಯಲ್ಲಿಯೂ ಸಹ ತಮ್ಮ ವಿದ್ಯಾರ್ಥಿಗಳಿಗೆ ಭಾವಚಿತ್ರಗಳ ಪ್ರಾತ್ಯಕ್ಷಿಕೆಯನ್ನು ನೀಡಿದ್ದಾರೆ. ಜೊತೆಗೆ ಬಿಡುವಿನ ಸಮಯಗಳಲ್ಲಿ ಹವ್ಯಾಸವಾಗಿ ಪಾಟೀಲರು ಭಾವಚಿತ್ರ ರಚನೆಯಲ್ಲಿ, ಸೃಜನಶೀಲ ಚಿತ್ರರಚನಾ ಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಭಿನ್ನವಾಗಿ ಕಲಾಕೃತಿ ರಚಿಸಿರುವುದನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

೧. ಭಾವಚಿತ್ರಗಳು (ಜಲವರ್ಣ)

ಚಿತ್ರ–೧ : ಈ ಭಾವಚಿತ್ರವು ರೂಪದರ್ಶಿಯನ್ನು ಬಳಸಿ ಚಿತ್ರಿಸದೇ ಕಾಲ್ಪನಿಕವಾಗಿ ರೂಪಗೊಂಡಿದೆ. ಚಿತ್ರ ವಿಷಯದಲ್ಲಿ ರಾಜಪೂತ ಮಹಾರಾಜರ ರೂಪವನ್ನು ಹೋಲುವಂತಿದ್ದು, ವೇಷಭೂಷಣ ಮತ್ತು ಭಾವರೂಪಗಳು ವೈವಿಧ್ಯಮಯವಾಗಿ ಪ್ರಖರ ವರ್ಣಗಳ ಮೂಲಕ ರಚನೆಯಾಗಿವೆ. ಭಾವಚಿತ್ರ ಕಲಾಕೃತಿಯಲ್ಲಿ ಜ್ಯಾಮಿತಿಕ ಆಕೃತಿಗಳನ್ನು ಬಳಸಿಕೊಂಡು ಹೊರರೇಖೆಗಳ ಮೂಲಕ ಆಧುನಿಕ ಶೈಲಿಯಲ್ಲಿ ಚಿತ್ರ ರಚನೆಗೊಂಡಿದೆ. ಈ ಚಿತ್ರದಲ್ಲಿ ಅವರ ಅಕಾಡೆಮಿಕ್ ಶಿಕ್ಷಣ ಮತ್ತು ಪಾಶ್ಚಾತ್ಯ ಕಲೆಯ ಪ್ರಭಾವವನ್ನ ಕಾಣಬಹುದು.

ಜಲವರ್ಣಕ್ಕೆ ಬಹು ವರ್ಷಗಳ ಇತಿಹಾಸವಿದೆ. ಜಲವರ್ಣ ಮಾಧ್ಯಮವನ್ನು ಭಾರತದ ಅಜಂತಾ– ಎಲ್ಲೋರಾದ ಗುಹೆಗಳಲ್ಲಿ ಮತ್ತು ಕರ್ನಾಟಕದ ಹಂಪೆ, ಬಾದಾಮಿಯಂತಹ ಐತಿಹಾಸಿಕ

ದೇವಾಲಯಗಳಲ್ಲಿ ಹೇರಳವಾಗಿ, ಪಾರದರ್ಶಕವಾಗಿ, ಅಪಾರದರ್ಶಕವಾಗಿಯೂ ಬಳಸಿಕೊಂಡು ಬರಲಾಗಿದೆ.


ಜಲವರ್ಣ ಚಿತ್ರಗಳನ್ನು ಸಾಮಾನ್ಯವಾಗಿ ಕಾಗದದ ಮೇಲೆ, ರೇಷ್ಮೆ ಬಟ್ಟೆ ಮತ್ತು ಹಸ್ತಿದಂತಗಳ ಮೇಲೆ ಚಿತ್ರಿಸುತ್ತಾರೆ. ಬಣ್ಣಗಳನ್ನು ನೀರಿನಲ್ಲಿ ಮಿಶ್ರಮಾಡಿ ಚಿತ್ರಗಳನ್ನು ಚಿತ್ರಿಸುವುದು ಜಲವರ್ಣ ವಿಧಾನ. "ಹಿಂದಿನಿಂದಲೂ ರೇಖಾಚಿತ್ರಗಳಿಗೆ ಅಂತಿಮವಾಗಿ ಜಲವರ್ಣಗಳಿಂದ ಮುಕ್ತಾಯ ಸ್ಪರ್ಷಗಳನ್ನು ಕೊಡಲಾಗುತ್ತಿತ್ತೆಂಬುದನ್ನು ಲಿಯೋನಾರ್ಡೋ‌ವಿಂಚಿ ಮತ್ತು ಡ್ಯೂರರ್ ಅವರ ಅಸಂಖ್ಯಾತ ರೇಖಾಚಿತ್ರಗಳಿಂದ ತಿಳಿಯಬಹುದಾಗಿದೆ. ಮೊದಲಿನಿಂದ ಈಗಿನವರೆಗೂ ಜಲವರ್ಣವನ್ನೇ ಅತ್ಯಂತ ಪರಿಣಾಮಕಾರಿಯಾಗಿ ಕಲಾವಿದರುಗಳು ಬಳಸಿಕೊಂಡು ಬಂದುರುವುದನ್ನು ನಾವು ಕಾಣಬಹುದು. ಚಿಕಣಿ ಚಿತ್ರಕಲೆ ಪ್ರಕಾರದಿಂದ ಇದು ಬಳಕೆಯಲ್ಲಿದ್ದು, ನಂತರದ ದಿನಗಳಲ್ಲಿ ಉಸಿರು ಹಿಡಿದು ಬದುಕುವ ಹೋರಾಟ ನಡೆಸಿದ್ದ ಈ ಮಾಧ್ಯಮ ೧೬ ಮತ್ತು ೧೮ ನೆಯ ಶತಮಾನಗಳ ಮಧ್ಯ ತನ್ನದೇ ಆದ ವಿಶಿಷ್ಟತೆಯಿಂದ ಮರುಹುಟ್ಟು ಪಡೆಯಿತು."[೫]

ಜಲವರ್ಣಗಳನ್ನು ಎರಡು ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ೧) ಗ್ವಾಷ್, ೨) ಪೋಸ್ಟರ್ ವರ್ಣವಿಧಾನ. ಈ ಎರಡು ವರ್ಣಗಳು ದಪ್ಪವಾಗಿದ್ದು, ಅಪಾರದರ್ಶಕಗಳಾಗಿರುತ್ತವೆ. ಕಾಗದದ ಮೇಲೆ ಬಳಿದ ಬಣ್ಣವು ಒಣಗಿದ ನಂತರ ಗದುವು-ಗದುವಾಗಿದ್ದರೆ (ಗಡುಸಾಗಿರದೆ) ಒಂದೆ ಸಮನಾಗಿ ಲೇಪಿಸಿದಂತಿರುತ್ತವೆಯಾದ್ದರಿಂದ ಈ ವಿಧಾನಗಳು ವಾಣಿಜ್ಯ ಕಲಾಕೃತಿಗಳಿಗೆ ಇಲ್ಲವೆ ಪ್ರಚಾರ ಚಿತ್ರಗಳಿಗೆ ಹೆಚ್ಚು ಸೂಕ್ತವಾಗಿದೆ. ಈ ವಾಣಿಜ್ಯ ಮತ್ತು ವ್ಯವಹಾರಿಕ ಕಲಾಕೃತಿಗಳಲ್ಲಿ ಬಳಸಲಾಗುವ ವರ್ಣಗಳು ಪ್ರಕಾಶಮಾನವಾಗಿಯೂ ಜನಸಾಮಾನ್ಯರನ್ನು ಆಕರ್ಷಿತಗೊಳಿಸುವಲ್ಲಿ ರಂಜನೀಯವಾಗಿಯೂ ಬಳಸುವ ವಿಧಾನ ಅತ್ಯವಶ್ಯಕವಾಗಿದೆ. "ಸಾಮಾನ್ಯ ಜಲವರ್ಣ ವಿಧಾನದಲ್ಲಿ ಬಣ್ಣಗಳನ್ನು ಪಾರದರ್ಶಕವಾಗಿ ಬಳಸಿ ವ್ಯವಹಾರಿಕ ಕಲಾಕೃತಿಗಳಿಗಿಂತ ಸೂಕ್ಷ್ಮವಾದ ವರ್ಣ ಸಾಂದ್ರತೆಗಳ ವೈವಿಧ್ಯಮಯ ಚಿತ್ರಣವು ಪ್ರಮುಖವಾಗಿದೆ. ಹಳೆಯ ಪದ್ಧತಿಯ ಜಲವರ್ಣ ವಿಧಾನದಲ್ಲಿ ಪರಿಣಿತರೆನಿಸಿದ ಸರ್. ವಿಲಿಯಂ ನಿಕೋಲ್ಸನ್ ಕಲಾವಿದ ಸಹ ಗ್ವಾಷ ಅಪಾರದರ್ಶಕ ವಿಧಾನದಲ್ಲಿ ತಮ್ಮ ವರ್ಣಚಿತ್ರ ಕಲಾಕೃತಿಗಳನ್ನು ರಚಿಸಿ ಅಂತರಾಷ್ಟ್ರೀಯ ಮನ್ನಣೆಯನ್ನು ಪಡೆದಿದ್ದರು. ಟೂಲಸ್ ಲಾತ್ರೆಕ್ ಮತ್ತು ಭಾರತದಲ್ಲಿ ಪ್ರಪ್ರಥಮವಾಗಿ ಪೋಸ್ಟರ ವರ್ಣಗಳನ್ನು ಬಳಕೆಯಲ್ಲಿ ತಂದ ಕೀರ್ತಿಗೆ

೫. ಡಾ. ಲಕ್ಷ್ಮೀದೇವಿ ಗವಾಯಿ, ಕಲಾವಿದ ಎಂ. ಎ. ಚಟ್ಟಿಯವರ ಜೀವನ ಮತ್ತು ಕಲಾಕೃತಿಗಳು, ಪು. ೧೭೧.



ಚಿತ್ರ ೧. ಭೂದೃಶ್ಯ



ಚಿತ್ರ ೨. ಭೂದೃಶ್ಯ

ಪಾತ್ರವಾದ ಕರ್ನಾಟಕದ ದಿ. ಎಸ್. ಎಂ. ಪಂಡಿತರಂತಹ ಕಲಾವಿದರು ಈ ಎರಡು ವಿಧಾನಗಳಲ್ಲಿ ಸಾಕಷ್ಟು ಜಲವರ್ಣ ಚಿತ್ರ ರಚಿಸಿರುವುದನ್ನು ನಾವು ಕಾಣಬಹುದು."[೬]

ಪಾಟೀಲರು ತಮ್ಮ ಕಲಾಭ್ಯಾಸಂಗದ ಅವಧಿಯಲ್ಲಿ ಕಲಾ ಗುರುಗಳಾದ ದಂಡಾವತಿಮಠ ಮತ್ತು ಡಿ. ವಿ. ಹಾಲಭಾವಿ ಅವರಿಂದ ಜಲವರ್ಣ ಚಿತ್ರಣ ತಂತ್ರವನ್ನು ಅಭ್ಯಸಿಸಿ ಜಲವರ್ಣ ಮಾಧ್ಯಮವನ್ನು ಅಕಾಡೆಮಿಕ್ ಶೈಲಿಯನ್ನು ಪ್ರಯೋಗಿಸಿ ಅನೇಕ ವರ್ಣಚಿತ್ರಗಳನ್ನು ರಚಿಸಿದ್ದಾರೆ. ಈ ಪರಂಪರೆಯಲ್ಲಿ ಶಂಕರ ಪಾಟೀಲರು ವಿವಿಧ ತಂತ್ರಗಳನ್ನು ಬಳಸಿ ಭಾವಚಿತ್ರಣ ರಚಿಸಿದ್ದು ಕೆಲವು ಆಯ್ದ ಭಾವಚಿತ್ರಗಳನ್ನು ಇಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ.

ನಿಸರ್ಗ ಚಿತ್ರಗಳು (ಜಲವರ್ಣ) :

ಚಿತ್ರ ೧. ಭೂದೃಶ್ಯ: ಅಮೂರ್ತ ರೂಪದಲ್ಲಿ ಮೂಡಿಬಂದ ಈ ಭಾವದೃಶ್ಯವು ಕೇಸರಿ, ಕಂದು, ಕಪ್ಪು, ಬೂದುವರ್ಣಗಳ ಸಮ್ಮಿಲನದಿಂದ ಸೂರ್ಯಾಸ್ತದ ಸಮಯವನ್ನು ಪ್ರತಿಬಿಂಬಿಸುತ್ತದೆ. ಪ್ರಕೃತಿಯಲ್ಲಿ ನಡೆಯುವ ಸಮಯದ ಏರಿಳಿತವನ್ನು ಒರಟು ಕುಂಚದಿಂದ ಪಾಟೀಲರು ವರ್ಣಗಳ ತೀಕ್ಷ್ಣತೆಯ ಹಿನ್ನೆಲೆಯಲ್ಲಿ ತರಲು ಪ್ರಯತ್ನಿಸಿದ್ದಾರೆ. ಚಿತ್ರವು ಮೇಲ್ನೋಟಕ್ಕೆ ನೋಡುಗರನ್ನು ಗಮನ ಸೆಳೆಯದಿದ್ದರೂ ಆ ಕೃತಿಯಲ್ಲಿನ ವರ್ಣ ಹಾಗೂ ಕುಂಚದ ತೇಪೆಗಳ ಆಳವನ್ನು ಗಮನಿಸಬಹುದು. ನೀರು ಬಣ್ಣದಿಂದ ರೂಪಿತಗೊಂಡ ಈ ಪ್ರಕೃತಿ ಚಿತ್ರದಲ್ಲಿ ವರ್ಣಗಳ ಪಾರದರ್ಶಕತೆ ಅಭಿವ್ಯಕ್ತಗೊಂಡಿದೆ.

ಚಿತ್ರ ೨. ಭೂದೃಶ್ಯ:

ರಭಸವಾದ ತೇಪೆಗಳಿಂದ ಮೂಡಿಬಂದ ಈ ಭೂದೃಶ್ಯ ಚಿತ್ರದಲ್ಲಿ ಹಸಿರು ವರ್ಣದ ಗಾಢತೆ ಎದ್ದು ತೋರುತ್ತದೆ. ಬೆಟ್ಟವು ಹಚ್ಚ ಹಸಿರು ಗಿಡಮರಗಳಿಂದ ಕಂಗೊಳಿಸುತ್ತಿರುವಂತೆ ಇಲ್ಲಿ ಸಂಯೋಜಿಸಿದ್ದಾರೆ. ಬೆಟ್ಟದ ಮೇಲಿರುವ ಕೋಟೆಯ ಸಂಯೋಜನೆಯು ಸಹ ಹಸಿರು ವರ್ಣದಿಂದ ಕೂಡಿದ್ದು ಹಸಿರುವರ್ಣದ ರಮ್ಯತೆಯು ಬಿಂಬಿತವಾಗಿದೆ. ಚಿತ್ರವು ಜಲವರ್ಣದಿಂದ ಸಂಯೋಜಿತವಾಗಿದ್ದು ರಭಸವಾದ ಕುಂಚದ ತೇಪೆಗಳು ಹಾಗೂ ಆಕಾಶದಲ್ಲಿರುವ ಮೋಡಗಳ ಸಮ್ಮಿಲನವನ್ನು ಗಮನಿಸಿದರೆ ಶರದ್ ಋತುವಿನ ಕಾಲವನ್ನು ಸೂಚಿಸುತ್ತದೆ. ಈ ಎರಡೂ ಚಿತ್ರಗಳಲ್ಲಿ ಕಲಾವಿದ ವರ್ಣ ಹಾಗೂ ಕುಂಚಗಳನ್ನು ಅತ್ಯಂತ ಪ್ರಯೋಗಾತ್ಮಕವಾಗಿ ಬಳಸಿದ್ದಾರೆ. ಜೊತೆಗೆ ಪ್ರಕೃತಿಯ ಅಂತರದೃಷ್ಟಿಯನ್ನು ಸೃಜನಾತ್ಮಕವಾಗಿ ಮೂಡಲು ಈ ಕೃತಿಗಳ ಮೂಲಕ ಪ್ರಯತ್ನಿಸಿದ್ದಾರೆ.

ಸಂಯೋಜನಾ ಚಿತ್ರಗಳು : (ಜಲವರ್ಣ)

"ಭಾರತದಲ್ಲಿ ಆಧುನಿಕ ಕಲೆ ತನ್ನ ಬೇರುಗಳನ್ನು ಗಟ್ಟಿಯಾಗಿಸಿಕೊಂಡಿದ್ದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಹೊಸತರದಲ್ಲಿಯೇ. ವಿಶ್ವಕ್ಕೆ ತನ್ನನ್ನು ತೆರೆದುಕೊಂಡ ಭಾರತೀಯ ಸಮಾಜದ ಗಮನಾರ್ಹ ಭಾಗದ ಬದುಕು ಪೂರ್ಣವಾಗಿ ಬದಲಾದದ್ದೂ ಈ ಸಂದರ್ಭದಲ್ಲಿಯೇ. ರಾಜಕೀಯದೊಂದಿಗೆ, ಸಾಂಸ್ಕೃತಿಕ ಬದಲಾವಣೆಯ ಗಾಳಿ ಬೀಸಿದ ಈ ಪರ್ವಕಾಲದಲ್ಲಿ ತನ್ನ ಆಂತರಿಕ ಆಶಯ ಅಗತ್ಯತೆಗಳಿಗೆ ಅನುಸಾರವಾಗಿ ಹೊಸ ಹೊಸ ವಿಚಾರಗಳನ್ನು ಹೊಸ-ಹೊಸ ರೂಪಗಳನ್ನು ಸೃಷ್ಟಿಸಿಕೊಳ್ಳುತ್ತಾ ಚಿತ್ರ ಶಿಲ್ಪ ಕಲೆಗಳಲ್ಲೂ ಭಾರಿ ಬದಲಾವಣೆಗಳಾದವು. ಕಲಾಕೃತಿಯೊಂದನ್ನು ಹೊಸ ದೃಷ್ಟಿಯಿಂದ, ಹೊಸ ಆಲೋಚನೆಗಳಿಂದ, ಹೊಸ ರೂಪಗಳಿಂದ ಅಭಿವ್ಯಕ್ತಿಸುವ ಚಳುವಳಿಯೇ ಆರಂಭವಾಯಿತು." ಸಾಂಪ್ರದಾಯಿಕ ಕಲೆಗಳಿಂದ ಭಿನ್ನವಾಗಿರುವ ಈ ಸಮಕಾಲೀನ ಕಲೆಯಲ್ಲಿ ವ್ಯಕ್ತಿ, ಪ್ರಾಣಿ, ವಸ್ತು ಇತ್ಯಾದಿಗಳ ಬಾಹ್ಯರೂಪಕ್ಕಿಂತ ಅವುಗಳ ವಿಧಗಳ ಆಂತರಿಕ ರೂಪಕ್ಕೆ ಮಹತ್ವವಿದೆ. ಸಾಂಪ್ರದಾಯಿಕ ಕಲೆಗಳಲ್ಲಿರುವಂತೆ ಸಮಕಾಲಿನ ಕಲೆಯಲ್ಲಿ ಕಲಾಕೃತಿಯೊಂದನ್ನು ಹೀಗೆಯೇ ರಚಿಸಬೇಕೆಂಬ ಬಂಧನವಿಲ್ಲ. ಮತ್ತು ಕಠಿಣ ನಿಯಮಗಳಿಲ್ಲ. ಅಬಿವ್ಯಕ್ತಿಗೆ ಅನುಗುಣವಾಗಿ ರೂಪವನ್ನು, ತಂತ್ರವನ್ನು ಕಲಾವಿದನಿಗೆ ಬೇಕೆನಿಸಿದಂತೆ ಬದಲಿಸಿಕೊಳ್ಳುವ ಸ್ವಾತಂತ್ರ್ಯವಿದೆ.

"ಯಾವುದೇ ಶಿಲ್ಪ ಮತ್ತು ಚಿತ್ರ ನಿರ್ಮಾಣದಲ್ಲಿ ಮೂಲವಸ್ತುವನ್ನು ಯಥಾವತ್ತಾಗಿ ಚಿತ್ರಿಸುವುದು ಮಾತ್ರವೇ ಸತ್ಯವನ್ನು ನಿರೂಪಿಸುವ ಲಕ್ಷಣವಲ್ಲ. ವಿಶಿಷ್ಟವಾದ ಚಿನ್ಹೆ ಸಂಕೇತಗಳ ಮೂಲಕ ಆಕಾರ ಮತ್ತು ಬಣ್ಣಗಳ ಪ್ರಭಾವದಿಂದ ಕಲಾಕೃತಿಯನ್ನು ರಚಿಸಿ, ಆ ಮೂಲಕ ಪ್ರೇಕ್ಷಕನ ಮನಸ್ಸಿನಲ್ಲಿ ಅಪೇಕ್ಷಿತ ಭಾವನೆಗಳನ್ನು ಜಾಗ್ರತಗೊಳಿಸಬೇಕು. ಮತ್ತು ಇದರಿಂದ ಶೃಂಗಾರ, ಹಾಸ್ಯ, ಕರುಣ ಮುಂತಾದ ನವರಸಗಳ ಅನುಭವವನ್ನುಂಟು ಮಾಡಬೇಕು" ಈ ಹಿನ್ನೆಲೆಯಲ್ಲಿ ತಮ್ಮ ಕಲಾಕೃತಿಗಳಲ್ಲಿ ಚಿನ್ಹೆಗಳನ್ನು, ಸಂಕೇತಾತ್ಮಕ, ಸಾಂಕೇತಿಕ ವರ್ಣಗಳನ್ನು ಬಳಸಿಕೊಂಡು ಆಧುನಿಕ ಕಲಾಕೃತಿಗಳನ್ನು ರಚಿಸಿದ್ದಾರೆ.

"ಸಂಯೋಜನೆ ಎಲ್ಲ ಪ್ರಕಾರಗಳಲ್ಲಿರಬೇಕು, ಸಂಯೋಜನೆ ಇಲ್ಲದಿದ್ದರೆ ಕಲಾಕೃತಿಯೊಂದರ ರೂಪಾಂತರಗಳಲ್ಲಿ ಸಾಮ್ಯತೆ ಕಂಡು ಬರುವುದಿಲ್ಲವೆಂಬುದು ದಿಟ. ಸಂಯೋಜನೆ ಎಂಬ ಪರಿಕಲ್ಪನೆ

---

೭. ರವೀಂದ್ರ ಎಸ್. ಕಮ್ಮಾರ (ಸಂ) ವಿ. ಬಿ. ಹಿರೇಗೌಡರ ಜೀವನ ಮತ್ತು ಕಲಾಕೃತಿಗಳು, ಪಿಎಚ್.ಡಿ. ಪ್ರಬಂಧ, ಪು.೧೩೮.



ಚಿತ್ರ ೧. ನಾಗಪೂಜೆ



ಚಿತ್ರ ೨. ವಿಜಯೋತ್ಸವ

ಅನಾದಿ ಕಾಲದಿಂದಲೂ ಕಲೆಗಳಲ್ಲಿ ರೂಢಿಸಿಕೊಂಡು ಬಂದ ಒಂದು ಕಲಾ ನಿಯಮದ ಶೀರ್ಷಿಕೆ. ಅದೇ ಶೀರ್ಷಿಕೆಯನ್ನು ನಮ್ಮ ಅಕಾಡೆಮಿಕ್ ಸಂದರ್ಭದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬಳಸಿಕೊಂಡಿರುವದರಿಂದ ಕ್ರಮೇಣ ತನ್ನ ಅರ್ಥ ಸಾಧ್ಯತೆಯನ್ನು ಆಧುನಿಕ ಕಲಾಪ್ರಕಾರದತ್ತ ವಿಸ್ತರಿಸಿಕೊಂಡಿದೆ."[೮]

"ಹೀಗೆ ಆಧುನಿಕ ಕಲೆಯಲ್ಲಿ ಸಂಯೋಜನಾ ಚಿತ್ರಗಳು ನೋಡುಗರನ್ನು ದಿಗ್ಭ್ರಮೆಗೊಳಿಸುವಂತಹ, ವಿಸ್ಮಯಗೊಳಿಸುವಂತಹ, ನೂರಾರು ಪ್ರಯೋಗಗಳು ಈ ಶತಮಾನದಲ್ಲಿ ನಡೆದಿವೆ. ಈ ಬಗೆಯ ಕೆಲವು ಪ್ರಯೋಗಗಳು ಸಾಹಿತ್ಯ, ಸಂಗೀತ, ನಾಟಕ, ನೃತ್ಯ, ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ನಡೆದಿವೆಯಾದರೂ ವೈವಿಧ್ಯ ವೈರುಧ್ಯದ ಪ್ರಯೋಗಗಳು ಚಿತ್ರಕಲೆಯನ್ನು ಬಿಟ್ಟು ಉಳಿದ ಯಾವ ಕ್ಷೇತ್ರಗಳಲ್ಲಿ ನಡೆದಿಲ್ಲವೆಂದು ಹೇಳಬಹುದು."[೯] ಇಲ್ಲಿಯ ಆಧುನಿಕತೆ ಹೃದಯಕ್ಕಿಂತಲೂ ಮೆದುಳಿಗೆ ಕಸರತ್ತು ನೀಡುವ ಆಶಯವನ್ನು ಹೊಂದಿದೆ. ಹೀಗೆ ಹೊಸತನದ ಹುಡುಕಾಟದಲ್ಲಿ ಪಾಟೀಲರು ಹಲವು ಬಗೆ ವಿಶಿಷ್ಟ ಪ್ರಯೋಗಗಳನ್ನು ಮಾಡಿ, ಸಂಯೋಜನೆಯ ಮೂಲ ತತ್ವಗಳಾದ ರೇಖೆ, ಆಕೃತಿ, ವರ್ಣ, ವಿನ್ಯಾಸ, ಸ್ಥಳಾವಕಾಶಗಳನ್ನು ಬಳಸಿ ಚಿತ್ರಕಲಾಕೃತಿ ರಚನೆ ಮಾಡಿದ್ದಾರೆ.

ಚಿತ್ರ ೧. ನಾಗಪೂಜೆ :

ಈ ಕಲಾಕೃತಿಯು ನಾಗಪೂಜೆಗೆ ಸಂಬಂಧಿಸಿದ್ದು, ಇಲ್ಲಿ ನಾಗಪಂಚಮಿಯ ಪರಿಕಲ್ಪನೆಯನ್ನು ಅಭಿವ್ಯಕ್ತ ಪಡಿಸಿದ್ದಾರೆ. 'ಕಲ್ಲನಾಗರ ಕಂಡರೆ ಹಾಲನೆರೆವರಯ್ಯಾ, ದಿಟನಾಗರವ ಕಂಡರೆ ಕೋಲಿನಿಂದ ಹೊಡೆಯೆಂಬರಯ್ಯ' ಎಂಬ ವಚನ ಆಧಾರಿತ ಈ ಚಿತ್ರದಲ್ಲಿ ಮನುಷ್ಯನ ದೈವಭಕ್ತಿ ಹಾಗೂ ನಂಬಿಕೆಗಳನ್ನು ಪಾಟೀಲರು ನಾಗಪೂಜೆಯ ಕೃತಿಯ ಮೂಲಕ ತೋರಿಸಿದ್ದಾರೆ. ಚಿತ್ರದಲ್ಲಿ ಕಲ್ಲಿನ ನಾಗರ ಮೂರ್ತಿಗಳು ದೇವಸ್ಥಾನದ ಕಲ್ಪನೆ, ನಡುವೆ ಮನುಷ್ಯಕೃತಿಗಳ ಸಂಯೋಜನೆಗಳು ಸಾಂಕೇತಿಕವಾಗಿ ಸೃಜನಗೊಂಡಿವೆ. ಹಿನ್ನೆಲೆಯ ಆಕಾಶ ಹಾಗೂ ಸೂರ್ಯನ ಚಿತ್ರಗಳು ಪಾರದರ್ಶಕವರ್ಣವನ್ನು ಹೊಂದಿವೆ. ಚಿತ್ರದಲ್ಲಿ ವರ್ಣಗಾರಿಕೆಯು ವಿಶೇಷವಾಗಿ ಪ್ರಯೋಗಗೊಳ್ಳದಿದ್ದರು ಸಾಂಕೇತಿಕ ಪರಿಕಲ್ಪನೆ ಅಭಿವ್ಯಕ್ತಗೊಂಡಿದೆ. ತಿಳಿವರ್ಣಗಳ ಸಂಯೋಜನೆ ಇಲ್ಲಿ ಪ್ರಕಟಗೊಂಡಿದೆ. ಹಾಗೆಯೇ ಈ ಚಿತ್ರದಲ್ಲಿ ಜನಪದ ಅಂಶಗಳು ಪ್ರತಿಬಿಂಬಿತಗೊಂಡಿವೆ.

---

೮. ರವೀಂದ್ರ ಎಸ್. ಕಮ್ಮಾರ (ಸಂ) ವಿ. ಬಿ. ಹಿರೇಗೌಡರ ಜೀವನ ಮತ್ತು ಕಲಾಕೃತಿಗಳು, ಪಿಎಚ್.ಡಿ. ಪ್ರಬಂಧ, ಪು. ೧೩೯.

೯. ಚಿ. ಸು. ಕೃಷ್ಣ ಸೆಟ್ಟಿ (ಸಂ) ಚಿತ್ರ ಚಿತ್ತ, ಪು. ೧೧೯.



ಚಿತ್ರ ೩ ಸಂಯೋಜನೆ



ಚಿತ್ರ ೪. ಸಮೂಹ ನೃತ್ಯ

ಸಂಯೋಜನಾ ಚಿತ್ರಗಳು (ಜಲವರ್ಣ ಮಾಧ್ಯಮ)

ಚಿತ್ರ ೨. ವಿಜಯೋತ್ಸವ :

ಈ ಚಿತ್ರವು ಮಹಾರಾಷ್ಟ್ರದ ವಾರ್ಲಿ ಜನಪದ ಕಲೆಯ ಪ್ರಭಾವದಿಂದ ಬಿಂಬಿತವಾಗಿದ್ದು, ಜನ ಸಮೂಹದ ಹರವು ಬಹು ಆಕರ್ಷಕವಾಗಿ ಇಲ್ಲಿ ಕಲ್ಪಿತಗೊಂಡಿದೆ. ಆಕೃತಿಗಳಲ್ಲಿ ಉತ್ಸಾಹದ ಚಿಲುಮೆಯು ಎದ್ದುತೋರುತ್ತದೆ. ರೇಖೆಗಳ ಚಲನೆಯಲ್ಲಿ ಜೀವಂತಿಕೆಯಿದೆ. ಚಿತ್ರದಲ್ಲಿ ಭೂದೃಶ್ಯ ಹಾಗೂ ಆಕಾಶದ ಪರಿಕಲ್ಪನೆಯು ಸೃಜನಾತ್ಮಕ ಪ್ರಯೋಗದಿಂದ ಕೂಡಿದೆ. ಕೆಂಪು, ನೀಲಿ, ಗುಲಾಬಿ, ಹಸಿರು, ಬಿಳಿವರ್ಣಗಳ ಪಾರದರ್ಶಕತೆಯ ತಂತ್ರ, ಚಿತ್ರದ ಹಿನ್ನಲೆಯು ಸೂರ್ಯೋದಯದ ಸಾಂಕೇತಿಕ ಅಭಿವ್ಯಕ್ತಿ ಜನರ ವಿಜಯೋತ್ಸವವನ್ನು ಪ್ರತಿಬಿಂಬಿಸುತ್ತದೆ. ಚಿತ್ರದಲ್ಲಿ ವರ್ಣಗಳ ಪ್ರಯೋಗಗಳನ್ನು ವ್ಯಕ್ತವಾಗಿವೆ. ಕಲಾಕೃತಿ ಪಾರದರ್ಶಕತೆಯಿಂದ ಸುಂದರವಾಗಿ ರೂಪುಗೊಂಡಿದೆ.

ಚಿತ್ರ ೩. ಸಂಯೋಜನೆ :

ಈ ಚಿತ್ರದಲ್ಲಿ ಸಾಕಷ್ಟು ಸಂಖ್ಯೆಗಳಲ್ಲಿ ಆಕೃತಿಗಳನ್ನು ಸಂಯೋಜಿಸಿದ್ದು, ಆಕೃತಿಗಳ ಸಮೂಹ ದೃಷ್ಟಿಯು ಅವರ ಶಕ್ತಿ ಹಾಗೂ ಒಗ್ಗಟ್ಟನ್ನು ಪ್ರತಿನಿಧಿಸುತ್ತದೆ. ಮನುಷ್ಯ ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಹಿಂದಿನಿಂದಲೂ ಹೋರಾಟ ಮಾಡುತ್ತಲೇ ಬಂದಿದ್ದಾನೆ. ಅಂಥ ಹೋರಾಟದ ಅಂಶಗಳನ್ನು ಪಾಟೀಲರು ಈ ಕೃತಿಯಲ್ಲಿ ತರಲು ಪ್ರಯತ್ನಿಸಿದ್ದಾರೆ. ಈ ಚಿತ್ರದಲ್ಲಿ ಪ್ರಯೋಗಗೊಂಡಿರುವ ರೇಖೆಗಳು ಅತ್ಯಂತ ಚಲನಾತ್ಮಕವಾಗಿ ಮೂಡಿಬಂದಿವೆ. ಆಕೃತಿಗಳ ಉಡುಪುಗಳು ಅಲಂಕಾರವಾಗಿ ರೂಪಗೊಂಡಿದ್ದು ಜನಪದೀಯ ಚಿತ್ತಾರಗಳು ಪ್ರತಿಬಿಂಬಿತವಾಗಿವೆ. ಇಲ್ಲಿ ಕೆಂಪು, ನೀಲಿ, ಹಸಿರು ವರ್ಣಗಳ ಪಾರದರ್ಶಕತೆಯ ಪ್ರಯೋಗ ವ್ಯಕ್ತಗೊಂಡಿದೆ. ಚಿತ್ರದಲ್ಲಿ ಸ್ಥಳಾವಕಾಶ, ವರ್ಣಸಂಯೋಜನೆ, ವಿಷಯ ನಿರೂಪಣೆ ಹಾಗೂ ಹಿನ್ನಲೆಯನ್ನು ಅತ್ಯಂತ ಸೃಜನಾತ್ಮಕ ಪ್ರಜ್ಞೆಯಿಂದ ಸಂಯೋಜನ ಮಾಡಿರುವುದು ಗಮನಾರ್ಹ ಅಂಶವಾಗಿದೆ.

ಚಿತ್ರ ೪. ಸಮೂಹ ನೃತ್ಯ :

ಈ ಚಿತ್ರದಲ್ಲಿ ಸಾಮೂಹಿಕ ನೃತ್ಯ ತಂಡವನ್ನು ಕಾಣಬಹುದು. ಜನಪದ ಕಲಾ ನೃತ್ಯದ ಒಂದು ಭಾಗವಾಗಿ ಆಕೃತಿಗಳ ಚಲನೆ ಅತ್ಯಂತ ಆಕರ್ಷಕವಾಗಿ ಇಲ್ಲಿ ಮೂಡಿಬಂದಿದೆ. ಪ್ರತಿಯೊಂದು ಆಕೃತಿಯ ನೃತ್ಯಭಂಗಿಗಳು ಜೀವಂತಿಕೆಯಿಂದ ಪ್ರಯೋಗಗೊಂಡಿವೆ. ಆಕೃತಿಗಳ ಉಡುಪುಗಳಲ್ಲಿ



ಚಿತ್ರ ೫. ಉತ್ಸವ



ಚಿತ್ರ ೬. ಗ್ರಾಮೀಣ ನೃತ್ಯ



ಚಿತ್ರ ೬ ಗ್ರಾಮೀಣ ನೃತ್ಯ

ಜನಪದ ಚಿತ್ತಾರಗಳು ಅಭಿವ್ಯಕ್ತಗೊಂಡಿದ್ದು, ಜಲವರ್ಣದ ಸೂಕ್ಷ್ಮ ವಿವರಣೆ ಪ್ರಕಟಗೊಂಡಿದೆ. ಹಿನ್ನಲೆಯ ರಂಗಪರದೆಯ ವಿನ್ಯಾಸವು ಭವ್ಯಸ್ವರೂಪದ ಕಲ್ಪನೆಯನ್ನು ಹೊಂದಿದೆ. ರಂಗಸಜ್ಜಿಕೆಯು ಪ್ರಕಾಶಯುತವಾಗಿ ಮೂಡಿಬಂದಿದ್ದು ನೋಡುಗರನ್ನು ಮನ ತುಂಬುವಂತೆ ಪಾಟೀಲರ ಕುಂಚದಲ್ಲಿ ಕಲ್ಪಿತಗೊಂಡಿದೆ. ಚಿತ್ರವು ವರ್ಣಸಂಯೋಜನೆ, ಆಕೃತಿಗಳ ಸಂಯೋಜನೆ ಹಾಗೂ ಭಾವನಾತ್ಮಕ ಬಂಗಿಯಲ್ಲಿ ಯಥಾದೃಷ್ಠಿರೂಪವು ಸೃಜನಾತ್ಮಕವಾಗಿ ವಿನ್ಯಾಸಗೊಂಡಿದೆ.

ಚಿತ್ರ ೫. ಉತ್ಸವ :

ಈ ಚಿತ್ರದಲ್ಲಿ ಗ್ರಾಮೀಣ ಜನರ ಉತ್ಸವವನ್ನು ಕಾಣಬಹುದು. ಇಲ್ಲಿ ಸಂಯೋಜಿಸಲಾದ ಚಕ್ಕಡಿ ಎತ್ತುಗಳು, ಬಾವುಟಗಳು ಆ ಜನರ ಉತ್ಸಾಹವನ್ನು ಪ್ರತಿನಿಧಿಸುತ್ತದೆ. ಸೃಜನಾತ್ಮಕ ರೇಖಾಕೃತಿಗಳಿಂದ ಕೂಡಿದ ಈ ಚಿತ್ರ ಸಮೂಹವು ಜನಪದರ ನಿತ್ಯ ಬದುಕಿನ ಪ್ರಸಂಗಗಳನ್ನು ಪಾಟೀಲರು ಇಲ್ಲಿ ಸಂಯೋಜಿಸಿದ್ದಾರೆ. ಚಿತ್ರದ ಹಿನ್ನಲೆ ಹಾಗೂ ಮುನ್ನಲೆಯನ್ನು ಅಮೂರ್ತ ರೂಪದಲ್ಲಿ ಚಿತ್ರಿಸಿದ್ದು ತ್ರಿಆಯಾಮದ ಪರಿಕಲ್ಪನೆಯನ್ನು ವರ್ಣಗಳ ಮೂಲಕ ಪ್ರಕಟಪಡಿಸಲು ಯತ್ನಿಸಿದ್ದಾರೆ. ಚಿತ್ರದಲ್ಲಿ ನೀಲಿ, ಹಳದಿ, ಕಂದು, ಕೆಂಪು, ಹಸಿರು ವರ್ಣಗಳ ಪಾರದರ್ಶಕ ವಿವರಣೆಗಳು ಮೂಡಿಬಂದಿದೆ. ರೇಖೆ ಹಾಗೂ ವರ್ಣಗಳು ಕಲಾವಿದನ ಸೃಜನಾತ್ಮಕ ಮನೋಸ್ಥಿತಿಯನ್ನು ಪ್ರಕಟ ಪಡಿಸುವಲ್ಲಿ ಯಶಸ್ವಿಯಾಗಿವೆ.

ಚಿತ್ರ ೬. ಗ್ರಾಮೀಣ ನೃತ್ಯ :

ಇಲ್ಲಿ ಸೃಜನಗೊಂಡಿರುವ ನೃತ್ಯತಂಡ, ಹಸಿರು ತುಂಬಿದ ಬೆಟ್ಟ, ಕೆಂಪು ಮರಗಳು, ಪುಟ್ಟಕೆರೆ, ಎತ್ತರವಾದ ಗೋಪುರ ಕಲ್ಲಿನ ಬಂಡೆಗಳು, ಬಯಲು ಜಾಗ ಬೆಟ್ಟದ ತುದಿಯಲ್ಲಿರುವ ವಿರಳ ಮನೆಗಳು, ದಟ್ಟ ನೀಲವರ್ಣದಿಂದ ಕೂಡಿದ ಆಕಾಶವು ಕರಾವಳಿಯ ಪರಿಸರವನ್ನು ನೆನಪಿಸುತ್ತದೆ. ಅಲ್ಲಿನ ಜನರ ಹಬ್ಬದ ಉತ್ಸವವನ್ನು ಕಲ್ಪಿಸುತ್ತದೆ. ಈ ಚಿತ್ರವು ಉತ್ತಮ ಸಂಯೋಜನೆಯಿಂದ ಅಭಿವ್ಯಕ್ತಗೊಂಡಿದೆ. ಚಿಕ್ಕ ಚಿಕ್ಕ ಕುಂಚದ ತೇಪೆಗಳು ಆಕೃತಿಗಳ ಮೈವಳಿಕೆಯೂ ತ್ರಿಆಯಾಮ ಕಲ್ಪನೆಯನ್ನು ವ್ಯಕ್ತಗೊಳಿಸುತ್ತದೆ. ಚಿತ್ರವು ರೇಖೆ ವರ್ಣ ಹಾಗೂ ಭಾವ ನಿರೂಪಣೆಯಲ್ಲಿ ಅನನ್ಯತೆಯನ್ನು ಹೊಂದಿದೆ.




ಚಿತ್ರ ೭ ನೃತ್ಯ ಜೋಡಿ



ಚಿತ್ರ ೮. ದೇವತಾ ಆರಾಧನೆ



ಚಿತ್ರ ೯. ಮೀನುಗೊಳ





ಚಿತ್ರ ೭. ನೃತ್ಯ ಜೋಡಿ :

ಈ ಚಿತ್ರದಲ್ಲಿ ಇಬ್ಬರು ಮಹಿಳೆಯರು ನೃತ್ಯ ಮಾಡುತ್ತಿರುವ ದೃಶ್ಯ ಸೃಷ್ಟಿಗೊಂಡಿದ್ದು, ಜಾನಪದ ರೇಖಾವಿನ್ಯಾಸ ಹೊಂದಿದೆ. ಆಕೃತಿಗಳು ಚಲನಯುಕ್ತವಾಗಿವೆ. ಚಿತ್ರದ ಹಿನ್ನಲೆಯಲ್ಲಿ ಜೋಪಡಿಯ ವಿನ್ಯಾಸವನ್ನು ಸಂಯೋಜಿಸಿದ್ದು, ಹಸಿರು ಬಣ್ಣಗಳ ವಿನ್ಯಾಸವು ಆವರಿಸಿಕೊಂಡಿದೆ. ಪ್ರಕೃತಿಯ ಹಸಿರು ಕಲಾವಿದರ ಮೇಲೆ ಅತ್ಯಂತ ಪ್ರಭಾವಿತಗೊಂಡಂತೆ ತೋರುತ್ತದೆ. ಯಾಕೆಂದರೆ ಇವರ ಬಹುತೇಕ ಕೃತಿಗಳಲ್ಲಿ ಹಸಿರುವರ್ಣವು ಪ್ರಧಾನವಾಗಿ ಅಭಿವ್ಯಕ್ತಗೊಂಡಿದೆ. ಈ ಚಿತ್ರದಲ್ಲಿ ಸಹ ಆಕೃತಿಗಳ ಸಂಯೋಜನೆ ಹಾಗೂ ಹಿನ್ನಲೆಯ ವಸ್ತುಗಳ ಸಂಯೋಜನೆಯ ಸೃಜನಾತ್ಮಕವಾಗಿ ಮೂಡಿಬಂದಿದ್ದು, ಚಿತ್ರದಲ್ಲಿ ಜನಪದಿಯ ಅಂಶಗಳು ಒಡಮೂಡಿವೆ. ಪಾರದರ್ಶಕ ಪದ್ಧತಿಯಲ್ಲಿ ಜಲವರ್ಣ ಮಾಧ್ಯಮದಿಂದ ಈ ಕೃತಿಯನ್ನು ಪೂರ್ಣಗೊಳಿಸಲಾಗಿದೆ.

ಚಿತ್ರ ೮. ದೇವತಾ ಆರಾಧನೆ :

ಈ ಚಿತ್ರದಲ್ಲಿ ದೇವತೆಯ ಸ್ತಬ್ಧ ಚಿತ್ರವನ್ನು ಮೆರವಣಿಗೆ ಮಾಡುತ್ತಿರುವ ಹಾಗೂ ಜನಪದ ನೃತ್ಯ ಪಟುಗಳು ನೃತ್ಯ ಮಾಡುತ್ತಿರುವ ಪ್ರಸಂಗವನ್ನು ಪಾಟೀಲರು ಜಲವರ್ಣ ಮಾಧ್ಯಮದಲ್ಲಿ ಸೆರೆ ಹಿಡಿದಿದ್ದಾರೆ. ಆ ಕೃತಿಗಳ ವಿನ್ಯಾಸದಲ್ಲಿ ಜೀವಂತಿಕೆ ಅಭಿವ್ಯಕ್ತಗೊಂಡಿದೆ. ಜೊತೆಗೆ ಭಾವನಾತ್ಮಕ ನಿರೂಪಣೆಯು ಪ್ರಕಟಗೊಂಡಿದೆ. ಚಿತ್ರದಲ್ಲಿ ಕೆಂಪು, ಹಳದಿ, ಹಸಿರು, ನೀಲಿ ವರ್ಣಗಳ ಬಳಕೆ ಪ್ರಧಾನವಾಗಿ ಮೂಡಿಬಂದಿದ್ದು, ಪಾರದರ್ಶಕ ತಂತ್ರಗಾರಿಕೆಯು ಎದ್ದು ತೋರುತ್ತದೆ.

ಚಿತ್ರ ೯. ಮೀನುಗೊಳ :

ಈ ಚಿತ್ರದಲ್ಲಿ ವೈವಿಧ್ಯಮಯ ಮೀನುಗಳು ಬೆಟ್ಟ ಗುಡ್ಡಗಳು, ನದಿ ಸರೋವರಗಳು, ಚಿಕ್ಕ ಚಿಕ್ಕ ಹಸಿರು ಪೊದೆಗಳು ಸಂಯೋಜನೆಗೊಂಡಿದ್ದು, ವಸ್ತುಗಳನ್ನು ಅತ್ಯಂತ ಸೃಜನಾತ್ಮಕವಾಗಿ ವಿನ್ಯಾಸಗೊಳಿಸಿದ್ದಾರೆ. ಇಲ್ಲಿ ಮೀನುಗಳ ಚಲನೆಯಲ್ಲಿ ಜೀವಂತಿಕೆಯನ್ನು ತರಲು ಕಲಾವಿದರು ಯತ್ನಿಸಿದ್ದಾರೆ. ಮೀನುಗಳ ಮೈವಳಿಕೆಯಲ್ಲಿ ವೈವಿಧ್ಯಮಯ ತಂತ್ರಗಾರಿಕೆಯನ್ನು ಬಳಸಿದ್ದಾರೆ. ಕೆಂಪು, ನೀಲಿ, ಗುಲಾಬಿ ವರ್ಣಗಳ ಸಂಯೋಜನೆಯ ರಚನಾತ್ಮಕವಾಗಿ ಮೂಡಿಬಂದಿದೆ. ಬೆಟ್ಟಗಳ ಸಾಲು, ಹಾಗೂ ಮಾನವಾಕೃತಿಗಳು ಭಾವಪೂರ್ಣವಾಗಿ ವ್ಯಕ್ತಗೊಂಡಿವೆ.

ಬ. ತೈಲವರ್ಣ ಮಾಧ್ಯಮದ ವರ್ಣಚಿತ್ರಗಳು:

ಹಿಂದೆ ಟೆಂಪೆರಾ ವಿಧಾನದಲ್ಲಿ ಚಿತ್ರಿಸಿದ ಚಿತ್ರಗಳ ಮೇಲೆ ಗಟ್ಟಿ ಎಣ್ಣೆ ಅಥವಾ ವಾರ್ನಿಷ್ ಅನ್ನು ಸವರಿ ಚಿತ್ರಕ್ಕೆ ಹೊಳಪು ಬರುವಂತೆ ಮಾಡುವುದಲ್ಲದೇ ಚಿತ್ರದ ರಕ್ಷಣೆಯನ್ನೂ ಮಾಡುತ್ತಿದ್ದ ಪದ್ಧತಿಯು ಬಳಕೆಯಲ್ಲಿತ್ತು. ಈ ತೈಲವರ್ಣ ಮಾಧ್ಯಮವು ವ್ಯಾನ ಆಯಿಲ್ ಸಹೋದರರು ಕಂಡು ಹಿಡಿಯುವದಕ್ಕಿಂತ ಮುಂಚಿತವಾಗಿಯೇ ಭಾರತದಲ್ಲಿ ಬಳಕೆಯಲ್ಲಿದ್ದುದು ಪ್ರಾಚೀನ ಭಿತ್ತಿಚಿತ್ರಗಳಿಂದ ತಿಳಿದುಬರುತ್ತದೆ.

"೧೬ನೇ ಶತಮಾನದ ಹಿಂದಿನ ತೈಲವರ್ಣ ಚಿತ್ರಗಳು ಮರದ ಕ್ಯಾನವಾಸಗಳನ್ನು ಬಳಸಿ ಚಿತ್ರಿಸಿದವುಗಳಾಗಿದ್ದವು. ನಂತರದ ತೈಲವರ್ಣ ಚಿತ್ರಗಳು ಕ್ಯಾನವಾಸ ಬಟ್ಟೆಗಳ ಮೇಲೆ ಚಿತ್ರಿಸಿದವುಗಳಾಗಿವೆ. ೧೭ನೆಯ ಶತಮಾನದ ವಿಶ್ವವಿಖ್ಯಾತ ಚಿತ್ರಕಾರ ರೂಬೆನ್ಸ ಮರದ ಹಲಗೆಯ ಮೇಲೆ ಹೆಚ್ಚು ಒಲವು ತೋರಿಸುತ್ತಿದ್ದನಾದರೂ ಕ್ಯಾನವಾಸ ಬಟ್ಟೆಯ ಮೇಲೆಯೂ ಸಹ ಹೆಚ್ಚಿನ ಸಂಖ್ಯೆಯ ತೈಲವರ್ಣ ಚಿತ್ರಗಳನ್ನು ರಚಿಸಿದ್ದಾನೆ."[೧೦]

"ಸ್ಟ್ರೆಚರ್" ಎಂದು ಕರೆಯಲ್ಪಡುವ ಮದರ ಚೌಕಟ್ಟು (ಫ್ರೇಮ್)ಗೆ ಕ್ಯಾನವಾಸ್ ಬಟ್ಟೆಯನ್ನು ಬಿಗಿಯಾಗಿ ಬಡಿದು ಹಲಗೆಯಂತೆ ಮಾಡಿ ಅದರ ಮೇಲೆ ಚಿತ್ರ ರಚನೆಗೆ ಸಿದ್ಧಪಡಿಸಿ ತೈಲ ಮಾಧ್ಯಮದಲ್ಲಿ ವರ್ಣಚಿತ್ರಗಳನ್ನು ಚಿತ್ರಿಸಲಾಗುತ್ತದೆ. ಹೀಗೆ ಚಿತ್ರಿಸಿದ ತೈಲ ಮಾಧ್ಯಮದ ವರ್ಣಗಳ ಉಜ್ವಲತೆಯನ್ನು ಬಟ್ಟೆಯು ಹೀರಿಕೊಳ್ಳಬಾರದೆಂದು ಕ್ಯಾನವಾಸ್ ಬಟ್ಟೆಗೆ ಪ್ರೈಮರ್, ಪೆವಿಕಾಲ್‌ಗಳನ್ನು ಪ್ರಥಮ ಲೇಪನಕ್ಕಾಗಿ ಉಪಯೋಗಿಸಲಾಗುತ್ತದೆ.

"ತೈಲವರ್ಣಗಳ ಬಳಕೆಯು ಕಾಲಮಾನಕ್ಕೆ ತಕ್ಕಂತೆ ಕಲಾವಿದನಿಂದ ಕಲಾವಿದನಿಗೆ ಬದಲಾವಣೆಗಳಾಗಿರುವುದನ್ನು ಕಂಡಿದ್ದೇವೆ. ವೆಲಾತ್ಕ್ ಮತ್ತು ಗೆನ್ಸಬರೋ ಎಂಬ ಕಲಾವಿದರು ತೈಲವರ್ಣಗಳನ್ನು ಸಹ ಜಲವರ್ಣಗಳಂತೆ ನೀರಿನಲ್ಲಿ ಈಜುತ್ತಿರುವಂತೆ ಬಳಸಿರುವುದು ಕಂಡುಬರುತ್ತದೆ. ಈ ರೀತಿಯ ವರ್ಣಲೇಪನವನ್ನು ಮೆರಗು ಇಲ್ಲವೇ ಗ್ಲೇಜ (Glaze) ಎಂದು ಕರೆಯುತ್ತಾರೆ. ಇನ್ನೊಬ್ಬ ವಿಶ್ವ ವಿಖ್ಯಾತ ಡಚ್ ಕಲಾವಿದ ರೆಂಬ್ರಾಂಟ ತೈಲವರ್ಣ ಚಿತ್ರಣದಲ್ಲಿ ತೈಲವರ್ಣಕ್ಕೆ ಬಳಸುವ ತೈಲವನ್ನು ಅಲ್ಪ ಪ್ರಮಾಣದಲ್ಲಿ ಅಥವಾ ತೈಲವಿಲ್ಲದೆಯೋ ನೇರವಾಗಿ ಬಣ್ಣಗಳನ್ನು ಬಳಸುತ್ತಿದ್ದನು. ಈ ವಿಧಾನವನ್ನು ಇಂಪ್ಯಾಸ್ಟೊ (Impasto) ವಿಧಾನ ಎಂದು ಕರೆಯುತ್ತಾರೆ.

---

೧೦. ವಿ. ಟಿ. ಕಾಳೆ, (ಸಂ), ಚಿತ್ರಕಲಾ ದರ್ಪಣ, ಪು. ೧೧೦.

ತೈಲವರ್ಣ ಚಿತ್ರಣಕ್ಕಾಗಿ ಸಾಮಾನ್ಯವಾಗಿ ಅಗಸೆ ಎಣ್ಣೆ, ಅಕ್ರೋಟ, ಮತ್ತು ನಾರಗಸೆಯ ಬೀಜಗಳಿಂದ ತಗೆದ ಎಣ್ಣೆಯನ್ನು ಮಿಶ್ರಣಕ್ಕಾಗಿ ಬಳಸುತ್ತಾರೆ."[೧೧]

ತೈಲವರ್ಣ ಚಿತ್ರಗಳು ಟೆಂಪೆರಾ ಚಿತ್ರಗಳಿಗಿಂತಲೂ ವಾಸ್ತವಕ್ಕೆ ಹೆಚ್ಚು ಹತ್ತಿರವಾಗಿವೆ. ಕಾರಣ ತೈಲವರ್ಣ ಮಾಧ್ಯಮದಲ್ಲಿ ತಿದ್ದುಪಡಿಗೆ ಸಂಕಷ್ಟು ಅವಕಾಶಗಳು ಇರುತ್ತವೆ. "ತೈಲವರ್ಣ ಮಾಧ್ಯಮವು ನಮ್ಮ ಭಾರತಕ್ಕೆ ಬಂದುದು ಮಧ್ಯಯುಗದಿಂದಲೇ ಎಂದು ಹೇಳಬಹುದು. ತೈಲಚಿತ್ರ ರಚನೆಯ ಪ್ರಾರಂಭದಲ್ಲಿ ವರ್ಣದ್ರವ್ಯದ ಪುಡಿಯನ್ನು ಅಮೃತಶಿಲೆಯ ಮೇಲೆ ಅರೆದು ಅದಕ್ಕೆ ಸ್ವಲ್ಪ ತೈಲವನ್ನು ಸೇರಿಸಿ ತಮಗೆ ಚಿತ್ರ ರಚನೆಗೆ ಬೇಕಾದ ಪ್ರಮುಖ ವರ್ಣಗಳನ್ನು ತಯಾರಿಸಿಕೊಳ್ಳುತ್ತಿದ್ದರು."[೧೨] ಇಂದು ತೈಲವರ್ಣಗಳು ವಿವಿಧ ವರ್ಣಛಾಯೆ (Colour Shade)ಗಳು ಪೂರ್ಣ ಸಿದ್ಧಗೊಂಡು (Readymade) ಮಾರುಕಟ್ಟೆಯಲ್ಲಿ ದೊರೆಯುತ್ತವೆ. ಬಣ್ಣವನ್ನು ತೆಳುಮಾಡಿಕೊಳ್ಳಲು ಟರ್ಪೆಂಟೈನ್ ಮತ್ತು ಲಿನ್ಸಿಡ್ ತೈಲವನ್ನು ಉಪಯೋಗಿಸುತ್ತಾರೆ. ತೈಲವರ್ಣವು ಜಲವರ್ಣ ಮಾಧ್ಯಮದಂತೆ ಬೇಗ ಒಣಗದೆ ನಿಧಾನಗತಿಯಲ್ಲಿ ಆರಿಕೊಳ್ಳುತ್ತದೆ. ಹಾಗೂ ಇದರ ಇನ್ನೊಂದು ವಿಶೇಷತೆಯೆಂದರೆ ಚಿತ್ರ ರಚನೆಯಲ್ಲಿ ಕಲಾವಿದ ತನಗೆ ಬೇಡವಾದ ವರ್ಣದ ಮೇಲೆ ಬೇರೆ ವರ್ಣವನ್ನು ಉಪಯೋಗಿಸಬಹುದು ಹಾಗೂ ತೈಲವರ್ಣವನ್ನು ತೆಳುವಾಗಿಯೂ ಮಂದವಾಗಿಯೂ ವರ್ಣಚಿತ್ರ ರಚನೆಯಲ್ಲಿ ಬಳಸಬಹುದು. ತೈಲವರ್ಣಗಳಿಂದ ರಚಿಸಿದ ವರ್ಣಚಿತ್ರಗಳು ಬಿಸಿಲು, ಮಳೆ, ಗಾಳಿಗೆ ಸೋಕಂದೆ (ಹಾಳಾಗದೆ) ದೀರ್ಘಕಾಲದವರೆಗೆ ಇರುತ್ತದೆ. "ಭಾರತೀಯ ಕಲಾವಿದರಲ್ಲಿ ರವಿವರ್ಮನಿಂದ ತೈಲ ಚಿತ್ರರಚನೆ ವ್ಯಾಪಕವಾಗಿ ಆರಂಭಗೊಂಡಿತೆಂದು ಹೇಳಬಹುದು."[೧೩]

ಹೀಗೆ ತೈಲ ಮಾಧ್ಯಮದ ವರ್ಣ ಚಿತ್ರಗಳನ್ನು ರಚಿಸುವ ಪದ್ಧತಿ ದೇಶದೂದ್ದಕ್ಕೂ ವಿಸ್ತರಿಸಿ ಈ ಮಾಧ್ಯಮವನ್ನು ಪ್ರಾಯೋಗಿಕವಾಗಿ ಅಭ್ಯಸಿಸಿ ಸಾಕಷ್ಟು ಹಿರಿಯ ಕಲಾವಿದರುಗಳು ಚಿತ್ರ ರಚಿಸತೊಡಗಿದರು. ಶಂಕರ ಪಾಟೀಲರು ಸಹ ತೈಲವರ್ಣ ಮಾಧ್ಯಮವನ್ನು ಬಳಸಿ ಭಾವಚಿತ್ರ, ಸಂಯೋಜನಾಚಿತ್ರ, ಪ್ರಕೃತಿ ಚಿತ್ರ, ಸ್ಥಿರರೂಪ ಚಿತ್ರಗಳನ್ನು ರಚಿಸಿದ್ದು, ತೈಲವರ್ಣದ ಭಾವಚಿತ್ರಗಳನ್ನು ಈ ಕೆಳಗೆ ಅಧ್ಯಯನಕ್ಕೆ ಒಳಪಡಿಸಲಾಗಿದೆ.

---

೧೧. ವಿ. ಟಿ. ಕಾಳೆ, (ಸಂ), ಚಿತ್ರಕಲಾ ದರ್ಪಣ, ಪು. ೧೧೧.
೧೨. ಪಿ. ಆರ್. ತಿಪ್ಪೇಸ್ವಾಮಿ (ಸಂ) ಚಿತ್ರಕಲಾ ಪ್ರಪಂಚ, ಪು. ೧೭೬
೧೩. ಡಾ. ಲಕ್ಷ್ಮೀದೇವಿ ಗವಾಯಿ, (ಸಂ) ಕಲಾವಿದ ಎಂ. ಎ. ಚಟ್ಟಿಯವರ ಜೀವನ ಮತ್ತು ಕಲಾಕೃತಿಗಳು, ಪು. .೨೬೨.



ಚಿತ್ರ - ೧ ಭಾವಚಿತ್ರ

೧. ಭಾವಚಿತ್ರ :

ಪಾಟೀಲರು ತಮ್ಮ ಕ್ಯಾಮರಾದಿಂದ ತೆಗೆದ ಪ್ರಮುಖ ಗಣ್ಯವ್ಯಕ್ತಿಗಳ ಛಾಯಾಚಿತ್ರಣಗಳನ್ನು ತೆಗೆದು ಅದನ್ನು ಮತ್ತೆ ತಮ್ಮ ಕ್ಯಾಸವಾಸಿನ ಮೇಲೆ ತೈಲವರ್ಣ ಭಾವಚಿತ್ರಗಳನ್ನಾಗಿ ಮರು ಸೃಷ್ಟಿಸಿದ್ದಾರೆ.

"ಸಾಹಿತಿಯೇ ಆಗಲಿ ಕಲಾವಿದನೆ ಆಗಲಿ ಹಲವು ಮಾಧ್ಯಮಗಳಲ್ಲಿ ತನ್ನನ್ನು ತೊಡಗಿಸಿಕೊಂಡರೂ ಅವರ ಪ್ರತಿಭೆ ಒಂದೇ ಕ್ಷೇತ್ರದಲ್ಲಿ ಇನ್ನುಳಿದ ಕ್ಷೇತ್ರಗಳಿಗಿಂತ ಹೆಚ್ಚಾಗಿ ಅರಳಿರುತ್ತದೆ"[೧೪] ಎಂಬ ವಾಕ್ಯ ಸೂಕ್ತವಾಗಿದ್ದರೂ ಶ್ರೀಯುತ ಶಂಕರ ಪಾಟೀಲರಿಗೆ ಈ ಮಾತು ಅನ್ವಯಿಸುವುದಿಲ್ಲ. ಕಾರಣ ಪಾಟೀಲರು ಕಲಾಕ್ಷೇತ್ರದಲ್ಲಿ ಚಿತ್ರಕಲಾವಿದರಾಗಿ, ರೇಖಾಚಿತ್ರಕಾರರಾಗಿ, ಛಾಯಾಚಿತ್ರಕಾರರಾಗಿ, ಕಲಾವಿಮರ್ಶಕರಾಗಿ, ಕಲಾ ಸಾಹಿತಿಯಾಗಿ, ಕವಿಯಾಗಿ ಇನ್ನಿತರ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿ ತಮ್ಮನ್ನು ಸಮರ್ಥವಾಗಿ ಗುರುತಿಸಿಕೊಂಡಿದ್ದಾರೆ.

ಚಿತ್ರ ೧. ಬಾಲಗಂಗಾಧರ ತಿಲಕ : (ತೈಲವರ್ಣ)

ಲೋಕಮಾನ್ಯ ಬಾಲಗಂಗಾಧರನಾಥ ತಿಲಕ ಭಾರತಕ್ಕೆ ಸ್ವಾತಂತ್ರ್ಯ ಬರಲು ಪ್ರಮುಖವಾಗಿ ಅಂದಿನ ದಿನಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅದೇಷ್ಟೋ ಬಾರಿ ಜೈಲುವಾಸ ಅನುಭವಿಸಿದ ಅಗ್ರಗಣ್ಯ ರಾಷ್ಟ್ರನಾಯಕರಿವರು. ಇವರ ಭಾವಚಿತ್ರವನ್ನು ಛಾಯಾಚಿತ್ರಗಳನ್ನು ಅನುಕರಿಸಿ ಪಾಟೀಲರು ಚಿತ್ರಿಸಿದರೂ ಅಕಾಡೆಮಿಕ್ ಗುಣಧರ್ಮವನ್ನು ಬಣ್ಣಗಳಲ್ಲಿ ಕಾಣಬಹುದು. ಈ ಚಿತ್ರದಲ್ಲಿ ಗಾಢವಾದ ವರ್ಣಗಳನ್ನು ಬಳಸಿದ್ದರೂ, ಸಪ್ತವರ್ಣಗಳು ಬೆರೆತು ಸಮಾಗಮಗೊಂಡು ಮುಖಭಾವದಲ್ಲಿ ಶಿಸ್ತುಬದ್ಧತೆ, ಮಿಂಚಿನಂತಹ ಸ್ಪಷ್ಟತೆ ಇದ್ದು, ಭಾವ ಚಹರೆಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಶುಭ್ರ, ಹಳದಿ, ಕೆಂಪು ಬಣ್ಣಗಳನ್ನು ಬಳಸಿ ಕುಂಚದ ಬೀಸುಗಳಿಂದಲೇ ಅತ್ಯಂತ ಪರಿಣಾಮಕಾರಿಯಾಗಿ ಇವರ ವೇಷಭೂಷಣಗಳನ್ನು ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ತೆಳು ನೀಲಿ ಮಿಶ್ರಿತ ಕೆಲವು ದ್ವಿತೀಯ ದರ್ಜೆಯ ವರ್ಣಗಳನ್ನು ಬಳಸಿದ್ದಾರೆ.

ಒಟ್ಟಾರೆಯಾಗಿ ಮಂದಬೆಳಕಿನಲ್ಲಿ ರಚಿಸಿದ ತಂತ್ರಗಾರಿಕೆ ಮುಖದಲ್ಲಿಯ ಭಾವರೂಪ ಲಕ್ಷಣಗಳನ್ನು ಆಧಾರವಾಗಿಟ್ಟುಕೊಂಡು ಇನ್ನಿತರ ದೇಹದ ಭಾಗವನ್ನು ನೆರಳು ಬೆಳಕಿನಅನುಭವವನ್ನು ಈ ಚಿತ್ರದಲ್ಲಿ ಚಿತ್ರಿತಮಾಡಿದ್ದಾರೆ.

---

೧೪. ಮಹಾಲಿಂಗ ಮಾಳಗಿ (ಸಂ) ಕಲಾ ತಪಸ್ವಿ : ಎಂ. ಎ. ಚಟ್ಟಿ (ಅಭಿನಂದನಾ ಗ್ರಂಥ), ಪು. ೪೯.



ಚಿತ್ರ - ೨ ಗಾಂಧೀಜಿ

ಪೂರ್ಣ ಭಾವಚಿತ್ರ (ತೈಲವರ್ಣ)

ಚಿತ್ರ ೨. ಗಾಂಧೀಜಿ :

ಭಾರತದ ರಾಷ್ಟ್ರನಾಯಕ ಪಿತಾಮಹ ಗಾಂಧೀಜಿಯ ಈ ಕಲಾಕೃತಿಯು ಕ್ಯಾನವಾಸ್ ಮೇಲೆ ತೈಲವರ್ಣದಲ್ಲಿ ರಚನೆಯಾಗಿದ್ದು, ಸ್ವಾತಂತ್ರ್ಯದ ಹೋರಾಟದ ಸಂದರ್ಭದಲ್ಲಿ ಗಾಂಧೀಜಿಯವರು ಗ್ರಾಹಕರ ಆಂದೋಲನದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕಾರ್ಯ ನಿರ್ವಹಿಸಿ ಆಂದೋಲನವನ್ನು ಯಶಸ್ವಿಗೊಳಿಸಲು ಪ್ರಮುಖ ಪಾತ್ರವನ್ನು ವಹಿಸಿದ್ದ ಸಂದರ್ಭದ ಚಿತ್ರ. ಗಾಂಧೀಜಿಯ ಪೂರ್ಣಭಾವ ಚಿತ್ರಣವನ್ನು ಚಿತ್ರಿಸಿ ಈ ಮೂಲಕ ಅವರಿಗೆ ದೃಶ್ಯಾತ್ಮಕವಾದ ಗೌರವವನ್ನು ಸಲ್ಲಿಸಿದ್ದಾರೆ. ಈ ಕಲಾಕೃತಿಯಲ್ಲಿ ಪಾಟೀಲರು ಗಾಂಧೀಜಿಯನ್ನು ಅತ್ಯಂತ ವಿವರವಾಗಿ ಚಿತ್ರಿಸುವ ಗೋಜಿಗೆ ಹೋಗಲಿಲ್ಲವಾದರೂ, ಅವರ ದೈಹಿಕ ವ್ಯಕ್ತಿತ್ವವನ್ನು, ಸರಳ ಪಂಚೆಯೊಂದಿಗೆ ಕುಳಿತು ಚರಕ ನೆಯುತ್ತಿರುವ ದೃಶ್ಯವನ್ನು ವಿಶಿಷ್ಟ ರೀತಿಯಲ್ಲಿ ಕುಂಚದಿಂದ ವಿಶಾಲವಾದ ವರ್ಣಲೇಪನ (ಬೋಲ್ಡ್‌ಸ್ಟ್ರೋಕ್) ಬಳಕೆ ಮಾಡಿರುವುದನ್ನು ಕಾಣಬಹುದು. ಗಾಂಧೀಜಿಯ ಅಂಗಾಂಗ ರಚನೆಯಲ್ಲಿ ಸ್ಪಷ್ಟ ಗ್ರಹಿಕೆಗೆ ಒಳಗಾಗಿ ಪ್ರಬುದ್ಧವಾಗಿ ವಯೋಮಾನಕ್ಕೆ ತಕ್ಕಂತೆ ಮತ್ತು ಭಾವಕ್ಕೆ ಮಿತವಾದ ವರ್ಣಗಳನ್ನು ಏಕರೀತಿಯಲ್ಲಿ ಒಣಕುಂಚ (ಡ್ರೈಬ್ರೆಷ್‌ನ) ಶೈಲಿಯಲ್ಲಿ ಮೃಧುವಾಗಿ ತ್ರಿಮಾನ ಪದ್ಧತಿಯಲ್ಲಿ ಚಿತ್ರಿಸಿ ಶರೀರ ರಚನೆಯ ದುಂಡುತನವನ್ನು ನೆರಳು ಬೆಳಕಿನ ಹಿನ್ನೆಲೆಯಲ್ಲಿ ರಚಿಸಿದ್ದಾರೆ. ತೆಳು ನೀಲಿ ಮತ್ತು ಬಿಳಿವರ್ಣಗಳನ್ನು ಸಂಗಮಗೊಳಿಸಿ ಲೇಪಿಸಿದ್ದು, ಮೂಲ ಕಲಾಕೃತಿ ಎದ್ದು ಕಾಣಲು ಸಹಕಾರಿಯಾಗಿದೆ. ಹೀಗೆ ಈ ಕಲಾಕೃತಿಯಲ್ಲಿ ಗಾಂಧೀಜಿಯ ವ್ಯಕ್ತಿತ್ವ ನೈಜ, ಕಲಾತ್ಮಕ ಅಂಶಗಳು ಸ್ಪಷ್ಟವಾಗಿ ಮೂಡಿಬಂದಿವೆ.

ನಿಸರ್ಗ ಚಿತ್ರಣಗಳು (ಲ್ಯಾಂಡಸ್ಕೇಪ್) :

ಲ್ಯಾಂಡಸ್ಕೇಪ್ "ನಿಸರ್ಗ ಚಿತ್ರ" ಎಂಬ ಪದವನ್ನು ಚಾಂಗ ಎಂಬ ರಾಜಮನೆತನದವರಿಂದ ಬಳಸಲಾಯಿತು. ನಂತರ ಇವರ ಆಡಳಿತಾವಧಿಯಲ್ಲಿ ವಿವಿಧ ರೀತಿಯಲ್ಲಿ ಇದನ್ನು ಬಳಸಲಾಯಿತು. ಈ ಸಮಯದಲ್ಲಿ ಕನಸಿನ ತರಹ ಮಾನವಾಕೃತಿಗಳನ್ನು, ನಿಸರ್ಗವನ್ನು ತುಂಬಾ ಮಸುಕಾಗಿ ಮಂಜಿನಂತೆ ಹೊರಬರುತ್ತಿರುವಂತೆ ತೋರಿಸುತ್ತಿದ್ದರು. ಮೊದಮೊದಲು ಈ ತರಹದ ಊಹೆಗಳನ್ನು ಚೀನಾ ದೇಶದಲ್ಲಿ ಬಳಸುತ್ತಿದ್ದರು. ನಂತರ ಹದಿನಾಲ್ಕನೆ ಶತಮಾನದಲ್ಲಿ ನಿಸರ್ಗ ಚಿತ್ರಣವನ್ನು ಶೈಲೀಕೃತ ಸಂಯೋಜನಾ ಚಿತ್ರಗಳಿಗೆ ಹಿನ್ನಲೆಯಾಗಿ ಬಳಸಿಕೊಳ್ಳುತ್ತಿದ್ದುದು ತಿಳಿದುಬರುತ್ತದೆ.

"೧೬ನೇ ಶತಮಾನದಲ್ಲಿ ಯುರೋಪಿನಲ್ಲಿ ಲ್ಯಾಂಡಸ್ಕೇಪ್ (ನಿಸರ್ಗ ಚಿತ್ರಣಗಳನ್ನು) ಒಂದು ಕಲಾಪ್ರಕಾರಗಳೆಂದು ಪರಿಗಣಿಸಲ್ಪಟ್ಟಿರಲಿಲ್ಲ. ಜರ್ಮನ ಕಲಾವಿದನಾದ ಅಲ್ಪ ಡಾರ್ಫನು ಪ್ರಥಮ ನಿಸರ್ಗ ಚಿತ್ರವನ್ನು ರಚಿಸಿದ ಮೊದಲನೆಯವನೆಂದು ಗುರುತಿಸಲಾಗಿದೆ. ೧೭ನೇ ಶತಮಾನದಲ್ಲಿ ಮರ, ಬಂಡೆ, ಬೆಟ್ಟಗಳ ಸಾಂಪ್ರದಾಯಿಕ ಜೋಡನೆಯಿಂದಾಗಿ ನಿಸರ್ಗ ಚಿತ್ರಕಲೆಯು ಅಭಿವೃದ್ಧಿ ಹೊಂದಿತು. ಇದೇ ಕಾಲದ ಗುಯಿಸ್ಡೇಲ್, ಸೇಘರ್ಸ, ರೆಂಬ್ರಾಂಟ್‌ರಂತಹ ಕಲಾವಿದರು ಸಾಕಷ್ಟು ನಿಸರ್ಗ ಚಿತ್ರಣಗಳನ್ನು ರಚಿಸಿ ಪ್ರಖ್ಯಾತ ಕಲಾವಿದರಾಗಿ ಗುರುತಿಸಿಕೊಂಡಿದ್ದರು. ಇದೇ ವೇಳೆಯಲ್ಲಿ ನಿಸರ್ಗ ಚಿತ್ರಣದಲ್ಲಿ ವಿವಿಧ ಋತುಮಾನಗಳಲ್ಲಿ ಕಂಡುಬರುವ ವೈವಿಧ್ಯತೆಗಳು, ವಾಯು ಮಂಡಲದ ಬದಲಾವಣೆಗಳು, ಸೂರ್ಯನ ನೆರಳು ಬೆಳಕಿನ ಚೆಲ್ಲಾಟಗಳು ಇವೆಲ್ಲವುಗಳನ್ನು ಯಥಾವತ್ತಾಗಿ ಸ್ವಾಭಾವಿಕವಾಗಿ ಕಾಣುವಂತೆ ಚಿತ್ರಿಸುವ ಪ್ರಯತ್ನಗಳು ಸಾಕಷ್ಟು ಪ್ರಮಾಣದಲ್ಲಿ ಬೆಳೆದು ಬಂದವು. ಹೀಗೆ ನಿಸರ್ಗ ಚಿತ್ರಕಲೆ ಒಂದು ಕಲಾಪ್ರಕಾರವಾಗಿ ಬೆಳೆಯತೊಡಗಿತು. ಅನಂತರ ೧೯ನೇ ಶತಮಾನದಲ್ಲಿ ಇಂಪ್ರೆಷನಿಷ್ಟ ಮತ್ತು ಸರ್‍ರಿಯಲಿಸ್ಟ ಕಲಾ ಚಳುವಳಿಕಾರರು ತಮ್ಮದೇ ಆದ ರೀತಿಯಲ್ಲಿ ಚಿತ್ರಿಸಿದರಲ್ಲದೇ ನಿಸರ್ಗ ಚಿತ್ರಣವು ವಿಶ್ವ ವ್ಯಾಪ್ತಿಯಾಗಿ ವಿರಾಟ ಸ್ವರೂಪವನ್ನು ತಳೆಯುವಂತೆ ಬೆಳೆಯಿಸಲಾಯಿತು. ವಿದೇಶಿ ಕಲಾವಿದರಾದ ಪಿಸ್ಸಾರೋ, ಮಾನೆ, ಸೇಜಾನ್, ವ್ಯಾನ್‌ಗಾಗ್, ಮುಂತಾದವರೆಲ್ಲರೂ ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಜೊತೆಗೆ ಇವರುಗಳು ಅಗ್ರಗಣ್ಯ ನಿಸರ್ಗ ಚಿತ್ರಕಲಾವಿದರೆಂದು ಖ್ಯಾತರಾಗಿದ್ದಾರೆ."[೧೫]

ಸುಮಾರು ೧೮ನೇ ಶತಮಾನದ ಪೂರ್ವಾರ್ಧದಲ್ಲಿ ನೈಜಶೈಲಿಯ ನಿಸರ್ಗ ಚಿತ್ರಣ ಕಲಾವಿದರಲ್ಲಿ ಕೊಂಚ ಮಾನಸಿಕವಾಗಿ ಗೊಂದಲಮಯ ವಾತಾವರಣ ಸೃಷ್ಟಿಗೊಂಡಿತು. ಕಾರಣ, ಆಗ ತಾನೆ ಕ್ಯಾಮರಾ (ಫೋಟೋಗ್ರಾಫಿಯ) ಅನ್ವೇಷಣೆಗೆ ಬಂದಾಗ "ಚಿತ್ರಕಲೆಯು ತನ್ನತನವನ್ನು ಕಳೆದುಕೊಂಡು ದುರ್ಬಲವಾಯಿತು". ಈ ಸಂದರ್ಭದಲ್ಲಿ ಹೊಸತನಕ್ಕಾಗಿ ಅನ್ವೇಷಣೆ ಕಲಾವಿದರಲ್ಲಿ ಪ್ರಾರಂಭವಾಯಿತು.

ರಮ್ಯ ಪಂಥದವರು ಪೌರಾಣಿಕ ಇಲ್ಲವೇ ಚಾರಿತ್ರಿಕ ಘಟನೆಗಳಿಂದ ಆಯ್ದ ದೃಶ್ಯಗಳನ್ನು ರಚಿಸುತ್ತಿದ್ದುದರಿಂದ, ನೋಡುಗನು ತುಂಬಾ ಸರಳವಾಗಿ ಗುರುತಿಸಿ ಆನಂದಿಸುತ್ತಿದ್ದ ಮೊದ ಮೊದಲು ಕಲಾವಿದರು ತಮ್ಮ ಕಲಾಕೃತಿಗಳಲ್ಲಿ ನಿಸರ್ಗ ಚಿತ್ರಣಗಳನ್ನು ಹಿನ್ನೆಲೆಯಾಗಿ ಬಳಸುತ್ತಿದ್ದರು. ಆದರೆ ಇಂಪ್ರೇಷನಿಷ್ಟ ಕಲಾವಿದರು ನೇರವಾಗಿ ಆ ಪ್ರಕೃತಿ ಪರಿಸರದ ಸ್ಥಳದಲ್ಲಿಯು ಕುಳಿತು ಚಿತ್ರ

---

೧೫. ರಮೇಶ. ತೇರದಾಳ (ಸಂ) ಕಲಾವಾರ್ತೆ, ಪು. ೧೮.

ರಚಿಸುತ್ತಿದ್ದರು. ಈ ಪಂಥದವರು ಪ್ರಕೃತಿಯೆಡೆಗೆ ಹೋಗಿ ಸ್ಥಳದಲ್ಲಿಯೇ ಚಿತ್ರರಚಿಸುವುದಕ್ಕೇ ಅನೇಕ ಕಾರಣಗಳಿವೆ. ಮುಖ್ಯವಾಗಿ ತಮಗೆ ಬೇಕಾಗಿರುವ ಬೆಳಕು, ವಸ್ತುವಿನ ಮೇಲೆ ಬೀಳುವ ನೆರಳುಗಳ ವ್ಯತ್ಯಾಸ ಮತ್ತು ಪರಿಣಾಮವೇ ಪ್ರಧಾನವಾದುದರಿಂದ ಬೆಳಕು ಬದಲಾವಣೆಯಾಗುವುದರೊಳಗಾಗಿಯೇ ಚಿತ್ರವನ್ನು ನಿರೂಪಿಸುತ್ತಿದ್ದರು.

"ಪ್ರಕೃತಿಯಲ್ಲಿ ಕಂಡು ಬರುವ ನೈಸರ್ಗಿಕ ವಸ್ತುಗಳನ್ನು ಎದುರಿಟ್ಟುಕೊಂಡು ಚಿತ್ರಿಸುವ ವಿಧಾನಕ್ಕೆ ನಿಸರ್ಗ ಚಿತ್ರಣವೆನ್ನುತ್ತಾರೆ. ನಿಸರ್ಗ ಚಿತ್ರದ ಪ್ರಾರಂಭದಲ್ಲಿ ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿ ದೊರೆಯುವ ಆಲದ ಎಲೆ, ಅರಳೆ ಎಲೆ, ಮಾವಿನ ಎಲೆ ಮುಂತಾದ ಗಿಡ ಮರಗಳ ಎಲೆ, ಹೂವು, ಪಕ್ಷಿಗಳ ಗರಿ, ಹಣ್ಣು ಹಂಪಲು, ಕಾಯಿ ಸೊಪ್ಪುಗಳನ್ನು ಅಭ್ಯಾಸ ಮಾಡಬೇಕಾಗುತ್ತದೆ. ನಂತರ ಎಲೆಗಳುಳ್ಳ ಟೊಂಗೆ, ಹೂಗಳ ಗೊಂಚಲು, ಹಣ್ಣುಗಳು ಇತ್ಯಾದಿಗಳನ್ನು ಎದುರಿಟ್ಟುಕೊಂಡು ಆಕಾರ ರಚನೆಗಳನ್ನೂ ಸೂಕ್ಷ್ಮವಾಗಿ ಮೂರು ಆಯಾಮಗಳನ್ನು (ತ್ರೀ ಡೈಮನ್ಷನ್) ಮತ್ತು ನೆರಳು ಬೆಳಕಿನ ಅನುಭವವನ್ನು ಅಭ್ಯಸಿಸಬೇಕಾಗುತ್ತದೆ."[೧೬]

ಹೀಗೆ ನಿಸರ್ಗದ ವಸ್ತುಗಳನ್ನು ಚಿತ್ರಕಲೆಯಲ್ಲಿ ಯಥೇಚ್ಛವಾಗಿ ಚಿತ್ರಿಸುವುದನ್ನು ಅಭ್ಯಸಿಸುತ್ತಾ ಪ್ರಾಣಿಪಕ್ಷಿಗಳ ಚಿತ್ರಗಳನ್ನು ರಚಿಸಲು ಕಲಾವಿದರು ಪ್ರಾರಂಭಿಸಿದರು. ನಂತರದ ದಿನಗಳಲ್ಲಿ ಹವ್ಯಾಸಕ್ಕಾಗಿ ಮತ್ತು ಅಕಾಡೆಮಿಕ್ ವ್ಯಾಸಂಗದ ಅವಧಿಯಲ್ಲಿ ಕಲಾವಿದರು ಸ್ವತಃ ಆ ಸ್ಥಳಗಳಿಗೆ ಹೋಗಿ ಆ ಸ್ಥಳದ ಒಂದು ಭಾಗವನ್ನು ಆಯ್ದು ಸ್ಥಳದಲ್ಲಿಯೇ ಕುಳಿತು ಚಿತ್ರ ರಚಿಸತೊಡಗಿದರು. ಹೀಗೆ ರಚಿಸಿದ ಚಿತ್ರಗಳು ಭೂದೃಶ್ಯಗಳಾದ ಗುಡ್ಡ, ಬೆಟ್ಟ, ನದಿ, ಸರೋವರ, ಮರಗಳ ಸಾಲು, ಕೆರೆ, ಹಳ್ಳ ಕೊಳ್ಳಗಳು, ಇವೆಲ್ಲವುಗಳ ಜೊತೆಗೆ ಆ ಪ್ರದೇಶಗಳಲ್ಲಿ ಹಾದು ಹೋಗುವ ಪ್ರಾಣಿ, ಪಕ್ಷಿ, ಮನುಷ್ಯರ ಚಿತ್ರಣಗಳನ್ನು ಸಹ ಚಿತ್ರಿಸತೊಡಗಿಸಿದರು. ಈ ರೀತಿಯಾಗಿ ಪರಿಸರವನ್ನು ಅಲ್ಲಿನ ರಮಣೀಯ ದೃಶ್ಯಗಳನ್ನು ಚಿತ್ರಕಲೆಯಲ್ಲಿ ವಿವಿಧ ಮಾಧ್ಯಮಗಳಲ್ಲಿ ಒಳಗೆ ಚಿತ್ರಿಸುವದರಲ್ಲಿ ಕಲಾವಿದರು ಪ್ರಯತ್ನಿಸಿದರು. ಪ್ರಕೃತಿಯ ನೈಜ ಗುಣಗಳನ್ನು ಕಾಲಮಾನವನ್ನು ಮತ್ತು ನೆರಳು ಬೆಳಕಿನ ಅನುಭವ ನೀಡುವ ಮುಖ್ಯ ಉದ್ದೇಶವನ್ನು ಇಲ್ಲಿ ಹೊಂದಿದ್ದು, ವಾಸ್ತವಿಕತೆಗೆ ಪ್ರಾಧ್ಯಾನತೆ ನೀಡಲಾಗಿದೆ.

ಕರ್ನಾಟಕದಲ್ಲಿ ಎಸ್. ಎಮ್. ಪಂಡಿತ, ಕೆ. ವೆಂಕಟಪ್ಪ, ಕೆ. ಕೆ. ಹೆಬ್ಬಾರ, ಎಮ್. ಎ. ಚೆಟ್ಟಿ, ದಂಡಾವತಿಮಠ, ಪಿ. ಆರ್. ತಿಪ್ಪೇಸ್ವಾಮಿ, ಎಂ.ಎ.ಮಿಣಜಗಿ, ಡಿ. ವಿ. ಹಾಲಭಾವಿಯವರಂತ

---

೧೬ ಎ. ಟಿ. ಕಾಳೆ, (ಸಂ), ಚಿತ್ರಕಲಾ ದರ್ಪಣ, ಪು. ೧೧೫.

ಇನ್ನೂ ಹಲವಾರು ಹಿರಿಯ ಕಲಾವಿದರುಗಳು ಜಲವರ್ಣ, ತೈಲವರ್ಣ ಮಾಧ್ಯಮಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಲಾಕೃತಿ ರಚಿಸಿದ್ದಾರೆ. ಭಾರತ ಮತ್ತು ಕರ್ನಾಟಕದ ಪ್ರಮುಖ ಐತಿಹಾಸಿಕ ಪ್ರದೇಶಗಳ ಚಿತ್ರಣಗಳನ್ನು ಚಿತ್ರಿಸಿ ಸಂಸ್ಕೃತಿಯನ್ನು, ವೈಭವವನ್ನು ತಮ್ಮ ಕಲೆಯಲ್ಲಿ ವಾಸ್ತವವಾಗಿ ಚಿತ್ರಿಸುವಲ್ಲಿ ಯಶಸ್ವಿ ಕಲಾವಿದರೆಂದು ಖ್ಯಾತನಾಮರಾಗಿದ್ದಾರೆ. ಇಂತಹ ಪ್ರಮುಖ ಹಿರಿಯ ಕಲಾವಿದರ ಕಲಾಕೃತಿಗಳಿಗೆ ಮಾರು ಹೋಗಿ ಆಸಕ್ತಿವಹಿಸಿ ಅಭ್ಯಸಿಸಿ ಪಾಟೀಲರು ಹಲವಾರು ನಿಸರ್ಗ ಚಿತ್ರಗಳನ್ನು ಜಲವರ್ಣ, ತೈಲವರ್ಣ, ಮಿಶ್ರ ಮಾಧ್ಯಮಗಳಲ್ಲಿ ನೈಜವಾಗಿ ಮತ್ತು ಕೆಲವು ಚಿತ್ರಣಗಳನ್ನು ಸೃಜನಾತ್ಮಕವಾಗಿ ಚಿತ್ರಿಸಿದ್ದಾರೆ. ಪಾಟೀಲರ ಸಮಕಾಲಿನ ಚಿತ್ರಕಾರರಲ್ಲಿ ವಿ. ಬಿ. ಹಿರೇಗೌಡರ, ಎಂ. ಬಿ. ಪಾಟೀಲ, ವೈ. ಎಚ್. ಸೂಗೂರು, ಕೊರ್ತಿ, ಮುಂತಾದ ಹಲವಾರು ಕಲಾವಿದರುಗಳು ಸಹ ನಿಸರ್ಗ ಚಿತ್ರಣಗಳನ್ನು ಚಿತ್ರಿಸುವಲ್ಲಿ ಸಿದ್ಧಹಸ್ತರಾಗಿದ್ದಾರೆ. ಹೀಗೆ ನಿಸರ್ಗ ಚಿತ್ರಣಗಳನ್ನು ತಮ್ಮ ಕಲೆಯಲ್ಲಿ ಕರಗತ ಮಾಡಿ ಕೊಂಡಿರುವ ಪಾಟೀಲರ ನಿಸರ್ಗ ಚಿತ್ರಣಗಳನ್ನು ಅಧ್ಯಯನಕ್ಕನುಕೂಲವಾಗುವಂತೆ ಮಾಧ್ಯಮವಾರು ವಿಂಗಡಿಸಿಕೊಂಡು ಹಲವು ನಿಸರ್ಗ ಚಿತ್ರ ಕಲಾಕೃತಿಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

ಪ್ರಕೃತಿಚಿತ್ರಗಳು (ಲ್ಯಾಂಡಸ್ಕೇಪ್):

ಚಿತ್ರ ೧. ನಿಸರ್ಗ ಚಿತ್ರಣ (ತೈಲವರ್ಣ) :

ಪಾಟೀಲರು ರಚಿಸಿದ ನಿಸರ್ಗ ಚಿತ್ರಗಳು ಕಲ್ಪನೆಗೂ ಮೀರಿ ಕೌಶಲ್ಯದ ಮೆರಗನ್ನು ಪಡೆದಿವೆ. ಪಾಟೀಲರು ರಚಿಸಿದ ನಿಸರ್ಗ ಚಿತ್ರಗಳು ಪ್ರಯೋಗಾತ್ಮಕವಾಗಿದ್ದು, ಸೃಜನಕ್ರಿಯೆಯ ಮೂಲಕ ವಿಶಿಷ್ಟವಾದ ವೈವಿಧ್ಯಮಯ ರೂಪಗಳನ್ನು ತಮ್ಮ ಕೈಚಳಕದ ಮೂಲಕ ಆಧುನಿಕವಾಗಿ ಅಭಿವ್ಯಕ್ತಿಸಿರುವುದನ್ನು ಈ ಕಲಾಕೃತಿಯಲ್ಲಿ ಕಾಣಬಹುದು.

ಈ ನಿಸರ್ಗ ಚಿತ್ರಕಲಾಕೃತಿಯಲ್ಲಿ ಅತ್ಯಲ್ಪ ವರ್ಣಗಳ ಬಳಕೆಯಾಗಿದ್ದು, ಮುಂಜಾನೆಯ ಸೂರ್ಯೋದಯದ ಸನ್ನಿವೇಶವನ್ನೂ ಬಿಂಬಿಸುವಂತಾಗಿದೆ. ಇಲ್ಲಿ ಪಾಟೀಲರು ಪ್ರಕೃತಿಯಲ್ಲಿನ ಗಿಡ, ಮರಗಳನ್ನು ಅತ್ಯಂತ ಸೂಚ್ಯವಾಗಿ ತಾಂತ್ರಿಕವಾಗಿ ಮತ್ತು ಸಾಂಕೇತಿಕವಾಗಿ ವಿವಿಧ ಭಾವನೆಗಳನ್ನು ಅಭಿವ್ಯಕ್ತಿಸಲು ಹಳದಿ ಮಿಶ್ರಿತ ಹಸಿರು ವರ್ಣವನ್ನು ಬಳಸಿದ್ದು, ಸಾಮಿಪ್ಯ ದೂರದ ಅನುಭವವನ್ನು ತೋರಲು ಸಾಂಕೇತಿಕ ಗಿಡಗಳಿಗೆ ಕೇಸರಿ ವರ್ಣದಿಂದ ಹೊರರೇಖೆಯನ್ನು ಎಳೆದಿದ್ದಾರೆ. ಆಗಸವನ್ನು ತೆಳು ನೀಲಿ ವರ್ಣದಿಂದ ಅಲ್ಲಲ್ಲಿ ಶುಭ್ರ ವರ್ಣಗಳ ಸಂಯೋಗದಿಂದ ಚಿತ್ರಿಸಿದ್ದಾರೆ. ಮಂಜು



ಚಿತ್ರ – ೧ ನಿಸರ್ಗ ಚಿತ್ರ



ಚಿತ್ರ – ೨ ಭೂ ದೃಶ್ಯ

ಮುಸುಕಿದ ಮೋಡಗಳ ರಚನೆಯನ್ನು ಸಮ್ಮಿಶ್ರಣವಾಗಿ ಬಳಸಿ ಮತ್ತು ಆಗಸದಲ್ಲಿ ದಟ್ಟ ಹಳದಿ ವರ್ಣದಲ್ಲಿ ದೊಡ್ಡದಾಗಿ ಸೂರ್ಯನನ್ನು ವರ್ತುಲಾಕಾರದಲ್ಲಿ ಚಿತ್ರಿಸಿದ್ದು, ಸೂರ್ಯನ ರಶ್ಮಿ (ಕಿರಣಗಳು) ಕೆಳಭಾಗದಲ್ಲಿನ ಗಿಡ, ಮರಗಳ ಮೇಲೆ ಹರಡಿದಂತೆ ಆಧುನಿಕ ಶೈಲಿಗೆ ಒಳಪಡಿಸಿ ಕಲಾಕೃತಿ ರಚಿಸಿರುವುದನ್ನು ಗುರುತಿಸಬಹುದು.

ಹೀಗೆ ಮೃಧುವರ್ಣಗಳನ್ನು ಬಳಸಿ ಕುಂಚಗಳನ್ನು ವಿವಿಧ ಆಯಾಮಗಳ ಬೀಸುಗಳ ಮೂಲಕ ಪೃಥ್ವಿಯ ಆಕಾರಗಳಿಗೆ, ಭಾವನಾತ್ಮಕವಾಗಿ ಸ್ಪಂಧಿಸಿ ಪಾಟೀಲರು ಚಿತ್ರವನ್ನು ಇಲ್ಲಿ ಸೃಷ್ಟಿಸಿದ್ದಾರೆ.

ಚಿತ್ರ ೨. ನಿಸರ್ಗಚಿತ್ರಣ :

ಕೆರೆಯ ದೃಶ್ಯವನ್ನು ತೈಲವರ್ಣದಲ್ಲಿ ಪಾರದರ್ಶಕ ತಂತ್ರಗಳನ್ನು ಅನುಸರಿಸಿ ರಚಿಸಿದ ಕಲಾಕೃತಿ ಇದಾಗಿದೆ. ಈ ಕಲಾಕೃತಿಯ ಸ್ಥಳಾವಕಾಶದಲ್ಲಿ ಎಪ್ಪತ್ತೈದು ಭಾಗವನ್ನು ಸಮಾಂತರವಾದ ಪಟ್ಟಿಯಲ್ಲಿ ಸೃಷ್ಟಿಸಿ ಉಳಿದ ಶೇಕಡಾ ೨೫% ಭಾಗವನ್ನು ಹಿನ್ನೆಲೆಯಾಗಿ ಗಿಡ-ಮರ, ಗುಡ್ಡ-ಬೆಟ್ಟಗಳನ್ನು ಮತ್ತು ಆಗಸವನ್ನು ನೈಜವಾಗಿ ಚಿತ್ರಿಸದೆ ಮೂರ್ತ ರೂಪದಲ್ಲಿ ಚಿತ್ರಿಸಿದ್ದಾರೆ. ಈ ಕಲಾಕೃತಿಯಲ್ಲಿ ವರ್ಣಗಳ ಏರಿಳಿತಗಳಲ್ಲೇ ವಿವಿಧ ವಸ್ತುವಿನ ಕಲ್ಪನೆಯನ್ನು ಮೂಡಿಸಿದ್ದಾರೆ. ಹಿನ್ನೆಲೆಯಲ್ಲಿ ಬೆಟ್ಟ-ಗುಡ್ಡ, ಮೊಡಗಳ ರಚನೆಯಲ್ಲಿ ಬಳಸಿದ ಪ್ರಖರ ವರ್ಣಗಳು, ಮುನ್ನೆಲೆಯಲ್ಲಿ ನೀರಿಗಾಗಿ ವರ್ಣಗಳನ್ನು ತುಸು ಮುಸುಕಾಗಿ ಬಳಸಿರುವುದನ್ನು ಕಾಣಬಹುದು. ಈ ಕಲಾಕೃತಿಯು ಪೂರ್ಣ ಪ್ರಮಾಣದ ಸ್ಪಷ್ಟತೆಯಿಂದ ಕೂಡಿರದೆ, ಅಸ್ಪಷ್ಟವಾಗಿದ್ದರೂ ಪ್ರಖರ ವರ್ಣಗಳ ಮೇಳ ದ್ವಿಮಾನ ವರ್ಣ ಲೇಪನದಲ್ಲಿ ರಚಿಸಿದ ಕಲ್ಪನೆಯೂ ಈ ಕಲಾಕೃತಿಯು ಅಮೂರ್ತ ರೂಪದಲ್ಲಿದ್ದರೂ ವಾಸ್ತವವನ್ನು ಪ್ರತಿಬಿಂಬಿಸುವಲ್ಲಿ ಸಫಲವಾಗಿದೆ.

ಚಿತ್ರ ೩. ಪ್ರಕೃತಿ ಚಿತ್ರಣ :

ಕ್ಯಾನವಾಸ್ ಮೇಲೆ ತೈಲವರ್ಣದಲ್ಲಿ ರಚನೆಗೊಂಡ ಈ ಕಲಾಕೃತಿಯಲ್ಲಿ ದೂರದ ಭೂ ದೃಶ್ಯವನ್ನು ವಿಶಿಷ್ಟವಾದ ಕೋನದಲ್ಲಿ ಸೆರೆಹಿಡಿದು ಚಿತ್ರಿಸಿದ ಕಲಾಕೃತಿಯಾಗಿದೆ. ಪಾಟೀಲರು ರಚಿಸಿದ ಈ ಪ್ರಕೃತಿ ದೃಶ್ಯದ ಚಿತ್ರದ ಹಿನ್ನೆಲೆಯಲ್ಲಿ ಗಾಡವಾದ ವರ್ಣಗಳನ್ನು, ಕುಂಚಗಳ ಮೂಲಕ ದೊಡ್ಡ ದೊಡ್ಡ ಪಟ್ಟಿಕೆ (ಬೋಲ್ಡ್‌ಸ್ಟ್ರೋಕ್)ಗಳಲ್ಲಿ ಲೀಲಾಜಾಲವಾಗಿ ಬಳಸುವುದರ ಮೂಲಕ ನೈಜ ವರ್ಣಗಳಿಗಿಂತ ಭಿನ್ನವಾಗಿ ಚಿತ್ರಿಸಿದ್ದಾರೆ. ದೂರದಲ್ಲಿ ವಿಶಾಲವಾಗಿ ಮೋಡ ಕವಿದ ವಾತಾವರಣದ ಕಲ್ಪನೆ ನೀಡುವ ದಟ್ಟವರ್ಣಗಳಲ್ಲಿ ಗೋಚರಿಸುವ ದೃಶ್ಯವಿದೆ. ಮತ್ತು ಮುನ್ನೆಲೆಯಲ್ಲಿ ಹಸಿರು



ಚಿತ್ರ ೩ . ಭೂದೃಶ್ಯ



ಚಿತ್ರ ೪. ನಿಸರ್ಗ ಚಿತ್ರ



ಚಿತ್ರ ೫ . ಭೂದೃಶ್ಯ



ಚಿತ್ರ ೬. ಭೂದೃಶ್ಯ

ವನಗಳ ಮಧ್ಯದಲ್ಲಿ ಶುಭ್ರವಾದ ಪ್ರಖರತೆಯನ್ನು ತೋರುವ ದೇವಾಲಯವಿದ್ದು, ಯಥಾರ್ದಶನದ ಸಿದ್ಧಾಂತಕ್ಕನುಗುಣವಾಗಿ ನೈಜಶೈಲಿಯಲ್ಲಿ ರಚನೆಯಾಗಿದೆ. ಚಿತ್ರವು ಅಸ್ಪಷ್ಟ ಕಲ್ಪನೆಯನ್ನು ಕೊಡುವಂತಿದ್ದರೂ ಕೂಡ ವಾಸ್ತವತೆಯನ್ನು ಆಧರಿಸಿದೆ.

ಚಿತ್ರ ೪. ನಿಸರ್ಗಚಿತ್ರ :

ಈ ಕಲಾಕೃತಿಯಲ್ಲಿ ಯಾವುದೇ ಚಿತ್ರವಸ್ತುವನ್ನು ಬಳಸದೆ ಕೇವಲ ವರ್ಣಗಳ ಮೂಲಕ ಅಮೂರ್ತ ಆಕಾರಗಳನ್ನು ಸೃಷ್ಟಿಸಿದ ಕಲಾಕೃತಿ ಇದಾಗಿದೆ. ಆಕಾಶ, ಬೆಟ್ಟ-ಗುಡ್ಡವನ್ನು ಹಳದಿ ಮತ್ತು ಕಂದು ವರ್ಣಗಳನ್ನು ವೆಟ್ ಶೈಲಿಯಲ್ಲಿ ಚಿತ್ರಿಸಿದ್ದಾರೆ. ಕ್ಯಾನವಾಸ್‌ನ ಮೇಲ್ಭಾಗದಲ್ಲಿ ತೈಲವನ್ನು ಸಿಂಪಡಿಸಿ ವರ್ಣಗಳನ್ನು ಸ್ಪ್ರೇ ಮಾಡಿ (ಹರಡಿಸಿ)ರಚಿಸಿದ ಈ ಕಲಾಕೃತಿಯನ್ನು ಪಾಟೀಲರು ಕ್ಷಿಪ್ರಗತಿಯಲ್ಲಿ ರಚಿಸಿದ್ದು ವರ್ಣಗಳಲ್ಲಿ ವೇಗೋತ್ಕರ್ಷಗಳನ್ನು ಕಾಣಬಹುದು.

ಚಿತ್ರ ೫. ಪ್ರಕೃತಿಚಿತ್ರಣ :

ಪ್ರಕೃತಿ ಸೌಂದರ್ಯವನ್ನು ಸವಿಯಲು ಸಾವಿರ ಕಣ್ಣು ಸಾಲದು ಎಂಬಂತೆ ಇಲ್ಲಿ ಕಲಾವಿದ ಶಂಕರ ಪಾಟೀಲರು ಪ್ರಕೃತಿಯ ರಮ್ಯ ನೋಟವನ್ನು ಕಣ್ಣಿನಿಂದ ಸವಿಯದೇ ಕುಂಚ ಹಾಗೂ ವರ್ಣಗಳ ಮೂಲಕ ಅದನ್ನು ಹಿಡಿದಿಟ್ಟಿದ್ದಾರೆ. ಇಲ್ಲಿ ತೈಲಮಾಧ್ಯಮದಲ್ಲಿ ಮೂಡಿಬಂದ ಈ ಕೃತಿಯು ಹಳದಿ ಮಿಶ್ರಿತ ಚಿಗುರೆಲೆಗಳಿಂದ ಹಾಗೂ ದಟ್ಟ ಹಸುರಾದ ಪೊದೆಗಳಿಂದ ಕೂಡಿದ ಗಿಡಮರಗಳ ಸಾಲು ಸಂಯೋಜನಾತ್ಮಕವಾಗಿ ಮೂಡಿಬಂದಿದೆ. ದಟ್ಟ ಹುಲ್ಲುಹಾಸು ಸಂಯೋಜಿತಗೊಂಡಿದ್ದು, ಹುಲ್ಲಿನ ಪೊದೆಯ ಎರಿಳಿತಗಳಿಂದ ಯಥಾದೃಷ್ಟಿ ರೂಪವು ಈ ಕೃತಿಯಲ್ಲಿ ಮೂಡಿಬಂದಿದೆ. ಅಪಾರದರ್ಶಕ ವರ್ಣಪದ್ಧತಿಯನ್ನು ಹೊಂದಿದ ಈ ಕೃತಿಯು ಪ್ರಕೃತಿಯ ಸುಂದರ ನೋಟವನ್ನು ಬಿಂಬಿಸುತ್ತದೆ.

ಚಿತ್ರ ೬. ಪ್ರಕೃತಿ ಚಿತ್ರಣ :

ಈ ಪ್ರಕೃತಿ ಚಿತ್ರದಲ್ಲಿ ಬರಡು ಮರಗಳ ಗುಂಪು ಕಪ್ಪು ಹಾಗೂ ನೀಲಿ ಮಿಶ್ರಿತ ದಟ್ಟವಾದ ಬೆಟ್ಟದ ಸಾಲು, ಬಿಳಿ ಮೊಡಗಳ ಸಂಯೋಜನೆಯ ಅಪಾರದರ್ಶಕ ವರ್ಣ ಪದ್ಧತಿಯಲ್ಲಿ ಬಿಂಬಿತವಾಗಿದೆ. ಬರಡು ಮರಗಳ ಸಾಲುಗಳ ಮಧ್ಯ ದಟ್ಟ ಕೆಂಪು ಬಣ್ಣದ ಗುಂಪು ಗಿಡಗಳು ಸಂಯೋಜಿತಗೊಂಡಿದ್ದು ಕಡಲ ತೀರದ ಭೂದೃಶ್ಯವನ್ನು ಕಲಾವಿದ ಪ್ರತಿಬಿಂಬಿಸಿದ್ದಾರೆಂದು ತೋರುತ್ತದೆ.



ಚಿತ್ರ ೭ ಭೂದೃಶ್ಯ



ಚಿತ್ರ ೮ ಭೂದೃಶ್ಯ

ಚಿತ್ರವು ಉತ್ತಮ ಯಥಾದೃಷ್ಠಿರೂಪವನ್ನು ಹೊಂದಿದ್ದು, ಕುಂಚದ ಎರಿಳಿತಗಳ ತೇಪೆಗಳು ಸೃಜನಾತ್ಮಕವಾಗಿ ಮೂಡಿಬಂದಿವೆ. ಇಲ್ಲಿ ವರ್ಣ ಸಮ್ಮಿಲನವು ಭಾವನಾತ್ಮವಾಗಿ ಸಂಯೋಜಿತಗೊಂಡಿದೆ. ಕಲಾವಿದ ಬರಡು ಮರಗಳನ್ನು ಸಂಯೋಜಿಸಿರುವುದರೊಂದಿಗೆ ಚಿತ್ರದ ಸೌಂದರ್ಯವನ್ನು ಪ್ರತಿಫಲಿಸುವಲ್ಲಿ ಸಫಲರಾಗಿದ್ದರೆನ್ನಬಹುದು.

ಚಿತ್ರ ೭. ಪ್ರಕೃತಿ ಚಿತ್ರಣ :

ಈ ಚಿತ್ರದಲ್ಲಿ ಬಿಂಬಿತವಾಗಿರುವ ಬೆಟ್ಟಗಳ ಸಾಲಗಳ ಎರಿಳಿತಗಳು, ದಟ್ಟತೆ, ಸೌಮ್ಯತೆಗಳಿಂದ ಹಸಿರು, ನೀಲಿ ಮಿಶ್ರಿತ ವರ್ಣಗಳಿಂದ ಸಂಯೋಜಿತಗೊಂಡಿದೆ. ಹಳದಿ ಮಿಶ್ರಿತ ಮಂದ ವರ್ಣಗಳ ಭೂದೃಶ್ಯದಲ್ಲಿ ಪುಟ್ಟ ದೇವಾಲಯದ ಸಂಯೋಜನೆಯು ವ್ಯಕ್ತಗೊಂಡಿದೆ. ಚಿತ್ರದ ಮುಂಭಾಗದಲ್ಲಿ ಬರಡು ಮರದ ಚಿತ್ರವು ಬಹು ಆಕರ್ಷಕವಾಗಿ ಮೂಡಿಬಂದಿದೆ. ಆಕಾಶದ ಸಂಯೋಜನೆಯು ಹಸಿರು ನೀಲವರ್ಣಗಳಿಂದ ಕೂಡಿದ್ದು ಸೂರ್ಯಾಸ್ತದ ಮಬ್ಬುಗತ್ತಲೆಯನ್ನು ಇಲ್ಲಿ ಪಾಟೀಲರು ತೈಲವರ್ಣದ ಮೂಲಕ ತೋರಿಸಲು ಪ್ರಯತ್ನಿಸಿದ್ದಾರೆ. ಬೆಟ್ಟಗಳ ಸಾಲುಗಳ ಅಂತರ ದೂರಗಳನ್ನು ವಿಶಿಷ್ಠವಾಗಿ ಸಂಯೋಜಿತಗೊಳಿಸಿದ್ದಾರೆ.

ಚಿತ್ರ ೮. ಭೂ ದೃಶ್ಯ:

ಈ ಪ್ರಕೃತಿಯ ದೃಶ್ಯ ಚಿತ್ರವು ಉತ್ತಮ ತಂತ್ರಗಾರಿಕೆಯನ್ನು ಹೊಂದಿದ್ದು, ವರ್ಣಗಳ ಸಮ್ಮಿಲನ. ಇಲ್ಲಿ ಪಾಟೀಲರು ಬಣ್ಣದ ನೈಫ್‌ನಿಂದ ಚಿತ್ರವನ್ನು ಸಂಯೋಜಿಸಿದ್ದು ಆಕಾಶ, ಭೂಮಿಗಳ ಅಂತರವನ್ನು ಹಾಗೂ ದೃಷ್ಟಿಯ ದೂರದ ಹರವನ್ನು ತೋರಿಸುವ ಪ್ರಯತ್ನ ಈ ಪ್ರಕೃತಿಯ ಚಿತ್ರದಲ್ಲಿದೆ. ಚಿಕ್ಕ ಚಿಕ್ಕ ನೈಫ್‌ನ ತೇಪೆಗಳು ಹಾಗೂ ಅವುಗಳ ಸಂಯೋಜನೆಯು ಅತ್ಯಂತ ಸೃಜನಾತ್ಮಕವಾಗಿ ಮೂಡಿಬಂದಿದೆ. ಈ ಚಿತ್ರದಲ್ಲಿಯೂ ಸಹ ಹಸಿರು, ನೀಲಿ ಹಾಗೂ ಹಳದಿ ವರ್ಣಗಳ ದಟ್ಟತೆ ಎದ್ದು ತೋರುತ್ತದೆ. ಚಿತ್ರವು ಅಪಾರದರ್ಶಕ ಪದ್ಧತಿಯಲ್ಲಿ ರೂಪಗೊಂಡಿದ್ದು ತೈಲ ಮಾಧ್ಯಮದಲ್ಲಿ ಸೃಜನಗೊಂಡಿದೆ. ಬಹುತೇಕ ಪಾಟೀಲರು ಮೂರ್ತ ಹಾಗೂ ಅಮೂರ್ತ ರೂಪದ ಪ್ರಕೃತಿ ಚಿತ್ರಗಳಲ್ಲಿ ಹಸಿರು ಮತ್ತು ನೀಲಿ ವರ್ಣಗಳ ಬಳಕೆ ಅಪಾರವಾಗಿ ಮೂಡಿಬಂದಿವೆ. ಈ ವರ್ಣಗಳ ಅಂತರ್ ಶಕ್ತಿ ಪಾಟೀಲರ ಸ್ಮೃತಿ ಪಟಲದಲ್ಲಿ ತೀಕ್ಷ್ಣವಾಗಿ ಗೋಚರಿಸಿದೆ.



ಚಿತ್ರ ೯ ಭೂದೃಶ್ಯ



ಚಿತ್ರ ೧೦ ಭೂದೃಶ್ಯ



ಚಿತ್ರ ೧೧ ಕಟ್ಟಡದ ದೃಶ್ಯ

ಚಿತ್ರ ೯. ಭೂದೃಶ್ಯ :

ಈ ಕಲಾಕೃತಿಯಲ್ಲಿ ಪಾಟೀಲರು ಬೆಟ್ಟದ ಸಾಲನ್ನು ದೃಷ್ಟಿಗೆ ಹತ್ತಿರವಾಗಿರುವಂತೆ ಚಿತ್ರಿಸಿದ್ದು, ಕುಂಚದ ಸೂಕ್ಷ್ಮತೆಯಿಂದ ವರ್ಣಗಳನ್ನು ಮೀಲಿನಗೊಳಿಸಿದ್ದಾರೆ. ದಟ್ಟ ನೀಲಿ, ಹಸಿರು, ಬಿಳಿ, ಹಳದಿ ಮಿಶ್ರಿತ ವರ್ಣಗಳ ಸಂಯೋಜನೆಯು ಈ ಚಿತ್ರದಲ್ಲಿ ದಟ್ಟವಾಗಿ ಗೋಚರಿಸುತ್ತದೆ. ಚಿತ್ರವು ಉತ್ತಮ ಯಥಾದೃಷ್ಟಿರೂಪವನ್ನು ಹೊಂದಿದ್ದು ಅದರಂತೆ ಆಕರ್ಷಕ ವರ್ಣ ಸಂಯೋಜನೆಯನ್ನು ಕೂಡಾ ಹೊಂದಿದೆ. ಇಲ್ಲಿ ಕಲಾವಿದರು ಹಸಿರು, ನೀಲಿ ಮತ್ತು ಹಳದಿ ವರ್ಣಗಳನ್ನು ಸಂಯೋಜಿಸಿದ್ದನ್ನು ಗಮನಿಸಿದರೆ ಪ್ರಕೃತಿಯ ಹಸಿರು ಅವರನ್ನು ಸಮ್ಮೋಹಿನಿ ಮಾಡಿದಂತೆ ತೋರುತ್ತದೆ. ಇಲ್ಲಿ ಪಾಟೀಲರ ಸಮೃದ್ಧಿ ಹಾಗೂ ಪರಿಸರ ಕಾಳಜಿಯ ಮನೋಭಾವನೆಯನ್ನು ಗುರುತಿಸಬಹುದಾಗಿದೆ.

ಚಿತ್ರ ೧೦. ಭೂದೃಶ್ಯ:

ಈ ಪ್ರಕೃತಿ ದೃಶ್ಯವು ಬೆಟ್ಟಗಳ ಸಾಲು ಹಸಿರು, ಹಳದಿ ಮಿಶ್ರಿತವಾದ ಭೂಪ್ರದೇಶವನ್ನು ಹೊಂದಿದ್ದು ಉತ್ತಮ ಯಥಾದೃಷ್ಟಿರೂಪದಲ್ಲಿ ಸಂಯೋಜನೆಗೊಂಡಿದೆ. ಬೆಟ್ಟಗಳ ಎರಿಳಿತಗಳನ್ನು ಹಾಗೂ ಬೆಟ್ಟಗಳಿಂದ ಬೆಟ್ಟಗಳ ನಡುವಿನ ಅಂತರವನ್ನು ನೀಲವರ್ಣದಲ್ಲಿಯೇ ಪ್ರತ್ಯೇಕವಾಗಿ ತೋರಿಸಲು ಕಲಾವಿದರು ಯತ್ನಿಸಿದ್ದಾರೆ. ಈ ಕೃತಿಯಲ್ಲಿ ಕುಂಚದ ಸೂಕ್ಷ್ಮತೆಯನ್ನು ಹಾಗೂ ಅದರ ತೀಕ್ಷ್ಣತೆಯನ್ನು ಕಾಣಬಹುದು. ಮನೆಗಳ ಗುಂಪನ್ನು ಸಂಯೋಜಿಸಿದ್ದು ಇಲ್ಲಿ ಕಲಾವಿದರ ದೂರದೃಷ್ಟಿಯ ಕ್ಷಿತಿಜ ಪಥವನ್ನು ಕಾಣಬಹುದಾಗಿದೆ.

ಚಿತ್ರ ೧೧. ಕಟ್ಟಡದ ದೃಶ್ಯ:

ಈ ಪ್ರಕೃತಿ ಚಿತ್ರದಲ್ಲಿ ಪಾಟೀಲರು ಭವ್ಯ ಬಂಗಲೆಯ ಮುಂಭಾಗದ ನೋಟವನ್ನು ಚಿತ್ರಿಸಿದ್ದು, ನೀಲಿ ಹಾಗೂ ಬಿಳುಪು ಬಣ್ಣಗಳ ಸಂಯೋಜನೆಯನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಬಂಗಲೆಯ ಒಳ ನೋಟವನ್ನು ಹಿನ್ನಲೆಯನ್ನು ತೋರಿಸುತ್ತಾ ಹೋಗಿದ್ದಾರೆ. ಬಾಗಿಲುಗಳ ಸಂಯೋಜನೆ, ಆಕಾರ, ಗೋಡೆಯ ಕಲ್ಲುಗಳ ಸಂಯೋಜನೆ, ಕಂಬಗಳ ಸಂಯೋಜನೆಯು ಹಾಗೂ ಕಟ್ಟಡ ಎಡ ಬಲ ಪಾರ್ಶ್ವ ನೋಟವನ್ನು ವಿಶಿಷ್ಟವಾಗಿ ಸಂಯೋಜನೆಗೊಳಿಸಿದ್ದಾರೆ. ಇಲ್ಲಿ ನೆರಳು ಮತ್ತು ಬೆಳಕಿನ ಕಲ್ಪನೆ ಆಕರ್ಷಕವಾಗಿ ಮೂಡಿಬಂದಿದೆ. ಒಟ್ಟಾರೆ ಈ ನಿಸರ್ಗ ಚಿತ್ರವು ಉತ್ತಮವಾಗಿ ರೂಪಿತಗೊಂಡಿದೆ ಎನ್ನಬಹುದು.



ಚಿತ್ರ - ೧ ಓಶೋ

ಸ್ವೈಜಶೈಲಿಯ ಚಿತ್ರಣಗಳು (ತೈಲವರ್ಣ)



ಚಿತ್ರ – ೨ ಸಂಯೋಜನೆ

ನೈಜಶೈಲಿಯ ಚಿತ್ರಣಗಳು (ತೈಲವರ್ಣ)



ಚಿತ್ರ – ೨ ಸಂಯೋಜನೆ



ಚಿತ್ರ – ೩ ಸಂಯೋಜನೆ

ನೈಜಶೈಲಿಯ ಚಿತ್ರಗಳು:

ಚಿತ್ರ ೧. ಓಶೋ:

ಈ ಸಂಯೋಜನಾ ಕಲಾಕೃತಿಯಲ್ಲಿ ಮೂಲವಸ್ತು ವಿಷಯನ್ನಾಗಿಸಿ ಓಶೋನನ್ನು ಚಿತ್ರಿಸಿದ್ದು ಆಧ್ಯಾತ್ಮ ಮುಕ್ತಿಯ ಶಾಂತಿಯ ಸಂದೇಶವನ್ನು ಎರಡು ಕೈಗಳನ್ನು ಮೇಲಕ್ಕೆ ಎತ್ತಿ ಸಾರುತ್ತಿರುವ ದೃಶ್ಯ ಮೂಡಿಬಂದಿದೆ. ಓಶೋವಿನಲ್ಲಿ ಮುಖದಲ್ಲಿ ಆಧ್ಯಾತ್ಮದ ಭಾವನೆಗಳನ್ನು ತುಂಬಲು ಪಾಟೀಲರು ಸುಸಂಬದ್ಧ ವರ್ಣಸಂಯೋಜನೆಯ ಬಳಕೆಯನ್ನು ಕಾಣಬಹುದು. ಓಶೋವಿನ ವಸ್ತ್ರವಿನ್ಯಾಸ, ಹಿನ್ನೆಲೆಯ ದೃಶ್ಯವನ್ನು ಪ್ರಖರ ವರ್ಣಗಳನ್ನು ಬಳಸಿದ್ದಾರೆ. ಪಾಟೀಲರು ಓಶೋವಿನ ಅನುಯಾಯಿಯಾಗಿದ್ದು, ಅವರ ಆಧ್ಯಾತ್ಮಿಕ ಪ್ರವಚನಗಳಿಗೆ ಪ್ರೇರಿತರಾಗಿ ನಡೆ-ನುಡಿಗಲನ್ನು ತಮ್ಮಲ್ಲಿ ಅನುಸರಿಸಿಕೊಂಡವರಾಗಿದ್ದರು ಈ ದಿಸೆಯಲ್ಲಿ ಪಾಟೀಲರು ತಾತ್ವಿಕ ಅನುಭವಗಳನ್ನು ವ್ಯಕ್ತಪಡಿಸುವಲ್ಲಿ ಓಶೋವಿನ ಚಿತ್ರಣವನ್ನು ಕಲಾಕೃತಿಯ ಪ್ರಧಾನ ವಸ್ತುವಾಗಿ ಬಳಸಿ ಚಿತ್ರ ರಚಿಸಿದ್ದಾರೆ.

ಚಿತ್ರ ೨. ಸ್ತ್ರೀ :

ಈ ಚಿತ್ರಣವು ರಾಜಧರಬಾರಿನಲ್ಲಿ ನೃತ್ಯಗಾರ್ತಿಯರನ್ನು ಹೋಲುವಂತಿದ್ದು, ಮಹಿಳೆಯ ವೇಷಭೂಷಣಗಳು ಅಲಂಕಾರಿಕವಾಗಿ ಮೂಡಿಬಂದಿವೆ. ಅಲಂಕೃತಗೊಂಡ ಮಹಿಳೆಯನ್ನು ನೀಲಿಮಿಶ್ರಿತ ಕಪ್ಪುವರ್ಣದಲ್ಲಿ ಚಿತ್ರಿಸಿದ್ದು ಮುಖದ ಭಾವರೂಪ ನಡಿಗೆಯ ಭಂಗಿ, ವಿಶಿಷ್ಟವಾಗಿ ಮೂಡಿಬಂದಿದೆ. ಕಲಾಕೃತಿಯಲ್ಲಿ ಅಲಂಕಾರಿಕ ನಕ್ಷೆಗಳ ಮೂಲಕ ವರ್ಣಗಳ ಹರಿವು ಸ್ಥಳಾವಕಾಶವನ್ನು ಆವರಿಸಿವೆ. ಚಿತ್ರಕಲಾಕೃತಿಯಲ್ಲಿ ಅಲ್ಲಲ್ಲಿ ನೆರಳು-ಬೆಳಕಿನ ಛಾಯೆಯನ್ನು ನೀಡಿ ತ್ರಿ ಆಯಾಮದಲ್ಲಿ ಚಿತ್ರ ರಚನೆಯಾಗಿದೆ. ಹಿನ್ನೆಲೆಯ ಸ್ಥಳಾವಕಾಶದಲ್ಲಿ ಆಸ್ಥಾನದ ದೃಶ್ಯವೊಂದನ್ನು ಮಸುಕಾಗಿ ಅಸ್ಪಷ್ಟವಾಗಿ ಚಿತ್ರಿಸಲಾಗಿದೆ. ಒಟ್ಟಾರೆಯಾಗಿ ಪಾಟೀಲರ ಈ ಕಲಾಕೃತಿಯು ನೈಜತೆಯಿಂದ ಕೂಡಿದ್ದು, ವರ್ಣಸಂಯೋಜನೆಯಲ್ಲಿ ನವ್ಯ ಕಲೆಯತ್ತ ಕೊಂಡೊಯ್ಯುವ ಪ್ರಯತ್ನವನ್ನು ಗುರುತಿಸಬಹುದಾಗಿದೆ.

ಚಿತ್ರ ೩. ಈ ಸಂಯೋಜನಾ ಚಿತ್ರ :

ಕಲಾಕೃತಿಯು ಬಿನ್ನವಾಗಿ ಮೂಡಿಬಂದಿದೆ. ಈ ಚಿತ್ರದಲ್ಲಿ ಬೃಹತ ಮರದ ಕೆಳಗೆ ಕೈಯಲ್ಲಿ ಛತ್ರಿಯನ್ನು ಹಿಡಿದುಕೊಂಡ ವೃದ್ದನೋರ್ವನನ್ನು ಚಿತ್ರಿಸಲಾಗಿದೆ. ಮರದ ಹಣ್ಣೆಲೆಗಳು ಉದುರುತ್ತಿರುವ ಸೂತಕದ ಛಾಯೆಯನ್ನೂ ಸೂಚಿಸಲು ಕೆಂಪು ಮಿಶ್ರಿತ ಹಳದಿವರ್ಣವನ್ನು ಬಳಸಲಾಗಿದೆ. ಹಾಗೂ

ವೃದ್ಧನ ಮುಖದಲ್ಲಿ ಮುಪ್ಪಿನ ಭಾವರೂಪವನ್ನು ಸೂಚಿಸಲು ಗಾಢವಾದ ಕಂದು ಮಿಶ್ರಿತ ಕೆಂಪುವರ್ಣ ಬಳಸಲಾಗಿದೆ. ಹೀಗೆ ಎಲೆಗಳಿಗೆ ಮತ್ತು ವೃದ್ಧನಿಗೆ ಪರಸ್ಪರ ಸಂಬಂಧವನ್ನು ಕಲ್ಪಿಸಲಾಗಿ ವೃದ್ಧನು ಧರಿಸಿದ ಅಂಗಿಯನ್ನು ಹಸಿರುವರ್ಣದಲ್ಲಿ ಚಿತ್ರಿಸಲಾಗಿ ಏನನ್ನೋ ನಿರಿಕ್ಷಿಸುತ್ತೀರುವಂತೆ ಕಣ್ಣುಗಳಲ್ಲಿ ಕಾತುರದ ಭಾವನೆ ಕಂಡುಬರುತ್ತದೆ. ಹಾಗೂ ಕೈಯಲ್ಲಿ ಛತ್ರಿಯಿದ್ದರೂ ಮರದ ಅಡಿ ಆಶ್ರಯ ಪಡೆದ ವೃದ್ಧನು ತೊಡಕಿನ ಸುರಳಿಯಲ್ಲಿ ಸುತ್ತಿರುವಂತೆ ಚಿತ್ರಿಸಲಾಗಿದೆ. ಹೀಗೆ ಪಾಟೀಲರು ತಮ್ಮ ಸೃಜನಶೀಲ ಕಲ್ಪನೆಯ ಮುಖಾಂತರ ವಾಸ್ತವತೆಯನ್ನು ನೈಜವಾಗಿ ಚಿತ್ರಿಸಿದ್ದಾರೆ.

ಸಂಯೋಜನಾ ಚಿತ್ರದ ವಸ್ತ್ರಾಲಂಕಾರದಲ್ಲಿ ಅಲಂಕಾರ ಗುಣಗಳು ಎದ್ದು ಕಾಣುತ್ತವೆ. 'ವೃದ್ಧ' ಶೀರ್ಷಿಕೆಯ ಕಲಾಕೃತಿಯಲ್ಲಿ ನೆರಳು ಬೆಳಕಿನ ನೈಜಛಾಯೆಯನ್ನು ತೆಳು, ಮದ್ಯ, ದಟ್ಟತೆಯನ್ನು ಸಮತಟ್ಟಾಗಿ ಲೇಪಿಸಿದ್ದಾರೆ. ಇಲ್ಲಿ ರೂಪಗಳು ಇಡಿಯಾಗಿ ಕ್ಯಾನ್‌ವಾಸಿನ್ ಸ್ಥಳಾವಕಾಶವನ್ನು ಆವರಿಸಿವೆ. ಈ ಸಂಯೋಜನಾ ಕಲಾಕೃತಿ ಅಕಾಡೆಮಿಕ್ ಶೈಲಿಯಲ್ಲಿ ನೈಜತೆಯ ಗುಣಗಳು ಹಾಗೂ ಹಿನ್ನಲೆಯಲ್ಲಿ ಪ್ರಖರ ವರ್ಣಗಳಿಂದ ಸೃಜನಾತ್ಮಕ ಸತ್ವವನ್ನೊಳಗೊಂಡಿವೆ.

ಕೃತಿಗಳಲ್ಲಿ ಸೌಮ್ಯಭಾವ ಮತ್ತು ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುವಲ್ಲಿ ರೇಖೆ ಮತ್ತು ವರ್ಣಗಳು ಪ್ರಧಾನ ಪಾತ್ರ ವಹಿಸಿವೆ.

ಆಧುನಿಕ ನೆಲೆಯ ತೈಲ ವರ್ಣಕಲಾಕೃತಿಗಳು :

"ತೈಲ ಚಿತ್ರರಚನೆ ಪ್ರಾರಂಭವಾದುದು ಹದಿನೈದನೇ ಶತಮಾನದ ಪ್ರಾರಂಭದಲ್ಲಿ. ಆಗ ಕ್ಯಾನವಾಸ ಬಟ್ಟೆಯ ಮೇಲೆ ಸುಣ್ಣ ಅಥವಾ ಪ್ಲಾಸ್ಟರ್ ಆಪ್ ಪ್ಯಾರಿಸ್‌ನ್ನು ಲೇಪಿಸುತ್ತಿದ್ದರು. ಮೊಟ್ಟೆಯ ಬಿಳಿಯ ಭಾಗದೊಂದಿಗೆ ಬಣ್ಣವನ್ನು ಬೆರೆಸಿ ಕಲಾಕೃತಿಯನ್ನು ರಚಿಸುತ್ತಿದ್ದರು. ಇದನ್ನು ಟೆಂಪೆರಾ ಎಂದು ಕರೆಯುತ್ತಿದ್ದರು. ಇದರ ಮೇಲೆ ಮೆರುಗೆಣ್ಣೆ ಲೇಪಿಸಿದರೆ ತೈಲಚಿತ್ರ ಸಿದ್ಧವಾಗುತ್ತಿತ್ತು. ೧೯ನೇ ಶತಮಾನದವರೆಗೂ ಚಿತ್ರವನ್ನು ಒಂದು ಬಣ್ಣದಲ್ಲಿ ರಚಿಸಿ ಅದರ ಮೇಲೆ ಪಾರದರ್ಶಕ ಹೊಳಪು ಕೊಡುವ ಬಣ್ಣವನ್ನು ಲೇಪಿಸುತ್ತಿದ್ದರು."[೧೭]

ಈ ತೈಲ ಚಿತ್ರರಚನೆಯ ಪ್ರಾರಂಭದಲ್ಲಿ ವರ್ಣದ್ರವ್ಯದ ಪುಡಿಯನ್ನು ಅಮೃತ ಶಿಲೆಯ ಮೇಲೆ ಅರೆದು ಅದಕ್ಕೆ ಸ್ವಲ್ಪ ತೈಲವನ್ನು ಸೇರಿಸಿ, ಬೇಕಾದ ತೈಲವರ್ಣಗಳನ್ನು ತಯಾರಿಸಿಕೊಳ್ಳುತ್ತಿದ್ದರು.

---

೧೭. ಸಿದ್ಧಲಿಂಗಸ್ವಾಮಿ ಹಿರೇಮಠ, ಕಲಾವಿದ ಆರ್.ಎಂ. ಹಡಪದ ಪು. ೧೬೨.



ಚಿತ್ರ – ೧ ಸಂಯೋಜನೆ

ಆಧುನಿಕ ನೆಲೆಯ ವರ್ಣಚಿತ್ರಗಳು (ತೈಲವರ್ಣ)

ಪ್ರಸ್ತುತ ಸಂದರ್ಭದಲ್ಲಿ ತೈಲವರ್ಣ ಟ್ಯೂಬಗಳು ದೊರೆಯುತ್ತವೆ. ಬಣ್ಣಗಳನ್ನು ತೆಳುಮಾಡಿಕೊಳ್ಳಲು ಟರ್ಪೆಂಟೈನ್ ಮತ್ತು ನಾಗರಸ ತೈಲವನ್ನು ಉಪಯೋಗಿಸುತ್ತಾರೆ. ಬೇಡವಾದ ವರ್ಣವನ್ನು ತೆಗೆದು ಅದರ ಮೇಲೆಯೆ ಬೇರೆ ವರ್ಣವನ್ನು ಬಳಸಬಹುದು. ಹೀಗೆ ಕಲಾವಿದ ತನಗೆ ಬೇಕಾದ ರೀತಿಯಲ್ಲಿ ತಿಳುವಾಗಿ, ಪಾರದರ್ಶಕವಾಗಿ, ಮಂದವಾಗಿಯೂ ಉಪಯೋಗಿಸಬಹುದು. ತೈಲ ವರ್ಣಚಿತ್ರಗಳು ಇತರ ವರ್ಣಚಿತ್ರಗಳಂತೆ ಬೇಗನೆ ಹಾಳಾಗದೆ ಬಹುಕಾಲದವರೆಗೂ ಇರುತ್ತವೆ.

"ತೈಲ ಚಿತ್ರಗಳ ಪರಿಚಯ ಭಾರತಕ್ಕೆ ಮಧ್ಯಯುಗದಿಂದಲೇ ಆದಂತೆ ಕಂಡು ಬರುತ್ತದೆ. ಮೋಘಲರ ಕಾಲದಲ್ಲಿ ಬಂದ ವಿದೇಶಿ ಪ್ರವಾಸಿಗರು ಅಲ್ಲಿಂದ ತಂದ ಚಿತ್ರಗಳಲ್ಲಿ ತೈಲವರ್ಣದ ಚಿತ್ರಗಳೂ ಇದ್ದಿರಬಹುದು. ನಂತರ ಕಾಲದಲ್ಲಿ ಭಾರತದಲ್ಲಿ ವಿದೇಶಿ ಕಲಾವಿದರು ತೈಲವರ್ಣದಲ್ಲಿ ಚಿತ್ರಿಸಿರುವುದನ್ನು ಗೋವಾ ಮುಂತಾದಡೆಗಳಲ್ಲಿ ಕಾಣಬಹುದು. ರಾಜಾ ರವಿವರ್ಮನಿಂದ ತೈಲಚಿತ್ರ ರಚನೆ ವ್ಯಾಪಕವಾಗಿ ಭಾರತದಲ್ಲಿ ಆರಂಭಗೊಂಡಿತೆಂದು ಹೇಳಬಹುದು."[೧೮]

ಚಿತ್ರ ೧. ಸಂಯೋಜನೆ

ಈ ಕಲಾಕೃತಿಯು ನವ್ಯ ಶೈಲಿಯ ಸಂಯೋಜನಾಕೃತಿಯಾಗಿದ್ದು, ಜ್ಯಾಮಿತಿಕ ಆಕಾರಗಳನ್ನು ಬಳಸಿಕೊಂಡು ಸಂಯೋಜನಾ ತತ್ವಗಳನ್ನು ಆಧರಿಸಿ ಚೌಕಾಕೃತಿಗಳನ್ನು ಬಳಸಿ ಗಾಢವಾದ ಹಳದಿ ವರ್ಣವನ್ನು ಲೇಪಿಸಿ ಚಿಕ್ಕ ಗಾತ್ರದಲ್ಲಿ ಶುಭ್ರವರ್ಣದಲ್ಲಿ ಚಿಕ್ಕದಾಗಿ ಚಂದ್ರನನ್ನು ಚಿತ್ರಿಸಿ ಮತ್ತು ಅದರ ಮುನ್ನಲೆಯಲ್ಲಿ ಸಾಂಕೇತಿಕವಾಗಿ ಮರವೊಂದನ್ನು ಚಿತ್ರಿಸಿ ಮರದ ಕೆಳಗೆ ಚಿಕ್ಕಗಾತ್ರದಲ್ಲಿ ಮಾನವಾಕೃತಿಗಳನ್ನು ರಚಿಸಿ ಬಲಬದಿಯಲ್ಲಿ ಚಿಕ್ಕ ಚೌಕಾಕಾರದಲ್ಲಿ ಹಸಿರುವರ್ಣ ಪ್ರಯೋಗಾತ್ಮಕವಾಗಿ ಕುಂಚಗಳ ಬಿಸುಗಳಿಂದ ವರ್ಣಲೇಪನ ಮಾಡಲಾಗಿದೆ. ಮುನ್ನಲೆಯಲ್ಲಿ ಕೆಂಪು ಮಿಶ್ರಿತ ಕಡುಕಪ್ಪು ವರ್ಣದಲ್ಲಿ ವರ್ತುಲಾಕಾರದ ಚಿತ್ರವನ್ನು ಬರೆದಿದ್ದು, ಕ್ಯಾನ್‌ವಾಸ್‌ನ ಸ್ಥಳಾವಕಾಶದ ಹಿನ್ನಲೆಯಲ್ಲಿ ಗಿರಿಶಿಖರಗಳನ್ನು ಹಾಗೂ ಆಗಸದಲ್ಲಿ ಸಂಜೆಯ ಸೂರ್ಯಸ್ತ ದೃಶ್ಯವನ್ನು ಸಾಂಕೇತಿಕವಾಗಿ ಚಿತ್ರಿಸಲಾಗಿದೆ. ಪಾಟೀಲರು ಹಿಮಾಲಯದ ಪ್ರವಾಸದ ದಿನಗಳಲ್ಲಿ ಅಲ್ಲಿನ ಪ್ರಕೃತಿ, ಜೀವನ ಶೈಲಿ ದಿನನಿತ್ಯ ಅಲ್ಲಿನ ಪರಿಸರದ ವಾತಾವರಣದಲ್ಲಾಗುವ ಬದಲಾವಣೆಗಳನ್ನು ಗಮನಿಸಿದ್ದಾರೆ. ಇಲ್ಲಿ ಪ್ರಖರ ವರ್ಣಗಳ ಮೂಲಕ ವಿವಿಧ ಶ್ರೇಣಿಗಳನ್ನು ಸೃಜನಾತ್ಮಕವಾಗಿ ಜ್ಯಾಮಿತಿಕ ಆಕಾರಗಳನ್ನು

೧೮. ಎನ್. ಮರಿಶಾಮಾಚಾರ್ : ಕಲಾಕೋಶ, ಪು. ೩೦೬.



ಚಿತ್ರ - ೨



ಚಿತ್ರ - ೩

ಬಳಸಿಕೊಂಡು ಮುಖ್ಯ ಆಕೃತಿಗಳ ಅರ್ಥಸಾಧ್ಯತೆಯನ್ನು ಸ್ಪಷ್ಟಪಡಿಸುವ ಉದ್ದೇಶವನ್ನು ಪಾಟೀಲರ ಈ ಕಲಾಕೃತಿಯಲ್ಲಿ ಗುರುತಿಸಬಹುದಾಗಿದೆ.

ಚಿತ್ರ ೨. ವಿರಹ :

ಈ ಸಂಯೋಜನಾ ಕಲಾಕೃತಿಯಲ್ಲಿ ಶೃಂಗಾರಭರಿತ ಸ್ತ್ರೀಯೊಬ್ಬಳು ಪಂಜರದ ಬಳಿ ನಿಂತು ಪಂಜರದಲ್ಲಿನ ಗಿಳಿಯತ್ತ ನೋಟ ಬೀರುತ್ತಿರುವುದನ್ನು ಈ ಕೃತಿಯಲ್ಲಿ ಚಿತ್ರಿಸಲಾಗಿದೆ. ಸ್ತ್ರೀಯ ಒಳನೋಟ ಹಾಗೂ ಹೊರನೋಟಕ್ಕೆ ಲಾಲಿತ್ಯವನ್ನು ಸೃಷ್ಟಿಸುವಲ್ಲಿ ಪ್ರಮುಖವಾಗಿ ಕಂದು ಮಿಶ್ರಿತ ವರ್ಣದಿಂದ ಚಿತ್ರವನ್ನು ರಚಿಸಲಾಗಿದೆ. ಒಟ್ಟಾರೆ ಕಲಾಕೃತಿಯಲ್ಲಿ ಪೂರಕವರ್ಣಗಳನ್ನು ಬಳಸಿ ಏಕರೂಪ ಮಾಧ್ಯಮದಲ್ಲಿ ಹೊರ ರೇಖೆಗಳ ಮೂಲಕ ಸಮಾಜದಲ್ಲಿ ಮಹಿಳೆಯು ಏನನ್ನೋ ಕಳೆದುಕೊಂಡಂತೆ ಅತಂತ್ರ ಸ್ಥಿತಿಯ ಭಾವವನ್ನು ಇಲ್ಲಿ ಪಂಜರದಲ್ಲಿಯ ಪಕ್ಷಿಯ ಚಿತ್ರಕ್ಕೆ ಹೋಲಿಸಿ ಕಲಾಕೃತಿಯನ್ನು ರಚಿಸಿದ್ದಾರೆ.

ಚಿತ್ರ ೩. ಸಂಯೋಜನೆ

ವಿರಹದ ತುಡಿತವನ್ನು ಅಭಿವ್ಯಕ್ತಿಸುವ ಚಿತ್ರ ಇದಾಗಿದೆ. ಈ ಕಲಾಕೃತಿಯಲ್ಲಿ ಮನೆಯ ಮುಂದೆ ಹೊರಾಂಗಣದಲ್ಲಿ ಮಹಿಳೆಯರಿಬ್ಬರು ಕುಳಿತುಕೊಂಡಿದ್ದಾರೆ. ಪಕ್ಕದಲ್ಲಿ ಪಂಜರದಲ್ಲಿ ಎರಡು ಪಕ್ಷಿಗಳನ್ನು ಚಿತ್ರಿಸಿದ್ದು ಹಿನ್ನೆಲೆಯಲ್ಲಿ ರಾತ್ರಿಯ ದೃಶ್ಯವನ್ನು ಕಡು ನೀಲಿ ವರ್ಣಗಳಿಂದ ನಿರೂಪಿಸಿ ಸಾಂಕೇತಿಕವಾಗಿ ಚಿತ್ರಿಸಲಾಗಿದೆ. ಈ ಕಲಾಕೃತಿಯ ಸಂಯೋಜನೆಯು ಜ್ಯಾಮಿತಿಕ ಆಕೃತಿಗಳಿಂದ ಕ್ಯೂಬಿಸಂ ಶೈಲಿಯಲ್ಲಿ ರಚಿತಗೊಂಡಿದೆ. ಈ ಕಲಾಕೃತಿಯ ಸ್ಥಳಾವಕಾಶದಲ್ಲಿ ಕೆಂಪು ವರ್ಣದಿಂದ ಹೊರರೇಖೆಗಳು ಸಾಂಕೇತಿಕವಾಗಿ ಚಿತ್ರಿಸಲಾಗಿದೆ. ಈ ಇಬ್ಬರು ಮಹಿಳೆಯರ ಆಕೃತಿಗಳು ಈ ಪಂಜರದಲ್ಲಿರುವಂತೆ ಚಿತ್ರಿಸಿದ್ದು ಒಟ್ಟಾರೆಯಾಗಿ ಸಮಾಜದ ಕಟ್ಟಳೆಯಲ್ಲಿ ಸಿಕ್ಕಿಹಾಕಿಕೊಂಡು ಮಹಿಳೆಯ ವೇದನೆಯನ್ನು ಕಡುವರ್ಣ ಮತ್ತು ಸೌಮ್ಯವರ್ಣಗಳ ಮೂಲಕ ಡ್ರೈಬ್ರಷ್ ತಂತ್ರದಿಂದ ರೂಪಿಸಿ ಚಿತ್ರದಲ್ಲಿ ವಿಶಿಷ್ಟ ಅನುಭವವನ್ನು ಚಿತ್ರಿಸಿದ್ದಾರೆ.

ಚಿತ್ರ ೪. ಸಂಯೋಜನೆ :

ಮಾತೃ ಹೃದಯದ ಶ್ರೀಮಂತಿಕೆಯನ್ನು ತೋರಿಸುವಂತಹ ಈ ಕಲಾಕೃತಿಯು ಆಧುನಿಕ ನೆಲೆಯಲ್ಲಿ ಮೂಡಿರುವುದು ಕಂಡುಬರುತ್ತದೆ. ಚಿತ್ರ ದೃಶ್ಯದಲ್ಲಿ ಮಗುವೊಂದು ತೊಟ್ಟಿಲಿನಲ್ಲಿ ಮಲಗಿದ್ದು



ಚಿತ್ರ – ೪



ಚಿತ್ರ – ೫



ಚಿತ್ರ - ೬

ಅದು ಏನನ್ನೂ ಬಯಸುತ್ತಿರುವಂತೆ ಪಾಯಶಃ ತಾಯಿಯ ಮೊಲೆ ಹಾಲಿಗೆ ಹಾತೊರೆಯುತ್ತಿರುವಂತೆ ಇದೆ. ತಾಯಿಯು ಪ್ರಾಪಂಚಿಕ ಜೀವನದಲ್ಲಿ ಮಗ್ನಳಾಗಿ ಜೋಗುಳದ ಬದಲು ಧ್ವನಿಮುದ್ರಕ ಯಂತ್ರವನ್ನು ಬಳಸಿದ್ದು ಗೋಚರಿಸುತ್ತದೆ. ಮಗುವಿಗೆ ತಾಯಿಯ ಮೊಲೆ ಹಾಲು, ಜೋಗುಳ ಪ್ರಮುಖ ಎಂಬುದನ್ನು ಸಾಂಕೇತಿಕವಾಗಿ ಚಿತ್ರಿಸಲಾಗಿದೆ. ಚಿತ್ರದ ಸ್ಥಳಾವಕಾಶವು ಸಂಪೂರ್ಣವಾಗಿ ಆವರಿಸಿಕೊಂಡಿದ್ದು ಜ್ಯಾಮಿತಿಕ ಆಕಾರಗಳ, ರೇಖೆಗಳಿಂದ ನಿರ್ಮಿತಗೊಂಡಿದೆ. ಒಟ್ಟಾರೆ ಈ ಕಲಾಕೃತಿಯಲ್ಲಿ ಮಗುವಿನ ಬಾಲ್ಯಾವಸ್ಥೆಯ ಸಂಧಿಗ್ದತೆಯನ್ನು ಆಧುನಿಕತೆಯಲ್ಲಿ ಸೃಜನಾತ್ಮಕವಾಗಿ ರೂಪಾಂತರಿಸಿ ವರ್ಣಸಂಯೋಜನೆಯೊಂದಿಗೆ ಅಭಿವ್ಯಕ್ತಿಸಲ್ಪಟ್ಟಿದೆ. ಪಾಟೀಲರ ಈ ಕಲಾಕೃತಿಯು ಎರಡೂ ನಿಲುವಿನಲ್ಲಿ ಭಿನ್ನ ಭಿನ್ನವಾದ ರೀತಿಯಲ್ಲಿ ವಿಶಿಷ್ಟವಾದ ಅನುಭವವನ್ನು ನೀಡುತ್ತದೆ.

ಚಿತ್ರ ೫. ಗುರಿ :

ಈ ಕಲಾಕೃತಿಯು ಮೇಲಿನ ಚಿತ್ರಗಳಿಗಿಂತ ಬಿನ್ನವಾಗಿ ಚಿತ್ರಿತವಾಗಿದ್ದು, ಜ್ಯಾಮಿತಿಕ ಚೌಕಾಕಾರದ ಆಕೃತಿಗಳನ್ನು ವಿವಿಧ ಗಾತ್ರಗಳಲ್ಲಿ ಬಳಸಿ ಚೌಕಾಕಾರಗಳಿಗೆ ಕೆಂಪು, ಹಳದಿ, ನೀಲ ಕೇಸರಿ ವರ್ಣಗಳನ್ನು ಬಳಸಿ ಆಗಸದತ್ತ ದೂರದ ಮಾರ್ಗವನ್ನು ಸೂಚಿಸುವಂತೆ ಸಾಂಕೇತಿಕವಾಗಿ ಚಿತ್ರಿಸಲಾಗಿದೆ. ಯಶಸ್ಸಿನ ಗುರಿಯನ್ನು ತಲುಪುವ ಕಲ್ಪನೆಯನ್ನು ಕೊಡುವುದಕ್ಕೆ ದೂರದ ಹಾದಿಯಂತೆ ವಿವಿಧ ಕವಲುಗಳಲ್ಲಿ ಆಕಾಶವನ್ನು ಯಶಸ್ಸಿನ ಕೇಂದ್ರಬಿಂದುವನ್ನಾಗಿ ಸೂಚಿಸುತ್ತಾ ಯಾವುದೇ ಮೂಲ ಆಕೃತಿಗಳನ್ನು ಕೇಂದ್ರೀಕರಿಸದೇ ಇಲ್ಲಿ ಚೌಕಾಕಾರದ ಆಕೃತಿಗಳನ್ನು ಚಿತ್ರದ ಉದ್ದೇಶಕ್ಕೆ ಪೂರಕವಾಗಿ ರೂಪಿತಗೊಂಡಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಚಿತ್ರದಲ್ಲಿ ಯಾವುದೇ ವಿಡಂಬನೆಯ ಉದ್ದೇಶವನ್ನು ಹೊಂದಿರದೆ, ಕಲಾಕೃತಿಯಲ್ಲಿ ಬಳಸಿದ ವರ್ಣಗಳ ಪ್ರಯೋಗ ಸಮತೋಲನದಿಂದ ಕೂಡಿದ್ದು, ಆಯ್ದ ಆಕಾರಗಳು ಮನಸ್ಸಿಗೆ ಸಮಾಧಾನ ಮತ್ತು ಖುಷಿ ನೀಡುವಲ್ಲಿ ವಿಶೇಷ ಪರಿಣಾಮವನ್ನು ಬೀರಿವೆ.

ಚಿತ್ರ ೬. ಸಂಯೋಜನೆ :

ಇದೊಂದು ನವ್ಯ ಸ್ವರೂಪದ ಭಾವಚಿತ್ರವೆಂದೇ ಹೇಳಬಹುದು. ಯವ್ವನಾವಸ್ಥೆಯ ನೀಳಕಾಯದ ಯುವತಿಯ ಈ ಭಾವಚಿತ್ರದಲ್ಲಿ ಬಾಗಿದ ಬಿಲ್ಲಿನಂತೆ ಹುಬ್ಬುಗಳು, ಮೀನಿನಾಕಾರದ ಕಣ್ಣು ನಿಳವಾದ ಮೂಗು, ಕೆಂದುಟಿ, ವಿಶಾಲವಾದ ನವಿರಾದ ಕೇಶ ವಿನ್ಯಾಸದ ಅಲೆಗಳು ಹಾಗೂ ವಕ್ರವಾಗಿ ಅಂಕುಡೊಂಕಾಗಿ ಅಸಮಾಂತರವಾಗಿ ಹಬ್ಬಿದ ಎಲೆಗಳ ಹೊದಿಕೆ ಶಿರಕ್ಕೆ ಕೀರಿಟವನ್ನು ಹೋಲುವ



ಚಿತ್ರ – ೭



ಚಿತ್ರ – ೮

ಹಾಗೆ ಈ ಸ್ತ್ರೀಭಾವಚಿತ್ರ ರಚನೆಯಾಗಿದೆ. ಈ ಚಿತ್ರದಲ್ಲಿ ಪಾಟೀಲರು ಆಕೆಯ ಮುಖದಲ್ಲಿ ಮುಗ್ದತೆಯನ್ನು, ಮುಗುಳ್ನಗೆಯನ್ನು ನಮ್ಮತ್ತ ನೋಡಿ ಸಂಜ್ಞೆಮಾಡಿ ನಸುನಗುತ್ತಿರುವ ಹಾಗೆ ಸರಳ, ವಕ್ರ, ಬಾಹ್ಯ, ಭಾವಸೂಚಕ, ಬಾಗುರೇಖೆ ಮತ್ತು ನಾಜುಕು ರೇಖೆಗಳಿಂದ ಕೂಡಿದೆ. ಹಿನ್ನಲೆಗೆ ಕಂದು ವರ್ಣವನ್ನು ಬಳಸಲಾಗಿದ್ದು, ಮುನ್ನೆಲೆ ಚಿತ್ರವೂ ಹೊರಬರುವಂತೆ ಕಾಣುತ್ತದೆ. ಮುಸುಕಾದ ವರ್ಣಗಳನ್ನು ಚಿತ್ರದ ಅವಕಾಶದ ಮದ್ಯ ಭಾಗದಲ್ಲಿ ಚಿತ್ರಿಸಿರುವ ಕಲಾಕೃತಿಯು ಚೀನಾರ ಕಿರುರೂಪ ಚಿತ್ರಕಲೆಯ ಶೈಲಿಯನ್ನು ಹೋಲುವ ಹಾಗೆ ಚಿತ್ರ ರಚನೆಯಾಗಿದೆ.

ಚಿತ್ರ ೭. ಸಂಯೋಜನೆ :

ಕಲಾಕೃತಿಯನ್ನು ಪಾಟೀಲರು ಸಮಕಾಲಿನ ನವ್ಯ ಶೈಲಿಯಲ್ಲಿ ಚಿತ್ರಿಸಿದ್ದಾರೆ. ಕಲಾಕೃತಿ ರಚನೆಯಲ್ಲಿ ಎರಡು ಪಟ್ಟಿಕೆಗಳನ್ನಾಗಿ ವಿಂಗಡಿಸಿಕೊಂಡು ಮನೆಯ ಒಳಾಂಗಣವನ್ನು ಕೆಂಪು, ಶುಭ್ರ, ಕಡುಕೆಂಪು ವರ್ಣಗಳಿಂದ ಚಿತ್ರಿಸಿ ಸಾಮಿಪ್ಯ-ದೂರದ ಕಲ್ಪನೆ ನೀಡಲು ಮಹಿಳೆಯ ಚಿತ್ರವನ್ನು ಅತೀ ಚಿಕ್ಕಗಾತ್ರದಲ್ಲಿ ಚಿತ್ರಿಸಲಾಗಿದೆ. ಹಾಗೆಯೇ ಮೇಲಿನ ಪಟ್ಟಿಯಲ್ಲಿ ಮಹಿಳೆಯು ಮನೆಯ ಒಂದು ಮೂಲೆಯಲ್ಲಿ ಕೊಂಡದಲ್ಲಿದ್ದ ಗಿಡದ ಹೂವನ್ನು ಕಿತ್ತು ಅದನ್ನೇ ನೋಡುತ್ತಿರುವಂತೆ ಚಿತ್ರಿಸಲಾಗಿದೆ. ಕಲಾಕೃತಿಯಲ್ಲಿ ಸಂಯೋಜನೆಗನುಸಾರವಾಗಿ ಪ್ರತಿಯೊಂದು ವರ್ಣಗಳ ಮೆರಗು ಎದ್ದುಕಾಣುತ್ತದೆ. ಮೇಲಿನ ಪಟ್ಟಿಯಲ್ಲಿ ಚಿತ್ರಿಸಿದ ಮಹಿಳೆಯ ವಸ್ತ್ರಾಲಂಕಾರವು ಶುಭ್ರ ವರ್ಣದಿಂದ ಕೂಡಿದ್ದು, ಹಿನ್ನಲೆಯಲ್ಲಿ ಗಡಸುವರ್ಣಗಳಿಂದ ಏಕಾಂತದ ವಾತಾವರಣವನ್ನು ಸೃಷ್ಟಿಸಿದೆ. ವಿರಹವೇದನೆಯ ನೋವಿನಲ್ಲಿ ಆತುರದಿಂದ ಕಾಯುತ್ತಿರುವಂತೆ ಭಾವತೀವ್ರತೆಯನ್ನು ನೈಜ ಕಲ್ಪನೆಯ ವಿವರವನ್ನು ಮೂಡಿಸುವಲ್ಲಿ ಈ ಕೃತಿ ಸರ್ರಿಯಾಲಿಸ್ಟಿಕ್ ಶೈಲಿಯ ಪ್ರಭಾವದ ಹಿನ್ನೆಲೆಯಲ್ಲಿ ರಚನೆಯಾಗಿದೆ.

ಚಿತ್ರ ೮. ನೃತ್ಯಗಾರರು :

ಈ ಕಲಾಕೃತಿಯು ಪ್ರಾದೇಶಿಕ ನೆಲೆಗಟ್ಟಿನ ನೃತ್ಯವನ್ನು ನಿರೂಪಿಸುವಂತಿದೆ. ಇಬ್ಬರು ಪುರುಷರು ಶಾಸ್ತ್ರೋಕ್ತವಾಗಿ ನೃತ್ಯದಲ್ಲಿ ತೊಡಗಿದ್ದು ಉತ್ತರ ಕರ್ನಾಟಕದಲ್ಲಿ ಮೈಲಾರರು (ಗೊರವಪ್ಪಗಳು) ಧರಿಸಿದ ವೇಷಭೂಷಣ ಈ ನೃತ್ಯಗಾರರ ವೇಷಭೂಷಣಕ್ಕೆ ಹೋಲಿಕೆಯಾಗುವಂತೆ ಚಿತ್ರಿತವಾಗಿದೆ. ವಾಷ್‌ತಂತ್ರದ ಮೂಲಕ ವರ್ಣಗಳನ್ನು ಪಸರಿಸಿ ಮಾನವಾಕೃತಿಗೆ ತ್ರಿ ಆಯಾಮ ನೀಡುವ ಉದ್ದೇಶದಿಂದ ಅಲ್ಲಲ್ಲಿ ನೆರಳು ಬೆಳಕಿನ ಛಾಯೆಯನ್ನು ನೀಡಲಾಗಿದೆ. ಇಲ್ಲಿ ಆಂತರಿಕವಾಗಿ ಉಳಿಸಿದ ವರ್ಣಮೇಳ ತರತಮವಿಲ್ಲದ ಹಾಗೆ ನಿರ್ವಹಿಸಲಾಗಿದೆ. ಆದರೂ ಸಂಯೋಜನೆಗೆ



ಚಿತ್ರ – ೯



ಚಿತ್ರ – ೧೦

ಅನುಕೂಲವಾಗುವಂತೆ ಹಾಗೂ ನೃತ್ಯಗಾರರ ಆಕೃತಿಗಳು ಸ್ಪಷ್ಟವಾಗಿರದೆ ಅಸ್ಪಷ್ಟತೆಯಿಂದ ಮುಸುಕಾಗಿ ಕಾಣಿಸುತ್ತದೆ. ಚಿತ್ರದಲ್ಲಿನ ಹಾವ, ಭಾವ, ರೂಪಗಳನ್ನು ವರ್ಣಗಳ ಮೂಲಕ ವ್ಯಕ್ತಪಡಿಸುವಲ್ಲಿ ಅಪಾರದರ್ಶಕ ವರ್ಣಗಾರಿಕಾ ತಂತ್ರಗಳಲ್ಲಿ ಚಿತ್ರಿತವಾಗಿದೆ. ಹೀಗೆ ಜನಪದ ಶೈಲಿಯ ನೃತ್ಯವನ್ನು ನೈಜವಾಗಿ ಚಿತ್ರಿಸಿದೆ ನವ್ಯೆಕಲೆಯತ್ತ ಕೊಂಡೊಯ್ದು ಪಾಟೀಲರು ಆಕೃತಿಯ ಭಾವಕ್ಕಿಂತ ವೀಕ್ಷಕನ ಭಾವನೆಯೂ ಒಂದಾಗುವಂತೆ ಮಾಡಿದ್ದಾರೆ.

ಚಿತ್ರ ೯. ಕಾಳಿಂಗ ಮರ್ದನ :

ಈ ಸಂಯೋಜನಾ ಚಿತ್ರವು ಭಾಗವತ ಪುರಾಣದ ಪೌರಾಣಿಕ ಕಥೆಯನ್ನಾಧರಿಸಿದ ಶ್ರೀಕೃಷ್ಣನ ಕುರಿತಾದ ಕಲಾಕೃತಿ. ಕಾಳಿಂಗ ಮರ್ದನದ ಸನ್ನಿವೇಶದ ಆಕೃತಿಯು ಒಂದು ವಿಶೇಷ ರೂಪದಲ್ಲಿ ಚಿತ್ರಿಸಲಾಗಿದೆ. ಕಮಲದಂತೆ ದಳಗಳು ಕೆಲವು ಕೆಳಗೆ ಉದುರಿದಂತೆ ಏಳು ಹೆಡೆಯ ಸರ್ಪವನ್ನು ವಿನ್ಯಾಸಗೊಳಿಸಲಾಗಿದೆ. ಮೂಲ ಆಕೃತಿಯ ಹಿನ್ನಲೆಯಲ್ಲಿ ನೀಲಿ ಮತ್ತು ತೆಳು ನೀಲಿ ವರ್ಣಗಳಿಂದ ಕುಂಚದ ಸರಳವಾದ ಬಿಸುಗಳಿಂದ ಅಲೆಗಳನ್ನು ಸೃಷ್ಟಿಸಿ ಸಮುದ್ರದ ಕಲ್ಪನೆಯನ್ನು ಮಾಡಲಾಗಿದೆ. ಅಲ್ಲಲ್ಲಿ ಸಾಂಕೇತಿಕವಾಗಿ ಜಲಚರಗಳ ಚಿತ್ರಗಳು ಕಂಡುಬರುತ್ತವೆ. ಹಾವಿನ ಹೆಡೆಯ ಮೇಲೆ ನಿಂತು ಶ್ರೀಕೃಷ್ಣನು ಕೋಳಲು ನುಡಿಸುತ್ತಿರುವಂತೆ ಅತೀ ಚಿಕ್ಕದಾಗಿ ಕಂಡುಬರುತ್ತದೆ. ಈ ಚಿತ್ರ ಸಂಯೋಜನೆಯಲ್ಲಿ ಬಳಸಿದ ಪ್ರತಿಯೊಂದು ಆಕೃತಿಗಳು ಜ್ಯಾಮಿತಿಕ ಆಕಾರದಲ್ಲಿ ಘನಾಕೃತಿ (ಕ್ಯೂಬಿಸಂ) ಶೈಲಿಯಲ್ಲಿ ಚಿತ್ರಿಸಲಾಗಿದೆ. ಇಲ್ಲಿ ರೇಖಾ ತಂತ್ರಕ್ಕೆ ಹೆಚ್ಚು ಮಹತ್ವವನ್ನು ನೀಡದೆ ಪ್ರಖರ ಮತ್ತು ಸೌಮ್ಯ ವರ್ಣಗಳನ್ನು ಕುಂಚದ ಒಣಬೀಸುಗಳ (ಡ್ರೈಬ್ರೆಷ್) ತಂತ್ರಗಾರಿಕೆಯನ್ನು ದುಡಿಸಿಕೊಂಡು ಕೃಷ್ಣನನ್ನು ಚಿಕ್ಕದಾಗಿ ರೂಪಿಸಿದ್ದರೂ ಸಂಯೋಜನೆಯಲ್ಲಿ ಆಕೃತಿಯನ್ನು ಪ್ರಧಾನವಾಗಿ ಚಿತ್ರಿಸಿ ಕ್ಯೂಬಿಸ್ಟ್ ನೆಲೆಯಲ್ಲಿ ಚಿತ್ರಿಸುವ ಪ್ರಯತ್ನವಿಲ್ಲದೆ.

ಚಿತ್ರ ೧೦. ವೇಣುವಾದಕ ಗೋಪಾಲ :

ಈ ಕೃತಿಯಲ್ಲಿ ಬೃಹತ್ ಮರದ ಅಡಿಯಲ್ಲಿ ಕೃಷ್ಣ ಕುಳಿತು ಕೊಳಲು ನುಡಿಸುವುದರಲ್ಲಿ ಮಗ್ನನಾಗಿರುವಂತೆ ರಚನೆಯಾಗಿದೆ. ಹಿನ್ನೆಲೆಯಲ್ಲಿ ಹಚ್ಚು ಹಸಿರಿನ ಪ್ರಕೃತಿ ಕೇಸರಿ ಮತ್ತು ನೀಲಾಕಾಶದಲ್ಲಿ ದೊಡ್ಡದಾಗಿ ಸೂರ್ಯನನ್ನು ಪ್ರತಿಬಿಂಬಿಸುವ ವರ್ತುಲವನ್ನು ಕೆಂಪು ಮಿಶ್ರಿತ ವರ್ಣದಿಂದ ಚಿತ್ರಿಸಿದ ಸಂಜೆಯ ಸೂರ್ಯಸ್ತದ ದೃಶ್ಯವಿದಾಗಿದೆ.



ಚಿತ್ರ - ೧೧



ಚಿತ್ರ - ೧೨

ಈ ಕಲಾಕೃತಿಯು ನೈಜ ಚಿತ್ರಣಕ್ಕೆ ತದ್ವಿರುದ್ಧವಾಗಿದ್ದು, ಜ್ಯಾಮಿತಿಕ ಆಕೃತಿಗಳಿಂದ ಕೂಡಿದೆ. ಕಲಾಕೃತಿಯ ಮೂಲ ಆಕೃತಿಗಳಾದ ಕೃಷ್ಣ, ಮರದ ಕೊಂಬೆ, ಪಕ್ಷಿಗಳು ಇವುಗಳನ್ನು ಘನಾಕೃತಿಯ ಶೈಲಿಯಲ್ಲಿ ಚಿತ್ರಿಸಲಾಗಿದೆ. ಹೀಗಾಗಿ ಇವು ತ್ರಿಆಯಾಮಗಳಲ್ಲಿ ರಚಿತಗೊಂಡು ಉಬ್ಬುಶಿಲ್ಪದ ಅನುಭವವನ್ನೂ ನೀಡುತ್ತದೆ. ಆಗಸಕ್ಕೆ ಪ್ರಖರ ವರ್ಣಗಳ ಬಳಕೆಯಾಗಿದ್ದು, ಭೂಪಾತಳಿಯನ್ನು ಕಂದು ಮಿಶ್ರಿತ ದಟ್ಟ ಹಸಿರು ವರ್ಣಗಳಿಂದ ವಿನ್ಯಾಸಗೊಳಿಸಿದ್ದಾರೆ. ಇಲ್ಲಿ ಪ್ರಮುಖವಾಗಿ ದಟ್ಟ ಮತ್ತು ಬೆಳಕು ಈ ಎರಡು ಛಾಯೆಗಳು ಗೋಚರಿಸುತ್ತವೆ. ಚಿತ್ರದ ಆಕೃತಿಗಳನ್ನು ಸ್ಪಷ್ಟವಾಗಿ ಚಿತ್ರಿಸದೇ ಆಧುನಿಕ ನೆಲೆಯಲ್ಲಿ ಚಿತ್ರರಚನೆಯಾಗಿದೆ.

ಚಿತ್ರ ೧೧. ಶೀರ್ಷಿಕೆ ರಹಿತ (ತೈಲವರ್ಣ) :

ವಿರೂಪ ಆಕೃತಿಗಳ ಚಿತ್ರಣವನ್ನು ಚಿತ್ರಿಸುವುದು ನಮ್ಮ ಸಮಕಾಲೀನ ಸಂದರ್ಭದಲ್ಲಿ ಅತ್ಯಂತ ಪ್ರಚಲಿತವಿರುವ ಶೈಲಿಯಾಗಿದೆ. ಮನುಷ್ಯ ಆಕೃತಿಗಳನ್ನು ನವ್ಯದ ಕಾರಣದಿಂದಾಗಿ ವಿಕೃತಗೊಳಿಸುವ ಕ್ರಿಯೆ ಬಹೂ ದಿನದಿಂದಲೂ ಉಳಿದುಬಂದ ಪದ್ಧತಿಯಾಗಿದೆ.

ಕಲಾಕೃತಿಯೊಂದು ತನ್ನ ಸಂಸ್ಕೃತಿಯ ಒರಟುತನವನ್ನು ವಿಕೃತಿಯನ್ನು ಬಳಸಿಕೊಂಡಿರಬೇಕು ಕಲಾಕೃತಿಯೊಂದು ಸುಂದರವಾಗಿ ಮಾತ್ರವೇ ಸೃಷ್ಟಿಯಾಗಬೇಕಿಲ್ಲ. ವಿಕೃತವಾದ ರೂಪಗಳು ಸಹ ಸುಂದರ ಅನುಭವವನ್ನು ನೀಡಬಲ್ಲವು. ವಿಕೃತಿಯನ್ನು ನವ್ಯಕಲೆಯ ಮುಖ್ಯಲಕ್ಷಣಗಳಲ್ಲೊದಾಗಿ ವಿಮರ್ಶಕರು ಗುರುತಿಸಿದ್ದಾರೆ."[೯]

ಪಾಟೀಲರು ಈ ದಿಸೆಯಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ. ಮಾನವನ ಶೀರಭಾಗವನ್ನು ದಟ್ಟ ಕೆಂಪುವರ್ಣದಿಂದ ತಲೆಯ ಭಾಗದಲ್ಲಿ ಅಲ್ಲಲ್ಲಿ ಹಳದಿ, ಕಪ್ಪು ವರ್ಣಗಳಿಂದ ಬಳಸದೆ ಕಲಾಕೃತಿ ರಚನಾ ಪರಿಕರವಾದ ಚಾಕುವಿನ(Knife)ನ ಸಹಾಯದಿಂದ ದಪ್ಪವಾಗಿ ವರ್ಣಲೇಪನ ಮಾಡಿದ್ದಾರೆ. ಪಾಟೀಲರು ಈ ವಿರೂಪ ಕಲಾಕೃತಿಯಲ್ಲಿ ತಮ್ಮ ಚಿಂತನೆಗಳಿಗೆ ಮಾನವೀಯ ಮೌಲ್ಯವನ್ನು ತುಂಬುವ ಪ್ರಯತ್ನ ಮಾಡಿದ್ದಾರೆ.

ಚಿತ್ರ ೧೨. ಸಂಯೋಜನೆ (ತೈಲವರ್ಣ) :

ಜನಸಾಮಾನ್ಯರ ಬದುಕನ್ನು ಆಧರಿಸಿದ ಈ ಕಲಾಕೃತಿಯಲ್ಲಿ ಸ್ಥಳಾವಕಾಶವನ್ನು ವಿಭಿನ್ನ ಆಕೃತಿಗಳ ವರ್ಣಸಂಯೋಜನೆಯ ಮೂಲಕ ಕಲಾಕೃತಿಯಲ್ಲಿ ಚಿತ್ರಿಸಲಾಗಿದೆ. ಇಬ್ಬರು ಮಹಿಳೆಯರು

---

೧೯. ಸಿದ್ಧಲಿಂಗಸ್ವಾಮಿ ಹಿರೇಮಠ (ಸಂ) : ಕಲಾವಿದ ಆರ್.ಎಂ. ಹಡಪದ, ಪು. ೧೬೦.



ಚಿತ್ರ - ೧೩

ಮತ್ತು ಬೃಹತ್ ಮರವನ್ನು ಪ್ರಧಾನ ಅಂಶವಾಗಿ ಗಮನಿಸಿ ಸಂಯೋಜನೆಗೊಳಿಸಲಾಗಿದೆ. ಎತ್ತರವಾದ ಕಟ್ಟಡ ಮತ್ತು ಮೂವತ್ತಕ್ಕೂ ಹೆಚ್ಚು ಮಾನವಾಕೃತಿಗಳು ಚಿಕ್ಕದಾಗಿ ಮೂಡಿಬಂದಿದ್ದು, ಪ್ರತಿಯೊಂದು ಆಕೃತಿಗಳನ್ನು ಗಮನಿಸಿದಾಗ ಹಾವ, ಭಾವ ಮತ್ತು ಭಂಗಿಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಈ ಹಿಂದೆ ಪ್ರಸ್ತಾಪಿಸಿದಂತೆ ಮರವನ್ನು ಅಂಕುಡೊಂಕಾಗಿ ಕ್ಯೂಬಿಸಂ ಶೈಲಿಯಲ್ಲಿ ರಚಿಸಿರುವುದನ್ನು ನಾವು ಇಲ್ಲಿ ಗಮನಿಸಬಹುದಾಗಿದೆ. ಕಲಾಕೃತಿಯಲ್ಲಿ ಪ್ರಾಥಮಿಕ ವರ್ಣಗಳನ್ನು ಬಳಸದೆ ಪ್ರಖರವರ್ಣಗಳ ಮಿಶ್ರಣದಿಂದ ಸುಟ್ಟು ವರ್ಣಗಳನ್ನು ಸೃಷ್ಟಿಸಿಕೊಳ್ಳಲಾಗಿದೆ. ಹಾಗೂ ವರ್ಣಗಳ ಸಂಯೋಜನೆಗೆ ಪೂರಕವಾಗಿ ಮುನ್ನೆಲೆ, ಹಿನ್ನೆಲೆ, ಭೂಪಾತಳಿ ದೂರ, ಸಮೀಪದ ಅನುಭವ ವ್ಯಕ್ತವಾಗುವಂತೆ ಕೆಂಪುವರ್ಣದಿಂದ ಕೂಡಿದ ಹೊರರೇಖೆಗಳು ಪ್ರಧಾನ ಪಾತ್ರವಹಿಸಿವೆ. ಮತ್ತು ಈ ದಪ್ಪ ರೇಖೆಗಳು ಪಾಶ್ಚಾತ್ಯರ ಇಂಪ್ರೆಷನಿಷ್ಟ ಶೈಲಿಯ ರೇಖೆಗಳನ್ನು ನೆನಪಿಸುತ್ತವೆ.

ಚಿತ್ರ ೧೩. ತಾಯಿ ಮತ್ತು ಮಗು :


ತಾಯಿ ಮತ್ತು ಮಗುವಿನ ಮಧ್ಯದ ಪ್ರೀತಿಯ ಮಿಡಿತ ಮಮತೆ ಮನೋಭಾವವನ್ನು ಪಾಟೀಲರು ಈ ಸಂಯೋಜನಾ ಚಿತ್ರದಲ್ಲಿ ಚಿತ್ರಿಸಿದ್ದಾರೆ. ಅಳುತ್ತಿರುವ ಮಗುವನ್ನು ಮಗ್ಗಲಲ್ಲಿ ಎತ್ತಿಹಿಡಿದು ಹುಣ್ಣಿಮೆಯ ಚಂದ್ರನನ್ನು ತೋರಿಸುತ್ತ ಅಳುತ್ತಿರುವ ಮಗುವನ್ನು ಖುಷಿಪಡಿಸಿ ಸಂತೈಸುತ್ತಿರುವಂತೆ, ಇವುಗಳ ಮಧ್ಯ ಮಗುವಿನ ಅಳು ಮತ್ತು ನಗು ಇವೆರಡೂ ತಾಯಿಯು ಅನುಭವಿಸುತ್ತಿರುವಂತೆ ಮಾತೃಹೃದಯದ ಶ್ರೀಮಂತಿಕೆಯನ್ನು ಇಲ್ಲಿ ಎತ್ತಿತೋರಿಸಲಾಗಿದೆ.

ಅವಕಾಶದ ಮಧ್ಯಭಾಗದಲ್ಲಿ ಓರೆಯಾಗಿ ತದ್ವಿರುದ್ಧವಾಗಿ ತಾಯಿ ಮತ್ತು ಮಗುವಿನ ಆಕೃತಿಗಳು ರೂಪಗೊಂಡಿದ್ದು, ಕ್ಯೂಬಿಷ್ಟ ಮತ್ತು ಜಾಮಿತ್ರಿ ಆಕಾರಗಳ ಸಮ್ಮಿಶ್ರ ನೆಲೆಯಲ್ಲಿ ರೂಪಗೊಂಡಿವೆ.

ಚಿತ್ರ ೧೪. ವಾರ್ಲಿ ಜಾನಪದ ಚಿತ್ರಕಲೆ (ತೈಲವರ್ಣ) :

"ಭಾರತದಲ್ಲಿ ಜನಪದ ಕಲೆ ಹಾಗೂ ಕರಕುಶಲ ಕಲೆ ಜನಜೀವನದ ಅವಿಭಾಜ್ಯ ಅಂಗವಾಗಿ ಬೆಳದುಬಂದಿವೆ. ನಮ್ಮ ಮನೆಗಳಲ್ಲಿ ನಿತ್ಯ ಬಳಸುವ ಸಾಮಗ್ರಿಗಳು ಹಬ್ಬ, ಹುಣ್ಣಿಮೆಗಳಲ್ಲಿ ಸಡಗರದ ದಿನಗಳಲ್ಲಿ ಉತ್ಸವ ಹಾಗೂ ವಿಧಿ-ವಿಧಾನಗಳಲ್ಲಿ ಬಳಸುವ ವಿಶೇಷ ವಸ್ತುಗಳು ನಮ್ಮ ಜನರ ಕರಕುಶಲ ಕಲೆಯ ಅಭಿವ್ಯಕ್ತಿ ಮಾಧ್ಯಮಗಳಾಗಿ ಸಾವಿರಾರು ವರ್ಷಗಳಿಂದ ಸಂಸ್ಕೃತಿ ಸಂಪ್ರದಾಯ ಬೆಳವಣಿಗೆಯ ಜೊತೆಗೆ ಬೆಳೆದುಬಂದುದನ್ನು ನಾವು ಗಮನಿಸಬಹುದಾಗಿದೆ."[೨೦]

೨೦. ಶಂಕರ ಪಾಟೀಲ : ಚಿತ್ರಕಲಾ ಚಿಂತನೆ, ಪು. ೩.



ಚಿತ್ರ – ೧೪



ಚಿತ್ರ – ೧೫



ಆಧುನಿಕ ನೆರೆಯ ವರ್ಣಚಿತ್ರಗಳು (ತೈಲವರ್ಣ) ಚಿತ್ರ – ೧೬

ಭಾರತದ ಬೇರೆ ಬೇರೆ ಕಡೆಯ ಆದಿವಾಸಿ ಜನಾಂಗಗಳಾದ ಮಹಾರಾಷ್ಟ್ರದ ಠಾಣೆ ಜಿಲ್ಲೆಯ ವಾರ್ಲಿ ಬುಡಕಟ್ಟಿನ ಜನಾಂಗ, ರಾಜಸ್ಥಾನದ ಮಧುಮನಿ ಜನಾಂಗ, ಪಶ್ಚಿಮ ಬಂಗಾಲದ ಸಂತಾಲರು, ಮಧ್ಯಪ್ರದೇಶದ ಬಸ್ತರರು, ಆಂದ್ರಪ್ರದೇಶದ ಚಂಚರು ಈ ವಿವಿಧ ಗುಂಪುಗಳ ತಮ್ಮದೇ ಆದ ವೈಶಿಷ್ಟ್ಯ ಶೈಲಿಗಳಲ್ಲಿ ಕಲೆಯನ್ನು ರಚಿಸಿದ್ದು ಕಂಡುಬರುತ್ತದೆ. ಈ ಶೈಲಿ ಆದಿವಾಸಿ ಅಥವಾ ಜನಪದ ಕಲೆಯೆಂದೇ ಗುರುತಿಸಲ್ಪಡುತ್ತಿದ್ದು, ಇಂದಿಗೂ ಕೆಲವೆಡೆ ಪ್ರಚಲಿತದಲ್ಲಿದೆ. ಆದರೆ ನವ್ಯದ ಸಂದರ್ಭದಲ್ಲಿ ಈ ಕಲಾಪ್ರಕಾರಗಳ ಪ್ರಭಾವ ನಮ್ಮ ಸಮಕಾಲೀನ ಕಲೆಯ ಮೇಲೆ ಯಾವುದೇ ಒಂದು ಕಲಾ ಪ್ರಕಾರವಾಗಿ ಬೆಳೆದಿದ್ದು ಕಂಡುಬರುವುದಿಲ್ಲ.”[೨೧] ಪ್ರಸ್ತುತ ದಿನಮಾನಗಳಲ್ಲಿ ಕೆಲವು ಕಲಾವಿದರು ಈ ಜನಪದ ಹಾಗೂ ಆದಿವಾಸಿ ಕಲೆಗಳಿಗೆ ಪ್ರಭಾವಿತರಾಗಿದ್ದುದನ್ನು ಅವರ ಕಲಾಕೃತಿಗಳಲ್ಲಿ ಗಮನಿಸಬಹುದಾಗಿದೆ. ಪಾಟೀಲರು ಕೂಡ ತಮ್ಮ ಕೃತಿ ಸಂಯೋಜನೆಯಲ್ಲಿ ಜನಪದ ಆಕೃತಿಗಳನ್ನು ಬಳಸಿದ್ದಾರೆ. ಹಾಗೂ ಅಂತಹ ಜನಪದ ಕಲಾಕೃತಿಗಳನ್ನು ಸಮಕಾಲೀನ ಆಧುನಿಕ ನೆಲೆಯಲ್ಲಿ ಬಳಸಿ ಕಲಾಕೃತಿಗಳನ್ನು ರಚಿಸಿದ್ದಾರೆ. ಪಾಟೀಲರು ವಾರ್ಲಿ ಜನಪದ ಕಲಾಕೃತಿಗಳಲ್ಲಿ ಅನುಕರಣೆ ಮಾಡದೆ ವರ್ತುಲಾಕಾರದಲ್ಲಿ ನೂರಾರೂ ಮಾನವಾಕೃತಿಗಳನ್ನು ಚಿತ್ರಿಸಲು ದಟ್ಟವಾದ ಕಡುಕೆಂಪುವರ್ಣದ ರೇಖೆಗಳ ಬಳಕೆಯಾಗಿರುವುದನ್ನು ಕಾಣಬಹುದಾಗಿದೆ. ಹಾಗೂ ಸರಳೀಕೃತ ಮಾನವ ಆಕೃತಿಗಳು ಚಿತ್ರ ಸಂಯೋಜನೆಯಲ್ಲಿ ವೃತ್ತಾಕಾರದಲ್ಲಿ ವಿನ್ಯಾಸಗೊಳಿಸಿರುವುದು ಗಮನಾರ್ಹವಾಗಿದೆ. ಬಹುತೇಕ ಬೇಸಾಯಕ್ಕೆ ಸಂಬಂಧಿಸಿದ ಆಚರಣೆಯ ಹಿನ್ನೆಲೆಯ ವಸ್ತು ಈ ಕೃತಿಗಳಲ್ಲಿಯ ವಿಷಯವಾಗಿದೆ.

ಚಿತ್ರ ೧೫. ಉತ್ಸಾಹದ ಬದುಕು (The Joy of Life) :

ಗ್ರಾಮೀಣ ಬದುಕನ್ನು ಚಿತ್ರರಚನೆಯ ವಸ್ತುವಿಷಯವನ್ನಾಗಿಸಿಕೊಂಡು ಚೌಕಾಕಾರದಲ್ಲಿ ಪಟ್ಟಿಕೆಯನ್ನು ನಿರ್ಮಿಸಿ ಜಾಮಿತಿಯ ಕೋನಾಕೃತಿಯ ಮೂಲಕ ಮರವೊಂದನ್ನು ಸೃಷ್ಟಿಸಿದ್ದು, ಮರದ ಕೆಳಗಡೆ ನಾಲ್ಕಾರು ಜನರು ಧಾರ್ಮಿಕ ಆಚರಣೆಯ ಜನಪದ ನೃತ್ಯದಲ್ಲಿ ಮಗ್ನರಾಗಿದ್ದು, ಹಾಗೂ ಕ್ಯಾನವಾಸದ ಸ್ಥಳಾವಕಾಶದ ಅಂಚಿನಲ್ಲಿ ಚಿಕ್ಕ ಚೌಕಾಕಾರದ ಪಟ್ಟಿಕೆಗಳನ್ನು ನಿರ್ಮಿಸಿ ಪ್ರತಿಯೊಂದು ಪಟ್ಟಿಕೆಗಳಲ್ಲು ವಿವಿಧ ಜನಾಂಗದ ಧಾರ್ಮಿಕ ಆಚರಣೆಯ ಸಂದರ್ಭದಲ್ಲಿಯ ನೃತ್ಯದಲ್ಲಿ ತೊಡಗಿದ ಆಕೃತಿಗಳು ಸೊಗಸಾಗಿ ಮೂಡಿಬಂದಿವೆ. ಮತ್ತು ಕೆಲವೇ ವರ್ಣಗಳಿಂದ

---

೨೧. ಶಂಕರ ಪಾಟೀಲ : ಚಿತ್ರಕಲಾ ಚಿಂತನೆ, ಪು. ೫.

ಡ್ರೈಬ್ರೆಷ್ ತಂತ್ರದ ಮುಖಾಂತರ ವರ್ಣಸಂಯೋಜನೆಗೊಂಡಿದ್ದು, ನೋಡಲು ಆಕೃತಿಗಳು ಒಂದೇ ತರನಾಗಿ ಕಂಡರು ಪ್ರತಿಯೊಂದು ಮಾನವಾಕೃತಿಗಳ ಭಾವಭಂಗಿ, ಮೈವಳಿಕೆಗಳಲ್ಲಿ ವ್ಯತ್ಯಾಸಗಳಿವೆ. ಪಾಟೀಲರು ಈ ಕಲಾಕೃತಿಯ ರಚನೆಯ ಸಂದರ್ಭದಲ್ಲಿ ಜನಪದರ ಆಚರಣೆಯ ಸಾಮಾನ್ಯ ವಸ್ತುವಿಷಯಗಳನ್ನೇ ಆರಿಸಿಕೊಂಡು ಸಮಕಾಲೀನ ಆಧುನಿಕ ಶೈಲಿಯಲ್ಲಿ ಗ್ರಾಮೀಣ ಜನರ ಸೊಗಡನ್ನು ಒಂದು ಸೂತ್ರದಲ್ಲಿ ಪೋಣಿಸಿಕೊಂಡು ಒಂದು ಕಲಾಕೃತಿ ರಚನೆ ಮಾಡಿದ್ದಾರೆ.

ಚಿತ್ರ ೧೬. ಉತ್ಸಾಹದ ಬದುಕು (The Joy of Life) :

ಕ್ಯಾನವಾಸ ಸ್ಥಳಾವಕಾಶವನ್ನು ಸಮಾಂತರವಾಗಿ ಮೂರು ಪಟ್ಟಿಕೆಗಳಲ್ಲಿ ವಿಭಜಿಸಿ ಪ್ರತಿಯೊಂದು ಪಟ್ಟಿಕೆಗಳಲ್ಲಿ ಸಂಯೋಜನೆಯ ದೃಷ್ಟಿಯಿಂದ ಗ್ರಾಮೀಣ ಸಾಂಪ್ರದಾಯಿಕ ಹಾಗೂ ಶಿಷ್ಟ ಕಲೆಯ ಹಲವಾರು ಅಂಶಗಳನ್ನು ಅಪರೂಪದ ಹಾಗೂ ಖಚಿತವಾದ ರೇಖೆಗಳ ನಿರ್ವಹಣೆಯಿಂದ ಚಿತ್ರಿಸಿದ್ದಾರೆ. ಹಾಗೆಯೇ ಚಿತ್ರಗಳು ಸ್ವಾಭಾವಿಕ ಒರಟುತನವನ್ನು ನಿರಾಕರಿಸಿ ನೀಟಾದ ನಿರ್ವಹಣೆಯಲ್ಲಿ ಇವು ಬದ್ಧವಾಗಿವೆ. ಜೊತೆಗೆ ಇವುಗಳಲ್ಲಿ ಆಳವಾದ ಭಾವನೆಯನ್ನು ತ್ಯಜಿಸಿ ದೂರವಿಲ್ಲದ ಸಮತಟ್ಟಾದ ನಿರ್ವಹಣೆಗೆ ಇಲ್ಲಿ ಆದ್ಯತೆ ನೀಡಲಾಗಿದೆ. ಹಿನ್ನೆಲೆಯಲ್ಲಿ ತಿಳಿಗೆಂಪು, ನೇರಳೆ ವರ್ಣಗಳ ಏರಿಳಿತಗಳನ್ನು ಕಾಣಬಹುದು. ಚಿತ್ರವು ಧಾರ್ಮಿಕ ಆರಾಧನೆಯ, ಆಚರಣೆಯ ಸಂದರ್ಭದ ಸನ್ನಿವೇಷಗಳನ್ನೊಳಗೊಂಡು ಸರಳರೇಖೆಗಳಿಂದ ಕೂಡಿದೆ. ಜಾಮಿತಿಕ ಆಕಾರಗಳಿಂದ ತಮ್ಮ ಅಭಿವ್ಯಕ್ತಿ ಮಾಧ್ಯಮದ ಮೂಲಕ ಚಿತ್ರಿಸಲಾಗಿದೆ.

ತಾಂತ್ರಿಕ ಕಲೆಗಳು :

ಪ್ರಾದಿಮ ಜನಾಂಗ, ಆದಿವಾಸಿ ಬುಡಕಟ್ಟಿನ ಜನಗಳ ಮತೀಯ ಆಚರಣೆಗಳ ಅಂಗವಾಗಿ ಕಲಾರಚನೆ ರೂಪಗೊಂಡಿದ್ದನ್ನು ನಾವು ನೋಡುತ್ತೇವೆ. ತಾಂತ್ರಿಕ ಕಲೆ ಒಂದು ವಿಶಿಷ್ಟ ಶೈಲಿಯಾಗಿ ಅಥವಾ ರಚನಾ ತಂತ್ರವಾಗಿ ರೂಪಗೊಂಡಿದೆ. ಮೂಲತಃ ಸೃಷ್ಟಿ ಶಕ್ತಿಯ ಸಂಕೇತಗಳಾಗಿ ಇವುಗಳನ್ನು ಲೈಂಗಿಕ ವಿಷಯಕ್ಕೆ ಸಂಬಂಧಪಟ್ಟಂತೆ ಬಳಸಿ ಚಿತ್ರಗಳ ರಚನೆಯಾಗಿರುವುದು ಕಂಡುಬರುತ್ತದೆ. ಒಂದು ಕಾಲಕ್ಕೆ ಆಚರಣೆ ಅನುಷಾವಿನಗಳಲ್ಲಿ ಬಳಕೆಯಾಗುತ್ತಿದ್ದ ಈ ತಾಂತ್ರಿಕ ಕಲೆ ಈ ವಿಧಿ ಆಚರಣೆಯ ಅಥವಾ ಆರಾಧನಾ ಕಲೆಯಾಗಿ ಉಳಿದಿಲ್ಲ. ಕಾಮದ ಸಂಕೇತಗಳನ್ನು ಅದ್ಭುತ ವಿನ್ಯಾಸಗಳನ್ನಾಗಿ ಉಪಯೋಗಿಸಿಕೊಂಡು ಬೆಳೆದಿದೆ. ನಿಗೂಢತೆಯ ಬೆರಗನ್ನು ಮೂಡಿಸುವ ಮಟ್ಟಕ್ಕೆ ಚಿತ್ರಗಳು



ಚಿತ್ರ ೧



ಚಿತ್ರ ೨

ಸಾಂಕೇತಿಕವಾಗಿ ಬಳಕೆಯಾಗಿವೆ. ವಾಮಾಚಾರದ ಹಿನ್ನೆಲೆಯ ನೇರ ಸಂಭೋಗ ಕ್ರಿಯೆಯನ್ನು, ಯೋನಿ ಹಾಗೂ ಲಿಂಗಗಳ ಸಂಗಮವಾಗಿ ಬಿಂಬಿಸುವ ಪ್ರಕೃತಿ ಹಾಗೂ ಪುರುಷನ ರತಿ ಕ್ರೀಡೆಯನ್ನು ಹೊಸ ಜೀವನ ಸೃಷ್ಟಿಯ ಲೀಲೆಯಾಗಿ ತೋರಿಸುವ ಪ್ರಯತ್ನದಲ್ಲಿ ಅನೇಕ ಪ್ರಯೋಗಗಳು ಭಾರತದ ಕಲೆಯಲ್ಲಿ ಕಂಡುಬರುತ್ತವೆ. ಸಮಕಾಲೀನ ಕಲಾ ಸಂದರ್ಭದಲ್ಲಿ ತಾಂತ್ರಿಕ ಕಲೆ ಎಂಬುದು ಒಂದು ಪ್ರಕಾರವಾಗಿ ಗುರುತಿಸುವಷ್ಟು ಈ ಶೈಲಿ ಬೆಳೆದು ಬಂದಿದೆ.[೨೨]

ಶಂಕರ ಪಾಟೀಲರ ಹಲವಾರು ಕೃತಿಗಳಲ್ಲಿ ಹಲವು ಬಗೆಯ ವಿಷಯಗಳನ್ನಾಯ್ದುಕೊಂಡು ಕಲಾಕೃತಿಗಳನ್ನು ರಚಿಸಿರುವುದು ಕಂಡುಬರುತ್ತದೆ. ಒಂದೊಂದು ಬಗೆಯ ವಿಷಯಗಳಿಗೆ ಆಯಾ ವಿಷಯಕ್ಕನುಗುಣವಾಗಿ ಮಾಧ್ಯಮಗಳನ್ನು ಬಳಸಿಕೊಂಡು ವಿಶಿಷ್ಟ ಶೈಲಿಯೊಂದಿಗೆ ತಮ್ಮ ಆಲೋಚನೆಗಳನ್ನು ಕಲಾಕೃತಿಗಳ ಮೂಲಕ ಅನಾವರಣಗೊಳಿಸಿದ್ದಾರೆ. ಅವರ ಈ ಬಗೆಯ ಆಲೋಚನೆ, ಪ್ರಯೋಗಶೀಲ ಕಲಾಕೃತಿಗಳಲ್ಲಿ ಹೆಚ್ಚು ಪ್ರಾಮುಖ್ಯತೆಯೊಂದಿಗೆ ರಚಿಸಿರುವ ಕೃತಿಗಳಲ್ಲಿ ತಂತ್ರಗಾರಿಕೆ ಕಲಾಕೃತಿಗಳಾಗಿವೆ. ಬಹುಶಃ ತಮ್ಮ ಕಲಾ ಪ್ರೌಢಿಮೆಯ ಹಂತದಲ್ಲಿ ಧಾರ್ಮಿಕತೆಯ ಭಾವನೆಗಳಿಗೆ ಸ್ಪಂದಿಸುತ್ತಾ ಆದಿಮ ಬುಡಕಟ್ಟಿನ ಆಚರಣೆಗಳ ಬಗ್ಗೆ ವಾಲುತ್ತಿರುವ ತಮ್ಮ ಕಲಾ ಶೈಲಿಯ ದೃಷ್ಟಿಕೋನಗಳಿಂದ ತಾಂತ್ರಿಕ ಕಲೆಯ ಸರಣಿ ಕಲಾಕೃತಿಗಳನ್ನು ರಚಿಸಿದ್ದಾರೆ.

ತಾಂತ್ರಿಕ ಕಲಾಕೃತಿಗಳು :

ಚಿತ್ರ ೧. ಈ ಕಲಾಕೃತಿಯಲ್ಲಿ ಜ್ಯಾಮಿತಿಕ ಆಕಾರಗಳನ್ನು ಬಳಸಿಕೊಂಡು ವಿಶೇಷವಾಗಿ ಅರ್ಧವರ್ತುಗಳ, ತ್ರಿಕೋನಗಳ, ವರ್ಗ, ಆಯತಗಳನ್ನು ಬಳಸಿಕೊಂಡು ಪ್ರಕೃತಿಯ ಧ್ಯೋತಕವೆನ್ನುವಂತೆ ತಂಪು ವರ್ಣಗಳು ಹಾಗೂ ಉಷ್ಣ ವರ್ಣ ಸಂಯೋಜಿಸಿ ಕಲಾಕೃತಿಯನ್ನು ರಚಿಸಿದ್ದಾರೆ. ನೆರಳು ಹಾಗೂ ಬೆಳಕು ಸಂಯೋಜನೆಯಲ್ಲಿ ವಿಶಿಷ್ಟವಾಗಿ ಮೂಡಿ ಬಂದಿರುವ ತಿಳಿ ಹಳದಿ, ತಿಳಿಗೆಂಪು, ತಿಳಿ ನೀಲಿ ಹಾಗೂ ಕಪ್ಪು, ಬಿಳಿ ಬಣ್ಣಗಳನ್ನು ಬಳಸಿಕೊಂಡಿರುವುದು ಅವರ ಆಧ್ಯಾತ್ಮಿಕ ನಿಲುವಿನ ಕುತೂಹಲವನ್ನುಂಟು ಮಾಡುತ್ತದೆ.

---

೨೨. ಶಂಕರ ಪಾಟೀಲ, ಚಿತ್ರಕಲಾ ಚಿಂತನೆ, ಪು.೫




ಚಿತ್ರ ೩



ಚಿತ್ರ ೪



ಚಿತ್ರ ೫



ಚಿತ್ರ ೬



ಚಿತ್ರ ೭

ಚಿತ್ರ ೨ : ಈ ಕೃತಿಯಲ್ಲಿ ನೈಸರ್ಗಿಕ, ಧಾರ್ಮಿಕ ಹಿನ್ನೆಲೆಯುಳ್ಳ ಭಾವನೆಗಳನ್ನು ವ್ಯಕ್ತಪಡಿಸುವ ನೈಸರ್ಗಿಕ ದೇವತೆಗಳಲ್ಲಿ ಪ್ರಮುಖ ದೇವರೆಂದು ಪೂಜಿಸಿ, ಆರಾಧಿಸುವ ಚಂದ್ರನು, ಬುಡಕಟ್ಟು ಸಂಸ್ಕೃತಿಯ ಮೈಲುಗಲ್ಲಾಗಿ ಸಾಕ್ಷಿಕರಿಸಿದಂತೆ ಕೃತಿಯಲ್ಲಿ ಕಲಾವಿದರ ಕೈಚಳಕದಿಂದ ವಿನ್ಯಾಸಗೊಳಿಸಿದ್ದಾರೆ. ಚಂದ್ರ, ಭೂಮಿ ಇವೆರಡರ ಮಧ್ಯೆ ಧಾರ್ಮಿಕ ಭಾವನೆಯುಳ್ಳ ಭಕ್ತಿ ಭಾವದ ಕೆಂಪು, ಹಳದಿ ವರ್ಣಗಳನ್ನು ಜ್ಯಾಮಿತಿಕ ಆಕಾರಗಳನ್ನು ಲಿಂಗ ಸ್ವರೂಪದಂತೆ ರಚಿಸಿದ್ದಾರೆ. ಈ ಕೃತಿಯಲ್ಲಿ ಚೌರಸ್ಸು, ಆಯಾತಾಕಾರಗಳು, ತ್ರಿಕೋನಾಕೃತಿಗಳು, ವರ್ತುಳ, ದೀರ್ಘವರ್ತುಳನ್ನು ಬಳಸಿಕೊಂಡು ಕೃತಿ ರಚಿಸಿದ್ದಾರೆ. ತಂಪು ಹಾಗೂ ಉಷ್ಣ ವರ್ಗಗಳಲ್ಲಿ ಕಲಾಕೃತಿ ರಚಿಸಿದ್ದಾರೆ. ಈ ಕೃತಿಯಿಂದಾಗಿ ಬುಡಕಟ್ಟು ಭಾವನೆಗಳ ಹಿನ್ನೆಲೆಯಾಗಿ ನೋಡಿದಾಗ ದೈವ ನಿಸರ್ಗ ಹಾಗೂ ಇವರು ಪೂಜಿಸುವ ಎಲ್ಲಾ ದೈವೀ ಶಕ್ತಿಗಳು ಉಗ್ರವಾಗಿದ್ದರೂ ಇವರ ಮನಸ್ಸುಗಳು ಮಾತ್ರ ನಿಷ್ಕಳಂಕ ಎಂಬುವಂತೆ ವರ್ಣಗಳಲ್ಲಿ ವಿವರಿಸಿದ್ದಾರೆ.

ಚಿತ್ರ ೩, ೪, ೫, ೬ ಹಾಗೂ ೭ಎಲ್ಲಾ ಕೃತಿಗಳು ತಾಂತ್ರಿಕ ಕೃತಿಗಳು ಜ್ಯಾಮಿತಿಯ ಆಕೃತಿಗಳಾದ ತ್ರಿಕೋನಗಳು, ಆಯತಗಳು, ವರ್ಗಗಳು ಹಾಗೂ ವಿಶೇಷವಾಗಿ ಲಿಂಗುವಿನ ಹಾಗೂ ಶಂಕುವಿನ ಆಕಾರಗಳ ಸೃಷ್ಟಿಯನ್ನು ಕಲಾಕೃತಿಗಳಲ್ಲಿ ಕಾಣುವೆವು. ಮುಖ್ಯವಾಗಿ ಹಳದಿ, ಕೆಂಪು, ನೀಲಿ, ಕಪ್ಪು, ಬಿಳಿ ಬಣ್ಣಗಳನ್ನು ಬಳಸಿಕೊಂಡು ನಿಸರ್ಗದಲ್ಲಿ ಹರಡಿರುವ ಬೆಳಕಿನ ಛಾಯೆಯನ್ನು ಲಿಂಗುವಿನ ಹಿನ್ನೆಲೆಯಲ್ಲಿ ತೋರಿಸಿದ್ದಾರೆ.

ಪ್ರತಿಯೊಂದು ಕಲಾಕೃತಿಯಲ್ಲಿ ಲಿಂಗುವಿನ ಅಂತರಾಳದಿಂದ ಹೊಸ ಕಿರಣ, ಹೊಸ ಚೈತನ್ಯದ ಹಿನ್ನೆಲೆಯಲ್ಲಿ ಬಣ್ಣಗಳನ್ನು ಬಳಸಿಕೊಂಡು ಕಲಾಕೃತಿಗಳಿಗೆ ಮೆರಗನ್ನು ತಂದುಕೊಟ್ಟಿದ್ದಾರೆ. ಅಂತಹ ಅದ್ಭುತ ಶಕ್ತಿ, ಭವ್ಯತೆ, ಆಧ್ಯಾತ್ಮಿಕತೆ, ತಾತ್ವಿಕ ಹಿನ್ನೆಲೆ, ಕಲಾಕೃತಿಯಲ್ಲಿ ಮೂಡಿಬಂದಿದೆ.

ಚೈತನ್ಯದ ಮೂಲ ಈಶ್ವರನೆಂಬಂತೆ, ಪಾಟೀಲರ ಕಲಾಕೃತಿಯಲ್ಲಿ ಈಶ್ವರನ್ನು ತಾಂತ್ರಿಕತೆಯ ಹಿನ್ನೆಲೆಯಲ್ಲಿ ಹಲವಾರು ಕಲಾಕೃತಿಗಳನ್ನು ಸರಣಿ ಕಲಾಕೃತಿಗಳು ರಚಿಸಿ, ಅವುಗಳನ್ನು ಸಮಾಜಕ್ಕೆ ಸವಾಲು ಎಂಬಂತೆ ನಿರೂಪಿಸಿ ತೋರಿಸಿದ್ದಾರೆ.



ಚಿತ್ರ ೮



ಚಿತ್ರ ೯



ಚಿತ್ರ ೧೦

ವರ್ಣ ಸಂಯೋಜನೆ, ವರ್ಣಲಾಲಿತ್ಯ, ವರ್ಣಗಾರಿಕೆ, ಕಲಾಕೃತಿಯಲ್ಲಿ ಅದ್ಭುತವಾಗಿ ಮಿಶ್ರಣ ಮಾಡಿದ್ದು ನೋಡುಗನ ಸಹೃದಯವನ್ನು ಆಲೋಚನೆಯಲ್ಲಿ ಆಧ್ಯಾತ್ಮಿಕದ ಕಡೆಗೆ, ನಿಸರ್ಗದ ಕಡೆಗೆ, ಪ್ರಕೃತಿಯೆಡೆಗೆ ಕೊಂಡೊಯ್ಯುತ್ತದೆ.

ಚಿತ್ರ ೮ ಹಾಗೂ ೯: ಈ ಕೃತಿಗಳು ಕೂಡಾ ಜ್ಯಾಮಿತಿಕ ಆಕಾರಗಳಲ್ಲಿ ನಿರೂಪಿತವಾಗಿದ್ದು, ಅರ್ಧವರ್ತುಳ, ತ್ರಿಕೋನ, ಈಶ್ವರ ಆಕಾರ ಮೋಡದ ಆಕಾರಗಳು ಕಲಾಕೃತಿಯಲ್ಲಿ ನೀಲಿ, ಕೆಂಪು, ಹಳದಿ, ಹಸಿರು ಬಣ್ಣಗಳಲ್ಲಿ ನಿರೂಪಿಸಿದ್ದಾರೆ. ಕಲಾಕೃತಿಯಲ್ಲಿ ಜ್ಯಾಮಿತಿಕ ಆಕಾರಗಳ ನಿರೂಪಣೆ, ಸಂಯೋಜನಾ ಕಲಾಕೃತಿಗಳಲ್ಲಿ ಪ್ರಾಣಿ, ಪಕ್ಷಿಗಳ ಸಂಯೋಜನೆಯಂತೆ ಈ ಜ್ಯಾಮಿತಿಕ ಆಕೃತಿಗಳನ್ನು ಜೋಡಿಸಿಕೊಂಡು ಸಂಯೋಜಿಸಿದ್ದಾರೆ. ಈ ಕೃತಿಗಳು ಆಧ್ಯಾತ್ಮಿಕ ತತ್ವದ ಹಿನ್ನೆಲೆಯುಳ್ಳದ್ದು. ಕಲಾವಿದ ನೋಡಗನಿಗೆ ಕೇವಲ ಸೌಂದರ್ಯವನ್ನೇ ತೋರಿಸದೇ ಆಂತರಿಕ ಭಾವನೆಗಳಿಂದ ವಿಚಾರಮಂತನಾಗಿ ಅವಲೋಕಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಬಾಹ್ಯವಾಗಿ ಒಂದು ಕಲಾಕೃತಿಯಾಗಿ ರೂಪಗೊಂಡಿದ್ದರೂ ಆಂತರಿಕವಾಗಿ ಆಲೋಚಿಸುವುದು, ತಿಳಿದುಕೊಳ್ಳುವುದು ಬಹಳಷ್ಟಿದೆ ಎಂಬುದು ಈ ಎಲ್ಲಾ ಕಲಾಕೃತಿಗಳಿಂದ ತಿಳಿದುಕೊಳ್ಳಬೇಕಾಗಿದೆ. ಶಂಕರ ಪಾಟೀಲರ ಈ ತಾಂತ್ರಿಕ ಕಲಾಕೃತಿಗಳು ವರ್ಣಗಳ ಸಂಯೋಜನೆಯಿಂದ ನೋಡುಗನನ್ನು ಸೆಳೆದರೂ ಆಧ್ಯಾತ್ಮಿಕ ದೃಷ್ಟಿಯಿಂದ ಪ್ರಕೃತಿ ದೃಷ್ಟಿಯಿಂದ ದೈವತ್ವದ ಹಿನ್ನೆಲೆಯಿಂದ ಅಧ್ಯಯನವನ್ನು ಮಾಡಬೇಕಾಗಿದೆ. ಪ್ರಕೃತಿಯಲ್ಲಿ ಎಲ್ಲವೂ ಇದೆ ಆದರೆ ಅದನ್ನು ಅರಿಯುವುದು, ಸವಿಯುವುದು, ತಿಳಿಯುವುದು, ತಿಳಿಸುವುದು ಬಹಳಷ್ಟಿದೆ ಇಲ್ಲಿ ಶಂಕರ ಪಾಟೀಲರು ಪಯತ್ನ ಶ್ಲಾಘನೀಯವಾಗಿದೆ.

ಚಿತ್ರ ೧೦ : ಈ ಕೃತಿಯಲ್ಲಿ ಜೀವನ ಚಕ್ರವನ್ನು ಜ್ಯಾಮಿತಿಕ ಆಕೃತಿಗಳಾದ ಆಯತ, ತ್ರಿಕೋನ, ಅಷ್ಟಕೋನ, ಷಟ್‌ಕೋನಾಕೃತಿಗಳನ್ನು ಬಳಸಿಕೊಂಡು ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ತಾತ್ವಿಕ ಅಂಶಗಳನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಆತ್ಮದ ಬೆಳಕು ಸಂಚಲನವಾಗುತ್ತಿದ್ದು ಕೆಂಪು, ಹಳದಿ, ನೀಲಿ, ಕಪ್ಪು ವರ್ಣಗಳನ್ನು ಬಳಸಿಕೊಂಡು ಕಲಾಕೃತಿ ಪೂರ್ಣಗೊಳಿಸಿದ್ದಾರೆ.

ಚಿತ್ರ ೧೧ : ಈ ಚಿತ್ರದಲ್ಲಿ ಮಂತ್ರ, ತಂತ್ರಗಾರಿಕೆಯ ನಂಬಿಕೆಗಳನ್ನು ಅಳವಡಿಸಿಕೊಂಡು ಕಾಡು, ಮೇಡುಗಳಲ್ಲಿ ಸಂಚಾರಿಸುವ ಅರಣ್ಯವಾಸಿಗಳ ಪ್ರತೀಕವಾಗಿರುವ ಈ ಕೃತಿಯಲ್ಲಿ

ಕಾಡಿನ ರಾಜ ಆದಿವಾಸಿಗಳ ತಂತ್ರಗಾರಿಕೆಯ ವ್ಯಕ್ತಿಯನ್ನು ಅಮೂರ್ತ ಹಾಗೂ ಜ್ಯಾಮಿತಿಕ ಆಕಾರಗಳ ಮೂಲಕ ಉಷ್ಣ ವರ್ಣಗಳನ್ನು ಬಳಸಿ ಕಲಾಕೃತಿ ರಚಿಸಿದ್ದಾರೆ. ಕೃತಿಯ ಮೇಲ್ನೋಟಕ್ಕೆ ಒಂದು ನಕ್ಷಾ ಚಿತ್ರದಂತೆ ಕಾಣುತ್ತಿದ್ದರೂ ಸೂಕ್ಷ್ಮವಾಗಿ ಗಮನಿಸಿ ನೋಡಿದಾಗ ವಯೋವೃದ್ಧ ಗಡ್ಡಧಾರಿಯ ಶಿರಭಾಗ ಹಾಗೂ ತಂತ್ರಗಾರಿಕೆಯಲ್ಲಿ ಬಳಸುವ ಆಕಾರಗಳು ನಿರ್ಸಗಕ್ಕೆ ಸಂಬಂಧಿಸಿದ ಎಲೆ, ಮಂತ್ರದಂಡ, ಮತ್ತು ದೈವೀಶಕ್ತಿಗಳನ್ನು ಹಿಡಿದಿಡುವ ಸ್ಥಳ, ಭೂತ ಪ್ರೇತಾತ್ಮಗಳನ್ನು ದಮನಿಸುವ ಮತ್ತು ಕ್ರೋಢೀಕರಿಸುವ ಸ್ಥಳ ಅವಕಾಶದಂತೆ ಈ ಕೃತಿಯಲ್ಲಿ ಚೌರಸ್ಸಗಳನ್ನು ಬಳಸಿದ್ದಾರೆ. ಹಳದಿ, ಕೆಂಪು ಮಿಶ್ರಿತ ವರ್ಣಗಳು ಇಲ್ಲಿ ಮಾಟ ಮಂತ್ರಕ್ಕೆ ಉಗ್ರ ದೇವತೆಗಳ ಸಂಕೇತವಾಗಿ ಬಳಸಿರುವುರಿಂದ ಇವು ನಿಸರ್ಗದ ಶಕ್ತಿ ದೇವತೆಗಳ ಕಲ್ಪನೆ ಈ ಕಲಾಕೃತಿಯಲ್ಲಿ ಮೂಡಿಬರುತ್ತದೆ. ಈ ಕೃತಿಯ ಅಂಚಿನ ಭಾಗಕ್ಕೆ ಹಳದಿ ವರ್ಣವನ್ನು ಲೇಪನ ಮಾಡಿರುವುದರಿಂದ ಈತನೊಬ್ಬ ಸಿದ್ಧಿಯ ಪುರುಷನಂತೆ ಈ ಕೃತಿಯಲ್ಲಿ ಕಾಣುತ್ತೇವೆ.

ಸಿದ್ಧಿ ಪುರುಷನ ಆಕೃತಿಯ ಕೆಳಗೆ ಎಲೆಯ ಚಿತ್ರಗಳನ್ನು ರಚಿಸಿದ್ದು ಪ್ರಕೃತಿಯ ಹೊರತು ನಾವು ಯಾರು ದೊಡ್ಡವರಲ್ಲ. ಎಷ್ಟು ಸಿದ್ಧಿಯನ್ನು ಮಾಡಿದ್ದರೂ ಪ್ರಕೃತಿ ದೊಡ್ಡದು ಎಂಬ ಧ್ಯೋತಕವಾಗಿ ಈ ಎಲೆಯ ಚಿತ್ರವನ್ನು ಸಾಂಕೇತಿಕವಾಗಿ ಬಳಸಿಕೊಂಡಿದ್ದಾರೆ.

ಬ್ಲೋಟಾರ್ಚ್ (ವುಡ್‌ಬರ್ನ್) ಮಾಧ್ಯಮದ ಕಲಾಕೃತಿಗಳು :

ಬಹಳಷ್ಟು ವರ್ಷಗಳ ಹಿಂದಿನಿಂದಲೂ ಪಾಶ್ಚಾತ್ಯ ಕಲಾವಿದರು ಬ್ಲೋಟಾರ್ಚ ಮಾಧ್ಯಮದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿ ಅನೇಕ ಕಲಾಕೃತಿಗಳನ್ನು ರಚನೆಮಾಡಿರುವುದನ್ನು ನಾವು ಕಾಣಬಹುದು.

"ಭಾರತೀಯ ಕಲಾವಿದರ ಮಟ್ಟಿಗೆ ಬ್ಲೋಟಾರ್ಚ ತಂತ್ರವಿಧಾನವು ಇತ್ತೀಚೆಗೆ ಪ್ರಾರಂಭವಾಯಿತು. ಕರ್ನಾಟಕದಲ್ಲಿ ಎಪ್ಪತ್ತರ ದಶಕದ ಅವಧಿಯಲ್ಲಿ ಹಡಪದವರು ಈ ತಂತ್ರದಲ್ಲಿ ಸಂಯೋಜನ ಕೃತಿಗಳ ಕುರಿತು ಪ್ರಯೋಗ ಮಾಡಿದ ಪ್ರಥಮ ಕನ್ನಡ ಕಲಾವಿದರೆಂದು ಗುರುತಿಸಲಾಗಿದೆ."[೨೩] ಶ್ರೀಯುತ ಶಂಕರ ಪಾಟೀಲರು ಬ್ಲೋಟಾರ್ಚ ಮಾಧ್ಯಮದಲ್ಲಿ ಹಲವಾರು ವಿಶಿಷ್ಟ ಪ್ರಯೋಗಗಳನ್ನು

---

೨೩. ಸಿದ್ದಲಿಂಗಸ್ವಾಮಿ ಹಿರೇಮಠ, ಕಲಾವಿದ ಆರ್.ಎಂ. ಹಡಪದ ಪು. ೧೯೨.

ಮಾಡುವುದರ ಮೂಲಕ ಈ ಮಾಧ್ಯಮದಲ್ಲಿ ಹೆಚ್ಚಿನ ಸಂಖ್ಯೆಯ ಕಲಾಕೃತಿಗಳನ್ನು ರಚಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಬ್ಲೋಟಾರ್ಚ ಮಾಧ್ಯಮವು ಇತರ ಮಾಧ್ಯಮಗಳಿಗಿಂತ ತೀರ ಭಿನ್ನವಾದ ಕ್ಲಿಷ್ಟಕರ ಮಾಧ್ಯಮವಾಗಿದೆ. ಈ ಮಾಧ್ಯಮದಲ್ಲಿ ಕಲಾಕೃತಿ ರಚಿಸಲು ಮೂಲ ಮಾಧ್ಯಮವಾಗಿ ಮರದ ಹಲಗೆ (ಪ್ಲೈವುಡ್ ಶೀಟ್) ಮುಖ್ಯವಾದುದು. ಈ ಮರದ ಹಲಗೆಯ ಮೇಲೆ ಬಳಪದಿಂದ ಚಿತ್ರಣವನ್ನು ಚಿತ್ರಿಸಿ ಪ್ಲಾಸ್ಟರ್ ಆಫ್ ಪ್ಯಾರಿಸ್(ಪಿ.ಓ.ಪಿ)ನಿಂದ ಚಿತ್ರದ ಅವಶ್ಯಕತೆಗೆ ತಕ್ಕಂತೆ ಹಲಗೆಯ ಮೇಲೆ ಚಿತ್ರಿಸಿ ಬೆಂಕಿಯಿಂದ ಕಪ್ಪು ಬರುವವರೆಗೆ ಸುಟ್ಟ ನಂತರ ಹಲಗೆಯ ಮೇಲ್ಮೈ ಬಳಸಿದ ಪ್ಲಾಸ್ಟರ್‌ನ್ನು ಕಿತ್ತುಹಾಕಿದಾಗ ಪ್ಲಾಸ್ಟರ್ ಲೇಪಿಸಿದ ಸ್ಥಳದಲ್ಲಿ ನೆಗೆಟಿವ್ ಮಾದರಿಯಲ್ಲಿ ಚಿತ್ರದ ಆಕೃತಿ ಮೂಡಿರುತ್ತದೆ. ಇದು ಬ್ಲೋಟಾರ್ಚ ಮಾಧ್ಯಮದ ಒಂದು ರೀತಿಯ ರಚನಾ ತಂತ್ರವಾಗಿದೆ. ಬ್ಲೋಟಾರ್ಚ ಮಾಧ್ಯಮದ ಕಲಾಕೃತಿಗಳನ್ನು ವುಡ್‌ಬರ್ನಿಂಗ್, ಸುಡುಚಿತ್ರ ಕಲಾಕೃತಿಗಳೆಂಬ ಹೆಸರಿನಿಂದಲೂ ಕರೆಯುತ್ತಾರೆ.

ಈ ಮೇಲೆ ಹೇಳಿದ ರಚನಾ ತಂತ್ರದಂತೆಯೇ ಬ್ಲೋಟಾರ್ಚ ಮಾಧ್ಯಮದಲ್ಲಿ ಮರದ ಹಲಗೆಯ ಮೇಲೆ ವಿವಿಧ ಆಕಾರದ ಕಲ್ಲು ಕಬ್ಬಿಣದ ಸಳಿಗಳನ್ನು ಮತ್ತಿತರ ಘನ ವಸ್ತುಗಳನ್ನು ಇಟ್ಟುಹ್ಯಾಂಡ್‌ಸ್ಟೋವ್‌ವನ್ನು ಬಳಸಿ ಕಪ್ಪು ಬರುವವರೆಗೂ ಮರದ ಹಲಗೆಯನ್ನು ಸುಡಬೇಕು. ನಂತರ ಹಲಗೆ ಮೇಲಿನ ವಸ್ತುಗಳನ್ನು ತಗೆದಾಗ ಅಲ್ಲಿ ಹಲಗೆ ಸುಡದೇ ಇದ್ದ ಸ್ಥಳದಲ್ಲಿ ನಾವು ನಿರೂಪಿಸಿದ ಆಕೃತಿಗಳು ಮೂಡಿರುತ್ತವೆ.[೨೪]

ಈ ಎರಡು ವಿಧಾನಗಳನ್ನು ಅನುಸರಿಸಿ ಪಾಟೀಲರು ಬ್ಲೋಟಾರ್ಚ ಮಾಧ್ಯಮದಲ್ಲಿ ಹಲವಾರು ತಂತ್ರಗಳನ್ನು ಬಳಸಿ ಭಾರತೀಯ ಸಂಸ್ಕೃತಿಯ ಕಾವ್ಯಮಯ, ಶೃಂಗಾರಾತ್ಮಕ ಜನಪದರ ಆಚರಣೆ ಮತ್ತು ನವ್ಯಕಲೆಯ ಶೈಲಿಯಲ್ಲಿ ಹಲವಾರು ಚಿತ್ರಕಲಾಕೃತಿ ರಚನೆಯನ್ನು ಮಾಡಿದ್ದಾರೆ. ಹೀಗೆ ಪಾಟೀಲರು ಈ ಮಾಧ್ಯಮದ ಸಾಧ್ಯ ಸಾಧ್ಯತೆಗಳನ್ನು ಅರಿಯುವದಕ್ಕಾಗಿ ಹಲವಾರು ತಂತ್ರಗಳನ್ನು ಬಳಸಿ ಪ್ರಯೋಗಶೀಲವಾದ ಕಲಾಕೃತಿಗಳನ್ನು ರಚಿಸಿದ್ದಾರೆ.

ಶ್ರೀಯುತ ಪಾಟೀಲರ ಚಿಂತನೆಗಳ ಹರವು ಪ್ರಯೋಗಶೀಲತೆಯ ಕೈಚಳಕ ಇಲ್ಲಿ ಮತ್ತಷ್ಟು ವಿಸ್ತ್ರುತಗೊಂಡಿರುವುದನ್ನು ಅನುಲಕ್ಷಿಸಿ ಅವರು ರಚಿಸಿದ ಬ್ಲೋಟಾರ್ಚ್ ಮಾಧ್ಯದ ಹಲವು

---

೨೪. ಸಿದ್ದಲಿಂಗಸ್ವಾಮಿ ಹಿರೇಮಠ, ಕಲಾವಿದ ಆರ್.ಎಂ. ಹಡಪದ ಪು. ೧೯೨.



ಚಿತ್ರ ೧ ಗಣೇಶ



ಚಿತ್ರ ೨ ಗಣೇಶ

ಕಲಾಕೃತಿಗಳನ್ನು ಅಧ್ಯಯನಕ್ಕೊಳಪಡಿಸಿ ಕಲಾಕೃತಿಯ ವಸ್ತುವೈವಿಧ್ಯತೆಯ ಕುರಿತು ಈ ಕೆಳಗೆ ವಿವರಿಸಲಾಗಿದೆ.

ಚಿತ್ರ ೧. ಗಣೇಶನ ಚಿತ್ರಗಳು :

ಗಣೇಶನ ಚಿತ್ರವನ್ನು ಮೂರ್ತಸ್ವರೂಪದಿಂದ ಬದಿಗಿರಿಸಿ ಆಧುನಿಕ ನೆಲೆಯ ಹಿನ್ನೆಲೆಯಲ್ಲಿ ಅಮೂರ್ತತೆಯಲ್ಲಿ ಸಾಗಿ ಅಭಿವ್ಯಕ್ತಿಗೊಳಸಿದ ಬ್ಲೋಟಾರ್ಚ ಮಾಧ್ಯಮದ ಕಲಾಕೃತಿಯಿದಾಗಿದೆ. ಈ ಚಿತ್ರದಲ್ಲಿ ಕಪ್ಪು ಮತ್ತು ಬಿಳುಪನ್ನು ಹೊರತುಪಡಿಸಿ ಯಾವುದೇ ವರ್ಣಗಳು ಕಂಡುಬರುವುದಿಲ್ಲವಾದರೂ ಬೆಂಕಿಯ ಶಾಖವನ್ನು ಸಮತಟ್ಟಾಗಿ ನೀಡದೆ ಏರಿಳಿತಗಳಲ್ಲಿ ಬೆಂಕಿಯಿಂದ ಸುಟ್ಟು ಕಲಾಕೃತಿಯಲ್ಲಿ ಛಾಯಾಂಕನವನ್ನು ನೀಡುವುದರ ಜೊತೆಗೆ ಕಪ್ಪು ವರ್ಣದಲ್ಲಿಯೇ ಹಲವಾರು ತೆಳುವಾದ ಛಾಯೆಗಳನ್ನು (ಶೇಡ್)ಗಳನ್ನು ಬಳಸಿ ಗಣೇಶನ ರೂಪವನ್ನು ಸರಳ ಮತ್ತು ಲಯಬದ್ಧವಾದ ರೇಖೆಗಳ ಮೂಲಕ ಹಲಗೆಯ ಮಧ್ಯಭಾಗದಲ್ಲಿ ಪೂರ್ತಿ ಹಲಗೆ ಭಾಗವನ್ನು ಆವರಿಸುವಂತೆ ಬೃಹತ್ತಾದ ಚಿತ್ರಣವಾಗಿದೆ. ಪಾಟೀಲರು ಇಲ್ಲಿ ಗಣೇಶನ ಹೊರ ರೇಖೆಗಳನ್ನು ಹಾಗೆಯೇ ಬಳಸಿಕೊಂಡು ಒಳಾಂಗಣದಲ್ಲಿ ತಮಗೆ ಬೇಕಾದ ರೀತಿಯಲ್ಲಿ ಅವಶ್ಯಕ ಭಾಗಗಳಲ್ಲಿ ದಟ್ಟ ಮತ್ತು ಏಕರೂಪಿಯ ಛಾಯೆಯನ್ನು ನೀಡಿದ್ದಾರೆ. ಅಲ್ಲದೆ ಚಿತ್ರವು ನೈಜವಾಗಿರದೇ ಗಣೇಶನ ಕುಳಿತ ಭಂಗಿ, ಆತನ ಶಿರ, ಹಸ್ತ, ಪಾದ, ಕಿವಿ, ಹೊಟ್ಟೆ ಹೀಗೆ ದೇಹದ ವಿವಿಧ ಭಾಗಗಳ ಒಟ್ಟು ಹಾವ ಭಾವವನ್ನು ಮರದ ಹಲಗೆಯ ಸಮಾನಾಂತರ ಸ್ಥಳಾವಕಾಶದಲ್ಲಿ ಸಂಕೇತ ರೂಪಕಗಳನ್ನು ಜ್ಯಾಮಿತಿಕ ಆಕೃತಿಗಳಾದ ನೇರ, ವಕ್ರ, ಅಂಕುಡೊಂಕಾದ ರೇಖೆಗಳನ್ನು ಬಳಸಿ ಗಣೇಶನನ್ನು ಸೂಚ್ಯವಾಗಿಸುವ ತಂತ್ರವನ್ನು ಸೂಕ್ತವಾಗಿ ಬ್ಲೋಟಾರ್ಚ ತಂತ್ರದಲ್ಲಿ ಚಿತ್ರಿಸಿದ್ದಾರೆ.

ಚಿತ್ರ – ೨

ಈ ಕಲಾಕೃತಿಯಲ್ಲಿ ಗಣೇಶನ ರೂಪ ಸರಳ ಹಾಗೂ ಲಯಬದ್ಧವಾಗಿ ರಚಿತಗೊಂಡಿದೆ. ಗಣೇಶನ ಚಿತ್ರವನ್ನು ಎದುರು ಮುಖವಾಗಿ ಹಲಗೆಯ ಅಳತೆಗೆ ತಕ್ಕಂತೆ ಬೃಹತ್ತಾಗಿ ರಚಿತಗೊಂಡಿದೆ. ಕಲಾಕೃತಿಯ ರಚನಾ ಪದ್ಧತಿ ಮತ್ತು ಚಿತ್ರರಚನಾ ಶೈಲಿಯಲ್ಲಿ ಈ ಮೇಲೆ ಹೇಳಿದಂತೆ ಯಾವದೇ ವ್ಯತ್ಯಾಸ ಕಂಡುಬರುವುದಿಲ್ಲವಾದರೂ ಕಲಾಕೃತಿಯಲ್ಲಿ ಬೆಂಕಿಯ ವೇಗವನ್ನು ವಿವಿಧ ಆಯಾಮಗಳಲ್ಲಿ ರೇಖೆಗಳ ಮುಖಾಂತರ ಗಾಢಛಾಯೆ ಮತ್ತು ಅಲ್ಲಲ್ಲಿ ತೆಳುವಾದ ಕಪ್ಪು ಮಿಶ್ರಿತ ಕಂದು ಬಣ್ಣದ ಸುಟ್ಟ ಛಾಯಾಂಕನಗಳಲ್ಲಿ ವ್ಯತ್ಯಾಸವನ್ನು ಕಾಣಬಹುದಾಗಿದೆ. ಇಲ್ಲಿ ಗಣೇಶ ಮತ್ತು ಇಲ್ಲಿಯ



ಚಿತ್ರ ೩. ಮಧುಚಂದ್ರ



ಚಿತ್ರ-4

ರೇಖೆಗಳನ್ನು ಲಯಬದ್ಧವಾಗಿ ಸರಳ ರೂಪದಲ್ಲಿ ಕಪ್ಪು ವರ್ಣದೊಂದಿಗೆ ಹಲವು ಛಾಯೆಗಳ ಮತ್ತು ಒಳರೇಖೆಗಳನ್ನು ಇಡೀ ಸ್ಥಳಾವಕಾಶದಲ್ಲಿ ಚಿತ್ರಿಸಿದ್ದಾರೆ. ಗಣೇಶನ ಚಿತ್ರವು ಏಕರೂಪಿಯವಾಗಿದ್ದರೂ ಚಿತ್ರವು ಸಮತಟ್ಟಾದ ಅನುಭವವನ್ನು ನೀಡದೆ, ತ್ರಿ ಆಯಾಮದ ಅನುಭವವನ್ನು ನೀಡುವಲ್ಲಿ ರೇಖೆಗಳ ಏರಿಳಿತಗಳು ಸಹಕಾರಿಯಾಗಿವೆ. ಈ ಕಲಾಕೃತಿಯಲ್ಲಿ ಸಮಾಂತರ ಅವಕಾಶದ ಭಾಗದಲ್ಲಿ ಗಣೇಶನ ಪೂರ್ಣಭಾವ ಚಿತ್ರಣ ರಚನೆಗೊಂಡಿದ್ದು, ನೈಜತೆಗೆ ಅನುಗುಣವಾಗಿದೆ. ಒಟ್ಟು ಕಲಾಕೃತಿಯಲ್ಲಿ ಸರಳ ರೇಖೆಗಳು ಮತ್ತು ರೇಖೆಗಳ ವೇಗೋತ್ಕರ್ಷಗಳು ವೀಕ್ಷಕನಲ್ಲಿ ಕೆಲಕ್ಷಣ ಗೊಂದಲವನ್ನುಂಟು ಮಾಡುತ್ತವೆ. ತತ್‌ಕ್ಷಣ ಒಂದು ಕಲ್ಪನಾತೀತ ಪರಿಧಿಗೆ ತಂದು ನಿಲ್ಲಿಸುತ್ತವೆ. ಹೀಗೆ ಪಾಟೀಲರು ರೇಖೆಯಲ್ಲಿಯೇ ಚಿತ್ರದ ವಸ್ತುವಿಷಯದ ಕಲ್ಪನೆ ನೀಡಲು ಬಯಸಿದ್ದಾರೆ. ಸಾಂಕೇತಿಕವಾಗಿ ಮೂರ್ತರೂಪದಲ್ಲಿ ಹಾಗೂ ಹಿನ್ನೆಲೆಯಲ್ಲಿ ಅಮೂರ್ತ ರೇಖಾ ವಿನ್ಯಾಸಗಳನ್ನು ಇಲ್ಲಿ ಕಾಣಬಹುದು.

ಒಟ್ಟಾರೆಯಾಗಿ ಪಾಟೀಲರ ವುಡ್‌ಬರ್ನಿಂಗ್ ಮಾಧ್ಯಮದಿಂದ ರಚಿತಗೊಂಡ 'ಗಣೇಶ'ನ ಸರಣಿ ಚಿತ್ರಗಳು ನೋಡುಗರಲ್ಲಿ ವಿಶೇಷವಾದ ಅನುಭವವನ್ನು ನೀಡುತ್ತವೆ.

ಚಿತ್ರ ೩. ಮಧುಚಂದ್ರ ಚಿತ್ರಗಳು :

ಈ ಸಂಯೋಜನಾ ಚಿತ್ರದಲ್ಲಿಬೆಳದಿಂಗಳಿನ ಬೆಳಕಿನಲ್ಲಿ ಪ್ರಶಾಂತವಾದ ಹಚ್ಚನೆಯ ಹಸಿರಿನ ನಿಸರ್ಗದಲ್ಲಿ, ಮರದಡಿಯಲ್ಲಿ ಹುಲ್ಲುಹಾಸಿನ ಮೇಲೆ ಪ್ರಣಯದಲ್ಲಿ ತೊಡಗಿರುವ ದೃಶ್ಯವನ್ನು ಭಾರತೀಯ ರಾಗಮಾಲಾ ಹಾಗೂ ಭಾಗವತ್ ಪುರಾಣದ ಗ್ರಂಥದಲ್ಲಿನ ಶ್ರೀಕೃಷ್ಣನ ಲೀಲೆಗಳನ್ನು ಹೋಲುವ ಚಿತ್ರಗಳಾಗಿವೆ.

ಚಿತ್ರ ೪. ಮಧುಚಂದ್ರ :

ಈ ಕಲಾಕೃತಿಯಲ್ಲಿ ಸ್ತ್ರೀ–ಪುರುಷನ ಪ್ರಣಯವನ್ನು ಮತ್ತು ಪ್ರೇಮ ಭಾವನೆಗಳನ್ನು ವುಡ್ಬರ್ನ್ ಮಾಧ್ಯಮದಲ್ಲಿ ರೇಖೆಗಳನ್ನು ಲೀಲಾಜಾಲವಾಗಿ, ವೈವಿಧ್ಯಮಯವಾಗಿ ಬಳಸಿಕೊಳ್ಳುತ್ತಲೇ ಕಲಾಕೃತಿಯ ಸಂಯೋಜನೆಯಲ್ಲಿ ವಿಭಿನ್ನ ಪರಿಣಾಮ ಮೂಡಿಸಿದ್ದಾರೆ. ಸ್ತ್ರೀ–ಪುರುಷರ (ಪ್ರೇಮಿಗಳ) ದೇಹಗಾತ್ರದ ವ್ಯತ್ಯಾಸ ಓರೆಮುಖಮಾಡಿ ಪರಸ್ಪರ ಒಬ್ಬರಿಗೊಬ್ಬರು ಅಪ್ಪಿಕೊಂಡಂತಹ ಅನುಭವ ನೀಡುವ ಭಂಗಿ, ಪಾರದರ್ಶಿಕತೆಯ ಸೊಗಡನ್ನು ಬಿಂಬಿಸುವ ವೇಷಭೂಷಣಗಳಲ್ಲಿನ ವ್ಯತ್ಯಾಸ, ಏರಿಳಿತಗಳ ಪರಿಣಾಮಗಳನ್ನು ಕಂಡುಕೊಳ್ಳುವಲ್ಲಿ ಹಾಗೂ ಹಿನ್ನೆಲೆಯಲ್ಲಿ ಪ್ರಕೃತಿಯ ಅನುಭವವನ್ನು ವ್ಯಕ್ತಪಡಿಸುವಲ್ಲಿ



ಚಿತ್ರ ೫ ನರ್ತಕಿ



ಚಿತ್ರ ೬ ಮಹಿಳೆ

ದೊಡ್ಡದಾಗಿ ಚೌಕಾಕಾರ ಆಕೃತಿಯನ್ನು ನಿರ್ಮಿಸಿ ಅದರೊಳಗೆ ಚಿಕ್ಕಗಾತ್ರದಲ್ಲಿ ಅರ್ಧಚಂದ್ರಾಕೃತಿಯನ್ನು ಚಿತ್ರಿಸಿದ್ದು, ಆಕಾಶದ ಭಾವನೆ ಮೂಡಿಸುವಲ್ಲಿ ಚಿತ್ರದಲ್ಲಿ ವಿಶಿಷ್ಟವಾದ ಲಯಬದ್ಧತೆಯನ್ನು, ಲಾವಣ್ಯವನ್ನು ಚಿತ್ರಿಸಿದ್ದಾರೆ. ಮಿತವಾದ ಹೊರರೇಖೆಗಳಿಂದ ಆಕೃತಿಯನ್ನು ರಚಿಸಿ ಮಾನಾವಾಕೃತಿಗಳಲ್ಲಿ ಒಳಮೈಗೆ ದಟ್ಟವಾದ ಕಪ್ಪು ಛಾಯೆಯನ್ನು ನೀಡಿದ್ದಾರೆ. ಒಟ್ಟು ಕಲಾಕೃತಿಯಲ್ಲಿ ಸ್ತ್ರೀ–ಪುರುಷರ ಆಕೃತಿಗಳಲ್ಲಿ ವಿಶೇಷವಾದ ಶೃಂಗಾರಾತ್ಮಕ ಪ್ರೇಮಭಾವನೆಯ ಕಲ್ಪನೆಯನ್ನು ನೀಡುವಲ್ಲಿ ಜ್ಯಾಮಿತಿಯ ಆಕೃತಿಗಳನ್ನು ಸಾಂಕೇತಿಕವಾಗಿ ರಚಿಸುವ ಮೂಲಕ ಪಾಟೀಲರು ಕಲಾಕೃತಿಯ ಮೆರಗನ್ನು ಇನ್ನಷ್ಟು ಹೆಚ್ಚಿಸಿದ್ದಾರೆ.

ಚಿತ್ರ ೫. ನರ್ತಕಿ :

ಈ ಕಲಾಕೃತಿಯಲ್ಲಿ ಪಾಟೀಲರು ಸ್ತ್ರೀ ನೃತ್ಯಗಾರ್ತಿಯೊಬ್ಬಳನ್ನೂ ಚಿತ್ರಿಸಿದ್ದು, ಭಾರತೀಯ ನಾಟ್ಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತೆ ನರ್ತಿಸುವ ಬಾಲೆಯ ಈ ಚಿತ್ರ ಪುರಾತನ ಕಾಲದ ರಾಜದರ್ಬಾರುಗಳಲ್ಲಿನ ರಾಜನರ್ತಕಿಯರ ಸ್ಮರಣೆಯನ್ನು ತರುವಂತಹದ್ದಾಗಿದೆ. ಈ ಕಲಾಕೃತಿಯಲ್ಲಿ ರೇಖಾತ್ಮಕವಾಗಿ ಗಾಢ ಹೊರರೇಖೆಗಳ ಮೂಲಕ ವುಡ್‌ಬರ್ನಿಂಗ್ ಮಾಧ್ಯಮದಲ್ಲಿ ನೀಳ ಶರೀರದ ಅಂಗಾಂಗಗಳಲ್ಲಿ ಮುಖ್ಯವಾದ ರೇಖೆಗಳ ವೇಗೋತ್ಕರ್ಷಗಳನ್ನು ಪಾಟೀಲರು ಸ್ಟೋವ್‌ನ ಉರಿಯನ್ನು ಕುಂಚದಂತೆಯ ಪ್ರಯೋಗಾತ್ಮಕವಾಗಿ ಬಳಸಿ ದೇಹದ ಒಳಭಾಗಗಳಲ್ಲಿ ಟಾರ್ಚ ಉರಿಯನ್ನು ಅವಶ್ಯಕವೆನಿಸುವ ಪ್ರಮಾಣಕ್ಕೆ ಅನುಗುಣವಾಗಿ ಸುಟ್ಟ ಛಾಯಗಳನ್ನು ಒಟ್ಟುಗೂಡಿಸಿ ಮೊನೋಕ್ರೋಮ್ (ಏಕವರ್ಣ) ಅಥವಾ ಸ್ಟೇನ್‌ಸಿಲ್ ವಿಧಾನ ಅನುಸರಿಸುವಂತಹ ಕಲಾಕೃತಿಯನ್ನು ರಚಿಸಿದ್ದಾರೆ. ಏಕವರ್ಣ ಪದ್ಧತಿಯಲ್ಲಿ ಹಲವು ರೀತಿಯ ನೆರಳು ಬೆಳಕಿನ ಛಾಯಾಂಕನವನ್ನು ನೀಡಲು ಪ್ರಯತ್ನಿಸಿರುವುದನ್ನು ಈ ಕಲಾಕೃತಿಯಲ್ಲಿ ಕಾಣಬಹುದು. ಹೀಗೆ ಈ ಮಾಧ್ಯಮದಲ್ಲಿ ನರ್ತಕಿಯ ಪೂರ್ಣಪ್ರಮಾಣದ ಭಂಗಿಯನ್ನು ಆಭರಣ, ವಸ್ತ್ರವಿನ್ಯಾಸ ಭಾವಾವೇಷಗಳನ್ನು ಸೆರೆಹಿಡಿದು ಸುಂದರ ಹಾಗೂ ಚಲನೆಗೆ ಆಕರ್ಷಿತರಾಗಿ ಕಲಾಕೃತಿಯಲ್ಲಿ ಆ ಪರಿಣಾಮವನ್ನು ಮೂಡಿಸಲು ಸಫಲಾಗಿದ್ದಾರೆ.

ಚಿತ್ರ ೬. ಮಹಿಳೆ :

ಈ ಶೀರ್ಷಿಕೆಯ ಕಲಾಕೃತಿಯಲ್ಲಿ ಪಾಟೀಲರು ವುಡ್‌ಬನಿಂಗ್ ಮಾಧ್ಯಮದಲ್ಲಿ ಮಹಿಳೆಯನ್ನು ಸೌಂದರ್ಯದ ಸಾಂಕೇತಿಕವಾಗಿ ಕಪ್ಪುವರ್ಣ ಛಾಯೆಯಲ್ಲಿ ನಿರೂಪಿಸುವ ಕಲಾಕೃತಿಯಾಗಿದ್ದು, ಸ್ತ್ರೀಯ ಚಿತ್ರಣವನ್ನು ನೈಜವಾಗಿ ಚಿತ್ರಿಸದೆ ಕೇವಲ ಗಡಸು ಅಸ್ಪಷ್ಟ ರೇಖೆಗಳ ಮೂಲಕ ಅಮೂರ್ತ ಕಲ್ಪನೆಯ ಅಭಿವ್ಯಕ್ತಿಯಲ್ಲಿ ಚಿತ್ರವನ್ನು ರಚಿಸಿದ್ದಾರೆ.



ಚಿತ್ರ ೭ ನಗ್ನ ಸ್ತ್ರೀ

ಓರೆಯಾಗಿ ನಿಂತ ಸ್ತ್ರೀಯ ಸೌಂದರ್ಯವನ್ನು ಹೆಚ್ಚಿಸಲು ಶೀರಭಾವದಲ್ಲಿ ವಿಶಾಲವಾದ ಕೇಶವಿನ್ಯಾಸ, ವಿಶಾಲವಾದ ಕಣ್ಣು, ಕಾಮನಬಿಲ್ಲಿನಂತೆ ಬಾಗಿರುವ ಹುಬ್ಬು, ಅಗಲವಾದ ಎದೆಯ ಅಂಗಸೌಷ್ಟವ, ನೀಳಕಾಯದ ದೇಹರಚನೆಯ ಭಂಗಿ, ಭಾವವನ್ನು ಸಾಂಪ್ರದಾಯಿಕ ಶೈಲಿಯಲ್ಲಿ ತಲೆಯ ಮೇಲೆ ಸೆರಗು ಹಾಕಿಕೊಂಡ ಮಹಿಳೆಯನ್ನು ಸುಂದರವಾಗಿ ಚಿತ್ರಿಸಿದ್ದು, ಆಕೆ ತನ್ನ ಪ್ರಿಯಕರನ ಬರುವಿಕೆಯ ಹಾದಿಯನ್ನು ಕಾಯುತ್ತಿರುವಂತೆ ಇದೆ. ಆಕೆಯ ಭಾವನೆಗಳನ್ನು ಲೀಲಾಜಾಲವಾದ ರೇಖೆಗಳಲ್ಲಿ ಕ್ಷಣಕಾಲ ಸುರಳಿಯಂತೆ ಏನೋ ಒಂದು ಬ್ರಾಂತಿಯನ್ನು ನೀಡಿ ಅಂತಿಮವಾಗಿ ಸ್ಪಷ್ಟತೆಯ ಹಾದಿಯನ್ನು ತೋರಿಸುವಂತೆ ಈ ಕಲಾಕೃತಿಯು ರಚನೆಯಾಗಿದೆ. ಹೀಗೆ ಪಾಟೀಲರು ರೇಖೆಗಳ ಮೂಲಕ ಕಪ್ಪು ಛಾಯೆಯ ನೆರಳು ಬೆಳಕಿನ ಅನುಭವ ನೀಡುವಲ್ಲಿ ಅವರ ಈ ಕಲಾಕೃತಿ ಗಮನ ಸೆಳೆಯುತ್ತದೆ.

ಚಿತ್ರ ೭. ನಗ್ನಸ್ತ್ರೀ :

ನಗ್ನ ಸ್ತ್ರೀಯ ರೂಪವನ್ನು ಇಡಿಯಾದ ಮರದ ಹಲಗೆಯಲ್ಲಿ ವಿಶ್ರಾಂತಿಗೃಹದ ಚಿತ್ರಣವನ್ನು ಹಿನ್ನೆಲೆಯಾಗಿ ಚಿತ್ರಿಸಿದ್ದಾರೆ. ಈ ಸಂಯೋಜನಾ ಚಿತ್ರಣವನ್ನು ಪಾಟೀಲರು ತಮ್ಮ ಅಭಿವ್ಯಕ್ತಿಯಲ್ಲಿ ಸಮರ್ಥವಾಗಿ ಹೊರತರುವಲ್ಲಿ ಇನ್ನೊಂದು ಬಗೆಯ ಸಾಮರ್ಥ್ಯವನ್ನು ಕಲಾಕೃತಿಯಲ್ಲಿ ತಂದಿದ್ದಾರೆ. ಕಲಾಕೃತಿಯ ಒಟ್ಟುಸ್ಥಳಾವಕಾಶದಲ್ಲಿ ಸ್ತ್ರೀಯು ನಗ್ನಳಾಗಿ ಮಂಚದ ಮೇಲೆ ಕುಳಿತಿದ್ದು, ಮಂಚದ ಮೇಲೆ ಆಕೆಯ ಬೆನ್ನಿಗೆ ಆಸರೆಯಾಗಿ ದಿಂಬನ್ನು ಇಟ್ಟುಕೊಂಡಂತೆ ಮತ್ತು ಹಿನ್ನೆಲೆಯಲ್ಲಿ ವಿವಿಧ ರೀತಿಯ ಹಲವು ಪರಿಕರಗಳನ್ನು ಚಿತ್ರಿಸಲಾಗಿದೆ. ನಗ್ನ ಸ್ತ್ರೀಯು ಓರೆಯಾಗಿ ಬೇರೊಬ್ಬರ ಬರುವಿಕೆಯ ಹಾದಿಯನ್ನು ಕಾತುರದಿಂದ ಕಾಯುತ್ತಿರುವಂತೆ ಸ್ತ್ರೀಯ ಭಂಗಿಯು ವಿಶಿಷ್ಟವಾಗಿ ಮೂಡಿಬಂದಿದೆ.

ಈ ಸಂಯೋಜನಾ ಚಿತ್ರದಲ್ಲಿ ಸ್ತ್ರೀಯನ್ನು ಪ್ರಮುಖವಾಗಿ ಚಿತ್ರಕ್ಕೆ ಬಳಸಿಕೊಳ್ಳಲಾಗಿದೆ. ಇಲ್ಲಿ ಸ್ತ್ರೀ ಶರೀರದ ಮೇಲೆ ಮೃಧುತ್ವ ಅನುಭವ ನೀಡುವಲ್ಲಿ ದಟ್ಟವಾದ, ಲಯಬದ್ಧ ರೇಖೆಗಳ ಮೂಲಕ ನೈಜವಾಗಿ ಸೌಂದರ್ಯಭರಿತ ಮೊಗ, ವಿಶಾಲವಾದ ಎದೆ, ಅದಕ್ಕೆ ತಕ್ಕ ಗಾತ್ರದ ಸ್ತನಗಳು, ಅಗಲವಾದ ಕುಚಗಳನ್ನು ಚಿತ್ರಿಸುವುದರ ಮೂಲಕ ಆಕೆಯ ವಯೋಮಾನವನ್ನು ಸಾಂಕೇತಿಕವಾಗಿ ಸೂಚಿಸಲಾಗಿದೆ. ಜೊತೆಗೆ ಆ ಮಹಿಳೆಯು ಧರಿಸಿದ ಆಭರಣಗಳು, ಕೇಶವಿನ್ಯಾಸ ಪ್ರಾದೇಶಿಕತೆಯನ್ನು ಚಿತ್ರಿಸಲಾಗಿದೆ. ಹೀಗೆ ಪಾಟೀಲರು ಹೆಣ್ಣಿನ ಪ್ರೇಮ-ಕಾಮದ ಸಂದರ್ಭದ ಸನ್ನಿವೇಷಗಳನ್ನೊಳಗೊಂಡ ಈ ಕಲಾಕೃತಿಯಲ್ಲಿ ಬೆಂಕಿಯ ಜ್ವಾಲೆಯನ್ನು ಬಳಸಿ ಕಪ್ಪುವರ್ಣವನ್ನು



ಚಿತ್ರ ೮ ವೀಣಾವಾದಕಿ



ಚಿತ್ರ ೯ ಸಂಯೋಜನೆ

ನೇರವಾಗಿ ಹಲಗೆಯ ಮೇಲೆ ಪಡೆದು ಹೊರರೇಖೆಗಳ ಮೂಲಕ ಯುವತಿಯ ಮೈಮಾಟ ಮತ್ತು ಹಿನ್ನೆಲೆಯ ಚಿತ್ರಣವನ್ನು ರಚಿಸಿದ್ದಾರೆ.

ಚಿತ್ರ ೮. ವೀಣಾವಾದಕಿ :

ಸಮಕಾಲೀನ ಸಂದರ್ಭದಲ್ಲಿ ವುಡ್‌ಬರ್ನ ಮಾಧ್ಯಮದಲ್ಲಿ ರಚಿಸಿದ ವೀಣೆ ನುಡಿಸುತ್ತಿರುವ ಮಹಿಳೆಯ ಕಲಾಕೃತಿಯಲ್ಲಿ ನೈಜ ಶೈಲಿ ಕಂಡುಬರದೆ ಜ್ಯಾಮಿತಿಯ ರೇಖೆಗಳ ಮೂಲಕ ಅಮೂರ್ತವಾದ ಅಸ್ಪಷ್ಟ ಆಕಾರ ವಸ್ತುಗಳಿಂದ ಚಿತ್ರಿಸಲಾಗಿದೆ. ಕಲಾಕೃತಿ ರಚನೆಯಲ್ಲಿ ಸ್ತ್ರೀಯ ವೇಷಭೂಷಣ, ಆಭರಣವನ್ನು ಅವಲೋಕಿಸಿದಾಗ ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ನಿರತಳಾದ ಮಹಿಳೆಯನ್ನು ಚಿತ್ರಿಸಿದ್ದು, ಕೇಶವಿನ್ಯಾಸವನ್ನು ಗಮನಿಸಿದಾಗ ಕಲಾಕೃತಿಯಲ್ಲಿ ಪ್ರಾದೇಶಿಕತೆ ಮತ್ತು ಕಾಲದ ಅಂತರವನ್ನು ಪ್ರತಿಬಿಂಬಿಸುತ್ತದೆ.

ಒಟ್ಟಾರೆ ಕಲಾಕೃತಿಯ ಸಂಯೋಜನೆಯಲ್ಲಿ ವೀಣೆ ನುಡಿಸುತ್ತಿದ್ದ ಮಹಿಳೆಯನ್ನು ಮುಖ್ಯವಾಗಿ ಕೇಂದ್ರಿಕರಿಸಿ ವೀಣೆಯನ್ನು ತೊಡೆಯಮೇಲಿರಿಸಿಕೊಂಡು ಮುಖವನ್ನು ಕೆಳಗೆ ವಾಲಿಸಿ ಓರೆಯಾಗಿ ಕುಳಿತ ಮಹಿಳೆಯ ಭಂಗಿಯನ್ನು ಚಿತ್ರಿಸಲಾಗಿದೆ. ಭಾರತೀಯ ಕಾವ್ಯ ಪರಂಪರೆಯ ಶಾಸ್ತ್ರೋಕ್ತ ಪದ್ಧತಿಯನ್ನು ನಿರೂಪಿಸುವಂತಹ ಗುಣಾಂಶಗಳನ್ನು ಇದು ಒಳಗೊಂಡಿದೆ. ರೇಖಾಪ್ರಧಾನವಾದ ಈ ಕಲಾಕೃತಿಯಲ್ಲಿ ಮಹಿಳೆಯು ವೀಣೆ ನುಡಿಸುತ್ತ ತನ್ಮಯತೆಯಲ್ಲಿ ತೊಡಗಿರುವಂತಿದೆ. ಹಿನ್ನೆಲೆಯಲ್ಲಿ ಏನನ್ನೂ ಚಿತ್ರಿಸದೆ ಸ್ಥಳಾವಕಾಶವನ್ನು ಹಾಗೆಯೇ ಬಿಟ್ಟಿದ್ದು, ಮರದ ಹಲಗೆಯ ಮೇಲ್ಮೈ ಮೇಲೆ ಮೈವಳಿಕೆಯು ಕಾಣಿಸುತ್ತದೆ. ಒಟ್ಟು ಕಲಾಕೃತಿಯನ್ನು ಪಾಟೀಲರು ತಮ್ಮ ಕಾವ್ಯಮಯ ಕಲ್ಪನೆಗಳಿಗೆ ತಮ್ಮ ಸೃಜನಕ್ರಿಯೆಗೆ ಒಳಪಡಿಸಿ ಸುಡುಚಿತ್ರಗಳ ಮಾಧ್ಯಮದಲ್ಲಿ ೪×೩ ಅಳತೆಯ ಹಲಗೆಯ ಮೇಲೆ ಕಲಾಕೃತಿಯನ್ನು ರಚಿಸಿದ್ದಾರೆ. ಹೀಗೆ ಪಾಟೀಲರ ಅಭಿವ್ಯಕ್ತಿಯ ಸಹಜತೆಯೇ ಕಾವ್ಯಾನುಭವದ ಪ್ರಮುಖ ಲಕ್ಷಣವಾಗಿ ಮೂಡಿಬಂದಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ಚಿತ್ರ ೯. ಸಂಯೋಜನೆ :

ಈ ಕಲಾಕೃತಿಯಲ್ಲಿ ಪಾಟೀಲರು ವಿವಿಧ ಅಳತೆಯಲ್ಲಿ ಗೋಲಾಕೃತಿಗಳನ್ನು ರಚಿಸಿ ಒಂದಕ್ಕೊಂದು ಸಂಬಂಧ ಕಲ್ಪಿಸುವ ಹಾಗೆ ಕೆಲವು ಲಂಭರೇಖೆಗಳನ್ನು ವಿವಿಧ ಕೋನಗಳಲ್ಲಿ ಜೋಡಿಸಿ ನೈಜಶೈಲಿಗೆ ವಿರೋಧವಾದ ಮೂರ್ತ ಸ್ವರೂಪವನ್ನು ನೀಡಿದ್ದಾರೆ ಮತ್ತು ಅಮೂರ್ತತೆಯತ್ತ ಕೊಂಡೊಯ್ಯುವಲ್ಲಿ ಪ್ರಯೋಗಾತ್ಮಕವಾಗಿ ತಮ್ಮ ಸೃಜನಕ್ರಿಯೆಗೆ ಒಳಪಡಿಸಿ ರಚಿಸಿದ ಕಲಾಕೃತಿಯಿದಾಗಿದೆ.

ಸಮಾಂತರವಾದ ಹಲಗೆಯ ಸ್ಥಳಾವಕಾಶದಲ್ಲಿ ಹೂಬಳ್ಳಿಗಳನ್ನು ಸೂಚಿಸುವಂತೆ ಕಪ್ಪುವರ್ಣದಲ್ಲಿ ಹಲವು ಬಗೆಯ ಛಾಯಾಂಕನಗಳನ್ನು ಬಳಸಿ, ವಿಭಜಿಸಿ ಕಲಾಕೃತಿಯ ಒಟ್ಟು ಸ್ವರೂಪದ ಹಿನ್ನೆಲೆಯಾಗಿ ದ್ವಿಮಾನ ಆಕೃತಿಗಳು ಗೋಚರಿಸುತ್ತವೆಯಾದರೂ ತ್ರಿಮಾನವನ್ನು ಸೂಚಿಸುವಲ್ಲಿ ಅಷ್ಟೊಂದು ಗಮನ ಹರಿಸಿಲ್ಲ.

ಸಂಗೀತದಲ್ಲಿನ ರಾಗಗಳ ಏರಿಳಿತಗಳ ಅನುಭವವನ್ನು ನೀಡುವಲ್ಲಿ ಈ ಚಿತ್ರ ಸರಳೀಕೃತವಾಗಿ ರಚನೆಗೊಂಡಿವೆ.

ಅಧ್ಯಯನದ ಫಲಿತಗಳು :

* ಚಿತ್ರ ಸಂಖ್ಯೆ ಒಂದರಲ್ಲಿ ಗಣೇಶನ ಚಿತ್ರ ರಚನೆಯಲ್ಲಿ ಸರಳ ರೇಖೆಗಳು ಮೂಡಿದ್ದು, ಚಿತ್ರರಚನಾ ಶೈಲಿಯಲ್ಲಿ ನೈಜತೆಯು ಮುಸುಕಾಗಿ ಆಧುನಿಕತೆಯತ್ತ ವಾಲಿದೆ.
* ಏಕರೂಪಿಯ ವರ್ಣದಲ್ಲಿ ಕಪ್ಪುವರ್ಣದ ಛಾಯೆಗಳ ಏರಿಳಿತಗಳನ್ನು ಕಾಣಬಹುದು.
* ಗಣೇಶನ ಚಿತ್ರವು ಒಟ್ಟು ಸ್ಥಳಾವಕಾಶವನ್ನು ಆವರಿಸಿ ಮೂಡಿಬಂದಿದೆ.
* ಪಾಟೀಲರು ವುಡ್‌ಬರ್ನಿಂಗ್ ಮಾಧ್ಯಮದ ಗಣೇಶನ ಚಿತ್ರಗಳಲ್ಲಿ ಏಕರೂಪಿಯ ವರ್ಣಬಳಕೆಯನ್ನು ನೆರಳು ಬೆಳಕಿನ ಅನುಭವ ನೀಡುವ ಮೂಲಕ ಛಾಯಾಂಕನದ ವ್ಯತ್ಯಾಸಗಳನ್ನು ವ್ಯಕ್ತಪಡಿಸಿದ್ದಾರೆ.
* ಹೆಚ್ಚಾಗಿ ಏಕರೂಪದಲ್ಲಿ ರಚನೆಗೊಂಡ ಗಣೇಶನ ಕಲಾಕೃತಿಗಳಲ್ಲಿ ಯಾವುದೇ ಅಲಂಕಾರಿಕ ವಸ್ತ್ರವಿನ್ಯಾಸಗಳನ್ನು, ಆಭರಣಗಳ ನಕ್ಷಾಚಿತ್ರಗಳನ್ನು ಬಳಸಲಾಗಿಲ್ಲ.
* ಚಿತ್ರ ಪದ್ಧತಿ ಏಕರೂಪಿಯ ವಾಗಿದ್ದರು, ಚಿತ್ರದ ಸೌಂದರ್ಯವನ್ನು ಹೆಚ್ಚಿಸಿವೆ.
* ಈ ಕಲಾಕೃತಿಗಳಲ್ಲಿ ಹಿನ್ನೆಲೆಗೆ ಹೆಚ್ಚಿನ ಮಹತ್ವ ನೀಡದೆ ಮುನ್ನೆಲೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ.
* ಕಲಾಕೃತಿಗಳಲ್ಲಿ ರೂಪವು ರೇಖೆಗಳ ಮೂಲಕ ಆವರಿಸಿಕೊಂಡಿದೆ. ಕೆಲವೇ ಗಾಡ ರೇಖೆಗಳು ಮುಕ್ತ ರೂಪವನ್ನು ಪಡೆದಿವೆ.
* ಕಲಾಕೃತಿಗಳಲ್ಲಿ ರೂಪ, ಶೈಲಿ ಒಂದೆ ಆದರೂ, ಸೂಕ್ಷ್ಮವಾದ ಸಂಕೇತಗಳು ಅಭಿವ್ಯಕ್ತಿಯಾಗಿವೆ.

ಹೀಗೆ ಧಾರ್ಮಿಕ, ಪ್ರಾಕೃತಿಕ ನೆಲೆಗಟ್ಟಿನಲ್ಲಿ ಮತ್ತು ಚಾರಿತ್ರಿಕ ನೆಲೆಗಳಲ್ಲಿ ಸೃಜನಶೀಲತೆಯ ಮೂಲಕ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಅವರ ಈ ಮೇಲಿನ ವುಡ್‌ಬರ್ನ್ ಮಾಧ್ಯಮದ ಕಲಾಕೃತಿಗಳ ಅಧ್ಯಯನದಿಂದ ತಿಳಿಯಬಹುದಾಗಿದೆ. ಅವರು ರಚಿಸಿದ ಈ ಮಾಧ್ಯಮದ ಕಲಾಕೃತಿಗಳು ಭಾರತೀಯ ಸಂಸ್ಕೃತಿಗೆ ಪೂರಕ ಶಕ್ತಿಯಾಗಿ ಬೆಳೆದಿರುವುದನ್ನು ನಾವು ಕಾಣಬಹುದು. ಚಿತ್ರ ಸಂಖ್ಯೆ ೪,೫,೬,೭, ಕಲಾಕೃತಿಗಳು ಭಾರತೀಯ ಸೌಂದರ್ಯಶಾಸ್ತ್ರಕ್ಕನುಗುಣವಾಗಿ ಪ್ರೇಮ, ಪ್ರಣಯ, ರಸಿಕತೆಯನ್ನು ಹಾಗೂ ಕಾಮ ಸೂಚಕ ಪ್ರಸಂಗಗಳನ್ನು ಕಲಾಕೃತಿಯ ವಸ್ತುವಿಷಯವನ್ನಾಗಿ ಬಳಸಿಕೊಂಡು ಅನೇಕ ಚಿತ್ರಗಳನ್ನು ರಚಿಸಿರುವುದನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಕಲಾಕೃತಿಗಳ ವಸ್ತುವಿಷಯ ಭಾರತೀಯವಾದರೂ, ಚಿತ್ರರಚನಾಶೈಲಿ, ತಂತ್ರಗಳಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿ ಸಣ್ಣರೇಖೆ, ವಕ್ರರೇಖೆ, ಲಂಭರೇಖೆ ಇತ್ಯಾದಿ ದಪ್ಪ, ತೆಳು ರೇಖೆಗಳನ್ನು ಬಳಸಿ ಕಲಾಕೃತಿಯಲ್ಲಿ ಸ್ವಂತಿಕೆಯನ್ನು ನಿರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಇವರ ಭಾವಚಿತ್ರಗಳು ಉತ್ಕೃಷ್ಟವಾಗಿದೆ. ಅವುಗಳ ವಿಶೇಷತೆಯಲ್ಲಿ ಜೆ. ಜೆ. ಕಲಾ ಶಾಲೆಯ ವರ್ಣಗಳ ಬಳಕೆಯನ್ನು ಕಾಣುತ್ತೇವೆ. ಅದರಲ್ಲಿ ತುಂಬಾ ಹಿತಮಿತವಾಗಿ ನುಣುಪಾಗಿ ಅಕಾಡೆಮಿಕ್ ಶೈಲಿಯಲ್ಲಿ ಲೇಪಿಸಿದ್ದು ಕಂಡುಬರುತ್ತದೆ. ತದನಂತರ ಅಂದರೆ ೧೯೬೫ ರ ನಂತರದ ಚಿತ್ರಗಳಲ್ಲಿ ಇವರ ವರ್ಣಲೇಪನ ಬೇರೆ ರೂಪವನ್ನು ಪಡೆದದ್ದು ಕಂಡುಬರುತ್ತದೆ. ಅದು ಇಂಪ್ರೇಸ್ ನಿಷ್ಠರಂತೆ ಕುಂಚದ ಹೊಡೆತಗಳು ಕಾಣಿಸುತ್ತವೆ. ಈ ಬದಲಾವಣೆಯನ್ನು ಅವರ ಸ್ಥಿರರೂಪ ಚಿತ್ರಣ ಒಂದರಲ್ಲಿ ಚೆನ್ನಾಗಿ ಗುರುತಿಸಬಹುದು. ಈ ಸ್ಥಿರರೂಪ ಚಿತ್ರಣವನ್ನು ಹಿನ್ನೆಲೆಯಲ್ಲಿರುವ ಬಟ್ಟೆಯಲ್ಲಿಯ ನೆರಳು-ಬೆಳಕನ್ನು ಬೇರೆ ಬೇರೆ ಬಣ್ಣಗಳನ್ನು ಒಂದರ ಪಕ್ಕದಲ್ಲಿ ಒಂದು ಇರಿಸಿ ಇಂಪ್ರೆಶನಿಸ್ಟರ್ ತಂತ್ರದಂತೆ ತೋರಿಬರುತ್ತದೆ. "ಇಂಪ್ರೆಷನಿಸಂ ಚಿತ್ರಕಾರರಿಗೆ ತಾವು ದೃಶ್ಯದಲ್ಲಿ ಕಾಣುವ ಬಣ್ಣಗಳು ಮುಖ್ಯ ಅವನ್ನು ಕಂಡಷ್ಟೇ ನಿಜವಾಗಿ ಬರೆಯಬೇಕು ಮತ್ತು ದೃಶ್ಯದಲ್ಲಿ ಕಾಣುವ ಬಣ್ಣಗಳು ನೆರಳು-ಬೆಳಕುಗಳೆರಡಲ್ಲೂ ಅಸಂಖ್ಯ ಕಡುಪು, ಎಳಸು ಛಾಯೆಗಳು ಕಾಣಿಸುತ್ತವೆಯೇ ಹೊರತು ಅವು ಕಪ್ಪು-ಬಿಳುಪಾಗಿ ಕಾಣಿಸುವುದಿಲ್ಲ." ಈ ಅಂಶ ಅವರ ಈ ಚಿತ್ರದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಇತ್ತೀಚಿನ ಕೆಲವು ಭಾವ ಚಿತ್ರಗಳಲ್ಲಿ ವ್ಯಕ್ತಿಯ ಮುಖ ಮತ್ತು ಬಟ್ಟೆಗಳ ಕೆಲವು ಭಾಗಗಳಲ್ಲಿ ವಿವರಗಳನ್ನು ತೋರಿಸಿದ್ದು, ಹಿನ್ನೆಲೆ ಅಷ್ಟೊಂದು ವಿವಿರ ಮಾಡದೇ ಚಪ್ಪಟೆ ಆಗಿರುವುದು

ಕಂಡುಬರುತ್ತದೆ. ಕೆಲವು ನಿಸರ್ಗ ಚಿತ್ರ ಕಲಾಕೃತಿಗಳಲ್ಲಿ ಇಂಪ್ರೆಶನಿಜಮ್ ಪ್ರಭಾವ ಕಂಡುಬರುತ್ತದೆ. ಈ ಕೃತಿಗಳು ಹೆಚ್ಚಾಗಿ ಜಲವರ್ಣದಲ್ಲಿವೆ. ಹೀಗೆ ತಮ್ಮದೇ ಆದ ಶೈಲಿಯಿಂದ ತಮ್ಮನ್ನು ಕಲಾಕ್ಷೇತ್ರದಲ್ಲಿ ಗುರ್ತಿಸಿಕೊಂಡಿದ್ದಾರೆ. "ಜನರ ಕಣ್ಣು-ಮನಗಳನ್ನು ತುಂಬುವ ಕಲೆಯನ್ನು ಕಲಾವಿದ ಕೊಡಬೇಕು. ಎಂದು ಅವರ ಬಲವಾದ ಬಯಕೆಯಾಗಿತ್ತು".

ಅಧ್ಯಯನದ ಫಲಿತಗಳು :

- ❖ ಪಾಟೀಲರ ತೈಲವರ್ಣ ಮಾಧ್ಯಮದ ಭಾವಚಿತ್ರಗಳಲ್ಲಿಜೆ.ಜೆ.ಕಲಾಶಾಲೆಯ ಪ್ರಭಾವವನ್ನು ಕಾಣಬಹುದು.
- ❖ ಜನಸಾಮಾನ್ಯರಿಗೆ ಇವರ ಕೃತಿಗಳು ನೇರವಾಗಿ ಮುಟ್ಟುವಂತಿವೆ.
- ❖ ನೈಜತೆ ಮತ್ತು ಸರಳತೆ ಬಿಂಬಿಸುವ ಮೂಲ ಉದ್ದೇಶವಾಗಿತ್ತು.
- ❖ ಪಾಟೀಲರು ರಚಿಸಿದ ಭಾವಚಿತ್ರಗಳು ಬಹುತೇಕ ನೇರವಾಗಿವೆ.
- ❖ ಭಾಲಗಂಗಾಧರ ತಿಲಕರ ಭಾವಚಿತ್ರದಲ್ಲಿ ನೈಜ ಅಕಾಡೆಮಿಕ್ ಶೈಲಿಯೊಂದಿಗೆ ಪಾಶ್ಚಾತ್ಯದ ಕಲಾಪ್ರಭಾವ ರೂಪಗೊಂಡಿದೆ.
- ❖ ವರ್ಣಕಲಾಕೃತಿಗಳಲ್ಲಿ ವಸ್ತುವಿಷಯವನ್ನು ಸ್ಥಳಾವಕಾಶದಲ್ಲಿ ವಿವಿಧ ಆಕಾರಗಳಲ್ಲಿ ಚಿತ್ರಿಸಿರುವುದನ್ನು ಕಾಣಬಹುದು.
- ❖ ಅವಕಾಶಗಳಲ್ಲಿ ವಿವಿಧ ವರ್ಣಗಳ ಮೂಲಕ ಚೌಕಟ್ಟುಗಳನ್ನು ರೂಪಿಸಿ ವಸ್ತುಗಳನ್ನು ಬೇರ್ಪಡಿಸಿ ಚಿತ್ರಿಸಿದ ಪ್ರಯತ್ನವನ್ನು ಕಾಣಬಹುದು.
- ❖ ವಾಸ್ತವಿಕ ಘಟನೆಗಳನ್ನು ಚಿತ್ರದ ವಸ್ತುವಿಷಯವನ್ನಾಗಿ ಚಿತ್ರ ರಚನೆಗೆ ಬಳಸಿಕೊಂಡಿರುವುದು.
- ❖ ಸಂಯೋಜನಾ ಕೃತಿಗಳಲ್ಲಿ ಸೌಮ್ಯ ಮತ್ತು ಪ್ರಖರ ವರ್ಣಗಳನ್ನು ಬಳಸಿಕೊಂಡಿರುವುದು.
- ❖ ಭಾರತೀಯ ಅಂಶಗಳನ್ನು ಬಳಸಿ ಆಧುನಿಕ ರೂಪ ಕೊಡುವ ಪ್ರಯತ್ನವನ್ನು ಕಾಣಬಹುದು.
- ❖ ಕಲಾಕೃತಿಗಳಲ್ಲಿ ಕಾಲಘಟ್ಟವನ್ನು ಗುರುತಿಸಬಹುದು.
- ❖ ಸಂಯೋಜನ ಕೃತಿಗಳಲ್ಲಿ ಅವಕಾಶ ಮತ್ತು ವರ್ಣಗಳು ಹೆಚ್ಚು ಮಹತ್ವ ಪಡೆದಿವೆ.
- ❖ ಚಿತ್ರದಲ್ಲಿನ ರೂಪಗಳು ಸಾಂಕೇತಿಕ ರೂಪ ತಾಳಿವೆ.

- ಕಲಾಕೃತಿ ರಚನೆಯಲ್ಲಿ ಆಂತರಿಕ ಭಾವನೆಯನ್ನು,ಅಭಿವ್ಯಕ್ತಿಯನ್ನು ಗುರುತಿಸಬಹುದು.
- ಸರಳೀಕೃತ ರೂಪಗಳು ಅಮೂರ್ತತೆ ರೂಪವನ್ನು ಪಡೆದಿವೆ.
- ಸಂಕೇತಗಳು ವರ್ಣಗಳ ಮೂಲಕ ಪರಸ್ಪರ ಕಲಾಕೃತಿಗಳು ಸರಣಿಯಾಗಿ ರಚಿತಗೊಂಡಿದೆ.

❖ ❖ ❖

ಅಧ್ಯಾಯ : ಐದು

ಶಂಕರ ಪಾಟೀಲರ ಛಾಯಾಚಿತ್ರಗಳು

ಚಿತ್ರ ಬರೆಯುವುದೂ ಬರೆದುದನ್ನು ನೋಡಿ ಆನಂದಿಸುವುದು ಮಾನವನಿಗೆ ಆದಿಕಾಲದಿಂದಲೂ ಬಂದ ಒಂದು ನೈಸರ್ಗಿಕ ಸ್ವಭಾವ. ಶಿಲಾ ಮಾನವನ ಕಾಲದಿಂದಲೂ ಅವನು ಚಿತ್ರ ಬರೆಯಲು ಹವಣಿಸಿದ ಮತ್ತು ರೇಖಾಚಿತ್ರಗಳನ್ನು ನೀಡಿ ಬರೆದ ಹಲವು ಉದಾಹರಣೆಗಳಿವೆ. ತಾನು ಕಂಡು ಮೆಚ್ಚಿಕೊಂಡ ರೂಪ– ದೃಶ್ಯಗಳನ್ನು ಶಿಲೆಯ ಪಾತಳಿಯ ಮೇಲೆ ಮೊನಚುಗಲ್ಲಿನಿಂದಲೂ, ಬಣ್ಣದ ಬಳಪುಗಳಿಂದಲೊ ನೋಡುವ ಅಭಿಲಾಷೆ ಪುರಾತನವಾದುದು. ಶಿಲಾ ಮಾನವರಿಂದ ಆಧುನಿಕ ಮಾನವನವರೆಗೆ ಬೆಳೆದುಬಂದ ವಿಕಾಸಾಭಿವೃದ್ಧಿಗಳಲ್ಲಿ ಚಿತ್ರಕಲೆ ಪ್ರಮುಖವಾದುದಾಗಿದೆ. ಯಾವ ಕಲೆಯೇ ಆಗಲಿ ಅದು ಸಾಮಾನ್ಯ ಧರ್ಮ ಎಂದು ಹೇಳಬಹುದು.

ಇಂದು ಕಲೆಯ ಅಭಿವ್ಯಕ್ತಿ ಮಾಧ್ಯಮಗಳಲ್ಲಿ ಛಾಯಾಚಿತ್ರಕಲೆ (Art of Photography) ಯೂ ಒಂದು ಪ್ರಬುದ್ಧ ಮಾಧ್ಯಮ. ರೇಖಾಚಿತ್ರಕ್ಕೂ, ವರ್ಣಚಿತ್ರಕ್ಕೂ ಹತ್ತಿರವಾದಂತೆ ಕಂಡುಬಂದರೂ ಸಹ ಛಾಯಾಚಿತ್ರ ಸೃಷ್ಟಿ ಮಾರ್ಗವೆ ಬೇರೆ. 'ಪೋಟೋಗ್ರಾಫಿ' ಎಂಬ ಪದಕ್ಕೆ 'ಛಾಯಾಚಿತ್ರ' ಎಂಬ ಪದವು ಸಮಾನ ಅರ್ಥಕೊಡುವ ಪದವಲ್ಲ. ಆದರೂ ಅದು ಬಳಕೆಯಲ್ಲಿ ಬಂದಪದ. ಆದುದರಿಂದ ಆ ಪದವನ್ನೇ ಹಿಂದಿನಿಂದ ಇಂದಿನವರೆಗೆ ಬಳಸುತ್ತಾ ಬಂದಿರುವುದು ಗಮನಾರ್ಹ.

"ಸುಮಾರು ಎರಡು ಶತಮಾನ ತುಂಬಿರುವ ಫೋಟೋಗ್ರಾಫಿಯೂ ಕ್ರಮೇಣ ಹಲವು ಹಂತಗಳನ್ನು ಕಳೆದು ಇಂದಿನ ಪ್ರಬುದ್ಧ ಸ್ಥಿತಿಗೆ ಬಂದಿದೆ. ಶಾಖೋಪಶಾಖೆಗಳಾಗಿ ಬೆಳೆದು ವಿಸ್ತರಿಸಿದೆ ಹಾಗೂ ಅದಕ್ಕೆ ಸಂಬಂಧಿಸಿದ ಅವಶ್ಯಕವಾದ ನೂರಾರು ಸಾಧನ ಸಲಕರಣೆಗಳು ಮತ್ತು ಬಳಕೆಯ ವಿಧಾನಗಳೂ ಗಣನೀಯ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿವೆ. ಫೋಟೋಗ್ರಾಫಿಯು ಆಧುನಿಕ ಜೀವನದಲ್ಲಿ ಒಂದು ಅವಿಭಾಜ್ಯ ಅಂಗ ಮತ್ತು ಅವಶ್ಯಕತೆಯಾಗಿದೆ. ಆದರೆ ಈ ಸಾಧನ ಸಲಕರಣೆಗಳನ್ನು ಸಂಗ್ರಹಿಸುವಾಗ ಅವುಗಳ ತಾಂತ್ರಿಕತೆ ಬಳಸುವ ರೀತಿಗಳನ್ನು ಮೊದಲು ಚೆನ್ನಾಗಿ ತಿಳಿದುಕೊಳ್ಳಬೇಕು. ಯಾವುದೇ ಕಲೆಯಾಗಲಿ ಅವುಗಳಿಗೆ ಸಂಬಂಧಿಸಿದ ಉಪಕರಣಗಳನ್ನು ಬಳಸುವಾಗ ಅವುಗಳ ಪರಿಚಯ ಮತ್ತು ಕಾರ್ಯವಿಧಾನಗಳು ತೀರಾ ಅವಶ್ಯಕ."[೧]

ಛಾಯಾಚಿತ್ರಣ ಕಲೆಯು (ಫೋಟೋಗ್ರಾಫಿ) ೧೯ನೇ ಶತಮಾನದ ಉತ್ತರಾರ್ಧದಲ್ಲಿ ಹುಟ್ಟಿ ನಿಧಾನವಾಗಿ ಹಂತ ಹಂತವಾಗಿ ಬೆಳೆದು ೨೦ನೇ ಶತಮಾನದಲ್ಲಿ ಪ್ರಬುದ್ಧತೆಗೆ ಬಂದಿದೆ. ಕಳೆದ ಐದು ಶತಮಾನಗಳಲ್ಲಿ ಛಾಯಾಚಿತ್ರಣ ಕಲೆಯನ್ನು ಕುರಿತು ನಡೆದ ಅನ್ವೇಷಣೆ, ಸಂಶೋಧನೆ ಮತ್ತು ಸಂಶೋಧಕರ ಆಸಕ್ತಿ ಕೆರಳಿಸುವ ಇತಿಹಾಸವಾಗಿದೆ. ಈ ಇತಿಹಾಸ ಇನ್ನೂ ಮುಗಿಯದೆ ಮುಂದುವರೆಯುತ್ತಿದೆ ಕೂಡ. ಛಾಯಾಚಿತ್ರಣದ ಸಾಧನ ಸಲಕರಣೆಗಳ ಬಗೆಗೆ ಇನ್ನೂ ಸಂಶೋಧನೆಗಳು ಇಂದಿಗೂ ನಡೆಯುತ್ತಲೇ ಇವೆ. ಕನಿಷ್ಠದಿಂದ ಗರಿಷ್ಠವನ್ನು ಸಾಧಿಸುವ ಅಪೂರ್ಣತೆಯಿಂದ ಪೂರ್ಣತೆಯ ಕಡೆಗೆ ಸಾಗುವ ಮಾನವನ ಹಂಬಲವು ತೃಪ್ತಿ ಕಾಣದ ಹಂಬಲವಾಗಿದೆ. ಇಂದಿನ ಆಧುನಿಕ ಜೀವನದಲ್ಲಿ "ಛಾಯಾಚಿತ್ರಣ ಕಲೆಯು ಲಲಿತಕಲೆಯಿಂದ ಬೇರ್ಪಡಿಸಲಾಗದ ಒಂದು ಅಂಗವಾಗಿದೆ. ಇಂದು ಅದು ಮಾನವಿಯ ಅವಶ್ಯಕತೆಗಳಲ್ಲಿ ತನ್ನ ಸ್ಥಾನಮಾನವನ್ನು ಭದ್ರಪಡಿಸಿಕೊಂಡಿದೆ ಮತ್ತು ಸಾಕಷ್ಟು ಕವಲುಗಳಾಗಿ ಬೆಳೆದು ಪ್ರತಿಯೊಂದು ಕವಲೂ ತನ್ನದೇ ಆದ ವೈಶಿಷ್ಟ್ಯ ಮತ್ತು ಔಪಯೋಗಿಕ ಗುಣಗಳಿಂದ ಆಧುನಿಕ ಜೀವನದ ವಿವಿಧ ಸ್ತರಗಳನ್ನು ತನ್ನಲ್ಲಿ ಸಮಾವೇಶಗೊಳಿಸಿಕೊಂಡಿದೆ. ಸಾಮಾಜಿಕ ಮತ್ತು ವೈಜ್ಞಾನಿಕ ಸುದ್ದಿ ಮಾಧ್ಯಮ ಹಾಗೂ ಸಂಶೋಧನಾ ಪ್ರಯೋಗಗಳಲ್ಲಿ ಛಾಯಾಚಿತ್ರಣ ಕಲೆಯ ಸ್ಥಾನ ಬಹುಮುಖ್ಯ. ಹಾಗೆಯೇ ಸೌಂದರ್ಯಾನುಭೂತಿಗೆ ಸಾಧನ ವಾಗಿ ಲಿತಕಲೆಗಳ ಸಾಲಿಗೂ ಸೇರಿ "ಫೋಟೋಗ್ರಾಫಿ" ಕೂಡ ಒಂದು ಕಲೆ ಎನಿಸಿಕೊಂಡಿದೆ."[೨]

---

೧. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಭಾವಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೨.
೨. ಅದೇ, ಪು. ೧೨.

ಇಂದು ಕಲೆಯ ಅಭಿವ್ಯಕ್ತಿ ಮಾಧ್ಯಮಗಳಲ್ಲಿ ಪೋಟೋಗ್ರಾಪಿಯೂ ಒಂದು ಪ್ರಬುದ್ಧ ಮಾಧ್ಯಮ ಎಂದು ಸಾಕಷ್ಟು ತಜ್ಞರ ಅಭಿಪ್ರಾಯವಾಗಿದೆ. ಮಾನವನ ಕಲೆಯ ಅಭಿರುಚಿ, ಕಲೆಯ ಅಭಿವ್ಯಕ್ತಿ, ಅಭಿಲಾಷೆ, ತಾಂತ್ರಿಕತೆ, ಹೊಸ ಹೊಸ ಅವಿಷ್ಕಾರಗಳ ಯಾಂತ್ರಿಕತೆಯ ಪರಿಣಾಮ ಎಂಬ ಅಭಿಪ್ರಾಯ. ಇಂದಿನ ಆಧುನಿಕ ದಿನಮಾನಗಳಲ್ಲಿ ತನ್ನ ನೆಲೆಯನ್ನು ಕಂಡುಕೊಂಡು ವಿಜ್ಞಾನದ ಒಂದು ಅಪೂರ್ವ ಉಪಯುಕ್ತ ಕೊಡುಗೆಯಾಗಿ, ಜೊತೆಗೆ ಲಲಿತಕಲೆಯ ಅಭಿವ್ಯಕ್ತಿ ಮಾಧ್ಯಮವಾಗಿ, ಚಿತ್ರಕಲಾವಿದನ ನವ ನವೀನ ಭಾವನೆಗಳ ಅಭಿವ್ಯಕ್ತಿಗೆ ಮಾಧ್ಯಮವಾಗಿ ಆನಂದಾನೂಭೂತಿಗೆ ಸಾಧನ ಮತ್ತು ಮಾರ್ಗವೂ ಆಗಿದೆ.

ಜನಪ್ರಿಯ ಹವ್ಯಾಸಗಳಲ್ಲಿ ಛಾಯಾಚಿತ್ರಕಲೆಗೆ ಒಂದು ಖಚಿತ ಮತ್ತು ಪುರಸ್ಕೃತ ಸ್ಥಾನಮಾನವಿದೆ. ಚಲನಚಿತ್ರ ಮಂಡಳಿಗಳು ಈ ಸ್ಥಾನವನ್ನು ಭದ್ರಪಡಿಸಿವೆ. ಹವ್ಯಾಸಿ ಛಾಯಾಚಿತ್ರಕಾರರು ತಮ್ಮ ತಮ್ಮ ಆಯ್ಕೆ ಅಭಿರುಚಿಗಳಿಗೆ ತಕ್ಕಂತೆ ಛಾಯಾಚಿತ್ರ ಕಲೆಯನ್ನು ತಮ್ಮ ತಮ್ಮ ಅನುಕೂಲಗೋಸ್ಕರ ವಿಂಗಡಿಸಿಕೊಂಡು ಶಾಖೆಗಳನ್ನು ಆರಿಸಿಕೊಂಡಿದ್ದಾರೆ. ಕೆಲವರು ವನ್ಯಜೀವಿ ಛಾಯಾಚಿತ್ರಣಗಳನ್ನು ಆರಿಸಿಕೊಂಡರೆ, ಮತ್ತೆ ಕೆಲವರು ಪತ್ರಿಕಾ ಮಾಧ್ಯಮ. ಹೀಗೆ ವಿವಿಧ ಹವ್ಯಾಸಿ ಚಿತ್ರಿಕರಣಗಳನ್ನು ಅವಲಂಬಿಸಿದ್ದಾರೆ. ಈ ದಿಶೆಯಲ್ಲಿ ಛಾಯಾಚಿತ್ರೀಕರಣಗಳನ್ನು ಅವಲಂಬಿಸಿದ್ದಾರೆ. ಈ ದಿಶೆಯಲ್ಲಿ ಛಾಯಾಚಿತ್ರಣಕಲೆಯು ಒಂದು ಅಂಗಿಕೃತ ಉದ್ಯಮವಾಗಿರುವದರ ಜೊತೆಗೆ ಕೈಗಾರಿಕೋದ್ಯಮವು (ಕಮರ್ಷಿಯಲ್) ಆಗಿದೆ. ಹವ್ಯಾಸವಾಗಿ ಆರಿಸಿಕೊಂಡವರಲ್ಲಿ ಪಿಕ್ಟೋರಿಯಲ್ (ಭಾವಾಬಿ-ವ್ಯಂಜಕ ಛಾಯಾಚಿತ್ರಕಲೆ)ಯನ್ನು ಕೆಲವರು ಮಾತ್ರ ಆಯ್ದುಕೊಂಡಿದ್ದಾರೆ. ನಿಸರ್ಗ ಮತ್ತು ಮಾನವ ವರ್ಗದ ಸ್ವಭಾವಜನ್ಯ ಪ್ರವೃತ್ತಿಗಳ ಭಾವಭಂಗಿಗಳನ್ನು ಕಂಡಾಗ ಭಾವಚಿತ್ರಕಾರನ ಮನಸ್ಸಿನಲ್ಲಿ ಕ್ಷಣಿಕ ಕಲ್ಪನೆಗಳು ಮೂಡುತ್ತವೆಯಷ್ಟೇ. ಅವುಗಳ ಅಭಿವ್ಯಂಜನೆಯನ್ನು ಪೋಟೋಗ್ರಾಫಿಯ ಯಾಂತ್ರಿಕ, ತಾಂತ್ರಿಕ ಮತ್ತು ಕರಕುಶಲತೆಗಳಿಂದ ಚಿತ್ರದ ಮೂಲಕ ವ್ಯಕ್ತಪಡಿಸುವುದೇ ಭಾವಾಭಿವ್ಯಂಜಕ ಛಾಯಾಚಿತ್ರಕಲೆ ಎಂದು ಸ್ಥೂಲವಾಗಿ ಹೇಳಬಹುದು.

ಭಾವಾಭಿವ್ಯಂಜಕ ಛಾಯಾಚಿತ್ರಕಲೆಯು ಲಲಿತಕಲೆಗಳಲ್ಲಿ ಒಂದಾದ ವರ್ಣಚಿತ್ರಕಲೆಗೆ ಹತ್ತಿರವಾದುದೆಂದು ಹೇಳಬಹುದು. ವಾಸ್ತವ ಚಿತ್ರಣವನ್ನು ಬಿಟ್ಟು ಸ್ವಯಂ ಅಭಿವ್ಯಕ್ತಿಗೆ ಅನುಗುಣ ಹಾಗೆಯೇ ಒಂದು ದೃಶ್ಯವು ತನ್ನ ಕಣ್ಣುಗಳಿಗೆ ಹೇಗೆ ಗೋಚರಿಸುತ್ತದೆಯೋ ಅದೇ ಅಂತರಭಾಸದಲ್ಲಿ ಸ್ಪಷ್ಟ ಯಥಾದರ್ಶನ (Perspective) ಮತ್ತು ಪ್ರಕಾಶ (light) ವರ್ಣ, ರೇಖೆಗಳನ್ನು ತನ್ನ ಭಾವನೆಗಳ

ಅಭಿವ್ಯಕ್ತಿಗೆ ಅನುಗುಣವಾಗಿ ಚಿತ್ರಿಕರಿಸುವುದು. "ಛಾಯಾಚಿತ್ರಕಲೆಯು ಕಲಾವಿದನ ಸಂತೃಪ್ತ ಮನಸ್ಸಿನಿಂದ ಮೂಡಿ ಬರಬೇಕು. ಅದು ಸತ್ಯ, ಸೌಂದರ್ಯ, ಸೃಜನಶೀಲತೆಯಿಂದ ಮನಸ್ಸಿಗೆ ಆಹ್ಲಾದವನ್ನು ಜೀವನಕ್ಕೆ ಧಾರಣ ಶಕ್ತಿಯನ್ನು ಕೊಡುವಂತಿದ್ದರೆ ಅದರ ಉದ್ದೇಶ ಸಾರ್ಥಕವಾಗುತ್ತದೆ. ಯಾವ ಒಬ್ಬ ಛಾಯಾಚಿತ್ರಕಾರನ ಕಲ್ಪನೆ, ಆವೇಶಶುದ್ಧಿ, ರೋಹಣ ವಿಧಾನಗಳಲ್ಲಿ ನೈಪುಣ್ಯತೆ ಮತ್ತು ನವೀನತೆಗಳಿರುತ್ತವೆಯೋ ಅಂಥವನು ಮಾತ್ರ ಪರಿಣತಿ ಮತಿಗಳನ್ನು ಅಚ್ಚರಿಗೊಳಿಸಬಲ್ಲ ಮತ್ತು ತೃಪ್ತಿಗೊಳಿಸಬಲ್ಲ."[೩]

ಲಲಿತ ಕಲೆಗಳಲ್ಲಿ ಒಂದಾದ ವರ್ಣಚಿತ್ರಕಲೆಗೆ ಹತ್ತಿರವಾದ ಛಾಯಾಚಿತ್ರಣಕಲೆಯನ್ನು ವಾಸ್ತವಚಿತ್ರಣವನ್ನು ಬಿಟ್ಟು ಸಾಂಕೇತಿಕವಾದ ಅಭಿವ್ಯಂಜಕವಾದ ವಿಶಿಷ್ಟ ಶೈಲಿಯನ್ನು ಹಾಗೂ ಅದರ ಅಗತ್ಯ ಗುಣಧರ್ಮಗಳನ್ನು ಚಿತ್ರಕಲೆಯ ಜೊತೆ ಜೊತೆಗೆ ಛಾಯಾಚಿತ್ರಣ ಕಲೆಯಲ್ಲೂ ಆಸಕ್ತಿ ವಹಿಸಿ ಅಭ್ಯಸಿಸಿದ ಶಂಕರ ಪಾಟೀಲರು ತಮ್ಮ ಕ್ಯಾಮರಾ ಮೂಲಕ ನೆರಳು-ಬೆಳಕಿಗೆ ಆದ್ಯತೆ ನೀಡಿ ಅವುಗಳ ಆಕರ್ಷಣೀಯ ಸಮತೋಲ ಸಮ್ಮಿಶ್ರಣವನ್ನು ಪ್ರತಿಬಿಂಬಿಸುವ ತಂತ್ರಕೌಶಲಗಳಿಂದ ಮತ್ತು ಕಪ್ಪು - ಬಿಳುಪುಗಳ ಛಾಯೆಗಳ ಮೂಲಕ ಒಟ್ಟು ಚಿತ್ರ ಸೃಷ್ಟಿಯ ಸಂಯೋಜನೆಗೆ ಒತ್ತು ನೀಡಿ ಹೊಸತನಗಳ ಮೂಲಕ ಅನೇಕ ಸುಂದರ ಛಾಯಾಚಿತ್ರಣಗಳನ್ನು ಸೆರೆ ಹಿಡಿದಿರುವುದನ್ನು ನಾವು ಕಾಣಬಹುದು.

ಈ ದಿಸೆಯಲ್ಲಿ ಶಂಕರ ಪಾಟೀಲರ ಛಾಯಾಚಿತ್ರಣಗಳು ಸಂಯೋಜನೆಗನುಗುಣವಾಗಿ ಮತ್ತು ಕೆಲವು ಸಾಂಕೇತಿಕವಾಗಿ ರಚಿತವಾಗಿವೆ. ಹೀಗೆ ಪಾಟೀಲರ ಛಾಯಾಚಿತ್ರಣಗಳನ್ನು ಅಭಿವ್ಯಕ್ತಿಯ ಮಾಧ್ಯಮ, ಕೌಶಲ, ಶೈಲಿ, ನಿಪುಣತೆಗಳನ್ನು ಹಂತಹಂತವಾಗಿ ಈ ಕೆಳಗಿನಂತೆ ಅವರು ಚಿತ್ರಿಸಿದ ಹಲವು ಛಾಯಾಚಿತ್ರಣಗಳನ್ನು ಅಧ್ಯಯನ ವ್ಯಾಪ್ತಿಗೆ ಪೂರಕವಾಗಿ ಆಯ್ದುಕೊಂಡು ಈ ಕೆಳಗಿನಂತೆ ವಿಭಾಗವಾರು ವರ್ಗಿಕರಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ.

---

೩. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಭಾವಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೬.

ವರ್ಗೀಕರಣ :

೧. ಭೂದೃಶ್ಯ ಮತ್ತು ಭೂದೃಶ್ಯ ನಿರೂಪಣೆ ಛಾಯಾಚಿತ್ರಣಗಳು ಚಿತ್ರಗಳು

೨. ಭಾವಚಿತ್ರ

೨.೧. ಒಳಾಂಗಣ ಭಾವಚಿತ್ರಗಳು

೨.೨. ಹೊರಾಂಗಣ ಭಾವಚಿತ್ರಗಳು

೩. ಮಕ್ಕಳ ಛಾಯಾಚಿತ್ರಗಳು.

೪. ಮೃಗ ಮತ್ತು ಪಕ್ಷಿಗಳ ಛಾಯಾಚಿತ್ರಣಗಳು

೫. ಗಿರಿ ದೃಶ್ಯಗಳ ಛಾಯಾಚಿತ್ರಣಗಳು

೬. ಮಂಜಿನ ಛಾಯಾಚಿತ್ರಣ

೭. ಮೋಡಗಳ ಛಾಯಾಚಿತ್ರಣ

೮. ಪ್ರೇಕ್ಷಣೀಯ ಐತಿಹಾಸಿಕ ಸ್ಥಗಳ ಛಾಯಾಚಿತ್ರಣಗಳು

೯. ಅತಿ ಹತ್ತಿರದ ಛಾಯಾಚಿತ್ರಣಗಳು (ಕ್ಲೋಸ್‌ಪ್ ಫೋಟೋಗ್ರಾಫಿ)

೧೦ ಎಸೆತಗಳ (ಆಕ್ಷನ್) ಛಾಯಾಚಿತ್ರಣ

೧೧. ಸಿಲುಏಟ್ ಛಾಯಾಚಿತ್ರಣಗಳು

ಈ ರೀತಿಯಾಗಿ ತಿಳಿಸಿದ ವರ್ಗೀಕರಣದ ಅನ್ವಯ ಪಾಟೀಲರು ಚಿತ್ರಿಸಿದ ಹಲವು ಬಗೆಯ ವಿಭಿನ್ನ ಛಾಯಾಚಿತ್ರಣಗಳನ್ನು ಅಧ್ಯಯನ ಮಾಡುವುದರ ಜೊತೆಗೆ ಛಾಯಾಚಿತ್ರಣ ಕಲೆಯಲ್ಲಿ ಬಳಸಿಕೊಂಡ ತಾಂತ್ರಿಕತೆ, ಸೃಜನಶೀಲತೆ ಪ್ರವಾಸ ದಿನಗಳಲ್ಲಿ ವಿದೇಶಗಳಲ್ಲಿ ಚಿತ್ರೀಕರಿಸಿದ ಚಿತ್ರಣಗಳನ್ನು ಅಧ್ಯಯನಕ್ಕೊಳಪಡಿಸಿ ವಿಷಯ, ಉದ್ದೇಶ, ಪ್ರಾಕೃತಿಕ, ಸಾಮಾಜಿಕ, ಚಾರಿತ್ರಿಕ ಸನ್ನಿವೇಶ ಅಥವಾ ಸ್ಥಳಗಳಿಗೆ ತಮ್ಮ ಕ್ಯಾಮರಾ ಮೂಲಕ ಒಂದು ಮೂರ್ತರೂಪ ನೀಡಿ, ತನ್ಮೂಲಕ ದೃಶ್ಯ ಪ್ರಕ್ರಿಯೆ, ಅಭಿವ್ಯಕ್ತಿಸುವ ಬಗೆ, ಛಾಯಾಚಿತ್ರಣ ಬಳಕೆಯ ವಿಧಾನಗಳನ್ನು ಈ ಅಧ್ಯಾಯದಲ್ಲಿ ಸಂಶೋಧನಾತ್ಮಕವಾಗಿ ಸವಿಸ್ತಾರವಾಗಿ ಅಧ್ಯಯನ ಮಾಡಲಾಗಿದೆ.

೧. ಭೂದೃಶ್ಯ ಛಾಯಾಚಿತ್ರಣಗಳು :

ಫೋಟೋಗ್ರಾಫಿಯು ೧೯ನೇ ಶತಮಾನ ಉತ್ತರಾರ್ಧದಲ್ಲಿ ಹುಟ್ಟಿ ನಿಧಾನವಾಗಿ ಹಂತಹಂತವಾಗಿ ಬೆಳೆದು ೨೦ನೇ ಶತಮಾನದಲ್ಲಿ ಪ್ರಬುದ್ಧತೆಗೆ ಬಂದಿರುವ ವಿಜ್ಞಾನ ಮತ್ತು ಕಲೆ. ಫೋಟೋಗ್ರಾಫಿಯನ್ನು ಕುರಿತ ಅನ್ವೇಷಣೆ, ಸಂಶೋಧನೆ ಮತ್ತು ಸಂಶೋಧಕರ ವಿವರಗಳು ಆಸಕ್ತಿ ಕೆರಳಿಸುವ ಇತಿಹಾಸವಾಗಿದೆ. ಈ ಇತಿಹಾಸ ಮುಗಿಯದೆ ಮುಂದುವರೆಯುತ್ತದೆಯೂ ಕೂಡ. "ಇಂದು ಕಲೆಯ ಮಾಧ್ಯಮಗಳಲ್ಲಿ ಫೋಟೋಗ್ರಾಪಿಯೂ ಒಂದು ಪ್ರಬುದ್ಧ ಮಾಧ್ಯಮ ಎಂದು ಬಹುಮಂದಿ ತಜ್ಞರು ಒಪ್ಪಿರುವರು. ಮಾನವನ ಕಲಾಭಿರುಚಿ, ಕಲಾಭಿವ್ಯಕ್ತಿ, ಅಭಿಲಾಷೆ, ತಾಂತ್ರಿಕ ಕೌಶಲ್ಯದ ಚಾತುರ್ಯಗಳು ಸಮ್ಮಿಳಿತವಾಗಿ ಫೋಟೋಗ್ರಾಪಿಯು ಒಂದು ಯಾಂತ್ರಿಕ ಅವಿಷ್ಕಾರದ ಪರಿಣಾಮ ಎಂಬ ಅಭಿಪ್ರಾಯ, ಈಗ ದುರ್ಬಲವಾಗಿ ಫೋಟೋಗ್ರಾಪಿಯು ಒಂದು ಕಲೆಯಷ್ಟೇ ಅಲ್ಲ, ಲಲಿತ ಕಲೆಗಳಲ್ಲಿ ಒಂದಾದ ವರ್ಣ ಚಿತ್ರಕಲೆಗೆ ತೀರ ಹತ್ತಿರವಾದುದು ಎಂದು ಒಪ್ಪಿಕೊಳ್ಳುವಂತೆ ತನ್ನನ್ನು ಗುರುತಿಸಿಕೊಂಡಿದೆ."[೪]

ವಿಜ್ಞಾನ ಒಂದು ಅಪೂರ್ವ ಉಪಯುಕ್ತ ಕೊಡುಗೆಯಾದ ಫೋಟೋಗ್ರಾಪಿಯು ಚಿತ್ರಕಲಾವಿದನ ನವನವೀನ ಭಾವಾಭಿವ್ಯಕ್ತಿಗೆ ಮಾಧ್ಯಮವಾಗಿ ಆನಂದಾನುಭೂತಿಗೆ ಸಾಧನವಾಗಿ ಮತ್ತು ಮಾರ್ಗವೂ ಆಗಿದೆ.

ಲ್ಯಾಂಡ ಸ್ಕೇಪ್ (ಭೂದೃಶ್ಯ) ಫೋಟೋಗ್ರಾಪಿಯು ಒಂದು ಸಂತೃಪ್ತಿದಾಯಕ ಜನಪ್ರಿಯ ಹವ್ಯಾಸ. ಶಿಲಾಯುಗದ ಮಾನವರೂ ಸಹ ಗುಹೆಗಳ ಶಿಲಾಭಿತ್ತಿಯ ಪಾತಳಿಯ ಮೇಲೆ ಮೊನಚುಗಲ್ಲುಗಳಿಂದ ಒಂದು ನದಿ, ನಾಲ್ಕು ಮರಗಳು, ಒಂದೆರಡು ಪ್ರಾಣಿಗಳ ಗುಂಪು ಸೇರಿದ ಲ್ಯಾಂಡಸ್ಕೇಪ ಚಿತ್ರವನ್ನು ಕೊರೆದಿರುವ ಉದಾಹರಣೆಗಳಿವೆ. ಅಂದರೆ ಭೂದೃಶ್ಯ ಚಿತ್ರಣವು ಅಷ್ಟು ಪುರಾತನವಾದುದೆಂದು ತಿಳಿದು ಬರುತ್ತದೆ.

ಇಲ್ಲಿ ಲ್ಯಾಂಡಸ್ಕೇಪ ಎಂದರೆ ಅದು ಕೇವಲ ಗಿಡ, ಮರ, ಬಳ್ಳಿ, ಹೊಲಗದ್ದೆ, ಹಳ್ಳಕೊಳ್ಳ, ಗುಡ್ಡಬೆಟ್ಟಗಳನ್ನೊಳಗೊಂಡ ಭೂ ದೃಶ್ಯ ಎಂದು ಭಾವಿಸದೆ ನಮ್ಮ ಕಣ್ಣಿಗೆ ಗೋಚರಿಸುವ ಒಂದು ಒಳ ಪ್ರದೇಶ ಸಹಜ ಸ್ವರೂಪ, ಓರಣವಾಗಿ ಭಾವ ಪೂರಿತವಾಗಿ, ಹೊಂದಿಕೊಂಡು ಕಾಣುವ

೪. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಭಾವಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೧೨.

ನೈಸರ್ಗಿಕ ಅಥವಾ ಗ್ರಾಮೀಣ ದೃಶ್ಯಗಳೂ ಆಗಿರಬಹುದು. "ಲ್ಯಾಂಡ ಸ್ಕೇಪ್ ಫೋಟೋಗ್ರಾಫಿಯಲ್ಲಿ ಛಾಯಾಚಿತ್ರಕಾರನು ಕಣ್ಣ ಮುಂದೆ ಮನಮುಟ್ಟುವಂತೆ ಕಾಣಿಸುವ ದೃಶ್ಯವನ್ನು ಅವಲೋಕಿಸಿ ಅಲ್ಲಿ ಸೌಂದರ್ಯಕ್ಕೆ ಮೂಲಾಧಾರವಾದ ಭಾಗವನ್ನು ಮಾತ್ರ ಪ್ರತ್ಯೇಕಿಸಿ ಚಿತ್ರಿಕರಿಸಬೇಕಾದುದು ಸರಿಯಾದ ದಾರಿ, ಒಂದು ಚಿತ್ರದ ಒಳ ಸ್ವರೂಪ ಮತ್ತು ಲಕ್ಷಣಗಳಲ್ಲಿ ಅರ್ಥಗರ್ಭಿತವಾಗಿರುವ ಸೌಂದರ್ಯವನ್ನು ಗ್ರಹಿಸಿ ಅದನ್ನು ಅಭಿವ್ಯಕ್ತಿಗೊಳಿಸಲು ಅಗತ್ಯವಾದುದನ್ನು ಮಾತ್ರ ಅಳವಡಿಸಿಕೊಂಡು, ತಾಂತ್ರಿಕ ಕುಶಲತೆಯಿಂದ ಚಿತ್ರಿಕರಿಸುವ ಜಾಣ್ಮೆ ತೋರಬೇಕು. ಲ್ಯಾಂಡಸ್ಕೇಪ್ ಫೋಟೋಗ್ರಾಫರನು ತನ್ನ ಕೃತಿಯು ಕಲಾಕೃತಿ ಆಗಬೇಕೆಂದು ಇಷ್ಟಪಟ್ಟಾಗ ಒಂದು ದೃಶ್ಯದ ಸ್ನ್ಯಾಪ ಶಾಟ್ಗೂ ಅದರ ಪಿಕ್ಚರಗೂ ಇರುವ ಅಂತರವನ್ನು ತಿಳಿದಿರಬೇಕು. ಲ್ಯಾಂಡಸ್ಕೇಪ್ ಫೋಟೋಗ್ರಾಫಿಯೂ ಛಾಯಾಚಿತ್ರಕಾರನ ಸ್ವಸಂತೋಷ ಮತ್ತು ಆತ್ಮ ತೃಪ್ತಿಗಷ್ಟೇ ಮೀಸಲಾಗಿದರೆ ರಸಿಕರ ಆನಂದಾನುಭೂತಿಗೂ ಸಾಧನವಾದರೆ ಸಾರ್ಥಕವಾಗುತ್ತದೆ."[೫]

ಛಾಯಾಚಿತ್ರಣಕಲೆಯಲ್ಲಿ ಸಂಯೋಜನೆಯೂ ಮಹತ್ವದ್ದಾಗಿದ್ದು, ಸಂಯೋಜನೆಯನ್ನು ಛಾಯಾಚಿತ್ರಣದ ಜೀವಾಳವೆಂದು ಹೇಳಬಹುದು. ಸಾಹಿತ್ಯದಲ್ಲಿ ವಿಮರ್ಶಾತ್ಮಕ ಅರ್ಥಪೂರ್ಣ ವಾಕ್ಯ ರಚನಾ ಶೈಲಿ ಹೇಗೆ ಒಳ್ಳೆಯ ಸಾಹಿತ್ಯವೆನಿಸಿಕೊಳ್ಳುವುದೋ ಹಾಗೆಯೇ ಸುಸಂಬದ್ಧವಾದ ಸಂಯೋಜನೆ. "ಕಪ್ಪು ಬಿಳುಪುಗಳೂ ಸೇರಿದಂತೆ ವರ್ಣಗಳ ಛಾಯೆಯ ಅಂತರ, ದೃಶ್ಯಾರೇಖೆಗಳ ಪರಿಣಾಮಕಾರಿ ನಿಯಂತ್ರಣ, ಔಚಿತ್ಯಪೂರ್ಣ ಚೌಕಟ್ಟು"[೬] ಇವುಗಳು ಛಾಯಾಚಿತ್ರಗಳ ಮೂಲ ಮೆಟ್ಟಿಲುಗಳಾಗಿ ಮತ್ತು ಕಲಾವಿದನು ತನ್ನ ಛಾಯಾಚಿತ್ರಕಲೆಯಲ್ಲಿ ಅಳವಡಿಸಿಕೊಳ್ಳುವ ಪ್ರಮುಖ ತಂತ್ರ ಕೌಶಲ್ಯವಾಗಿದೆ.

ಆಕರ್ಷಕ ಭಾವಪೂರ್ಣ ಲ್ಯಾಂಡಸ್ಕೇಪ್ ಚಿತ್ರ ನಿರ್ಮಾಣಕ್ಕೆ ದಾರಿ ಯಾವುದು? ಅಭಿವ್ಯಕ್ತಿ ಶೈಲಿ ಸಾಮರ್ಥ್ಯಗಳು ಹಲವು ಮಟ್ಟದವು. ಅವುಗಳ ವರ್ಣಾನುಸರಣೆಗಳೂ ಕಲಾವಿದನ ವೈಯಕ್ತಿಕ ಆಯ್ಕೆಯಾದರೂ ಕಲಾವಿದರೆಲ್ಲರೂ ಒಪ್ಪಿಕೊಳ್ಳಬಹುದಾದ ಕೆಲವು ತತ್ವಸೂತ್ರಗಳಿವೆ. ಚಿತ್ರ ರಚನಾ ಕಲೆಯ ಮೂಲಭೂತ ಅಂಶಗಳಾದ ರೂಪ, ಪ್ರಮಾಣ, ಭಾವ, ಲಾವಣ್ಯ ಯೋಜನೆ, ಸಾದೃಶ್ಯ ಮತ್ತು ಕುಶಲತೆಗಳ ತಿಳುವಳಿಕೆಯು ಇಲ್ಲಿ ಅನಿವಾರ್ಯವಾಗಿದೆ. ಭಾವಪೂರಿತ ಲ್ಯಾಂಡ್ ಸ್ಕೇಪ್

---

೫. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಭಾವಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೧೩.
೬. ಅದೇ, ಪು.೧೩.

ಛಾಯಾಚಿತ್ರಣದಲ್ಲಿ ಕಣ್ಣೆದುರಿನ ದೃಶ್ಯದ ಸೌಂದರ್ಯವನ್ನು ಗ್ರಹಿಸುವ, ಅರ್ಥೈಸಿಕೊಂಡು, ಆನಂದಿಸುವ, ಆಸಕ್ತಿಯನ್ನು ಕೆರಳಿಸುವ, ಇಂದ್ರಿಯಗಳನ್ನು ಉದ್ದೀಪಿಸುವ ಚಿತ್ರೀಕರಣ ಮಹತ್ವದ ಕಲಾಶೈಲಿಯಾಗಿದೆ. ಈ ಮಾರ್ಗದ ಅನುಯಾಯಿಗಳು ಪ್ರಕೃತಿಯ ವಿವಿಧ ಮುಖದ ಅಂದ ಚೆಂದಗಳನ್ನು ಪರಿಶೀಲಿಸುವದರಲ್ಲಿ ನೆರಳು ಬೆಳಕುಗಳ ವಿನ್ಯಾಸಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದಾರೆ. "ವಸ್ತುಗಳ ಮೇಲ್ಮೈಯ ರೂಪರಚನೆ (ಟೆಕ್ಚರ್)ಗಳನ್ನು ಬೆಳಕಿನ ಕೋನ ಮೋಡಗಳ ಮೇಲಂಚಿನಿಂದಲೊ ತೂರಿಬರುವ ಕಿರಣ, ಕೆರೆ–ಕೊಳಗಳ ನೀರಿನ ಮೇಲೆ ಪ್ರತಿಫಲಿಸಿ ಮಿರಿ–ಮಿರಿ ಮಿರುಗುವ ಮಿಣುಕುವ ಕಣ, ನೆಲೆ ಮಲೆಗಳ ಪಾತಳಿಯ ಉಬ್ಬು ತಗ್ಗುಗಳು ಮತ್ತು ಪಾತಳಿಯ ಮೇಲೆ ಬೀಳುವ ಬೆಳಗಿನ ಮತ್ತು ಸಂಜೆ ಸೂರ್ಯನ ಹೊಂಗಿರಣಗಳ ಹೊಳಪು ಮೊದಲಾದ ಪ್ರಕೃತಿಯ ನೂರಾರು ಸೊಬಗು ಲಾವಣ್ಯಗಳನ್ನು"[೭] ಛಾಯಾಚಿತ್ರ ಕಲಾವಿದರು ತಮ್ಮ ಕಲಾಕೃತಿಗಳಲ್ಲಿ ರಚಿಸಿರುವುದನ್ನು ಕಾಣಬಹುದು.

ಲ್ಯಾಂಡಸ್ಕೇಪ್ ಛಾಯಾಚಿತ್ರಗಳಲ್ಲಿ ಜೀವಿಗಳನ್ನು ಅಳವಡಿಸುವ ಅವಶ್ಯಕತೆ ಅಷ್ಟೇನೂ ಇಲ್ಲ. ಭಾವಪೂರಿತವಾದ ಒಂದು ಭೂದೃಶ್ಯವು ತನ್ನ ಆಂತರಿಕ ಸತ್ವ ಸೌಂದರ್ಯಗಳಿಂದಲೇ ಪ್ರೇಕ್ಷಕರ ಕಣ್ಮನಗಳನ್ನು ಸೆರೆ ಹಿಡಿದು ನಿಲ್ಲಿಸುವ ಸಾಮರ್ಥ್ಯವನ್ನು ಹೊಂದಿದೆ. ಆದರೂ ಅನೇಕ ಭಾರಿ ಲ್ಯಾಂಡಸ್ಕೇಪ್ "ಛಾಯಾಚಿತ್ರಣದಲ್ಲಿ ಮೌನ ಏಕಾಂತತೆಯನ್ನು ನಿವಾರಿಸಲೂ ಮತ್ತು ಚಿತ್ರದ ಆಯಾಮದಲ್ಲಿ ಪ್ರಮಾಣವನ್ನು ಸೂಚಿಸಲೂ ಮೃಗಾದಿ ಜೀವಿಗಳನ್ನು ಸಂಯೋಜನೆಗೆ ತಕ್ಕಂತೆ ಒಟ್ಟು ಚಿತ್ರಣಕ್ಕೆ ಕುಂದುಬಾರದಂತಹ ಸ್ಥಳಗಳಲ್ಲಿ ಅಳವಡಿಸುವುದು ಅವಶ್ಯಕ ಆಗಬಹುದು."[೮]

ಭೂದೃಶ್ಯ ಛಾಯಾಚಿತ್ರಣದ ಯಶಸ್ಸು ಪ್ರಕೃತಿಯ ಮೇಲೆ ಬೀಳುವ ಬೆಳಕಿನ ಪ್ರಖರತೆ ಮತ್ತು ಕೋನವನ್ನು ಅವಲಂಬಿಸಿರುತ್ತವೆ. ಹೀಗೆ ಭೂದೃಶ್ಯ ಚಿತ್ರಣಕ್ಕೆ ಪರಿಣಾಮಕಾರಿಯಾದ ಬೆಳಕು, ಅಕರ್ಷಣೀಯವಾಗಿರುತ್ತದೆ.

ಶಂಕರ ಪಾಟೀಲರು ಭೂದೃಶ್ಯ ಛಾಯಾಚಿತ್ರಣ ಕಲೆಯನ್ನು ಬಲ್ಲವರಿಂದ ತಿಳಿದುಕೊಂಡು, ತಂತ್ರಗಳನ್ನು ಅನುಸರಿಸುವ ಮಾರ್ಗಗಳನ್ನು ಪರಿಣಿತರ ಚಿತ್ರಗಳನ್ನು ನೋಡಿ, ಪುಸ್ತಕಗಳನ್ನು ಅಭ್ಯಸಿಸಿ ವಿಷಯಗಳ ತಂತ್ರಗಳ ಪರಿಜ್ಞಾನವನ್ನು ಪಡೆದುಕೊಳ್ಳುವುದರ ಜೊತೆಗೆ ತಮ್ಮ ವೈಯಕ್ತಿಕ

---

೭. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಭಾವಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೧೪.
೮. ಅದೇ, ಪು. ೧೮.



ಚಿತ್ರ ೧



ಚಿತ್ರ ೨



ಚಿತ್ರ ૨

ಪ್ರಯತ್ನ, ಪ್ರಯೋಗಾನುಭವಗಳಿಂದ ಶೈಕ್ಷಣಿಕ ಸಂದರ್ಭ, ಪ್ರವಾಸದ ದಿನಗಳಲ್ಲಿ ಹಾಗೂ ಪ್ರೋಪೆಶನಲ್ ಕಲಾವಿದರಾಗಿ ಸಾಕಷ್ಟು ಭೂದೃಶ್ಯ ಛಾಯಾಚಿತ್ರಗಳನ್ನು ಚಿತ್ರೀಕರಿಸಿದ್ದಾರೆ. ಹೀಗೆ ಪಾಟೀಲರ ಕೆಲವು ಭೂದೃಶ್ಯ ಕಲಾಕೃತಿಗಳನ್ನು ಆಯ್ದು ಭೂದೃಶ್ಯ (ಲ್ಯಾಂಡಸ್ಕೇಪ್) ಛಾಯಾಚಿತ್ರಣ ಮತ್ತು ಭೂದೃಶ್ಯ (ಲ್ಯಾಂಡಸ್ಕೇಪ್) ನಿರೂಪಣೆಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡು ರಚಿಸಿದ ಛಾಯಾಚಿತ್ರಗಳನ್ನು ಈ ಕೆಳಗೆ ವಿಷಯಾನುಸಾರವಾಗಿ ವಿವರಿಸಲಾಗಿದೆ.

ಭೂದೃಶ್ಯ ಛಾಯಾಚಿತ್ರಣಗಳು ಮತ್ತು ಭೂದೃಶ್ಯ ನಿರೂಪಣೆಯ ಚಿತ್ರಗಳು :

ಚಿತ್ರ ೧ : ಪಾಟೀಲರ ಈ ಭೂದೃಶ್ಯ ಸಂಯೋಜನೆಯ ಛಾಯಾಚಿತ್ರಣದಲ್ಲಿ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಅರ್ಥವಾಗುವ ಹಾಗೆ ಸುಲಭವಾಗಿ ಇತರರಿಗೆ ತಿಳಿಸಲು ಗ್ರಾಮೀಣ ಪ್ರದೇಶದ ಪರಿಸರವನ್ನು ಆಯ್ದುಕೊಂಡಿದ್ದಾರೆ. ಈ ಛಾಯಾಚಿತ್ರಣದಲ್ಲಿ ಸುಸಂಬದ್ಧವಾದ ಸಂಯೋಜನೆ, ಕಪ್ಪು ಬಿಳುಪು ವರ್ಣಗಳ ಛಾಯಾಂತರ ವಿತರಣೆ ಸಮತೋಲನ ಛಾಯಾಂತರಗಳ ಯೋಜನೆ ಹಾಗೂ ನೀರಿನಲ್ಲಿ ಪ್ರತಿಫಲಿಸುವ ಮಿರು-ಮಿರುಗು ಮಿಣುಕು ಕಣ ಇವುಗಳೆಲ್ಲವನ್ನೂ ಔಚಿತ್ಯ ಪೂರ್ಣವಾಗಿ ಒಂದು ಚೌಕಟ್ಟಿನಲ್ಲಿ ತಂತ್ರ ಕೌಶಲ್ಯಗಳನ್ನು ಅಚ್ಚುಕಟ್ಟಾಗಿ ತಮ್ಮ ಛಾಯಾಚಿತ್ರಣ ಕಲೆಯಲ್ಲಿ ಬಳಸಿಕೊಂಡಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ಚಿತ್ರ ೨ : ಈ ಚಿತ್ರಣವು ಪುರಾತನ ಕಾಲದ ಐತಿಹಾಸಿಕ ಸ್ಥಳದ ಛಾಯಾಚಿತ್ರಣವಾಗಿದೆ. ಈ ಚಿತ್ರಣದಲ್ಲಿ ಬಾಹ್ಯ ಪರಿಸರಕ್ಕೆ ಹೆಚ್ಚು ಅಧ್ಯತೆ ಕೊಡದೆ ಹಿನ್ನೆಲೆಯಲ್ಲಿ ಯಾವುದೇ ಕೋನಗಳಲ್ಲಿ ನಿಸರ್ಗವನ್ನು ಬಳಸಿಕೊಳ್ಳದೆ ಕೋಟೆಯ ಒಳಾಂಗಣ ಚಿತ್ರಣವನ್ನು ತಮ್ಮ ಛಾಯಾಚಿತ್ರಣದಲ್ಲಿ ಪ್ರಮುಖ ವಸ್ತುವನ್ನಾಗಿ ಬಳಸಿಕೊಂಡಿದ್ದಾರೆ. ಹೀಗೆ ತಮ್ಮ ಕಣ್ಣುಗಳ ಮುಂದೆ ಕಂಡ ದೃಶ್ಯದಲ್ಲಿ ಮನಮುಟ್ಟುವಂತೆ ಸುಂದರ ಸಂಯೋಜನೆಯನ್ನು ಕ್ಯಾಮಾರ ಕಣ್ಣಲ್ಲೆ (ಲೆನ್ಸ್) ಮತ್ತು ಕೋನಗಳಿಂದ ಪರಿಣಾಮಕಾರಿ ನೆರಳು ಬೆಳಕಿನ ಆಯ್ಕೆ ಮಾಡಿಕೊಂಡು ವಿಭಿನ್ನವಾದ ಕೌಶಲ್ಯವನ್ನು ಬಳಸಿ ಅತೀ ಸಮೀಪದಿಂದ ಚಿತ್ರಿಸಿದ ಭೂದೃಶ್ಯ ಛಾಯಾಚಿತ್ರಣ ಇದಾಗಿದೆ.

ಚಿತ್ರ ೩ : ವಿಶಾಲವಾದ ಸಮುದ್ರ ತೀರದಲ್ಲಿ ಸಾಲು ಸಾಲಾಗಿ ನಿಂತ ದೋಣಿಗಳ ಸಾಲು ದೂರದಲ್ಲಿ ಕಾಣುವ ದ್ವೀಪ ಈ ಛಾಯಾಚಿತ್ರಣದ ಪ್ರಮುಖ ವಿಷಯವಾಗಿದೆ. ಈ ಭೂದೃಶ್ಯ ಚಿತ್ರಣದಲ್ಲಿ ಭೂದೃಶ್ಯದ ಜೊತೆಗೆ ಮೀನುಗಾರರು ಬಳಸುವ ದೋಣಿ, ಬಲೆ ಇವುಗಳಿಗೂ ಸಹ ಹೆಚ್ಚು ಪ್ರಾಧಾನ್ಯತೆ ನೀಡಿ ಹೆಚ್ಚು ಪ್ರಕಾಶಮಾನವಾದ ಬೆಳಕಿನಲ್ಲಿ ಈ ಚಿತ್ರವನ್ನು ಸೆರೆ ಹಿಡಿದಿದ್ದಾರೆ.



ಚಿತ್ರ ೪



ಚಿತ್ರ ೫

ಚಿತ್ರವನ್ನು ಗಮನಿಸಿದಾಗ ಛಾಯಾಚಿತ್ರಣದ ಅಭಿವ್ಯಾಪ್ತಿಯಲ್ಲಿ ಕಾಣುವ ಸ್ಪಷ್ಟವಾದ ರೇಖೆಗಳು ಚಿತ್ರಕ್ಕೆ ಚೈತನ್ಯ ಮತ್ತು ಚಲನೆಯನ್ನು ನೀಡಿವೆ. ಪ್ರಕಾಶಮಾನವಾದ ಬೆಳಕು ಪ್ರತಿಬಿಂಬಗಳ ಛಾಯೆ, ಕ್ಷಿತಿಜ ರೇಖೆ, ಸಮಾಂತರ ರೇಖೆಗಳ ಧೃಡತೆ ಈ ಭೂದೃಶ್ಯದ ಪ್ರಶಾಂತತೆ, ನಿಶ್ಚಲತೆ ಮತ್ತು ಸಮತೋಲನಗಳನ್ನು ಸೂಚಿಸುತ್ತದೆ.

ಚಿತ್ರ ೪ : ಇಬ್ಬರು ಮೀನುಗಾರರು ದೋಣಿಯನ್ನು ದಡದತ್ತ ಸಾಗಿಸುತ್ತಿದ್ದ ರಭಸವಾದ ಅಲೆಗಳ ಸಮುದ್ರತೀರದ ಭೂದೃಶ್ಯ ನಿರೂಪಣಾ ಚಿತ್ರಣ ಇದಾಗಿದೆ. ಛಾಯಾಚಿತ್ರಣಕ್ಕೆ ಆಯ್ದುಕೊಂಡ ಸ್ಥಳಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡದಿದ್ದರೂ ಮನಸೆಳೆಯುವ ಬಟ್ಟಲುಗಳಲ್ಲಿ ಓರಣ, ಕಣ್ಣೋಟಗಳಿಗೆ ಸೆರೆಯಾಗುವ ವ್ಯವಸ್ಥಿತವಾದ ರೇಖಾ ವಿನ್ಯಾಸ, ದೃಶ್ಯದ ಮೇಲೆ ಪಸರಿಸುವ ಬೆಳಕಿನ ಕಿರಣಗಳ ಯುಕ್ತಾಯುಕ್ತತೆ, ಭಾವ ಮತ್ತು ಸಮತೋಲನಗಳ ಸಾಮರಸ್ಯಗಳಿಂದ ನಿಸರ್ಗ ದೃಶ್ಯವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅಭಿವ್ಯಕ್ತಿಗೆ ಅನುಗುಣವಾಗಿ ಈ ಛಾಯಾಚಿತ್ರಣರಚಿತವಾಗಿದೆ. ಈ ಭೂದೃಶ್ಯದ ಛಾಯಾಚಿತ್ರಣ ರಚನೆಯಲ್ಲಿ ನವೀನ ರೀತಿಯಲ್ಲಿ ವಿವಿಧ ಆಯಾಮಗಳಲ್ಲಿ ದೃಶ್ಯಗಳನ್ನು ಕಪ್ಪು ಬಿಳುಪಿನ ವರ್ಣ ವಿನ್ಯಾಸದಲ್ಲಿ ರಂಜನೀಯವಾಗಿ ಸೆರೆಹಿಡಿದಿದ್ದಾರೆ.

ಚಿತ್ರ ೫ : ಸಮುದ್ರದ ದಡದಲ್ಲಿ ಹತ್ತಾರು ಮಕ್ಕಳು ಆಸಕ್ತಿಯಿಂದ ಆಶಾದಾಯಕವಾಗಿ ಚಲಿಸುತ್ತಿರುವ ದೋಣಿಗಳನ್ನು ನೋಡಿ ಆನಂದಿಸುತ್ತಿರುವಂತೆ ಕಣ್ಣಿಗೆ ಸಮಾಂತರವಾಗಿ ಸಮುದ್ರದ ದೃಶ್ಯ, ಹಿನ್ನೆಲೆಯಲ್ಲಿ ಗಿಡಮರ, ಕಟ್ಟಡಗಳು ದೂರದ ಭಾವ ಗೋಚರಿಸುವಂತೆ ಆ ಭಾಗದ ಛಾಯಾಂತರ ಮತ್ತು ವರ್ಣ ಪ್ರಸರಣಗಳ ದೃಷ್ಟಿಯಿಂದ ಆಕಾಶದ ಕಡುಪನ್ನು ಮುನ್ನಲೆಯಲ್ಲಿರುವ ಮಕ್ಕಳು ಮತ್ತು ಅವರ ಭಾವ ಭಂಗಿಯಲ್ಲಿನ ವ್ಯತ್ಯಾಸ, ಸಮುದ್ರದ ತೇಳುವಾದ ತೆರೆಗಳ ಚಲನೆ ಈ ಭೂದೃಶ್ಯ ನಿರೂಪಣಾ ಛಾಯಾಚಿತ್ರಣದ ಪ್ರಮುಖ ಅಂಶಗಳಾಗಿವೆ.

೨. ಭಾವಚಿತ್ರ ಛಾಯಾಚಿತ್ರಣಗಳು (ಒಳಾಂಗಣ)


ಛಾಯಾಚಿತ್ರಣ ಕಲೆಯ ಕ್ಷೇತ್ರವು ಬಹಳ ವಿಶಾಲವಾದುದು. ಅದರಲ್ಲಿ ಭಾವಚಿತ್ರ ಛಾಯಾಚಿತ್ರಣ (ಪೋಟ್ರೇಟ್ ಪೋಟೋಗ್ರಾಫಿ)ವು ಬಹಳ ಜನಪ್ರಿಯವಾದುದು. ಸಾಮಾನ್ಯವಾಗಿ ಪ್ರತಿಯೊಬ್ಬ ಹವ್ಯಾಸಿ ಛಾಯಾಚಿತ್ರಕಾರನು ಕ್ಯಾಮರಾ ಹಿಡಿದ ಮೊದಲ ದಿನಗಳಿಂದಲೂ ತನ್ನ ಹೆಂಡತಿ, ಮಕ್ಕಳು, ಬಂಧು ಮಿತ್ರರ, ಭಾವಚಿತ್ರಗಳನ್ನು ಸೆರೆ ಹಿಡಿದಿರುತ್ತಾರೆ. ಆದರೆ ಈ ರಚನೆಯಲ್ಲಿ ಪಾಂಡಿತ್ಯ ಸಂಪಾದಿಸುವುದು ಕಷ್ಟಕರ ಎಂದು ಹೇಳಬಹುದು.

ಮನುಷ್ಯನ ಮುಖವು ಬಹು ಪ್ರಕಾರದ ಭಾವನೆಗಳನ್ನು ಪ್ರದರ್ಶಿಸುತ್ತದೆ. ಸಿಟ್ಟು, ಸೆಡವು, ಸಂತೋಷ, ದುಃಖ, ಆನಂದ, ನಿರೀಕ್ಷೆ ಇತ್ಯಾದಿ ಮೊದಲಾದ ಭಾವಗಳು ಒಡಮೂಡಿರುತ್ತವೆ. ಇಂತಹ ಭಾವ ಪ್ರದರ್ಶನಗಳನ್ನು ಕ್ಯಾಮರಾ ಕಲಾವಿದನು ಆಸಕ್ತಿದಾಯಕ ವಸ್ತುಗಳನ್ನಾಗಿ ಬಳಸಿಕೊಂಡಿರುತ್ತಾರೆ. ಜೊತೆಗೆ ಭಾವಚಿತ್ರ ಛಾಯಾಚಿತ್ರಣ ಕಲೆಗೆ (ಪೋಟ್ರೇಟ್ ಪೋಟೋಗ್ರಾಫಿ)ಗೆ ತಳಹದಿಯಾಗಿದೆ. "ಶ್ರೇಷ್ಠ ಮತ್ತು ಯಶಸ್ವಿ ಭಾವಚಿತ್ರ, ಛಾಯಾಚಿತ್ರಕ್ಕೆ ಹಲವು ಪ್ರಮುಖ ಅಂಶಗಳಾದ ಬೆಳಕು, ವಸ್ತುವಿನ ಭಾವ ಮತ್ತು ಭಂಗಿ, ಉಡುಪು, ಹಿನ್ನಲೆ ಮೊದಲಾದವುಗಳ ಕಡೆ ಗಮನ ಕೊಡಬೇಕಾಗಿರುವುದು"[೯] ತುಂಬಾ ಅವಶ್ಯಕವಾಗಿದೆ. ಇಲ್ಲದಿದ್ದರೆ ಚಿತ್ರದಲ್ಲಿ ಅಸಾಂಗತ್ಯ ಪರಿಣಾಮ ಎದ್ದು ತೋರಿ ಸೌಂದರ್ಯಕ್ಕೆ ಹಾನಿಯುಂಟಾಗುತ್ತದೆ.


"ಚಿತ್ರಕಲೆಯ ಒಂದು ಅಂಗವಾದ ಛಾಯಾಚಿತ್ರಣ ಕಲೆಯಲ್ಲಿ ಭಾವಚಿತ್ರ ಛಾಯಾಚಿತ್ರಣ ರಚನೆಯಲ್ಲಿ ಛಾಯಾಚಿತ್ರಕಾರನು ಸಾಮಾನ್ಯವಾಗಿ ಕೆಲವು ಮಹತ್ವಗಳನ್ನು ಅರಿತಿರಬೇಕು. ಭಾವಚಿತ್ರ ಛಾಯಾಚಿತ್ರಕಾರನಿಗೆ ಜನಜೀವನದ ಬಗ್ಗೆ ಆಸಕ್ತಿ ಇರಬೇಕು. ಚಿತ್ರಿಸುವ ವ್ಯಕ್ತಿಯ ಇಷ್ಟಾನಿಷ್ಟ ಅವನ ಹವ್ಯಾಸ ಅಭಿರುಚಿ ಸ್ಥಾನಮಾನಗಳ ಅರಿವು ಅವಶ್ಯಕ."[೧೦] ಛಾಯಾಚಿತ್ರಣದಲ್ಲಿ ಭಾವಚಿತ್ರ ರಚಿಸುವಾಗ ವ್ಯಕ್ತಿಯ ಮುಖದಲ್ಲಿ ಅವನ ಅಂತರಂಗದ ಭಾವವನ್ನು ಒಡಮೂಡಿಸಬೇಕು. ಹೀಗೆ ಕ್ಯಾಮರಾ ಎದುರಿಗಿನ ವ್ಯಕ್ತಿಯ ಭಾವವನ್ನು ಛಾಯಾಚಿತ್ರಣಕಾರನು ಯಶಸ್ವಿಯಾಗಿ ಸೆರೆಹಿಡಿದಲ್ಲಿ ಭಾವಚಿತ್ರದ ಮೌಲ್ಯವು ಹೆಚ್ಚುವುದು, ವ್ಯಕ್ತಿಗಳ ಪೋಟ್ರೇಟ್ ಚಿತ್ರಿಸುವಾಗ ಅವರ ಹಿನ್ನೆಲೆಯನ್ನು ಅಳವಡಿಸುವ ವಿಚಾರದಲ್ಲಿ ಹೆಚ್ಚು ಗಮನ ಕೊಡಬೇಕಾಗುತ್ತದೆ. ಈ ಅಂಶವು ಚಿತ್ರಕಲೆಯಲ್ಲೂ ಸಹ ಅಳವಡಿಸಿಕೊಳ್ಳಲಾಗಿದೆ. ಅನೇಕ ಬಾರಿ ವ್ಯಕ್ತಿಯ ವೃತ್ತಿಗೆ ಸಂಬಂಧಿಸಿದಂತೆ ಕೆಲವು ಪರಿಕರಗಳನ್ನು ಹಿನ್ನೆಲೆಯಾಗಿ ಅಸ್ಪಷ್ಟವಾಗಿ ಕಾಣುವಂತೆ ಬಳಸಬಹುದು. ಹೀಗೆ ಹಿನ್ನೆಲೆಯಾಗಿ ಬಳಸಿದ ರೂಪಿಕೆಗಳು ಆ ವ್ಯಕ್ತಿಯ ಮುಖಭಾವಕ್ಕೆ ಸ್ಪರ್ಧಿಸುವಂತಿರಬಾರದು. ಈ ರೀತಿಯಾಗಿ ಭಾವಚಿತ್ರ, ಛಾಯಾಚಿತ್ರ ಕಲೆಯಲ್ಲಿ ಪ್ರಕಾಶದ ತೀಕ್ಷ್ಣತೆ, ಸ್ಥಾನ, ಕೋನ ವ್ಯವಸ್ಥೆ, ಭಾವಚಿತ್ರದ ಮೇಲೆ ಅದರ ಪರಿಣಾಮ ಇವೆಲ್ಲ ಮೂಲ ಅಂಶ ಮತ್ತು ತಂತ್ರಗಳನ್ನು ಪಾಟೀಲರು ಛಾಯಾಚಿತ್ರಣಗಳಲ್ಲಿ ಸೆರೆ ಹಿಡಿದಿದ್ದಾರೆ. ಹೀಗೆ ಸೆರೆಹಿಡಿದ ಕೆಲವು ಒಳಾಂಗಣದ ಭಾವಚಿತ್ರ ಮತ್ತು ಹೊರಾಂಗಣದ ಭಾವಚಿತ್ರ ಛಾಯಾಚಿತ್ರಕೃತಿಗಳನ್ನು ಈ ಕೆಳಗೆ ಚಿತ್ರ ಸಮೇತ ವಿವರಿಸಲಾಗಿದೆ.

---

೯. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಭಾವಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೪೭.
೧೦. ಅದೇ,ಪು. ೪೭.




ಚಿತ್ರ ೧. ಪಿ. ಲಂಕೇಶ



ಚಿತ್ರ ೨



ಚಿತ್ರ ೩



ಚಿತ್ರ ೪

ಕಪ್ಪು ಬಿಳುಪು ಛಾಯಾಚಿತ್ರಗಳು (ಭಾವಚಿತ್ರಗಳು)



ಚಿತ್ರ ೫



ಚಿತ್ರ ೬

ಪಾಟೀಲರು ಭಾವಚಿತ್ರ ಹಾಗೂ ಛಾಯಾಚಿತ್ರಣದಲ್ಲಿ ಚಿತ್ರಿಸುವ ವ್ಯಕ್ತಿಯ ಇಷ್ಟಾನಿಷ್ಟ, ಹವ್ಯಾಸ, ಸ್ಥಾನಮಾನಗಳನ್ನು ಗುರುತಿಸಿಕೊಂಡು ಆಯಾ ರೂಪದರ್ಶಿಯರ ಭಾವರೂಪಗಳಿಗೆ ಅನುಗುಣವಾಗಿ ಗಡುಸುತನ, ಬಿಗುಮಾನ, ಹರ್ಷಚಿತ್ತ, ಲಕ್ಷಣ ಹಾಗೂ ವೈಯಕ್ತಿಕ ಗುಣವಿಶೇಷಗಳನ್ನು ಹಲವಾರು ಛಾಯಾಚಿತ್ರಣಗಳಲ್ಲಿ ನಿರೂಪಿಸಿರುವುದನ್ನು ಕಾಣಬಹುದು. ಚಿತ್ರಿಕರಣಕ್ಕೆ ಆಯ್ದ ವ್ಯಕ್ತಿಗಳನ್ನು ಕ್ಯಾಮರಾದ ಎದುರಿಗೆ ವಿವಿಧ ಕೋನಗಳಲ್ಲಿ ನಿಲ್ಲಿಸಿ ಚಿತ್ರಿಕರಿಸಿ ನೆರಳು ಬೆಳಕಿನ ಸಾಮ್ಯತೆಯನ್ನು ಕಂಡುಕೊಂಡಿದ್ದಾರೆ.

ಚಿತ್ರ ೧–೬ ರಲ್ಲಿ ಪಿ. ಲಂಕೇಶ ಅವರ ಭಾವಚಿತ್ರವನ್ನು ಕಪ್ಪು ಬಿಳುಪಿನ ಮಾಧ್ಯಮದಲ್ಲಿ ೧೦" ×೧೨" ಅಳತೆಯಲ್ಲಿ ರಚಿಸಿದ್ದು ಇಲ್ಲಿ ಪ್ರಮುಖವಾಗಿ ಚಿತ್ರೀತ ವ್ಯಕ್ತಿಯ ಭಾವಪೂರಿತ ನೋಟವನ್ನು ನೇರವಾಗಿ ಕ್ಯಾಮರಾ ಮಸೂರವನ್ನು ನೋಡದೆ ಓರೆ ನೋಟದ ಭಂಗಿಯಲ್ಲಿ ವಿಶಿಷ್ಟವಾದ ಭಾವ ಪ್ರದರ್ಶನವನ್ನು ಸಂದರ್ಭ ಮತ್ತು ಆಯಾ ಸನ್ನಿವೇಶಗಳಿಗೆ ಅನುಗುಣವಾಗಿ ಹೊಂದಿಸಿಕೊಂಡು ಸೆರೆ ಹಿಡಿದಿದ್ದಾರೆ. ಹಾಗೆಯೇ ಚಿತ್ರ ಸಂಖ್ಯೆ ೨, ೩, ೪, ೫ರಲ್ಲಿ ಭಾವಚಿತ್ರಗಳಲ್ಲಿ ಕ್ಯಾಮರಾಕ್ಕೆ ಮುಖ ಮಾಡಿ ಹಿನ್ನೆಲೆಯಲ್ಲಿ ಬಿಳುಪು, ಬೂದು ಮತ್ತು ಕಪ್ಪು ವರ್ಣದ ನೆರಳು ಬೆಳಕಿನ ಛಾಯಾಂಕನ ಮುಸುಕು ಮುಸುಕಾಗಿ ಕಾಣುವಂತೆ ಮಸೂರವನ್ನು ಅಳವಡಿಸಿಕೊಂಡು ವ್ಯಕ್ತಿಯ ಮುಖ ಭಾವಕ್ಕೆ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಮುಖಕ್ಕೆ ಜೀವಾಳವಾದ ಕಣ್ಣುಗಳ ಮೇಲೆ ವಿವಿಧ ಕೋನಗಳಲ್ಲಿ ಮಸೂರವನ್ನು ಸಂಗಮಗೊಳಿಸಿ ಚಿತ್ರಿಕರಿಸಿದ್ದು ಪ್ರತಿಯೊಂದು ಭಾವಚಿತ್ರಗಳಲ್ಲಿ ಆಯಾ ವ್ಯಕ್ತಿಗಳ ಮುಖ ಭಾವಗಳಲ್ಲಿ ವಿಭಿನ್ನವಾದ ಭಾವಾಭಿವ್ಯಕ್ತಿಯನ್ನು ತಮ್ಮ ಛಾಯಾಗ್ರಹಣದಲ್ಲಿ ಏಕರೂಪಿಯ (ಮೋನೋಕ್ರೋಮ್) ತಂತ್ರದಲ್ಲಿ ಮುಖಭಾವಕ್ಕೆ ಜೀವಂತಿಕೆಯನ್ನು ನೀಡುವ ಪ್ರಕಾಶದ ನೆರಳು ಬೆಳಕಿಗೆ ಹೆಚ್ಚಿನ ಪ್ರಾಧ್ಯನ್ಯತೆಯನ್ನು ನೀಡಿ ಪ್ರಕಾಶದ ತಿಕ್ಷ್ಣತೆ, ಸ್ಥಳಾವಕಾಶ, ಮತ್ತು ವಿವಿಧ ಕೋನಗಳಲ್ಲಿ ವ್ಯವಸ್ಥೆಗಳನ್ನು ವಿಶಿಷ್ಟವಾಗಿ ಹೊಸ ಹೊಸ ಪ್ರಯೋಗಗಳ ಮೂಲಕ ಸಿಟ್ಟು, ಸೆಡಪು, ಸಂತೋಷ, ನಿರಿಕ್ಷೆಯಂತಹ ವಿವಿಧ ಪ್ರಕಾರದ ಭಾವಗಳನ್ನು ಪಾಟೀಲರ ಪೋಟ್ರೇಟ್ ಛಾಯಾಚಿತ್ರಣಗಳು ನೈಜವಾಗಿ, ಯಶಸ್ವಿಯಾಗಿ ಮೂಡಿಬಂದಿವೆ.

೨.೧. ಭಾವಚಿತ್ರಗಳು ಹೊರಾಂಗಣ

"ಪೋಟ್ರೇಟ್ ಛಾಯಾಚಿತ್ರಣ ಎಂದ ಕೂಡಲೇ ಹವ್ಯಾಸಿ ಛಾಯಾಚಿತ್ರಕಾರನ ಮನಸ್ಸಿನಲ್ಲಿ "ಸ್ಟುಡಿಯೋ ಮತ್ತು ಒಳಾಂಗಣದಲ್ಲಿ ವಿದ್ಯುತ್ ದೀಪಗಳ ಪ್ರಕಾಶವನ್ನು ಯಥಾಯೋಗ್ಯ ಬಳಸಿಕೊಂಡು


ಚಿತ್ರಿಕರಿಸುವುದು ಎಂಬ ಭಾವನೆ ಮೂಡುತ್ತದೆ. ಇದು ಸಾಮಾನ್ಯವಾಗಿ ಬಳಕೆಯಲ್ಲಿರುವ ವ್ಯವಸ್ಥೆಯೂ ಹೌದು."[೧೧]

ಅನೇಕ ಹವ್ಯಾಸಿ ಛಾಯಾಚಿತ್ರಕಾರರಿಗೆ ಹೊರಾಂಗಣದಲ್ಲಿ ಸೂರ್ಯನ ಪ್ರಕಾರದಲ್ಲಿ ಅಥವಾ ಹಗಲಿನ ಬೆಳಕಿನಲ್ಲಿ ಪೋಟ್ರೇಟ ಚಿತ್ರೀಕರಣವನ್ನು ಕುರಿತಾದ ತಿಳುವಳಿಕೆ ಕಡಿಮೆ ಎನ್ನಬಹುದು. ಆದರೂ ಹವ್ಯಾಸಿ ಛಾಯಾಚಿತ್ರಕಾರನ ಮೊದಲ ಛಾಯಾಚಿತ್ರಗಳು ಪೋಟ್ರೇಟ್ ಆಗಿದ್ದು ಅವು ಪ್ರಾಯಶಃ ಹೊರಾಂಗಣದಲ್ಲಿಯೇ ಚಿತ್ರಿಕರಿಸಲ್ಪಟ್ಟಿರುತ್ತವೆ. ಉಜ್ವಲವಾದ ಬಿಸಿಲಿರುವಾಗ ಹೊರಾಂಗಣದಲ್ಲಿ ಛಾಯಾಚಿತ್ರೀಕರಿಸಿದರೆ ಚಿತ್ರೀತ ವ್ಯಕ್ತಿ ಅಥವಾ ವಸ್ತುಗಳ ಮೇಲೆ ಬೀಳುವ ನೆರಳು ಬೆಳಕುಗಳ ಪ್ರಮಾಣದಲ್ಲಿ ಸಮತೋಲನ ತಪ್ಪಿ ಛಾಯಾಚಿತ್ರದ ಸಹಜ ಸೌಂದರ್ಯಕ್ಕೆ ಭಂಗ ಬರುತ್ತದೆ.

"ಪೂರ್ವಾಹ್ನ ೮ ರಿಂದ ೧೦ ರವರೆಗೆ ಮತ್ತು ಅಪರಾಹ್ನ ೩ ರಿಂದ ೫ ರವರೆಗೆ ಹೊರಾಂಗಣದಲ್ಲಿ ಪೊಟ್ರೇಟ್ ಛಾಯಾಚಿತ್ರಣಕ್ಕೆ ಅನಕೂಲಕರ ಸಮಯವಾಗಿದ್ದು, ಬೆಳಗಿನ ೯ ಗಂಟೆ ಮುಂಚೆ ಮತ್ತು ಸಂಜೆ ೪ರ ನಂತರ ಸಮಯ ಸರಿಯಲ್ಲ. ಕಾರಣ ಸಂಜೆ, ಮುಂಜಾನೆ ಬಿಸಿಲಲ್ಲಿ ವರ್ಣ ಛಾಯಾಂತರದಲ್ಲಿ ಸಮತೋಲನವಿರುವುದಿಲ್ಲ. ಆದರೆ ಛಾಯಾಚಿತ್ರಕಲಾವಿದನು ತನ್ನ ವರ್ಣ ಚಿತ್ರದಲ್ಲಿ ವಿಶಿಷ್ಟವಾಗಿ ಸಂಜೆ ಬಿಸಿಲಿನ ಹೊಂಬಣ್ಣವನ್ನು ಎತ್ತಿತೋರಬೇಕೆಂಬ ಗುರಿ ಇದ್ದರೆ ಬೆಳಕಿನಲ್ಲಿ ಚಿತ್ರೀಕರಿಸಬಹುದು. ಯಾವುದೇ ಸಮಯವಾಗಿರಲಿ ಹೊರಾಂಗಣದಲ್ಲಿ ಛಾಯಾಚಿತ್ರ ರಚಿಸುವಾಗ ಛಾಯಾಚಿತ್ರಕಾರನು ತನ್ನ ಕಲಾ ಮತ್ತು ಸೌಂದರ್ಯ ಭಿಜ್ಞತೆಗೆ ಅನುಗುಣವಾಗಿ ಬೆಳಕನ್ನು ಕ್ಯಾಮರಾ ಕಣ್ಣಲ್ಲೆ ಮತ್ತು ಕೋನಗಳನ್ನು ಅನುಸರಿಸಿ ನೆರಳು ಬೆಳಕುಗಳ ಸುಯೋಗ್ಯ ಚಿತ್ರ ಕಳೆಕಟ್ಟುವುದು ಎಂಬುದನ್ನು"[೧೨] ನಾವಿಲ್ಲಿ ಗಮನಿಸಬೇಕಾದ ಅಂಶವಾಗಿದೆ.

ಹೊರಾಂಗಣ ಭಾವಚಿತ್ರಣ ರಚನೆಯಲ್ಲಿ ಭಾವಪೂರಿತ ಚಿತ್ರ ರಚನಾ ಕಾರ್ಯಕ್ಕೆ ನೆರಳು ಬೆಳಕುಗಳ ಜೊತೆಗೆ ವ್ಯಕ್ತಿಯ ದೇಹ ವಿನ್ಯಾಸವನ್ನು ಸುಂದರವಾಗಿ ಭಾವಸೂಚಕವಾಗಿ ಇರುವಂತೆ ಕ್ರಮಗೊಳಿಸಿ ಅಣಿಮಾಡುವುದು ಒಂದು ಕಲೆಯಾಗಿದೆ. ವ್ಯಕ್ತಿಯ ದೇಹ ವಿನ್ಯಾಸ, ಭಾವ ಸೂಚಕದ ಮೂಲ, ಆಕರ್ಷಕ ನಿಲುವುಗಳನ್ನು ಕಲಾವಿದನು ಕ್ಯಾಮರಾ ಮೂಲಕ ಮತ್ತು ತನ್ನ ಕಲಾಕೌಶಲ್ಯದಿಂದ

೧೧. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಭಾವಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೫೩.
೧೨. ಅದೇ, ಪು. ೫೬



ಚಿತ್ರ ೧

ಚಿತ್ರಿಕರಿಸಿದ ಕೃತಿಗಳು ಉತ್ತಮ ಕೃತಿಗಳೆಂದು ಪರಿಗಣಿಸಲ್ಪಡುತ್ತವೆ. ಈ ದಿಶೆಯಲ್ಲಿ ಶಂಕರ ಪಾಟೀಲರು ಹೊರಾಂಗಣ ಭಾವ ಛಾಯಾಚಿತ್ರಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಬೇರೆ ಬೇರೆ ಪ್ರದೇಶಗಳ ಜನರ ಭಾವಚಿತ್ರಗಳನ್ನು ತಮ್ಮ ಕ್ಯಾಮರಾ ಮೂಲಕ ವಿವಿಧ ಕೋನಗಳಲ್ಲಿ ಸೆರೆ ಹಿಡಿದಿದ್ದ ಕೆಲವು ಸಂಗ್ರಹಗಳನ್ನು ಹೊರಾಂಗಣ ಛಾಯಾಚಿತ್ರಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಚಿತ್ರ ೧. ಈ ಚಿತ್ರವು ಗ್ರಾಮೀಣ ಜನಪದ ಸಂಗೀತಗಾರನ ಭಾವಚಿತ್ರವಾಗಿದ್ದು, ಕೈಯಲ್ಲಿ ತಂಬೂರಿಯಂತಹ ಸಾಧನವನ್ನು ಹಿಡಿದುಕೊಂಡು ನುಡಿಸುತ್ತಿರುವಂತಹ ಭಾವಪೂರಿತ ಭಾವನೆ, ವ್ಯಕ್ತಿಯ ದೇಹ ವಿನ್ಯಾಸ, ಸಾಮಾನ್ಯವಾದ ಗ್ರಾಮಿಣ ಸೊಗಡಿನ ಉಡುಗೆ, ಸಹಜ ಭಂಗಿ ಹಾಗೂ ಭಾವ ಪ್ರದರ್ಶಕ ಅಂಗಗಳಾದ ಕಣ್ಣುಗಳು ಮತ್ತು ಕೈಗಳಿಗೆ ಪ್ರಾಮುಖ್ಯತೆಯನ್ನು ನೀಡಿ ಮೂಲಭೂತ ಸಂಯೋಜನಾ ಕ್ರಮಗಳನ್ನು ಅನುಸರಿಸಿ ಸೂರ್ಯನ ಪ್ರಕಾಶಮಾನ ಬೆಳಕಿನಲ್ಲಿ ಕಪ್ಪು ಬಿಳುಪಿನ ನೆರಳು ಬೆಳಕಿನ ತಂತ್ರ ಕೌಶಲ್ಯವನ್ನು ಬಳಸಿ ತಂಬೂರಿ ನುಡಿಸುತ್ತಿರುವ ವೃದ್ಧನ ವ್ಯಕ್ತಿತ್ವ ಮತ್ತು ಸ್ವಭಾವವನ್ನು ಹೊರಸೂಸುವಲ್ಲಿ ಪಾಟೀಲರ ಈ ಭಾವಚಿತ್ರ ಛಾಯಾಗ್ರಹಣ ಚಿತ್ರಣವು ಸರಳವಾದ ಅಭಿವ್ಯಕ್ತಿ ಹಾಗೂ ನೈಜತೆಯಿಂದ ಕೂಡಿದೆ.

೩. ಮಕ್ಕಳ ಛಾಯಾಚಿತ್ರಣ

ತಾಳ್ಮೆ ಮತ್ತು ಕಾಣುವ ಕಣ್ಣುಗಳಿದ್ದರೆ ಮಕ್ಕಳ ಮುಖಭಾವಗಳಲ್ಲಿ ಸಾವಿರ ಸ್ತರ, ಸ್ಥಿತಿಗತಿಗಳ ನೈಸರ್ಗಿಕ ಸ್ನಿಗ್ಧ ಸೌಂದರ್ಯ, ಲಾವಣ್ಯಗಳನ್ನು, ಭಾವ ವಿಭಾವಗಳನ್ನು ಕಾಣಬಹುದು. ಕ್ಯಾಮರಾದ ಬಳಕೆಯ ಮೇಲೆ ಹಿಡಿತ ಹತೋಟಿಗಳಿದ್ದರೆ ಮಕ್ಕಳ ಆಕರ್ಷಣಿಯವಾದ ಚಿತ್ರಗಳನ್ನು ನಿರ್ಮಿಸಲು ಸಾಧ್ಯ. ಪತ್ರಿಕೆಗಳ ಓದುಗರು ವಾರ ವಾರವು ಅದರಲ್ಲಿ ಪ್ರಕಟವಾಗುವ ಮಕ್ಕಳ ಛಾಯಾಚಿತ್ರಗಳನ್ನು ಆಸಕ್ತಿಯಿಂದ ನೋಡುತ್ತಾರೆ. ಆ ಛಾಯಾಚಿತ್ರಗಳಲ್ಲಿರುವ ಭಾವ ಮತ್ತು ರೂಪು ಲಾವಣ್ಯಗಳನ್ನು ಕಂಡು ಆನಂದಿಸುತ್ತಾರೆ. ಈ ಓದುಗರಲ್ಲಿ ನೂರಾರು ಜನ ಛಾಯಾಚಿತ್ರಕಾರರೂ ಇದ್ದಾರೆ. ಕ್ಯಾಮರಾ ಹಿಡಿದ ಕೈಗಳು ಮಗುವಿನ ಭಾವಚಿತ್ರಗಳನ್ನು ತಗೆಯುವುದು ವಿರಳವಾಗಿದೆ.

"ಮಕ್ಕಳ ಮುಖಗಳ ಮೇಲೆ ಕ್ಷಣಕಾಲ ಮಿಂಚಿ ಮಾಯವಾಗುವ ಭಾವ ವೇಗಗಳ ವೈವಿಧ್ಯಗಳನ್ನು ಸೆರೆ ಹಿಡಿದು ಚಿತ್ರಿಸಲು ಪೋಟೋಗ್ರಾಫಿಗೆ ಸರಿಸಮಾನವಾದ ಮಾಧ್ಯಮ ಬೇರೊಂದಿಲ್ಲ."[೧೩]

---

೧೩. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಭಾವಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೫೯.

ಮಕ್ಕಳ ಛಾಯಾಚಿತ್ರೀಕರಣದ ಯಶಸ್ಸಿನ ಚಿತ್ರೀಕರಣಕ್ಕೆ ಅವಶ್ಯಕವಾದ ಕ್ಯಾಮರಾ ಮೊದಲಾದ ಸಾಧನೋಪಕರಣಗಳ ದಕ್ಷ ಹಿಡಿತ ಒಂದೆ ಅಲ್ಲದೆ, ಕ್ಯಾಮರಾ ಕಡೆ ಗಮನ ಕೊಡದೆ ಸಮಯಕ್ಕೆ ಸರಿಯಾಗಿ ಸ್ವಯಂ ಚಾಲಿತ ಯಂತ್ರದಂತೆ ಕಾರ್ಯೋನ್ಮುಕವಾಗುವಷ್ಟು ಅಭ್ಯಾಸ ಮತ್ತು ಚಾಕಚಕ್ಯತೆಗಳುಬೇಕು. ಜೊತೆಗೆ ಮಕ್ಕಳ ಒಲವು ಮತ್ತು ಮನೋವೃತ್ತಿಗಳನ್ನು ಥಟ್ಟನೆ ಗ್ರಹಿಸಿಕೊಂಡು ಅದಕ್ಕೆ ಹೊಂದಿಕೊಳ್ಳುವ ಮನೋಧರ್ಮವೂ, ಛಾಯಾಚಿತ್ರಕಾರನಿಗೆ ಅವಶ್ಯಕವಾಗಿದೆ. "ಮಕ್ಕಳ ಮನಸ್ಸು ಕ್ಷಣ ಕ್ಷಣಕ್ಕೆ ಬದಲಾಗುವುದು ಸ್ವಾಭಾವಿಕ. ಆದುದರಿಂದ ಛಾಯಾಚಿತ್ರಕಾರನಿಗೆ ಅನಂತವಾದ ತಾಳ್ಮೆ ಮತ್ತು ಸಮಯಾವದಾನಗಳೂ ಅಗತ್ಯ. ಹೊಸ ಪರಿಸರ ಮತ್ತು ಹೊಸಬರನ್ನು ಕಂಡು ಸಿಟ್ಟು, ಸಂಕೋಚ ಮತ್ತು ಹೆದರಿಕೆಗಳಿಂದ ಮುದುಡಿ ಕುಳಿತುಕೊಳ್ಳಬಹುದಾದ ಮಕ್ಕಳನ್ನು ಸಂತುಷ್ಟಗೊಳಿಸಿ ಅವಶ್ಯಕವಾದರೆ ರಂಗಾರಂಗಿನ ಆಟಿಕೆಗಳನ್ನು ತೋರಿಯೂ, ತನ್ನಲ್ಲಿ ಅವರಿಗೆ ವಿಶ್ವಾಸ ಮೂಡುವಂತೆ ನಡೆದುಕೊಂಡರೆ ಚಿತ್ರೀಕರಿಸಲು ಸುಲಭವಾಗುತ್ತದೆ. ನಿಸರ್ಗ ಸಹಜವಾದ ಪ್ರಸನ್ನತಾ ಭಾವಕ್ಕೂ ಹೇಳಿ ಮಾಡಿಸಿದ ಪ್ರಸನ್ನತಾ ಭಾವಕ್ಕೂ, ವ್ಯತ್ಯಾಸವಿದೆ. ಆದುದರಿಂದ ಚಿತ್ರೀಕರಿಸುವ ಮಕ್ಕಳ ಮನಸ್ಸಿನಲ್ಲಿ ಕ್ಯಾಮರಾ ಪ್ರಜ್ಞೆ ಮತ್ತು ಸ್ವಪ್ರಜ್ಞೆ ಪ್ರಕಟ ಆಗದಂತೆ ಜಾಗ್ರತೆ ವಹಿಸುವುದು ಪರಿಣಾಮಕಾರಿ ಚಿತ್ರೀಕರಣಕ್ಕೆ ಸಹಾಯಕವಾಗುತ್ತದೆ."[೧೪]

ಮಕ್ಕಳ ಛಾಯಾಚಿತ್ರಗ್ರಹಣಕ್ಕೆ ಯಾವ ರೀತಿಯ ಕ್ಯಾಮರಾವನ್ನಾದರೂ ಬಳಸಬಹುದು. ಆದರೆ ಛಾಯಾಚಿತ್ರಕಾರನಿಗೆ ತಾನು ಬಳಸುವ ಕ್ಯಾಮರಾದ ಸಂಪೂರ್ಣ ಪರಿಚಯ ಮತ್ತು ಹಿಡಿತವಿರಬೇಕು. ಆದರೂ, ಆವರ್ತನ ಮಸೂರಗಳುಳ್ಳ ಕ್ಯಾಮರಾಗಳು ಸಮರ್ಪಿತ ಚಿತ್ರ ಸಂಯೋಜನೆಗೆ ಹೆಚ್ಚು ಅನಕೂಲಕರವೆಂದು ಖ್ಯಾತ ಛಾಯಾಚಿತ್ರಕಾರರ ಅಭಿಪ್ರಾಯವಾಗಿದೆ.

ಮಗುವಿನ ಮುಖದ ಜೀವಾಳ ಅದರ ಕಣ್ಣುಗಳು. ಭಾವ ಪ್ರದರ್ಶಕಗಳಾದ ಕಣ್ಣುಗಳ ಮೇಲೆ ಕ್ಯಾಮರಾ ಮಸೂರವನ್ನು ಸಂಗಮಗೊಳಿಸಿ, ಕ್ಯಾಮರಾ ನಿಯಂತ್ರಕಗಳ ಮೇಲೆ ಹಿಡಿತವಿರುವ ಛಾಯಾಚಿತ್ರಕಾರನಿಗೆ ಎಂಥ ಸಮಯದಲ್ಲೂ ಈ ಕಾರ್ಯ ಕಷ್ಟವಾಗಲಾರದು. ಮಕ್ಕಳು ಕುಳಿತಿರಲಿ, ನಿಂತಿರಲಿ ಅವರ ಮುಖದ ಎತ್ತರಕ್ಕೆ ಸಮನಾಗಿ ಕ್ಯಾಮರಾವನ್ನು ಹಿಡಿದು ಮಗುವಿನ ಭಾವವನ್ನು ಅಭಿವ್ಯಕ್ತಿಗೊಳಿಸಬೇಕೆಂದಾಗ ಕ್ಯಾಮರಾಕೋನವನ್ನು ಬದಲಾಯಿಸಿ ಛಾಯಾಚಿತ್ರಕಾರನು ಮಕ್ಕಳೊಡನೆ ಆಡಿ, ಮಾತಾಡಿ, ಓಡಾಡುತ್ತ ಅವರ ಮುಖದ ಭಾವಭಂಗಿಗಳನ್ನು ಗಮನಿಸಿ ಆಕರ್ಷಕವಾದ


---

೧೪. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಭಾವಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೬೦.



ಚಿತ್ರ ೧





ಚಿತ್ರ ೨

ಭಾವಭಂಗಿ ಪ್ರಕಟವಾದ ಸಮಯದಲ್ಲಿ ಛಾಯಾಚಿತ್ರಕಾರನು ಚಿತ್ರೀಕರಿಸಬೇಕಾಗುತ್ತದೆ. ಜೊತೆಗೆ "ಮಕ್ಕಳ ಉಡುಗೆ ತೊಡುಗೆ, ವಸ್ತ್ರ ವಿನ್ಯಾಸ, ಆಭರಣಾಲಂಕಾರ ಅಗತ್ಯಕ್ಕಿಂತ ಹೆಚ್ಚಾಗಿ ಧರಿಸಿ ಛಾಯಾಚಿತ್ರಣಗಳನ್ನು ತಗೆದರೆ ಅಂತಹ ಚಿತ್ರಗಳು ಒಡವೆಗಳಿಗೆ ಪ್ರಾಧಾನ್ಯತೆ ಕೊಟ್ಟಂತಾಗುವುದೆ ವಿನಹ ಮಕ್ಕಳ ರೂಪ ಲಾವಣ್ಯಗಳಿಗಲ್ಲ."[೧೫]

ಪಾಟೀಲರು ತಮ್ಮ ಕ್ಯಾಮರಾಗಳ ಮೂಲಕ ಹವ್ಯಾಸಿ ಛಾಯಾಚಿತ್ರಕಾರರಾಗಿ ಕಪ್ಪು ಬಿಳುಪು ಮತ್ತು ವರ್ಣ ಛಾಯಾಚಿತ್ರಗಳಲ್ಲಿ ಮಕ್ಕಳ ವಿವಿಧ ಭಾವಭಂಗಿಗಳನ್ನು ನೈಜವಾಗಿ, ಹಿನ್ನೆಲೆಯಲ್ಲಿ ನಿಸರ್ಗ ಚಿತ್ರಣಗಳನ್ನು, ನೆರಳು ಬೆಳಕಿನ ಚಲನೆಯನ್ನು ವಿವಿಧ ಕೋನಗಳಲ್ಲಿ ಛಾಯಾಚಿತ್ರಣಗಳನ್ನು ಚಿತ್ರಿಸಿದ್ದಾರೆ. ಹೀಗೆ ಪಾಟೀಲರು ರಚಿಸಿದ ಮಕ್ಕಳ ಹಲವು ಆಯ್ದ ಛಾಯಾಚಿತ್ರಣಗಳನ್ನು ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ಅಭ್ಯಸಿಸಿ ಈ ಕೆಳಗೆ ಚಿತ್ರ ಸಮೇತ ವಿಷಯ ವಿವೇಚಿಸಲಾಗಿದೆ.

ಚಿತ್ರ ೧. ಮನೆಯ ಮುಂದೆ ಹೊರಾಂಗಣದಲ್ಲಿ ಕಟ್ಟೆಯ ಮೇಲೆ ಸಾಕುನಾಯಿಯ ಜೊತೆ ಚೆಲ್ಲಾಟವಾಡುತ್ತಿದ್ದ ದೃಶ್ಯ ಇದಾಗಿದ್ದು ಬಯಲಿನ ಪರಿಧಿಯಲ್ಲಿ ನಿಂತು ಬಾಲಕನ ಮುಖ ಭಾವವನ್ನು ಸ್ಪಷ್ಟವಾಗಿ, ಸಮೀಪದ ಅಂತರದಲ್ಲಿ ಸೆರೆ ಹಿಡಿದಿದ್ದಾರೆ. ಪಾಟೀಲರು ತಮಗೆ ಇಷ್ಟವಾದ ಭಂಗಿಯಲ್ಲಿ ಮಕ್ಕಳನ್ನು ಕುಳ್ಳಿರಿಸಿ ಇಲ್ಲವೆ ನಿಲ್ಲಿಸಿ ಛಾಯಾಚಿತ್ರಣ ರಚಿಸಿರುವುದು ವಿರಳ. ಮಕ್ಕಳೊಡನೆ ಆಡಿ, ಮಾತಾಡಿ ಓಡಾಡುತ್ತಾ ಅವರ ಮುಖಭಾವ ಭಂಗಿಗಳನ್ನು ಗಮನಿಸುತ್ತಾ ಆಕರ್ಷಣೀಯವಾದ ಭಾವಭಂಗಿ ಪ್ರಕಟವಾಗುವ ಸಮಯದಲ್ಲಿ ಈ ಚಿತ್ರಣವನ್ನು ಚಿತ್ರೀಕರಿಸಿದ್ದಾರೆ.

ಚಿತ್ರ ೨. ಈ ಚಿತ್ರಣದಲ್ಲಿ ಮಗುವಿನ ಭಾವ ಪ್ರದರ್ಶಕಗಳಾದ ಕಣ್ಣುಗಳ ಮೇಲೆ ಕ್ಯಾಮರಾ ಮಸೂರವನ್ನು ಸಂಗಮಗೊಳಿಸಿ ಗಂಭೀರವಾಗಿ ನೋಡುತ್ತಿರುವ ಮಗುವಿನ ಮುಗ್ಧ ಭಾವವು ಕಪ್ಪು ಬಿಳುಪಿನಲ್ಲಿ ತುಂಬಾ ಮನೋಹರವಾಗಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಮಗುವಿನ ಉಡುಪು, ಅಲಂಕಾರಗಳಿಗೆ ಪ್ರಾಧಾನ್ಯತೆ ನೀಡದೆ ಪ್ರಮುಖವಾಗಿ ಮಗುವಿನ ಮನಸ್ಸಿನ ನಿಸರ್ಗ ಸಹಜವಾದ ಪ್ರಸನ್ನತಾ ಭಾವನೆಯನ್ನು ಏಕರೂಪಿಯ ವರ್ಣಗಳ ಸಾಂಗತ್ಯದಲ್ಲಿ ಮಗುವಿನ ಮುಖದ ಮೇಲೆ ಕ್ಷಣ ಕಾಲ ಮಿಂಚಿ ಮಾಯವಾಗುವ ಭಾವವೇಗಗಳ ವೈವಿಧ್ಯವನ್ನು ನೆರಳು ಬೆಳಕಿನ ಪ್ರಕಾಶಗಳ ಯಶಸ್ವಿ ಬಳಕೆಗಳು ಈ ದೃಶ್ಯದ ಚಿತ್ರೀಕರಣಕ್ಕೆ ಸಹಾಯಕವಾಗಿವೆ.

---

೧೫. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಭಾವಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೬೨.

೪. ಪ್ರಾಣಿ ಪಕ್ಷಿಗಳ ಛಾಯಚಿತ್ರಣಗಳು :

ಪೋಟೋಗ್ರಾಫಿ ಕ್ಷೇತ್ರದಲ್ಲಿ 'ನೇಚರ ಪೋಟೋಗ್ರಾಫಿಯು ಒಂದು ಮುಖ್ಯವಾದ ಶಾಖೆ.' ಪ್ರಾಣಿ, ಪಕ್ಷಿ, ಕೀಟಗಳ ಛಾಯಾಚಿತ್ರಣವು ಅದರ ಒಂದು ಜನಪ್ರಿಯ ವಿಭಾಗವಾಗಿದೆ. ಪ್ರಾಣಿಗಳ ಛಾಯಾಚಿತ್ರಣಗಳಲ್ಲಿ ಎರಡು ಪ್ರಭೇದಗಳಿವೆ. (ಅ) ಪ್ರಾಣಿ ಸಂಗ್ರಹಾಲಯದಲ್ಲಿರುವ ಪ್ರಾಣಿಗಳನ್ನು ಸೇರಿಸಿಕೊಂಡು ಸಾಕು ಪ್ರಾಣಿಗಳ ಛಾಯಾಚಿತ್ರಣಗಳು. (ಬ) ಸ್ವಾಭಾವಿಕ ಪರಿಸರಗಳಲ್ಲಿ ವಾಸಿಸುತ್ತಿರುವ ವನ್ಯಪ್ರಾಣಿಗಳ ಛಾಯಾಚಿತ್ರಣಗಳು. ಈ ರೀತಿಯ ಛಾಯಾಚಿತ್ರಣ ಕಲೆಗೆ ಅವಶ್ಯಕವಾದ ಕ್ಯಾಮರಾ ಮಸೂರಗಳು, ಸಾಧನ ಸಲಕರಣೆಗಳು, ತಂತ್ರ ಕೌಶಲವು ಭಿನ್ನ – ಭಿನ್ನವಾಗಿರುತ್ತವೆ.

ಪ್ರಾಥಮಿಕ ಛಾಯಾಚಿತ್ರಕಾರನಿಗೆ ವನ್ಯ ಪ್ರಾಣಿಗಳ ಛಾಯಾಚಿತ್ರಣಗಳನ್ನು ತೆಗೆಯುವುದು ಸಾಮಾನ್ಯವಾಗಿ ನಿಲುಕದ ವಿಚಾರ. ಮನೆಯಲ್ಲಿ ಸಾಕಿದ ಪ್ರಾಣಿಗಳು, ಪ್ರಾಣಿಸಂಗ್ರಹಾಲದ ಪ್ರಾಣಿಗಳು, ಮನೆಯಂಗಳದಲ್ಲಿ ಹಾರಾಡುವ ಪಕ್ಷಿಗಳು, ಅಲೆದಾಡುವ ಕ್ರಿಮಿಕೀಟಗಳು, ಸುಲಭ ಸಾಧ್ಯವಾದ ವಸ್ತುಗಳಾಗಿವೆ.

"ಮನುಷ್ಯರಂತೆ ಪ್ರಾಣಿಗಳು ಛಾಯಾಚಿತ್ರಕಾರನಿಗೆ ಇಷ್ಟವಾದ ಭಂಗಿಯಲ್ಲಿ ನಿಂತು ಚಿತ್ರೀಕರಣಕ್ಕೆ ಅವಕಾಶ ಕೊಡುವುದಿಲ್ಲ. ಅವುಗಳ ಹಾವಭಾವಗಳು ಕ್ಷಣಕ್ಕೊಮ್ಮೆ ಬದಲಾಗುವುದು ಸ್ವಾಭಾವಿಕವಾದ ಕ್ರಿಯೆಯಾಗಿದೆ. ಮನುಷ್ಯರ ಹಾಗೆ ಪ್ರಾಣಿ ಪಕ್ಷಿಗಳು ಕ್ಯಾಮರಾಗಳ ಕಡೆಗೆ ಗಮನ ಕೊಡುವುದಿಲ್ಲ. ಪ್ರಾಣಿ ಪಕ್ಷಿಗಳನ್ನು ಛಾಯಾಚಿತ್ರಣಗೈಯುವಾಗ ತಾಳ್ಮೆ ಸಮಾಧಾನಗಳು ತುಂಬಾ ಅವಶ್ಯಕವಾಗಿದೆ."[೧೬]

ಪ್ರಾಣಿಸಂಗ್ರಹಾಲಯದಲ್ಲಿರುವ ಮೃಗ ಪಕ್ಷಿಗಳನ್ನು ಛಾಯಾಚಿತ್ರಣ ಮಾಡುವುದು ತುಂಬಾ ಉಲ್ಲಾಸಕರ ಸಂಗತಿ. ಹೀಗೆ ಪ್ರಾಣಿ ಸಂಗ್ರಹಾಲಯದಲ್ಲಿ ಛಾಯಾಚಿತ್ರಣ ಮಾಡುವಾಗ ಎರಡು ಮುಖ್ಯವಾದ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

(ಅ) ಪ್ಲಾಷ್ (ಬೆಳಕಿನ ಛಾಯೆಯನ್ನು) ಬಳಸಬಾರದು.

(ಆ) ಪ್ರಾಣಿಗಳನ್ನು ಭಯಭಿತಗೊಳಿಸಬಾರದು.


ಹೀಗೆ ಸ್ವಾಭಾವಿಕ ಪರಿಸರವನ್ನು ಗಮನಿಸಿ ತಾಳ್ಮೆ ಮತ್ತು ಸಮಯಾವಧಾನಗಳಿಂದ ನಿಸರ್ಗದಲ್ಲಿನ ಪ್ರಾಣಿ – ಪಕ್ಷಿಗಳ, ಕೀಟಗಳ ಛಾಯಾಚಿತ್ರಿಸಿದ ಕಲಾವಿದರುಗಳು ಬೆರಳೆಣಿಕೆಯಷ್ಟು ಮಾತ್ರ ಎಂದರೆ ತಪ್ಪಾಗಲಾರದು.

---

೧೬. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಭಾವಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೬೬.



ಚಿತ್ರ ೧



ಚಿತ್ರ ೦೧



ಚಿತ್ರ ೦೨

ಪಾಟೀಲರು ತಮ್ಮ ಹವ್ಯಾಸಿ ಛಾಯಾಚಿತ್ರಕಲೆಯಲ್ಲಿ ಕೆಲವು ಪ್ರಾಣಿ–ಪಕ್ಷಿಗಳ ಛಾಯಾಚಿತ್ರಣ ಮಾಡಿದ್ದು, ಅವುಗಳಲ್ಲಿ ಕೆಲವು ಛಾಯಾಚಿತ್ರಣಗಳನ್ನು ಆಯ್ದು, ಛಾಯಾಚಿತ್ರಗಳ ವಸ್ತು ವಿಷಯ, ಕ್ಯಾಮರಾದ ಬಳಕೆ, ತಂತ್ರ, ಶೈಲಿಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಚಿತ್ರ ೧. ಎತ್ತರದ ಪ್ರದೇಶದಲ್ಲಿ ನಿಂತು ಕೆಳಮುಖವಾಗಿ ಭೂಪಾತಳಿಯ ಮೇಲಿನ ದನಕರುಗಳ ಸಮೂಹವನ್ನು ಈ ಛಾಯಾಚಿತ್ರಣದಲ್ಲಿ ಸ್ಥಳಾವಕಾಶದಲ್ಲಿ ದೂರ ಸಮೀಪದ ದೃಶ್ಯ ಗೋಚರವಾಗುವಂತೆ ದನಕರುಗಳ ಗುಂಪಿನಲ್ಲಿ ಪ್ರತಿಯೊಂದರಲ್ಲಿ ವಿಭಿನ್ನ ಚಲನಾತೀತ ರೂಪ ಭಾವಗಳು ವ್ಯಕ್ತಗೊಂಡಿವೆ. ಜೊತೆಗೆ ಪ್ರಜ್ವಲಿಸುವ ಸೂರ್ಯನ ಪ್ರಕಾಶಮಯ ಬೆಳಕು ಮತ್ತು ವಿರೋಧಮಯವಾಗಿ ನೆರಳಿನ ಛಾಯೆ ಹಾಗೂ ದೂರದ ದೃಶ್ಯಗಳಲ್ಲಿ ಬೆಳಕಿನ ಪಾರದರ್ಶಕದ ಸಮ್ಮಿಲನಗಳು ಒಟ್ಟು ಚಿತ್ರ ಪ್ರತಿಫಲಿಸುವಲ್ಲಿ ಸಹಕಾರಿಯಾಗಿದೆ.

ಚಿತ್ರ ೨. ಸ್ವಾಭಾವಿಕ ಪರಿಸರದಲ್ಲಿ ಮೂಡಿಬಂದ ಈ ಚಿತ್ರದಲ್ಲಿ ಕೊಕ್ಕರೆಯು ತನ್ನ ಮರಿಗಳಿಗೆ ಆಶ್ರಯವಾಗಿ ನಿಂತಿರುವ ದೃಶ್ಯದಲ್ಲಿ ಹಿನ್ನೆಲೆಯಲ್ಲಿ ಕೆರೆಯ ದೃಶ್ಯ ಅದಕ್ಕೆ ಹತ್ತಿಕೊಂಡಂತೆ ಹಚ್ಚು ಹಸಿರಾದ ಗಿಡಗಂಟಿಗಳು, ಮರಗಳ ಸಾಲು ಮತ್ತು ಆಗಸದಲ್ಲಿನ ಮೋಡಗಳು ನೀರಿನಲ್ಲಿ ಪ್ರತಿಫಲನಗೊಂಡ ದೃಶ್ಯ ಇದಾಗಿದೆ. ಸಂಯೋಜನೆಯ ದೃಷ್ಟಿಯಿಂದ ಸ್ಥಳಾವಕಾಶವನ್ನು ಪೂರ್ಣಗೊಳಿಸಿ ಪ್ರಮುಖವಾಗಿ ಪಕ್ಷಿಗಳ ಗುಂಪನ್ನು ಛಾಯಾಚಿತ್ರಣದಲ್ಲಿ ಕೇಂದ್ರೀಕರಿಸುವುದರ ಜೊತೆಗೆ ಸ್ವಾಭಾವಿಕ ಪರಿಸರದ ಅಂದ ಚಿತ್ರದ ಮೆರಗನ್ನು ಹೆಚ್ಚಿಸುವಲ್ಲಿ ಪಾಟೀಲರು ಯಶಸ್ವಿ ಛಾಯಾಚಿತ್ರವನ್ನು ರಚಿಸಿದ್ದಾರೆ.

ಚಿತ್ರ ೩. ಪ್ರಾಣಿ ಸಂಗ್ರಹಾಲಯದಲ್ಲಿನ ಕೊಳವೊಂದರ ದಡದಲ್ಲಿ ಬಾತುಕೋಳಿಯೊಂದನ್ನು ಪಾಟೀಲರು ಶೀಘ್ರ ಛಾಯಾಗ್ರಹಣದ ತಂತ್ರಗಳನ್ನು ಬಳಸಿ ಹೆಚ್ಚಿನ ವೇಗದ ಋಣಪಟ್ಟಿಕೆಯನ್ನು ಅಳವಡಿಸಿಕೊಂಡು ಅದರ ವಿಶಿಷ್ಟವಾದ ಚಲನಾತ್ಮಕ ಭಾವ ಭಂಗಿಯನ್ನು ಚಿತ್ರಿಸಿದ್ದಾರೆ. ಚಿತ್ರದಲ್ಲಿ ಈ ಪಕ್ಷಿಯ ರೂಪಗಳನ್ನು ಕ್ಷಣಾರ್ಧದಲ್ಲಿ ಸೆರೆ ಹಿಡಿಯುವ ಪಾಟೀಲರ ಪ್ರಯತ್ನವನ್ನು ಕಾಣಬಹುದು.

೫. ಗಿರಿ ದೃಶ್ಯಗಳ ಛಾಯಾಚಿತ್ರಣಗಳು :

ಗಿರಿದೃಶ್ಯ ಚಿತ್ರಣಕ್ಕೆ ಸಾಮಾನ್ಯವಾಗಿ ಯಾವ ಕ್ಯಾಮರಾ ಬೇಕಾದರೂ ಆಗಬಹುದಾದರೂ ಉತ್ತಮ ದರ್ಜೆಯ ಮಸೂರ (ಲೆನ್ಸ) ಇರುವ ಕ್ಯಾಮರಾ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.



ಚಿತ್ರ –೧



ಚಿತ್ರ –೨

ಹವ್ಯಾಸಿ ಛಾಯಾಚಿತ್ರಕಾರರು "ಬೆಟ್ಟಗುಡ್ಡಗಳ ದೃಶ್ಯ ಮತ್ತು ಭೂದೃಶ್ಯಗಳ ಚಿತ್ರವನ್ನಾಗಲಿ ಚಿತ್ರಿಸುವಾಗ ಒಂದೆರಡು ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳುವುದು ತುಂಬಾ ಅವಶ್ಯಕ. ಉದಾ : ಭೂದೃಶ್ಯ ಚಿತ್ರವನ್ನು ಕೇವಲ ೧೮–೨೪ ಸೆಂ. ಮಿ. ಅಳತೆಯ ಚಿತ್ರವು ಆಕರ್ಷಣೀಯ ಅಗಲ ಚಿತ್ರ ಸಂಯೋಜನೆಯ ಸಿದ್ಧ ಸೂತ್ರಗಳನ್ನು ಅನುಸರಿಸಬೇಕಾಗುತ್ತದೆ. ಇಲ್ಲವಾದರೆ ಚಿತ್ರಗಳು ಗಮನ ಸೆಳೆಯಲಾರವು. ಗುಡ್ಡ ಬೆಟ್ಟಗಳ ಹಿಮಚ್ಛಾದಿತ ಶಿಖರ ಛಾಯಾಚಿತ್ರಣದಲ್ಲಿ ವರ್ಣಪ್ರಸರಣ ಸಮನ್ವಯ ಸುಲಭವಲ್ಲ. ಕಾರಣ ಆ ದೃಶ್ಯದ ಕಾಂತೀಭೇದವು (ಕಾಂಟ್ರಾಸ್ಟ) ಗಣನೀಯ ಮಟ್ಟದಲ್ಲಿರುತ್ತವೆ. ಆದ್ದರಿಂದ ಛಾಯಾಗ್ರಾಹಕನು ಚಿತ್ರಗ್ರಹಣ ಮತ್ತು ಋಣ ಪಟ್ಟಿಕೆಯ ಸಂಸ್ಕರಣಗಳಲ್ಲಿ ಪಳಗಿರಬೇಕು, ಚಿತ್ರಗ್ರಹಣ ಕಾಲದಲ್ಲಿ ನೆರಳಿನ ಭಾಗವು ಸ್ಪಷ್ಟವಾಗಿ ಮೂಡುವಂತೆ ಋಣ ಪಟ್ಟಿಕೆಯನ್ನು ಸಂಸ್ಕರಿಸಬೇಕು. ಈ ವಿಧಾನ ಭೂದೃಶ್ಯ ಚಿತ್ರಣಕ್ಕೂ ಅನ್ವಯಿಸುತ್ತದೆ."[೧೭]

ಇಂತಹ ವಿಧಿ–ವಿಧಾನ, ಸಂಯೋಜನೆ, ಪ್ರದೇಶಗಳ ಆಯ್ಕೆ, ತಂತ್ರಗಳನ್ನು ಬಳಸಿಕೊಂಡು ಪಾಟೀಲರು ತಮ್ಮ ಕಲಾಚಟುವಟಿಕೆಗಳ ದಿನಗಳಲ್ಲಿ ಪ್ರವಾಸದ ದಿನಗಳಲ್ಲಿ ಮತ್ತು ವಿದೇಶ ಪ್ರಯಾಣದ ದಿನಗಳಲ್ಲಿ ಹಲವಾರು ಸಾಕಷ್ಟು ಗಿರಿದೃಶ್ಯಗಳ ಫೋಟೋಗ್ರಾಫ್‌ಗಳನ್ನು ಚಿತ್ರಿಸಿದ್ದಾರೆ. ಅವುಗಳಲ್ಲಿ ಕೆಲವು ಗಿರಿದೃಶ್ಯಗಳ ಚಿತ್ರಣಗಳನ್ನು ಈ ಛಾಯಾಚಿತ್ರಕಲೆ ಅಧ್ಯಾಯದ ಅಧ್ಯಯನಕ್ಕೆ ತಕ್ಕಂತೆ ಛಾಯಾಚಿತ್ರಕಲಾಕೃತಿಗಳ ಕುರಿತು ಈ ಕೆಳಗೆ ವಿಶ್ಲೇಷಿಸಲಾಗಿದೆ.

ಚಿತ್ರ ೧. ಹಿಮಾಲಯದ ಪರ್ವತ ಶ್ರೇಣಿಗಳ ಸಾಲು, ಪರ್ವತ ಪ್ರದೇಶದ ಸ್ವಾಭಾವಿಕ ಏರು ತಗ್ಗುಗಳು, ಶಿಖರದ ಮೇಲೆ ಮಂಜಿನ ಟೋಪಿ ಹಾಕಿಕೊಂಡು ಎತ್ತರದ ಶಿಖರಗಳು ಪಾಟೀಲರ ಈ ಛಾಯಾಚಿತ್ರಣದಲ್ಲಿ ಯಥೇಚ್ಛ ಅವಕಾಶ ಒದಗಿಸಿವೆ. ಇವರ ಈ ಛಾಯಾಚಿತ್ರಣದಲ್ಲಿ ಬಿಸಿಲಿನ ಪ್ರಕಾಶತೆಯಲ್ಲಿ ಶಿಖರಗಳಿಗೆ ಹೊದಿಸಿದಂತ ಹಿಮಚ್ಛಾದಿತ ಶಿಖರಗಳ ನೈಸರ್ಗಿಕ ದೃಶ್ಯವನ್ನು ವರ್ಣ ಪ್ರಸರಣದ ಸಮನ್ವಯಗೊಳಿಸಿ ಕಾಂತಿ ಬೇಧದ ಗಣನೀಯ ಮಟ್ಟವನ್ನು ಚಿತ್ರಗ್ರಹಣ ಕಾಲದಲ್ಲಿ ನೆರಳಿನ ಭಾಗವು ಅಸ್ಪಷ್ಟವಾಗಿದ್ದು, ಬೆಳಕಿನ ಭಾಗವು ಸ್ಪಷ್ಟವಾಗಿ ಮೂಡುವಂತೆ ಛಾಯಾಗ್ರಹಣದಲ್ಲಿ ಸೆರೆ ಹಿಡಿದಿದ್ದಾರೆ.

ಚಿತ್ರ ೨. ಗಿರಿ ದೃಶ್ಯ ಚಿತ್ರಣದಲ್ಲಿ ಹಸಿರು ಹಾಸುಗಳ ಮೇಲೆ ಸೂರ್ಯನ ಕಿರಣಗಳ ಚಿನ್ನದ ಲೇಪನ, ದಟ್ಟ ಹಸಿರಿನ ಬೆಟ್ಟದ ಶಿಖರದಲ್ಲಿ ಮೂಡಿರುವ ಹೊಂಗಳಿಸಿದ ಸೊಬಗು ಎಳೆ ಬಿಸಿಲು,

---

೧೭. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಭಾವಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೬೮.



ಚಿತ್ರ ೩

ತೆಳು ಪರದೆಯ ಪ್ರಭಾಮಯ ದೃಶ್ಯವನ್ನು ವಿಶಾಲವಾದ ನೈಸರ್ಗಿಕ ಪರಿಸರದ ಹಿನ್ನೆಲೆಯಲ್ಲಿ ರಚಿಸಿದ್ದಾರೆ. ಈ ಛಾಯಾಚಿತ್ರಣದಲ್ಲಿ ಪಾಟೀಲರು ಪ್ರಕೃತಿ ಲೀಲೆಯ ಎಲ್ಲಾ ರೀತಿಯ ಸೊಬಗು ಸೌಂದರ್ಯಗಳನ್ನು, ಸೌಂದರ್ಯಾಭಿವ್ಯಕ್ತಿಯನ್ನು ಬಿಸಿಲಿಗೆ ಎದುರಾಗಿ ಛಾಯಾಚಿತ್ರಣದ ತಂತ್ರಜ್ಞಾನದ ಎಲ್ಲಾ ಅಂಶಗಳನ್ನು ವರ್ಣ ಛಾಯಾಚಿತ್ರಣದಲ್ಲಿ ಅಳವಡಿಸಿಕೊಂಡು ಗಿರಿದೃಶ್ಯದ ಓರಣ ವ್ಯವಸ್ಥೆ ಕಣ್ಣೊಳಗೆ ಆಸರೆಯಾಗುವ ಬೆಳಕಿನ ಕಿರಣಗಳ ಯುಕ್ತಾಯುಕ್ತತೆ ಮತ್ತು ಪ್ರತಿಫಲನದ ಬಿಂಬಗಳ ಸಾಮರಸ್ಯವನ್ನು ಯಥೇಚ್ಚವಾಗಿ ರೂಪಗೊಳಿಸಿದ್ದಾರೆ.

ಚಿತ್ರ ೩. ಆಕಾಶದೆತ್ತರದ ಗಿರಿಶಿಖರಗಳ ಮಧ್ಯದಲ್ಲಿ ಪ್ರಕಾಶಮಾನವಾಗಿ ಪ್ರಜ್ವಲಿಸಿದ ಸೂರ್ಯನ ಕಿರಣಗಳು ಪೂರ್ತಿ ಪ್ರದೇಶವನ್ನು ಆವರಿಸಿರುವಂತೆ ದಿಗಂತದ ಕಾರ್ಮುಗಿಲಿನಂಚಿನಲ್ಲಿ ಹೊಳೆಯುವ ಪ್ರಕಾಶಮಯ ಸೌಂದರ್ಯವು ಚಿತ್ತಾಕರ್ಷಕವಾಗಿ ಮೂಡಿಬಂದಿದೆ. ಈ ಕಲಾಕೃತಿಯಲ್ಲಿ ಬೆಟ್ಟದ ಮದ್ಯದಲ್ಲಿ ವಿವಿಧ ಕೋನಗಳಲ್ಲಿ ಮೂಡಿಬಂದ ಸೂರ್ಯನ ರಶ್ಮಿಗಳನ್ನು ಮತ್ತು ಯಥಾವತ್ತು ರೂಪಿಕೆಯನ್ನು ಕಪ್ಪು ಬಿಳುಪಿನ ಛಾಯಾಚಿತ್ರಣದಲ್ಲಿ ನೆರಳು ಬೆಳಕುಗಳಿಗೆ ಪ್ರಾಧಾನ್ಯ ನೀಡಿ ನೆರಳು ಬೆಳಕಿನ ಕೋನವನ್ನು ಆರಿಸಿಕೊಂಡು ರಚಿಸಿದ ಛಾಯಾಚಿತ್ರಣವು ಚಿತ್ತಾಕರ್ಷಕವಾಗಿ ಮೂಡಿಬಂದಿದೆ ಹಾಗೂ ಪ್ರಕೃತಿಲೀಲೆಯ ಎಲ್ಲಾ ರೀತಿಯ ಸೊಬಗು ಸೌಂದರ್ಯಗಳನ್ನು ಕಂಡು ಪುಲಕಿತರಾಗಿ ಚಿತ್ರಿಸಿದ ಈ ಛಾಯಾಚಿತ್ರಣದಲ್ಲಿ ವಿಶಾಲವಾದ ಗಿರಿ ದೃಶ್ಯಗಳ ವೈಶಾಲ್ಯತೆಯನ್ನು ಒಂದು ಆಕರ್ಷಣಿಯ ವಸ್ತುವಾಗಿ ಬಳಸಿಕೊಂಡ ಪಾಟೀಲರು ಬೆಟ್ಟದ ಅಂಚಿನ ಸಂದಿಯಿಂದ ಇಣುಕಿ ನೋಡುತ್ತಿರುವ ಸೂರ್ಯನ ಎಳೆ ಬಿಸಿಲಿನ ಚೆಲ್ಲಾಟವನ್ನು ಹಾಗೂ ಭೂಪಾತಳಿಯ ಛಾಯೆಯನ್ನು ಗಾಢವಾದ ನೆರಳು ಬೆಳಕುಗಳ ಉಜ್ವಲತೆಯಲ್ಲಿ ಸ್ನಿಗ್ಧ ಸೌಂದರ್ಯವನ್ನು ಅಪ್ಯಾಯಮಾನವಾಗಿ ಈ ಗಿರಿಶಿಖರದ ದೃಶ್ಯದಲ್ಲಿ ಗಿಡ, ಮರ, ಮನೆಗಳನ್ನು ಅಸ್ಪಷ್ಟ ರೂಪಗಳಲ್ಲಿ ಕಪ್ಪು-ಬಿಳುಪು ಛಾಯಾಂತರದಲ್ಲಿ ಬಿಸಿಲಿಗೆ ಎದುರಾಗಿ ಚಿತ್ರಿಕರಿಸಿದ್ದಾರೆ.

೬. ಮಂಜಿನ ಛಾಯಾಚಿತ್ರಗಳು

"ಕಾಣ್ದ ಪಟದಂತಿರ್ಪನ್ನೆಗಂ ಮಾಡಿ ಮಂಜುಂ" ಎಂದು ಬಣ್ಣಿಸಿದ ವರಕವಿ ಪಂಪನಿಂದ ಪ್ರಾರಂಭಿಸಿ ಜಗತ್ತಿನ ಕವಿ ಕಲಾವಿದರ ಹೃನ್ಮನಗಳನ್ನು ಸೆಳೆದ ಇಬ್ಬನಿ, ಮಂಜು ಛಾಯಾಚಿತ್ರಕಾರನ ಒಂದು ಅಚ್ಚುಮೆಚ್ಚಿನ ವಸ್ತು ಆಗಿರುವುದರಲ್ಲಿ ಆಶ್ಚರ್ಯವಿಲ್ಲ, ಮಂಜು ಬೀಳುತ್ತ ಕಾವಳು



ಚಿತ್ರ ೧

ಮುಸುಕಾಗುವಾಗ ಕ್ಯಾಮರಾ ಕೆಲಸಕ್ಕೆ ಬಾರದೆಂದು ಒಳಗಿಡುವುದು ಪ್ರಾಥಮಿಕ ಹವ್ಯಾಸಿ ಛಾಯಾಚಿತ್ರಕಾರನ ಸಹಜ ಸ್ವಭಾವ.

ಆದರೆ ಪ್ರಕೃತಿ ಲೀಲೆಯ ಎಲ್ಲ ರೀತಿಯ ಸೊಬಗು ಸೌಂದರ್ಯಗಳನ್ನು ಕಂಡು ಅಚ್ಚರಿಯಿಂದ ಪುಲಕಿತನಾಗುವ ಕಲಾವಿದನು ಮಳೆ ಮಂಜು ಕಾವಳಗಳಲ್ಲಿಯೂ ಚಿತ್ರ ವೈಶಾಲ್ಯತೆಯನ್ನು ಕಂಡು ಚಿತ್ರಿಸಲು ಅನುಕೂಲವಾಗುವನು. ನಿಜವಾದ ಕಲಾವಿದನಿಗೆ ಮಂಜು ಒಂದು ಆಕರ್ಷಣೆಯ ವಸ್ತುವಾಗಿದೆ. ಮುಸುಕುತ್ತಿರುವ ಮಂಜಿನ ಅಂಚಿನ ಸಂದಿನಿಂದ ಇಣುಕಿ ನೋಡಿ ನುಸುಳಲೆಸಗುವ ಎಳೆ ಬಿಸಿಲಿನ ಚೆಲ್ಲಾಟ ಅವನ ಕಣ್ಸೆಳೆಯುತ್ತವೆ.

"ತಿಳಿ ಮಂಜು ಮುಸುಕಿದ ಭೂದೃಶ್ಯದ ನೆರಳು ಬೆಳಕುಗಳ ಉಜ್ವಲತೆಯಲ್ಲಿ ಸ್ನಿಗ್ಧ ಸೌಂದರ್ಯವು ಅಪ್ಯಾಯಮಾನವಾಗಿ ತೋರುತ್ತದೆ. ಮುಸುಕಾದ ವಾತಾರಣದಲ್ಲಿ ಗಿಡ, ಮರ, ಮನೆ, ಜನ, ರಸ್ತೆಗಳ ಸ್ಥಾನ ಮತ್ತು ಪ್ರಮಾಣಗಳ ಸಂಬಂಧದಲ್ಲಿ ಅಂತರಭ್ಯಾಸ ಹೆಚ್ಚಿದಂತೆ ಕಂಡು ದೃಶ್ಯದ ಅಸ್ಪಷ್ಟ ರೂಪ ಗಮನ ಸೆಳೆಯುತ್ತದೆ. ವರ್ಣಛಾಯಾಂತರದಲ್ಲಿ ವೈರುಧ್ಯ ಭಾವ ಕಡಿಮೆ ಆದಂತೆ ತೋರುವುದು ಒಂದು ವೈಶಿಷ್ಟ್ಯ ಮಂಜು ಮುಸುಕುತ್ತಿರುವಾಗ ಬಿಸಿಲಿಗೆ ಎದುರಾಗಿ ಚಿತ್ರೀಕರಣ ಇವು ಛಾಯಾಚಿತ್ರಣದ ತಂತ್ರಜ್ಞಾನದ ಮೌಲ್ಯಮಾಪನಕ್ಕೊಂದು ಆಹ್ವಾನ."[೧೮]

ಇಂತಹ 'ಎಳೆಬಿಸಿಲಲ್ಲಿ ನಳನಳಿಸುವ ಬಣ್ಣಬಣ್ಣದ ಪಕಳೆಗಳ ಮೇಲೆ ಹೊಳೆವ ಮಂಜಿನ ಹನಿಗಳ ಹಲವು ರೂಪಗಳನ್ನು ಕಲಾವಿದ ಶಂಕರ ಪಾಟೀಲರು ತಮ್ಮ ಛಾಯಾಚಿತ್ರಣ ಕಲೆಯಲ್ಲಿ ಕಂಡುಕೊಂಡು ಹಲವು ಛಾಯಾಚಿತ್ರಣಗಳನ್ನು ರಚಿಸಿದ್ದಾರೆ.' ಅವುಗಳಲ್ಲಿ ಆಯ್ದ ಮಹತ್ವದ ಕೆಲವು ಕಲಾಕೃತಿಗಳನ್ನು ಈ ಕೆಳಗೆ ಅಧ್ಯಯನಕ್ಕೊಳಪಡಿಸಿ ಸಂಕ್ಷೇಪ್ತವಾಗಿ ವಿವರಿಸಲಾಗಿದೆ.

ಚಿತ್ರ ೧. ಎಳೆ ಬಿಸಿಲಿನಿಂದ ಕೂಡಿದ ಮುಂಜಾನೆಯ ಮಂಜಿನ ದೃಶ್ಯದ ಈ ಕಪ್ಪು ಬಿಳುಪು ಛಾಯಾಚಿತ್ರಣದಲ್ಲಿ ಭೂದೃಶ್ಯದ ನೆರಳು ಬೆಳಕುಗಳ ಉಜ್ವಲತೆಯಲ್ಲಿ ಕಟ್ಟಡ, ರಸ್ತೆ, ಮತ್ತು ಪ್ರಮಾಣಗಳಲ್ಲಿ ಸ್ನಿಗ್ಧ ಸೌಂದರ್ಯವನ್ನು ಸೆರೆ ಹಿಡಿದ ದೃಶ್ಯದ ಅಸ್ಪಷ್ಟ ರೂಪವು ಮನಮೋಹಕವಾಗಿ ಮೂಡಿದೆ. ಚಿತ್ರ ದೃಶ್ಯದಲ್ಲಿ ಎಳೆಯ ಬಿಸಿಲಿನ ಮಂಜಿನ ಜೊತೆಗೆ ಕಡಲೆ ಬೀಜ ಮಾರುವ ಹುಡುಗ ದೃಶ್ಯಕ್ಕೆ ಪ್ರಧಾನವಸ್ತುವಾಗಿದೆಯಾದರೂ ಒಟ್ಟು ಚಿತ್ರವೂ ಸಂಯೋಜನೆ ಸಮತೋಲನದಿಂದ ಕೂಡಿ ಚಿತ್ರಿತಗೊಂಡಿದೆ.

---

೧೮. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಛಾವಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೭೬.

೭. ಮೋಡಗಳ ಛಾಯಾಚಿತ್ರಣಗಳು :

"ಮೇಘ ಸಂದೇಶ" ಮಹಾಕವಿ ಕಾಳಿದಾಸನು ರಚಿಸಿದ ರಂಜನೀಯ ಮಹಾನ್ ಕೃತಿಯಾಗಿದ್ದು, ಚಲಿಸುವ ಮೋಡಗಳಿಗೆ ಮಹತ್ವದ ಸ್ಥಾನವನ್ನು ಕಲ್ಪಿಸಿದ್ದಾನೆ. ಕವಿಯ ಸುಂದರ ಸರಸ ಕಲ್ಪನೆಗಳ ಪ್ರೇಮ ಸಂದೇಶವನ್ನು ಒಯ್ಯುವ ಈ ಚಲಿಸುವ ಮೋಡಗಳು ಮುಖ್ಯ ವಾಹಕವಾಗಿವೆ. ಮೋಡಗಳನ್ನು ಕಂಡು ಆನಂದಿಸಿ ಹಾಡಿ ಹೊಗಳದೇ ಇರುವ ಕವಿ – ಕಲಾವಿದರಿಲ್ಲ. ನಿಸರ್ಗ ಒಂದು ಅತ್ಯಂತ ರಮಣೀಯ, ಆಕರ್ಷಣಿಯ ಸೃಷ್ಟಿ, ಚಲಿಸುವ ಮೋಡಗಳು. ಸುಂದರ ಭೂದೃಶ್ಯ ನಿರೂಪಣೆಯಲ್ಲಿ ಛಾಯಾಚಿತ್ರಕಲಾವಿದನ ಒಂದು ಯಶಸ್ವಿ ಪರಿಕರ ಈ ಮೋಡಗಳು. ಆದರೆ ಬರಿ ಮೋಡಗಳನ್ನು ಚಿತ್ರಿಸುವ ಛಾಯಾಚಿತ್ರಕಾರನು ಅಪರೂಪ. ಕೆಲವೇ ಕೆಲವು ಛಾಯಾಚಿತ್ರಕಾರರು ಕೇವಲ ಮೋಡಗಳ ಛಾಯಾಚಿತ್ರಗಳನ್ನೇ ನಿರ್ಮಿಸಿ ಪ್ರದರ್ಶಿಸಿ ಮೆಚ್ಚುಗೆ ಗಳಿಸಿದವರಾಗಿದ್ದಾರೆ.[೧೯]

ಮೋಡಗಳನ್ನು ವರ್ಗಿಕರಿಸುವುದು ಅಸಾಧ್ಯವಾದ ಕೆಲಸ. ಆದರೂ ಋತು, ಕಾಲಮಾನಗಳನ್ನು ಅನುಸರಿಸಿ ಮೋಡಗಳನ್ನು ವರ್ಗಿಕರಿಸಬಹುದಾಗಿದೆ. ಸಾಮಾನ್ಯವಾಗಿ ಒಂದೊಂದು ಋತುವಿನಲ್ಲಿ ಮೋಡಗಳು ಒಂದು ವಿಶಿಷ್ಟ ವರ್ಣವಿನ್ಯಾಸವನವನು ತಳೆಯುತ್ತವೆ. ಭಾವನಾತ್ಮಕ ಛಾಯಾಚಿತ್ರಗಳಲ್ಲಿ ಮೋಡಗಳು ಭಾವ ಪ್ರಚೋದಕವಾದ ಘಟನಾಂಶಗಳು, ಪ್ರಮುಖವಾಗಿ ಭೂದೃಶ್ಯ ಮತ್ತು ಸಾಗರ ದೃಶ್ಯಗಳಿಗೆ ಭಾವಪೂರ್ಣವಾದ ಉಚಿತವಾದ ಆಯಾಮ ಮತ್ತು ಅಂದಗಳನ್ನು ತುಂಬಿಸಲು ಮೋಡಗಳು ಅತ್ಯವಶ್ಯಕ ವಸ್ತುವಾಗಿದೆ.

"ಮೋಡಗಳ ಛಾಯಾಚಿತ್ರೀಕರಣಕ್ಕೆ ಅವುಗಳ ಹಾವಭಾವ, ಹರಿ ಭೇದಗಳ ಅಧ್ಯಯನವು ಅವಶ್ಯಕವಾಗಿದೆ. ಛಾಯಾಚಿತ್ರಕಾರನು ತಾನು ಚಿತ್ರಿಸಲಿರುವ ದೃಶ್ಯಗಳಲ್ಲಿ ಯಾವ ಬಗೆಯ ಭಾವವನ್ನು ತುಂಬಬೇಕೆಂದು ಇಚ್ಛಿಸುತ್ತಾನೋ ಆ ಭಾವವನ್ನೇ ಪ್ರಚೋದಿಸುವ ಮೋಡಗಳನ್ನುಳ್ಳ ಆಕಾಶವನ್ನು ಗಮನಿಸಿ ಬಳಸಿಕೊಳ್ಳಬೇಕು."[೨೦]

ಇಂತಹ ಎಲ್ಲ ಭಾವ ಪ್ರಧಾನವಾದ ಅಂಶಗಳನ್ನು ತಮ್ಮಲ್ಲಿ ಒಡಗೂಡಿಸಿಕೊಂಡು ಶಂಕರ ಪಾಟೀಲರು ಹಲವು ಮೋಡಗಳ ವಿವಿಧ ಛಾಯಾಚಿತ್ರ ನಿರೂಪಣೆಗಳನ್ನು ತಮ್ಮ ಛಾಯಾಚಿತ್ರಣ ಕಲೆಯಲ್ಲಿ ಚಿತ್ರಿಸಿದ್ದಾರೆ. ಅವುಗಳಲ್ಲಿ ಕೆಲವು ಪ್ರಮುಖ ಅತ್ಯಾಕರ್ಷಕ ಮೋಡಗಳ (ಸ್ಕಾಯ್ ಸ್ಕೇಪ್) ಛಾಯಾಚಿತ್ರಣಗಳನ್ನು ಅಧ್ಯಯನಕ್ಕೊಳಪಡಿಸಿ ವಿವೇಚಿಸಲಾಗಿದೆ.

---

೧೯. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಭಾವಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೭೯.
೨೦. ಅದೇ, ಪು. ೭೯.



ಚಿತ್ರ - ೧



ಚಿತ್ರ - ೨

ಚಿತ್ರ ೧, ೨. ರಲ್ಲಿ ಸುಂದರ ಭೂದೃಶ್ಯ ನಿರೂಪಣೆಯಲ್ಲಿ ಒಂದು ಯಶಸ್ವಿ ಪರಿಕರವನ್ನಾಗಿ ಮೋಡಗಳ ವಿವಿಧ ರಮಣಿಯ ಆಕರ್ಷಣಿಯ ಸೃಷ್ಟಿಯನ್ನು ಛಾಯಾಚಿತ್ರಣದ ಪ್ರಮುಖ ವಿಷಯ ವಸ್ತುವನ್ನಾಗಿ ಬಳಸಿಕೊಂಡು ಋತು, ಸಮಯ ಪ್ರಜ್ಞೆಯನ್ನು ಅನುಸರಿಸಿ ಮೋಡಗಳನ್ನು ಸ್ಥೂಲವಾಗಿ ವರ್ಗೀಕರಿಸಿ ರಚಿಸಿದ ಛಾಯಾಕೃತಿ ಇದಾಗಿದೆ. ಪಾಟೀಲರು ಬರಿ ಮೋಡಗಳನ್ನೇ ಚಿತ್ರೀಕರಿಸದೆ ಛಾಯಾಚಿತ್ರಣದ ಸಂಯೋಜನೆಯ ಸಮತೋಲನವನ್ನು ಕಂಡುಕೊಳ್ಳುವಲ್ಲಿ ಚಿತ್ರದ ಸ್ಥಳಾವಕಾಶದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಭೂಪಾತಳಿಯ ಕಡೆಗೆ ಗಮನಹರಿಸಿ ಮೋಡಗಳನ್ನು ಕಂಡು ಆನಂದಿಸಿ ರಮಣೀಯ ಸೃಷ್ಟಿಗೆ ಪ್ರೇರಿತರಾಗಿ ಚಲಿಸುವ ಮೋಡಗಳಿಗೆ ಪ್ರಾಧಾನ್ಯತೆಯನ್ನು ನೀಡಿ ಛಾಯಾಚಿತ್ರೀಕರಣ ಮಾಡಿದ್ದಾರೆ.

೮. ಪ್ರೇಕ್ಷಣೀಯ ಐತಿಹಾಸಿಕ ಸ್ಥಳಗಳ ಛಾಯಾಚಿತ್ರಣಗಳು :

ವಿಶ್ವದಲ್ಲೇ ಭಾರತ ದೇಶವು ಶಿಲ್ಪಕಲೆ ಮತ್ತು ವಾಸ್ತುವಿನ್ಯಾಸಕ್ಕೆ ಆಕರ್ಷಣೀಯ ತಾಣವಾಗಿ ಪ್ರಸಿದ್ಧಿ ಹೊಂದಿದೆ. ಉದಾ: ಹಂಪಿ, ಬೇಲೂರು, ಹಳೇಬೀಡು, ಅಜಂತಾ, ಎಲ್ಲೋರಾ, ಬಾದಾಮಿಯ ಗುಹೆಗಳಲ್ಲಿನ ಮೂರ್ತಿಶಿಲ್ಪ ತಾಜಮಹಲ್ಲಿನ ವಾಸ್ತುವಿನ್ಯಾಸ ಮುಂತಾದವುಗಳು ಮಧ್ಯಕಾಲಿನ ಮತ್ತು ಆಧುನಿಕ ವಾಸ್ತುವಿನ್ಯಾಸಗಳು ಛಾಯಾಚಿತ್ರಗ್ರಹಣಕ್ಕೆ ವಿಫುಲವಾದ ಅವಕಾಶ ಒದಗಿಸಿವೆ.

ಮೂರ್ತಿಶಿಲ್ಪವಾಗಲಿ, ಅಲಂಕಾರಿಕ ಶಿಲ್ಪವಾಗಲಿ ಇಡಿಯಾದುದಕ್ಕಿಂತ ಬಿಡಿಬಿಡಿಯಾಗಿ ಚಿತ್ರಿಸುವ ಚಿತ್ರ ಪ್ರೇಕ್ಷಕರ ಮೇಲೆ ಹೆಚ್ಚು ಪರಿಣಾಮಕಾರಿ, ರೂವಾರಿಗಳ ಕೈಚಳಕವನ್ನು ನಿರೂಪಿಸುವ ಸೂಕ್ಷ್ಮ ಕೆತ್ತನೆ ಕೆಲಸದ ಕಲಾಕೌಶಲ್ಯವನ್ನು ಎತ್ತಿ ತೋರಿಸಲು ಕಟಿಬಂಧ, ಕಿರೀಟ, ಕಂಕಣ ಮೊದಲಾದವುಗಳನ್ನು ಬಿಡಿಬಿಡಿಯಾಗಿ ಛಾಯಾಚಿತ್ರಣ ಮಾಡಿದರೆ ಹೆಚ್ಚು ಪರಿಣಾಮಕಾರಿಯಾಗಿ ಸ್ಪಷ್ಟ ಅರ್ಥವನ್ನು ನೀಡುತ್ತದೆ.

ಚಿತ್ರ ೧. ಈ ಛಾಯಾಚಿತ್ರಣದಲ್ಲಿ ಐತಿಹಾಸಿಕ ಪ್ರಾಚೀನ ಕಟ್ಟಡವನ್ನು ಮೇಲ್ತುದಿಯವರೆಗೂ ಕಾಣುವ ಹಾಗೆ ಕ್ಯಾಮರಾದ ಕ್ಷೇತ್ರದರ್ಶಿಕೆಯಲ್ಲಿ ತ್ರಿಪಾದಿಯ ಮೇಲೆ ಭದ್ರವಾಗಿರಿಸಿ ಬೇರೆ ಬೇರೆ ಸಂಗಮ ದೂರದ ಮಸೂರಗಳನ್ನು ಬಳಸಿ ಚಿತ್ರ ರಚಿಸಿರುವ ಪಾಟೀಲರು ಪ್ರಾಚೀನ ಕಟ್ಟಡದ ಚಿತ್ರೀಕರಣದಲ್ಲಿ ಯಥಾದರ್ಶನದತ್ತ ಹೆಚ್ಚು ಗಮನಹರಿಸಿ ಕಟ್ಟಡದ ಆಕಾರ, ಆಯಾಮಗಳನ್ನು ಏಕರೂಪಿಯ ವರ್ಣ ಸಂಯೋಜನೆಯಲ್ಲಿ ನೆರಳು ಬೆಳಕಿನ ರೂಪಗಳನ್ನು ಯಶಸ್ವಿಯಾಗಿ ಚಿತ್ರಿಸುವಲ್ಲಿ ಪಾಟೀಲರ ಈ ಛಾಯಾಚಿತ್ರಣ ವೈಶಿಷ್ಟ್ಯ ನಿರೂಪಣೆಯ ಕೃತಿಯಾಗಿ ಮೂಡಿಬಂದಿದೆ.



ಚಿತ್ರ – ೧



ಚಿತ್ರ – ೨

ಕಪ್ಪು ಬಿಳುಪು ಛಾಯಾಚಿತ್ರಗಳು

ಚಿತ್ರ ೨. ದೇವಾಲಯಗಳ ಛಾಯಾಚಿತ್ರಣಕ್ಕಾಗಿ ಚಿತ್ರೀಕರಣಕ್ಕಾಗಿ ನಿಗದಿತ ಸ್ಥಳವನ್ನು ಆಯ್ದುಕೊಂಡು, ಚಿತ್ರೀಕರಣದಲ್ಲಿ ಸ್ಥಾನ ಪ್ರಮಾಣ, ನಿಲುವು ಮುಂತಾದ ಪ್ರಮುಖ ಅಂಶಗಳನ್ನು ಪಾಟೀಲರ ಈ ಛಾಯಾಚಿತ್ರಣದಲ್ಲಿ ಕಾಣಬಹುದು. ದೇವಾಲಯದ ವಾಸ್ತು ರೂಪಿಕೆ, ವರ್ಣ ಮತ್ತು ರೇಖಾವಿನ್ಯಾಸವನ್ನು ಪ್ರಖರವಾದ ಬೆಳಕಿನಲ್ಲಿ ಸಮರ್ಪಕವಾಗಿ ದ್ರಗ್ಗೋಚರ ಪರಿಣಾಮ ಬೀರುವಂತೆ ಹಿನ್ನೆಲೆಯ ಪರಿಸರದಿಂದ ಬೆರ್ಪಡಿಸಿ ಕಣ್ಣ್ ಸೆಳೆಯುವ ಕಲಾಕೃತಿ ಇದಾಗಿದೆ.

೯. ಕ್ಲೋಸಪ್ ಪೋಟೋಗ್ರಾಫಿ (ಅತೀ ಹತ್ತಿರದ ಛಾಯಾಚಿತ್ರಣ) :

ಯಾವುದಾದರೂ ಒಂದು ವಸ್ತುವನ್ನು ತೀರ ಹತ್ತಿರದಿಂದ ಛಾಯಾ ಚಿತ್ರೀಕರಿಸುವುದಕ್ಕೆ ಕ್ಲೋಸಪ್ ಪೋಟೋಗ್ರಾಫಿ ಎಂದು ಕರೆಯುವರು. ಸಾಮಾನ್ಯವಾಗಿ "ಹತ್ತಿರದಿಂದ" ಎಂಬ ಪದವು ತಾರತಮ್ಯ ಅರ್ಥದಿಂದ ಕೂಡಿದೆ. ಛಾಯಾಚಿತ್ರೀಕರಿಸಲ್ಪಡುವ ವಸ್ತುವಿಗೆ ಕ್ಯಾಮರಾದಿಂದ ಇರುವದೂರ ಎಷ್ಟು "ಹತ್ತಿರ" ಎಂಬ ಪ್ರಶ್ನೆ ಬರುತ್ತದೆ. "ಸಾಮಾನ್ಯವಾಗಿ ಛಾಯಾಚಿತ್ರಕಲೆ ಮತ್ತು ತಂತ್ರ ರೀತ್ಯಾ ಒಂದು ವಸ್ತುವನ್ನೋ ಅಥವಾ ಮನುಷ್ಯನ ದೇಹದ ಭಾಗವನ್ನೋ ಕ್ಯಾಮರಾದಿಂದ ಒಂದು ಮೀಟರನಷ್ಟು ಮತ್ತು ಅದಕ್ಕೂ ಹೆಚ್ಚು ಹತ್ತಿರದಿಂದ ಚಿತ್ರೀಕರಿಸುವುದಕ್ಕೆ ಕ್ಲೋಸ- ಅಪ್ ಪೋಟೋಗ್ರಾಪಿ ಎನ್ನಬಹುದು."[೨೧]

ಕೆಲವು ವಸ್ತುಗಳನ್ನು, ಕ್ರಿಮಿ, ಕೀಟಗಳನ್ನು ಅತ್ಯಂತ ಹತ್ತಿರದಿಂದ ಛಾಯಾ ಚಿತ್ರೀಕರಿಸಿದರೆ ಅದರ ರೂಪ, ಅಂದ ಚೆಂದ ಒಂದು ಬಗೆಯ ಅಕರ್ಷಣೆಯ ವಿನ್ಯಾಸ ಮತ್ತು ಸೊಬಗನ್ನು ಕಾಣಬಹುದು. ಉದಾ: ಹಲವು ಬಗೆಯ ಕೀಟಗಳ, ಚಿಕ್ಕ ಹೂಗಳ, ಅಂಚೆ ಚೀಟಿಗಳು, ನಾಣ್ಯಗಳು, ತರಕಾರಿ, ಇತ್ಯಾದಿಗಳು. ಇಂತಹುಗಳನ್ನು ಆಯ್ದು ಕ್ಲೊಸಪ್ ಚಿತ್ರೀಕರಣದಿಂದ ಮೂಡಿಬಂದ ಚಿತ್ರಣವು ಸಾಮಾನ್ಯವಾಗಿ ನೋಡುಗರ ಗಮನ ಸೆಳೆಯುವುದು.


ಕ್ಲೋಸಪ್ ಪೋಟೋಗ್ರಾಫಿಯ ಛಾಯಾಚಿತ್ರಕಾರನು ವಸ್ತುಸ್ಥಾನಭ್ಯಾಸದ ದೃಷ್ಟಿ ದೋಷಕ್ಕಾಗಿ ತೊಂದರೆ ಪಡಬೇಕಾಗಿಲ್ಲ. ಪ್ರಾಯಶಃ ಕ್ಯಾಮರಾಗಳ ವಿನ್ಯಾಸ ಮತ್ತು ರಚನಾ ತಂತ್ರಗಳಲ್ಲಿ ನಮ್ಮ ಊಹೆಗೂ ನಿಲುಕಲಾರದಷ್ಟು ಗಣನೀಯವಾದ ಪರಿವರ್ತನೆಗಳಾಗಿ, ಅಭಿವೃದ್ಧಿಯಾಗಿದೆ.

---

೨೧. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಭಾವಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೯೮.



ಚಿತ್ರ – ೧



ಚಿತ್ರ – ೨

ಕ್ಲೋಸಪ್ ಛಾಯಾಚಿತ್ರ

ಎಲ್ಲ ವಿಧದ ಛಾಯಾಚಿತ್ರೀಕರಣಕ್ಕೂ ಬೆಳಕು ಅವಶ್ಯಕ. ಅದರಂತೆ ಕ್ಲೋಸಪ್ ಪೋಟೋಗ್ರಾಪಿಗೂ ಅವಶ್ಯಕವಾಗಿದೆ. ಹೊರಾಂಗಣದ ಕ್ಲೋಸಪ್ ಪೋಟೋಗ್ರಾಪಿಯಲ್ಲಿ ಪ್ರಕೃತಿ ಬೆಳಕನ್ನು ಅವಲಂಬಿಸಿ ಕ್ಯಾಮರಾ ಕೋನಗಳನ್ನು ನೆರಳು ಬೆಳಕಿಗನುಗುಣವಾಗಿ ಬದಲಾಯಿಸಿ ಚಿತ್ರಿಕರಿಸಿದರೆ ಒಳಾಂಗಣದ ಕ್ಲೋಸಪ್ ಪೋಟೋ ಗ್ರಾಫಿಯಲ್ಲಿ ಚಿತ್ರೀಕರಿಸುವ ವಸ್ತುವಿನ ಆಕಾರವು ಸ್ಪಷ್ಟವಾಗಿ, ಅಕರ್ಷಣಿಯವಾಗಿ ಮೂಡಿ ಬರುವಂತೆ ವಿದ್ಯಚ್ಛಕ್ತಿಯ ಬೆಳಕನ್ನೋ ಅಥವಾ ಪ್ಲ್ಯಾಷ್ ಬೆಳಕನ್ನೋ ಬಳಸಿ ಚಿತ್ರೀಕರಿಸುವಲ್ಲಿ ಛಾಯಾಚಿತ್ರಕಾರನ ಗಮನ ಹರಿಸಬೇಕಾದುದು ಅವಶ್ಯಕವಾಗಿದೆ.

"ಪೋಟೋಗ್ರಾಪಿ ಕ್ಷೇತ್ರದಲ್ಲಿ ಕ್ಲೋಸಪ್ ಪೋಟೋಗ್ರಾಪಿಯು ಆಕರ್ಷಣಿಯವಾದ ಮತ್ತು ಛಾಯಾಚಿತ್ರಕಾರನ ಸಮಾಧಾನ, ಜಾಗರೂಕತೆ, ತಾಳ್ಮೆ ಮತ್ತು ತಂತ್ರಗಳ ಮೇಲಿನ ಹಿಡಿತವನ್ನು ಅಳೆಯುವ ಒಂದು ಸಾಧನವಾಗಿದೆ. ಪೋಟೋಗ್ರಾಫಿಯ ಇತರ ಕ್ಷೇತ್ರ ಮತ್ತು ವಿಭಾಗಗಳಲ್ಲಿ ಕೆಲಸ ಮಾಡಿ ಬೇಸರಿಕೆ ಬಂದಾಗ ಕ್ಲೋಸಪ್ ಆಪ್ ಪೋಟೋಗ್ರಾಫಿಯಲ್ಲಿ ಕೈ ಆಡಿಸುವುದು ಛಾಯಾಚಿತ್ರಕಾರನ ಅಪೇಕ್ಷಣೀಯ ಹವ್ಯಾಸವಾಗಿದೆ.

ಛಾಯಾಚಿತ್ರಣ ಕಲೆಯಲ್ಲಿ, ವಿವಿಧ ವಿಭಾಗಗಳಲ್ಲಿ ಪಾಟೀಲರೂ ಛಾಯಾಚಿತ್ರಣಗಳನ್ನು ರಚಿಸುತ್ತಾ ಹೊರಾಂಗಣ ಮತ್ತು ಒಳಾಂಗಣಗಳಲ್ಲಿ ಸಾಕಷ್ಟು ಕ್ಲೋಸಪ್ ಪೋಟೋಗ್ರಾಫಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ವಸ್ತುಗಳಿಗೆ ತಕ್ಕಂತೆ ವಿವಿಧಕೋನಗಳಲ್ಲಿ ಹಲವು ತಂತ್ರಗಳನ್ನು ಬಳಸಿ ಛಾಯಾಚಿತ್ರೀಕರಣ ರಚಿಸಿದ್ದಾರೆ. ಅವುಗಳಲ್ಲಿ ಕೆಲವು ಛಾಯಾಚಿತ್ರ ಕಲಾಕೃತಿಗಳ ಕುರಿತು ಮತ್ತು ವಸ್ತು ವಿಷಯವನ್ನು ಈ ಕೆಳಗೆ ವಿವರಿಸಲಾಗಿದೆ.

ಚಿತ್ರ ೧. ನಗ್ನ ರೂಪದರ್ಶಿಯನ್ನು ಬಳಸಿಕೊಂಡು ಅತೀ ಹತ್ತಿರದಿಂದ ಸೆರೆಹಿಡಿದ ಈ ಚಿತ್ರವು ಆಕರ್ಷಣಿಯವಾಗಿ ಮೂಡಿಬಂದಿದೆ. ಚಿತ್ರದಲ್ಲಿ ರೂಪದರ್ಶಿಯ ಮುಖಭಾವ ಮತ್ತು ದೇಹದ ಭಾಗಕ್ಕೆ ಕಿಟಕಿಯಿಂದ ಹೊರಸೂಸುವ ಬಿಸಿಲಿನ ಪ್ರಖರ ಬೆಳಕಿಗೆ ಎದುರಾಗಿ ಕುಳ್ಳಿರಿಸಿ ಚಿತ್ರಿತಗೊಳಿಸಲಾಗಿದೆ. ರೂಪದರ್ಶಿಯ ಮುಖದಲ್ಲಿ ಮುಗ್ಧತೆಯ ಭಾವರೂಪವನ್ನು ವಿವಿಧ ತಂತ್ರಗಳನ್ನು ಅಳವಡಿಸಿ ಚಿತ್ರಿಕರಿಸಿದ್ದಾರೆ.

ಚಿತ್ರ ೨. ಈ ಚಿತ್ರದಲ್ಲಿ ವ್ಯಕ್ತಿಯ ಮುಖಭಾವ ಚಿತ್ರವನ್ನು ಅತೀ ಹತ್ತಿರದಿಂದ ಸ್ಥಾನಮಾನ, ಗಾತ್ರ, ಆಕಾರ, ರೂಪ–ಭಾವಗಳು ಸ್ಪಷ್ಟವಾಗಿ ಚಿತ್ರೀಕರಿಸಲಾಗಿದೆ. ಚಿತ್ರದಲ್ಲಿ ಮುಖದ ಭಾವಲಕ್ಷಣಗಳನ್ನು ಸ್ಫೂಟವಾಗಿ ಎದ್ದು ತೋರಬೇಕೆಂಬ ಹಿನ್ನೆಲೆಯಲ್ಲಿ ವಿದ್ಯುತ್ ಪ್ರಕಾಶಮಯ ಬೆಳಕನ್ನು ಮುಖಭಾವಕ್ಕೆ

ಪ್ರಯೋಗಿಸಿ ಹಿನ್ನೆಲೆಯಲ್ಲಿ ದಟ್ಟ ಕಪ್ಪು ಛಾಯೆಯನ್ನು ನಿರ್ಮಿಸಿ ರಚಿಸಿದ ಛಾಯಾಚಿತ್ರಣವು ಅಸ್ಪಷ್ಟವಾಗಿ ಕಂಡುಬಂದರೂ ಪಾಟೀಲರ ಸೃಜನಾತ್ಮಕ ಪ್ರಯೋಗಶೀಲ ಗುಣಗಳನ್ನು ಚಿತ್ರಕಲಾಕೃತಿಯಲ್ಲಿ ಕಾಣಬಹುದು.

೧೦. ಎಸಕಗಳ ಛಾಯಾಚಿತ್ರಣ (ಆಕ್ಷನ್ ಫೋಟೋಗ್ರಾಫಿ) :

ಈ ಮೇಲೆ ಹೇಳಿದಂತೆ ಛಾಯಾಚಿತ್ರಣಕಲೆಯಲ್ಲಿ ವಿವಿಧ ವಿಭಾಗಳಿವೆ. ಮತ್ತು ಒಂದಕ್ಕೊಂದು ಅದರದೆ ಆದ ಕಲೆ ಮತ್ತು ತಂತ್ರಗಳಿವೆ. ಅವುಗಳಲ್ಲಿ ಎಸಕದ ಛಾಯಾಚಿತ್ರಣ ಒಂದು ಮುಖ್ಯವಾದ ವಿಭಾಗ. ಆಧುನಿಕ ಜನಜೀವನದಲ್ಲಿ ಕ್ರೀಡಾ ವಿನೋದಗಳು ಎಷ್ಟು ಪ್ರಾಮುಖ್ಯತೆಯನ್ನು ಪಡೆದಿವೆಯೋ ಅಷ್ಟೇ ಮುಖ್ಯ ಸ್ಥಾನವನ್ನು ಪಡೆದಿದೆ. ಈ ಎಸಕದ (Action) ಛಾಯಾಚಿತ್ರಣ ಕಲೆ.


"ಇಂದು ಯಶಸ್ವಿಯಾದ ಮನಸೆಳೆದ ಎಸಕಗಳ ಛಾಯಾಚಿತ್ರಣವು ಹವ್ಯಾಸಿ ಛಾಯಾಚಿತ್ರಗಾರನಿಗೆ ಒಂದು ರೋಮಾಂಚನೀಯ ಅನುಭವ, ವೃತ್ತಿ ಛಾಯಾಚಿತ್ರಕಾರನಿಗೆ ಅವನ ತಂತ್ರ ಕೌಶಲ್ಯದ, ಮಟ್ಟದ ಒಂದು ಪರೀಕ್ಷೆ. ಅಪರೂಪವಾದ ಅಪೂರ್ವವಾದ ಸಂದರ್ಭಗಳಲ್ಲಿಯ ಎಸಕಗಳ ಛಾಯಾಚಿತ್ರಗಳ ನಿರ್ಮಾಣವು ತೃಪ್ತಿದಾಯಕ ಒಂದೇ ಅಲ್ಲದೆ ಹೆಮ್ಮೆ ಪಟ್ಟುಕೊಳ್ಳುವ ಕಾರ್ಯವು ಹೌದು."[೨೨]

ಇಂದಿನ ದಿನಮಾನಗಳಲ್ಲಿ ಮಾರುಕಟ್ಟೆಯಲ್ಲಿ ದೊರೆಯುವ ಪತ್ರಿಕೆಗಳಲ್ಲಿ ಮುಖ್ಯವಾಗಿ ಕ್ರೀಡೆಗಳ ವಿಚಾರಗಳನ್ನು ಪ್ರಕಟಿಸುವ ಸ್ಪೋರ್ಟ್ಸ್‌ಸ್ಟಾರ್, ಸ್ಪೋರ್ಟ್ಸ್‌ವೀಕ್ ಮೊದಲಾದ ದಿನಪತ್ರಿಕೆಗಳಲ್ಲಿ ಎಸಕಗಳ ಉತ್ತಮ ಛಾಯಾಚಿತ್ರಣಗಳನ್ನು ನೋಡಬಹುದು.


"ಯಶಸ್ವಿಯಾದ ಎಸಕಗಳ ಛಾಯಾಚಿತ್ರಣಕ್ಕೆ ಸಾಮಾನ್ಯವಾಗಿ ಛಾಯಾಚಿತ್ರಕಾರನ ಸಮಯ ವಿಧಾನ, ಪ್ರಜ್ಞೆ, ಚಿತ್ತ ಸ್ಥೈರ್ಯ, ಕ್ಯಾಮರಾವನ್ನು ಅಲುಗಾಡಿಸದೇ ಹಿಡಿಯುವ ಕೈಚಳಕ, ಎಸಕಗಳಲ್ಲಿ ಮುಂಬರುವ ಘಟನೆಗಳನ್ನು ಊಹಿಸಿ ತಟ್ಟನೆ ನಿರ್ವಹಿಸುವ ಅನುಭವಗಳು, ಛಾಯಾಚಿತ್ರಣದ ತಂತ್ರಕೌಶಲ ಇವೆಲ್ಲವುಗಳನ್ನೂ, ನೋಡಿ ಅಥವಾ ಕಲಿತು ತಿಳಿಯುವುದಕ್ಕಿಂತಲೂ ಸತತವಾಗಿ ಪ್ರಾಯೋಗಿಕವಾಗಿ ತನ್ನನ್ನು ತೊಡಗಿಸಿಕೊಂಡರೆ ಪ್ರವೀಣತೆ ಮತ್ತು ಪೂರ್ಣತೆಗಳು ಸಿದ್ಧಿಸುತ್ತವೆ."[೨೩]

---

೨೨. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಭಾವಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೧೦೨.
೨೩. ಅದೇ, ಪು. ೧೦೩.



ಚಿತ್ರ – ೧



ಚಿತ್ರ – ೨



ಚಿತ್ರ – ೩



ಚಿತ್ರ – ೪

ಎಸಕಗಳ ಛಾಯಾಚಿತ್ರಣದ ಸಮಯದಲ್ಲಿ ಚಿತ್ರೀಕರಿಸುವ ವಸ್ತುಗಳನ್ನು ಸ್ಥಬ್ದಗೊಳಿಸಬೇಕೆ ಅಥವಾ ಚಲಿಸುತ್ತಿರುವ ಚಲನೆಯನ್ನು ತೋರಿಸಬೇಕೆ ಎಂಬ ಒಂದು ಪ್ರಶ್ನೆ ಪ್ರಚಲಿತವಾಗಿದೆ. ಇದು ಆಯಾ ಛಾಯಾಚಿತ್ರಕಾರರ ವೈಯಕ್ತಿಕ ಅಭಿರುಚಿಯಾಗಿದ್ದು, ಆದ್ದರಿಂದ ಅವರವರ ಅಭಿರುಚಿಗೆ ತಕ್ಕಂತೆ ನಿರ್ಧರಿಸಬಹುದು. ಶಂಕರ ಪಾಟೀಲರು ಈ ರೀತಿಯ ಎಸಕದ ಛಾಯಾಚಿತ್ರಣಗಳನ್ನು ಶೈಕ್ಷಣಿಕ ಸಂದರ್ಭದಲ್ಲಿ ಹಾಗೂ ಹವ್ಯಾಸಿ ಛಾಯಾಚಿತ್ರಕಾರರಾಗಿ ವಿವಿಧ ಪ್ರದೇಶಗಳಲ್ಲಿನ ಕೆಲವು ಛಾಯಾಚಿತ್ರಣಗಳನ್ನು ಚಿತ್ರಿಸಿದ್ದಾರೆ. ಇಂತಹ ಆಯ್ದ ಕೆಲವು ಎಸಕದ ಛಾಯಾಚಿತ್ರಣಗಳನ್ನು ಇಲ್ಲಿ ಅಧ್ಯಯನಕ್ಕೊಳಪಡಿಸಿ ವಸ್ತು ವಿಷಯವನ್ನು ಈ ಕೆಳಗೆ ವಿವರಿಸಲಾಗಿದೆ.

ಚಿತ್ರ ೧, ೨, ೩, ೪ರ ಛಾಯಾಚಿತ್ರಗಳು ಸಮುದ್ರ ದೃಶ್ಯಗಳನ್ನೊಳಗೊಂಡಿದ್ದು, ಚಿತ್ರ ಸಂಖ್ಯೆ ೧ ಮತ್ತು ೨ರಲ್ಲಿ ನೀರಾಟದಲ್ಲಿ ತೊಡಗಿದ ಮಕ್ಕಳು ಮೇಲಿನಿಂದ ನೀರಿಗೆ ಹಾರುತ್ತಿರುವ ದೃಶ್ಯದ ಚಿತ್ರಣದಲ್ಲಿ ತೀವ್ರತೆ ಮತ್ತು ಚಲನೆಯನ್ನು ಕಾಣಬಹುದು. ಪಾಟೀಲರು ವಿಶಿಷ್ಟ ತಂತ್ರಗಳನ್ನು ಅಳವಡಿಸಿ ಚಲಿಸುವ ವಸ್ತುಗಳ ವೇಗಕ್ಕೂ ಅದು ಚಲಿಸುತ್ತಿರುವ ಕೋನಗಳಿಗೂ ಭಿನ್ನವಾಗಿ ಸೃಷ್ಟಿಸಿದ್ದು, ಚಿತ್ರೀಕರಿಸಿದ ವಸ್ತುಗಳ ವೇಗವನ್ನು ಸ್ತಬ್ಧಗೊಳಿಸಿ ಚಿತ್ರವನ್ನು ಸೆರೆಹಿಡಿದಿದ್ದಾರೆ. ಜೊತೆಗೆ ಸ್ತಬ್ಧಗೊಳಿಸಿದ ಚಿತ್ರಣದಲ್ಲಿ ಚಲನೆಯನ್ನು ತೋರಿಸಿದ್ದಾರೆ.

ಚಿತ್ರ ೩. ರಲ್ಲಿ ಸಮುದ್ರದ ದಡದಲ್ಲಿ ನಾಲ್ಕಾರು ಜನ ದೋಣಿಯನ್ನು ತಳ್ಳುತ್ತಿರುವಂತೆ ನಾಲ್ಕಾರು ಜನರ ವಿವಿಧ ಭಂಗಿಗಳನ್ನು ಅವರ ಹಾವಭಾವಗಳ ತೀವ್ರತೆಯನ್ನು ಈ ದೃಶ್ಯದಲ್ಲಿ ಕಾಣಬಹುದು. ಈ ಮೂರು ಚಿತ್ರಗಳು (ವರ್ಣ) ಸಂಯೋಜನೆಯಲ್ಲಿ ಏಕರೂಪಿಯ ಕಪ್ಪು ಬಿಳುಪು ಮಾಧ್ಯಮದಲ್ಲಿ ರಚಿತಗೊಂಡರೂ ನೆರಳು ಬೆಳಕಿನ ಛಾಯಾಂಕನದಲ್ಲಿ ವಿವಿಧತೆಯನ್ನು ಕಾಣಬಹುದು.


ಚಿತ್ರ ೪. ರಲ್ಲಿ ಸಮುದ್ರದ ದಡದಲ್ಲಿ ಇಬ್ಬರು ಮಕ್ಕಳು ಭಾರವಾದ ವಸ್ತುವೊಂದನ್ನು ಎತ್ತುವಲ್ಲಿ ಇನ್ನೊಬ್ಬಳು ಸಹಾಯ ಮಾಡುತ್ತಿರುವಂತೆ, ದೃಶ್ಯದಲ್ಲಿ ಹಿನ್ನೆಲೆಯಲ್ಲಿ ಸಮುದ್ರದ ರಭಸವಾದ ತೆರೆಗಳ ಅಲೆಗಳನ್ನು ಸ್ತಬ್ಧಗೊಳಿಸಿ ಚಿತ್ರಿಸಿದ್ದಾರೆ. ಚಿತ್ರದಲ್ಲಿ ಮಕ್ಕಳ ಭಾವ ಭಂಗಿಗಳಲ್ಲಿ ವ್ಯತ್ಯಾಸವಿದ್ದು ಅಸ್ಪಷ್ಟವಾಗಿ ಕಂಡುಬಂದರೂ ವಾಸ್ತವಿಕ ಸನ್ನಿವೇಶವನ್ನು ಕೇಂದ್ರೀಕರಿಸಿ ಪಾಟೀಲರ ಸಮಯಾವಧಾನ, ಪ್ರಜ್ಞೆ, ಚಿತ್ತ, ಸ್ಥೈರ್ಯ, ಛಾಯಾಚಿತ್ರಣದ ಪ್ರಾವೀಣ್ಯತೆ, ಪೂರ್ಣತೆಗಳನ್ನು ಸಿದ್ಧಿಸುವಲ್ಲಿ ಅಭಿವ್ಯಕ್ತಿಗೆ ಅನುಗುಣವಾಗಿ ದೃಶ್ಯವನ್ನು ಸೆರೆ ಹಿಡಿಯುವಲ್ಲಿ ತಂತ್ರ ಕೌಶಲ್ಯಗಳನ್ನು ಕರಗತಗೊಳಿಸಿ ಸೃಷ್ಟಿಸಿದ್ದಾರೆ. ಹೀಗೆ ಈ ಮೇಲಿನ ಎಸಕದ ಛಾಯಾಚಿತ್ರಣಗಳು ರೋಮಾಂಚನೀಯ ಅನುಭವವನ್ನು ನೀಡುತ್ತವೆ.



ಚಿತ್ರ – ೫



ಚಿತ್ರ ೧



ಚಿತ್ರ ೨

ಚಿತ್ರ ೫. ಛಾಯಾಚಿತ್ರಣದ ಮೂಲ ವಸ್ತುವಿಗೆ ಒಂದೇ ವಿಧವಾದ ಬೆಳಕಿನ ಪ್ರಸರಣವನ್ನು ನೀಡದೆ ಹೆಚ್ಚು ಪ್ರಕಾಶಮಾನವಾದ ಬೆಳಕನ್ನು ಪರಿಣಾಮಕಾರಿಯಾಗಿ ಬೇರೆ ಬೇರೆ ಕೋನಗಳಲ್ಲಿ ಪ್ರಜ್ವಲಿಸುತ್ತಿದ್ದು, ಹಿನ್ನೆಲೆಯಲ್ಲಿ ದಟ್ಟ ಕಪ್ಪು ಛಾಯೆಯನ್ನು ಆವರಿಸಿಕೊಂಡ ಈ ದೃಶ್ಯದಲ್ಲಿ ವ್ಯಕ್ತಿಯ ಮುಖ ಭಾವ-ಭಂಗಿ, ಸಮರ್ಪಕವಾಗಿ ಮೂಡಿಬಂದಿದೆ. ಹೀಗೆ ಎಸಕಗಳ ಛಾಯಾಚಿತ್ರಣದಲ್ಲಿ ವ್ಯಕ್ತಿಯ ಅಭಿವ್ಯಕ್ತಿ, ರೂಪ ಚಲನೆಯನ್ನು ವಿಶಿಷ್ಟ ತಂತ್ರ ಕೌಶಲ್ಯದಿಂದ ಚಿತ್ರೀಕರಿಸಿದ್ದಾರೆ.

ಚಿತ್ರ ೬. ಕಾಲನ್ನು ಮೇಲಕ್ಕೆತ್ತಿ ತುಸು ಮುಂದೆ ಬಾಗಿ ಆಗಸದತ್ತ ನೋಡುತ್ತಿರುವ ಕುಮಾರಿಯ ದೃಶ್ಯ ಚಿತ್ರಣದಲ್ಲಿ ಪಾಟೀಲರು ಚಲನೆಯ ಸ್ವಭಾವವನ್ನು ತೋರಿಸಬೇಕೆಂಬ ಆಪೇಕ್ಷೆಯಿಂದ ಕುಮಾರಿಯ ದೇಹ ಭಾಗದ ಅಂಗಗಳ ಚಲನೆಯನ್ನು ಸ್ತಬ್ಧಗೊಳಿಸಿ ಛಾಯಾಚಿತ್ರೀಕರಿಸುವ ಜೊತೆಗೆ ಆಕೆಯ ಮುಖ ಭಾವ ಲಕ್ಷಣ ವಿಶಿಷ್ಟವಾದ ಉಡುಗೆ ತೊಡುಗೆಗಳತ್ತ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿ ಪ್ರಕೃತಿ ಸಹಜವಾದ ಬೆಳಕಿನಲ್ಲಿ ಛಾಯಾಚಿತ್ರಣವು ಫುಟ್‌ಬಾಲ್ ಕ್ರೀಡೆಯಲ್ಲಿನ ಭಾವ ಭಂಗಿಗಳನ್ನು ಹೋಲುವಂತೆ ರಚಿತವಾಗಿವೆ.

ಚಿತ್ರ ೭. ಈ ಎಸಕದ ಛಾಯಾಚಿತ್ರಣದಲ್ಲಿ ವ್ಯಕ್ತಿಯ ಹಾವಭಾವವು ಪ್ರಚೋದಕವಾಗಿ ಪ್ರಕಾಶಮಾನವಾದ ಬೆಳಕನ್ನು ವ್ಯಕ್ತಿಯ ಮುಖದ ಅರ್ಧ ಭಾಗಕ್ಕೆ ಮಾತ್ರ ಪಸರಿಸಿ ಇನ್ನೂಳಿದ ಭಾಗವನ್ನು ನೆಗೆಟಿವ್ ಮಾದರಿಯಲ್ಲಿ ಚಿತ್ರರಚನಾ ತಂತ್ರ, ಕೌಶಲ್ಯದೊಂದಿಗೆ ಭಿನ್ನ ರೀತಿಯ ಮಸೂರಗಳನ್ನು ಪ್ರಯೋಗ ಮಾಡಿದ್ದಾರೆ. ಹಾಗೂ ಮೂಲ ಚಿತ್ರ ಪ್ರಭಾವಶಾಲಿಯಾಗಿ ಕಂಡುಬರಲು ಹಿನ್ನೆಲೆಯ ದೃಶ್ಯದಲ್ಲಿ ಏನನ್ನೂ ತೋರಿಸದೆ ಗಾಢವಾದ ಕಪ್ಪು ಛಾಯೆಯನ್ನು ಬಳಸಿ ರಚಿಸಿದ ಕಲಾಕೃತಿಯಲ್ಲಿ ಪಾಟೀಲರ ಪ್ರಯೋಗಶೀಲ ಅಭಿವ್ಯಕ್ತಿ ಮತ್ತು ಸೃಜನಶೀಲತೆ ಗುಣಗಳನ್ನು ಕಾಣಬಹುದು.

೧೧. ಸಿಲುಏಟ್ ಛಾಯಾಚಿತ್ರಗಳು :

"ಗೋಡೆಯ ಮೇಲೆ ಮತ್ತು ನೆಲದ ಮೇಲೆ ಬೀಳುವ ನೆರಳುಗಳು, ಅವುಗಳ ವಿವಿಧ ಆಕಾರಗಳು, ಅವುಗಳ ಆಕರ್ಷಣೀಯ ವಿನ್ಯಾಸಗಳೂ, ಮತ್ತು ಅವುಗಳು ರೂಪರೂಪಿಕೆಗಳು ಜನಸಾಮಾನ್ಯರ ಮನಸೆಳೆಯುತ್ತವೆ. ಅನಾದಿಯಿಂದಲೂ ಮನುಷ್ಯನು ನೆರಳು ಚಿತ್ರಗಳಿಂದ ಆಕರ್ಷಿತನಾಗಿದ್ದಾನೆ. ನೆರಳೂ ಚಿತ್ರಗಳ ಆಟ ನಾಟಕಗಳನ್ನೂ ಸಹ ನಿರ್ಮಿಸುವ ಪ್ರಯತ್ನ ಮಾಡಿದ್ದಾನೆ. ಬಿಳಿಯ ಪರದೆಯ ಮೇಲೆ ಅಚ್ಚ ಕರಿಯ ಗೊಂಬೆಗಳು ಕುಣಿಕುಣಿದು ಮಕ್ಕಳ ಮನದಲ್ಲಿ

ಸಂತಸದ ಬುಗ್ಗೆಯನ್ನು ಎಬ್ಬಿಸಿ ಅವರನ್ನು ನಗೆಗಡಲಲ್ಲಿ ಓಲಾಡಿಸಿದ್ದನ್ನು ನಾವು ಕಂಡಿದ್ದೇವೆ. ಛಾಯಾಚಿತ್ರರಂಗದಲ್ಲಿಯೂ ಸಹ ಅಂತಹ ಸುಂದರ ವಿನ್ಯಾಸ ಭರಿತ ಛಾಯಾಚಿತ್ರಗಳು ತಮ್ಮದೇ ಆದ ಪ್ರತ್ಯೇಕ ಸ್ಥಾನಮಾನವನ್ನು ಪಡೆದಿವೆ.

ಬೆಳಕಿನ ಮೂಲಕ್ಕೆ ಎದುರಾಗಿ ನಿಂತಿರುವ ವಸ್ತು ಅಥವಾ ವ್ಯಕ್ತಿಗಳ ನೆರಳು ಬೆಳಕಿನ, ಹಿನ್ನೆಲೆಯ ಮೇಲೆ ಕಪ್ಪು ಆಕಾರಗಳಾಗಿ ಕಾಣುತ್ತವೆ. ನೆರಳಿನ ಚಿತ್ರಗಳಲ್ಲಿ ವರ್ಣ ಪ್ರಸರಣವಾಗಲಿ, ಛಾಯಾಂತರವಾಗಲಿ ಇರುವುದಿಲ್ಲ. ಅದು ಶುದ್ಧ ಕಪ್ಪು-ಬಿಳುಪು ಚಿತ್ರ, ಚಿತ್ರದ ಹರಿವಿನ ಆದ್ಯಂತ ಶುದ್ಧ ಕಪ್ಪು ಮಾತ್ರ ಮುಖ್ಯ ಛಾಯಾಂತರ ಇದ್ದರೆ ಅದು ಸಿಲೆಯಟ್ ಆಗಲಾರದು."[34]

"ಸುಮಾರು ಕ್ರಿ.ಶ. ೧೭೫೯ ರಲ್ಲಿ ಈ ಬಗೆಯ ನೆರಳು ಚಿತ್ರಗಳು ಜನಪ್ರಿಯವಾಯಿತು. ಆಗ ಫ್ರಾನ್ಸ್ ದೇಶದಲ್ಲಿ ಆರ್ಥಿಕ ಸಚಿವನಾಗಿದ್ದ "ಎಟಿನದ ಸಿಲುಪಿಟ್" ಎಂಬಾತ ನೆರಳು ಛಾಯಾಚಿತ್ರಣ ನಿರ್ಮಾಣಗಳಲ್ಲಿ ಪ್ರವೀಣ ಮತ್ತು ಪ್ರಸಿದ್ಧನಾಗಿದ್ದ. ಅಂದಿನಿಂದ ವಿಶ್ವದಾದ್ಯಂತ ಸಿಲುಪಿಟ್ ಎಂದು ಹೆಸರು ಬಂದಿತು."[35]

"ಹೊರಾಂಗಣ ಅಥವಾ ಒಳಾಂಗಣ, ಬಿಸಿಲು ಅಥವಾ ದೀಪದ ಬೆಳಕುಗಳು ಸಿಲುವಿಟ್ ಚಿತ್ರಗಳ ನಿರ್ಮಾಣಕ್ಕೆ ಯೋಗ್ಯವಾದವುಗಳು. ಸೂರ್ಯನು ದಿಗಂತದಿಂದ ಸುಮಾರು ನಾಲ್ಕು ಅಡಿಗಳಷ್ಟು ಎತ್ತರದಲ್ಲಿ ಇರುವಾಗ ಬೆಳಗ್ಗೆ ಅಥವಾ ಸಂಜೆ ಹೊತ್ತು ಛಾಯಾಚಿತ್ರಣಗೈಯಲು ಉತ್ತಮ ಸಮಯ.

ಸ್ಪಷ್ಟವಾದ ಆಕರ್ಷಣೆಯುಳ್ಳ ಹೊರಮೈಯ ಇರುವ ರೇಖೆ ಯಾವ ವಸ್ತುಗಳಾದರೂ ಸಿಲುವಿಟ್ ಚಿತ್ರಗಳಿಗೆ ಅರ್ಹವಾದ ರೂಪದರ್ಶಿ (ಮಾಡೆಲ್)ಗಳಾಗಬಲ್ಲವು. ಚಿತ್ರಗ್ರಹಣದ ಕಾಲದಲ್ಲಿ ವಸ್ತು ಅಥವಾ ವ್ಯಕ್ತಿಗಳು ನೇರವಾಗಿ ಬೆಳಕಿನ ಮೂಲಕ್ಕೆ ಎದುರಾಗಿರಬೇಕಾದುದು ಮುಖ್ಯ ವಸ್ತು ಅಥವಾ ವ್ಯಕ್ತಿಗಳ ಹೊರಮೈಯ ರೇಖೆಗಳು ಸ್ಪಷ್ಟವಾಗಿ ಬಿಂಬಿಸಿ, ಒಳಮೈಯ ಹರಿವಿನಲ್ಲಿ ಇತರ ವಿವರಗಳು ಪೂರ್ಣ ಅದೃಶ್ಯವಾಗಿರಬೇಕು."[36]

---


೩೪. ದೊಡ್ಡೇರಿ ವೆಂಕಟಗಿರಿರಾವ್ (ಸಂ.): ಛಾಯಾಭಿವ್ಯಂಜಕ ಛಾಯಾಚಿತ್ರಕಲೆ, ಪು. ೧೦೬
೩೫. ಅದೇ.
೩೬. ಅದೇ, ಪು. ೧೦೭



ಚಿತ್ರ - ೧



ಚಿತ್ರ ೨



ಸಿಲುಎಟ್ ಛಾಯಾಚಿತ್ರ

ಚಿತ್ರ –೨

ಸಮುದ್ರ ತೀರದಲ್ಲಾಗಲಿ ಅಥವಾ ಯಾವುದೇ ಅರ್ಹವಾದ ಇತರೆ ಹೊರಾಂಗಣದಲ್ಲಾಗಲಿ ನಿರ್ಮಿಸುವ ಚಿತ್ರದ ಭಾವನೆಗಳಿಗೆ ತಕ್ಕುದಾದ ದೃಶ್ಯ ನಿರ್ಮಿತಿಯ ಆಯ್ಕೆ ಛಾಯಾಚಿತ್ರಕಾರನಿಗಿರುವ ಅಭಿರುಚಿ ಮತ್ತು ಅನುಭವಗಳನ್ನು ಅವಲಂಬಿಸಿವೆ.

ಛಾಯಾಚಿತ್ರಣ ಕಲೆಯಲ್ಲಿ ಇಂತಹ ಅಭಿರುಚಿ ಮತ್ತು ಅನುಭವವನ್ನು ಹೊಂದಿದ ಶಂಕರ ಪಾಟೀಲರು ಛಾಯಾಚಿತ್ರಣಕಲೆಯಲ್ಲಿ ಸಾಕಷ್ಟು ಬಗೆಗಳಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾ ಸಿಲುಎಟ್ ವಿಧಾನದಲ್ಲಿಯೂ ಸಹ ಹಲವಾರು ಛಾಯಾಚಿತ್ರಣಗಳನ್ನು ರಚಿಸಿದ್ದು ಆಯ್ದ ಕೆಲವು ಛಾಯಾಚಿತ್ರಣಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಚಿತ್ರ ೧. ಸಮುದ್ರದ ತೀರದಲ್ಲಿ ಸಂಜೆಯ ಸೂರ್ಯಾಸ್ತದ ಸಮಯದ ಹೊನ್ನಿನ ಕಿರಣಗಳ ಮಧ್ಯೆ ಓರೆಯಾಗಿ ಸೂರ್ಯನ ಬೆಳಕಿನ ಮೂಲಕ್ಕೆ ಎದುರಾಗಿ ನಿಂತ ಸ್ತ್ರೀ ಪುರುಷರ ದೇಹಭಾಗದ ಒಳಮೈಯ ಹರಿವಿನಲ್ಲಿ ಇತರ ವಿವರಗಳನ್ನು ಪೂರ್ಣ ಅದೃಶ್ಯವಾಗಿ ಹೊರಮೈಯ ರೇಖೆಗಳು ಚಿತ್ರದಲ್ಲಿ ಸ್ಪಷ್ಟವಾಗಿ ಬಿಂಬಿಸುವಂತಿವೆ. ಚಿತ್ರಗ್ರಹಣಕ್ಕೆ ಉಪಯೋಗಿಸಿಕೊಳ್ಳುವ ಬೆಳಕಿನ ಹಿಡಿತದ ಕಡೆಗೆ ಹೆಚ್ಚಿನ ಗಮನಹರಿಸಿ ಭಾವಗಳಿಗೆ ತಕ್ಕ ದೃಶ್ಯ ನಿರ್ಮಿತಿಯನ್ನು ಆಯ್ಕೆಮಾಡಿ ರಚಿಸಿದ ಈ ವರ್ಣ ಛಾಯಾಚಿತ್ರ ಕಲಾಕೃತಿಯಲ್ಲಿ ಅವರ ಕಲಾಭಿರುಚಿಯು ಸೃಜನಾತ್ಮಕ ಗುಣವಿಶೇಷತೆಗಳಿಂದ ಕೂಡಿದೆ.

ಚಿತ್ರ ೨. ಬಾಹ್ಯ ಪರಿಸರದಲ್ಲಿ ಮುಸ್ಸಂಜೆಯ ಸಮಯದಲ್ಲಿ ಬಾಗಿ ಬೆಳೆದ ಮರವೊಂದರ ಮೇಲಕ್ಕೆ ಹತ್ತಿ ಕುಳಿತು ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುವಲ್ಲಿ ಮಗ್ನನಾಗಿ ಕುಳಿತ ಮನುಷ್ಯ ಹಿನ್ನೆಲೆಯಲ್ಲಿ ವಿಶಾಲವಾದ ಆಗಸ, ಭೂಪಾತಳಿಯ ಮೇಲೆ ಹುಲ್ಲು, ಗಿಡಗಂಟಿಗಳನ್ನು ಪಾಟೀಲರು ತಮ್ಮ ಛಾಯಾಚಿತ್ರಣದಲ್ಲಿ ಸೆರೆ ಹಿಡಿದಿದ್ದಾರೆ. ಚಿತ್ರವು ಸ್ಪಷ್ಟವಾಗಿರದೆ ಬೆಳಕಿಗೆ ವಿರುದ್ಧವಾಗಿ ಮೂಡಿದ ಮೂರ್ತ ಸ್ವರೂಪದಿಂದ ದೂರವಿದ್ದರೂ ನೈಜತೆಯಿಂದ ಕೂಡಿ ವಾಸ್ತವಕ್ಕೆ ಹತ್ತಿರವಾಗಿದೆ.

ಚಿತ್ರ ೩. ಹತ್ತಾರು ಮಕ್ಕಳು ಕೈಯನ್ನು ಮೇಲಕ್ಕೆತ್ತಿ ಆಕಾಶವನ್ನು ಮುಟ್ಟುತ್ತಿರುವಂತೆ ಆಗಸದಲ್ಲಿನ ಮೋಡಗಳ ರೂಪಗಳು ಮತ್ತು ಮಕ್ಕಳ ಹಾವಭಾವಗಳಿಗೆ ಸಂಬಂಧ ಕಲ್ಪಿಸಿ ಚಿತ್ರಿತಗೊಂಡ ಈ ಛಾಯಾಚಿತ್ರಣದಲ್ಲಿ ಸ್ಥಳಾವಕಾಶದಲ್ಲಿ ಮೋಡಗಳ ಚಿತ್ರಣಕ್ಕೆ ೧/೪ ಭಾಗವನ್ನು ಬಳಸಿ ಇನ್ನೂಳಿದ ಭಾಗದಲ್ಲಿ ಮಕ್ಕಳನ್ನು ವಿವಿಧ ಭಂಗಿ ನಿಲುವುಗಳನ್ನು ಸಂಯೋಜನೆಗೊಳಿಸಿ ಅವಶ್ಯಕವಾದ ಶೈಲಿಯಲ್ಲಿ ದೃಶ್ಯ ನಿರ್ಮಿತಿಯನ್ನು ನಿಯೋಜಿಸಿಕೊಂಡು ರಚಿಸಿದ ಈ ಕಲಾಕೃತಿಯು ಕಲ್ಪನೆಯನ್ನು ಮೀರಿ ನಿಂತಿದೆ.

ಅಧ್ಯಯನದ ಫಲಿತಗಳು:

ಭೂದೃಶ್ಯ ಮತ್ತು ಭೂದೃಶ್ಯ ನಿರೂಪಣಾ ಚಿತ್ರಗಳು :

- ಭೂದೃಶ್ಯ ಛಾಯಾಚಿತ್ರಣಗಳಲ್ಲಿ ತಾಂತ್ರಿಕ ಕೌಶಲ ಸಮ್ಮಿಳಿತವಾಗಿ ಮೂಡಿಬಂದಿದೆ.
- ಒಂದು ಪ್ರದೇಶದ ಸಹಜ ಸ್ವರೂಪ ಓರಣವಾಗಿ ಮೂಡಿವೆ.
- ಛಾಯಾಚಿತ್ರಣ ರಚನೆಯಲ್ಲಿ ಸಂಯೋಜನೆಯ ಅವಶ್ಯಕತೆ ಮತ್ತು ಮಹತ್ವದ ಪ್ರಯತ್ನ ತುಂಬ ಯಶಸ್ವಿಯಾಗಿದೆ.
- ಸುಸಂಬದ್ಧವಾದ ಸಂಯೋಜನೆ.
- ಕಪ್ಪು-ಬಿಳುಪು ವರ್ಣಗಳ ಮೂಲಕ ಛಾಯೆಗಳ ವಿತರಣೆ.
- ಚಿತ್ರಿತ ಆಯಾ ಪ್ರದೇಶದ ದೃಶ್ಯದ ಹೊರಸ್ವರೂಪ ಅಗತ್ಯಕ್ಕೆ ತಕ್ಕಂತೆ ಬಳಸಿರುವುದು.
- ಚಿತ್ರ ೨ ರಲ್ಲಿ ಕಾಂತಿಭೇದದ ಸಹನೀಯ ಸಮನ್ವಯವನ್ನು ರೂಪಗೊಳಿಸಿದ್ದಾರೆ.
- ಭೂದೃಶ್ಯ ಛಾಯಾಚಿತ್ರಣಕ್ಕೆ ಗ್ರಾಮೀಣ ಮತ್ತು ನೈಸರ್ಗಿಕ ಪರಿಸರವನ್ನು ಆಯ್ದುಕೊಂಡಿರುವುದು.
- ಚಿತ್ರ ೧ ರಲ್ಲಿ ದೃಶ್ಯದ ಪ್ರತಿರೂಪ ನೀರಿನಲ್ಲಿ ಪ್ರತಿಫಲಿಸುತ್ತಿರುವ ಚಿತ್ರೀಕರಣ ಶೈಲಿ.
- ´ಭೂದೃಶ್ಯ ನಿರೂಪಣೆ ಚಿತ್ರೀಕರಣಕ್ಕೆ ಹೆಚ್ಚಾಗಿ ಸಮುದ್ರ ತೀರದ ಪ್ರದೇಶಗಳನ್ನು ಆಯ್ದುಕೊಂಡಿರುವುದು.
- ಭೂದೃಶ್ಯ ನಿರೂಪಣೆಯಲ್ಲಿ ಸಮಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿರುವುದು.
- ಛಾಯಾಚಿತ್ರಣದಲ್ಲಿ ಹಲವು ಸಮಾನಾಂತರ ಅದೃಶ್ಯ ರೇಖೆಗಳು ಮೇಲಿಂದ ತಳದವರೆಗೆ ಚಲನೆಯಿಂದ ಕೂಡಿದೆ.

ಛಾಯಾಚಿತ್ರಗಳು ಒಳಾಂಗಣ ಹೊರಾಂಗಣ :

- ಒಳಾಂಗಣ ಭಾವಚಿತ್ರ ನಿರೂಪಣೆಯಲ್ಲಿ ಪೀಠೋಪಕರಣ ವಿದ್ಯುತ್ ಬೆಳಕಿನ ಬಳಕೆ.
- ವ್ಯಕ್ತಿಯ ಭಾವಚಿತ್ರಕ್ಕೆ ಹೆಚ್ಚು ಅವಕಾಶ ನೀಡಲಾಗಿದೆ.

- ಚಿತ್ರದಲ್ಲಿ ಸ್ವಾಭಾವಿಕ ಭಾವ ಪ್ರದರ್ಶನದ ನಿರೂಪಣೆ.
- ಚಿತ್ರಿತ ವ್ಯಕ್ತಿಯ ಮುಖಭಾವದಲ್ಲಿ ಗುಣ ವಿಶೇಷಗಳನ್ನೂ ಪ್ರಕಟಗೊಳಿಸುವ ಪ್ರಯತ್ನ ಕಾಣುತ್ತೇವೆ.
- ಭಾವಭಂಗಿಗಳು ವಿವಿಧ ಕೋನಗಳಲ್ಲಿ ಮೂಡಿಬಂದಿವೆ.
- ಭಾವಚಿತ್ರ ನಿರೂಪಣೆಗೆ ಟ್ವಿನ್‌ಲೆನ್ಸ್ ರಿಫ್ಲೆಕ್ಸ್ ಕ್ಯಾಮರಾಗಳ ಬಳಕೆಯಾಗಿವೆ.
- ಚಿತ್ರ ೩ ರ ಚಿತ್ರಣದಲ್ಲಿ ನೆರಳು ಬೆಳಕಿನ ನೆರಳು ಬೆಳಕಿನ ಗಾಢವಾದ ಛಾಯಾಂಕಣ ಕಂಡುಬರುತ್ತದೆ.
- ಭಾವಛಾಯಾಚಿತ್ರದಲ್ಲಿ ರೂಪದರ್ಶಿಯ ಚಿತ್ರಣದಲ್ಲಿ ಹೊರಾಂಗಣದ ಸೂರ್ಯನ ನೆರಳು ಬೆಳಕಿನ ಪ್ರಯೋಗ ಮಾಡಿರುವುದು.
- ವ್ಯಕ್ತಿಯ ಮುಖಭಾವದ ಜೊತೆಗೆ ವೇಷಭೂಷಣಗಳತ್ತ ಹೆಚ್ಚಿನ ಗಮನ ಹರಿಸುವಿಕೆ.
- ಕಪ್ಪು-ಬಿಳುಪಿನ ಚಿತ್ರಣದಲ್ಲಿ ರೂಪಭಾವದ ನಿರೂಪಣೆಯನ್ನು ಕಾಣಬಹುದು.

ಮಕ್ಕಳ ಛಾಯಾಚಿತ್ರಣ

- ಭಾವಪೂರಿತ ಈ ಛಾಯಾಚಿತ್ರ ರಚನೆಯಲ್ಲಿ ಮಕ್ಕಳ ದೇಹ ವಿನ್ಯಾಸವನ್ನು ಭಾವಸೂಚಕವಾಗಿ ಮೂಡಿರುವುದು.
- ಮಕ್ಕಳ ವ್ಯಕ್ತಿತ್ವ ಮತ್ತು ಸ್ವಭಾವಗಳನ್ನು ಒಳಗೊಂಡಿವೆ.
- ಮಕ್ಕಳ ಚಿತ್ರಣವನ್ನು ಸೆರೆಹಿಡಿಯುವಲ್ಲಿ ಮೂಲಭೂತ ತಾಂತ್ರಿಕ ಅಂಶಗಳ ಅವಳಡಿಸಿಕೊಂಡಿರುವುದು.
- ಮಕ್ಕಳ ಮುಖಭಾವಗಳಲ್ಲಿ ನೈಜ ಸ್ನಿಗ್ಧ ಸೌಂದರ್ಯ ಮೂಡಿ ಬಂದಿರುವುದು.
- ಮಕ್ಕಳ ವಿವಿಧ ಮುಖಭಾವಗಳನ್ನು ರಚಿಸಲು ವಿವಿಧ ಮಸೂರಗಳನ್ನು ಬಳಸಿರುವುದು.
- ಮಕ್ಕಳ ಉಡುಗೆಯಲ್ಲಿ ಆಡಂಬರವಿರದೆ ಸಹಜವಾಗಿ ಚಿತ್ರಿಸಿರುವುದು.

ಪ್ರಾಣಿ ಪಕ್ಷಿಗಳ ಛಾಯಾಚಿತ್ರಣ :

- ಪ್ರಾಣಿಗಳ ಚಿತ್ರೀಕರಣ ಸ್ವಾಭಾವಿಕ ಪರಿಸರವನ್ನು ಬಳಸಿಕೊಂಡಿರುವುದು.
- ಪ್ರಾಣಿಗಳ ವಿಭಿನ್ನ ಭಂಗಿಗಳನ್ನು ಕಾಣಬಹುದು.
- ಪ್ರಾಣಿ ಮತ್ತು ಪಕ್ಷಿಗಳನ್ನು ಛಾಯಾಚಿತ್ರೀಕರಿಸುವಾಗ ಅವರ ತಾಳ್ಮೆ ಮತ್ತು ಸಮಯಾವಧಾನಗಳನ್ನು ಕಾಣಬಹುದು.
- ಚಿತ್ರ ಸಂ. ೨ ರಲ್ಲಿ ಪಕ್ಷಿ ಸಮೂಹದ ಚಿತ್ರಣದ ಜೊತೆಗೆ ಹಿನ್ನಲೆ ಪರಿಸರವನ್ನೂ ಬಳಸಿಕೊಂಡಿರುವುದು.
- ಚಿತ್ರ ೩ ಪಕ್ಷಿಗಳ ಭಾವ ಭಂಗಿಗಳ ಸುಂದರ ರೂಪವನ್ನು ಸ್ತಬ್ಧಗೊಳಿಸುವಲ್ಲಿ ಸಮಯಾವಧಾನದ ಹಿಡಿತವನ್ನು ಕಂಡುಕೊಂಡಿರುವುದು.

ಗಿರಿದೃಶ್ಯಗಳ ಛಾಯಾಚಿತ್ರಣ :

- ಗಿರಿದೃಶ್ಯಗಳ ಛಾಯಾಚಿತ್ರಣ ನಿರೂಪಣೆಯಲ್ಲಿ ಕಾಲಮಾನವನ್ನು ಸಾಂದರ್ಭಿಕವಾಗಿ ಬಳಸಿಕೊಂಡಿರುವುದು. ಗಿರಿದೃಶ್ಯ ಛಾಯಾಚಿತ್ರಣಕ್ಕೆ ದೂರದರ್ಶಕ ಮಸೂರಗಳನ್ನು ಬಳಸಿಕೊಂಡಿರುವುದು.
- ಗಿರಿದೃಶ್ಯ ಚಿತ್ರಣಗಳಲ್ಲಿ ಸಂಯೋಜನೆಯ ಸಿದ್ಧಸೂತ್ರಗಳು ಮೂಡಿವೆ.
- ಕಪ್ಪು ಬಿಳುಪಿನಲ್ಲಿ ವರ್ಣಛಾಯಾಂತರವು ಸಮರ್ಪಕವಾಗಿ ಬಳಸಿಕೊಂಡಿರುವುದು.
- ಒಟ್ಟು ಗಿರಿದೃಶ್ಯಗಳ ಚಿತ್ರಣವನ್ನು ಸೆರೆಹಿಡಿಯುವಲ್ಲಿ ಹಲವು ತಂತ್ರಗಳ ಬಳಕೆ ಮಾಡಿರುವುದು.

ಮಂಜಿನ ಛಾಯಾಚಿತ್ರಣ :

- ಛಾಯಾಚಿತ್ರಣಕ್ಕೆ ಬಳಸಿಕೊಂಡ ಪ್ರದೇಶ, ಸ್ಥಳಾವಕಾಶದ ಕಡೆಗೆ ಹೆಚ್ಚು ಒಲವು ನೀಡಿರುವುದು.
- ಚಿತ್ರ ೧ ರ ಮಂಜಿನ ಛಾಯಾಚಿತ್ರಣದಲ್ಲಿ ಸಂಯೋಜನಾ ದೃಷ್ಟಿಯಿಂದ ಮುನ್ನೆಲೆ ಮತ್ತು ಹಿನ್ನಲೆಯಲ್ಲಿ ವಾಸ್ತುಗಳ ಉಪಯೋಗ.
- ಚಿತ್ರ ೧ ರಲ್ಲಿ ಎಳೆ ಬಿಸಿಲಿನ ಚೆಲ್ಲಾಟವನ್ನು ಸ್ಥಬ್ದಗೊಳಿಸಿದ ತಂತ್ರ ಕೌಶಲವನ್ನು ಕಂಡುಕೊಂಡಿರುವುದು.

- ತಿಳಿಮಂಜು ಮಸುಕಿದ ಭೂದೃಶ್ಯದಲ್ಲಿ ನೆರಳು-ಬೆಳಕಿಗೆ ಹೆಚ್ಚಿನ ಆದ್ಯತೆ ನೀಡಿರುವುದು.
- ಚಿತ್ರ ಸಂ. ೧ ರಲ್ಲಿ ಬಿಸಿಲಿಗೆ ಎದುರಾಗಿ ರೂಪಗೊಂಡಿದೆ.
- ಏಕರೂಪಿಯ ವರ್ಣ ಛಾಯಾಂತರದಲ್ಲಿ ಸಮತೋಲನದ ಸಮರ್ಪಕವಾದ ನಿರೂಪಣೆ.
- ದೃಶ್ಯಗಳನ್ನು ಚಿತ್ರೀಕರಿಸುವಲ್ಲಿ ಕ್ಯಾಮರಾಕ್ಕೆ ವಿವಿಧ ಮಸೂರಗಳನ್ನು ಬಳಸಿರುವುದು.

ಮೋಡಗಳ ಛಾಯಾಚಿತ್ರಗಳು :

- ಮೋಡಗಳನ್ನು ಯಶಸ್ವಿ ಪರಿಕರವನ್ನಾಗಿ ಬಳಸಿ ಚಿತ್ರಿಕರಣದ ನಿರೂಪಣೆ ಮಾಡಿರುವುದು.
- ಮೋಡಗಳ ಚಿತ್ರಣಗಳು ಸ್ತಬ್ಧವಾಗಿದ್ದರೂ ಚಲನಾತ್ಮಕತೆಯನ್ನು ನಿರೂಪಿಸುವ ಪ್ರಯತ್ನ.
- ಛಾಯಾಚಿತ್ರಣದಲ್ಲಿ ಹೆಚ್ಚಾಗಿ ಸಂಜೆಯ ಕಾಲಮಾನವನ್ನು ಬಳಸಿಕೊಂಡಿರುವುದು.
- ಕಪ್ಪು-ಬಿಳುಪಿನಲ್ಲಿ ಮೋಡದ ವರ್ಣಸಂಯೋಜನೆಯಿಂದ ಕೂಡಿದೆ.
- ಚಿತ್ರ ೧ ರಲ್ಲಿ ಮೂಲವಸ್ತುವನ್ನಾಗಿ ಮೋಡವನ್ನು ಬಳಸಿಕೊಂಡರೂ ಪೂರಕವಾಗಿ ಸಂಯೋಜನೆಗಾಗಿ ಪ್ರಕೃತಿಯನ್ನು ಬಳಸಿಕೊಂಡಿರುವುದು
- ಚಿತ್ರಣದಲ್ಲಿ ತಮ್ಮ ಸೃಜನಶೀಲತೆಯನ್ನು ಕಂಡುಕೊಂಡಿರುವುದು.

ಕ್ಲೋಸ್‌ಪ್ ಪೋಟೋಗ್ರಫಿ :

- ರೂಪದರ್ಶಿಯ ಛಾಯಾಚಿತ್ರಣದಲ್ಲಿ ಮುಗ್ಧತೆಯ ಭಾವವನ್ನು ಅಭಿವ್ಯಕ್ತಿಸುವ ಪ್ರಯತ್ನವನ್ನು ಮಾಡಿದ್ದಾರೆ.
- ರೂಪದರ್ಶಿ ಚಿತ್ರಣದಲ್ಲಿ ನಗ್ನ ದೇಹಕ್ಕೆ ಹೆಚ್ಚು ಒತ್ತುಕೊಡದೆ, ಮುಖಭಾವಗಳಲ್ಲಿನ ಸ್ತ್ರೀಯ ಅಂತರಾಳದ ಅನುಭವವನ್ನು ವ್ಯಕ್ತಪಡಿಸಿದ್ದಾರೆ.
- ಛಾಯಾಚಿತ್ರ ರಚನೆಯ ನೆರಳು ಬೆಳಕಿನ ಸಮನ್ವಯದಿಂದ ಪ್ರಯೋಗಾತ್ಮಕವಾಗಿ ಮೂಡಿದೆ.
- ಚಿತ್ರ ೨ ರಲ್ಲಿ ಅತೀ ಹತ್ತಿರದಿಂದ ವ್ಯಕ್ತಿಯ ಭಾವಲಕ್ಷಣಗಳನ್ನು ಸ್ಫುಟವಾಗಿ ಸೆರೆಹಿಡಿಯುವ ಆಸಕ್ತಿಯನ್ನು ಗುರುತಿಸಬಹುದು.

ಎಸಕಗಳ ಛಾಯಾಚಿತ್ರಣ :

- ಎಸಕಗಳ ಛಾಯಾಚಿತ್ರಣಕ್ಕೆ ಪಾಟೀಲರು ಸಮುದ್ರ ತೀರವನ್ನು ವಸ್ತುವಿಷಯವನ್ನಾಗಿ ಬಳಸಿಕೊಂಡಿರುವದನ್ನು ಕಾಣಬಹುದು.
- ದೃಶ್ಯಚಿತ್ರಣವು ಸ್ತಬ್ಧವಾಗಿದ್ದರೂ ಚಿತ್ರಣದಲ್ಲಿ ತೀವ್ರತೆ ಮತ್ತು ಚಲನೆಯನ್ನು ಕಾಣಬಹುದು.
- ಹೆಚ್ಚಾಗಿ ಕಪ್ಪು-ಬಿಳುಪು ಮಾಧ್ಯಮದಲ್ಲಿ ರಚಿತಗೊಂಡಿವೆ.
- ಏಕರೂಪಿಯ ವರ್ಣಗಳಲ್ಲೇ ಛಾಯಾಂಕನದಲ್ಲಿ ವಿವಿಧತೆಯನ್ನು ಕಾಣಬಹುದು.
- ಛಾಯಾಚಿತ್ರಣದಲ್ಲಿನ ಸ್ಥಳಾವಕಾಶವನ್ನು ಸಂಯೋಜನೆಯ ದೃಷ್ಟಿಯಿಂದ ಪರಿಪೂರ್ಣವಾಗಿ ಬಳಸಿಕೊಂಡಿರುವುದು ಕಾಣಬಹುದು.
- ಚಿತ್ರ ೫೫ ರಲ್ಲಿ ಛಾಯಾಚಿತ್ರಣದಲ್ಲಿ ಮುಖಭಾವದಲ್ಲಿ ಶರೀರದ ಭಂಗಿ ಸಮರ್ಥವಾಗಿ ರೂಪಿಸುವಲ್ಲಿ ಸೆರೆ ಹಿಡಿದ ದೃಶ್ಯದಲ್ಲಿ ಪಾಟೀಲರ ಸೃಜನಕ್ರಿಯೆಯನ್ನು ತಿಳಿಯಬಹುದು.

❖ ❖ ❖

ಅಧ್ಯಾಯ : ಆರು

ಶಂಕರ ಪಾಟೀಲರ ಕಲಾಕೃತಿಗಳ ಮೇಲಾದ ಪ್ರೇರಣೆ ಮತ್ತು ಪ್ರಭಾವ ಅನುಸರಿಸಿದ ಶೈಲಿ ಮತ್ತು ತಂತ್ರ

ಶಂಕರ ಪಾಟೀಲರ ಕಲಾಕೃತಿಗಳ ಮೇಲಾದ ಪ್ರೇರಣೆ:

ಆಕಾರ ಹಾಗೂ ಬಣ್ಣಗಳ ಸಂಯೋಜನೆಯಿಂದ ಕಲೆ ನಿರ್ಮಾಣವಾಗುತ್ತದೆ, ನಿಜ. ಆದರೆ ಬರಿಬಣ್ಣ ಆಕಾರಗಳನ್ನು ಒಟ್ಟುಗೂಡಿಸಿದರೆ ಕಲೆ ಆಗಲಾರದು. ಬಣ್ಣ ಮತ್ತು ಆಕಾರಗಳ ಹಿಂದಿನ ಪ್ರೇರಣೆಯಿಂದ ಕಲೆ ಹುಟ್ಟುತ್ತದೆ. ಬಣ್ಣ ಹಾಗೂ ಆಕಾರ ಮಿಲನದಿಂದ ಕಲಾವಿದ ವಿನ್ಯಾಸಗೊಳಿಸಿದಾಗ ಚಿತ್ರವಾಗಬಲ್ಲದು.

ಕಲಾವಿದನಿಗೆ ಕಲಾಕೃತಿಯೊಂದರ ಹಿಂದೆ ಪ್ರೇರಣೆಯ ಅಗತ್ಯತೆ ಇದ್ದೆ ಇರುತ್ತದೆ. ಅದು ಬಹುತೇಕವಾಗಿ ಸಮಾಜದ ಮತ್ತು ಪ್ರಾಕೃತಿಕ ಪ್ರೇರಣೆಯಾಗಿರುತ್ತದೆ. "ಕೆಲವೊಮ್ಮೆ ಪ್ರತ್ಯಕ್ಷವಾಗಿ ಕೆಲವೊಮ್ಮೆ ಪರೋಕ್ಷವಾಗಿ ಕಲಾಕಾರನ ಮನಸ್ಸು ಬುದ್ಧಿಶಕ್ತಿ ಸರ್ವಥಾ ಜಾಗ್ರತವಾಗಿದ್ದು, ಸಂವೇದನಶೀಲವಾಗಿರಬೇಕು. ಸಮಾಜದ ಕೀಟಲೆ, ಸಂಘರ್ಷ, ನಿರಾಶೆ ಹಾಗೂ ಉಲ್ಲಾಸ ದ್ವಂದ್ವ ಇವೆಲ್ಲವೂ ಕಲಾವಿದನ ಸಂವೇದನಾಶೀಲ ಮನಸ್ಸನ್ನು ಉತ್ತೇಜಿಸಲು ಸಮರ್ಥವಾಗುತ್ತದೆ."[೧]

---

೧. ಶಂಕ್ರಪ್ಪ ಕುಂದಗೋಳ (ಸಂ) : ಚಿತ್ರಕಲಾವಿದ ಡಿ. ವಿ. ಹಾಲಭಾವಿ, ಪು. ೧೧೨.

"ಮಾನವ ಜೀವನ ಮುಖ್ಯವಾಗಿ ತನು, ಮನ, ಆತ್ಮಗಳೆಂಬ ಮೂರು ಅಂಶಗಳನ್ನು ಹೊಂದಿದೆ. ಶಿಕ್ಷಣವು ಇವುಗಳನ್ನು ಸಂಸ್ಕರಿಸುವ ಕಾರ್ಯವನ್ನು ಸದಾಕಾಲವೂ ಮಾಡುತ್ತಿರುತ್ತದೆ. ತನುವಿಗೆ ಬೇಕಾದ ಅವನ ವಸತಿ ಸಂಸ್ಕಾರಕ್ಕೆ ಬೇಕಾದ ಉಪಜೀವನದ ಮಾರ್ಗವನ್ನು ಮನಸ್ಸಿನ ವಿಕಾಸಕ್ಕಾಗಿ ಸಾಹಿತ್ಯ, ಕಲೆ, ನೈತಿಕ ಮೌಲ್ಯಗಳನ್ನು ಆತ್ಮದ ಉದ್ಧಾರಕ್ಕಾಗಿ ಧರ್ಮ, ಆಧ್ಯಾತ್ಮದ ಪಾರಮಾರ್ಥಿಕ ಮೌಲ್ಯಗಳನ್ನು ಕೊಡಬಲ್ಲುದೇ ನಿಜವಾದ ಶಿಕ್ಷಣ. ಈ ರೀತಿಯ ವಿದ್ಯಾಪ್ರಸಾರದಿಂದ ಕರ, ಉರ, ಶಿರ, ಸಂವರ್ಧನೆಯಾಗುವುದು. ಕರವು ಕಾರ್ಯವನ್ನು ಉರವು ಹೃದಯವನ್ನು ಶಿರವು ಅರಿವನ್ನು ಸೂಚಿಸುತ್ತದೆ. ಶಿಕ್ಷಣವು ದೇಹಕ್ಕೆ ಪುಷ್ಟಿಯನ್ನು ಮನಕ್ಕೆ ವೈಶಾಲ್ಯತೆಯನ್ನು ಆತ್ಮಕ್ಕೆ ಆನಂದವನ್ನು ಕೊಟ್ಟು ಅಂತಃಕರಣವನ್ನು ಅರಳಿಸಿ ಸದ್ಗುಣಗಳನ್ನು ನೀಡಬಲ್ಲದು. ಹೀಗಾಗಿ ಶಿಕ್ಷಣವು ಇಂದು ಮಾನವನ ಬದುಕಿಗೆ ಪ್ರಮುಖ ಆಧಾರವಾಗಿ ನಿಂತಿದೆ."[೨]

"ಏಕಾಂತವಿಲ್ಲದೆ ನಾವು ಏನನ್ನು ಮಾಡಲು ಸಾಧ್ಯವಿಲ್ಲ. ಏಕಾಂಗಿತನವನ್ನು ನಾವು ಪ್ರಯತ್ನ ಪೂರ್ವಕವಾಗಿ ಬಳಸಿಕೊಳ್ಳಬೇಕಾಗುತ್ತದೆ. ಒಬ್ಬರೇ ಇರುವುದು ಬಹಳ ಕಷ್ಟದ ಕೆಲಸ. ಯಾಕೆಂದರೆ ನಾವೆಲ್ಲ ಕೈಯಲ್ಲಿ ಕೈಗಡಿಯಾರಗಳನ್ನು ಕಟ್ಟಿಕೊಂಡಿರುತ್ತೇವೆ. ಸನ್ಯಾಸಿಗಳು ಏಕೆ ಗಡಿಯಾರವನ್ನು ಕಟ್ಟಿಕೊಂಡಿರುತ್ತಾರೆ. ಯಾರೂ ನಂಬಲು ಸಾಧ್ಯವಾಗದ ಏಕಾಂತದಲ್ಲಿ ಜೀವಿಸುತ್ತಾರೋ ಅದು ಅವರಿಗೆ ವರವಾಗಿ ಪರಿಣಮಿಸುತ್ತದೆ. ನಮ್ಮ ಜೊತೆಗೆ ಅಥವಾ ನಮ್ಮ ಹಿಂದೆ ಜನರಿದ್ದಾರೆಂದು ಹೇಳಿಕೊಳ್ಳುವವರು ಅದು ಅವರಿಗೊಂದು ಶಕ್ತಿ ಎಂದು ಭಾವಿಸಿ ಜಂಬದಿಂದ ಹೇಳಿಕೊಳ್ಳುತ್ತಾರೆ. ಆದರೆ ಅಂಥವರು ಅತೀಶಯವಾದ ಅಪಾಯದ ಅಂಚಿನಲ್ಲಿ ಇರುತ್ತಾರೆ ಎನ್ನುವುದನ್ನು ತಿಳಿದಿರುವುದಿಲ್ಲ, ಜೊತೆಗೆ ಯಾರೂ ಇಲ್ಲದಾಗ ಆ ವ್ಯಕ್ತಿಗೆ ತನ್ನದೇ ಆದ ಒಂದು ಶಕ್ತಿವಲಯ ಸಿದ್ಧವಾಗುತ್ತದೆ. ಕಲಾವಿದರಿಗೆ ಸಾಹಿತಿಗಳಿಗೆ ಏಕಾಂತವು ಚಿಂತನೆಗೆ ಪ್ರೇರಣೆಯನ್ನು, ಕೆಲಸಕ್ಕೆ ಶಕ್ತಿಯನ್ನು ಕೊಡುವ ಟಾನಿಕ್"[೩] ಎಂದು ಶಂಕರ ಪಾಟೀಲರು ಅಭಿಪ್ರಾಯಪಟ್ಟಿದ್ದಾರೆ.

ಶಂಕರ ಪಾಟೀಲರು ಆಧ್ಯಾತ್ಮಿಕ ಮತ್ತು ಧಾರ್ಮಿಕ ಸನ್ನಿವೇಶಗಳ ಚಿತ್ರಗಳ ರಚನೆಯನ್ನು ಮಾಡುತ್ತಿದ್ದರು. ಕಾರಣ ಅವರ ತಂದೆಯವರಾದ ಚಂದ್ರಶೇಖರವರು ಧಾರ್ಮಿಕ ಮನೋಭಾವನೆಯನ್ನು ಹೊಂದಿದವರಾಗಿದ್ದರು. ಬಾಲ್ಯದಲ್ಲಿ ತಂದೆಯ ಅಗಾಧವಾದ ಪ್ರಭಾವದ ಪರಿಣಾಮ ಪಾಟೀಲರ ಮೇಲೆ ಬೀರಿ ಚಿತ್ರಕಲೆಯಲ್ಲಿ ಮತ್ತಷ್ಟು ಮಮತೆಯನ್ನು ಹೆಚ್ಚಿಸಿತು.

---

೨. ಶಂಕ್ರಪ್ಪ ಕುಂದಗೋಳ (ಸಂ) : ಚಿತ್ರಕಲಾವಿದ ಡಿ. ವಿ. ಹಾಲಭಾವಿ, ಪು. ೧೧೨.
೩. ಶಂಕರ ಪಾಟೀಲ (ಸಂ): ಚಿತ್ರಕಲಾ ಚಿಂತನೆ, ಪು. ೭೧.

ಶಂಕರ ಪಾಟೀಲರು ಚಿಕ್ಕವರಿದ್ದಾಗ ಅವರ ತಂದೆಯವರಿಗೆ ಪ್ರಮೋಶನ್ ಮೂಲಕ ವರ್ಗಾವಣೆಗೊಂಡು ಬಿಜಾಪೂರಕ್ಕೆ ಹೋದಾಗ ಅಲ್ಲಿನ ಐತಿಹಾಸಿಕ ಸ್ಥಳಗಳ ಪ್ರಕೃತಿ ಸೌಂದರ್ಯ ಮತ್ತು ಅಲ್ಲಿನ ಕಲಾವಿದರು ಹಾಗೂ ಅವರ ಕಲಾಕೃತಿಗಳಿಗೆ ಮಾರುಹೋಗಿ, ಪ್ರೇರಣೆಗೊಂಡು ಚಿತ್ರಕಲೆಯನ್ನು ತಮ್ಮ ಜೀವನದ ಗುರಿಯನ್ನಾಗಿಸಿಕೊಂಡರು.

ಪಾಟೀಲರು ತಮ್ಮ ತಂದೆಯವರ ಜೊತೆಗೆ ಬಿಜಾಪೂರಕ್ಕೆ ಹೋಗಿ ಶಿಕ್ಷಣವನ್ನು ಸಿದ್ದೇಶ್ವರ ಹೈಸ್ಕೂಲ್‌ನಲ್ಲಿ ಆರಂಭಿಸಿದರು. ಅಲ್ಲಿ ಪ್ರಪ್ರಥಮವಾಗಿ ಚಿತ್ರಕಲೆಯ ಬಗ್ಗೆ ಪ್ರೇರಣೆ ನೀಡಿ ಸಾಕಷ್ಟು ಪ್ರೋತ್ಸಾಹವನ್ನು ನೀಡಿದವರು ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರಾದ ಜತ್ತಿ ಗುರುಗಳು. ಇವರು ಪಾಟೀಲರ ಕಲಾಪ್ರತಿಭೆಯನ್ನು ಗುರುತಿಸಿ ಪ್ರೊತ್ಸಾಹ ನೀಡಿದ ಪ್ರಮುಖ ವ್ಯಕ್ತಿಯಾಗಿದ್ದಾರೆ.

“ಯಾವುದೇ ಒಂದು ನಾಡಿನ ಜನಾಂಗದ ಬದುಕಿನ ಬೆಳವಣಿಗೆಯನ್ನು ಅವರ ಪರಂಪರೆ ಹಾಗೂ ಸಂಪ್ರದಾಯಗಳನ್ನು ತಿಳಿಯಬೇಕಾದರೆ ಅವರ ಪರಿಸರದಲ್ಲಿ ಜೀವ ಪಡೆದಿರುವ ಕಲೆಗಳ ಅಧ್ಯಯನ ಮಾಡಬೇಕಾಗುತ್ತದೆ. ಮಾನವನ ಸಾಂಸ್ಕೃತಿಕ ಲೋಕದ ಪ್ರತಿಹಂತದಲ್ಲೂ ಕಲೆ ಪ್ರೇರಣೆಯ ವಸ್ತು ಆಗಿರುತ್ತದೆ. ಕಲಾವಿದನಿಗೆ ಪ್ರಕೃತಿಯು ಪ್ರೇರಣೆಯನ್ನು ನೀಡುತ್ತದೆ. ಅಲ್ಲದೆ ಒಂದೊಂದು ಸವಾಲನ್ನು ಎದುರಿಸುವ ಸಂದರ್ಭವನ್ನು ಸೃಷ್ಟಿಸುತ್ತದೆ.”[೪]

“ಹಿಮಾಲಯದ ಗಿರಿ ಶಿಖರಗಳು ನನ್ನನ್ನು ಆಧ್ಯಾತ್ಮಿಕ ಜಗತ್ತಿಗೆ ತೆರೆದುಕೊಳ್ಳಲು ಪ್ರೇರಣೆ ನೀಡಿವೆ. ಹಾಗೆಯೇ ತಂದೆ ತಾಯಿಗಳ ವಾತ್ಸಲ್ಯವು, ಹಿಮಾಲಯದ ಸಾಧುಗಳು ನನಗೆ ಮೊದಲಿಗೆ ಬೋಧಿಸಿದ್ದು, ಪ್ರಕೃತಿಯ ಸತ್ಯಸಂದೇಶವು ಎಲ್ಲದರಲ್ಲಿಯೂ ಅಂತರ್ಗತವಾಗಿದೆಯೆಂದು, ವ್ಯಕ್ತಿಯು ನಿಸರ್ಗ ಸಂಗೀತವನ್ನು ಕೇಳಲು ಮತ್ತು ಸೊಬಗನ್ನು ಗ್ರಹಣ ಮಾಡಲು ಕಲಿತಾಗ ತನ್ಮಯತೆಯಿಂದ ಆತನ ಚೈತನ್ಯವು ಇಡೀ ಸನ್ನಿವೇಶದೊಡನೆ ಸಮರಸಗೊಳ್ಳುತ್ತದೆ. ಯಾವುದೇ ವ್ಯಕ್ತಿ ಬದುಕಿನ ಮಾರ್ಗದತ್ತ ದೃಷ್ಟಿ ಹಾಯಿಸುವ ಮೊದಲು ಮನುಷ್ಯನ ಬುದ್ಧಿಯು ಪ್ರಕೃತಿಯನ್ನು ಪ್ರೀತಿಸುವಂತೆ ಮಾಡಿದೆ. ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸತೊಡಗಿದರೆ ಸೌಂದರ್ಯ ಪ್ರಜ್ಞೆ ಬೆಳೆಯುತ್ತದೆ”[೫] ಎಂಬುದಾಗಿ ಸ್ವತಃ ಶಂಕರ ಪಾಟೀಲರೇ ಅಭಿಪ್ರಾಯ ಪಟ್ಟಿದ್ದಾರೆ.

---

೪. ಮಲ್ಲಿಕಾರ್ಜುನ ಬಾಗೋಡಿ (ಸಂ): ಚಿತ್ರಕಲಾವಿದ ಜೆ. ಎಸ್. ಖಂಡೇರಾವ್, ಪು. ೧೦೪.
೫. ಶಂಕರ ಪಾಟೀಲ (ಸಂ): ಹಿಮಾಚಲದ ಹಿನ್ನಲೆಯಲ್ಲಿ, ಪು. ೪.

ಪಾಟೀಲರು ಬಾಲ್ಯದಲ್ಲಿ ಪ್ರಕೃತಿ ಸೌಂದರ್ಯ, ತಂದೆಯ ಧಾರ್ಮಿಕ, ಆಧ್ಯಾತ್ಮಿಕ, ಶಿಸ್ತುಬದ್ಧ ಸಂಸ್ಕೃತಿ ಹಾಗೂ ಬಿಜಾಪೂರದ ಪ್ರಕೃತಿ ಪರಿಸರದ ಪ್ರೇರಣೆಯಿಂದ ಕಲಾಕೃತಿ ರಚನೆಯಲ್ಲಿ ತೊಡಗಿದರು. ನಂತರದಲ್ಲಿ ಪಾಟೀಲರು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮುಂಬೈಗೆ ಹೋಗಿ ಅಲ್ಲಿನ ಸಾಂಸ್ಕೃತಿಕ ಮತ್ತು ಅಕಾಡೆಮಿಕ್ ಮಾದರಿಯ ಪಾಶ್ಚಾತ್ಯ ಪಠ್ಯೇತರ ಚಟುವಟಿಕೆಗಳಿಗೆ ಪ್ರೇರಿತಗೊಂಡು ಹಲವಾರು ಕಲಾಕೃತಿಗಳನ್ನು ವಿದ್ಯಾರ್ಥಿ ಅವಧಿಯಲ್ಲಿ ರಚಿಸಿದ್ದಾರೆ.

ಶಂಕರ ಪಾಟೀಲರಿಗೆ ಚಿತ್ರಕಲೆಯ ಕುರಿತು ಉನ್ನತ ವ್ಯಾಸಂಗದಲ್ಲಿ ಹೆಚ್ಚಿನ ಪ್ರೇರಣೆಯನ್ನು ನೀಡಿದವರು ಮುಂಬೈ ಕಲಾ ಶಾಲೆಯ ಗುರುಗಳಾದ ಜಿ. ಎಸ್. ದಂಡಾವತಿಮಠ, ಸಿ. ವ್ಹಿ. ಶಿರೋಡಕರ, ವಿ. ಆರ್. ಅಂಚರೇಕರ ಮತ್ತು ಎಂ.ವಿ.ಮಿಣಜಗಿಯವರು ಬೌದ್ಧಿಕವಾಗಿ ಸಾಕಷ್ಟು ಪ್ರೇರಣೆಯನ್ನು ನೀಡುತ್ತಾರೆ. ಅಲ್ಲದೇ ಅವರ ಪ್ರತಿಯೊಂದು ಚಿತ್ರಕಲಾ ಕೃತಿ ರಚನೆಯಲ್ಲಿ, ಕಲಾಪ್ರದರ್ಶನದಲ್ಲಿ, ಕಲಾಚಟುವಟಿಕೆಗಳಲ್ಲಿ ಸಾಕಷ್ಟು ಸಲಹೆ–ಸೂಚನೆಗಳನ್ನು ಪಡೆಯುತ್ತಾರೆ. ಇಂತಹ ಕಲಾಗುರುಗಳ ಮಾರ್ಗದರ್ಶನ ಮತ್ತು ಪ್ರೇರಣೆಯಿಂದ ಪಾಟೀಲರು ಕಲಾಕೃತಿ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಧಾರ್ಮಿಕತೆ, ಆಧ್ಯಾತ್ಮ, ಭಾವೈಕ್ಯತೆ, ರಾಜಕೀಯ ಮತ್ತು ಸಾಮಾಜಿಕ ಬದುಕು ಇನ್ನೂ ಮುಂತಾದ ವಿಷಯಗಳು ಪಾಟೀಲರ ಕಲಾಕೃತಿಗಳ ವಸ್ತುವಿಷಯವಾಗಿದೆ.

ಪಾಟೀಲರು ಕಲಾ ವ್ಯಾಸಂಗದ ಅವಧಿಯಲ್ಲಿ ಹಾಗೂ ವೃತ್ತಿಜೀವನದ ದಿನಗಳಲ್ಲಿ ಅನೇಕ ಪ್ರವಾಸಗಳನ್ನು ಮಾಡಿದವರು. ಹಿಮಾಚಲ ಪ್ರದೇಶ ಮತ್ತು ಪಾಶ್ಚಾತ್ಯ ರಾಷ್ಟ್ರಗಳಾದ ಅಮೇರಿಕಾ, ಕೆನಡಾ ದೇಶಗಳಿಗೆ ಹೋಗಿ ಅಲ್ಲಿನ ಜೀವನಕ್ಕೆ ಪ್ರೇರಣೆಗೊಂಡು ತಮ್ಮ ಚಿತ್ರ ಕೃತಿಗಳಲ್ಲಿ ಮತ್ತು ಛಾಯಾಚಿತ್ರಕಲೆಯಲ್ಲಿ ಅಲ್ಲಿನ ಅಂಶಗಳನ್ನು ಅಳವಡಿಸಿಕೊಂಡಿದ್ದಾರೆ.

"ಪ್ರೇರಣೆಯು ಸಹಾಯ ಎನ್ನುವ ಪದಕ್ಕೆ ಸಮೀಪದಲ್ಲಿದೆ. ಸಹಾಯ ಪ್ರೇರಣೆ ಎರಡೂ ಪದಗಳು ಬೇರೆ ಬೇರೆಯಾದರೂ ಅದರ ಅರ್ಥ ಕೆಲವು ಸಂದರ್ಭಗಳಲ್ಲಿ ಒಂದೇ ಆಗಿರುತ್ತದೆ. ಸಹಾಯವು ಬಾಹ್ಯ ಪ್ರಚೋದನೆಗೆ ಸಂಬಂಧ ಪಟ್ಟರೆ ಪ್ರೇರಣೆಯು ಆಂತರಿಕ ಪ್ರಚೋಧನೆಗೆ ಸಂಬಂಧಪಟ್ಟಿರುತ್ತದೆ."[೭]

ಮನುಷ್ಯನ ಸೃಜನ ಸಾಮರ್ಥ್ಯದ ಅಭಿವ್ಯಕ್ತಿಯ ಪರಿಣಾಮವಾಗಿ "ಚಿತ್ರ, ಶಿಲ್ಪ, ನೃತ್ಯ, ಕಾವ್ಯ ಇತ್ಯಾದಿ ಕಲೆಗಳು ರೂಪುಗೊಂಡಿವೆ. ಆದರೆ ಇವುಗಳಲ್ಲಿ ಒಂದು ಮತ್ತೊಂದಕ್ಕೆ ವ್ಯತ್ಯಾಸವಿರುವುದು

---

೭. ಶಂಕ್ರಪ್ಪ ಕುಂದಗೋಳ (ಸಂ): ಚಿತ್ರಕಲಾವಿದ ಡಿ. ವ್ಹಿ. ಹಾಲಭಾವಿ, ಪು. ಸಂ. ೧೧೫.

ಆಯಾ ಕಲೆಗಳ ಆಯ್ಕೆ ಮಾಡಿಕೊಂಡಿರುವ ಅಥವಾ ವ್ಯಕ್ತವಾಗುವ ಮಾಧ್ಯಮಗಳಲ್ಲಿ ಹೊರತು ಸೃಜನಶೀಲ ಪ್ರಕ್ರಿಯೆಯನ್ನು ಕುರಿತಂತೆ ಮೂಲಭೂತವಾದ ವ್ಯತಾಸಗಳೇನು ತೋರುವುದಿಲ್ಲ. ಏಕೆಂದರೆ ಎಲ್ಲ ಕಲೆಗಳ ಉದ್ದೇಶ ರಸಾನುಭವವನ್ನು ನೀಡುವುದು. ಕಲಾವಿದನ ಸೃಜನಶೀಲ ಮನಸ್ಸಿಗೆ ವ್ಯಕ್ತಿಗತವಾದ ಅಥವಾ ಭೌತಿಕವಾದ 'ಪ್ರಭಾವ' ಅಥವಾ ಪ್ರಾಕೃತಿಕ ಅಥವಾ ಸಾಮಾಜಿಕ ವಿದ್ಯಮಾನಗಳಿಂದ 'ಪ್ರೇರಣೆ' ಇವೆರಡನ್ನೂ ಒಗ್ಗೂಡಿಸಿಕೊಂಡು ದೃಶ್ಯವೊಂದರ ರಚನೆಗೆ ಬೇಕಾಗುವ ಸ್ವಸೃಜನವಾದ 'ಶೈಲಿ' ಹಾಗೂ ಈ ಮೂರನ್ನೂ ಮೇಳೈಸಿಕೊಂಡು ನಿರ್ಮಿಸುವ ದೃಶ್ಯಗಳಿಗೆ ವಿಶಿಷ್ಟ 'ತಂತ್ರ' ನಿರ್ವಹಣೆಗೆ ಈ ನಾಲ್ಕು ನೆಲೆಗಳ ಮದ್ಯೆ ಉತ್ತಮ ಬಾಂಧವ್ಯ ಕಲ್ಪಿಸಿಕೊಂಡಾಗ ಮಾತ್ರವೇ ಒಂದು ಕಲಾಕೃತಿ ರಚನೆಯು ಸಾಧ್ಯವಿದೆ."[೭] ಈ ನಾಲ್ಕು ನೆಲೆಗಳನ್ನು ತಮ್ಮ ಅನುಭವದ ನೆಲೆಗಟ್ಟಿನಲ್ಲಿ ಗಟ್ಟಿಗೊಳಿಸಿಕೊಂಡ ಪಾಟೀಲರ ಕಲಾಕೃತಿಗಳಲ್ಲಿ ಈ ನೆಲೆಗಳು ಸ್ಪಷ್ಟವಾಗಿ ಗೋಚರವಾಗುತ್ತವೆ.

"ವಿಶ್ವದ ಯಾವುದೇ ಕಲಾವಿದರ ಕಲಾಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಕಲಾವಿದನಿಗೆ ತಾನಿರುವ ಸ್ಥಳ ಮುಖ್ಯವಾಗುತ್ತದೆ. ಬೇರೆ ಬೇರೆ ಕಾರಣಕ್ಕಾಗಿ ಬೇರೆ ಬೇರೆ ಸ್ಥಳಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಒಂದೇ ಸ್ಥಳ ಎಲ್ಲ ಉದ್ದೇಶಗಳನ್ನು ಸಫಲಗೊಳಿಸುವಲ್ಲಿ ಸಹಕಾರಿ ಆಗುವುದಿಲ್ಲ. ವೈಯಕ್ತಿಕವಾಗಿ ಒಬ್ಬ ಸಾಮಾನ್ಯ ಮನುಷ್ಯನಿಗೆ ಯಾವ ಸ್ಥಳವಾದರೇನು. ಆದರೆ ಒಬ್ಬ ಕಸಬುಗಾರ ಕಲಾವಿದನಿಗೆ ಸ್ಥಳ ಬಹಳ ಮುಖ್ಯ. ಹೆನ್ರಿ ಮೆಟಿಸ್ ಹಾಗೂ ಗಾಗ್ವಿನರಂಥವರು ಕಲೆಯ ಉನ್ನತ ಶಿಖರದ ಹುಡುಕಾಟದಲ್ಲಿ ಕಾಡುಸೇರಿದರು. ಪರಿಶುದ್ಧವಾದ ಬೆಳಕಿನಲ್ಲಿ ಕಲೆ ಹುಡುಕಿಕೊಂಡು ಹೋದರು. ಚಿತ್ರಕಾರರು ರಮ್ಯ ಭೂದೃಶ್ಯ ಸುಂದರ ಪರಿಸರದೆಡೆಗೆ ಕಾಲು ಕಿತ್ತರು. ಆಗಲೇ ಅವರು ಅತಿ ಉಚ್ಚ ಸ್ಥಾನ ಪಡೆದರು."[೮] ಪಾಟೀಲರು ಹೀಗೆ ಮಣ್ಣಿನ ವಾಸನೆಯಿಂದಲೇ ಮೇಲಕ್ಕೆ ಬಂದವರು. ದಿಲ್ಲಿಯಲ್ಲೋ, ಮುಂಬೈಯಲ್ಲೋ ಕಲೆಯ ವ್ಯಾಪಾರ ಇರುವ ಕಡೆಗೋ ಇರಬೇಕೆಂದಿರದೆ ತಮ್ಮ ಕಲೆಯಲ್ಲಿ ಪಿಕಾಸೋವಿನ ಕ್ಯೂಬಿಸಂ ಶೈಲಿಗೆ ಮತ್ತು ಕರ್ನಾಟಕದ ಕಲಾವಿದರಾದ ಕೆ. ಕೆ. ಹೆಬ್ಬಾರರ ರೇಖಾಚಿತ್ರಗಳ ಪ್ರಭಾವಕ್ಕೆ ಒಳಗಾದರು.

ಪಾಟೀಲರ ಕಲಾಕೃತಿಗಳಲ್ಲಿ ಪ್ರಭಾವ

"ಚಿತ್ರಕಲಾ ಇತಿಹಾಸದಲ್ಲಿ ಅನೇಕ ಕಲಾವಿದರು ತಮ್ಮದೆ ಆದ ಶೈಲಿ ವೈಶಿಷ್ಟ್ಯತೆಯಿಂದ ತಮ್ಮ ಸಮಕಾಲಿನ ಕಲಾವಿದರಿಂದ ಬೇರೆಯೇ ಎನ್ನುವಂತೆ ತಮ್ಮ ಕಲಾಕೃತಿಗಳ ಮೂಲಕ

---

೭. ರವೀಂದ್ರ ಎಸ್. ಕಮ್ಮಾರ (ಸಂ): ಚಿತ್ರಕಲಾವಿದ ವಿ. ಬಿ. ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು, ಪು. ೨೦೫.
೮. ಶಂಕರ ಪಾಟೀಲ (ಸಂ): ಚಿತ್ರಕಲಾ ಚಿಂತನೆ, ಪು. ೪೫.

ತಮ್ಮತನವನ್ನು ವ್ಯಕ್ತಪಡಿಸಿದ್ದಾರೆ. ಪ್ರಪಂಚದ ಎಲ್ಲ ಚಿತ್ರಕಲಾವಿದರು ಒಂದಿಲ್ಲಾ ಒಂದು ರೀತಿಯಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ಪ್ರಾರಂಭದ ದೆಸೆಯಲ್ಲಿ ಪ್ರಭಾವ ಬೀರಿರುವುದನ್ನು ಕಾಣುತ್ತೇವೆ. ಕೊನೆಗೆ ತಮ್ಮದೇ ಆದ ಮಾರ್ಗದಲ್ಲಿ ಚಿತ್ರಗಳನ್ನು ರಚಿಸಿ ತಮ್ಮ ಪ್ರತಿಭೆಯನ್ನು ಮೆರೆದು ತಮಗೆ ತಾವೇ ಸಾಟಿಯಾಗಿರುವುದನ್ನು ನೋಡುತ್ತೇವೆ."[೯]

ಪಾಟೀಲರು ಕೂಡ ಇದರಿಂದ ಹೊರತಾಗಿಲ್ಲ. ಅವರು ಚಿತ್ರಕಲಾ ವ್ಯಾಸಂಗ ಮಾಡಿದ್ದು ಮುಂಬಯಿಯ ಜೆ. ಜೆ. ಕಲಾಶಾಲೆ ಮತ್ತು ಧಾರವಾಡದ ಡಿ. ವಿ. ಹಾಲಭಾವಿಯವರ ಕಲಾಶಾಲೆಯಲ್ಲಿ. ಅಂದಿನ ಅಕಾಡೆಮಿಕ ಕಲಾ ವಾತಾವರಣ ಮತ್ತು ಗುರುಗಳ ಪ್ರಭಾವ ಒಂದೆಡೆಯಾದರೆ, ಹೊರ ಪ್ರಪಂಚದ ಕಲಾ ಪ್ರಯೋಗಗಳ ಪ್ರಭಾವ ಮತ್ತು ಪ್ರವಾಸದ ದಿನಗಳಲ್ಲಿ ಆಯಾ ಪ್ರದೇಶದ ಪರಿಸರದ ಪ್ರಭಾವವನ್ನು ಇವರ ಚಿತ್ರದಲ್ಲಿ ನೋಡುತ್ತೇವೆ. ನಂತರದಲ್ಲಿ ಅವರು ತಮ್ಮದೇ ಆದ ಮಾರ್ಗದಲ್ಲಿ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ.

ಅವರ ಮೇಲೆ ಪ್ರಭಾವ ಬೀರಿದ ಕೆಲವು ಲಕ್ಷಣಗಳನ್ನು ಕಾಣುವ ಚಿತ್ರಗಳನ್ನು ಇಲ್ಲಿ ಚರ್ಚಿಸಲಾಗಿದೆ. ಪಾಟೀಲರು "ಮುಂಬೈನ ಜೆ. ಜೆ. ಕಲಾ ಶಾಲೆಯಲ್ಲಿ ಕಲಿಯುವಾಗ ಪಾಶ್ಚಾತ್ಯರ ಆಳ್ವಿಕೆಗೆ ಒಳಪಟ್ಟಂತ ಈ ಶಾಲೆಯಲ್ಲಿ ಪಾಶ್ಚಾತ್ಯ, ಅಕಾಡೆಮಿಕ್ ಶೈಲಿಯ ತಂತ್ರವನ್ನೇ ಹೇಳಿಕೊಡುತ್ತಿದ್ದರು. ಇದರಿಂದಾಗಿ ಪಾಶ್ಚಾತ್ಯ ಮಾದರಿಯ ಆಲದ ಮರದಂತೆ ವಿಶಾಲವಾಗಿ ಬೆಳೆದ ಈ ಶಾಲೆಯ ಅಭ್ಯಾಸ ಕ್ರಮದ ನೆರಳನ್ನು ಆಗಿನ ಕಾಲದ ಎಲ್ಲ ಕಲಾವಿದರ ಕಲಾಕೃತಿಗಳಲ್ಲಿ ಕಾಣುತ್ತೇವೆ. ಹೀಗಾಗಿ ಭಾರತೀಯ ಹಾಗೂ ಪಾಶ್ಚಾತ್ಯ ಮಿಶ್ರ ಕಲಾಸಂಪ್ರದಾಯದ ಚಿತ್ರಕಾರರು ಆಗ ಬೆಳೆದು ಬಂದರು."[೧೦] ಅಂತವರಲ್ಲಿ ಪಾಟೀಲರು ಒಬ್ಬರು. ಅವರ ಆ ಪ್ರಭಾವವನ್ನು ಇವರ ಕಲಾಕೃತಿಗಳಲ್ಲಿ ನೋಡಬಹುದು.

ಹೀಗೆ ಅಧ್ಯಯನದ ಅವಧಿಯಲ್ಲಿ ಕಲಾ ಶಾಲೆಯ ಉತ್ತಮ ವಾತಾವರಣ ಮತ್ತು ಕಲೆಗಾಗಿಯೇ ತಮ್ಮನ್ನು ಅರ್ಪಿಸಿಕೊಂಡಂತಹ ಜಿ.ಎಸ್.ದಂಡಾವತಿಮಠ, ಡಿ. ವ್ಹಿ. ಹಾಲಭಾವಿ, ಎಂ.ವಿ.ಮಿಣಜಗಿ ಗುರುಗಳ ಮತ್ತು ಹಿರಿಯ ಕಲಾವಿದರಾದ ಕೆ. ಬಿ. ಕುಲಕರ್ಣಿ, ದಿಲ್ಲಿಯ ಜಿ. ಆರ್. ಸಂತೋಷ ಇವರುಗಳ ಕಲಾಕೃತಿಗಳಲ್ಲಿ ಪಾಶ್ಚಾತ್ಯ ಮಾದರಿಯ ಭಾರತೀಯ ಶೈಲಿಯ ಕಲಾಕೃತಿಗಳಲ್ಲಿ ಕಂಡುಬರುವ

---

೯. ಲಕ್ಷ್ಮೀದೇವಿ ಗವಾಯಿ (ಸಂ): ಕಲಾವಿದ ಎಂ.ಎ. ಚಟ್ಟಿಯವರ ಬದುಕು ಮತ್ತು ಕಲಾಕೃತಿ, ಪು. ೩೫೧.
೧೦. ಅದೇ, ಪು. ೩೫೧.

ನೈಜ ರೀತಿಯ ನೆರಳು ಬೆಳಕಿನ ಸೂಕ್ಷ್ಮತೆಗಳು ವರ್ಣಗಳ ಬಳಕೆ, ಕೌಶಲ್ಯಗಳಿಗೆ ಪಾಟೀಲರು ಪ್ರಭಾವಿತರಾಗಿ ಕಲಾಕೃತಿ ರಚನೆಯಲ್ಲಿ ವಿವಿಧ ಮಾಧ್ಯಮಗಳಲ್ಲಿ ತಮ್ಮ ಕೃತಿಗಳಲ್ಲಿ ದುಡಿಸಿಕೊಂಡಿರುವುದನ್ನು ಅವರ ಕಲಾಕೃತಿಗಳಲ್ಲಿ ಕಾಣಬಹುದು.

"ಜಿ. ಎಸ್. ದಂಡಾವತಿಮಠರ "ಕಾಶ್ಮೀರಿ ಭಿಕ್ಷುಕ" ಎಂಬ ಚಿತ್ರ ಅತ್ಯಂತ ಉತ್ಕೃಷ್ಟ ರೀತಿಯ ಚಿತ್ರವಾಗಿದ್ದು, ಹದಿಹರೆಯದ ಮುಖ. ಮುಖದ ಮೇಲೆ ನೀಳವಾಗಿ ಎದ್ದು ಕಾಣುವ ಮೂಗು, ದೀನತೆ ತುಂಬಿದ ಕಣ್ಣುಗಳು ನೋಡಿದಾಕ್ಷಣ ಕಾಶ್ಮೀರಿ ಎನಿಸುವ ಲಕ್ಷಣಗಳು, ಕುಡಿ ಮೀಸೆ, ನವುರಾದ ಗಡ್ಡ, ಕಲಾತ್ಮಕ ಭಾವನೆಗಳನ್ನು ಸೆರೆ ಹಿಡಿಯುವಂತೆ ಲೇಪಿಸಿದ ವರ್ಣಗಳು, ಅಂಗಾಂಗಗಳ ಪ್ರಮಾಣ, ಮನೋಗತ ಭಾವನೆಗಳು, ಸ್ಫುಟವಾಗಿ ಚಿತ್ರದಲ್ಲಿ ಗೋಚರಿಸುತ್ತದೆ. ವರ್ಣಗಳ ಲೇಪನದಲ್ಲಿ ಯೂರೋಪಿಯನ್ನರ ಪ್ರಭಾವವನ್ನು ನೋಡಬಹುದು"[೧೧] ಪಾಟೀಲರು ದಂಡಾವತಿಮಠ ಗುರುಗಳಲ್ಲಿ ಚಿತ್ರಕಲಾ ಅಧ್ಯಯನ ಕೈಗೊಂಡ ಸಂದರ್ಭದಲ್ಲಿ ಈ ಮೇಲಿನ ಅಂಶಗಳಿಗೆ ಪ್ರಭಾವಿತರಾಗಿ ಚಿತ್ರಕಲಾ ಕೃತಿಗಳನ್ನು ಸಹಜವಾಗಿ ರಚಿಸಿದ್ದಾರೆ.

ಶಂಕರ ಪಾಟೀಲರು ಮುಂಬೈ ಮತ್ತು ಧಾರವಾಡದಲ್ಲಿ ಚಿತ್ರಕಲೆಯ ಅಧ್ಯಯನ ಪೂರ್ತಿಗೊಳಿಸಿ ದಾವಣಗೆರೆ ಕಲಾ ಶಾಲೆಯಲ್ಲಿ ಉಪನ್ಯಾಸಕರಾಗಿ ನೇಮಕವಾದ ಸಂದರ್ಭದಲ್ಲಿ ಕರ್ನಾಟಕದ ಯಾವುದೇ ಭಾಗದಲ್ಲಿ ಆಧುನಿಕ ಕಲೆಯ ವಾಸನೆ ಇರಲಿಲ್ಲ. ಆ ಸಂದರ್ಭದಲ್ಲಿ ಪಿಕಾಸೋ ಮತ್ತು ಕರ್ನಾಟಕದ ಖ್ಯಾತ ಹಿರಿಯ ಕಲಾವಿದರಾದ ಕೆ. ಕೆ. ಹೆಬ್ಬಾರ, ಆರ್.ಎಂ.ಹಡಪದ ರೇಖಾಚಿತ್ರಗಳನ್ನು ನೋಡಿದ ಪಾಟೀಲರು ರೇಖಾಚಿತ್ರಗಳಿಂದ ಪ್ರಭಾವಿತಗೊಂಡು ಆಧುನಿಕತೆಯತ್ತ ಸಾಗಿ ತಮ್ಮ ಮುಂದಿನ ಪ್ರಯೋಗಗಳನ್ನು ಆಧುನಿಕತೆಗೆ ರೂಪಾಂತಿಸಿದರು. ಈ ಮೂಲಕ ಪಾಟೀಲರು ಮುಂದಿನ ದಿನಗಳಲ್ಲಿ ಅಧ್ಯಾಪನದ ಜೊತೆಗೆ ಸೃಜನಶೀಲವಾದ ಆಧುನಿಕ ರೇಖಾಚಿತ್ರಗಳನ್ನು, ವರ್ಣಕಲಾಕೃತಿಗಳನ್ನು ರಚಿಸಲು ಪ್ರಾರಂಭಿಸಿದರು. ಅಲ್ಲದೆ ಕಲಾಕೃತಿಗಳ ರಚನೆಯಲ್ಲಿ ಮಿಶ್ರ ಮಾಧ್ಯಮ, ಇಂಡಿಯನ್ ಇಂಕ, ಬ್ಲೋಟಾರ್ಚ (ಪ್ಲೈವುಡ್ ಬರ್ನ್‌ಆರ್ಟ್) ಮಾಧ್ಯಮದಲ್ಲಿ ರಚಿಸಿದ ಕಲಾಕೃತಿಗಳಲ್ಲಿ ಕೆ. ಕೆ. ಹೆಬ್ಬಾರರ ರೇಖಾಚಿತ್ರಗಳ ಪ್ರಭಾವ ಕಾಣಬಹುದು.

ಕಲಾಕೃತಿಗಳಲ್ಲಿ ಭಾವನೆಗಳು ಭಾರತೀಯವಾದರೂ ಚಿತ್ರಿಸುವ ಶೈಲಿ, ತಂತ್ರ, ಪಾಶ್ಚಿಮಾತ್ಯ ಅಕಾಡೆಮಿಕ್ ಶೈಲಿಯದು ಒಂದು ರೀತಿಯ ಅಭ್ಯಾಸ ಪೂರ್ಣವಾದ ಕಲಾಕೃತಿಗಳೆನ್ನಬೇಕು.

---

೧೧. ಶಂಕ್ರಪ್ಪ ಕುಂದಗೋಳ (ಸಂ): ಚಿತ್ರಕಲಾವಿದ ಡಿ. ವ್ಹಿ. ಹಾಲಭಾವಿ, ಪು. ೪೨.

ವರ್ಣಗಳನ್ನು ಬೆರೆಸುವ ರೀತಿ, ಆಕೃತಿಗಳ ನೆರಳು – ಬೆಳಕಿನಲ್ಲಿ ತ್ರಿಮಾನದ ಅನುಭವ, ದೂರ ಸಮೀಪಗಳ ಕಲ್ಪನೆ, ಜೀವಂತ ಹಾಗೂ ಜಡವಸ್ತುಗಳ ನೈಜವಾದ ಮೈವಳಿಕೆ, ತದ್ರೂಪತೆ, ಪ್ರತಿಯೊಂದು ವಸ್ತುವಿನ ವಿವರ, ಆಕೃತಿಗಳನ್ನು ಪ್ರಮಾಣ ಬದ್ಧವಾಗಿ ರಚಿಸಿದ ರೀತಿ, ಉಡುಗೆ, ತೊಡುಗೆಯಲ್ಲಿ ನಿರಿಗೆಗಳು ಎಲ್ಲದರಲ್ಲೂ ಮುಂಬೈ ಜೆ. ಜೆ. ಕಲಾಶಾಲೆಯ ಪ್ರಭಾವದ ನೆಲೆಗಟ್ಟಿನ ಭೂಮಿ, ಆಕಾಶ, ನೀರು, ಗಾಳಿ, ಅಗ್ನಿ(ಪಂಚಭೂತಗಳ)ಗಳಿಗೆ ಪ್ರಭಾವಿತರಾಗಿ ತಮ್ಮ ಕಲಾಕೃತಿಗಳಲ್ಲಿ ಸಂಕೇತಗಳ ಮೂಲಕ ಚಿತ್ರ ರಚಿಸಿರುವುದನ್ನು ನೋಡಬಹುದು.

ಪಾಟೀಲರು ಸಾಹಿತ್ಯ, ಸಂಗೀತ ಪ್ರೇಮಿ, ಆಸಕ್ತರೂ ಅಗಿದ್ದರೂ ಚೆನ್ನವೀರ ಕಣವಿಯವರು ರಚಿಸಿದ ಕವನ, ಬಿಸ್ಮಿಲ್ಲಾಖಾನರ ಶಹನಾಯಿವಾದನ, ಮಲ್ಲಿಕಾರ್ಜುನ ಮನ್ಸೂರರ ಹಾಗೂ ಭಾಲೆಖಾನರ ಸಂಗೀತಗಳನ್ನು ಆಲಿಸುತ್ತಿದ್ದರು. ಹೀಗೆ ಸಂಗೀತ, ಸಾಹಿತ್ಯಕ್ಕೆ ಪ್ರಭಾವಿತರಾಗಿ ಶೃಂಗಾರಾತ್ಮಕ ಕಾವ್ಯ ಪ್ರಧಾನ ರೇಖಾಚಿತ್ರ, ವರ್ಣಕಲಾಕೃತಿಗಳನ್ನು ರಚಿಸಿದ್ದಾರೆ.

ಮಾನವ ಜೀವನದ ಖುಷಿಕೊಡುವ ಸಂಗತಿಗಳಲ್ಲಿ ಅತ್ಯಂತ ಮಹತ್ವವಾದುದು. 'ಪ್ರವಾಸ' ಇದು ಖುಷಿ ಕೊಡುವುದರ ಜೊತೆಗೆ ಅನೇಕ ಬಗೆಯ ಅನುಭವಗಳೊಂದಿಗೆ ಅರಿವಿನ ಪರಿಧಿಯನ್ನು ವಿಸ್ತರಿಸುತ್ತದೆ. ಪಾಟೀಲರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅನುದಾನದಲ್ಲಿ ಹಿಮಾಲಯ ಪ್ರದೇಶಕ್ಕೆ ಪ್ರವಾಸ ಕೈಗೊಂಡು ಮುಖ್ಯವಾಗಿ ಆಯಾ ಪ್ರಾಂತಗಳ ಸಾಹಿತ್ಯ, ಸಂಸ್ಕೃತಿಯ ಅಧ್ಯಯನ ಮಾಡಿ ಜೊತೆಗೆ ಅಲ್ಲಿನ ಕಲೆ, ಪರಿಸರಕ್ಕೆ ಪ್ರಭಾವಿತರಾಗಿ ರೇಖಾಚಿತ್ರ, ವರ್ಣಚಿತ್ರ, ಛಾಯಾಚಿತ್ರಣಗಳನ್ನು ರಚಿಸಿರುವುದು ಕಂಡುಬರುತ್ತದೆ.

"ಭಾರತೀಯ ಚಿತ್ರಕಲೆಗೆ ಪ್ರಪಂಚದಲ್ಲಿ ವಿಶಿಷ್ಟ ಸ್ಥಾನವಿದೆ. ಸಾವಿರಾರು ವರ್ಷಗಳ ವೈವಿಧ್ಯಮಯ ಸಂಸ್ಕೃತಿ, ನಾಗರಿಕತೆ ಪರಂಪರೆಯನ್ನು ಹೊಂದಿದ ನೆಲೆ ಭಾರತ, ಹೀಗಾಗಿ ಇಲ್ಲಿಯ ಕಲೆಗೆ ಹತ್ತು ಹಲವು ಮುಖಗಳು. ಈ ಪರಂಪರೆ ಆದಿಮಾನವನಿಂದ ಆರಂಭಗೊಂಡು ಇಂದಿನ ಆಧುನಿಕ ಮನುಷ್ಯನ ತನಕ ಹಾಸಿಕೊಂಡಿದೆ. ಉನ್ನತ ಕಲಾವಂತಿಕೆ ಭಾರತೀಯ ಕಲೆಯ ಮೂಲಗುಣ. ವಿಭಿನ್ನ ಧರ್ಮ, ನಡವಳಿಕೆ, ಆಚರಣೆ ನಮ್ಮ ಕಲೆಯನ್ನು ಶ್ರೀಮಂತಗೊಳಿಸಿವೆ. ಬಹುಶಃ ಇಲ್ಲಿರುವಷ್ಟು ಸಂಕೀರ್ಣವಾದ ವೈವಿಧ್ಯಮಯ ಬದುಕು, ರೂಢಿ ಜಗತ್ತಿನಲ್ಲಿ ಇನ್ನೆಲ್ಲಿಯೂ ಸಿಗದು, ಅದಕ್ಕೆ ಇಲ್ಲಿಯ ಪ್ರಾಚೀನ ಕಲೆಯ ಇಂದಿನ ಆಧುನಿಕ ಕಲೆಯವರೆಗೆ ಹಲವು ಶೈಲಿ ತಂತ್ರ ಸಿದ್ಧಾಂತಗಳನ್ನು

ಒಳಗೊಂಡು ಬೆಳೆಯುತ್ತಾ ಬಂದು ಸಮೃದ್ಧಿಗೊಂಡಿದೆ."[೧೨] ಇಂತಹ ಸಮೃದ್ಧಿಯಾದ ಚಿತ್ರಕಲಾ ಪ್ರಪಂಚದಲ್ಲಿ ಶಂಕರ ಪಾಟೀಲರು ತಮ್ಮದೇ ಆದ ರೇಖಾವಿನ್ಯಾಸ, ವರ್ಣಗಾರಿಕೆ, ತಂತ್ರ ಹಾಗೂ ಶೈಲಿಯ ವಿಶಿಷ್ಟ ಕೊಡುಗೆಯನ್ನು ನೀಡಿ ಕಲಾಕೃತಿಗಳು ಜನಸಾಮಾನ್ಯರ, ಕಲಾವಿದರ, ಕಲಾರಸಿಕರ ಮನವನ್ನು ಸೂರೆಗೊಳ್ಳುವಂತೆ ಮಾಡಿವೆ.

"ಯಾವುದೇ ಕಲೆ, ಕಲಾವಿದನ ವ್ಯಕ್ತಿತ್ವದ ಪ್ರಕಟಣೆಯಾಗುವುದು ಮುಖ್ಯ. ತಂತ್ರ, ಮಂತ್ರ ಯಾವುದಾದರೇನು? ಪೂರ್ವದೇಶಗಳ ಗುಣಾಂಶಗಳನ್ನೇ ಹೀರಿಕೊಂಡು ಸರ್ವೆ ಸಾಮನ್ಯವೆನಿಸುವ ತಾಂತ್ರಿಕ ಕೌಶಲ್ಯ ಹಾಗೂ ವೈಚಾರಿಕ ನಿಶ್ಚಲತೆ. ಇವೆರಡನ್ನೂ ಸಮನ್ವಯಗೊಳಿಸಿ ಅವಿರ್ಭವಿಸುವ ವ್ಯಕ್ತಿ ಮೂಲವಾದ ಕಲಾಯೋಗವೇ ಭಾರತೀಯ ಕಲಾವಿದನ ಸಿದ್ಧಿ ಎನಿಸುವುದು"[೧೩] ಪಾಶ್ಚಾತ್ಯ ಪದ್ಧತಿಯು ಅಕಾಡೆಮಿಕ ಪದ್ಧತಿಯಲ್ಲಿ ಕಲಾ ಅಧ್ಯಯನವನ್ನು ಮಾಡಿದರೂ ತಮ್ಮ ಕಲಾಕೃತಿಗಳಲ್ಲಿ ದೇಶಿಯ ಸೊಬಗನ್ನು ಅಭಿವ್ಯಕ್ತಿಸಿದ ರೀತಿ ಅನುಪಮವಾಗಿದೆ. "ಸಂವೇದನೆಯ ನೆಲೆಗಳು ಬದುಕಿನ ವೈವಿಧ್ಯಮಯ ಮಜಲುಗಳ ಪ್ರಭಾವದಿಂದ ಬದಲಾಗುವ ಒಬ್ಬನೆ ಕಲಾವಿದ ತನ್ನ ಬದುಕಿನ ವಿವಿಧ ಘಟ್ಟಗಳಲ್ಲಿ ವಿವಿಧ ಸಂವೇದನೆಗಳಿಗೆ ಒಳಗಾಗಿ ವೈವಿಧ್ಯಮಯವಾಗಿ ಸೃಷ್ಟಿಸುವಂತೆ ಆ ಸಂದರ್ಭ ಪ್ರೇರಣೆಯಾಗುತ್ತದೆ."[೧೪]

ಪಾಟೀಲರ ಕಲಾಕೃತಿಗಳಲ್ಲೂ ಈ ವೈವಿಧ್ಯತೆಯನ್ನು ಕಾಣುತ್ತೇವೆ. ಪಾಟೀಲರು ವಿದ್ಯಾರ್ಥಿ ಮತ್ತು ವೃತ್ತಿಜೀವನದ ಅವಧಿಯಲ್ಲಿ ಚಿತ್ರರಚನೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡು ಸಾವಿರಾರು ಚಿತ್ರಗಳನ್ನು ರಚಿಸಿದ್ದಾರೆ. ಮತ್ತು ಈ ಕಲಾಕೃತಿಗಳು ಅವರ ಕಲಾಸಾಧನೆಯ ಪ್ರತೀಕಗಳಾಗಿವೆ.

ಕಲಾ ಇತಿಹಾಸ ಅದರಲ್ಲೂ ಪಾಶ್ಚಿಮಾತ್ಯಕಲೆಯ ದಿಗ್ಗಜರುಗಳಾದ ಪಿಕಾಸೋ, ವ್ಯಾನಗಾಗ್, ಕ್ಲಾಡ್‌ಮೊನೆ, ರೊರೀಚ್‌ರ್ ಕಲಾಕೃತಿಗಳಲ್ಲಿನ ತಂತ್ರಗಳನ್ನು ಮೆಚ್ಚುವ ಪಾಟೀಲರು ಸರ್ ಜೆ. ಜೆ. ಕಲಾಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಜಿ. ಎಸ್. ದಂಡಾವತಿಮಠ ಗುರುಗಳ ಮಾರ್ಗದರ್ಶನದಲ್ಲಿ ಮತ್ತು ಹಾಲಭಾವಿಯವರ "ಸ್ಕೂಲ್ ಆಪ್ ಆರ್ಟ್ಸ್" ಕಲಾ ಶಾಲೆಯಲ್ಲಿ ಕಲೆಯ ವ್ಯಾಕರಣವನ್ನು ಕಲಿತರು. ಅಲ್ಲಿನ ಗುರುಗಳ ಮಾರ್ಗದರ್ಶನದಲ್ಲಿ ಸಾಹಿತ್ಯಕ್ಕೆ ಅಕ್ಷರ ಭಾಷೆಯ ಜ್ಞಾನ ಎಷ್ಟು

---

೧೨. ಲಕ್ಷ್ಮೀದೇವಿ ಗವಾಯಿ (ಸಂ): ಕಲಾವಿದ ಎಂ. ಎ. ಚೆಟ್ಟಿ ಜೀವನ ಮತ್ತು ಕಲಾಕೃತಿಗಳು, ಪು. ೩೧೭.
೧೩. ಅದೇ.
೧೪. ಅದೇ, ಪು. ೩೧೮.

ಮುಖ್ಯವೋ ಅಷ್ಟೇ ಕಲಾವಿದನಿಗೆ ತನ್ನ ಕಲಾಕೃತಿಗಳಲ್ಲಿ ರೇಖೆ, ಬಣ್ಣ, ಮೈವಳಿಕೆ ತಂತ್ರಗಳು ಬಹುಮುಖ್ಯ ಎಂಬುದನ್ನು ಪಾಟೀಲರು ಅರಿಯುತ್ತಾರೆ.


ರೇಖಾವಿನ್ಯಾಸ :

ಪಾಟೀಲರು ಭಾವಚಿತ್ರಗಳಲ್ಲಿ ನಿಸರ್ಗ ಚಿತ್ರಗಳಲ್ಲಿ ಅಥವಾ ಸಂಯೋಜನಾ ಚಿತ್ರಗಳಲ್ಲಾಗಲಿ ರೇಖಾವಿನ್ಯಾಸವೂ ರೇಖೆಗಳ ಭಾವ ಸಂಚಾರ ಸುಂದರವಾಗಿ ತಮ್ಮದೇ ಆದ ವಿಶಿಷ್ಟತೆಯನ್ನು ಹೊಂದಿದೆ. ಪಾಟೀಲರ ಕಲಾಕೃತಿಗಳಲ್ಲಿ ಒಂದು ರೇಖೆ ಎರಡು ಅಂತರಂಗಗಳನ್ನು ತಲುಪುವ ಸನ್ನಿವೇಶದಲ್ಲಿ ಒಂದು ಆಕಾರವನ್ನು ಸೃಷ್ಟಿಸಿ ಸರಳವಾಗಿ, ವಕ್ರವಾಗಿ, ಅಂಕುಡೊಂಕಾಗಿ ರೇಖೆಯು ತನ್ನ ಚಲನೆಯ ಕ್ರಮದಲ್ಲಿ ಒಂದು ಬಗೆಯ ಸ್ವಾರಸ್ಯವನ್ನು ಮತ್ತು ಸೌಂದರ್ಯವನ್ನು ತೋರುತ್ತವೆ. ತೆಳು ರೇಖೆ, ದಪ್ಪರೇಖೆ ಕಲಾಕೃತಿಗಳಲ್ಲಿ ಬಳಸಿ ಉದ್ದ, ಅಗಲ, ಸಮೀಪ ದೂರದ ಬ್ರಾಂತಿಯನ್ನು, ನೆರಳು ಬೆಳಕಿನ ಕಲ್ಪನೆಯನ್ನು ಸಹ ಕೊಡಬಲ್ಲದವುಗಳಾಗಿವೆ. ಹೀಗೆ ವೈವಿಧ್ಯಮಯವಾದ ರೇಖೆಗಳ ಮೂಲಕ ಕಲಾಕೃತಿಗಳಲ್ಲಿ ಸ್ವಂತಿಕೆಯನ್ನು ಕಂಡುಕೊಂಡು ಚಿತ್ರದ ಪ್ರತಿಯೊಂದು ಭಾಗದಲ್ಲಿ ಆನಂದವನ್ನು ಸವಿಯುವಂತೆ ಒಂದು ವಿಶಾಲವಾದ ವಿಸ್ತಾರವಾದ ತೆರಪಿಗೆ ಸುಂದರ ಪ್ರಮಾಣಬದ್ಧ ಗುಣವನ್ನು ಹೊಂದಿವೆ. ಪಾಟೀಲರು ಭಾರತೀಯ ಸಾಂಪ್ರದಾಯಿಕ, ಸಾಮಾಜಿಕ, ಧಾರ್ಮಿಕ, ವಿಷಯಗಳ ಕುರಿತು ರಚಿತಗೊಂಡ ಚಿತ್ರಗಳಲ್ಲಿ ವಿವಿಧ ಭಂಗಿ – ಹಾವಭಾವಗಳನ್ನು ನೈಜವಾಗಿ ಚಿತ್ರಿಸುವದರ ಜೊತೆಗೆ ಪಾಶ್ಚಾತ್ಯ ಶೈಲಿಯಲ್ಲಿ ಕ್ಯೂಬಿಂಸ್ ಶೈಲಿಯ ಚಿತ್ರಗಳಲ್ಲಿ ಹಲವು ಪ್ರಯೋಗಗಳನ್ನು ಮಾಡಿದ್ದಾರೆ. ಮತ್ತು ಇವರು ರಚಿಸಿದ ಹಲವು ರೇಖಾಚಿತ್ರಗಳು, ಕಾವ್ಯದ ಸೊಬಗನ್ನು ತಂದುಕೊಟ್ಟಿರುವುದನ್ನು ಕಾಣಬಹುದು.

೧. ಪೂರ್ವ ಸಿದ್ಧತೆಯ ರೇಖಾಚಿತ್ರಗಳು :

"ಒಂದು ಚಿತ್ರಕ್ಕೆ ಪ್ರಾಥಮಿಕ ಪೂರ್ವಸಿದ್ಧತೆಗಾಗಿ ರೇಖಾ ಚಿತ್ರವಿರಬಹುದು. ಭಿತ್ತಿ ಚಿತ್ರ, ಮೊಸಾಯಿಕ್ ಚಿತ್ರಗಳಿಗೆ ಪ್ರಾಚೀನ ಕಾಲದಿಂದಲೂ ಪೂರ್ವಭಾವಿ ಚಿತ್ರಣಗಳನ್ನು ಇದ್ದಿಲು, ಸಿನೋಪಿಯಾ ಕೆಂಪು ಬಣ್ಣಗಳಿಂದ ಚಿತ್ರಿಸುತ್ತಿದ್ದರು. ಸ್ಕೆಚ್ ಪುಸ್ತಕಗಳಲ್ಲಿ ಪ್ರವಾಸ ಇತ್ಯಾದಿ ಸಂದರ್ಭಗಳಲ್ಲಿ ದೃಶ್ಯಾನುಭವಗಳನ್ನು ಅಂಕಿತಗೊಳಿಸುವ ಪದ್ಧತಿಯಾಗಿ ರೂಢಿಯಾಯಿತು. ನಂತರ ವರ್ಣಚಿತ್ರ ರಚನೆಗೆ ಅವುಗಳನ್ನು ಬಳಸಿಕೊಳ್ಳುವುದು. ಇವು ಕರಡು ಚಿತ್ರಗಳು, ರೇಖಾಚಿತ್ರಗಳೇ.

ಪೂರ್ವಸಿದ್ಧತೆಯ ಕರಡುಚಿತ್ರಗಳು




ಚಿತ್ರ ೧



ಚಿತ್ರ ೨



ಚಿತ್ರ ೩



ಚಿತ್ರ ೪

ಕರಡು ಚಿತ್ರಗಳಲ್ಲಿ ಒಂದು ಬಗೆಯ ನಾವಿನ್ಯ, ಹೊಸ ಕಳೆ ಇರುತ್ತದೆ. ಸತ್ವ ಇರುತ್ತದೆ. ಕೆಲವು ಕಲಾವಿದರು ಅವುಗಳನ್ನೇ ಅಂತಿಮ ಸ್ವಯಂಪೂರ್ಣ ಚಿತ್ರಗಳಾಗಿ ರುಜು ಮಾಡಿರುವುದುಂಟು."[೧೫]

ಈ ರೀತಿಯ ಪೂರ್ವಸಿದ್ಧತೆಯ ರೇಖಾಚಿತ್ರ ರಚಿಸಲು ಕಲಾವಿದನಿಗೆ ದೀರ್ಘಕಾಲದ ಪರಿಶ್ರಮ ಸತತ ಅಭ್ಯಾಸ ಬಹುಮುಖ್ಯವಾಗಿರುತ್ತದೆ.

"ಆಕೃತಿಗಳ ಗುಣ ಲಕ್ಷಣಗಳನ್ನು ಕಂಡು ಹಿಡಿಯುವ ಕಣ್ಣು ಬೇಕು. ಬಣ್ಣ ಬೆಳಕುಗಳ ಸ್ಪಷ್ಟವಾದ ಕಲ್ಪನೆ ಇರಬೇಕು. ಪಳಗಿದ ಚಿತ್ರಕಾರ ಈ ವಿಚಾರದಲ್ಲಿ ಕಣ್ಣಿನ ಸೂಕ್ಷ್ಮತೆ ಬೆಳೆಯಿಸಿಕೊಂಡಂತೆ ನೋಡಿದೊಡನೆ ರೇಖಿಸಬಲ್ಲ ಚುರುಕುತನಗಳಿಸುತ್ತಾನೆ. ಮುಂದೆ ಅಂತಹ ಅಭ್ಯಾಸ ನೆನಪಿಗೆ ಬಂದು ಯಾವ ಆಕೃತಿಯನ್ನು ಕಾಣದೆ ನೋಡಿದ ಚಿತ್ರವನ್ನು ಸ್ಮರಿಸಿ ಬರೆಯಲು ನೆರವಾಗುತ್ತದೆ. ಇಂತಹ ಪೂರ್ವ ಸಿದ್ಧತೆ ಇದ್ದಂತಹ ವ್ಯಕ್ತಿ ಮುಂದೊಂದು ದಿನ ಒಂದು ದೊಡ್ಡ ಚಿತ್ರ ಸೃಷ್ಟಿಯನ್ನು ಮಾಡುವಾಗಿ ತಾನು ಹಿಂದೆ ಅಂಕಿಸಿಕೊಂಡ ರೇಖಣಿಗಳನ್ನು ತನ್ನ ಸೃಷ್ಟಿಯಲ್ಲಿ ಬಳಸುವುದು ಸಾಧ್ಯವಾಗುತ್ತದೆ."[೧೬] ಈ ಹಿನ್ನೆಲೆಯಲ್ಲಿ ಶಂಕರ ಪಾಟೀಲರ ಸಾಧನೆಯನ್ನು ಕೆಲವು ಚಿತ್ರಗಳ ಸಮೇತ ಈ ಕೆಳಗೆ ಹೇಳಲಾಗಿದೆ.

ಚಿತ್ರ ೧ : ನೃತ್ಯಗಾರರು : ಸಿಮ್ಲಾ ಪ್ರದೇಶದ ಒಂದು ನೃತ್ಯ ಮೇಳ ಈ ತರಹದ ಸಂಯೋಜನಾ ಚಿತ್ರವನ್ನು ತೈಲವರ್ಣದಲ್ಲಿ ಚಿತ್ರಿಸಿದ್ದಾರೆ. ಅದಕ್ಕಿಂತ ಮೊದಲು ಇದು ಪಾಟೀಲರು ತಮ್ಮ ಪ್ರವಾಸದ ದಿನಗಳಲ್ಲಿ ಸಿಮ್ಲಾದಿಂದ ಸುಮಾರು ೨೨ ಕಿ. ಮೀ ದೂರದಲ್ಲಿರುವ ನಾಲ್ ದೇಹರಾ ಎಂಬಲ್ಲಿಗೆ ಹೋಗಿ ಜೂನ್ ತಿಂಗಳಲ್ಲಿ ಸಿ. ಪಿ. ಎಂಬ ಜಾತ್ರೆಯ ಸಂದರ್ಭದಲ್ಲಿ ಸ್ಥಳಿಯರು ತಮ್ಮ ಪಾರಂಪರಿಕ ಬಟ್ಟೆಗಳನ್ನು ಧರಿಸಿ ಅಂದರೆ ಸುಂದರ ಸಾಂಪ್ರದಾಯಿಕ ಉಡುಪುಗಳನ್ನು ಉಟ್ಟುಕೊಂಡು ಕುಣಿಯುವ ಹಾಡುವ ಆ ಜಾತ್ರೆಯ ದಿನಗಳ ದೃಶ್ಯವನ್ನು ವಿಷಯಕ್ಕೆ ತಕ್ಕಂತೆ ರೇಖೆಗಳ ಮೇಳ (Harmony) ವನ್ನು ಈ ಚಿತ್ರಣದಲ್ಲಿ ನಾವು ಕಾಣಬಹುದು. ನೃತ್ಯನಿರತ ವ್ಯಕ್ತಿಗಳ ರೇಖೆಗಳು ಒಂದೊಂದು ಭಾವನೆಯನ್ನು ಚಿತ್ರದಲ್ಲಿ ಕಾಣಬಹುದು. ಹಾಗೂ ನೃತ್ಯ ನಿರತ ವ್ಯಕ್ತಿಗಳ ಉಡುಗೆ ತೊಡುಗೆ ಒಂದೆ ತರಹದ ಸಾಂಪ್ರದಾಯಿಕ ಜಾನಪದ ಶೈಲಿಯದಾಗಿದ್ದು ಅವರವರ ಹಾವಭಾವಗಳಲ್ಲಿ ಭಿನ್ನತೆಯನ್ನು ಕಾಣಬಹುದು. ಈ ಕರಡು ಚಿತ್ರಣವು ಮುಂದೆ ವರ್ಣ ವಿನ್ಯಾಸದಲ್ಲಿ ಇನ್ನೂ ವರ್ಣಮಯವಾಗಿ ಲಯಬದ್ಧವಾಗಿ ಚಿತ್ರಿತಗೊಂಡಿದೆ.

---

೧೫. ಬಿ.ವಿ.ಕೆ. ಶಾಸ್ತ್ರೀ (ಸಂ): ರೇಖಾಚಿತ್ರಕಲೆ, ಪು. ೧೫.
೧೬. ಶಂಕರ ಪಾಟೀಲ (ಸಂ): ಚಿತ್ರಕಲಾ ಚಿಂತನೆ, ಪು. ೫.

ಚಿತ್ರ ೨ : ವೀಣೆ ನುಡಿಸುತ್ತಿರುವ ಮಹಿಳೆ : ಪಾಟೀಲರು ೧೯೮೬ರಲ್ಲಿ ವುಡ್ ಬರ್ನಿಂಗ್ (ಬ್ಲೋಟಾರ್ಚ) ಮಾಧ್ಯಮದಲ್ಲಿ ಕಲಾಕೃತಿ ರಚನೆಯ ಪೂರ್ವ ಸಿದ್ಧತೆಯ ರೇಖಾಚಿತ್ರವಾಗಿದೆ. ಚಿತ್ರವು ಭಾರತೀಯ ಶಾಸ್ತ್ರೀಯ ಸಂಗೀತದ ವಿಷಯವನ್ನೊಳಗೊಂಡಿದ್ದು, ಸಂಯೋಜನೆಯಲ್ಲಿ ಆಕೃತಿಗಳು ಕಡಿಮೆ ಇದ್ದರೂ ರೇಖಾವಿನ್ಯಾಸದಲ್ಲಿ ಸಮತೋಲನವಿದೆ. ಮತ್ತು ರೇಖಾಚಿತ್ರದಲ್ಲಿ ನೆರಳು ಬೆಳಕಿನ ಅನುಭವ ಗೋಚರಿಸದಿದ್ದರೂ ಚಿತ್ರೀತ ವೀಣೆ ನುಡಿಸುತ್ತಿರುವ ಮಹಿಳೆಯ ಭಾವನೆ, ಅಭಿವ್ಯಕ್ತಿಯನ್ನು ನೇರ ಅಡ್ಡಲಾಗಿ ಹಾಕಿದ ರೇಖೆಗಳಿಂದ ಕ್ರೋಢಿಕೃತವಾಗಿದೆ. ವೀಣೆಯಿಂದ ನುಡಿಸಿದ ಧ್ವನಿ ರೇಖೆಗಳ ಮಧ್ಯದಿಂದ ಲಯಬದ್ಧವಾಗಿ ಹೊರ ಹೊಮ್ಮುತ್ತಿದೆ. ಮಹಿಳೆಯು ಕೊರಳಲ್ಲಿ ಅಲಂಕಾರಿಕ ಸರ, ಭಾರತೀಯ ಸಂಸ್ಕೃತಿಯ ವೇಷಭೂಷಣವನ್ನು ರೇಖೆಗಳ ಮೂಲಕ ಕೇವಲ ಬಾಹ್ಯ ರೇಖೆಗಳ ಮೂಲಕ ಶರೀರದ ದುಂಡುತನ ಚೆಲವು ಜೀವಂತಿಕೆಯನ್ನು ತೋರಿಸಿದ್ದಾರೆ.

ಚಿತ್ರ ೩ : ಮಧುಚಂದ್ರಮ ಶೀರ್ಷಿಕೆಯ ಬ್ಲೋ ಟಾರ್ಚ ಮಾಧ್ಯಮದಲ್ಲಿ ಪ್ಲೈವುಡ್ ಹಲಗೆಯ ಮೇಲೆ ಸಂಯೋಜನಾ ಚಿತ್ರದ ಕರಡು ರೇಖಾಚಿತ್ರವಾಗಿದೆ. ಇಲ್ಲಿ ಪಾಟೀಲರು ಬಾಹ್ಯ ರೇಖೆಗಳಿಂದ ಭಾರತೀಯ ಸಂಸ್ಕೃತಿಯ ಪ್ರಣಯ ಕಾವ್ಯಗಳ ಆಧಾರದಲ್ಲಿ ಶೃಂಗಾರಾತ್ಮಕವಾಗಿ ಗಂಡು ಹೆಣ್ಣಿನ ನೀಳ ಪಾದ, ವಿಶಾಲವಾದ ಅಂಗರಚನೆಯನ್ನು ರೇಖೆಗಳ ಏರಿಳಿತಗಳನ್ನು ತಮ್ಮ ಅಭಿವ್ಯಕ್ತಿಗೆ ಅನುಗುಣವಾಗಿ ಬಳಸಿಕೊಂಡಿದ್ದಾರೆ. ರೇಖೆಗಳನ್ನು ವೈವಿಧ್ಯಮಯವಾಗಿ ಬಳಸುತ್ತಾ ಮುನ್ನೆಲೆ ಮತ್ತು ಹಿನ್ನೆಲೆಯಲ್ಲಿ ಆಕಾಶ, ಚಂದ್ರ, ಹೂದೋಟ ಪಕ್ಷಿಗಳನ್ನು ಚಿತ್ರಿಸಲಾಗಿದೆ. ಒಟ್ಟು ರೇಖಾ ಚಿತ್ರ ಲಯಬದ್ಧತೆ, ಲಾವಣ್ಯದಿಂದ ಕೂಡಿದ್ದು, ಹೆಬ್ಬಾರರ ಹಾಡುವ ರೇಖೆಗಳನ್ನು ಹೋಲುತ್ತವೆ. ಮತ್ತು ಈ ರೇಖಾಚಿತ್ರಣದಲ್ಲಿ ರೂಪಕ್ಕಿಂತ ಶೃಂಗಾರ ರಸ ಅಭಿವ್ಯಕ್ತಿಸುವಲ್ಲಿ ಚಿತ್ರದಲ್ಲಿನ ರೇಖೆಗಳ ಬಿರುಸನ್ನು ತೀವ್ರ ಓಟವನ್ನು ಪ್ರಚೋದಿಸುವ ರೇಖೆಗಳ ವಿನ್ಯಾಸವನ್ನು ಸ್ಪಷ್ಟವಾಗಿ ನಿರೂಪಿಸಿದ್ದಾರೆ.

ಚಿತ್ರ ೪ : ವಾರ್ಲಿ ಚಿತ್ರಕಲೆ : ಈ ಚಿತ್ರಕಲೆಯಲ್ಲಿ ಜಾನಪದ ಕಲೆಗಳಲ್ಲಿನ ರೂಪಿಕೆಗಳನ್ನು ಬಳಸಿ ಸಮಕಾಲಿನ ಅನುಭವಗಳನ್ನು ರೇಖೆಗಳ ಮೂಲಕ ತೀವ್ರವಾಗಿ ಅಭಿವ್ಯಕ್ತಿಗೊಳಿಸಿರುವ ಪಾಟೀಲರ ಕಲಾಕೃತಿಯಲ್ಲಿ ವಿಪುಲವಾಗಿ ಕಾಣಬಹುದು. ಇವರ ಈ ಚಿತ್ರಕಲೆಯ ರೇಖೆಗಳಲ್ಲಿ ಮಹಾರಾಷ್ಟ್ರದ ಠಾಣೆ ಜಿಲ್ಲೆಯ ವಾರ್ಲಿ ಬುಡಕಟ್ಟಿನ ಜನಪದ ಆಚರಣೆಗಳನ್ನು ಸುಲಲಿತ ರೇಖೆಗಳ ಮೂಲಕ ಸಾಂಕೇತಿಕವಾಗಿ ಚಿತ್ರಿಸಿದ್ದಾರೆ.

ಹೀಗೆ ತಮ್ಮದೇ ಆದ ಶೈಲಿಯಲ್ಲಿ ಚಿತ್ರಣವನ್ನು ನಿಂತು ಹೋಗುವ ರೇಖೆಗಳ ಮೂಲಕ ಜನಪದ ಮತ್ತು ಆದಿವಾಸಿ ಕಲೆಗಳಿಗೆ ಮೋಹಿತರಾಗಿ ನವ್ಯಕಲೆಯ ಮಾದರಿಯಲ್ಲಿ ಚಿತ್ರಣಗಳನ್ನು ರಚಿಸಿದರು. ಚಿತ್ರಣದ ರೇಖೆಗಳಲ್ಲಿ ಅಂಕನೆ (Sketch) ಮತ್ತು ರೇಖೆಗಳ ಮೇಳ (Harmony) ವನ್ನು ಇಲ್ಲಿ ಕಾಣಬಹುದು. ಅಲ್ಲದೆ ಒಂದೊಂದು ರೇಖೆ ಭಾವನೆಯನ್ನು ಕೊಡುತ್ತವೆ. ಜನಪದರ ಆಚರಣೆಯ ನೃತ್ಯದಲ್ಲಿ ಭಾವಭಂಗಿಗಳು, ಕುಣಿಯುವ ತಾಳದ ಹೆಜ್ಜೆಗಳು ಇವೆಲ್ಲವೂಗಳೂ ರೇಖೆಗಳ ಮಾಧ್ಯಮದಿಂದ ಹೊಸ ಮುಂದೆ ವರ್ಣಚಿತ್ರದಲ್ಲಿ ಚಿತ್ರಿಸಿದ್ದಾರೆ.

ವರ್ಣಚಿತ್ರಗಳಲ್ಲಿ ರೇಖಾವಿನ್ಯಾಸ:

ವರ್ಣಚಿತ್ರಗಳ ರೇಖಾ ವಿನ್ಯಾಸಕ್ಕೆ ಪಾಟೀಲರು ಬಿಡುವಿನ ಸಂದರ್ಭದಲ್ಲಿ ಪ್ರವಾಸದ ದಿನಗಳಲ್ಲಿ ಚಿತ್ರಿಸಿದ ಚಿತ್ರಗಳು ಉತ್ಕೃಷ್ಟವಾಗಿದ್ದು, ರೇಖಾಪ್ರಧಾನವಾಗಿವೆ. ವರ್ಣಗಳ ಜೊತೆಗೆ ರೇಖಾ ವಿನ್ಯಾಸದ ನಿರೂಪಣೆಯನ್ನು ನೋಡಬಹುದಾಗಿದೆ. ಕಲಾಕೃತಿ ರಚನೆಯಲ್ಲಿ ವರ್ಣಗಳಿಗೆ ಕುಂದು ಬರದಂತಹ ರೀತಿಯಲ್ಲಿ ರೇಖಾವಿನ್ಯಾಸವನ್ನು ರಚಿಸಿದ್ದಾರೆ.

ಚಿತ್ರ ೫ : ಇದೊಂದು ತೈಲವರ್ಣದಲ್ಲಿ ರಚಿಸಿದ ಚಿತ್ರಕೃತಿಯಾಗಿದ್ದು, ತಾಯಿ ಮಗುವನ್ನು ಎತ್ತಿಕೊಂಡು ಚಿತ್ರದಲ್ಲಿ ಗಡಸು ವರ್ಣಗಳ ಲೇಪನ ಬಾಹ್ಯರೇಖೆಯ ಅನುಭವವನ್ನು ನೀಡುತ್ತದೆ. ಸಂಯೋಜನೆಯಲ್ಲಿ ಆಕೃತಿಗಳು ಘನಾಕೃತಿಯದವುಗಳಾಗಿದ್ದು, ಆಕೃತಿಯಲ್ಲಿ ಚಪ್ಪಟೆ (Flat) ವರ್ಣಬಳಸಿದ್ದರೂ ಅಲ್ಲಲ್ಲಿ ಛಾಯಾಂಕನವನ್ನು ನೀಡಿದ್ದಾರೆ. ವರ್ಣಮೇಳದಲ್ಲಿ ಲೋಪವಾಗದ ಹಾಗೆ ಒಂದಕ್ಕೊಂದು ಮೇಳೈಸುವಂತೆ ಬಣ್ಣಗಳನ್ನು ಮಿಶ್ರಣ ಮಾಡಿ ಪ್ರಾಥಮಿಕ ಹಂತದ ವರ್ಣಗಳನ್ನು ಬಳಸದೇ ಪೂರಕ ವರ್ಣಗಳನ್ನು ಬಳಸಿದ್ದಾರೆ. ಹಿನ್ನಲೆಯಲ್ಲಿ ನಿಸರ್ಗದ ಅನುಭವವನ್ನು ನೀಡಲು ಆಯತಾಕಾರದದಲ್ಲಿ ತಿಳಿವರ್ಣ ಲೇಪನಮಾಡಿ ಚಪ್ಪಟೆ ಆಕಾರದಲ್ಲಿ ಚಂದ್ರನನ್ನು ಚಿತ್ರಿಸಿದ್ದು, ಒಟ್ಟು ಸಂಯೋಜನೆಯಲ್ಲಿ ವರ್ಣ ಮತ್ತು ರೇಖೆಗಳ ಮೇಳ (Harmony) ನವ್ಯ ಕಲೆಯ ಪ್ರಭಾವ ಚಿತ್ರಕ್ಕೆ ಸೊಬಗು ತಂದಿದೆ.

ಚಿತ್ರ ೬ : ತಾಂತ್ರಿಕ ಕಲೆ : ಈ ಚಿತ್ರವು ರೇಖಾ ಪ್ರಧಾನವಾದ ಚಿತ್ರವಾಗಿದೆ. ಚಿತ್ರದಲ್ಲಿ ಯಾವುದೇ ವ್ಯಕ್ತಿ ಮೂಲ ಚಿತ್ರಗಳು ಗೋಚರಿಸದೇ ಸಂಕೇತಗಳನ್ನು ಬಳಸಿ ವರ್ಣಗಳಿಗೆ ಹೊಸ ಅರ್ಥಕೊಡುವತ್ತ ಪೃಥ್ವಿ ಅಥವಾ ಭೂತತ್ವವನ್ನು ಹಳದಿ ವರ್ಣದಿಂದ, ವಾಯು ತತ್ವವನ್ನು ದೂಮ್ರ ವರ್ಣ ಅಥವಾ ಹಸಿರು ವರ್ಣದಿಂದ, ಆಕಾಶವನ್ನು ನೀಲಿ ವರ್ಣದಿಂದ ಹೀಗೆ ತೆಳು

ಮತ್ತು ಅಲ್ಲಲ್ಲಿ ಪಾರದರ್ಶಕ ವರ್ಣಗಳನ್ನು ಬಳಸಿದ್ದಾರೆ. ಜ್ಯಾಮಿತಿಕ ಆಕೃತಿಗಳ ಹೊರ ಮೈ ರೇಖೆಗಳಿಂದ ಚಿತ್ರಿಸಿದ್ದಾರೆ. ಆಕೃತಿಗೆ ಪ್ರಖರ ವರ್ಣಗಳನ್ನು ಬಳಸಿದ್ದರೂ ಆಕೃತಿಯ ಹೊರ ರೇಖೆಗಳು ಅದಕ್ಕೆ ಪೂರಕವಾಗಿ ಚಿತ್ರಿತವಾಗಿದೆ. ರೇಖೆಗಳು ವರ್ಣಗಳನ್ನು ಬೇರ್ಪಡಿಸದೇ ಹೊಂದಿಕೊಂಡಂತೆ ಚಿತ್ರದಲ್ಲಿ ಒಂದು ರೀತಿಯ ವರ್ಣರೇಖೆಗಳು ಸುಂದರವಾದ ಸಾಂಗತ್ಯವನ್ನು ನೋಡುತ್ತೇವೆ.

ಹೀಗೆ ಪಾಟೀಲರ ರೇಖಾವಿನ್ಯಾಸ ವರ್ಣಚಿತ್ರ ರಚನೆಯಲ್ಲೂ ಅಷ್ಟೇ ಗಮನಾರ್ಹವಾಗಿದೆ. "ಚಿತ್ರಗಳಲ್ಲಿ ರಚಿತವಾಗುವಂತಹ ಸರಳರೇಖೆಯೇ ಇರಲಿ ವಕ್ರ ರೇಖೆಯೇ ಇರಲಿ ವರ್ಣಗಳ ಜೊತೆಯಲ್ಲಿ ಪೂರಕವಾಗಿ ಚಿತ್ರಿಸಿದ ರೀತಿ ಅವರ ಸಾಧನೆಯ ಪ್ರತಿಫಲವಾಗಿದೆ. ಸರಳ ಮತ್ತು ವಕ್ರರೇಖೆಗಳು ಒಂದಕ್ಕೊಂದು ವಿರುದ್ಧವಾಗಿ ಕಾಣಿಸದೆ, ಪೂರಕವಾಗಿರಬೇಕು. ಈ ಕಾರಣದಿಂದ ಚಿತ್ರಕಾರರು ಆಕೃತಿ ನಿರೂಪಣೆಗೆ ವಿಶೇಷ ಪ್ರಾಧಾನ್ಯತೆ ನೀಡಿದ್ದಾರೆ. ವಿವಿಧ ರೂಪ ಸುಸಂಗತವಾಗಿ ನಿರೂಪಿಸುವ ವಿಧಾನವೇ ಚಿತ್ರಕ್ಕೆ ಪುಷ್ಟಿಕೊಡುವ ಗುಣ ಎನ್ನಬಹುದು."[೧೭]

ಪಾಟೀಲರ ಜಲವರ್ಣ ಚಿತ್ರಗಳೇ ಆಗಲಿ, ತೈಲವರ್ಣ ಚಿತ್ರಗಳೇ ಆಗಲಿ, ರೇಖಾಚಿತ್ರಗಳಾಗಿರಬಹುದು. ಅತ್ಯಂತ ಸಮತೋಲನದಿಂದ ನಿರೂಪಿಸಿದವುಗಳಾಗಿವೆ. ಹಾಗೂ ಪಾಟೀಲರ ರೇಖಾವಿನ್ಯಾಸವನ್ನು ನೇರವಾದ ರೇಖಾಚಿತ್ರಗಳಲ್ಲಿ ಮತ್ತು ವರ್ಣ ಚಿತ್ರಗಳಲ್ಲಿ ಲಯಬದ್ಧವಾಗಿ ಎಲ್ಲ ರಸ ಭಾವಗಳನ್ನು ಸ್ಫುರಿಸುವ ಚೈತನ್ಯಮಯವಾದ ರೇಖಾ ವಿನ್ಯಾಸದ ಅಭಿವ್ಯಕ್ತಿಯನ್ನು ಕಾಣುತ್ತೇವೆ.

ಪಾಟೀಲರ ಕಲಾಕೃತಿಗಳ ರಚನಾಶೈಲಿ :

"ಚಿತ್ರರಚನೆಯ ಕಾಲದಲ್ಲಿ ಕಲಾವಿದನಿಗಿರುವ ಮಾನಸಿಕ ಭಾವನೆಗಳಂತೆ ಅವನ ಕಲಾ ಕೌಶಲ ಕೂಡ ಬದಲಾಗುತ್ತದೆ. ಒಂದೊಂದು ಬಗೆಯ ವಿಚಾರಗಳನ್ನು ತಿಳಿಸಲು ಒಂದೊಂದು ಬಗೆಯ ಕೌಶಲ್ಯ ಶೈಲಿ ಬೇಕಾಗಬಹುದು. ಅದನ್ನು ಕಲಾವಿದ ತಾನಾಗಿಯೇ ತನ್ನ ಮನಸ್ಸಿನಿಂದ ಭಾವನೆಗಳಿಗೆ ರೂಪಕೊಡಲು ಯೋಗ್ಯವೆನಿಸುವ ಶೈಲಿಯನ್ನು ಪ್ರಯೋಗಿಸುತ್ತಾನೆ. ಮಾನಸಿಕ ಭಾವನೆಗಳನ್ನು ಹೊರಗೆಡಹಲು ಪ್ರತಿಯೊಬ್ಬ ಕಲಾವಿದ ತನ್ನದೇ ಆದ ಶೈಲಿಯನ್ನು ಗುರುತಿಸಿ ರೂಪಿಸಿ ಬೆಳಸಿಕೊಳ್ಳಬೇಕಾಗುತ್ತದೆ."[೧೮]

---

೧೭. ಲಕ್ಷ್ಮೀದೇವಿಗವಾಯಿ (ಸಂ): ಕಲಾವಿದ ಎಂ. ಎ. ಚೆಟ್ಟಿ ಜೀವನ ಮತ್ತು ಕಲಾಕೃತಿಗಳು, ಪು. ೩೨೬
೧೮. ಶಂಕರ ಪಾಟೀಲ (ಸಂ): ಚಿತ್ರಕಲಾ ಚಿಂತನೆ, ಪು. ೫೧.

"ಚಿತ್ರದಲ್ಲಿ ಶೈಲಿ ಎಂದರೆ ಸಾಮಾನ್ಯವಾಗಿ ಚಿತ್ರರಚನಾ ಕೌಶಲವೆಂತಲೂ, ಸಚಿತ್ರ ಆಕಾರಗಳನ್ನು ಗೆರೆ ಹಾಗೂ ಬಣ್ಣಗಳಿಂದ ಹೊರ ಹೊಮ್ಮಲು ಬಳಸುವ ತಂತ್ರಗಳೆಂತಲೂ ಹೇಳಬಹುದು. ಕೇವಲ ಚಿತ್ರರಚನಾ ಕೌಶಲವೇ ಶೈಲಿ ಎಂದು ಹೇಳುವ ವಿವರಣೆ ಅಷ್ಟೊಂದು ಸಮಂಜಸ ಎನಿಸುವುದಿಲ್ಲ. ಕಲಾವಿದನ ಚಾತುರ್ಯದ ಜೊತೆಗೆ ಅವನ ಮನೋವೃತ್ತಿ, ಅವನ ಮಾನಸಿಕ ಉದ್ವೇಗ ಹಾಗೂ ಕಳವಳಗಳಿಗೆ ಸ್ಪಂದಿಸುವ ರೀತಿ, ಅವನ ಪರಿಸರ ಅವರ ಪರಂಪರೆ ಹಾಗೂ ಧಾರ್ಮಿಕ ಹಿನ್ನಲೆ, ರಾಜಕೀಯ ಸ್ಥಿತಿಗತಿಗಳ ನೆಲೆಗಟ್ಟು ಇವೆಲ್ಲವುಗಳ ಸಮಗ್ರ ಸಂತುಳಿತ ಸಂಕೀರ್ಣ ಪರಿಣಾಮವೇ ಶೈಲಿಯಾಗಿ ಪರಿಣಮಿಸುತ್ತದೆ ಎಂದು ಹೇಳಬಹುದು."[೧೯]

"ಈ ಅಭಿಪ್ರಾಯದಂತೆ ಪಾಟೀಲರ ಕಲಾಕೃತಿಗಳ ಅಧ್ಯಯನಕ್ಕೊಳಪಡಿಸಿದಾಗ ವಿದ್ಯಾರ್ಥಿ ದೆಸೆಯಲ್ಲಿ ಮೊದ ಮೊದಲು ಅಕೆಡೆಮಿಕ್ ಕಲಿಕೆಯಲ್ಲಿ ಪಾಶ್ಚಿಮಾತ್ಯ ಕಲೆಯ, ಕಲಾವಿದರ, ಹಾಗೂ ಭಾರತೀಯ ಬೇರೆ ಬೇರೆ ಕಲಾಶೈಲಿಯ ಪ್ರಭಾವಕ್ಕೆ ಒಳಗಾಗಿದ್ದರೂ ಸಹ ತದನಂತರದಲ್ಲಿ ಪಾಶ್ಚಿಮಾತ್ಯ, ಮಾಧ್ಯಮಶೈಲಿ, ರೂಪ, ತಂತ್ರ, ಇತ್ಯಾದಿಗಳನ್ನು"[೨೦] ನಮ್ಮ ದೇಶೀಯ ಸೊಬಗಿಗೆ ಹೊಂದಿಸುವ ಪ್ರಯತ್ನವನ್ನು ಪಾಟೀಲರು ಮಾಡಿದ್ದಾರೆ. ಅಂತೆಯೇ ಅಲ್ಲಿ ನಮ್ಮ ಭಾವನೆಗಳಿಗೆ, ವಸ್ತು ವಿಷಯಗಳಿಗನುಸಾರವಾಗಿ ನೈಜ ಶೈಲಿಗೆ ಬದ್ಧರಾಗಿರುವದರ ಜೊತೆಗೆ ಅದರಲ್ಲಿಯೇ ಅವರ ಸೃಜನಶೀಲತೆಯನ್ನು ಅವರ ಕಲಾಕೃತಿಗಳಲ್ಲಿ ಕಾಣಬಹುದು.

ಪಾಟೀಲರು ಸಾಮಾನ್ಯವಾಗಿ ತಮ್ಮ ವೈಯಕ್ತಿಕ ಅನುಭವಗಳನ್ನು, ಧೋರಣೆಗಳನ್ನು ಅಭಿವ್ಯಕ್ತಿಸುತ್ತಿದ್ದು, ಅದು ಹೆಚ್ಚಾಗಿ ಸ್ವಪ್ರೇರಿತವುಳ್ಳ ಸಮಾಜದ ಸಂಸ್ಕೃತಿಯ ಒಪ್ಪಿತ ಆದರ್ಶಗಳನ್ನು ಕಲಾಕೃತಿ ರಚನೆಯ ಸಂದರ್ಭದಲ್ಲಿ ತಮ್ಮದೇ ಆದ ದೃಷ್ಟಿಕೋನದಲ್ಲಿ ಕಲಾ ಪ್ರಕಾರಗಳಲ್ಲಿನ ಶೈಲಿಯನ್ನು ಕಂಡುಕೊಳ್ಳಲು ಪ್ರಯತ್ನಿಸಿರುವುದನ್ನು ಅವರ ಕಲಾಕೃತಿಗಳಲ್ಲಿ ನೋಡಬಹುದು.

ಪಾಟೀಲರ ಕಲಾಕೃತಿಗಳಲ್ಲಿ ರೇಖೆ ವರ್ಣಗಳ ಲೇಪನ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಸಂಯೋಜನೆ ಚಿತ್ರಗಳಲ್ಲಿ ಹೆಚ್ಚು ಪ್ರಾಧಾನ್ಯತೆ ಇದೆ. ಜೊತೆಗೆ ವೈವಿಧ್ಯತೆಯ ಅಂಶಗಳನ್ನು ಕಾಣುತ್ತೇವೆ. ಅಂದಿನ ಸಮಕಾಲಿನ ಚಿತ್ರಗಳಲ್ಲಿ ಇರುವ ಕೃತಿಗಳು ಸಾಕಷ್ಟು ಪ್ರಭಾವ ಬೀರಿ ವಿಷಯಗಳ ಬಿನ್ನತೆಯ ಜೊತೆಗೆ ಪರಂಪರೆ, ಸಂಸ್ಕೃತಿಯ ಅನೇಕ ಬೆಳವಣಿಗೆಯ ಮೆಟ್ಟಿಲುಗಳನ್ನು ಪಾಟೀಲರ ಕಲಾಕೃತಿಗಳಲ್ಲಿ ಕಾಣುತ್ತೇವೆ.

---

೧೯. ಶಂಕರ ಪಾಟೀಲ (ಸಂ): ಚಿತ್ರಕಲಾ ಚಿಂತನೆ, ಪು. ೫೨.
೨೦. ಅದೇ.

ಪಾಟೀಲರು ಚಿತ್ರರಚನೆಯಲ್ಲಿ ಯಾವ ನಿಯಮಗಳಿಗೂ ಅಂಟಿಕೊಳ್ಳದೆ, ನೀತಿ ನಿಯಮಗಳ ಕಟ್ಟು ಪಾಡಿಗೆ ಜಾರದೆ, ಕಲಾಕೃತಿಗಳ ರಚನೆಯ ಸಂದರ್ಭದಲ್ಲಿ ತಮ್ಮದೇ ಆದ ಸ್ವಂತ ನಿಯಮಗಳನ್ನು ರೂಢಿಸಿಕೊಂಡು ನಿಯಮಗಳಿಗನುಗುಣವಾಗಿ ಚಿತ್ರಕಲಾಕೃತಿಗಳನ್ನು ರಚಿಸಿ ಆ ಚಿತ್ರ ತಮ್ಮದಾಗಿ ಕಾಣುವುದರ ಆಶಯವನ್ನು ವ್ಯಕ್ತಪಡಿಸುತ್ತಿದ್ದರು.

ಚಿತ್ರರಚನೆ ಪಾರಂಪರಿಕ ಶೈಲಿಯದೇ ಅಥವಾ ನವ್ಯ ಶೈಲಿಯದೇ ಎನ್ನುವುದು ಮುಖ್ಯವಲ್ಲ. ಶೈಲಿ ಯಾವುದೇ ಆಗಿರಲಿ ಆ ಚಿತ್ರ ಏನನ್ನಾದರೂ ಸಾಧಿಸಿದೆಯೇ, ಆ ಚಿತ್ರದ ಗುಣಮಟ್ಟವೇನು ಎಂಬುದು ಮುಖ್ಯವಾಗಿರುತ್ತದೆ. ಮತ್ತು ಯಾವುದೇ ಚಿತ್ರವನ್ನು ಪೂರ್ವಗ್ರಹ ಪೀಡೆಯಿಂದ ನೋಡಬಾರದು. ಪಾರಂಪರಿಕ ಚಿತ್ರಕಲಾವಿದ ಕೇವಲ ಪಾರಂಪರಿಕ ಕಲೆಯನ್ನು ಮೆಚ್ಚುವುದಾಗಲಿ, ನವ್ಯಕಲಾಕಾರ ನವ್ಯಕಲೆಯನ್ನು ಮಾತ್ರ ಮೆಚ್ಚುವುದಾಗಲಿ ತಪ್ಪು. ಎರಡು ಕಲೆಗಳಲ್ಲಿಯೂ ಒಳ್ಳೆಯ ಅಂಶಗಳನ್ನು ಮೆಚ್ಚಿಕೊಳ್ಳುವ ವಿಶಾಲ ಮನೋಭಾವನೆಯನ್ನು ಬೆಳಸಿಕೊಳ್ಳಬೇಕು. ಇಂತಹ ಮನೋಭಾವವುಳ್ಳ ಕಲಾವಿದರ ಕಲಾಕೃತಿಗಳಲ್ಲಿ ಅವರ ಶೈಲಿಗಿಂತ ಅವರ ವ್ಯಕ್ತಿತ್ವ, ಗುಣಗಳನ್ನು ಎತ್ತಿ ತೋರಿಸುತ್ತದೆ. ಇಂತಹ ವಿಶೇಷ ಗುಣಗಳನ್ನು ಪಾಟೀಲರ ಕಲಾಕೃತಿಗಳ ವಿಷಯಗಳಲ್ಲಿ ಕಾಣುತ್ತೇವೆ. ಈ ಅಂಶಗಳನ್ನು ಹಾಗೂ ಶೈಲಿ ವೈಶಿಷ್ಟತೆಯನ್ನು ಪಾಟೀಲರು ರೇಖಾಚಿತ್ರಗಳ ರೂಪದಲ್ಲಿ, ವರ್ಣಕಲಾಕೃತಿಗಳಲ್ಲಿ ಭಾವನೆಗಳನ್ನು ವ್ಯಕ್ತಪಡಿಸುವಲ್ಲಿ ಸಂಸ್ಕೃತಿ ಪರಂಪರೆ ವೇಷಭೂಷಣ, ಪ್ರಾಕೃತಿಕ ಹಿನ್ನಲೆ ಇವುಗಳೆಲ್ಲವನ್ನು ಸೂಕ್ಷ್ಮವಾಗಿ ಗ್ರಹಿಸಿ ಕಲಾಕೃತಿಗಳ ರಚನೆಯಲ್ಲಿ ಅಳವಡಿಸಿಕೊಂಡಿರುವುದು ಕಂಡುಬರುತ್ತದೆ.

ಇಂತಹ ಆಕೃತಿಗಳನ್ನು ಸ್ಪಷ್ಟವಾಗಿ ಗುರುತಿಸುವ ರೀತಿಯಲ್ಲಿ ಚಿತ್ರಿಸುವುದಲ್ಲದೆ ಪ್ರತಿಯೊಂದು ಆಕೃತಿಯನ್ನು ಅಸ್ಪಷ್ಟವಾಗಿ ಮೂರ್ತರೂಪ, ಸಂಕೇತಗಳ ಮೂಲಕ ಚಿತ್ರಿಸಿದರೂ ಕಲಾಕೃತಿಯಲ್ಲಿ ಅಂತಿಮವಾಗಿ ಸ್ಪಷ್ಟತೆಯನ್ನು ಕಾಣಬಹುದು.

ಹೀಗೆ ಪಾಟೀಲರ ಮಾನಸಿಕ ಭಾವನೆಗಳಂತೆ ಅವರ ಕೌಶಲ ಕೂಡ ಬದಲಾಗುತ್ತ ತಮ್ಮ ಚಿತ್ರಕಲಾ ಕೃತಿಗಳಲ್ಲಿ ವಿಭಿನ್ನ ವಿಚಾರಗಳ, ವಿಷಯಗಳನ್ನು ತಿಳಿಸಲು ಒಂದೊಂದು ಬಗೆಯ ಕೌಶಲಬಳಸಿಕೊಂಡಿದ್ದಾರೆ. ಮತ್ತು ಸ್ವಯಂಪ್ರೇರಿತರಾಗಿ ತಮ್ಮ ಮನಸ್ಸಿನ ಭಾವನೆಗಳಿಗೆ ರೂಪಕೊಡಲು ಯೋಗ್ಯವೆನಿಸುವ ಶೈಲಿಯನ್ನು ಚಿತ್ರರಚನೆಯ ಸಂದರ್ಭಗಳಲ್ಲಿ ಪ್ರಯೋಗಿಸಿ ಭಾವಗಳನ್ನು

ಹೊರಚಲ್ಲುವಲ್ಲಿ ಪಾಟೀಲರು ತಮ್ಮದೇ ಆದ ಶೈಲಿಯನ್ನು ರೂಪಿಸಿ, ಹಲವು ಪ್ರಾಪಂಚಿಕ ವಿಷಯಗಳ ಕುರಿತಾದ ಹಲವಾರು ಕಲಾಕೃತಿಗಳಲ್ಲಿ ಅವರ ಚಿತ್ರರಚನಾ ಶೈಲಿ ಮತ್ತು ಕೌಶಲಗಳನ್ನು ಕಾಣುತ್ತೇವೆ.

ಪಾಟೀಲರ ಒಲವು ಭಾರತೀಯ ಸಾಂಸ್ಕೃತಿಕ, ಧಾರ್ಮಿಕ, ಜನಪದ ಜನಜೀವನ, ಆಧ್ಯಾತ್ಮದ ಕಡೆಗೆ ಇತ್ತು. ಇವೆಲ್ಲದವುಗಳ ಬಗ್ಗೆ ಅವರಿಗಿದ್ದ ಒಲವನ್ನು ಅವರ ಕಲಾ ಜೀವನದ ಎಲ್ಲ ಹಂತಗಳಲ್ಲಿಯೂ ಕಾಣಬಹುದು. ಈ ಶೈಲಿಯ ಎಲ್ಲ ಒಳಹೊರವುಗಳನ್ನು ಚೆನ್ನಾಗಿ ಅರಿತು, ಆಳಕ್ಕೆ ಇಳಿದು, ಇಲ್ಲಿಯ ಅಮೂಲ್ಯ ದ್ರವ್ಯಗಳನ್ನು ತಮ್ಮದಾಗಿಸಿಕೊಂಡರು. ಹಾಗಾಗಿ ಅನೇಕ ವರ್ಷಗಳ ಸಾಧನೆಯಿಂದ ರೇಖಾಚಿತ್ರಣಗಳಲ್ಲಿ ಜಲವರ್ಣ, ತೈಲವರ್ಣ ಮತ್ತು ವುಡ್ ಬರ್ನಿಂಗ ಮಾಧ್ಯಮದ ಚಿತ್ರಗಳಲ್ಲಿ ಪ್ರಭುತ್ವ ಮತ್ತು ಸ್ವಂತಿಕೆಯನ್ನು ಪಡೆದು ಕಲಾಕ್ಷೇತ್ರದಲ್ಲಿ ತಮ್ಮದೇ ಆದ ಶೈಲಿಯನ್ನು ಕಂಡುಕೊಂಡು ಕಲಾಕೃತಿಗಳಿಗೆ ಒಳ್ಳೆಯ ಸ್ಥಾನಮಾನವನ್ನು ಕಲ್ಪಿಸಿಕೊಳ್ಳುವದರಲ್ಲಿ ಸಫಲರಾಗಿದ್ದಾರೆ.

೧. ರಮಣೀಯ ಶೈಲಿ

ಪಾಟೀಲರು ಬಹಳಷ್ಟು ಚಿತ್ರಕಲಾಕೃತಿಗಳಲ್ಲಿ ತಂತ್ರ, ವರ್ಣಗಾರಿಕೆ, ರೇಖಾಚಿತ್ರಗಳಲ್ಲಿ, ಮಾಧ್ಯಮಗಳಲ್ಲಿ ರಮಣೀಯತೆಯನ್ನು ಕಾಣಬಹುದು. ಉದಾಹರಣೆಗೆ ಬ್ಲೋಟಾರ್ಟ್ ಮಾಧ್ಯಮದಲ್ಲಿ ಕಟ್ಟಿಗೆಯ ಹಲಗೆಯ ಮೇಲೆ ಚಿತ್ರಿಸಿದ ವೀಣೆ ನುಡಿಸುತ್ತಿರುವ ಮಹಿಳೆ, ಗಣೇಶನ ಚಿತ್ರ, ಜಲವರ್ಣ ಮಾಧ್ಯಮದಲ್ಲಿ ನಿಸರ್ಗಚಿತ್ರ, ಇಂಕಮಾಧ್ಯಮದಲ್ಲಿ ರಚಿಸಿದ ಬೆಸ್ತ ಮಹಿಳೆಯರು, ನೃತ್ಯಗಾರ್ತಿಯ ಮಧುಚಂದ್ರ, ಶೀರ್ಷಿಕೆಯ ರೇಖಾಚಿತ್ರಗಳು, ತೈಲವರ್ಣ ಮಾಧ್ಯಮದಲ್ಲಿ ರಚಿಸಿದ ಪ್ರಕೃತಿ ಚಿತ್ರಣಗಳು, ಸಮುದ್ರ ದೃಶ್ಯಗಳ ಚಿತ್ರಗಳು, ವೃದ್ಧ, ಕೊಳಲು ನುಡಿಸುತ್ತಿರುವ ಗೋಪಾಲ. ವರ್ಣದಲ್ಲೇ ಆಧುನಿಕ ನೆಲೆಯ ಕಲಾಕೃತಿಗಳಾದ ಏಕಾಂತ, ತಾಯಿ ಮತ್ತು ಮಗು, ತಾಂತ್ರಿಕ ಕಲೆ ಆಕ್ರೇಲಿಕ್ ಮಾಧ್ಯಮದಲ್ಲಿ ನೃತ್ಯಗಾರರು, ಹಲವಾರು ಛಾಯಾಚಿತ್ರಣಕಲೆ (ಪೋಟೋಗ್ರಾಫಿ) ಯಲ್ಲಿ ಚಿತ್ರಿಸಿದ ಛಾಯಾಚಿತ್ರಣ, ಕೇರಳದ ಸಣ್ಣ ದ್ವೀಪಗಳು, ಛಾಂಭಾದ ಲಕ್ಷ್ಮೀನಾರಾಯಣ ದೇವಸ್ಥಾನ, ಮನಾಲಿಯ ದೃಶ್ಯ, ಹಿಮಾಲಯದ ಪರ್ವತ ಶ್ರೇಣಿಗಳ ಛಾಯಾಚಿತ್ರಣಗಳು ರಮಣೀಯ ನೆಲೆಗಳಲ್ಲಿ ರಚಿಸಿದ ರಮಣೀಯ ಶೈಲಿಯ ಚಿತ್ರಗಳೆಂದು ಗುರುತಿಸಬಹುದಾಗಿದೆ.

೨. ಅಮೂರ್ತಶೈಲಿ :

ಅಮೂರ್ತ ಕಲೆ ಎಂದಾಕ್ಷಣ, ಏನೋ, ವಿಲಕ್ಷಣವಾದ ಕಲೆ ಎಂದು ದೂರ ಸರಿಯಬೇಕಾಗಿಲ್ಲ. ಎಲ್ಲ "ಕಲೆ ಮೂಲತಃ ವಾಸ್ತವತೆಯಿಂದ ದೂರವಾಗಿದ್ದು ತನ್ನದೇ ಆದ ರೂಪವನ್ನು ಸತ್ಯವನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ಇರುತ್ತದೆ. ಸೌಂದರ್ಯ ಪ್ರಜ್ಞೆಯ ಅನುಭವದಿಂದ ಆಕಸ್ಮಾತವಾಗಿ ತಪ್ಪಿಸಿಕೊಂಡು ದೂರವಾಗಿ ಉಳಿದು ದೇಹ ಮತ್ತು ಮನಸ್ಸು ಎರಡನ್ನು ಬೇರ್ಪಡಿಸಿಕೊಂಡು, ಹೊಸ ಹೊಂದಾಣಿಕೆಗೆ ಹವಣಿಸುವ ಪ್ರಯಾಸವಾಗಿದ್ದು, ನಿರಾಕಾರಕ್ಕೆ ಆಕಾರಕೊಟ್ಟು ಸಕಾರಪಡೆಯುವುದು ಕಲೆ ಎಂದು ಮತ್ತು ಇಲ್ಲಿ ಬರುವ ಆಕಾರಗಳು ನಮಗೆ ಗೊತ್ತಿರುವ ಆಕಾರಗಳಿಗೂ ಹೋಲದೆ ಇರುವುದೇ ಈ ಮೂರ್ತ ಕಲೆಯ ವಿಶೇಷ ಮತ್ತು ಹೊಸ ರಸಾನುಭವ ಕೊಡುವುದೇ ಇದರ ಗುರಿ"[೨೧] ಎಂದು ಶಂಕರ ಪಾಟೀಲರು ಅಮೂರ್ತ ಕಲೆ ಮತ್ತು ಶೈಲಿಯ ಕುರಿತು ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದಾರೆ.

ಪಾಟೀಲರು ಹಲವಾರು ಸಂಖ್ಯೆಗಳಲ್ಲಿ ಅಮೂರ್ತ ರೇಖಾಚಿತ್ರಗಳನ್ನು ವರ್ಣಚಿತ್ರ ಕಲಾಕೃತಿಗಳನ್ನು ರಚಿಸಿದ್ದು ಅಂತಹ ಚಿತ್ರಗಳನ್ನು ಅಮೂರ್ತ ಶೈಲಿಯ ಚಿತ್ರಗಳೆಂದು ಗುರುತಿಸಿ ಅಧ್ಯಯನ ಮಾಡಲಾಗಿದೆ.

೩. ಕ್ಯೂಬಿಸಂ ಶೈಲಿ

"ಸ್ಪೇನ್ ದೇಶದ ವಿಶ್ವವಿಖ್ಯಾತ ಕಲಾವಿದ ಪಿಕಾಸೋ ರಚಿಸಿದ 'ಗೆರ್‌ನಿಕಾ' ಎಂಬ ಕಲಾಕೃತಿ ಎರಡನೆಯ ಮಹಾಯುದ್ಧದ ಭೀಕರತೆಯನ್ನು ಬಾಂಬ್ ದಾಳಿಯಿಂದಾಗಿ ಮಾನವನ ಜೀವನದ ಮೇಲಾದ ವಿರೂಪಕ ದೃಶ್ಯವಾಗಿದ್ದರೂ ಜನರಿಗೆ ಅರ್ಥವಾಗದೇ ಹೋಯಿತು. ಮುಂದೆ ಕಲಾವಿದ ಆ ಚಿತ್ರದ ಬಗ್ಗೆ ವಿವರಣೆ ನೀಡಿದಾಗ ಜೀವನದ ವಿರೂಪಕತೆಯನ್ನು ಸೃಷ್ಟಿಸಲು ಬಳಸಿದ ತಂತ್ರ ಕ್ಯೂಬಿಸಂ (ಘನಾಕೃತಿ) ಶೈಲಿಯಾಗಿ ಪ್ರಖ್ಯಾತಿ ಪಡೆಯಿತಲ್ಲದೆ ಚಿತ್ರವೂ ಜಗತ್ಪ್ರಸಿದ್ಧವಾಯಿತು. ಈ ಮೂಲ ಚಿತ್ರವನ್ನು ನಾನು ನನ್ನ ಅಮೇರಿಕೆಯ ಪ್ರವಾಸದಲ್ಲಿದ್ದಾಗ ಚಿತ್ರವನ್ನು ಕಣ್ಣಾರೆ ನೋಡಿದ್ದೇನೆ. ಅದೊಂದು ಅಗಾಧ ಅನುಭವ"[೨೨] ಎಂದು ಪಾಟೀಲರು "ಚಿತ್ರಾಂತರಂಗ" ಎಂಬ ಗ್ರಂಥದಲ್ಲಿ ದಾಖಲಿಸಿದ್ದಾರೆ. ಜೊತೆಗೆ ಪಿಕಾಸೋ ನಂತರ ಕಲಾವಿದರ ಕಲಾಕೃತಿಗಳಿಗೆ ಪ್ರಭಾವಿತರಾಗಿ ಚಿತ್ರ ರಚನೆಯಲ್ಲಿ ಶೈಲಿಯ ಪ್ರಯೋಗಗಳನ್ನು ಮಾಡುತ್ತಾ ಪಾಟೀಲರು ರೇಖಾಚಿತ್ರ ಮತ್ತು ವರ್ಣಚಿತ್ರಕಲಾ

---

೨೧. ಶಂಕರ ಪಾಟೀಲ (ಸಂ): ಚಿತ್ರಾಂತರಂಗ, ಪು. ೩೭

೨೨. ಅದೇ, ಪು. ೮೭

ಕೃತಿಗಳಲ್ಲಿ ಈ ಶೈಲಿಯ ಚಿತ್ರಗಳನ್ನು ರಚಿಸಿದ್ದಾರೆ. ಉದಾಹರಣೆಗೆ : ಇಂಡಿಯನ್ ಇಂಕ ಮಾಧ್ಯಮದಲ್ಲಿ ರಚಿಸಿದ ಮಧುಚಂದ್ರ, ಧರ್ಮ ಮತ್ತು ಯುದ್ಧ, ಶೇಷಷಾಹಿ ವಿಷ್ಣು, ಗುರಿ, ಯುದ್ಧ ಮುಂತಾದ ಹಲವಾರು ರೇಖಾಚಿತ್ರಗಳನ್ನು ಮತ್ತು ತೈಲವರ್ಣದಲ್ಲಿ ತಾಯಿ ಮತ್ತು ಮಗು, ಕೊಳಲವಾದ ಕೃಷ್ಣನ ಸರಣಿ ಚಿತ್ರಗಳಲ್ಲಿ ಕ್ಯೂಬಿಸಂ (ಘನಾಕೃತಿ) ಶೈಲಿಯ ನೆಲೆಗಳಲ್ಲಿ ರಚಿಸಿದ ಚಿತ್ರಗಳೆಂದು ಗುರುತಿಸಬಹುದಾಗಿದೆ. ಇಲ್ಲಿ ಭೂಮಿತಿ ಆಕೃತಿಯ ಕ್ಯೂಬುಗಳು ಚಿತ್ರದಲ್ಲಿ ಮುಖ್ಯವಾಗಿ ಬಳಕೆಯಾಗಿರುತ್ತವೆ.

೪. ಜಾನಪದ ಶೈಲಿ:

"ಒಂದೊಂದು ದೇಶದ, ಜನಾಂಗದ ಧರ್ಮದ ಸಂಸ್ಕೃತಿ ಭಿನ್ನ, ಹಾಗೂ ಭೌಗೋಳಿಕ ಪರಿಸರದ ಮೇಲೆ ಅಲ್ಲಲ್ಲಿ ಮೂಡಿ ಬಂದ ಚಿತ್ರಗಳ ಬಣ್ಣಗಳ ಆಯ್ಕೆ ಹಾಗೂ ಬಳಕೆಯು ಕಲಾವಿಧನ ಮೇಲೆ ಪರಿಣಾಮ ಬೀರಿರುವುದನ್ನು ನಾವು ಗಮನಿಸಬಹುದಾಗಿದೆ. ಜಾನಪದ ಕಲಾಕೃತಿಗಳಲ್ಲಿ ಈ ದೇಶಿ ಪರಂಪರೆಯ ಶೈಲಿಯ ಅಂಶಗಳನ್ನು ಹೆಚ್ಚಾಗಿ ಗಮನಿಸಬಹುದಾಗಿದೆ. ಈ ಜನಪದ ಶೈಲಿಯ ಚಿತ್ರಗಳ ಪ್ರಭಾವ ನಮ್ಮ ಪರಿಸರದ ಅನೇಕ ಸಮಕಾಲೀನ ಹಾಗೂ ನವ್ಯಕಲಾವಿದರ ಮೇಲೆ ಆಗಿರುವುದು ಕಂಡು ಬರುತ್ತದೆ. ಬಣ್ಣಗಳ ಬಳಕೆಯ ಪ್ರಭಾವವನ್ನು ಕೇವಲ ಚಿತ್ರಗಳಲ್ಲಿ ಅಷ್ಟೇ ಅಲ್ಲದೆ ಜನರ ಉಡುಗೆ-ತೊಡುಗೆಗಳಲ್ಲಿ ನಾವು ಗುರುತಿಸಬಹುದಾಗಿದೆ"[೨೩] ಪಾಟೀಲರು ಜನಪದ ಶೈಲಿಯಲ್ಲಿ ಹಲವಾರು ರೇಖಾಚಿತ್ರಣ ಮತ್ತು ವರ್ಣ ಕಲಾಕೃತಿಗಳನ್ನು ರಚಿಸಿರುವುದು ಗಮನಾರ್ಹ. ಉದಾಹರಣೆಗೆ : ಇಂಡಿಯನ್ ಇಂಕ ಮಾಧ್ಯಮದ ರೇಖಾಚಿತ್ರಗಳಾದ ಬೆಸ್ತ ಮಹಿಳೆಯರು, ನೃತ್ಯಗಾರರು, ತೈಲವರ್ಣ ಮಾಧ್ಯಮದಲ್ಲಿ ವಾರ್ಲಿ ಚಿತ್ರಕಲೆಯ ಸರಣಿ ಚಿತ್ರಗಳು ಮುಂತಾದ ಕೃತಿಗಳನ್ನು ಜಾನಪದ ಶೈಲಿಯಲ್ಲಿ ಚಿತ್ರಿಸಿರುವುದನ್ನು ಗುರುತಿಸಬಹುದಾಗಿದೆ.

೫. ಪೋಟೋ ರಿಯಾಲಿಸ್ಟ ಶೈಲಿ:

ಪಾಟೀಲರು ಧಾರ್ಮಿಕ, ಸಾಮಾಜಿಕ ಮತ್ತು ಆಕಾಡೆಮಿಕ್ ಚಿತ್ರಗಳಲ್ಲಿ ಪೋಟೋರಿಯಾಲಿಸ್ಟಿಕ್ ಶೈಲಿಯಲ್ಲಿ ಹಲವು ಕಲಾಕೃತಿಗಳನ್ನು ರಚಿಸಿದ್ದಾರೆ. ಉದಾಹರಣೆಗೆ : ತೈಲ ವರ್ಣಗಳಲ್ಲಿನ

---

೨೩. ಶಂಕರ ಪಾಟೀಲ (ಸಂ): ಚಿತ್ರಾಂತರಂಗ, ಪು. ೫೨.

ಗಾಂಧೀಜಿಯವರ ಭಾವಚಿತ್ರ, ಬಾಲಗಂಗಾಧರ ತಿಲಕರವರ ಭಾವಚಿತ್ರ, ಓಶೋನ ಪೂರ್ಣ ಪ್ರಮಾಣದ ಭಾವಚಿತ್ರ, ಮುಂತಾದ ತೈಲ ಮಾಧ್ಯಮದ ಶೈಲೀಕೃತ ಸಂಯೋಜನೆಯಲ್ಲಿ ಪೋಟೋ ರಿಯಾಲಿಸ್ಟಿಕ್ ಶೈಲಿಯನ್ನು ಪಾಟೀಲರು ತಮ್ಮ ಕಲಾಕೃತಿಗಳಲ್ಲಿ ಅಳವಡಿಸಿಕೊಂಡು ಚಿತ್ರ ರಚನೆ ಮಾಡಿದ್ದಾರೆ.

೬. ಪಾಶ್ಚಾತ್ಯ ಮತ್ತು ಭಾರತೀಯ ಶೈಲಿಯ ಸಮ್ಮಿಲನ :

ಪಾಟೀಲರು ತಮ್ಮ ಕೆಲವು ಕಲಾಕೃತಿಗಳಲ್ಲಿ ಪಾಶ್ಚಾತ್ಯ ಕಲೆಗಳೊಂದಿಗೆ ಭಾರತೀಯ ಶೈಲಿಯನ್ನು ಸಮೀಕರಿಸಿ ಕೆಲವಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಉದಾ: ತೈಲವರ್ಣ (ಆಧುನಿಕ) ಮಾಧ್ಯಮದ ಚಿತ್ರ ಕೃಷ್ಣ, ಏಕಾಂತ, ತಾಂತ್ರಿಕ ಚಿತ್ರಗಳಲ್ಲಿ ಮತ್ತು ಭ್ಲೂಟಾರ್ಚ ಮಾಧ್ಯಮದ ಚಿತ್ರ ಸಂಗೀತಗಾರ್ತಿ, ಇಂಡಿಯನ್ ಇಂಕ ಮಾಧ್ಯಮದಲ್ಲಿ ರೇಖಾಚಿತ್ರಗಳಾದ ಗಣೇಶ, ತ್ರಿಮೂರ್ತಿ, ಕಾಳಿಂಗ ಮರ್ದನ ಮಹಿಳೆಯ ಭಾವಚಿತ್ರ ಇನ್ನೂ ಮುಂತಾದ ಕಲಾಕೃತಿಗಳಲ್ಲಿ ಪಾಶ್ಚಾತ್ಯ ಮತ್ತು ಭಾರತೀಯ ಶೈಲಿಯನ್ನು ಸಮೀಕರಿಸಿ ರಚಿಸಿದ ಚಿತ್ರಗಳಾಗಿವೆ.

೭. ಇಂಪ್ಯಾಸ್ಟೋ ಶೈಲಿ:

"ಕುಂಚಗಳ, ಮತ್ತು ಚಾಕುವಿನ (Knife) ಇಲ್ಲವೆ ಬೇರೆ ಯಾವುದೇ ಚಿತ್ರ ರಚನೆಯ ಉಪಕರಣಗಳ ಗುರುತುಗಳು ಉಳಿಯುವಂತೆ ದಪ್ಪವಾಗಿ ಅಳಿಯುವಂತೆ ಲೇಪಿಸುವ ವಿಧಾನವನ್ನು ಇಂಪ್ಯಾಸ್ಟೋ ವಿಧಾನ ಅಥವಾ ಶೈಲಿ ಎಂದು ಕರೆಯುತ್ತಾರೆ."[೨೪] ಈ ಶೈಲಿಯಿಂದ ಉಂಟಾಗುವ ಹೊರಮ್ಮೈ ರಚನೆಯ ಗುಣಧರ್ಮಗಳು ತೈಲವರ್ಣ ಚಿತ್ರಣ ದೃಷ್ಟಿಯಿಂದ ಕಲಾವಿದನ ವೈಯಕ್ತಿಕ ನೋಟಗಳಾಗುತ್ತವೆ. ಪಾಶ್ಚಿಮಾತ್ಯ ಕಲಾವಿದ ರೆಂಬ್ರಾಟ್ ಈ ಇಂಪ್ಯಾಸ್ಟೋ ಶೈಲಿಯಲ್ಲಿ ಶ್ರೀಮಂತವಾಗಿ ಕಲಾಕೃತಿ ರಚಿಸಿದ ಕಲಾವಿದರಲ್ಲಿ ಅಗ್ರಗಣ್ಯ ಕಲಾವಿದನಾಗಿದ್ದಾನೆ. ಈ ಶೈಲಿಯ ಪ್ರಭಾವಕ್ಕೆ ಒಳಗಾದ ಶಂಕರ ಪಾಟೀಲರು ಕಲಾಕೃತಿ ರಚನೆಯಲ್ಲಿ ತೈಲವರ್ಣ ಮಾಧ್ಯಮದಲ್ಲಿ ನಾಗಪೂಜೆ, ನಾಗನಹೆಡೆ ಹಲವಾರು ಸಂಯೋಜನಾ ಚಿತ್ರಗಳಲ್ಲಿ ಈ ಶೈಲಿಯನ್ನು ಬಳಸಿಕೊಂಡಿರುವುದನ್ನು ಗುರುತಿಸಿ ಇಲ್ಲಿ ಅಧ್ಯಯನ ಮಾಡಲಾಗಿದೆ.

---

೨೪. ವ್ಹಿ. ಟಿ. ಕಾಳೆ. (ಸಂ): ಚಿತ್ರಕಲಾ ದರ್ಪಣ, ಪು. ೧೪೦.

ತಂತ್ರಗಾರಿಕೆ :

"ಕಲೆಯು ಯಾವಾಗಲೂ ಜನರ ಮನಸ್ಸಿನ ಮೇಲೆ ಪ್ರಭಾವ ಬೀರುವ ಒಂದು ಮುಖ್ಯ ಸಾಧನೆಯಾಗಿದೆ. ಅದಕ್ಕಾಗಿ ಚಿತ್ರಕಲೆ ಮನೋವಿಜ್ಞಾನದ ಸಿದ್ಧಾಂತಗಳ ಮೇಲೆ ಆಧಾರವಾಗಿರುವುದು. ಕಲೆಯಲ್ಲಿ ಕೇವಲ ತಾಂತ್ರಿಕ ನೈಪುಣ್ಯತೆ ಬಂದಿದ್ದರೆ ಸಾಲದು ತಾಂತ್ರಿಕ ನೈಪುಣ್ಯತೆಯೊಂದಿಗೆ ಮನೋವಿಜ್ಞಾನದ ತತ್ವಗಳನ್ನು ಅಳವಡಿಸಿಕೊಂಡರೆ ಚಿತ್ರಕಲಾ ಕೃತಿಯ ನೈಪುಣ್ಯತೆ ಇನ್ನೂ ಹೆಚ್ಚುತ್ತದೆ. ಯಾವುದೇ ಒಂದು ಕಲಾಕೃತಿಯ ಹಿಂದೆ ಕಲಾವಿದನ ಮನಸ್ಥಿತಿಯು ಮುಖ್ಯವಾಗಿ ಕಾರಣವಾಗಿರುತ್ತದೆ. ಹೀಗಾಗಿ ಚಿತ್ರಕಲೆಗೆ ಮನಃಶಾಸ್ತ್ರಕ್ಕೆ ಬಿಡಲಾರದ ನಂಟುತನವಿದ್ದು, ಇವು ಒಂದಕ್ಕೊಂದು ಪೂರಕ ಪ್ರೇರಕವಾದ ಸಂಬಂಧವನ್ನು ಹೊಂದಿವೆಯೆಂದು ಹೇಳಬಹುದು."[೨೫] ಪಾಟೀಲರು ಕಲಾಕೃತಿಗಳನ್ನು ರಚಿಸುವಾಗ ಅವರು ಬಳಸಿದ ತಂತ್ರ ವಿಧಾನವನ್ನು ನಾವು ಗಮನಿಸಿದಾಗ ಅಧ್ಯಯನ ಕಾಲದ ಹಂತದಲ್ಲಿಯ ಕಲಾಕೃತಿಗಳಲ್ಲಿ ಬಳಸಿದ ತಂತ್ರಗಾರಿಕೆ, ವರ್ಣಪ್ರಭಾವ ಮತ್ತು ಅಧ್ಯಾಪಕ ವೃತ್ತಿಯಲ್ಲಿ ನಿರ್ಮಾಣಗೊಂಡಿರುವ ಕಲಾಕೃತಿಗಳ ತಂತ್ರ ವಿಧಾನವಲ್ಲದೆ ನಂತರದ ದಿನಗಳಲ್ಲಿ ನಿರ್ಮಿತಗೊಂಡಿರುವ ಕಲಾಕೃತಿಗಳನ್ನು ರಚಿಸಲು ಬಳಸಿದ ತಂತ್ರ ವಿಧಾನವನ್ನು ಗಮನಿಸಿದಾಗ ಇಲ್ಲಿಯ ಆಯಾ ಒಂದು ಅವಧಿಗೆ ಸಂಬಂಧ ಪಟ್ಟಂತೆ (ಕಾಲಕ್ಕೆ ಅನುಗುಣವಾಗಿ) ತಂತ್ರ ವಿಧಾನಗಳನ್ನು ಬಳಸಿಕೊಂಡು ಪಾಟೀಲರು ಕಲಾಕೃತಿಗಳನ್ನು ರಚಿಸಿದ್ದು ಕಂಡು ಬರುತ್ತದೆ.

ಪಾಟೀಲ ಅವರ ಕಲಾಕೃತಿಗಳನ್ನು ನೋಡಿದೊಡನೆಯೇ ಅದರಲ್ಲಿ ಏನೋ ಒಂದು ರೀತಿಯ ಮನಸ್ಸನ್ನು ಸೆಳೆಯುವ ಆಕರ್ಷಣೆಯು ತನ್ನನ್ನು ತಾನೆ ಕರೆದೊಯ್ಯುತ್ತವೆ. "ಕಲಾವಿದ ತಾನು ಏನು ಮಾಡುತ್ತಾನೆ ಎನ್ನುವುದು ಮುಖ್ಯವಲ್ಲ. ಅವನು ಏನು ಇದ್ದಾನೆ ಎನ್ನುವುದನ್ನು ಎಲ್ಲರೂ ಗಮನಿಸುತ್ತಾರೆ. ತಾನು ಅನುಭವಿಸಿದ್ದನ್ನು ಚಿತ್ರಿಸುವುದಕ್ಕೂ, ಅನುಭವಿಸದೇ ಇದ್ದುದನ್ನು ಅನುಭವಿಸಿದ ಹಾಗೆ ಕಪಟ ನಾಟಕ ಮಾಡುವುದಕ್ಕೂ ವ್ಯತ್ಯಾಸವಿದೆ. ಅನುಭವಿಸಿದವನ ಆಕೃತಿಗಳು ಕೇವಲ ನೋಟಕ್ಕೆ ಆಕೃತಿಗಳಾಗಿರದೆ ಆಕೃತಿಗಳು ಕೈ ಹಿಡಿದು ಕರೆಯುತ್ತವೆ. ತಮ್ಮ ಕಥೆಯನ್ನು ಹೇಳುತ್ತವೆ."[೨೬] ಅದೇ ಕಾರಣಕ್ಕಾಗಿ ಬಹುಶಃ ಪಾಟೀಲ ಅವರ ಆಕೃತಿಗಳು ಬಹು ಬಗೆಯ ತಂತ್ರಗಳಲ್ಲಿ ರಚಿತವಾಗಿವೆ. ಅಂತಹ ತಂತ್ರಗಾರಿಕೆಯ ಮೂಲಕ ಕಲಾಕೃತಿಗಳಿಗೆ ವಿಶಿಷ್ಟ ಪರಿಣಾಮ ನೀಡುವ ತಂತ್ರಗಾರಿಕೆ

---

೨೫. ಶಂಕ್ರಪ್ಪ ಕುಂದಗೋಳ (ಸಂ): ಚಿತ್ರಕಲಾವಿದ ಡಿ. ವಿ. ಹಾಲಭಾವಿ, ಪು. ೧೧೫.
೨೬. ಶಂಕರ ಪಾಟೀಲ (ಸಂ): ಚಿತ್ರಕಲಾ ಚಿಂತನ, ಪು. ೮೪.

ಬಹುಮುಖ್ಯ ಪಾತ್ರವಹಿಸುತ್ತವೆ. ಈ ದಿಸೆಯಲ್ಲಿ ಪಾಟೀಲರು ಆಧ್ಯಾತ್ಮಿಕ ಮತ್ತು ಧಾರ್ಮಿಕ ಭಾವನೆಯನ್ನು ಅರ್ಥ, ಕಾಮ, ಧರ್ಮ, ಹಾಗೂ ಮೋಕ್ಷ ಎಂಬ ನಾಲ್ಕು ಮೌಲ್ಯಗಳನ್ನು ವಿಷಯಗಳಿಗೆ ಸಂಬಂಧಪಟ್ಟಂತೆ ಹಲವಾರು ಕಲಾಕೃತಿಗಳು ಇವರಿಂದ ರಚಿಸಲ್ಪಟ್ಟಿವೆ. ಇವೆಲ್ಲವೂ ಜ್ಯಾಮಿತಿಕ ಆಕಾರಗಳನ್ನು ಬಳಸಿ ಸಾಂಕೇತಿಕವಾಗಿ ಚಿತ್ರಿಸಿದ್ದಾರೆ. ಇವು ತೈಲ ವರ್ಣದಲ್ಲಿ ಮೂಡಿ ಬಂದ ಕಲಾಕೃತಿಗಳಾದರೂ ಪಾರದರ್ಶಕತೆಯಂತೆ ವರ್ಣವನ್ನು ತುಂಬ ತಿಳುವಾಗಿ ಮತ್ತು ಮೃದುವಾಗಿ ಬಳಸಿಕೊಂಡು ತೈಲವನ್ನು ಅಲ್ಪಪ್ರಮಾಣದಲ್ಲಿಯೇ ಅಥವಾ ತೈಲವಿಲ್ಲದೆಯೇ (Linseed Oil) ಬಳಸದೆ ಚಿತ್ರಿಸಿದ್ದಾರೆ. ಕಲಾಕೃತಿ ರಚನೆಯ ಪೂರ್ವದಲ್ಲಿ ಚಿತ್ರವಿಷಯದ ಹಲವು ಅಂಕನೆ (ಸ್ಕೆಚ್)ಗಳ ರಚನೆಯನ್ನು ರೂಢಿಸಿಕೊಂಡಿದ್ದರು. ಇದು ಪಾಟೀಲರ ಶಿಸ್ತಿನ ಕ್ರಮವೂ ಆಗಿತ್ತು. ಏಕೆಂದರೆ ಮುಂಬೈನ ಸರ್. ಜೆ. ಜೆ. ಕಲಾಶಾಲೆಯಲ್ಲಿ ಇವರು ಅಧ್ಯಯನ ಮಾಡುವಾಗ ಒಂದು ಕಲಾಕೃತಿಗಳನ್ನು ರಚಿಸಬೇಕಾದರೆ ಅದನ್ನು ಬೇರೆ ಬೇರೆ ರೀತಿಯಿಂದ ಐದಾರು ಬಾರಿ ಪೆನ್ಸಿಲ್‌ನಿಂದ ಚಿತ್ರಿಸಬೇಕಾಗುತ್ತಿತ್ತು. ಇದಾದ ನಂತರ ಬಣ್ಣದಿಂದ ಕಲಾಕೃತಿಯನ್ನು ರಚಿಸಬೇಕು. ಇದು ಜೆ. ಜೆ. ಕಲಾ ಶಾಲೆಯಲ್ಲಿನ ಶಿಸ್ತಿನ ಕ್ರಮವಾಗಿತ್ತು. ಈ ರೀತಿಯ ವರ್ಣಗಳ ಬಳಕೆ ಮತ್ತು ಲೇಪನದ ತಂತ್ರ ವಿಧಾನವನ್ನು ಇವರ ತೈಲಮಾಧ್ಯಮದ ಕಲಾಕೃತಿಗಳಲ್ಲಿ ಕಾಣಬಹುದು.

"ಕೇವಲ ರೇಖೆಗಳ ಗತಿ ಚಿತ್ರರಚನೆ ಪದ್ಧತಿ ಮತ್ತು ವರ್ಣ ಸಾಮರಸ್ಯದ ವಿಂಗಡನೆಯಿಂದಲೇ ಕಲಾಕೃತಿಗಳ ರೂಪ ರೇಷೆಗಳನ್ನು ಗುರುತಿಸಲು ಸಾಧ್ಯವಾಗದು. ಯಾವುದೇ ಕಲಾಕೃತಿಯಲ್ಲಿಯ ಆಕಾರ ವರ್ಣಗಳ, ತಾಳ ಮೇಳ ವಿಷಯಗಳ ಸ್ವಂತಿಕೆ, ತಾಂತ್ರಿಕತೆ ಕಲೆಯ ಒಳ ಅರ್ಥಗಳನ್ನು ನಾವು ಸೂಕ್ಷ್ಮವಾಗಿ ಗುರುತಿಸಲೇಬೇಕು. ಕೇವಲ ಆಕಾರ ಪ್ರಮಾಣಬದ್ಧವಾಗಿದ್ದರೆ ಮಾತ್ರ ಸಾಲದು. ವರ್ಣಗಳ ಹರಿವಿಕೆಯಲ್ಲಿಯ ತಾಳ ಮೇಳದಲ್ಲಿ ಸಮತೋಲನವೂ ಅಷ್ಟೇ ಪ್ರಧಾನ ಪಾತ್ರವಹಿಸುತ್ತದೆ."[೨೭] ದೊಡ್ಡ ಗಾತ್ರದ ಚಪ್ಪಟೆ (Flat) ಕುಂಚದಿಂದ ದಪ್ಪವಾಗಿ ಉದಾಹರಣೆಗೆ :"ತಾಯಿ ಮತ್ತು ಮಗು", ತಲೆ (ಹೆಡ್), ಭಾವಚಿತ್ರಗಳಲ್ಲಿ ಮತ್ತು ಕೆಲವು ಕಲಾಕೃತಿಗಳಲ್ಲಿ ತೈಲವರ್ಣಗಳಲ್ಲಿ ಮತ್ತು ಅಕ್ರೆಲಿಕ್ ವರ್ಣಗಳ ಮಾಧ್ಯಮದಲ್ಲಿ ತೆಳುವರ್ಣಗಳ ಬಳಕೆಯನ್ನು ಆಧುನಿಕ ಮಾಧ್ಯಮದಲ್ಲಿ ರಚಿಸಿದ "ನೃತ್ಯಗಾರರು" ಅಮೂರ್ತ ಶೈಲಿಯ ಪ್ರಕೃತಿ ಚಿತ್ರಗಳು ಮತ್ತು ಕೃಷ್ಣನ ಸರಣಿ ಚಿತ್ರಗಳಲ್ಲಿ ವರ್ಣಗಳಲ್ಲಿನ ತಂತ್ರಗಾರಿಕೆಯನ್ನು ಗಮನಿಸಬಹುದಾಗಿದೆ.

---

೨೭. ಶಂಕ್ರಪ್ಪ ಕುಂದಗೋಳ (ಸಂ): ಚಿತ್ರಕಲಾವಿದ ಡಿ. ವಿ. ಹಾಲಭಾವಿ, ಪು. ೧೧೭.

ಚಿತ್ರಕಲಾ ಕೃತಿ ರಚನೆಯಲ್ಲಿ ಕುಂಚ ಮತ್ತು ಬಣ್ಣಗಳನ್ನು ಬಳಸಿ ತಮ್ಮ ಭಾವನೆಗಳನ್ನು, ಕಲ್ಪನೆಗಳನ್ನು ಅಭಿವ್ಯಕ್ತಿಗೊಳಿಸುವದರ ಜೊತೆ ಪಾಟೀಲರು, ಛಾಯಾಚಿತ್ರಣ (ಫೋಟೋಗ್ರಾಫಿ) ಕಲೆಯಲ್ಲಿ ಪಾಟೀಲರು ಸಲಕರಣೆ ಮತ್ತು ಉಪಕರಣಗಳನ್ನು ಬಳಸಿದರಾದರೂ ನಿರೂಪಣೆಯ ರೀತಿಯಲ್ಲಿ ವಿವಿಧ ತಂತ್ರಗಾರಿಕೆಯನ್ನು ಬಳಸಿ ಚಿತ್ರಣಗಳನ್ನು ರಚಿಸಿದ್ದಾರೆ. "ಯಾವ ಮಾಧ್ಯಮವನ್ನು ಬಳಸುವ ಕಲಾವಿದನೇ ಆಗಿರಲಿ, ಅವನು ತನ್ನ ಭಾವನೆಗಳನ್ನು ಅಭಿವ್ಯಕ್ತಿಗೊಳಿಸಲು ಬಳಸುವ ಉಪಕರಣಗಳು ತಕ್ಕದಾಗಿದ್ದು, ಉತ್ತಮ ಮಟ್ಟದ್ದಾಗಿರಬೇಕಾದುದು ಅವಶ್ಯಕ. ಅವುಗಳನ್ನು ಹಿಡಿದು ಬಳಸುವ ರೀತಿ, ವಿಧಾನ, ಪ್ರಯೋಗ ಮತ್ತು ತಂತ್ರಗಳು ಅವನಿಗೆ ಕರತಲಾಮಲಕವಾಗಿರಬೇಕು. ಯಾವ ಕಲೆಯೇ ಆಗಿರಲಿ ಅದನ್ನು ಪ್ರೇಕ್ಷಕರ ಮನಸ್ಸಿನ ಮೇಲೆ ಹೃದಯಂಗಮವಾಗಿ ಪರಿಣಾಮಕಾರಿಯಾಗಿರುವಂತೆ ಅಭಿವ್ಯಕ್ತಿಗೊಳಿಸುವವ ನಿಜವಾದ ಕಲಾವಿದ."[೨೮] ತಾನು ಬಳಸುವ ಉಪಕರಣಗಳು, ಸಲಕರಣೆ, ಕೇವಲ ಸಹಾಯಕ ಮಾತ್ರ ಆದರೆ ಚಿತ್ರಿಕರಣದಲ್ಲಿ ತಂತ್ರಗಾರಿಕೆಯಲ್ಲಿ ತನ್ನದೇ ಆದ ಸ್ಥಾನಮಾನವನ್ನು ಕಲಾವಿದ ಕಂಡುಕೊಂಡಿದ್ದಾನೆ. ಈ ದಿಸೆಯಲ್ಲಿ ಪಾಟೀಲರು ಕೇವಲ ಒಬ್ಬ ವರ್ಣಚಿತ್ರಕಲಾವಿದರಾಗದೆ, ಛಾಯಾಚಿತ್ರಕಾರರಾಗಿ (ಪೋಟೊಗ್ರಾಪಿಯಲ್ಲಿ) ತಮ್ಮನ್ನು ತೊಡಗಿಸಿಕೊಂಡು ಅದಕ್ಕೆ ಸಂಬಂಧಿಸಿದ ಸಾಧನ – ಸಲಕರಣೆ ಮತ್ತು ಬಳಕೆಯ ವಿಧಾನಗಳನ್ನು ಕಂಡುಕೊಳ್ಳುವುದರ ಜೊತೆಗೆ ಅವುಗಳ ತಾಂತ್ರಿಕತೆ, ಬಳಸುವ ರೀತಿಗಳಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿ ಸಾವಿರಾರು ಛಾಯಾಚಿತ್ರಣಗಳನ್ನು ಚಿತ್ರಿಸಿದ್ದಾರೆ. ಉದಾಹರಣೆಗೆ : ಕೇರಳದ ಸಣ್ಣ ದ್ವೀಪಗಳು, ಹಿಮಾಲಯದ ಪರ್ವತಶ್ರೇಣಿಗಳು, ಸಿಲುಏಟ್ ಛಾಯಚಿತ್ರಣ, ಭಾವಚಿತ್ರ, ಮುಂತಾದ ಹಲವಾರು ಛಾಯಾಚಿತ್ರಣಗಳಲ್ಲಿ ಪಾಟೀಲರು ನೆರಳು, ಬೆಳಕು, ಕೋನ, ದೂರ ಸಾಮಿಪ್ಯ, ವಿನ್ಯಾಸದ ಸೊಬಗು, ವರ್ಣಯುಕ್ತ ಸಂಯೋಜನೆ, ಸಮತೋಲನ ಸಮ್ಮಿಶ್ರಣವನ್ನು ತಮ್ಮದೇ ಆದ ವಿಶಿಷ್ಟ ತಂತ್ರಗಾರಿಕೆ, ಕೌಶಲವನ್ನು ಬಳಸಿ ಛಾಯಾಚಿತ್ರೀಕರಿಸಿರುವುದನ್ನು ಕಾಣಬಹುದು.

"ಸಾಂಪ್ರದಾಯಿಕ ಕಲೆ, ಅಮೂರ್ತ ರೂಪದ ಕಲೆ ಎಂಬ ವರ್ಗೀಕರಣ ಇಂದಿನ ಸಮಕಾಲಿನ ಕಲಾ ಸಂದರ್ಭದಲ್ಲಿ ಕೇಳಿಬರುತ್ತಿದೆಯಾದರೂ ಕಲಾವಿದರ ವೈಯಕ್ತಿಕ ಮನೋಧರ್ಮದ ಮೇಲೆ ಅವರವರ ಆಯ್ಕೆಯಾಗುತ್ತದೆ."[೨೯] ಪಾಟೀಲರ ನೈಜ ಕಲೆಯಲ್ಲಿ ವಿಶೇಷವಾಗಿ ತಮ್ಮನ್ನು

---

೨೮. ದೊಡ್ಡೇರಿ ವೆಂಕಟಗಿರಿರಾವ್ (ಸಂ): ಭಾವಾಭಿವ್ಯಂಜಕ ಛಾಯಾಚಿತ್ರಕಲೆ, ಲೇಖಕರ ನುಡಿ.
೨೯. ಶಂಕ್ರಪ್ಪ ಕುಂದಗೋಳ (ಸಂ): ಚಿತ್ರಕಲಾವಿದ ಡಿ. ವಿ. ಹಾಲಭಾವಿ, ಪು. ೧೧೭.

ತೊಡಗಿಸಿಕೊಂಡು ಕಲಾಕೃತಿ ರಚನೆ ಮಾಡಿದ್ದಾರೆ. ಯಾವುದೇ ಪರಂಪರೆ ಇಲ್ಲದೆ ಯಾವ ಕಲೆಗಳು ಬೆಳೆಯುವುದಿಲ್ಲ.

ಪಾಟೀಲ ಅವರನ್ನು ಕರ್ನಾಟಕದ ಶ್ರೇಷ್ಠ ಕಲಾವಿದರಾಗಿ, ಕವಿಯಾಗಿ, ವಿಮರ್ಶಕರಾಗಿ, ಛಾಯಾಚಿತ್ರಕಾರರಾಗಿ, ಸಂಗೀತ, ಪ್ರಿಯರಾಗಿ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರಾಗಿದ್ದರು. ಹೀಗೆ ಬಹುಮುಖ ಪ್ರತಿಭೆಯುಳ್ಳಂತಹ ಚಿಂತನಾಶೀಲರಾದ ಶಂಕರ ಪಾಟೀಲರು ಕಲಾಕೃತಿಯ ರಚನೆಯಲ್ಲಿ ಹೊಸ ಚಿಂತನೆಯನ್ನು ಹುಟ್ಟು ಹಾಕಿದ್ದಾರೆ. ಕರ್ನಾಟಕದ ಚಿತ್ರಕಲಾ ಪರಿಸರದಲ್ಲಿ ಎಂದಿಗಿಂತ ಇಂದು ಬೇಕಾಗಿರುವ ಚಿಂತನೆಯ ಅವಶ್ಯಕತೆಯನ್ನು ಇವರು ಪೂರೈಸಿದ್ದಾರೆ.

ಪಾಟೀಲರನ್ನು ಕರ್ನಾಟಕದ ಸಮಕಾಲಿನ ಪ್ರತಿಭಾನ್ವಿತ ಕಲಾವಿದರೆಂದು ಗುರುತಿಸಿಕೊಂಡಿದ್ದಾರೆ. ಅದಕ್ಕೆ ಕಾರಣ ಜಿ. ಎಸ್. ದಂಡಾವತಿಮಠ, ಎಂ. ಎ. ಮಿಣಜಗಿ, ಡಿ. ವಿ. ಹಾಲಭಾವಿ, ಅಂಬೇಕರ್‌ರಂಥಹ ಗುರಳಗಳ ಮಾರ್ಗದರ್ಶನ ಮತ್ತು ಅವರ ಕಲಾಕೃತಿಗಳಿಂದ ಪ್ರೇರಣೆ. ಹೀಗೆ ಪಾಟೀಲರು ಕಲಾಕೃತಿಯ ರಚನೆಯಲ್ಲಿಯೂ ಚಿತ್ರಗಳ ವಸ್ತುಶೈಲಿಯಲ್ಲಿಯೂ ವಿಭಿನ್ನವಾಗಿ ಚಿತ್ರಿಸುತ್ತಿದ್ದರು.

"ನಮ್ಮ ವರ್ತಮಾನದಲ್ಲಿ ಭೂತದ ಪ್ರಭಾವವಿದೆ ಎನ್ನುವುದಕ್ಕೆ ನಮ್ಮ ಹುಟ್ಟಿನೊಡನೆ ಹರಿದು ಬರುವ ಅನುವಂಶಿಕವಾದ ಹಲವು ಸ್ವಭಾವಗಳೇ ಸಾಕ್ಷಿ. ಈ ಅನಂತ ಭೂತಕಾಲ ನಮ್ಮಲ್ಲಿ ಮಿಡಿಯುತ್ತಿದೆ. ಆದರೆ ಅದು ಮತ್ತೆ ಪುನರಾವರ್ತನೆಯಾಗುವುದಿಲ್ಲ. ಪುನರಾವರ್ತನೆ ಹಲವು ಸಲ ಮೇಲು ನೋಟಕ್ಕೆ ಕಂಡರೂ, ಒಳ ಹೊಕ್ಕು ನೋಡಿದರೆ ಹಿಂಭಾಗದ ಬೇರೊಂದು ಬದಲಾವಣೆ ಮಾನವನ ಅನುಭವದಲ್ಲಿ ಗೋಚರಿಸುತ್ತದೆ. ಒಂದೆ ಆವರಣ ಒಂದೆ ಸನ್ನಿವೇಶವಾದರೂ ಹಿಂದಿನವರಿಗಿಂತ ಅವರವರ ಜೀವನದ ಇತಿಹಾಸದ ಬೇರೊಂದು ಕ್ಷಣದಲ್ಲಿ ನಿಂತಿರುತ್ತಾರೆ. ಅಷ್ಟೇ ಅಲ್ಲ ಈ ಕ್ಷಣದ ಅನುಭವದಿಂದ ಮುಂದಿನ ಕ್ಷಣ ನಾವು ಪಡೆಯುವ ಅದೇ ವಸ್ತುವಿನ ಅನುಭಾವದಿಂದ ಬೇರೆಯೇ ಆಗಿರುತ್ತದೆ."[೨೦] ಈ ದಿಸೆಯಲ್ಲಿ ಪಾಟೀಲರು ಕಲಾಕೃತಿಗಳ ರಚನೆಯಲ್ಲಿ ಅಭಿವ್ಯಕ್ತಿಯನ್ನು ಬೇರೆಯಾಗಿ ನಿರಂತರವೂ ಬದಲಾಯಿಸುತ್ತ ನಿತ್ಯ ಪರಿವರ್ತನೆಯತ್ತ ಸಾಗಿ ಪರಿಪಕ್ವತೆಯನ್ನು ಕಂಡುಕೊಂಡಿರುವುದನ್ನು ಅವರ ಕಲಾಕೃತಿಗಳಲ್ಲಿ ಕಾಣಬಹುದು.

---

೨೦. ಶಂಕರ ಪಾಟೀಲ (ಸಂ): ಚಿತ್ರಕಲಾ ಚಿಂತನ, ಪು. ೫೪.

"ಆಕಾರ ಹಾಗೂ ಬಣ್ಣಗಳ ಸಂಯೋಜನೆಯಿಂದ ಕಲೆ ನಿರ್ಮಾಣವಾಗುತ್ತದೆ ನಿಜ. ಆದರೆ ಬರಿ ಬಣ್ಣ ಹಾಗೂ ಆಕಾರಗಳನ್ನು ಹೇಗೋ ಒಟ್ಟುಗೂಡಿಸಿದರೆ ಕಲೆ ಆಗಲಾರದು. ಬಣ್ಣ ಹಾಗೂ ಆಕಾರಗಳ ಹಿಂದಿನ ಪ್ರೇರಣೆಯಿಂದ ಕಲೆ ಹುಟ್ಟುತ್ತದೆ ಎನ್ನುವುದನ್ನು ಅಲ್ಲಗೆಳೆಯುವಂತಿಲ್ಲ."[೩೦] ಪಾಟೀಲರ ಕಲಾಕೃತಿಗಳಲ್ಲಿ ಪ್ರತಿಯೊಂದು ಆಕಾರ ಮತ್ತು ಬಣ್ಣಗಳು ಏನೋ ಹೇಳುವಂತೆ, ಏನೋ ಸೂಚಿಸುವಂತೆ ಕಲಾಕೃತಿಗಳಲ್ಲಿ ಕಂಡುಕೊಂಡಿದ್ದಾರೆ.

ಒಂದು ವಿಚಾರದ ಹೊಂದಾಣಿಕೆ ಸಹಕಾರ ಹಾಗೂ ಏಕಾಭಿಪ್ರಾಯ ಕಲಾವಿದ ಹಾಗೂ ಅವನ ರಚನೆಗಳ ಮಧ್ಯೆ ಬೆಳೆಯುತ್ತದೆ. ಸಾಮಾಜಿಕ ಪರಿಸರದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ, ವೈಜ್ಞಾನಿಕ ಚಿಂತನೆ, ವೈಚಾರಿಕತೆ, ತಾತ್ವಿಕ ಹಾಗೂ ಧಾರ್ಮಿಕ ಭಾವನೆ, ತರ್ಕ ಸಮ್ಮತ ತಿಳುವಳಿಕೆ ಇವೆಲ್ಲವನ್ನು ಒಳಗೊಂಡು ಪಾಟೀಲರು ತಮ್ಮ ಕಲಾಕೃತಿಗಳ ಮೂಲಕ ತನ್ನತನವನ್ನು ತೋರಿಸಲು ಪ್ರಯತ್ನಿಸಿ ಪ್ರಯೋಜಕ ವೃತ್ತಿಯ ಮಧ್ಯೆ ಸ್ವಸಂತೋಷ ಹಾಗೂ ಮಾನಸಿಕ ತೃಪ್ತಿಗಾಗಿ ಚಿತ್ರರಚನೆಯನ್ನು ಮಾಡಿ ಸೃಷ್ಟಿಯನ್ನೇ ತನ್ನ ಆದರ್ಶವನ್ನಾಗಿ ಮಾಡಿಕೊಂಡು, ಆಧ್ಯಾತ್ಮಿಕ ಹಾಗೂ ನೈತಿಕ ಉಲ್ಲಾಸವನ್ನು ಕಲಾಕೃತಿಗಳಿಂದ ಪಡೆಯುವ ಪ್ರಯತ್ನವನ್ನು ಪಾಟೀಲರ ಕಲಾಕೃತಿಗಳಲ್ಲಿ ಗುರುತಿಸಬಹುದು.

ಭಾರತೀಯ ಪರಂಪರೆಯ ಕಲೆಯನ್ನು ವಿವರಿಸಲು ಭಾರತೀಯ ಸಂಗೀತದ ವಿಷಯವನ್ನು ಬಳಸಿಕೊಂಡಿದ್ದಾರೆ. ಭಾರತೀಯ ಕಲೆಯಲ್ಲಿ ದೃಶ್ಯಾನುಭವದ ವಿಚಾರಗಳನ್ನು ರೇಖೆಗಳ ಮಣಿತನದಿಂದ, ದಪ್ಪ ಹಾಗೂ ತೆಳುವಾದ ಮೈಕಟ್ಟಿನ ಛಾಯೆಯ ಕಲ್ಪನೆಯು ಭಾಸವಾಗುವಂತೆ ಪಾಟೀಲರ ರೇಖಾಚಿತ್ರ ರಚನೆಗಳಲ್ಲಿ ಹೊರ ಆಕಾರಗಳಲ್ಲಿ ತಮ್ಮದೆ ಆದ ಸ್ವಂತಿಕೆಯ ಜೀವಂತಿಕೆಯನ್ನು ಕಾಣಬಹುದು. ಸಂಗೀತದಲ್ಲಿ ಮೂಡಿಬರುವ ರಾಗಗಳ ಛಾಯೆಯಂತೆ ಬಣ್ಣಗಳ ಅನುಭವ, ಬಿಟ್ಟು ಬಿಡದೆ ಸ್ವರದಲ್ಲಿ ತಾಳಬದ್ಧವಾಗಿ ನಡೆಯುವ ಸಂಗೀತದಂತೆ ಶ್ರೀಯುತರ ರೇಖಾಚಿತ್ರದಲ್ಲಿ ಕೂಡ ಚಲನೆಯನ್ನು ಕಾಣಬಹುದು. ಇಂತಹ ಪ್ರಮುಖ ಅಂಶಗಳ ಕುರಿತು ಅಧ್ಯಾಯ ನಾಲ್ಕರಲ್ಲಿ ಸಮಗ್ರವಾದ ಮಾಹಿತಿಯನ್ನು ದಾಖಲಿಕರಿಸಲಾಗಿದೆ.

"ಭಾರತೀಯ ಕಲೆಗೆ ಧರ್ಮವೇ ಸ್ಫೂರ್ತಿಯಾದ್ದರಿಂದ ಭಾರತೀಯರಿಗೆ ಕಲೆ ಕಲೆಗಾಗಿ ಅನ್ನುವ ಮಾತು ಅಷ್ಟು ಸಮರ್ಪಕವಲ್ಲ. ಕಲೆಯನ್ನು ಕಲೆಯ ತತ್ವವನ್ನು ಸಚ್ಚಿದಾನಂದ ಸ್ವರೂಪವೆಂದೇ ಪರಬ್ರಹ್ಮ ತತ್ವದಲ್ಲಿ ಸತ್-ಚಿತ್ ಆನಂದ, ತತ್ವಗಳು ಲೀನವಾಗಿರುವುವೆಂದು ತಿಳಿದ ಭಾರತೀಯ

೩೧. ಶಂಕರ ಪಾಟೀಲ (ಸಂ): ಚಿತ್ರಕಲಾ ಚಿಂತನ, ಪು. ೬೦.

ತಾತ್ವಿಕರಿಗೆ ಕಲೆ ಅಥವಾ ಸೌಂದರ್ಯಾನುಭವ ಒಂದು ಸಾಧನ ಮಾತ್ರ. ಏಕೈಕ ಧ್ಯೇಯವಲ್ಲ. ಜೀವನದ ಅಂತಿಮ ಧ್ಯೇಯವಾದ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಸೌಂದರ್ಯಾನ್ವೇಷಣೆ ಒಂದು ಸಾಧನೆ. ಸೌಂದರ್ಯಾನುಭವ ನೀಡುವ ಆನಂದ ಬ್ರಹ್ಮಾನಂದ ಒಂದು ಸ್ವರೂಪವಾಗಿದೆ. ಇಂತಹ ಬ್ರಹ್ಮಾನಂದವನ್ನು ನೀಡುವ ಕಲೆ ಆತ್ಮದ ಶ್ರೇಯಸ್ಸನ್ನು ಸಾಧಿಸುವುದು ಕ್ಷಣಕಾಲವಾದರೂ ರಾಜಸಿಕ ತಾಮಸಿಕಾವರಣಗಳನ್ನು ಭಂಗಮಾಡಿ ಒಂದು ವಿಶೇಷವಾದ ಅನಂದಾನುಭವವನ್ನು ಸಹೃದಯದಲ್ಲಿ ಉಂಟು ಮಾಡುವದರಿಂದ ಕಲೆ ಪ್ರೇಕ್ಷಕನ ಮೇಲೆ ಅಥವಾ ಸಹೃದಯಿಯ ಮೇಲೆ ಮೂಡುವ ಸತ್ಪರಿಣಾಮದ ಫಲವೇ ಕಲೆಯಿಂದೊದಗುವ ಶ್ರೇಯಸ್ಸು."[೩೨] ಇಂತಹ ಶ್ರೇಯಸ್ಸನ್ನು ಪಾಟೀಲರ ಕಲಾನಿಷ್ಠೆ ಹಾಗೂ ಪರಿಶ್ರಮಗಳಿಂದ ಕೂಡಿದ ಚಿತ್ರಮಯ ಬದುಕಿನಲ್ಲಿ ಕಾಣುತ್ತೇವೆ.

ಪಾಟೀಲ ಅವರ ಸಮಕಾಲೀನ ಕಲಾವಿದರೆಲ್ಲ ರಚಿಸುವಂಥ ನಿಸರ್ಗಚಿತ್ರಗಳಾಗಲಿ, ಭಾವಚಿತ್ರಗಳಾಗಲಿ, ರೇಖಾಚಿತ್ರಗಳಾಗಲಿ, ಧಾರ್ಮಿಕ ಸಂಯೋಜನೆಯ ಚಿತ್ರಗಳನ್ನು ನಿಜವಾದ ಗಂಭೀರ ಕಲೆ ಎಂದೆ ಭಾವಿಸಿದ್ದರು. ಕಾರಣ ಸಮಕಾಲಿನ ಸಂದರ್ಭದ ದಿನಗಳಲ್ಲಿ ಕಲಾವಿದರು ಕಲೆ ಎಂದರೇನೆಂದು ಭೋದಿಸುತ್ತಿದ್ದರೋ ಆ ಗುಣಲಕ್ಷಣಗಳಿಗೂ, ಅವರುಗಳು ಸೃಷ್ಟಿಸುತ್ತಿದ್ದ ಕಲೆಗೂ ಒಂದು ಅವಿನಾಭಾವ ಸಂಬಂಧವಿರುತ್ತಿತ್ತು. ಅಂದಿನಿಂದ ತಿವ್ರ ತರಹದ ಮೌಖಿಕ ಲಿಖಿತ ವಾಚ್ಯತಾತ್ವಿಕ ಜಿಜ್ಞಾಸೆಯು ಇಂದಿನವರೆಗೂ ನಮ್ಮಲ್ಲಿ ಕಾಣಿಕೆಯಾಗಿದೆ. ಅಲ್ಲದೇ ಆ ಸಂದರ್ಭದಲ್ಲಿ ಕಲಾಕ್ಷೇತ್ರದಲ್ಲಿ ಬೀಸಿದ ಹೊಸಗಾಳಿಗೆ ಅನೇಕ ಕಲಾವಿದರು ಸ್ಪಂದಿಸಿ ಹೊಸ ಕಲೆಯ ಬಗ್ಗೆ (ಆಧುನಿಕ ಕಲೆಯ ಬಗ್ಗೆ) ಆಸಕ್ತಿವಹಿಸಿ ವಿವಿಧ ಮಾಧ್ಯಮಗಳನ್ನು ಬಳಸಿ ಪ್ರಯೋಗಶೀಲತೆಯ ಮೂಲಕ ಚಿತ್ರ ರಚಿಸಲು ಪ್ರಾರಂಭಿಸಿದರು. ಪಾಟೀಲರ ಸಮಕಾಲೀನ ಸಂದರ್ಭದ ಕಲಾವಿದರುಗಳಲ್ಲಿ ಎಂ. ಬಿ. ಪಾಟೀಲ, ಸಿ. ಚಂದ್ರಶೇಖರ, ವೈ. ಎಚ್. ಸೂಗೂರ, ವಿ. ಬಿ. ಹಿರೇಗೌಡರ, ಜೆ. ಮಲ್ಲಿಕಾರ್ಜುನ, ಕೆ. ಪತ್ತಾರ ಮುಂತಾದವರು.

ಪಾಟೀಲರು ತಮ್ಮ ಸಮಕಾಲೀನ ಕಲಾವಿದರುಗಳೊಂದಿಗೆ ಒಬ್ಬ ಶ್ರೇಷ್ಠ ಪ್ರಯೋಗಶೀಲ ಕಲಾವಿದರಾಗಿ ತಮ್ಮ ಸಮಕಾಲಿನ ಕಲೆಯನ್ನು ಬಳಸಿ ಮುಂದುವರೆಸಿಕೊಂಡು ಬಂದಿದ್ದರು. "ಕಲೆಗಳಲ್ಲಿ ಸಮಕಾಲೀನತೆಯ ಪ್ರಸ್ತುತತೆ ಅಗತ್ಯವಾಗಿ ಇರಲೇ ಬೇಕಾದಂಥ ಒಂದು ಮೌಲ್ಯ. ಒಬ್ಬ ಕಲಾವಿದ ತನ್ನ ಕಾಲದ ವಿಶಿಷ್ಟ ಜೀವ ಧ್ವನಿಗೆ, ಸವಾಲಗಳಿಗೆ ತನನ್ನು ಸಮ್ಮುಖವಾಗಿಸಿಕೊಂಡು

---

೩೨. ಶಂಕ್ರಪ್ಪ ಕುಂದಗೋಳ (ಸಂ): ಚಿತ್ರಕಲಾವಿದ ಡಿ. ವಿ. ಹಾಲಭಾವಿ, ಪು. ೧೧೮.

ಅಭಿವ್ಯಕ್ತಿಸುವ ಮೂಲಕ ಆ ಕಾಲದ ಕುರಿತ ಅವನ ಧೋರಣೆ ಅಥವಾ ನಿಲುವುಗಳನ್ನು ದಾಖಲಿಸುವ ಸಾಧ್ಯತೆಗಳಿವೆ."[೩೩] ಇಂತಹ ಕಲಾಕೃತಿಗಳು ಸಮಕಾಲೀನ ದಾಖಲೆಯಾಗಿ ಹೆಚ್ಚು ಮಹತ್ವ ಪಡೆಯುತ್ತವೆ. ಪಾಟೀಲರ ಕಲಾಕೃತಿ ರಚನೆಯ ಧೋರಣೆ, ಪ್ರಸ್ತುತತೆಗಳ ನಿಲುವುಗಳನ್ನು ಅವರ ರೇಖಾಚಿತ್ರ, ವರ್ಣಕಲಾಕೃತಿ ಮತ್ತು ಛಾಯಾಚಿತ್ರಕಲಾಕೃತಿಗಳ ಮುಖಾಂತರ ತಿಳಿದುಕೊಳ್ಳಬಹುದು.

"ಜೀವನದ ಅನುಭವಗಳನ್ನು ಮನಸ್ಸಿನ ಭಾವನೆಗಳನ್ನು ಕಲಾವಿದ ತನ್ನ ಚಿತ್ರದಲ್ಲಿ ಬೆರೆಸುವುದು ಸಹಜ. ಸಾಹಿತಿಗೆ ಶಬ್ದಗಳು ಸಾಧನವಾದಂತೆ ಕಲಾವಿದನಿಗೆ ಬಣ್ಣಗಳು, ರೇಖೆಗಳು, ಅಕೃತಿಗಳು ಸಾಧನವಾಗಿದೆ. ಶಬ್ದಗಳಿಗೆ ಕೋಶದಲ್ಲಿ ಅರ್ಥ ದೊರೆಯುತ್ತದೆ. ಆದರೆ ಬಣ್ಣಗಳಿಗೆ? ಅಕೃತಿಗಳು ಯಾವುದಕ್ಕೆ ಪ್ರತೀಕಗಳಾಗಿ ಬಂದಿವೆ. ಪ್ರತಿಮೆಗಳಾಗಿ ಮೂಡಿವೆ, ಏನನ್ನು ಹೇಳುತ್ತವೆ ಎನ್ನುವುದನ್ನು ಆಲೋಚಿಸಬೇಕಾಗುತ್ತದೆ."[೩೪] ಹೀಗೆ ಪಾಟೀಲರು ತಮ್ಮ ಅನುಭವ ಹಾಗೂ ಕಲ್ಪನಾ ಶಕ್ತಿಯಿಂದ ಕಲಾಕೃತಿಗಳಲ್ಲಿ ಬೇರೆ ಬೇರೆ ಅರ್ಥಗಳನ್ನು ಕಂಡುಕೊಂಡಿರುವುದನ್ನು ಕಾಣಬಹುದು.

ಮೊದಮೊದಲು ಪಾಟೀಲರು ಹಲವಾರು ವಸ್ತುಗಳನ್ನು ಪ್ರತಿಮೆ, ಪ್ರತೀಕ(Symbol)ಗಳ ಮೂಲಕ ಭಾವನೆಗಳನ್ನು ವ್ಯಕ್ತಪಡಿಸಲು ಪ್ರಯತ್ನಿಸಿ ತದನಂತರದಲ್ಲಿ ವಸ್ತುವಿನ ಆಕಾರಗಳಲ್ಲಿ ಬದಲಾವಣೆಗಳನ್ನು ಮಾಡುತ್ತಾ ಮೂಲ ಆಕಾರವನ್ನು ತಮ್ಮ ಕಲಾಕೃತಿ ರಚನೆಯಲ್ಲಿ ಸರಳೀಕರಿಸುತ್ತ ಸಾಕಷ್ಟು ಬದಲಾವಣೆ ಮಾಡಿದ್ದರೂ ಮೂಲವಸ್ತುವಿನ ಭಾವನೆಯನ್ನು ಅದರಲ್ಲಿ ವ್ಯಕ್ತಪಡಿಸಿ ಕಂಡುಕೊಂಡಿರುವುದನ್ನು ಅವರ ತೈಲವರ್ಣ ಕಲಾಕೃತಿಗಳಲ್ಲಿ ಕಾಣಬಹುದು.

ಸೃಷ್ಟಿಯ ಸೌಂದರ್ಯವನ್ನು ಸವಿದು ಅ. ಸುಂದರ ಕ್ಷಣಗಳನ್ನು ಸೆರೆ ಹಿಡಿದ ಪಾಟೀಲರು ಸೃಷ್ಟಿಯಲ್ಲಿ ಅಡಗಿದ ನಿಗೂಢತೆಯತ್ತ ಯೋಚಿಸಿ ಕಲಾಕೃತಿಗಳಲ್ಲಿ ಸೂರ್ಯ, ಚಂದ್ರ, ಆಕಾಶ, ಮೋಡ, ಅಗ್ನಿ, ಜಲ, ನೆಲ ಈ ರೀತಿಯ ಆಗಾಧಕತೆಯ ಕಲ್ಪನೆಯಲ್ಲಿ ಹೊಸ ರೀತಿಯ ಚಿತ್ರಗಳನ್ನು ರಚಿಸಲು ಪ್ರಾರಂಭಿಸಿದರು. ಅಷ್ಟೆ ಅಲ್ಲದೆ ನಾದವನ್ನು, ಸಂಗೀತದ ಲಯವನ್ನು ಚಲನೆಯನ್ನು ಚಿತ್ರಿಸುವ ಹೊಸ ಪ್ರಯೋಗಗಳನ್ನು ಮಾಡಿರುವುದನ್ನು ಅವರ ಕಲಾಕೃತಿಗಳಲ್ಲಿ ಗುರುತಿಸಬಹುದು ಹಾಗೂ ಆಧ್ಯಾತ್ಮಿಕ ಅನುಭವಗಳಿಗೂ ರೂಪಕೊಟ್ಟು, ಮಾನವನ ಹುಟ್ಟಿಗೆ ಕಾರಣವಾಗುವ ಗಂಡು ಹೆಣ್ಣಿನ ಲೈಂಗಿಕ ಕ್ರಿಯೆಯನ್ನು ಶಿವ ಹಾಗೂ ಶಕ್ತಿಯ ಸಮಾಗಮವೆನ್ನುವ

---

೩೩. ಶಂಕ್ರಪ್ಪ ಕುಂದಗೋಳ (ಸಂ): ಚಿತ್ರಕಲಾವಿದ ಡಿ. ವಿ. ಹಾಲಭಾವಿ, ಪು. ೧೧೯.
೩೪. ಶಂಕರ ಪಾಟೀಲ (ಸಂ): ಚಿತ್ರಾಂತರಂಗ, ಪು. ೮೨.

ಕಲ್ಪನೆಯಲ್ಲಿ ಕೂಡ ಚಿತ್ರಗಳ ರಚನೆ ಮಾಡಿದ್ದಾರೆ. ಉದಾ: ತಾಂತ್ರಿಕ ಕಲೆಯ ತೈಲವರ್ಣ ಮಾಧ್ಯಮದ ಚಿತ್ರಗಳಲ್ಲಿ ಕಾಣಬಹುದು.

"ಪ್ರತಿಯೊಬ್ಬ ಕಲಾವಿದ ರಚಿಸುವ ಚಿತ್ರ ಕಲಾಕೃತಿಯಾಗುವುದಿಲ್ಲ. ಒಬ್ಬ ಕಲಾವಿದ ಎಳೆದ ಎಲ್ಲಾ ಗೆರೆಗಳು ಒಂದು ಸುಂದರ ಚಿತ್ರಕ್ಕೆ ಪರಿವರ್ತನೆಗೊಳ್ಳುವ ಮಜಲನ್ನು ಹೊಂದಿರುವುದಿಲ್ಲ. ಎಳೆದಗೆರೆ, ಹಾಕಿದ ಬಣ್ಣ ಕಲಾಕೃತಿಯಾಗಲು ಕಲಾವಿದ ಬಹಳಷ್ಟು ವರ್ಷ ಶ್ರಮಿಸಬೇಕಾಗುತ್ತದೆ."[೩೫] ಆ ಒಂದು ಬಗೆಯ ಕ್ರಿಯಾತ್ಮಕ ಪ್ರಯತ್ನದಲ್ಲಿ ಸತತವಾದ ಹಲವು ವರ್ಷಗಳ ಅನುಭವ ಹೊಂದಿದಾಗ ಒಂದು ಮಟ್ಟ ಅಥವಾ ಒಂದು ಘಟ್ಟವನ್ನು ತಲಪುವ ನಿರೀಕ್ಷೆಯನ್ನು ಮಾಡಬಹುದು. ಪಾಟೀಲರ ಕಲಾಕೃತಿಗಳಲ್ಲಿನ ವಿಷಯ, ವರ್ಣಗಾರಿಕೆ, ರೇಖಾಲಾವಣ್ಯಗಳಲ್ಲಿ ಅವರು ಇಂತಹ ಒಂದು ಹಂತವನ್ನು ತಲುಪಿರುವುದನ್ನು ನಾವು ಗಮನಿಸಬಹುದಾಗಿದೆ.

"ಕಲೆಯಿಂದ ವ್ಯಕ್ತಿ ತನ್ನ ವ್ಯಕ್ತಿತ್ವದ ಪ್ರದರ್ಶನ ಮಾಡುತ್ತಾನೆ. ಆಲೋಚನೆಗಳ ವಿಮೋಚನೆಯು ಕಲೆಯ ಉದ್ದೇಶವಾಗಿರುತ್ತದೆ. ನಾವು ಎಷ್ಟೋ ಭಾವನೆಗಳನ್ನು ಅದುಮಿಡುವ ಸಂದರ್ಭದಲ್ಲಿ ಅವಕ್ಕೆ ರೂಪಕೊಟ್ಟು ಬಿಡುಗಡೆ ಪಡೆಯುತ್ತೇವೆ. ನಮ್ಮ ಅನಿಸಿಕೆಗಳನ್ನು, ಆಸೆ, ಆಕಾಂಕ್ಷೆಗಳನ್ನು ಹೊರ ಹೊಮ್ಮಲು, ಹಂಚಿಕೊಳ್ಳಲು, ಮಾನಸಿಕ ತುಮುಲಗಳಿಗೆ ತುಡಿತಗಳಿಗೆ ಕ್ರಿಯಾತ್ಮಕ ದಾರಿ ತೋರಲು ಕಲೆ ಮಾಧ್ಯಮವಾಗಿ ಬಳಕೆಯಾಗಿದೆ."[೩೬] ಪಾಟೀಲರು ತಮ್ಮ ಭಾವಗಳ ಆವೇಷ, ಉದ್ವೇಗ, ಉದ್ರೇಕಗಳಿಗೆ, ಕಳವಳಗಳಿಗೆ ಒಂದು ಬಗೆಯ ಬಿಡುಗಡೆಯನ್ನು ಕಂಡುಕೊಂಡು, ತಮ್ಮ ಭಾವೋದ್ವೇಗಗಳಿಗೆ ಒಂದು ಒಳ್ಳೆಯ ರೂಪ ಕೊಡುವ ಪ್ರಯತ್ನವನ್ನು ಕಂಡುಕೊಂಡಿರುವುದನ್ನು ಅವರ ಕಲಾಕೃತಿಗಳಿಂದ ತಿಳಿಯಬಹುದಾಗಿದೆ.

"ಯಾವುದೇ ವಸ್ತುವಿನ ಆಂತರಿಕ ಹಾಗೂ ಬಾಹ್ಯ ವಿಕ್ಷಣೆಯಿಂದ ಮನಸ್ಸಿನ ಮೇಲಾಗುವ ಪರಿಣಾಮವಾಗಿ ಹುಟ್ಟುವಂತದ್ದು ಭಾವ. ಆದ್ದರಿಂದ ಚಿತ್ರವು ಭಾವವನ್ನು ವ್ಯಕ್ತಪಡಿಸುತ್ತದೆ. ಬಣ್ಣಗಳು ಭಾವಪ್ರಚೋದನೆಗೆ ಸಹಾಯ ಮಾಡುತ್ತವೆ. ಭಾವವನ್ನು ಮೂಡಿಸಬಲ್ಲ ವಿನ್ಯಾಸದ ರಚನೆಯಲ್ಲಿ ನಾವು ಒಂದು ಕಲಾಕೃತಿಯ ಉತ್ಕೃಷ್ಟತೆಯನ್ನು, ಹೆಚ್ಚಳವನ್ನು ಕಂಡುಕೊಳ್ಳಬಹುದು. ಆಕಾರಗಳಿಂದ ವ್ಯಕ್ತವಾಗುವ ಸಂವೇದನಾ ಸೂಚನೆ ಭಾವ. ಅಂಗ ಚೇಷ್ಟೆಗಳ ಮೂಲಕ ಪ್ರದರ್ಶನವಾಗುವುದು

---

೩೫. ಶಂಕರ ಪಾಟೀಲ (ಸಂ): ಚಿತ್ರಾಂತರಂಗ, ಪು. ೧೮.
೩೬. ಅದೇ, ಪು. ೩೪.

ಭಾವ. ಪ್ರೀಯರ ಅಗಲುವಿಕೆಯಿಂದ ಆಗುವ ದುಃಖ, ಹೂದೋಟದಲ್ಲಿ ಸುತ್ತಾಡುವದರಿಂದ ಸಿಗುವ ಆನಂದ, ಇವು ಮಾನವನ ಸಹಜ ಮನೋಧರ್ಮಗಳು."[೩೭] ಆದ್ದರಿಂದ ಭಾವನೆಗಳಿಂದ ಕೂಡಿದ ಕೃತಿ ಜೀವಂತವಾಗಿರುತ್ತದೆ. ಚಿತ್ರದಲ್ಲಿ ಭಾವವೇ ಜೀವವಾಗುತ್ತದೆ. ಭಾವದರ್ಶನವೇ ಜೀವನ ದರ್ಶನವಾಗುವುದರಿಂದ ಕಲಾವಿದ ಪಾಟೀಲರ ಕಲಾಕೃತಿಗಳಲ್ಲಿ ಭಾವನೆಗಳನ್ನು ವ್ಯಕ್ತಪಡಿಸುವದರ ಜೊತೆಗೆ ಪ್ರಾಣ ತುಂಬಿದ್ದಾರೆ. ಅದು ಅವರ ಕೊಡುಗೆ ಎಂದು ಹೇಳಬಹುದು.

ನಾನು ಯಾವ ನಿಯಮಗಳಿಗೂ ಅಂಟಿಕೊಳ್ಳುವದಿಲ್ಲ. ಏಕೆಂದರೆ ನಿಯಮಗಳನ್ನು ನಾನು ಮಾಡಿಲ್ಲ. ಅವು ನನ್ನವಲ್ಲ. ನನಗಾಗಿ ನಾನು ಸ್ವಂತ ನಿಯಮಗಳನ್ನು ಮಾಡಿಕೊಳ್ಳಬೇಕು. ನನ್ನ ನಿಯಮಗಳಿಗೆ ಅನುಗುಣವಾಗಿ ನಾನು ಚಿತ್ರ ರಚಿಸಿದರೆ ಆ ಚಿತ್ರ ನನ್ನದಾಗಿ ಕಾಣುವಲ್ಲಿ ಸಂದೇಹವಿಲ್ಲ. ತನ್ನ ತನ ಎನ್ನುವುದು ಕೆಲವರಿಗೆ ಹುಟ್ಟಿನಿಂದ ಬಂದಿರುತ್ತದೆ. ಇನ್ನು ಕೆಲವರಿಗೆ ಪ್ರಯತ್ನಪೂರ್ವಕವಾಗಿ ಪಡೆಯಬೇಕಾಗುತ್ತದೆ ಎಂದು ಪಾಟೀಲರು ಚಿತ್ರಕಲಾಕೃತಿಯಲ್ಲಿ ನಿಯಮ ಮತ್ತು ತನ್ನತನ ಕುರಿತು "ಚಿತ್ರ ಕಲಾ ಚಿಂತನೆ" ಎಂಬ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ ಹಾಗೂ ಇವರ ಕಲಾಕೃತಿಗಳಲ್ಲಿ ನಿಯಮ ತನ್ನತನ (ಸ್ವಂತಿಕೆ) ಇವೆರಡನ್ನು ಸಾಧಿಸಿಕೊಂಡಿರುವುದನ್ನು ಕಾಣಬಹುದು.

ಚಿತ್ರರಚನೆಯ ಕಾಲದಲ್ಲಿ ಪಾಟೀಲರ ಮಾನಸಿಕ ಭಾವನೆಗಳಂತೆ ಅವರ ಕಲಾ ಕೌಶಲ್ಯ ಕೂಡ ಬದಲಾಗುತ್ತ, ಒಂದೊಂದು ಬಗೆಯ ವಿಚಾರಗಳನ್ನು ತಿಳಿಸಲು ಒಂದೊಂದು ಬಗೆಯ ಕೌಶಲ ಹಾಗೂ ಶೈಲಿ ಬಳಸಿ ತಮ್ಮ ಮಾನಸಿಕ ಭಾವನೆಗಳನ್ನು ಕಲಾಕೃತಿಯ ಮೂಲಕ ಹೊರಗೆಹಾಕಲು (ಅಭಿವ್ಯಕ್ತಿಸಲು) ಪಾಟೀಲರು ತಮ್ಮದೇ ಆದ ಶೈಲಿಯನ್ನು ಗುರುತಿಸಿ ರೂಪಿಸಿ ಬೆಳಸಿಕೊಂಡು ಬಂದಿರುವುದನ್ನು ಕಾಣುವೆವು.

ಕಲೆಯಲ್ಲಿ ವೈಯಕ್ತಿಕತೆಯನ್ನು ಕಾಣುವ ಹಂಬಲ ಕಲಾವಿದರಿಗೆ ಯಾವಾಗಲೂ ಇರುತ್ತದೆ. ಇದು ಇಂಥವರೇ ರಚಿಸಿದ ಚಿತ್ರ ಎಂದು ನೋಡಿದಾಕ್ಷಣ ಹೇಳಲು ಬರುವ, ಅಂತಹ ಕಲೆಯಲ್ಲಿ ಕಲಾವಿದ ತನ್ನತನವನ್ನು ಕಂಡುಕೊಂಡಿದ್ದಾನೆ ಎಂದು ಹೇಳಬಹುದು. ಈ ನಿಟ್ಟಿನಲ್ಲಿ ಪಾಟೀಲರ ಕಲಾಕೃತಿಗಳಲ್ಲಿ ತಮ್ಮದೇ ಆದ ವಿಚಾರವನ್ನು ಹೇಳದೆ ಹೋದರೂ ತಮ್ಮದೇ ಆದ ಸಂವೇಧನೆಗಳಿಗೆ ರೂಪಕೊಟ್ಟು ಅದೊಂದು ಕಲಾಕೃತಿಯಾಗಿ ನಿಲ್ಲುವ ಶಕ್ತಿಯನ್ನು ನೀಡುವುದರ ಜೊತೆಗೆ ತಮ್ಮತನವನ್ನು ಕಂಡುಕೊಂಡಿರುವುದನ್ನು ಕಲಾಕೃತಿಗಳಿಂದ ತಿಳಿದುಕೊಳ್ಳಬಹುದು.

---

೩೭. ಶಂಕರ ಪಾಟೀಲ (ಸಂ): ಚಿತ್ರಕಲಾ ಚಿಂತನೆ, ಪು. ೧೭

"ಸಂವೇದನಾಶೀಲ ಕಲಾವಿದನೊಬ್ಬ ಯಾವುದೇ ಅನುಭವಕ್ಕೆ ಅವನದೇ ಆದ ಭಾವನಾತ್ಮಕ ಪ್ರಜ್ಞೆ ಹಾಗೆಯೇ ವೈಯಕ್ತಿಕ ಅಭಿರುಚಿಯ ಅಡಿಪಾಯದ ಮೇಲೆ ನಿಂತಿರುವಂಥದ್ದು."[೩೮] ಅಂತೆಯೇ ಪಾಟೀಲರು ತಮ್ಮ ಕಲಾಕೃತಿಗಳ ವಸ್ತು ವಿಷಯಗಳಿಗೆ ಅನುಸಾರವಾಗಿ ನೈಜ ಶೈಲಿಯನ್ನು ಅಳವಡಿಸಿಕೊಂಡು ತಮ್ಮ ಸ್ವಂತಿಕೆಯ ಭಾವನಾ ವಿಶೇಷಗಳನ್ನು ನಿರೂಪಿಸಿ ತಮ್ಮದೇ ಆದ ಮಾರ್ಗವನ್ನು ಸೃಷ್ಟಿಸಿ ಚಿತ್ರಕಲಾ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದರು.

"ಕಲಾ ಇತಿಹಾಸದ ಉದ್ದಕ್ಕೂ ಸೃಷ್ಟಿಯಾದ ಹಲವಾರು ಕಲಾಕೃತಿಗಳು ಮುಖ್ಯವಾಗಿ ತಮ್ಮ ಸಮಕಾಲೀನತೆಯ ದಟ್ಟ ಹೊಳಪನ್ನು ಹೊದ್ದ ಕಾರಣದಿಂದಲೇ ಇಂದಿಗೂ ನಮ್ಮನ್ನು ಗಾಢವಾಗಿ ಸ್ಪಂದಿಸುವ ಸಾಮರ್ಥ್ಯವನ್ನು ಹೊಂದಿದೆ. ಆಯಾ ಕಾಲದ ವಿವಿಧ ವಸ್ತು, ಆಶಯ ನಿರ್ವಹಣೆಗಳನ್ನು ಸಾಮಾಜಿಕ ಸ್ಥಿತಿಗತಿಗಳನ್ನು ನಿರ್ಧರಿಸುತ್ತೇವೆ."[೩೯] ಅಂಥಹ ಹೊಳಪನ್ನು ಪಾಟೀಲರ ಚಿತ್ರಗಳಲ್ಲಿ ಕಾಣುತ್ತೇವೆ. ಇದಕ್ಕೆ ಮೂಲ ಪ್ರೇರಣೆ ಪಾಟೀಲರ ಕಲಾ ವ್ಯಾಸಂಗದ ಪರಿಸರ ಮತ್ತು ವಾತಾವರಣ, ಅಕಾಡೆಮಿಕ್ ಪದ್ಧತಿಯ ವಿದ್ಯಾರ್ಜನೆ, ಕಲಾಗುರುಗಳ ಜ್ಞಾನದ ಬೆಳಕು ಹಾಗೂ ಉತ್ತಮ ಪರಂಪರೆಯ ಸಂಸ್ಕಾರ ಇವೆಲ್ಲವುಗಳ ಮೂಲಕ ಪಾಟೀಲರ ಕಲಾಪ್ರತಿಭೆ ಫಲವತ್ತಾಗಿ ಬೆಳೆಯಲು ಕಾರಣವಾಯಿತು.

"ಕಲಾವಿದನು ಯಾವ ರೀತಿ ಇರಬೇಕು, ಆತನ ನಡತೆ ಯಾವ ರೀತಿ ಇರಬೇಕು ಎಂಬ ಭಾವನೆ ನಮ್ಮ ಭಾರತೀಯ ಸಾಂಪ್ರದಾಯಿಕ ಪರಂಪರೆಯಲ್ಲಿ ಹೇಗೆ ಇತ್ತೋ ಅಂತಹಗುಣಗಳನ್ನು ನಾವು ಶಂಕರ ಪಾಟೀಲರಲ್ಲಿ ಕಾಣುತ್ತೇವೆ. ಉದಾ: ಚಿತ್ರಕಲಾವಿದ ಸುಸಂಸ್ಕೃತ ವ್ಯಕ್ತಿತ್ವವನ್ನು ಹೊಂದಿದವನಾಗಿರಬೇಕು, ಸೋಮಾರಿಯಾಗಿರಬಾರದು, ಸಿಡುಕು ಸ್ವಭಾವದವನಾಗಿರಬಾರದು, ಶುದ್ಧ ಜೀವನ ನಡೆಸಲು ಅಧ್ಯಯನಶೀಲನಾದ ಆತ್ಮ ಸಂಯಮದ, ಭಕ್ತ ಮನೋಭಾವನೆ, ಉದಾರ ಹೃದಯದ, ದ್ವೇಷ ಅಸೂಹೆ ರಹಿತವಾದ ವ್ಯಕ್ತಿಯಾಗಿರಬೇಕೆಂದು "ಶ್ರೀ ಮಹಾವಜ್ರ ಭೈರವ" ತಂತ್ರ ಕೃತಿಯಲ್ಲಿ ಹೇಳಲಾಗಿದೆ."[೪೦] ಈ ಎಲ್ಲ ಗುಣಗಳನ್ನು ಪಾಟೀಲರಲ್ಲಿ ನಾವು ಸಹಜವಾಗಿ ಗುರುತಿಸಬಹುದಾಗಿದೆ. ಜೀವನದುದ್ದಕ್ಕೂ ಚಿತ್ರಕಲೆಗೆ ತಮ್ಮನ್ನು ಅರ್ಪಿಸಿಕೊಂಡ ಪಾಟೀಲರನ್ನು ಸರಳ ಸಜ್ಜನಿಕೆ ಸಜೀವ ಮೂರ್ತಿ. ಭಾರತೀಯ ಆಧುನಿಕ ಚಿತ್ರಕಲಾ ಜಗತ್ತಿಗೆ ಹೊಂದಿಕೊಂಡು ವಿವಿಧ ಮಾಧ್ಯಮಗಳಲ್ಲಿ ಪ್ರಯೋಗಶೀಲರಾಗಿ, ಸೃಜನಶೀಲರಾಗಿ, ಒಬ್ಬ

---

೩೮. ಶಂಕ್ರಪ್ಪ ಕುಂದಗೋಳ (ಸಂ): ಚಿತ್ರಕಲಾವಿದ ಡಿ. ವಿ. ಹಾಲಭಾವಿ, ಪು. ೧೨೦.
೩೯. ಅದೇ, ಪು. ೧೨೧.
೪೦. ಅದೇ, ಪು. ೧೨೨.

ಕಲಾವಿದರಾಗಿದ್ದಾರೆ. ಅವರ ರೇಖಾಚಿತ್ರ ಕಲೆ, ವರ್ಣ ಕಲಾಕೃತಿ ಮತ್ತು ಛಾಯಾಚಿತ್ರಣ ಕೃತಿಗಳಲ್ಲಿ ಪ್ರಮುಖ ಅಂಕಿ ಅಂಶಗಳನ್ನು ಗುರುತಿಸಿಕೊಳ್ಳುವುದರ ಜೊತೆಗೆ ಕಲಾಕ್ಷೇತ್ರದಲ್ಲಿ ಅಧ್ಯಾಪಕರಾಗಿ ಕಲಾವಿದ್ಯಾರ್ಥಿಗಳಿಗೆ, ಕಲಾವಿದರಿಗೆ ಮಾರ್ಗದರ್ಶಕರಾಗಿ ಕಾರ್ಯ ನಿರ್ವಹಿಸುವದರ ಮೂಲಕ ಇವರ ಕಲಾಕೃತಿಗಳು ಇಂದಿಗೂ ಕಲಾವಿದ್ಯಾರ್ಥಿಗಳಿಗೆ, ತರುಣ ಕಲಾವಿದರುಗಳು ಸ್ಫೂರ್ತಿದಾಯಕವಾಗಿ ಚಿತ್ರಕಲಾ ಕೃತಿಯಲ್ಲಿ ಮಾಧ್ಯಮ, ಶೈಲಿಗೆ, ಪ್ರಭಾವಿತರಾಗಿ ಚಿತ್ರರಚನೆಯತ್ತ ಸಾಗಿರುವುದನ್ನು ಕಾಣಬಹುದಾಗಿದೆ.

ಪಾಟೀಲರ ಕಲಾಕೃತಿಗಳ ವರ್ಣಗಾರಿಕೆ ಮತ್ತು ಬಳಸಿದ ಕಲಾ ಸಾಮಗ್ರಿಗಳು ಮತ್ತು ಕಾರ್ಯವಿಧಾನ

ಪಾಟೀಲರು ಜಲವರ್ಣ, ತೈಲವರ್ಣ, ಮಿಶ್ರ ಮಾಧ್ಯಮ, ಇಂಕಮಾಧ್ಯಮದಲ್ಲಿ ಅವರದೇ ಆದ ಶೈಲಿ, ವಿಶಿಷ್ಟತೆ ವಿನ್ಯಾಸ, ವರ್ಣಗಳ ಬಳಕೆ, ಲಯಬದ್ಧ ರೇಖೆ, ಮುಂತಾದ ವಿಷಯಗಳನ್ನು ಅವರ ಕಲಾಕೃತಿಗಳ ಮೂಲಕ ಈ ಮೇಲೆ ತಿಳಿದುಕೊಳ್ಳಲಾಗಿದೆ. ಹಾಗೆಯೇ ಅಂತಹ ಪರಿಣಾಮ ಬೀರುವಂತ ಚಿತ್ರ ಕಲಾಕೃತಿಗಳಿಗಾಗಿ ಬಳಸಿರುವ ಸಾಧನ ಸಲಕರಣೆಗಳ ಕುರಿತು ಈ ಕೆಳಗೆ ಪ್ರಸ್ತಾಪಿಸಲಾಗಿದೆ.

ಜಲವರ್ಣಕ್ಕಾಗಿ ಬಳಸಿದ ಕಾಗದ ಹಾಗೂ ರಟ್ಟುಗಳು:

ಪಾಟೀಲರವರು ಪಾರದರ್ಶಕ ಜಲವರ್ಣ ಅಪಾರದರ್ಶಿಕೆಯಾದ ಪೋಸ್ಟರ ಜಲವರ್ಣಗಳನ್ನು ಬಳಸಿ ಚಿತ್ರ ರಚಿಸಿದ್ದಾರೆ. ಇಂತಹ ವರ್ಣಗಳನ್ನು ಉಪಯೋಗಿಸುವಾಗ ಅದಕ್ಕೆ ಅನುಕೂಲವಾಗುವಂತಹ ಕಾಗದಗಳನ್ನು ಬಳಸಿದ್ದಾರೆ. ಪಾರದರ್ಶಕ ಜಲವರ್ಣ ನಿಸರ್ಗ ಚಿತ್ರರಚಿಸುವಲ್ಲಿ ಅದಕ್ಕಾಗಿಯೇ ವಿಶೇಷವಾಗಿ ತಯಾರಿಸಿದ ಹ್ಯಾಂಡಮೇಡ್ ಕಾಗದವನ್ನು ಬಳಸಿರುವುದು ವಿಶೇಷ ಈ ಕಾಗದವು ಸಾಕಷ್ಟು ದೃಢತೆಯನ್ನು ಹೊಂದಿರುವುದಷ್ಟೇ ಅಲ್ಲದೇ ಕಾಗದದ ಮೇಲೆ ಹಲವಾರು ಬಾರಿ ಜಲವರ್ಣವನ್ನು ಲೇಪಿಸಿದರೂ ಕೂಡಾ ಶಿಥಿಲಗೊಳ್ಳುವುದಿಲ್ಲ. ಈ ಬಗೆಯ ಕಾಗದಗಳಲ್ಲಿ ನೀರಿನ ಮಿಶ್ರಣದೊಂದಿಗೆ ವರ್ಣಗಳು ಆಳ ಪದರುಗಳಿಗೆ ಇಳಿದು ಸ್ಥಿರವಾಗಿ ನಿಲ್ಲುತ್ತದೆ. ಹಾಗೂ ಎಷ್ಟೋ ದಿನಗಳು ಗತಿಸಿದರೂ ಕಾಗದದ ಮೇಲೆ ಬಳಸಿದ ವರ್ಣಗಳು ತಾಜಾತನವನ್ನು ಕಳೆದುಕೊಳ್ಳದೆ ಶುಭ್ರವಾದ ಪರಿಣಾಮ ಹೊಂದಿದೆ. ಇನ್ನು ಅಪಾರದರ್ಶಕ ಪೋಸ್ಟರ ವರ್ಣವನ್ನು ಬಳಸುವಾಗ ಕೆಲವು ಚಿತ್ರಗಳಿಗೆ ಬಿಳಿಯ ಡ್ರಾಯಿಂಗ್ (ಸೂಪರ ನಾರ್ವೆ) ಕಾಗದವನ್ನು ಬಳಸಿದ್ದಾರೆ.

ತೈಲವರ್ಣ ಚಿತ್ರಗಳಿಗಾಗಿ ಉಪಯೋಗಿಸಿದ ಕಾಗದ ಹಾಗೂ ಕ್ಯಾನವಾಸಗಳು:

ತೈಲವರ್ಣ ಚಿತ್ರಗಳ ರಚನೆಗಾಗಿಯೇ ವಿಶಿಷ್ಟವಾದ ಕಾಗದವನ್ನು ತಯಾರಿಸುತ್ತಾರೆ. ಇಂತಹ ಕಾಗದಗಳಿಗೆ ಆಯಿಲ್ ಪೇಪರ ಶೀಟ್ ಎಂದು ಕರೆಯುವರು. ಈ ಕಾಗದಗಳು ಒಂದು ರೀತಿಯ ಒರಟು ಮೇಲ್ಮೈಯನ್ನು ಹೊಂದಿದ್ದು ವರ್ಣಗಳು ಆಳಕ್ಕೆ ಇಳಿದು ಬಿಗಿಯಾಗಿ ಕಾಗದವನ್ನು ಹಿಡಿದುಕೊಳ್ಳುತ್ತವೆ. ಅಲ್ಲದೆ ಈ ಕಾಗದವು ತೈಲವನ್ನು ಹೀರಿಕೊಳ್ಳದೆ ವರ್ಣಗಳ ಹೊಳಪನ್ನು ಮುಸುಕಾಗದೆ ಹಾಗೆ ಇರುವ ಗುಣಧರ್ಮವನ್ನು ಹೊಂದಿದೆ. ಪಾಟೀಲರು ತೈಲ ಚಿತ್ರಣಗಳ ರಚನೆಯಲ್ಲಿ ಇಂತಹ ಕಾಗದ ಬಳಸಿದ್ದಾರೆ. ಹಾಗೂ ಕ್ಯಾನವಾಸನಂತಹ ಬಟ್ಟೆಯ ಮೇಲೆ ಹೆಚ್ಚಿನ ಸಂಖ್ಯೆಯಲ್ಲಿ ತೈಲವರ್ಣಗಳಲ್ಲಿ ಚಿತ್ರರಚನೆ ಮಾಡಿದ್ದಾರೆ.

ವರ್ಣ ಹಾಗೂ ಕುಂಚಗಳು:

ಜಲವರ್ಣ, ತೈಲವರ್ಣ ಪೋಸ್ಟರ್ ಜಲವರ್ಣಗಳನ್ನು ದೇಸಿಯ ಉತ್ಪಾದನೆಗಳನ್ನು ಬಳಸಿದ್ದರೂ ಕ್ಯಾಮಲ್ ಕಂಪನಿಯಂತಹ ಶ್ರೇಷ್ಠ ಕಂಪನಿಯ ಆರ್ಟಿಸ್ಟ ವರ್ಣಗಳನ್ನು ಬಳಸಿದ್ದಾರೆ ಹಾಗೂ ಪಾಟೀಲರು ವಿದೇಶಿ ಪ್ರವಾಸದ ದಿನಗಳಲ್ಲಿ ಅಲ್ಲಿಯ ವರ್ಣ-ಕುಂಚಗಳನ್ನು ಬಳಸಿರುವುದು ತಿಳಿದುಬರುತ್ತದೆ. ಪಾಟೀಲರು ದೇಸಿಯ ವಿವಿಧ ಪ್ರಾಣಿಗಳ ರೋಮ(ಕೂದಲು)ಗಳಿಂದ ತಯಾರಿಸಿದ ವಿವಿಧ ಗಾತ್ರದ ಕುಂಚಗಳನ್ನು ನಂತರದಲ್ಲಿ ಇಂತಹ ಕುಂಚಗಳು ವಿವಿಧ ಕಾರಣಗಳಿಂದ ಮಾರುಕಟ್ಟೆಯಲ್ಲಿ ಲಭ್ಯವಾಗದ ದಿನಗಳಲ್ಲಿ ನೈಲಾನ್ ಎಳೆಗಳ ಕೃತಕ ಕುಂಚಗಳನ್ನು ಚಪ್ಪಟೆ, ವರ್ತುಲ ಪಾಯಿಂಟ್ ಆಕಾರದಲ್ಲಿ ವರ್ಗಿಕರಿಸಿ ಬಳಕೆಯನ್ನು ಮಾಡಿರುವದನ್ನು ನಾವು ಕಾಣಬಹುದು. ಜೊತೆಗೆ ಸಮಕಾಲೀನ ಸಂದರ್ಭದಲ್ಲಿ ಕಲಾಕೃತಿ ರಚನೆಯಲ್ಲಿ ಬಣ್ಣದಚೂರಿ (Colour knife)ಯನ್ನು ಬಳಸಿ ಕಲಾಕೃತಿಗಳನ್ನು ರಚಿಸಿರುವುದುಂಟು. ರೇಖಾಚಿತ್ರಗಳನ್ನು ಪಾಟೀಲರು ಹೆಚ್ಚಾಗಿ ಇಂಕ, ಪೆನ್ಸಿಲ್ ಮಾಧ್ಯಮದ ಮೂಲಕ ಚಿತ್ರಿಸಿರುವುದನ್ನು ಕಾಣುತ್ತೇವೆ.

ಇದರ ಜೊತೆಗೆ ಪಾಟೀಲರು ವಿಶಿಷ್ಟ ಮಾಧ್ಯಮವಾದ ಬ್ಲೋಟಾರ್ಚ ಅಂದರೆ ಸುಡು ಚಿತ್ರಗಳು. ಈ ಮಾಧ್ಯಮದಲ್ಲಿ ಪಾಟೀಲರು ಕೃತಿ ರಚನೆಗೆ ಪ್ಲೈವುಡ್ ನಂತಹ ಮರದ ಹಲಗೆಯನ್ನು ಬಳಸಿ ಬಳಪದಿಂದ ಚಿತ್ರದ ಪೂರ್ವ ಸಿದ್ಧತೆಯ ಅಂಕನೆಗೆ ಚಿತ್ರವನ್ನು ಹಲಗೆಯ ಮೇಲೆ ಚಿತ್ರಿಸಿ ಸೀಮೆ ಎಣ್ಣೆ ಟಾರ್ಚಕೊಳ್ಳಿಯನ್ನು (ಸ್ಟೋವ) ಬಳಸಿ ಬೆಂಕಿಯೊಡನೆ ಸರಸವಾಡಿ ಪ್ಲೈವುಡ್ ಹಲಗೆಯ ಕ್ಷೇತ್ರದ ಮೇಲೆ ಈ ಟಾರ್ಚ ಉರಿಯನ್ನು ಬಿಡುತ್ತಿದ್ದರು. ಹೀಗೆ ಶಾಖಕ್ಕೆ ಬೆಂದ ಭಾಗ

ವಿವಿಧ ಛಾಯೆಯ ಕಪ್ಪುವರ್ಣದಿಂದ ಕೂಡಿರುತ್ತಿತ್ತು.ಈ ರೀತಿಯ ಕಲಾಕೃತಿಯಲ್ಲಿ ಮರದ ಹಲಗೆಯನ್ನು ಕ್ಯಾನ್‌ವಾಸಿನಂತೆ ಕೊಳ್ಳಿಯನ್ನು ಕುಂಚವನ್ನಾಗಿ ಬಳಸಿರುವುದನ್ನು ಕಾಣಬಹುದು. ಹಾಗೆಯೇ ಬಿತ್ತಿಚಿತ್ರಮಾಧ್ಯಮ (ಮ್ಯೂರಲ್) ಕಲಾಕೃತಿಗಳ ರಚನೆಯಲ್ಲಿ ಸಿಮೆಂಟ್, ಬಣ್ಣದ ಗಾಜಿನ ತುಂಡುಗಳು, ಹಾಸುಗಲ್ಲಿನ (ಟೈಲ್ಸ) ಅಪ್ರಯೋಜಕ ವಸ್ತುಗಳ ತುಣುಕುಗಳನ್ನು ವರ್ಣ ಹಾಗೂ ಕುಂಚಗಳ ಮಾದರಿಯಲ್ಲಿ ಬಳಸಿ ಕೆಲವು ಮ್ಯೂರಲ್ ಕಲಾಕೃತಿಗಳನ್ನು ರಚಿಸಿರುವುದನ್ನು ಕಾಣಬಹುದು.

ಈ ದಿಸೆಯಲ್ಲಿ ಪಾಟೀಲರು ಒಬ್ಬ ಕರ್ನಾಟಕದ ಶ್ರೇಷ್ಠ ಕಲಾವಿದರಾಗಿ ತಮ್ಮ ಸಮಕಾಲಿನ ಕಲೆಯನ್ನು ಬಳಸಿಕೊಂಡು, ಬಂದಂಥವರಲ್ಲಿ ಪ್ರಮುಖರು ಎಂದು ಹೇಳಬಹುದು. ಕಲೆಗಳಲ್ಲಿ ಸಮಕಾಲೀನ ಪ್ರಸ್ತುತತೆಗೆ ಆಯಾಕಾಲದ ವಿಶಿಷ್ಟ ಸವಾಲುಗಳಿಗೆ ತಮ್ಮನ್ನು ಕಲಾಕೃತಿಗಳ ರಚನೆಯ ಸಂದರ್ಭಗಳಲ್ಲಿ ತೊಡಗಿಸಿಕೊಳ್ಳುವದರ ಜೊತೆಗೆ ಈ ರೀತಿಯ ಮಾಧ್ಯಮಗಳನ್ನು ಬಳಸಿ ಕಲಾಕೃತಿಗಳ ರಚನೆಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿ ಕಲಾಕೃತಿಗಳ ಮೂಲಕ ಕಲಾಕ್ಷೇತ್ರದಲ್ಲಿ ಉನ್ನತ ಸ್ಥಾನಮಾನವನ್ನು ಅಲಂಕರಿಸಿದ್ದಾರೆ.

❖ ❖ ❖

ಅಧ್ಯಾಯ : ಏಳು

ಶಂಕರ ಪಾಟೀಲರ ಕಲಾ ಸಾಹಿತ್ಯ ಮತ್ತು ಕಲಾ ಚಟುವಟಿಕೆಗಳು

ಕಲೆ ಮತ್ತು ಸಾಹಿತ್ಯಗಳು ಮಾನವ ಬದುಕಿನ ಸಾಧನೆಯ ಎರಡು ಉನ್ನತ ಶಿಖರಗಳು, ಕಲೆಯು ಜೀವ ವಿಕಾಸದಲ್ಲಿ ಮಾನವನೊಂದಿಗೆ ಇದ್ದು, ಅವನೊಂದಿಗೆ ಬೆಳೆದು ಬಂದ ಪ್ರಕೃತಿ ಮೂಲವಾದುದಾದರೆ ಕಾಲ ಘಟ್ಟದ ಅಂತರದಲ್ಲಿ ಬರುವ ಸಾಹಿತ್ಯವು ವಿಕಸಿತ ಮಾನವನ ಬುದ್ಧಿಜನ್ಯವಾದುದಾಗಿದೆ. ಕಲೆ ಮತ್ತು ಸಾಹಿತ್ಯಗಳು ಮೂಲದಲ್ಲಿ ವಿಭಿನ್ನ ಕೃತಿಗಳಾಗಿ ಕಂಡರೂ ಆಂತರ್ಯದಲ್ಲಿ ಅವು ಭಾವಾಭಿವ್ಯಕ್ತಿಯ ವಿಭಿನ್ನ ಮಾಧ್ಯಮದ ಕಲಾಸೃಷ್ಟಿಗಳಾಗಿವೆ.

"ಇತಿಹಾಸದಂತೆಯೇ ಆದಿಮಾನವನ ಬದುಕು, ಹೋರಾಟ, ಉಳಿಯುವಿಕೆಯ ಸಂಕಲ್ಪಗಳ ಅಭಿವ್ಯಕ್ತಿಯ ಮಾಧ್ಯಮವಾಗಿ ಬೆಳೆದು ಬಂದದ್ದು ಚಿತ್ರಕಲೆಯಾದರೆ, ಇತಿಹಾಸದೊಳಗಡೆಯಿಂದ ಕಾಲಘಟ್ಟದಲ್ಲಿ ದೇಶಿಯ ಬದುಕಿನಲ್ಲಿ ಟಂಕಿಸಿದ ರಿದಮ್‌ಗಳ ಗಡಿಯಲ್ಲಿ ಬೆಳೆದಿರುವುದು ಸಾಹಿತ್ಯವಾಗುತ್ತದೆ, ಈ ಕಾಲಘಟ್ಟವನ್ನು ಮೀರಿ ಒಂದೆಡೆಯಲ್ಲಿ ಸಂಗಮಿಸಿರುವ ಚಿತ್ರಕಲೆ ಸಾಹಿತ್ಯದ ಜೊತೆ ಜೊತೆಯಲ್ಲಿ ಸಹಜವಾಗಿ ಬೆಳೆದುಕೊಂಡು ಬಂದಿದೆ."[೧]

---

೧. ಶಂಕ್ರಪ್ಪ ಕುಂದಗೋಳ (ಸಂ), ಚಿತ್ರಕಲಾವಿದ ಡಿ. ವ್ಹಿ. ಹಾಲಭಾವಿ, ಪು. ೧೨೬.

ಇಂದಿನ ಆಧುನಿಕ ಮಾನವನ ನಾಗರಿಕ ಮತ್ತು ಸಾಂಸ್ಕೃತಿಕ ಜೀವನದದಲ್ಲೂ ಕಲೆ ಮತ್ತು ಸಾಹಿತ್ಯಗಳು ಬೇರೆ ಬೇರೆ ಎಂದೆನಿಸದೇ ಒಂದರೊಳಗೆ ಮತ್ತೊಂದು ಹೆಣೆದುಕೊಂಡಿರುವಂತೆ ಒಂದನ್ನೊಂದು ಅಭಿವ್ಯಕ್ತಿಗಾಗಿ ಆಶ್ರಯಿಸಿಕೊಂಡಿವೆ. ಸ್ವರ ಮತ್ತು ಲಿಪಿ ಮಾಧ್ಯಮಗಳ ಮುಖಾಂತರ ಕಲ್ಪಿತ ಪದಗಳ ಮಿತಿಯಲ್ಲಿ ಸಾಹಿತ್ಯವು ಆಯಾ ದೇಶಿಯ ನೆಲೆಗಳಲ್ಲಿ ತನ್ನ ಆಶಯಗಳನ್ನು ಭಾವಗಳನ್ನು ಬಿತ್ತರಿಸುತ್ತಿದ್ದರೆ, ಚಿತ್ರಕಲೆಯು ದೇಶಿಯ ಮತ್ತು ಅನ್ಯ ದೇಶಿಯ ಸೀಮಿತ ಶಬ್ದಕೋಶಗಳ ಗಡಿಯನ್ನು ಇತಿಹಾಸದ ಕಾಲಮಾನವನ್ನು ದಾಟಿಕೊಂಡು ತನ್ನ ಆಶಯಗಳನ್ನು ಬಿತ್ತರಿಸಬಲ್ಲುದಾಗಿದೆ. ಈ ರೀತಿಯ "ಚಿತ್ರಕಲೆಯ ಅಭಿವ್ಯಕ್ತಿಗೆ ಇರುವ ಹಲವು ಮಿತಿಗಳು ಸಾಹಿತ್ಯಿಕ ಅಭಿವ್ಯಕ್ತಿಗೂ ಇವೆ. ಹತ್ತು ಪ್ರವಸನಗಳ ಸಾಹಿತ್ಯಿಕ ವಿವರಗಳನ್ನು ಒಂದು ಚಿತ್ರವು ವಿವರಿಸುವಂತೆ ಎರಡು ಸಾಲುಗಳ ಸಾಹಿತ್ಯಿಕ ಬೆಡಗನ್ನು ಒಂದು ಚಿತ್ರವು ವಿವರಿಸಲಾಗದೆ ಉಳಿಯಲೂಬಹುದು. ಆದುದರಿಂದ ಮಾನವನ ಕಲಾತ್ಮಕ ಮತ್ತು ಸಾಹಿತ್ಯಿಕ ಸಂಪರ್ಕದ ಬೆಳವಣಿಗೆಯಲ್ಲಿ ಕಲೆ ಮತ್ತು ಸಾಹಿತ್ಯಗಳು ಪರಸ್ಪರ ಕೊಡುಕೊಳ್ಳುವಿಕೆಯಿಂದ ವಿನಿಮಯಗಳು ಬೆಳೆದಂತೆ ಅವೆರಡರ ಅಂತರ ಶಿಸ್ತೀಯ ಅನಾವರಣವೊಂದು ನೆಲೆಗೊಳ್ಳುತ್ತದೆ."[೨]

ಭಾರತೀಯ ಸಮಕಾಲೀನ ಕಲೆ ಹಾಗೂ ಕಲಾವಿದರಿಗೆ ಪ್ರಸ್ತುತ ದಿನಮಾನಗಳಲ್ಲಿ ತಾರಾಮೌಲ್ಯ ಬಂದಿದೆ. ಸುಶಿಕ್ಷಿತ ಜನರ ನಡುವೆಯಂತೂ ಚಿತ್ರಕಲಾವಿದರುಗಳಿಗೆ ಉನ್ನತ ಗೌರವದ ಸ್ಥಾನಗಳು ಲಭ್ಯವಾಗಿವೆ.

ಕರ್ನಾಟಕದಲ್ಲಿ ಕನ್ನಡ ಭಾಷೆಯಲ್ಲಿ ದೃಶ್ಯಕಲಾ ಸಾಹಿತ್ಯ ಮೇಲ್ನೋಟಕ್ಕೆ ಇಲ್ಲವೆ ಇಲ್ಲ ಎನ್ನುವಂತ ಸಂದರ್ಭದಿಂದ ಇಂದು ಬಹುದೂರ ನಡೆದು ಬಂದಿದ್ದೇವೆ. ಗಮನಾರ್ಹ ಸಾಹಿತ್ಯವಾಗಿರುವ, ಚಿತ್ರಭಾಷೆ ಬೆಳೆಯುತ್ತಿರುವ ಸಂದರ್ಭದಲ್ಲಿ ನಾವಿದ್ದೇವೆ. ಈ ದಶಮಾನದ ಮೂರನೆಯ ದಶಕದಿಂದೀಚೆಗೆ ಪುರಾತತ್ವಶೋಧಕರ ಬರಹಗಳಿಂದಾರಂಭಿಸಿ ಕಲಾ ಇತಿಹಾಸಕಾರರ, ವಿಮರ್ಶಕರ ಬರಹಗಳಲ್ಲಿಯೇ ಅಲ್ಲದೆ ಕನ್ನಡದ ದಿನಪತ್ರಿಕೆ ಮತ್ತು ವಾರಪತ್ರಿಕೆಗಳು, ಸಾಹಿತ್ಯ ಹಾಗೂ ಸಾಂಸ್ಕೃತಿಕ ನಿಯತಕಾಲಿಕಗಳಲ್ಲಿಯೂ ಕಲಾಸಾಹಿತ್ಯ ಕಾಣಿಸಿಕೊಳ್ಳತೊಡಗಿತು. ಕಲಾಸಾಹಿತ್ಯಕ್ಕೆ ಗಂಭೀರ ಚಿಂತನೆಯನ್ನು ನೀಡಿರುವವರ ಕೃತಿಗಳನ್ನು ಪರಿಶೀಲಿಸಿದರೆ ೧೯೩೦ರ ನಂತರ ಕೆ. ಶಿವರಾಮಕಾರಂತ ಮತ್ತು ಅ.ನ.ಕೃಷ್ಣರಾಯರ ಪ್ರಕಟನೆಗಳು ಕಲಾಸಾಹಿತ್ಯಕ್ಕೆ ಒಳಗೊಳ್ಳಲಾರಂಭಿಸಿದ್ದು

೨. ಶಂಕ್ರಪ್ಪ ಕುಂದಗೋಳ (ಸಂ), ಚಿತ್ರಕಲಾವಿದ ಡಿ. ವ್ಹಿ. ಹಾಲಭಾವಿ, ಪು.೧೨೭.

ಒಂದು ವಿಶೇಷ ಕೊಡುಗೆಯಾಗಿದೆ. ಕಾರಂತರ ಭಾರತೀಯ ಚಿತ್ರಕಲೆ, ಕಲಾ ಪ್ರಪಂಚ, ಕಲೆಯದರ್ಶನ, ಭಾರತೀಯ ಶಿಲ್ಪ, ಕರ್ನಾಟಕದಲ್ಲಿ ಚಿತ್ರಕಲೆ, ಚಿತ್ರಶಿಲ್ಪ, ವಾಸ್ತುಕಲೆಗಳು ಮತ್ತು ಅನಕೃರವರ ವಿವಾದಾಸ್ಪದ "ಭಾರತೀಯ ಚಿತ್ರಕಲೆಯಲ್ಲಿ ರಾಜಾರವಿವರ್ಮನ ಸ್ಥಾನ, 'ಚಿತ್ರಕಲೆ' ಇತ್ಯಾದಿಗಳು ಗಮನಾರ್ಹ.

ಕಲಾಸಾಹಿತ್ಯದ ಅಭ್ಯಾಸಕ್ಕಾಗಿ ಕಲಾವಿದ್ಯಾರ್ಥಿಗಳು ಇಂಗ್ಲೀಷ ಗ್ರಂಥಗಳ ಮೊರೆ ಹೋಗುವ ಸಂದರ್ಭವನ್ನು ಬಹುತೇಕ ತಪ್ಪಿಸಿದ ಕೀರ್ತಿ ಶಿವರಾಮ ಕಾರಂತರಂತಹ ಹಿರಿಯರಿಗೆ ಸಲ್ಲುತ್ತದೆ.

೧೯೬೧-೬೨ರಲ್ಲಿ ಪ್ರಾರಂಭವಾದ ಕರ್ನಾಟಕ ಲಲಿತಕಲಾ ಅಕಾಡೆಮಿ ನಿರ್ದಿಷ್ಟ ಉದ್ದೇಶದಿಂದ ಕಲಾಸಾಹಿತ್ಯವನ್ನು ಪ್ರಕಟಿಸುವ ಉದ್ದೇಶ ಹೊಂದಿ ಪ್ರಕಟಣೆಗೆ ಎರಡು ದಶಕಗಳೇ ಬೇಕಾದವು. ೧೯೮೫ರ ನಂತರ ಅದು ಹಿರಿಯ ವಿಮರ್ಶಕರಾದ ಬಿ.ವಿ.ಕೆ. ಶಾಸ್ತ್ರೀ, ಎಸ್.ಎನ್. ಚಂದ್ರಶೇಖರ, ಪಿ.ಆರ್. ತಿಪ್ಪೇಸ್ವಾಮಿ, ವಿ.ಟಿ.ಕಾಳೆ, ಆರ್.ಎಂ. ಹಡಪದ, ಎಂ.ಎಚ್.ಕೃಷ್ಣಯ್ಯ, ಡಾ. ಅ.ಲ.ನ., ಡಾ. ಎಸ್.ಸಿ.ಪಾಟೀಲ, ಕೆ.ವಿ. ಸುಬ್ರಹ್ಮಣ್ಯಂ, ಡಾ. ಬಿ.ಕೆ.ಹಿರೇಮಠ, ಎನ್. ಮರಿಶಾಮಾಚಾರ್, ಚಿ. ಸು. ಕೃಷ್ಣಶೆಟ್ಟಿ, ಎಚ್.ಎ.ಅನೀಲಕುಮಾರ ಮುಂತಾದ ಕಲಾಸಾಹಿತಿಗಳ ಸಂಪಾದಕತ್ವದಲ್ಲಿ ಹಲವು ಪ್ರಕಟಣೆಗಳನ್ನು ಹೊರತಂದಿತು. ಅನಂತರದಲ್ಲಿ ಆಕಾಡೆಮಿಯಿಂದ ಸಂಪ್ರದಾಯ ಹಾಗೂ ಸಮಕಾಲೀನ ಕಲೆಯ ಕುರಿತು ಪ್ರಕಟಣೆಗಳು ಪ್ರಕಾಶಿಸಲ್ಪಟ್ಟು ಅವುಗಳು ಇತ್ತೀಚಿನ ದೃಶ್ಯಕಲಾ ಕ್ಷೇತ್ರದ ಅಪರೂಪದ ಕೊಡುಗೆಗಳಾಗಿವೆ.

ಪ್ರಸ್ತುತ ನಾಲ್ಕಾರು ವರ್ಷಗಳಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದಲ್ಲಿ ಕಲೆ, ಕಲಾವಿದರುಗಳು, ಕಲಾಮಾಧ್ಯಮಗಳ, ಕಲಾಶೈಲಿಗಳ ಕುರಿತು ಕಲಾ ಸಾಹಿತ್ಯ ಗ್ರಂಥಗಳು, ಪಿಎಚ್.ಡಿ., ಎಂ.ಫಿಲ್. ಸ್ನಾತಕೋತ್ತರ ಪದವಿಯ ಅಧ್ಯಯನದ ಅನಕೂಲಕ್ಕೆ ಹಲವಾರು ಸಂಖ್ಯೆಯಲ್ಲಿ ಮಹಾಪ್ರಬಂಧಗಳು, ಕಿರುಪ್ರಬಂಧಗಳು ಪ್ರಕಟಗೊಂಡಿವೆ. ಈ ರೀತಿಯಲ್ಲಿ ದೃಶ್ಯಕಲಾ ಸಾಹಿತ್ಯ ಮುಂದುವರೆಯುತ್ತ ಇತರ ಕ್ಷೇತ್ರಗಳಂತೆ ತನ್ನನ್ನು ಗುರುತಿಸಿಕೊಳ್ಳುವಲ್ಲಿ ಕನ್ನಡ ವಿಶ್ವವಿದ್ಯಾಲಯ ಮತ್ತು ದೃಶ್ಯ ಕಲಾವಿಭಾಗ ಗಂಭೀರವಾಗಿ ಕಾರ್ಯನಿರ್ವಹಿಸುತ್ತಿದೆ.

ಕನ್ನಡದ ಸಮಕಾಲೀನ ಸಾಹಿತ್ಯ ಕ್ಷೇತ್ರಕ್ಕೆ ಸಮನಾಗಿ ಇಂದು ಕಲಾಸಾಹಿತ್ಯ ನಿಲ್ಲುವ ಪ್ರಯತ್ನ ಇತ್ತೀಚಿಗಷ್ಟೇ ಆರಂಭವಾಗಿದ್ದರೂ ಆ ಹಾದಿಯಲ್ಲಿ ಬಲುದೂರ ನಡೆದು, ಹೊಸ ಆಶಯಗಳ ಗುರಿಯನ್ನು ತಲಪುವ ಹಂತದಲ್ಲಿದೆ.

"ಒಂದು ಕಲಾಕೃತಿಯನ್ನು ಯಾವುದೇ ದೇಶದ ಸಂಪ್ರದಾಯನೊಬ್ಬ ಹೆಚ್ಚೇನೂ ಶ್ರಮವಿಲ್ಲದೆ ಪಾಶ್ಚಿಮಾತ್ಯ ರೀತಿ ನೀತಿಗಳ ಜ್ಞಾನವಿಲ್ಲದಿದ್ದರೂ ಕಲಾಕೃತಿಯೊಂದನ್ನು ನೋಡಲು ನಿಲ್ಲುವ ಸಮರ್ಥವಾದ ಕಣ್ಣುಗಳಿದ್ದರೆ ಅದರ ಸಾಂಗತ್ಯ ಕಲಾರಸಿಕರನ್ನು ಹಿಡಿದು ನಿಲ್ಲಿಸುತ್ತದೆ."[೩] ಆದರೆ ಸಾಹಿತ್ಯದಲ್ಲಿ ಇದು ಸಾಧ್ಯವಾಗುವುದಿಲ್ಲ. ಅಲ್ಲಿ ಭಾಷೆಯ ಜ್ಞಾನ ಅನಿವಾರ್ಯ. ಸಾಹಿತ್ಯದಲ್ಲಿ ಭಾಷಾಂತರದಿಂದ ಯಾವುದೇ ಭಾಷೆಯ ಕೃತಿಯನ್ನು ಓದಬಹುದಾದರೂ ಅದಕ್ಕೆ ಮೂಲಕೃತಿಯ ಸತ್ವ ಬರುವುದು ಕಷ್ಟ. ಹೀಗೆ ಚಿತ್ರಕಲೆ ಸಾಹಿತ್ಯಕ್ಕಿರುವ ಈ ಮಿತಿಯನ್ನು ಮೀರಿ ನಿಲ್ಲುತ್ತದೆ.

"ಕನ್ನಡದಲ್ಲಿ ದೃಶ್ಯಕಲೆ ಕುರಿತ ಮೀಮಾಂಸೆ, ವಿಮರ್ಶೆಯ ಬರವಣಿಗೆ, ಸಾಹಿತ್ಯಿಕ ಪ್ರಕಟಣೆಗಳು ಗಣನೀಯ ಪ್ರಮಾಣದಲ್ಲಿ ಬೆಳದಿಲ್ಲವೆಂಬ ಕೂಗು ಇನ್ನು ಜೀವಂತವಾಗಿಯೇ ಇದೆ. ಮುಖ್ಯವಾಗಿ ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ದೃಶ್ಯ ಕಲೆ ಪಡೆದುಕೊಂಡ ಹೊಸ ತಿರುವು ಮತ್ತು ಅದರ ಬೆಳವಣಿಗೆಯ ಗತಿಯೊಂದಿಗೆ ದೃಶ್ಯ ಕಲಾ ಸಾಹಿತ್ಯ ಹೆಜ್ಜೆ ಹಾಕಲಿಲ್ಲವೆಂದೇ ಹೇಳಬೇಕು. ಅದರೆ ಈ ಬಗೆಯ ನಿಧಾನಗತಿಯ ಹಲವು ಕಾರಣಗಳೂ ಇವೆ. ಅದರಲ್ಲಿ ಮುಖ್ಯವಾದ ಕಾರಣವೆಂದರೆ ಸಮಕಾಲೀನ ದೃಶ್ಯಕಲೆ ಕುರಿತು ಗಟ್ಟಿಯಾಗಿ ಬರೆಯಬಲ್ಲವರ ಕೋರತೆಯನ್ನಬೇಕು."[೪] ಈ ಕೊರತೆಯನ್ನು ತುಂಬಲು ಈ ದಶಕದಲ್ಲಿ ದೃಶ್ಯಕಲಾ ಸಾಹಿತ್ಯ ಕುರಿತು ಹಲವು ಪುಸ್ತಕಗಳು, ಗ್ರಂಥಗಳೂ, ಲೇಖನಗಳೂ ಪ್ರಕಟಗೊಂಡಿವೆ.

ಹೀಗೆ ತನ್ನ ಹತ್ತಾರು ವರುಷಗಳ ಚರಿತ್ರೆಯಲ್ಲಿ ಹಲವಾರು ಘಟ್ಟಗಳನ್ನು ಮೆಟ್ಟಿ ಬೆಳೆದು ಬಂದ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಕಲಾವಿದರಾಗಿ, ಕಲಾಸಕ್ತರಾಗಿ, ಕವಿಯಾಗಿ, ವೃತ್ತಿ ಬದುಕಿನಲ್ಲಿ ಕಲಾಅಧ್ಯಾಪಕರಾಗಿ, ಚಿತ್ರಕಲಾ ಕ್ಷೇತ್ರದ ಸಾಹಿತಿಯಾಗಿ ಶ್ರೀಯುತ ಶಂಕರ ಪಾಟೀಲರು ಒಂದು ವಿಶಿಷ್ಟ ಪರಂಪರೆಯ ನಿರ್ಮಾಣಕ್ಕೆ ಕಾರಣರಾಗಿದ್ದಾರೆ. ಅಲ್ಲದೇ ನಮ್ಮ ಕಲಾಕ್ಷೇತ್ರ ಕಂಡುಕೊಂಡ ಒಬ್ಬ ಪ್ರತಿಭಾನ್ವಿತ ಪ್ರಯೋಗಶೀಲ ಕಲಾವಿದ. ಇವರು ದೃಶ್ಯಕಲೆ ಮತ್ತು ಕಲಾಸಾಹಿತ್ಯ ಈ ಎರಡೂ ದೃಷ್ಟಿಯಿಂದ ತಮ್ಮನ್ನು ತೊಡಗಿಸಿಕೊಂಡವರು. ಪಾಟೀಲರು ಸಮಕಾಲೀನತೆಯಲ್ಲಿ ಕಲಾಕ್ಷೇತ್ರದಲ್ಲಿ ಎಲ್ಲ ದೃಷ್ಟಿಯಿಂದಲೂ ಹೊಸತನಕ್ಕೆ ಹಂಬಲಿಸುತ್ತಿದ್ದಂತೆ, ಕೆಲವು ಮಹತ್ವಪೂರ್ಣವಾದ ಬದಲಾವಣೆಗೆ ಹಾತೊರೆಯುತ್ತಿದ್ದರು. ಇವರ ಬಹುಮುಖ ವ್ಯಕ್ತಿತ್ವದ ಒಂದು ಭಾಗವಾಗಿ ಕಲಾ ಸಾಹಿತ್ಯವನ್ನು ಇಲ್ಲಿ ಚರ್ಚಿಸಬಹುದಾಗಿದೆ.

---

೩. ಶಂಕ್ರಪ್ಪ ಕುಂದಗೋಳ (ಸಂ), ಚಿತ್ರಕಲಾವಿದ ಡಿ. ವ್ಹಿ. ಹಾಲಭಾವಿ, ಪು. ೧೨೮.
೪. ಶಿವಾನಂದ ಎಚ್. ಬಂಟನೂರ, ಕಲಾವಾರ್ತೆ, ಪು. ೩೮.

ಶಂಕರ ಪಾಟೀಲ ಅವರ ಕಲಾ ಸಾಹಿತ್ಯವನ್ನು ಮುಖ್ಯವಾಗಿ ಎರಡು ರೀತಿಯಲ್ಲಿ ವಿಭಾಗಿಸಿಕೊಂಡು ಅಧ್ಯಯನ ಮಾಡಬಹುದಾಗಿದೆ.

ಚಿತ್ರಕಲಾ ಸಾಹಿತ್ಯ ಗ್ರಂಥಗಳು : ೧. ಚಿತ್ರಕಲಾ ಚಿಂತನೆ, ೨. ಚಿತ್ರಾಂತರಂಗ, ೩. ದಿ ಲಿವ್ಹಿಂಗ್ ಲೈನ್ಸ್, ೪. ಹಿಮಾಲಯದ ಹಿನ್ನೆಲೆಯಲ್ಲಿ

ಸಾಹಿತ್ಯ ಗ್ರಂಥಗಳು : ೧. ನಾ ಕವಿತಾ ಬರದಿಲ್ಲ, ೨. ಕಣ್ಮುಚ್ಚಿಕೊಂಡವರು (ಕವನ ಸಂಕಲನ), ೩. ಹೊಯ್ಸಳ ಪತ್ರಿಕೆ (ಸಂಪಾದನೆ)

ಚಿತ್ರಕಲಾ ಸಾಹಿತ್ಯ ಗ್ರಂಥಗಳಲ್ಲಿ ಅ. ಚಿತ್ರಕಲಾ ಗ್ರಂಥಗಳು, ಆ. ಕಲಾ ಲೇಖನಗಳೆಂದು ಮತ್ತೆ ವಿಭಜಿಸಿಕೊಂಡು ವಿವೇಚಿಸಬಹುದಾಗಿದೆ.

ಅ. ಚಿತ್ರಕಲಾ ಸಾಹಿತ್ಯ ಗ್ರಂಥಗಳು

೧. ಚಿತ್ರಕಲಾ ಚಿಂತನೆ

ದಿನಾಂಕ ೨೩.೧೨.೧೯೯೫ರಂದು ಶ್ರೀ ಶಂಕರ ಪಾಟೀಲರ 'ಚಿತ್ರಕಲಾ ಚಿಂತನೆ' ಎಂಬ ಗ್ರಂಥವನ್ನು ಬಿಡುಗಡೆಗೊಳಿಸಿದರು. ಸಾಹಿತ್ಯ, ಕಾವ್ಯ, ಸಂಗೀತ, ಛಾಯಾಚಿತ್ರ ಹೀಗೆ ಬೇರೆ ಬೇರೆ ವಿಷಯಗಳಲ್ಲಿರುವ ಆಸಕ್ತಿ ಅವರ ಈ ಗ್ರಂಥದ ಲೇಖನಗಳಲ್ಲಿ ಒಳಗೊಂಡಿರುವುದನ್ನು ಕಾಣಬಹುದು. ಜೀವನದ ಸಾಮರಸ್ಯದಿಂದ ಹೊರ ಹೊಮ್ಮುವ ರೂಪ ಕಲೆ, ಜೀವನದ ಅನುಭವಗಳ ಸಮೃದ್ಧವಾದಂತಹ ಸಾರ ಕಲೆಯ ಹುಟ್ಟಿಗೆ ಕಾರಣ ಮತ್ತು ಚಿತ್ರದಲ್ಲಿ ಭಾವದ ಪ್ರಾಮುಖ್ಯತೆ, ಭಾವಪ್ರಚೋದನೆಯ ಕುರಿತು ಭಾರತೀಯ ಕಲೆಯ ಪರಿಕಲ್ಪನೆಯಲ್ಲಿ ಮೂಡಿ ಬಂದಿದೆ.

ಈ ಗ್ರಂಥದ ವಿಷಯ ಸೂಚಿಯಲ್ಲಿ ಚಿತ್ರಕಲೆಯ ಪರಂಪರೆ, ಸೌಂದರ್ಯ ಶಾಸ್ತ್ರದಲ್ಲಿನ ಪ್ರಮುಖ ತತ್ವಗಳು ಮತ್ತು ಕಲೆಯಲ್ಲಿ ಶಿಸ್ತು ಮತ್ತು ಅನ್ಯೋನ್ಯತೆ, ಕಲಾ ರಚನೆಯಲ್ಲಿ ಕಲಾವಿದನ ಶೈಲಿ ಮತ್ತು ಕಲಾವಿಮರ್ಶೆ ಇಂತಹ ಹಲವಾರು ವಿಚಾರಗಳನ್ನು ಭಾರತೀಯ ಕಲಾ ಪರಂಪರೆಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಕಲೆಯ ಕುರಿತಾದ ಲೇಖನಗಳನ್ನು ಶೈಕ್ಷಣಿಕ ಅವಶ್ಯಕತೆಗಾಗಿ ವಿಮರ್ಶಾತ್ಮಕವಾಗಿ ಪರಿಚಯಿಸಿದ್ದಾರೆ. ಈ ದಿಸೆಯಲ್ಲಿ ಎಂದಿಗಿಂತ ಅಗತ್ಯವಾದ ಬೇರೆ ಬೇರೆ ಕಲಾಪ್ರಕಾರಗಳಾದ ಸಾಹಿತ್ಯ, ಸಂಗೀತ, ಶಿಲ್ಪ, ವಾಸ್ತುಶಿಲ್ಪ, ವಿಸ್ತೃತ ಬೆಳವಣಿಗೆಯನ್ನು ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿನ ಬದಲಾವಣೆ, ಹೊಸ ಹೊಸ ಆಯಾಮಗಳನ್ನು ಅದರಲ್ಲಿನ ಹೊಸ

ಹೊಸ ವಸ್ತುವಿಷಯಗಳನ್ನು ಸ್ಪಷ್ಟವಾದ ನಿಲುವಿನಲ್ಲಿ ದಾಖಲಿಕರಿಸುವ ಪಾಟೀಲರು ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಹೀಗೆ ವಿಷಯ ಸೂಚಿಯಲ್ಲಿ ಹಲವಾರು ಲೇಖನಗಳನ್ನು ಹಿಂದೆ ನಡೆದು ಬಂದಂತಹ ಪರಂಪರೆಗಳನ್ನು ಒಳಗೊಂಡ ಮತ್ತು ಇಂದಿನ ಹೊಸ ಹೊಸ ಚಿಂತನೆಗೆ ಪೂರಕವಾಗಿ ಅವುಗಳ ಬಗ್ಗೆ ವಿವೇಚಿಸುವುದರ ಜೊತೆಗೆ ಕಲೆಯ ಗುಣಧರ್ಮಗಳನ್ನು ಪರಿಣಾಮಗಳನ್ನು ಹಲವು ನಿಟ್ಟಿನಲ್ಲಿ ಸರಳ, ಸುಂದರ, ಸ್ಫುಟವಾದ ವಿಚಾರಗಳನ್ನು ಮಂಡಿಸುವ ಪಾಟೀಲರು ಸರಳ ಶಬ್ದಗಳ ಮೂಲಕ ಓದುಗನ ಮನಸ್ಸಿನ ಮೇಲೆ ಪ್ರಭಾವ ಬೀರಿ ಮುಕ್ತವಾಗಿ ಆಸ್ವಾದಿಸುವತ್ತ ಸಮರ್ಥ ಗದ್ಯ ಶೈಲಿಯೊಂದನ್ನು ರೂಪಿಸಿಕೊಂಡು ಕಲೆಯ ವಿಮರ್ಶೆಯನ್ನು ಉದಾಹರಣೆಗಳ ಸಹಿತ ವರ್ಣಿಸಿದ್ದಾರೆ. ಹಾಗೂ ಕಲಾಶಿಕ್ಷಣದ ಬಗೆಗೆ ಇಂದಿನ ಪರಿಸ್ಥಿತಿಯ ಪ್ರತಿಕ್ರಿಯೆ ಹೇಗಿದೆ ಎಂಬುದನ್ನು ಪ್ರತಿಯೊಬ್ಬ ವಿದ್ಯಾರ್ಥಿ ಓದಿ, ಮನನ ಮಾಡಿಕೊಳ್ಳುವಂತಹ ಈ ಚಿಂತನೆಗಳು ಇಲ್ಲಿವೆ.

ಈ ಪುಸ್ತಕದಲ್ಲಿ ಅವರು ಬಳಸಿದ ಭಾಷೆ ತುಂಬ ಸೊಗಸಾದಂತಹದು. ಕೆಲವು ಕಡೆ ಕಾವ್ಯಾತ್ಮಕವಾದ ಭಾಷೆ. ಅಂಥ ಭಾಷೆಯನ್ನು ಇಂಥ ಕಲೆಯ ಪುಸ್ತಕಗಳಲ್ಲಿ ಬಳಸುವುದು ಸುಲಭವಲ್ಲ. ಶಿವರಾಮ ಕಾರಂತರ "ಕಲೆಯ ದರ್ಶನ" ಅನ್ನುವ ಪುಸ್ತಕ; ಅದನ್ನು ಓದಿದರೆ ನಿಮಗೆ ಕಲೆಯ ಬಗ್ಗೆ ವಿಶೇಷವಾದ ಆಸಕ್ತಿ, ಅಭಿಮಾನ ಇಲ್ಲದೆ ಇದ್ದರೆ ಆ ಪುಸ್ತಕವನ್ನು ಓದಿ ಮುಗಿಸುತ್ತೀರಿ ಅನ್ನುವಂಥ ಭರವಸೆ ಇಲ್ಲ. ಯಾಕೆಂದರೆ, ಆ ಭಾಷೆ ಅಷ್ಟು ತೊಡಕಿನದು. ಕಾರಂತರು ನಮ್ಮ ಶ್ರೇಷ್ಠ ಕಾದಂಬರಿಕಾರರು ನಿಜ, ಆದರೆ ಇಂಥ ವಿಷಯಗಳನ್ನು ಕುರಿತು ಬರೆಯುವಾಗ ಅಲ್ಲಿ ಇರುವಂಥ ತೊಡಕು ಯಾವ ಬಗೆಯದು ಎಂದರೆ ಆ ಭಾಷೆ ನೇರವಾಗಿ ನಿಮ್ಮನ್ನು ಮುಟ್ಟದೇ ಹೋಗುವಂಥದ್ದು, ಆದ್ದರಿಂದ, ಶಂಕರ ಪಾಟೀಲರು ಈ ಪುಸ್ತಕದಲ್ಲಿ ಅವರು ಏನನ್ನು ಹೇಳುತ್ತಾರೆ ಅದು ಬಹಳ ನೇರವಾಗಿ ನಿಮ್ಮ ಹೃದಯವನ್ನು ಮುಟ್ಟುವಂಥ ಭಾಷೆ. ಆ ತರದ ಭಾಷೆಯನ್ನು ಉಪಯೋಗಿಸಿವದು ಎಲ್ಲರಿಗೂ ಸಾಧ್ಯ ಆಗೋದಿಲ್ಲ ಎಂಬ ಹಾ.ಮಾ.ನಾಯಕರ ಮಾತುಗಳು ಅರ್ಥಪೂರ್ಣವಾಗಿವೆ.

ಬಹುಮುಖಿ ಪ್ರತಿಭೆ ಉಳ್ಳಂಥ, ಚಿಂತನಶೀಲರಾದಂಥ ಹಾಗೂ ಬರಹದಲ್ಲಿ ಓಘ ಉಳ್ಳಂಥ ಶಂಕರ ಪಾಟೀಲರು ಈ ಹೊಸ ಚಿಂತನೆಯನ್ನು ಹುಟ್ಟುಹಾಕಿದ್ದಾರೆ. ಕರ್ನಾಟಕದ ಚಿತ್ರಕಲಾ ಪರಿಸರದಲ್ಲಿ ಎಂದಿಗಿಂತ ಇಂದು ಬೇಕಾಗಿರುವ ಇಂಥ ಚಿಂತನೆಯ ಅವಶ್ಯಕತೆಯನ್ನು ಇವರು

ಪೂರೈಸಿದ್ದಾರೆ. ಭಾಷೆ ಹಾಗೂ ಯೋಚನೆಯ ದೃಷ್ಟಿಯಿಂದ ಇದೊಂದು ಎತ್ತರದ ಹಾಗೂ ಉಚ್ಚಮಟ್ಟದ ಕೃತಿಯಾಗಿದೆ. ಕಲಾವಿದನಿಗೆ ಓದು ಕಡಿಮೆ. ಅವನು ಕೇವಲ ಚಿತ್ರ ಬರೆಯುವುದರಲ್ಲೇ ನಿರತನಾಗಿದ್ದಾನೆ. ಆದರೆ ಓದು ಬೆಳೆಸಿಕೊಂಡು ತನ್ನ ಅನುಭವವನ್ನು ಸಮೃದ್ಧಗೊಳಿಸಿಕೊಳ್ಳಲು ಅವನು ಇವತ್ತು ಪ್ರಯತ್ನಿಸಬೇಕಾಗಿದೆ.

ಇಲ್ಲಿ ಪಾಂಡಿತ್ಯದ ಪ್ರದರ್ಶನವಾಗಲಿ ವಿದ್ವತ್‌ಪೂರ್ಣವಾದ ಶಬ್ದಗಳ ಪ್ರದರ್ಶನವಾಗಲಿ ಎಲ್ಲೂ ಇಲ್ಲ. ಎದುರಿಗೆ ನಾಲ್ಕು ಜನ ಗೆಳೆಯರ ಜೊತೆಯಲ್ಲಿ ಕುಳಿತುಕೊಂಡು ಆತ್ಮೀಯವಾಗಿ ಕಲೆಯನ್ನು ಕುರಿತು ಮಾತನಾಡುತ್ತಾ ಇದ್ದರೆ, ಆತ್ಮೀಯತೆ, ಸರಳತೆ ಹೇಗೆ ಮಾತುಗಳಲ್ಲಿ ಬರುತ್ತದೆಯೋ, ಇಲ್ಲಿಯ ಭಾಷೆಯ ರೀತಿ ಹಾಗಿರುವುದನ್ನು ಗಮನಿಸಬಹುದು. ಅದು ನನಗೆ ಬಹಳ ಸಂತೋಷವನ್ನು, ಖುಷಿಯನ್ನು ಕೊಟ್ಟಿದೆ. ಇಲ್ಲಿ ಅವರು ಬಳಸಿದ ಭಾಷೆಯ ಹದವನ್ನು ಗಮನಿಸಿದರೆ ಎಷ್ಟೋ ವೇಳೆ ಅವರು ಸರಳವಾಗಿ ವಿವರಿಸುತ್ತಾ ಹೋಗುತ್ತಾ ಹೋಗುತ್ತಾ ಭಾಷೆ ಸೂತ್ರವಾಗಿ ಬಿಡುತ್ತೇನೋ ಎಂದು ಅನಿಸಿಬಿಡುತ್ತದೆ. ಹೇಳಬೇಕಾದ ಮಾತನ್ನು ಎಷ್ಟು ಕಡಿಮೆ ಶಬ್ದಗಳಲ್ಲಿ, ಬಹುಶಃ ಕಿವಿಯಲ್ಲಿ ಮತ್ತೆ ಮತ್ತೆ ಗುಂಯಿಗುಟ್ಟುವ ಸೂತ್ರದ ರೀತಿಯಲ್ಲಿ ಇಲ್ಲಿಯ ಈ ಕಲೆಯ ಭಾಷೆ ರೂಪಗೊಂಡಿದೆ ಎನ್ನುತ್ತಾರೆ ಆರ್.ಎಂ. ಹಡಪದ ಅವರು.

ಜೀವನದ ಸಾಮರಸ್ಯದಿಂದ ಹೊರಹೊಮ್ಮುವ ರೂಪ ಕಲೆ ಎನ್ನುವ ಮಾತು; ಜೀವನದ ಅನುಭವಗಳ ಸಮೃದ್ಧವಾದಂಥ ಸಾರ ಕಲೆಯ ಹುಟ್ಟಿಗೆ ಕಾರಣ ಎನ್ನುವ ಮಾತು; ಹಾಗೂ ಚಿತ್ರದಲ್ಲಿ ಭಾವವೇ ಬಹಳ ಮುಖ್ಯವಾದದ್ದು; ಚಿತ್ರವನ್ನು ನೋಡಿದಾಗ ಭಾವ ಪ್ರಚೋದನೆ ಉಂಟಾಗಬೇಕು ಎಂಬ ಪರಿಕಲ್ಪನೆಗಳು ಈ ಗ್ರಂಥದಲ್ಲಿ ಸುಂದರವಾಗಿ ಮೂಡಿಬಂದಿವೆ. ಬೇಂದ್ರೆಯವರ ಕಾವ್ಯ ಹಾಗೂ ವಚನಗಳಲ್ಲಿ ಮೂಡಿಬಂದ ಭಾವ ಕೂಡ ಇದೇ ರೀತಿಯದು.

ಚಿತ್ರಕ ಶಕ್ತಿ, ಪ್ರತಿಮಾ ವಿಧಾನ ಹಾಗೂ ರೂಪಕ ದೃಷ್ಟಿ ಇದು ಕಾವ್ಯಕ್ಕೂ ಚಿತ್ರಕಲೆಗೆ ಪರಸ್ಪರ ಪೂರಕವಾಗತಕ್ಕಂಥ ಪ್ರೇರಕವಾಗತಕ್ಕಂಥ ನಂಟು ಹೊಂದಿದೆ. ಉಳಿದ ಸಾಹಿತ್ಯ ಪ್ರಕಾರಗಳಲ್ಲಿ ಇರದಷ್ಟು ಕಾವ್ಯ ಹಾಗೂ ಚಿತ್ರಕ್ಕೆ ಬೇರ್ಪಡಿಸಲಾಗದ ಸಂಬಂಧ ಇದೆ. ನಿಜವಾದ ಕಲಾವಿದನಿಗೆ ಧ್ಯಾನ ನೇತ್ರ ಎನ್ನುವಂಥದ್ದು ಇರುತ್ತದೆ. ಅದರಿಂದ ಚಿತ್ರವನ್ನು ಚಿತ್ರಿಸಿದಾಗ, ಲೌಕಿಕವಾದ ಪ್ರಯೋಜಕವಾದ ದೃಷ್ಟಿಯಿಂದ ನೋಡದೆ ನಿಸ್ಸಂಗ ಪರಿಭಾವನೆಯಿಂದ ಅವಲೋಕಿಸಿದಾಗ ವಸ್ತುಗಳಲ್ಲಿ ಚೆಲುವನ್ನು ಕಾಣಲು ಸಾಧ್ಯ. ತಾದಾತ್ಮ್ಯ ಹಾಗೂ ತನ್ಮಯತೆಯ ದೃಷ್ಟಿಯಿಂದ ನೋಡಿದಾಗ

ಮಾತ್ರ ನಿಜವಾದ ಸೌಂದರ್ಯ ವ್ಯಕ್ತವಾಗುತ್ತದೆ. ಇಲ್ಲಿ ಇಂಥ ಅನೇಕ ಮಾತುಗಳು ಬರುತ್ತವೆ. ಇಂಥ ಅನೇಕ ವಿಚಾರಗಳು ಇಲ್ಲಿ ಸಾಂದ್ರವಾಗಿ ಬಂದಿರುವುದು ಈ ಗ್ರಂಥದ ಗುಣ ಎಂದು ಚನ್ನವೀರ ಕಣವಿಯವರು ಅಭಿಪ್ರಾಯಪಟ್ಟಿರುವುದು ವಾಸ್ತವವಾಗಿದೆ.

ಸಾಹಿತ್ಯವನ್ನು ಕುರಿತು ಬಹಳ ದೀರ್ಘವಾಗಿ ಮಾತಾಡಬಲ್ಲಂಥ ಸಾಕಷ್ಟು ಜನ ಇದ್ದರೂ ಸಹ ಚಿತ್ರಕಲೆಯನ್ನು ಕುರಿತು ಮಾತಾಡುವಂಥ ಕಡಿಮೆ ಜನ ಇರುವಂಥ ಈ ಸಂದರ್ಭದಲ್ಲಿ ಶಂಕರ ಪಾಟೀಲರು ತಮ್ಮ ಈ ದೀರ್ಘ ಅವಧಿಯಲ್ಲಿ ದಾವಣಗೆರೆಯ ಕಲಾ ಕಾಲೇಜಿನಲ್ಲಿ ಸುಮಾರು ಇಪ್ಪತ್ತೈದು ವರ್ಷಕ್ಕಿಂತ ಹೆಚ್ಚು ಕಾಲ ಅಧ್ಯಾಪಕರಾಗಿ, ನಮ್ಮ ನಾಡಿನಲ್ಲಿ, ದೇಶದಲ್ಲಿ ಹಾಗೂ ವಿದೇಶಗಳಲ್ಲಿ ತಮ್ಮ ಚಿತ್ರಕಲೆಗಳ ಪ್ರದರ್ಶನಗಳನ್ನು ಏರ್ಪಡಿಸಿ ಚಿತ್ರಕಲಾವಿದರನ್ನು ಭೇಟಿ ಮಾಡಿ ಸಂಪರ್ಕವನ್ನು ಪಡೆದುಕೊಂಡು ಅವರ ಸಂಗಡ ಈ ಚಿತ್ರಕಲೆಯ ಮೀಮಾಂಸೆಯನ್ನು ಕುರಿತು ಚರ್ಚೆ ಮಾಡಿದ ಸಂದರ್ಭಗುಣ, ತಾವು ಓದಿದ್ದನ್ನು ಹಾಗೂ ತಮ್ಮ ಎಲ್ಲ ಅನುಭವಗಳನ್ನು ಒಂದು ಕಡೆಗೆ ದಾಖಲಿಸುತ್ತ ಹೋಗಿದ್ದಾರೆ. ಈ ದಾಖಲೆ ಒಂದು ಅಪೂರ್ವವಾದದ್ದು ಅಂತ ನಾನು ಅಂದುಕೊಂಡಿದ್ದೇನೆ. ಚಿತ್ರಕಲೆಯನ್ನು ಕುರಿತ ಹಾಗೂ ಅದರ ಹುಟ್ಟನ್ನು ಬೆಳವಣಿಗೆಯನ್ನು ವರ್ಣ ಸಂಯೋಜನೆಯನ್ನು ಅದು ಹೊರ ಹೊಮ್ಮುವಂಥ ಅನುಭವದ ಸಂಕೀರ್ಣತೆಗಳನ್ನು ಕುರಿತು ಅದನ್ನು ಸಂಪೂರ್ಣವಾಗಿ ವರ್ಗೀಕರಿಸುಕೊಳ್ಳುತ್ತ ಬರೆದಿರುವಂಥ ಈ "ಚಿತ್ರಕಲಾ ಚಿಂತನೆ" ಒಂದು ಉತ್ತಮ ಕೃತಿ ಎನ್ನುತ್ತಾರೆ ಡಾ. ಎಂ.ಜಿ. ಈಶ್ವರಪ್ಪ.

ಸ್ವತಃ ಕಲಾವಿದರೇ ಕಲಾವಿದ ಮತ್ತು ಕಲಾಕೃತಿಯ ವಿಚಾರವನ್ನು ವಿಶ್ಲೇಷಿಸಿದ್ದಾರೆ. ಚಿತ್ರಕಲೆಯ ಕುರಿತು ಬಹುಪಾಲು ನಿಖರವಾಗಿ ವಿವರಿಸಲು ಸೃಜನಶೀಲ ಕೃತಿಯಿದು. ಕಲಾ ಸೌಂದರ್ಯಾನು ಭವಗಳನ್ನು, ಶಾಸ್ತ್ರೀಯ ಶಿಷ್ಟಾಚಾರಗಳನ್ನು ಪಾಶ್ಚಾತ್ಯ ಮತ್ತು ಪೌರಸ್ತ ಎರಡೂ ನಿಲುವಿನಿಂದ ಸವಿಯಲು ಇಲ್ಲಿ ಪ್ರಯತ್ನಿಸಲಾಗಿದೆ. ಫಲಿತಾಂಶ - ಉದಯೋನ್ಮುಖ ಕಲಾವಿದರಿಗೆ ಮುಖ್ಯ ಆಕರವಾಗುತ್ತದೆ. ಚಿತ್ರಕಲಾ ಪರಂಪರೆ, ಸೌಂದರ್ಯಶಾಸ್ತ್ರ, ತತ್ವ, ಆದರ್ಶ, ಧರ್ಮ ಹಾಗೂ ಕಲೆ, ಮನೋವಿಜ್ಞಾನ ಮತ್ತು ಕಲೆ, ವಿವಿಧ ಶಿಸ್ತುಗಳ ಅನ್ಯೋನ್ಯತೆ, ಕಲೆ - ಕಲಾವಿದ ಶೈಲಿ, ವ್ಯಕ್ತಿಚಿತ್ರ, ವಿಚಾರ–ವಿವರ - ವಿಶ್ಲೇಷಣೆ, ರೇಖೆ – ಬಣ್ಣ - ವಿನ್ಯಾಸ, ನವ್ಯಕಲೆ –ಸಮಕಾಲೀನ ಕಲೆ, ಕಲಾವಿಧಾನ, ಕಲಾ ಶಿಕ್ಷಣ ಇಲ್ಲಿರುವ ಅಧ್ಯಾಯಗಳು "ಪಾಟೀಲರು ಚಿತ್ರಕಲೆಯಂತೆಯೇ ತಮ್ಮ ಬರಹವನ್ನೂ ಈ ಕೃತಿಯುದ್ದಕ್ಕೂ ಘನೀಕರಿಸಿಕೊಂಡೇ ಬಂದಿದ್ದಾರೆ. – **ತರಂಗ ವಾರಪತ್ರಿಕೆ**

ಹನ್ನೆರಡು ಮುಖ್ಯ ವಿಭಾಗಗಳಲ್ಲಿ ಒಂದು ನೂರಾ ಎಂಭತ್ತೈದು ಚಿಂತನಾಂಶಗಳು ಇಲ್ಲಿ ಸಂಗ್ರಹವಾಗಿವೆ. ಚಿತ್ರಕಲೆಯ 'ಪರಂಪರೆ', ಭಾರತದ ಸಾಂಪ್ರದಾಯಿಕ ರಚನೆಗಳ ಹಿನ್ನೆಲೆಯನ್ನು ವಿವರಿಸುವ ಶೋಧನಾಂಶಗಳನ್ನು ಒಳಗೊಂಡಿದೆ. ಚಿತ್ರಕಲೆಯ ಸಾಹಿತ್ಯ, ಧರ್ಮಗಳೊಂದಿಗೆ ಏರ್ಪಡಿಸಿಕೊಂಡ ಸಂಬಂಧಗಳನ್ನು ಲೇಖಕರು ಪರಿಶೀಲಿಸಿದ್ದಾರೆ. ಯುರೋಪಿನ ಕಲಾ ರಸಿಕರು ತಮ್ಮ ಪರಂಪರೆಯ ಶ್ರೇಷ್ಠ, ಅವಶೇಷಗಳನ್ನು ವ್ಯವಸ್ಥಿತವಾಗಿ ರಕ್ಷಿಸಿಕೊಂಡು ಕಲೆಯ ಚರಿತ್ರೆಯ ಅಧ್ಯಯನಕ್ಕೆ ಮಾಡಿದ ಪ್ರಯತ್ನಗಳು ಭಾರತೀಯರಿಗೆ ಮಾದರಿಯಾಗಬೇಕಾಗಿದೆ. ಇಲ್ಲದಿದ್ದರೆ, ನಮ್ಮ ಇತಿಹಾಸ, ನಮ್ಮ ಅಲಕ್ಷ್ಯದಿಂದ ನಮ್ಮಿಂದ ಕಳಚಿಕೊಳ್ಳವುದಲ್ಲದೇ, ಭವಿಷ್ಯದ ಚಿತ್ರಕಾರರ ಮೇಲೆ ಭಾರೀ ದುಷ್ಪರಿಣಾಮ ಉಂಟು ಮಾಡುವುದು. ಶಂಕರ ಪಾಟೀಲರು ಈ ಲೇಖನಗಳ ಮೂಲಕ, ಇತಿಹಾಸದ ಮಹತ್ವವನ್ನು ಕಳಕಳಿಯಿಂದ ನೆನಪು ಮಾಡಿದ್ದಾರೆ ಎಂಬ ಅಭಿಪ್ರಾಯವನ್ನು ಡಾ. ಶ್ಯಾಮಸುಂದರ ಬಿದರಕುಂದಿ ಅವರು ಅಭಿಪ್ರಾಯಪಟ್ಟಿದ್ದಾರೆ.

೨. ಚಿತ್ರಾಂತರಂಗ

೧೯೯೮ ರಲ್ಲಿ ಪ್ರಕಟಿಸಿದ 'ಚಿತ್ರಾಂತರಂಗ' ಶೀರ್ಷಿಕೆಯ ಈ ಗ್ರಂಥದಲ್ಲಿ ಚಿತ್ರಕಕಲೆಯ ಕುರಿತು ಸುಮಾರು ೧೨ ವಿಷಯಗಳನ್ನೊಳಗೊಂಡಿದ್ದು, ಸುಮಾರು ೨೦೦ಕ್ಕೂ ಹೆಚ್ಚು ಕಲೆಯ ಕುರಿತಾದ ಲೇಖನಗಳನ್ನೊಳಗೊಂಡಿದೆ. ಒಟ್ಟಾರೆಯಾಗಿ ಪಾಟೀಲರ ರಚನೆಯ ಈ ಗಂಥದಲ್ಲಿನ ಲೇಖನಗಳ ಸ್ಥೂಲ ಪರಿಚಯ ಮಾಡಲಾಗಿದೆ. ಅವರು ಪ್ರಕಟಿತ ಹಲವು ವಿವಿಧ ವಿಷಯಗಳನ್ನಾಧರಿಸಿದ ಲೇಖನಗಳನ್ನು ಅಧ್ಯಯನದ ಅನೂಕೂಲಕ್ಕಾಗಿ ಚಿತ್ರಕಲೆ, ಕಲಾವಿಮರ್ಶೆ, ಸೌಂದರ್ಯ ವಿಮಾಂಶೆ, ಹೀಗೆ ವರ್ಗಿಕರಿಸಿ ಅವುಗಳನ್ನು ಈ ಕೆಳಗೆ ಅವಲೋಕನಕ್ಕೆ ಒಳಪಡಿಸಲಾಗಿದೆ.

ಪ್ರಸ್ತುತ ಈ ಗಂಥದಲ್ಲಿ ಪಾಟೀಲರು ಕಲೆಯಲ್ಲಿ ಸುಂದರತೆ ಕುರಿತು ಸೌಂದರ್ಯ ಶಾಸ್ತ್ರದ ಹಿನ್ನೇಲೆಯಲ್ಲಿ ಲೇಖನಗಳನ್ನು ಬರೆದಿದ್ದಾರೆ. ಸೃಷ್ಟಿಯವಸ್ತುಗಳಲ್ಲಿ ಸೌಂದರ್ಯವನ್ನು ಕಂಡು ಕಲಾವಿದ ಮರುಸೃಷ್ಟಿಮಾಡಬಲ್ಲ ಗುಣವಿಶೇಷಗಳನ್ನು ಅರಿತು ಗುರುತಿಸಿ ಸೌಂದರ್ಯಪ್ರಜ್ಞೆ ಮಾನವನಿಗೆ ಸಹಜವಾಗಿ ನೈತಿಕ ಪ್ರಜ್ಞೆಯನ್ನು ನೀಡಬಲ್ಲ ಗುಣಗಳನ್ನು, ಜನಸಾಮಾನ್ಯರಿಗೆ ಸೌಂದರ್ಯಪ್ರಜ್ಞೆ ಮೂಡಿಸುವ ಕಾರ್ಯತಂತ್ರ ಅವುಗಳ ಅರಿವು ನೀಡುವುದರ ಮೂಲಕ ಸೌಂದರ್ಯ ಶಾಸ್ತ್ರದ ಅಭ್ಯಾಸ ಅವುಗಳ ಅನುಭವದ ಹಿನ್ನೆಲೆ ಕಲಾವಿದನಿಗೆ ಪ್ರೇರಣೆ ನೀಡಬಲ್ಲ ಕೆಲವು ಅಂಶಗಳನ್ನು, ಹೋಲಿಸಿ ವಿಶಾಲವಾದ ಅರ್ಥವನ್ನು ಕಂಡುಕೊಂಡು ಕಲೆ ಮತ್ತು ಸೌಂದರ್ಯ ವಿಮರ್ಶೆಯ

ಸ್ಥೂಲ ನೋಟವನ್ನು ಹಾಗೂ ಸೃಷ್ಟಿಯ ಪ್ರೇರಣೆ ಪಾತ್ರಗಳ ಕುರಿತು ಈ ವಿಷಯ ಸೂಚಿಯಲ್ಲಿ ಪ್ರಸ್ತಾಪಿಸಿದ್ದಾರೆ.

ಕಲಾವಿಮರ್ಶೆಯ ವಿಷಯ ಸೂಚಿಯಲ್ಲಿ ಕಲಾವಿದನು ಚಿತ್ರರಚಿಸುವಲ್ಲಿ ಅಸ್ವಾದಿಸುವ ಅಂತರಿಕ ಅನಂದ ಜನಸಾಮಾನ್ಯರಲ್ಲಿಯ ಅನುಭವಗಳು ಕಲಾವಿದನ ಅನುಭವಗಳಿಗೆ ಹತ್ತಿರವಾಗಿ ಕಲೆಯನ್ನು ಆಸ್ವಾದಿಸುವ ಸಹಜಗುಣಗಳನ್ನು ಹಾಗೂ ಸತ್ಯದಿಂದ ದೂರ ಉಳಿದ ಕಲೆಯ ಕೆಲವು ವ್ಯಾಖ್ಯೆಗಳನ್ನು ವಿಮರ್ಶಿಸಿದ್ದಾರೆ.

ಪಾಟೀಲರು ತಾವು ಓದಿ ಅನುಭವಿಸಿ ತಮ್ಮದೇ ಆದಂತಹ ವಿಚಾರಗಳನ್ನು ಈ ಗ್ರಂಥದಲ್ಲಿ ಕ್ರೋಡಿರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಈ ಗ್ರಂಥದಲ್ಲಿ ಹಲವಾರು ಸಂಶಯಗಳು ವಿಷಯಗಳು ಇದ್ದರೂ ಓದುಗರಲ್ಲಿ ಇಂತಹ ಹಲವಾರು ವಿಚಾರಗಳನ್ನು ಒಪ್ಪಿಕೊಂಡು, ಇನ್ನೊಂದೆಡೆ ಒಪ್ಪಿಕೊಳ್ಳದೆ ಇರುವುದು, ಸಂಕಷ್ಟದ ಸ್ಥಿತಿಯತ್ತ ಸಾಗುತ್ತಿರುವ ಕಲಾಪರಂಪರೆ, ಕಲೆ ಯಾವರೀತಿಯಲ್ಲಿ ಬೆಳೆಯಬೇಕು ಎನ್ನುವ ವಿಚಾರವನ್ನು ಸ್ಪಷ್ಟವಾಗಿ ಹೇಳುವಲ್ಲಿ ಉದಾಹರಣೆಗಳ ಮೂಲಕ ತುಲನಾತ್ಮಕವಾಗಿ ವಿವೇಚಿಸಿ ಓದುಗರಿಗೆ ವಿಶೇಷವಾಗಿ ವಿದ್ಯಾರ್ಥಿಗಳಿಗೆ ಕ್ಲಿಷ್ಟವಾಗದೆ ಸರಾಗವಾಗಿ ಮನಮುಟ್ಟುವಂತೆ ತಮ್ಮ ವಿಚಾರ ವಿವರಗಳನ್ನು ವಿವರಿಸಿದ್ದಾರೆ. ಈ ರೀತಿಯಲ್ಲಿ ಚಿತ್ರಾಂತರಂಗ ಪುಸ್ತಕದಲ್ಲಿ ಪಾಟೀಲರು ಚಿತ್ರಕಲೆಯ ಕುರಿತು ಬಹುಪಾಲು ನಿಖರವಾದ ವಿವರಣೆಯನ್ನು ನೀಡುವ ಸೃಜನಶೀಲ ಕೃತಿ ಇದಾಗಿದೆ.

೩. ದಿ ಲಿವ್ಹಿಂಗ್ ಲೈನ್ಸ್

ರೇಖಾ ಚಿತ್ರಗಳ ಸಂಕಲನ ಇದಾಗಿದ್ದು, ೧೯೯೬ ರಲ್ಲಿ ಇದನ್ನು ಶಂಕರ ಪಾಟೀಲರು ತಮ್ಮ ಪ್ರಕಾಶನದ ಮೂಲಕ ಹೊರತಂದಿದ್ದಾರೆ. ಇಲ್ಲಿ ಪಾಟೀಲರ ರೇಖಾಚಿತ್ರಗಳಿಗೆ ದೇಶದ ವಿವಿಧ ಭಾಗಗಳಲ್ಲಿರುವ ಪ್ರಸಿದ್ಧ ಕಲಾವಿಮರ್ಶಕರು, ಕಲಾವಿದರು, ಸಾಹಿತಿಗಳು ತಮ್ಮದೇ ಆದ ವಿಚಾರಗಳನ್ನು ವೈವಿಧ್ಯಮಯವಾಗಿ ವಿಶ್ಲೇಷಿಸಿದ್ದಾರೆ. ಶಂಕರ ಪಾಟೀಲರ ರೇಖಾ ಚಿತ್ರಗಳಿಗೆ ರಾಷ್ಟ್ರ ಮಟ್ಟದಲ್ಲಿ ಈ ರೀತಿಯ ವಿಮರ್ಶೆ ಮಾಡಿರುವುದು ಬಹುಶಃ ಕರ್ನಾಟಕದ ಮೊದಲ ಕಲಾವಿದರೆನ್ನಬಹುದು. ಡಾ. ಕೆ.ಕೆ. ಹೆಬ್ಬಾರರ 'ಸಿಂಗಿಂಗ್ ಲೈನ್ಸ್' ಕೃತಿಯ ಪ್ರಭಾವದಿಂದ ಶಂಕರ ಪಾಟೀಲರು 'ಲಿವಿಂಗ್ ಲೈನ್ಸ್' ಈ ಕೃತಿಯನ್ನು ಹೊರತಂದಿದ್ದಾರೆ. ಕೆ.ಕೆ.ಹೆಬ್ಬಾರರ ಕೃತಿಯನ್ನು ಕೇಂದ್ರ ಲಲಿತಕಲಾ ಅಕಾಡೆಮಿ, ನ್ಯೂ ದೆಹಲಿ ಪ್ರಕಟಿಸಿದ್ದರೂ, ಅವರ ಕೃತಿಯಲ್ಲಿಯ ರೇಖಾಚಿತ್ರಗಳಿಗೆ ವಿಮರ್ಶಕರು

ಇಡಿಯಾಗಿ ವಿಶ್ಲೇಷಣೆ ಮಾಡಿದ್ದಾರೆ. ಆದರೆ ಶಂಕರ ಪಾಟೀಲರ ಹದಿನೆಂಟು ರೇಖಾಚಿತ್ರಗಳಿಗೆ ಹದಿನೆಂಟು ಜನರು ಅಂದರೆ ಬಾಂಬೆಯ ಸಾಯಿ ಪರಾಂಜಪೆ, ಯಶವಂತ ಚಿತ್ತಾಲ, ವಿಜಯ ಬಿ. ಚಂದ್ರಾ, ಬಿಮಲದತ್ತ, ಧ್ಯಾನೇಶ್ವರ ನಾಡಕರ್ಣಿ, ವ್ಯಾಸರಾಯ ಬಲ್ಲಾಳ, ಮುಲ್ಕರಾಜ ಆನಂದ, ಕರ್ನಾಟಕದ ಡಾ. ಶಿವರಾಮ ಕಾರಂತ, ಡಾ. ಜಿ.ಎಸ್. ಶಿವರುದ್ರಪ್ಪ. ಎ.ಎಂ. ಶೋಲಾಪುರಕರ, ಚನ್ನವೀರ ಕಣವಿ, ಸಿ. ರಾಜಗೋಪಾಲ, ಬಿ.ಎಸ್. ಸುಂದರಂ, ಶಂಕರ ಮೊಕಾಶಿ ಪುಣೇಕರ, ಪಿ. ಲಂಕೇಶ್, ಕೆ. ರಾಘವೇಂದ್ರರಾವ್, ಎಸ್.ಕೆ.ರಾಮಚಂದ್ರರಾವ್ ಎಚ್.ಎಂ. ಮರುಳಸಿದ್ದಯ್ಯ, ಸಿಕಂದರಾಬಾದ್‌ನ ಎ.ಎಂ. ಹುಸೇನ್, ಚೆನ್ನೈನ ಆರ್. ಕೃಷ್ಣರಾವ್, ಒಂದೊಂದು ಚಿತ್ರಕ್ಕೆ ಒಬ್ಬೊಬ್ಬರು ವಿಮರ್ಶೆ ಮಾಡಿ, ಆ ರೇಖಾ ಚಿತ್ರಗಳ ನೆಲೆ-ಬೆಲೆಗಳನ್ನು ರೇಖೆಗಳ ಹಿಂದಿರುವ ಕಲಾವಿದರ ಆಶಯಗಳನ್ನು ಚಿತ್ರಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿರುವುದು ಗಮನಾರ್ಹ ಅಂಶವಾಗಿದೆ.

೪. ಹಿಮಾಲಯದ ಹಿನ್ನೆಲೆಯಲ್ಲಿ

ಈ ಗ್ರಂಥವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೭ ರಲ್ಲಿ ಪ್ರಕಟಿಸಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರತಿವರ್ಷ ಐದು ಜನರಿಗೆ ಪ್ರವಾಸ ಅನುದಾನವನ್ನು ನೀಡಿ ಅವರುಗಳಿಂದ ಬೇರೆ ಬೇರೆ ರಾಜ್ಯಗಳ ಅಥವಾ ಪ್ರಾಂತಗಳ ಸಾಹಿತ್ಯ, ಸಂಸ್ಕೃತಿ, ಕಲೆ ಮುಂತಾದ ಅಂಶಗಳ ಕುರಿತಾದಂತಹ ಪ್ರವಾಸ ಕಥನವನ್ನು ಜನಸಾಮಾನ್ಯರಿಗೆ ಮುಟ್ಟುವ ರೀತಿಯಲ್ಲಿ ಗ್ರಂಥಗಳನ್ನು ಬರೆಯಿಸುವ ಕ್ರಮದ ಹಿನ್ನೆಲೆಯಲ್ಲಿ ಶಂಕರ ಪಾಟೀಲರಿಗೆ ಈ ಅನುದಾನ ಲಭ್ಯವಾಗಿದ್ದು, ಅವರು ಹಿಮಾಲಯದ ಪ್ರವಾಸವನ್ನು ಕೈಕೊಂಡು ಅಲ್ಲಿ ವೈವಿಧ್ಯಮಯವಾದ ಅಂಶಗಳನ್ನು ಕಲಾವಿದನಾಗಿ, ಕಲಾಸಾಹಿತಿಯಾಗಿ ಈ ಗ್ರಂಥದಲ್ಲಿ ವಿವರಿಸಿದ್ದಾರೆ. ಹಿಮಾಲಯದ ದುರ್ಭರ ಕಣಿವೆಗಳಲ್ಲಿ ಇರುವ ಊರುಗಳಲ್ಲಿ ಬಹುತೇಕ ಕಡೆ ಇಂದಿಗೂ ಕಿರುರೂಪ ಚಿತ್ರಗಳು ರಚನೆಯಾಗುತ್ತಿರುವದನ್ನು ಮತ್ತು ಸುಮಾರು ಇಪ್ಪತ್ತಕ್ಕೂ ಹೆಚ್ಚು ಈ ರೀತಿಯ ಚಿತ್ರರಚನೆಯ ಕಲಾಕೇಂದ್ರಗಳು ಇರುವದನ್ನು ಗುರುತಿಸಿದ್ದಾರೆ. ಕಾಂಗರಾ, ಛಂಬಾ ಹಾಗೂ ಬಾಕೋಳಿ ಶೈಲಿಯ ಕಲಾಕೃತಿಗಳು ಜನಪ್ರಿಯವಾಗಿರುವ ಕುರಿತು ವಿವರಿಸಿದ್ದಾರೆ. ಇಲ್ಲಿ ಒಂದು ತಿಂಗಳ ಕಾಲ ಪ್ರವಾಸ ಕೈಕೊಂಡ ಪಾಟೀಲರು ಸುಂದರ ಪ್ರವಾಸಿ ಸ್ಥಳಗಳನ್ನು ಹಾಗೂ ಕಲಾಕೇಂದ್ರಗಳಾದ ಆರ್ಟ್‌ಗ್ಯಾಲರಿ ಹಾಗೂ ವಸ್ತುಸಂಗ್ರಹಾಲಯಗಳನ್ನು, ಶಿಲ್ಪಿಗಳನ್ನು, ಚಿತ್ರಕಾರರನ್ನು, ಸಂಗೀತ, ನಾಟಕಕಾರರನ್ನು, ಸಾಹಿತಿಗಳನ್ನು ಭೇಟಿ ಮಾಡಿ ಅನೇಕ ವಿಷಯಗಳನ್ನು ಸಂಗ್ರಹಿಸಿ ಅವುಗಳನ್ನು ಈ ಗ್ರಂಥದಲ್ಲಿ ವಿವೇಚಿಸಿದ್ದಾರೆ. ಹದಿನೇಳು ಉಪಶೀರ್ಷಿಕೆಗಳಲ್ಲಿ

ಕವಲೊಡೆದ ಈ ಅಧ್ಯಯನವು ಅಳಿಯದ ಆಕರ್ಷಣೆ ಹಿಮಾಲಯ, ಕೊಲ್ಲುವವನಿಗಿಂತ ಕಾಯುವವನೇ ದೊಡ್ಡವನು, ರಾಷ್ಟ್ರಪತಿ ನಿವಾಸ, ಸ್ವರ್ಗ ಸೌಂದರ್ಯ, ಸತ್ಯಂ ಶಿವಂ ಸುಂದರಂ, ಮಣ್ಣಿನ ವಾಸನೆ, ಸಮುದ್ರದ ಅಲೆಯಂತೆ ಕಲೆ, ಹೃದಯದರ್ಶಿ ಆಕಾಶಸ್ಪರ್ಶ, ನೆಲದಲ್ಲಿ ಹೂತು ಹೋದೆ, ಜೀವನ ಸ್ವೀಕೃತಿ, ಪುಣ್ಯಭೂಮಿ, ಜ್ವಾಲಾಮುಖಿ, ನಿರ್ವಾಣ, ಕಾಂಗರಾ ಕಿರು ಚಿತ್ರಗಳು, ಅಂದು ಭೂರಿ ಸಿಂಗ್ ಇಂದು ಓಹರಿ ಹಾಗೂ ದೇವ್, ಬುದ್ಧಿ-ಸಿದ್ಧಿ, ಭೇದ ಮರೆತು ಬೆರೆವ ಮನ ಈ ಮುಂತಾದ ತಲೆಬರಹಗಳ ಅಡಿಯಲ್ಲಿ ಹಿಮಾಚಲ ಪ್ರದೇಶದ ಪ್ರವಾಸಿ ಅನುಭವಗಳನ್ನು ಶಂಕರ ಪಾಟೀಲರು ಈ ಗ್ರಂಥದಲ್ಲಿ ಕಟ್ಟಿಕೊಟ್ಟಿದ್ದಾರೆ. ವಿಶೇಷವಾಗಿ ಚಿತ್ರಕಲಾವಿದರಾದ ಪಾಟೀಲರು ಚಿತ್ರಕಲೆಯ ವೈವಿಧ್ಯಮಯವಾದ ಜಾನಪದ ಮತ್ತು ಬುಡಕಟ್ಟು ಜನಸಮೂದಾಯದ ಚಿತ್ರಕಲೆಯನ್ನು ವಿಶೇಷವಾಗಿ ಚರ್ಚಿಸಿದ್ದಾರೆ. ಹಾಗೆಯೇ ಛಾಯಾಚಿತ್ರಕಾರರಾದ ಇವರು ಸಾವಿರಾರು ನಿಸರ್ಗ ರಮಣೀಯ ದೃಶ್ಯಗಳನ್ನು ಜನಸಾಮಾನ್ಯರ ವೈವಿಧ್ಯಮಯ ಬದುಕಿನ ವಿವಿಧ ಸನ್ನಿವೇಶಗಳನ್ನು ಹಾಗೂ ವಿಶಿಷ್ಟವಾದ ಹಬ್ಬ-ಹರಿದಿನ, ಉತ್ಸವದ ಛಾಯಾಚಿತ್ರಗಳು ಇವರು ಪ್ರವಾಸ ಮಾಡಿದ ಸ್ಥಳಗಳ ಐತಿಹಾಸಿಕ, ಧಾರ್ಮಿಕ, ಸಾಂಸ್ಕೃತಿಕ ಮುಂತಾದ ಕಲೆಗಳ ಅಧ್ಯಯನಕ್ಕೆ ಮಹತ್ವಪೂರ್ಣವಾದ ಆಕರ ಕೋಶವಾಗಿ ಈ ಪುಸ್ತಕ ರಚನೆಗೊಂಡಿದೆ. ಈ ಗ್ರಂಥದಲ್ಲಿ ವೈವಿಧ್ಯಮಯವಾದ ಛಾಯಾಚಿತ್ರಗಳನ್ನೂ ಹಾಕಿರುವುದು ಅಧ್ಯಯನಕಾರರಿಗೆ ಉಪಯುಕ್ತಕಾರಿಯಾಗಿದೆ.

ಆ. ಕಲಾ ಲೇಖನಗಳು

ಶಂಕರ ಪಾಟೀಲರು ಚಿತ್ರಕಲಾವಿದರಾಗಿ, ಛಾಯಾಚಿತ್ರಕಾರರಾಗಿ, ಸಂಗೀತಗಾರರಾಗಿ, ಕಲಾಗ್ರಂಥಕರ್ತೃರಾಗಿರುವುದರ ಜೊತೆಗೆ ನೂರಾರು ಲೇಖನಗಳನ್ನು ನಿರಂತರವಾಗಿ ಬೇರೆ ಬೇರೆ ದಿನಪತ್ರಿಕೆ, ವಾರಪತ್ರಿಕೆ, ಮಾಸಿಕ ಹಾಗೂ ವಾರ್ಷಿಕ ವಿಶೇಷ ಸ್ಮರಣಸಂಚಿಕೆಗಾಗಿ, ಅಭಿನಂದನಾ ಗ್ರಂಥಗಳಿಗಾಗಿ ಲೇಖನಗಳನ್ನು ಬರೆದಿದ್ದಾರೆ. ಅವರು ಬರೆದ ನೂರಕ್ಕೂ ಹೆಚ್ಚು ಲೇಖನಗಳು ಅವರು ಪ್ರಕಟಿಸಿರುವ ಎರಡು ಗ್ರಂಥಗಳಲ್ಲಿ ಹಲವು ಸಂಕಲನಗೊಂಡಿವೆ. ಇನ್ನೂ ಹಲವಾರು ಲೇಖನಗಳು ಅಪ್ರಕಟಿತವಾಗಿ ಅವರ ಸಂಗ್ರಹದಲ್ಲಿವೆ. ಅವುಗಳನ್ನು ಒಂದೆಡೆಗೆ ಸಂಗ್ರಹಿಸಿ ಪ್ರಕಟಮಾಡುವ ಅವಶ್ಯಕತೆಯಿದೆ. ಈ ಬಿಡಿ ಲೇಖನಗಳು, ಚಿತ್ರಕಲೆ, ಶಿಲ್ಪಕಲೆ, ಸಂಗೀತ, ನೃತ್ಯ, ನಾಟಕ, ಛಾಯಾಚಿತ್ರ, ವಾಸ್ತುಕಲೆ, ಕಲಾವಿಮರ್ಶೆ, ಸೌಂದರ್ಯಶಾಸ್ತ್ರ, ಜಾನಪದ ಚಿತ್ರಕಲೆ, ಕಲಾವಿದರ ಪರಿಚಯಗಳು, ಹಸ್ತಪ್ರತಿ ಚಿತ್ರಕಲೆ ಹೀಗೆ ಅವರ ಬರವಣಿಗೆಯ ವಿಷಯದ ವಸ್ತು ಕಲಾವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ

ಮಹತ್ವದ ಆಕರಗಳಾಗಿವೆ. ಇವುಗಳ ಕುರಿತಾಗಿ ವಿಶೇಷವಾಗಿ ಅಧ್ಯಯನ ಮಾಡುವ ಅವಶ್ಯಕತೆಯಿದೆ. ಇಲ್ಲಿ ಪ್ರಾಸಂಗಿಕವಾಗಿ ಪ್ರಸ್ತಾಪಿಸಲಾಗಿದೆ. ಇದು ಸಮಗ್ರವಾದ ಅಧ್ಯಯನವಲ್ಲ. ಪ್ರಸ್ತುತ ಅಧ್ಯಯನವು ಶಂಕರ ಪಾಟೀಲರ ರೇಖಾಚಿತ್ರ, ವರ್ಣಚಿತ್ರ, ಛಾಯಾಚಿತ್ರ ಮತ್ತು ಅವರ ಬದುಕನ್ನು ಕುರಿತು ಹೆಚ್ಚಿನ ಗಮನವನ್ನು ಹರಿಸಿ ಅಧ್ಯಯನ ಮಾಡಲಾಗಿದೆ.

ಸಾಹಿತ್ಯ ಗ್ರಂಥಗಳು

೧. ನಾ ಕವಿತಾ ಬರದಿಲ್ಲ

ಪಾಟೀಲರ ಮೊದಲ ಕವನ ಸಂಗ್ರಹ 'ನಾ ಕವಿತಾ ಬರೆದಿಲ್ಲ' ಎಂಬ ಕವನ ಸಂಕಲನವನ್ನು ೧೯೯೩ ರಲ್ಲಿ ತಮ್ಮ ಪ್ರಗತಿ ಪ್ರಕಾಶನ ದಾವಣಗೇರಿಯಲ್ಲಿ ಪ್ರಕಟಿಸಿದ್ದಾರೆ. ಪಾಟೀಲರು ಮೊದಲಿನಿಂದಲೂ ಕಾವ್ಯರಚನೆಯಲ್ಲಿ ಸಮಾನ ಆಸಕ್ತಿ ಬೆಳೆಸಿಕೊಂಡು ತಮ್ಮದೇ ಆದ ಕನಸು-ಕಲ್ಪನೆಗಳ ಅಭಿವ್ಯಕ್ತಿಗೆ ಕುಂಚದಂತೆಯೇ ಲೇಖನಿಯನ್ನು ಸಾಧನವನ್ನಾಗಿ ಈ ಕವನ ಸಂಕಲನದ ಕವಿತೆಗಳಲ್ಲಿ ಉಳಿಸಿಕೊಂಡಿದ್ದಾರೆ. ಪ್ರತಿಯೊಂದು ಕಾವ್ಯರಚನೆಯ ಸಂದರ್ಭದಲ್ಲಿ ಬಳಸಿದ ಶಬ್ದಗಳಿಂದ ಮೂಡಿಬಂದ ಪದಗಳು ಕೇವಲ ಪದಗಳಾಗಿರದೇ ಮಿಗಿಲಾಗಿ ಏನೋ ಒಂದು ಹೊಸ ಕಾವ್ಯರೂಪವನ್ನು, ಸಂಕೇತಗಳನ್ನು ಸಾಧನವನ್ನಾಗಿ ಬಳಸಿಕೊಂಡು ಹಲವಾರು ಕವಿತೆಗಳನ್ನು ರಚಿಸಿದ್ದಾರೆ.

೨. ಕಣ್ಮುಚ್ಚಿಕೊಂಡವರು (ಕವನ ಸಂಕಲನ)

ಪಾಟೀಲರ ಕವನ ಸಂಕಲನವು ಒಟ್ಟು ನಲವತ್ತಕ್ಕೂ ಹೆಚ್ಚು ಕವಿತೆಗಳನ್ನೊಳಗೊಂಡಿದೆ. ಪಾಟೀಲರು ಬಾಹ್ಯ ಸೌಂದರ್ಯವನ್ನು ಆಸ್ವಾದಿಸುವಲ್ಲಿ ತಮ್ಮದೇ ಆದ ಭಾವನಾತ್ಮಕ ಅನುಭವಗಳನ್ನು ಜನಸಾಮಾನ್ಯರು ದಿನನಿತ್ಯ ಕಾಣುವ ಸಿಹಿ-ಕಹಿ ಅನುಭವಗಳನ್ನು, ವಿವಿಧ ಧರ್ಮ, ಜನ, ವಿಭಾಗಗಳು ನರಳುವ ಕೆರಳುವ ಸ್ಥಿತಿಗತಿಗಳನ್ನು ಪೂರ್ವಗ್ರಹಿತ ದೃಷ್ಟಿಯಿಂದ ಗ್ರಹಿಸಿ ಅವರು ವ್ಯಂಗವಾಗಿ ವಿಡಂಬನಾತ್ಮಕ ಕವಿತೆಗಳನ್ನು ಇಲ್ಲಿ ಬರೆದಿದ್ದರೂ ಸಹ ಪ್ರತಿಯೊಂದು ಕವನಗಳ ಪದ್ಯಗಳಲ್ಲಿ ಪಾಟೀಲರು ಅಂತರಂಗದ ಭಾವಾಭಿವ್ಯಕ್ತಿಯನ್ನು ಹಲವಾರು ಕವಿತೆಗಳಲ್ಲಿ ವ್ಯಕ್ತಪಡಿಸುವುದರ ಮೂಲಕ ಕನ್ನಡ ಕಾವ್ಯ ಪರಂಪರೆಯಲ್ಲಿ ತಮ್ಮದೇ ಆದ ಛಾಪನ್ನು ಒತ್ತಿದ್ದಾರೆ ಎಂದರೆ ತಪ್ಪಾಗಲಾರದು.

"ಒಂದು ಕಾವ್ಯ ಅದರಲ್ಲಿಯ ಎಲ್ಲ ಶಬ್ದಗಳಿಂದ ಕೂಡಿ ಆದರೂ ಅದು ಶಬ್ದಗಳಿಗಿಂತ ಮಿಗಿಲಾಗಿ ಏನೋ ಒಂದನ್ನು ಹೊರಹೊಮ್ಮಿಸುತ್ತದೆ. ಅದೇ ರೀತಿ ಚಿತ್ರ ಕೂಡ ಅದರಲ್ಲಿರುವ

ವಸ್ತು ಹಾಗೂ ಬಣ್ಣಗಳಿಗಿಂತ ಹೆಚ್ಚಿನ ಯಾವುದೋ ಒಂದು ದಿವ್ಯ ಸ್ವರೂಪದ ಸಾಕ್ಷಾತ್ಕಾರ ಮಾಡಿಸಬಲ್ಲದು. ಎರಡು ಸಾಲುಗಳ ಮಧ್ಯ ಇರುವುದೇ ಜೀವ. ಲಯಬದ್ಧವಾಗಿ ಕ್ರಿಯೆಯಲ್ಲಿ ತೊಡಗುತ್ತದೆ" ಎಂಬ ಮಾತನ್ನು ಸ್ವತಃ ಶಂಕರ ಪಾಟೀಲರೇ ತಮ್ಮ ಗ್ರಂಥ 'ಚಿತ್ರಂತರಂಗ'ದಲ್ಲಿ ಹೇಳಿದ್ದಾರೆ.

ಹೀಗೆ ದೃಶ್ಯಕಲಾ ಕ್ಷೇತ್ರದಿಂದ ವಿವಿಧ ಪೂರಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡವರಲ್ಲಿ ಶ್ರೀಯುತ ಶಂಕರ ಪಾಟೀಲರು ಅಗ್ರಗಣ್ಯರು. 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎನ್ನುವ ಹಾಗೆ ಪಾಟೀಲ ದಂಪತಿಗಳಿಬ್ಬರೂ ಕಲೆ, ಸಾಹಿತ್ಯ, ಸಂಗೀತ ಒಲವುಳ್ಳವರು.

ಪಾಟೀಲರು ಈ ಕವನ ಸಂಗ್ರಹದಲ್ಲಿ ವಿರಹ–ಮಿಲನಗಳ ಮಧ್ಯೆ, ಕಾವ್ಯಸೃಷ್ಟಿಯ ಕಣಜ, ವಿಷಯವೇ ಜೀವಕೆ ಆಧಾರ, ಉಪವಾಸ, ಪ್ರೀತಿಯ ಮುಖ, ಬಿಚ್ಚಲಾಗದ ಗಂಟು, ಪ್ರೀತಿಯ ಹಾಕು, ಈಡೇರದ ಬಯಕೆ, ಬದುಕು ಮುಂತಾದ ಕವನಗಳು ಮಾನವೀಯ ತುಡಿತಗಳ ಮಾದರಿಗೆ ಸೇರಿದರೆ ಹೇಗಾಗಬಹುದು. ಪಂಚಾಮೃತ, ಖಡ್ಗದ ಮೇಲೆ ಶಾಂತಿಸಂದೇಶ, ಅಪ್ಪಟ ಭಾರತೀಯ, ಯಾರಿಗೆ ಯಾರು ಹೇಳಲು ಸಾಧ್ಯ, ದಿಲ್ಲಿಯ ಕವಿತೆ ಇತ್ಯಾದಿ ಕವನಗಳು ಸಾಮಾಜಿಕ ಮತ್ತು ರಾಜಕೀಯ ವಿಡಂಬನೆಯ ಎಳೆಗಳ ಮಾದರಿಯಲ್ಲಿ ರಚಿತವಾಗಿರುವುದನ್ನು ಪಾಟೀಲರ 'ಕಣ್ಮುಚ್ಚಿ ಕಂಡವರು' ಎಂಬ ಈ ಕವನ ಸಂಕಲನದಲ್ಲಿ ಕಾಣಬಹುದು.

ಪಾಟೀಲರ ಕಾವ್ಯ ಅವರ ಕುಂಚದ ಸೃಜನ ಕ್ರಿಯೆಗೆ ಒಳಗಾಗದೆ ಉಳಿದ ತಮ್ಮ ಅನಿಸಿಕೆ ಅನುಭವಗಳಿಗೂ ಕನಸು–ಕಲ್ಪನೆಗಳಿಗೂ, ಆಲೋಚನೆ–ಆತಂಕಗಳಿಗೂ ಶಬ್ದರೂಪ ಕೊಡುವ ಆಂತರಿಕ ಒತ್ತಾಸೆಯಿಂದ ಮೂಡಿಬಂದಿದೆ. ಅಂತೆಯೇ ಅವರ ಅಭಿವ್ಯಕ್ತಿಯ ಸಹಜತೆಯೇ ಅವರ ಕಾವ್ಯಾನುಭವದ ಪ್ರಮುಖ ಲಕ್ಷಣವೆನಿಸುವಂತಿದೆ.

೩. ಹೊಯ್ಸಳ ಪತ್ರಿಕೆ (ಸಂಪಾದನೆ)

೧೯೯೧ರಲ್ಲಿ ದಾವಣಗೆರೆಯ ವಿದ್ಯಾನಗರದಲ್ಲಿ ಸ್ವ ಸಂಪಾದಕತ್ವದಲ್ಲಿ ಹೊಯ್ಸಳ ಪತ್ರಿಕೆಯನ್ನು ಪ್ರಾರಂಭಿಸಿದ ಪಾಟೀಲರು ಈ ಹೊಯ್ಸಳ ವಾರ ಪತ್ರಿಕೆಯಲ್ಲಿ ಚಿತ್ರಕಲೆ, ಕಲೆಯ ಬೆಳವಣಿಗೆ, ಕಲಾ ಪರಂಪರೆ ಹಾಗೂ ಇನ್ನಿತರ ಲಲಿತಕಲೆಗಳ ಕುರಿತು ವಿಮರ್ಶಾತ್ಮಕ ಲೇಖನಗಳನ್ನು ರಾಜ್ಯದ ವಿವಿಧ ಪ್ರದೇಶಗಳಲ್ಲಿ ನಡೆಯುವ ಕಲಾ ಚಟುವಟಿಕೆಗಳ ಕುರಿತು ಕಲಾವಿದರಿಗೆ ಮತ್ತು ಕಲಾ

ವಿದ್ಯಾರ್ಥಿಗಳಿಗೆ ಹಾಗೂ ಕಲಾಸಕ್ತರಿಗೆ ಇವೆಲ್ಲ ವಿಷಯಗಳು ಯೋಗ್ಯವಾಗಿ ಮನಮುಟ್ಟುವಂತಹ ಕಾರ್ಯಚಟುವಟಿಕೆಯನ್ನು ಈ ಹೊಯ್ಸಳ ವಾರಪತ್ರಿಕೆ ಮೂಲಕ ಪ್ರಾರಂಭಿಸಿದರು.

ಪಾಟೀಲರ ಈ ವಾರ ಪತ್ರಿಕೆ ಸತತ ನಾಲ್ಕು ವರ್ಷಗಳ ಕಾಲ ಸುದೀರ್ಘ ಅವಧಿಯಲ್ಲಿ ಮುನ್ನಡೆಯುತ್ತ ಅನಂತರ ಕೆಲಸದ ಒತ್ತಡ ಮತ್ತು ಅನಿವಾರ್ಯ ಕಾರಣಾಂತರಗಳಿಂದ ಪತ್ರಿಕೆಯನ್ನು ನಿಲ್ಲಿಸುತ್ತಾರೆ. ಈ ಮೂಲಕ ಪತ್ರಕರ್ತರಾಗಿಯೂ ಪಾಟೀಲರು ಕಾರ್ಯನಿರ್ವಹಿಸಿದ್ದಾರೆ.

ಕಲಾವಿದ ಪಾಟೀಲರು ಶಿಸ್ತಿಗೆ ಹೆಸರಾದ ಕಲಾಶಿಕ್ಷಕರು. ಶಿಸ್ತನ್ನು ಅವರ ಬದುಕು – ಬರಹ ಮತ್ತು ಕಲಾಕೃತಿಗಳಲ್ಲಿ ನಾವು ಕಾಣಬಹುದು. ಅದು ಅವರ ವ್ಯಕ್ತಿತ್ವದ ಅಂತಃ ಸತ್ವ ಅವರ ಕಲಾ ಸಾಹಿತ್ಯದ ಒರೆಗಲ್ಲಿ. "ಬದುಕು ಬರಹದಷ್ಟೇ ಸರಳ. ನೇರ ಮತ್ತು ಪ್ರಾಮಾಣಿಕ ಬದುಕಿನ ಬದ್ಧತೆ ಮತ್ತು ಸ್ಪಷ್ಟತೆ"[೫] ಅವರ ಕಲಾ ಸಾಹಿತ್ಯದ ಪ್ರಮುಖ ವೈಶಿಷ್ಟ್ಯಗಳು, ಚಿತ್ರಕಲೆ ಮತ್ತು ಕಲಾ ಸಾಹಿತ್ಯಗಳೆರಡರ ಸೂತ್ರಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ಕಲಾ ಕ್ಷೇತ್ರೊ ಬೆಳವಣಿಗೆಯಲ್ಲಿ ಬಹುಮುಖ್ಯವಾದ ಕಾರ್ಯನಿರ್ವಹಣೆಯನ್ನು ಮಾಡಿದ್ದಾರೆ.

"ಯಾವುದೇ ಸಾಹಿತಿಯ ಸಾಹಿತ್ಯ, ವಿಮರ್ಶಕನ ವಿಮರ್ಶೆ, ಯಾವುದೇ ಉದ್ದೇಶಕ್ಕಾಗಿ ಬರೆಯಗಾಗದಿದ್ದರೂ, ಅದರ ಹಿಂದೆ ಅವರ ಅಭಿರುಚಿ, ಸಂಸ್ಕೃತಿ, ಸಂಸ್ಕಾರ, ಜ್ಞಾನ, ಚಿಂತನೆ, ಅಭಿಲಾಷೆಗಳು, ಹಿನ್ನೆಲೆಯಾಗಿ ನಿಂತು ಪೋಷಣೆ ನೀಡುರತ್ತವೆ. ಇವಯ ಲೇಖಕನ ಸಂಪಾದಿತ ಜ್ಞಾನ, ಜ್ಞಾನದ ಹಸಿವು – ಹಂಬಲಗಳನ್ನು ಬಿಂಬಿಸಬಲ್ಲವು."[೬]

ಈ ದಿಸೆಯಲ್ಲಿ ಶಂಕರ ಪಾಟೀಲರ ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳ ಕುರಿತು ಪುಸ್ತಕಗಳು ಹೆಚ್ಚಿನ ಬೆರಳೆಣಿಕೆಯಷ್ಟು ಇದ್ದರೂ ಪುಸ್ತಕಗಳಲ್ಲಿ ಕಲೆ, ಕಲಾಪರಂಪರೆ, ಸಂಸ್ಕೃತಿ, ಇತ್ಯಾದಿಗಳ ಕುರಿತು ನೂರಾರು ಸತ್ವಪೂರ್ಣ ಲೇಖನಗಳನ್ನೊಳಗೊಂಡಿದೆ.

ಶಂಕರ ಪಾಟೀಲರ ಕಲಾ ಚಟುವಟಿಕೆಗಳು

ಸೃಜನಶೀಲ ಕಲಾವಿದರಾದ ಪಾಟೀಲರು ಸಾಹಿತ್ಯ, ಸಂಗೀತ, ಶಿಕ್ಷಣ, ಪತ್ರಿಕೋದ್ಯಮ, ಛಾಯಾಚಿತ್ರಣ ರಂಗದಲ್ಲಿ ಹಾಗೂ ಕಲಾ ಕ್ಷೇತ್ರದಲ್ಲಿ ಅವಿರತವಾಗಿ ಕ್ರಿಯಾಶೀಲರಾಗಿ ಕಲಾಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

---

೫. ಡಾ. ವಿ. ಸ. ಮಾಳಿ, ನಿಜದ ನೆಲೆ, ಪು. ೧೦೦೦
೬. ಅದೇ.

ಚಿತ್ರಕಲೆಯ ಮೂಲಕ ವಿವಿಧ ಕ್ಷೇತ್ರಗಳಲ್ಲಿಯೂ ಸಹ ಅನನ್ಯವಾಗಿ ಗಮನಾರ್ಹವಾದ ಕಾರ್ಯಸಾಧನೆ ಮಾಡಿದ್ದಾರೆ. ಆರ್ಟ್ ಗ್ಯಾಲರಿಯ ಸಂಸ್ಥಾಪಕರಾಗಿ, ಅಧ್ಯಕ್ಷರಾಗಿ, ವಿವಿಧ ಸಂಘ ಸಂಸ್ಥೆಗಳ ಸದಸ್ಯರಾಗಿ ಕಲಾಕ್ಷೇತ್ರದಲ್ಲಿ ಕೈಗೊಂಡ ಕಲಾಪ್ರದರ್ಶನ ಮತ್ತು ಲಭಿಸಿದ ಪ್ರಶಸ್ತಿಗಳು ಅವರ ಸಾಧನೆಗೆ ಹಿಡಿದ ಕೈಗನ್ನಡಿಯಾಗಿದೆ.

ದಾವಣಗೆರೆಯ ಆರ್ಟ್ಸ್ ಕೌನ್ಸಿಲ್ ಸಂಸ್ಥೆಯ ಸ್ಥಾಪಕ ಅಧ್ಯಕ್ಷರಾಗಿದ್ದು, ಕನ್ನನಾಡಿನ ಸುಪ್ರಸಿದ್ಧ ಕಲಾವಿದರೂ, ಕಲಾಗುರುಗಳೂ ಆಗಿದ್ದ ದಿ.ದಂಡಾವತಿಮಠವರ ಸವಿನೆನಪಿಗಾಗಿ ದಾವಣಗೇರೆಯಲ್ಲಿ "ಕಲಾಗುರು" ಆರ್ಟ್ಸ್‌ಗ್ಯಾಲರಿಯನ್ನು ಸ್ಥಾಪಿಸಿದರು. ಈ ಗ್ಯಾಲರಿಯು ಅಂದಿನ ಕಲಾವಿದ್ಯಾರ್ಥಿಗಳ ಅಧ್ಯಯನ ಹಾಗೂ ಚಿತ್ರ ಪ್ರದರ್ಶನಗಳಿಗೆ ಆರ್ಥಿಕವಾಗಿ ತುಂಬ ಸಹಕಾರಿಯಾಯಿತು. ಸಾಕಷ್ಟು ವಿದ್ಯಾರ್ಥಿಗಳು ಕಲಾರಸಿಕರು ಇದರ ಪ್ರಯೋಜನವನ್ನು ಪಡೆದಿದ್ಧಾರೆ ಇದರ ಜೊತೆಗೆ ಸಂಗೀತ ಪ್ರೀಯರಾಗಿದ್ದು ಆಗಾಗ್ಗೆ ಹೆಸರಾಂತ ಸಂಗೀತಗಾರರಾದ ಭೀಮಶೇನ ಜೋಷಿ, ಯಂತಹ ಕಲಾವಿದರನ್ನು ಕರೆಯಿಸಿ ಸಂಗೀತ ಕಾರ್ಯಕ್ರಮಗಳನ್ನು ನಡೆಸುತ್ತಿದ್ದುದು ಗಮನಾರ್ಹ ಸಂಗತಿಯಾಗಿದೆ.

೧೯೬೮ರಲ್ಲಿ ಶಂಕರ ಪಾಟೀಲರು ಕಲಾ ಪ್ರದರ್ಶನಗಳಲ್ಲಿ ಭಾಗವಹಿಸುತ್ತಿದ್ದರು. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರು ಏರ್ಪಡಿಸಿದ ರಾಜ್ಯಮಟ್ಟದ ಕಲಾ ಪ್ರದರ್ಶನದಲ್ಲಿ ಪ್ರಥಮ ಬಹುಮಾನವನ್ನು ತಮ್ಮದಾಗಿಸಿಕೊಂಡರು. ಹೀಗೆ ೧೯೬೮, ೬೯, ೭೦ರಂದು ಮೂರು ವರ್ಷಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಏರ್ಪಡಿಸಿದ ರಾಜ್ಯಮಟ್ಟದ ಕಲಾಪ್ರದರ್ಶನದಲ್ಲಿ ಭಾಗವಹಿಸಿ ಸತತವಾಗಿ ಮೂರು ಭಾರಿ ಮೊದಲ ಬಹುಮಾನವನ್ನು ಪಡೆದ ಕೀರ್ತಿಗೆ ಭಾಜನರಾದರು.

೧೯೭೨ರಲ್ಲಿ ಪಾಟೀಲರ ಕಲಾಕೃತಿಗಳನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಾಯೋಜಕತ್ವದಲ್ಲಿ ಹುಬ್ಬಳ್ಳಿಯ ಛೇಂಬರ್ ಆಫ್ ಕಾಮರ್ಸ್ ಹಾಲ್‌ನಲ್ಲಿ ಖ್ಯಾತ ಹಿರಿಯ ಕವಿಗಳಾದ ದ.ರಾ.ಬೇಂದ್ರೆಯವರು ಅತಿಥಿಯಾಗಿ, ಕಲಾಗುರುಗಳಾದ ಜಿ.ಎಸ್. ದಂಡಾವತಿ ಮಠ, ನಾಡೋಜ ಚೆನ್ನವೀರ ಕಣವಿಯವರ ಉಪಸ್ಥಿತಿಯಲ್ಲಿ ಸುಮಾರು ಐವತ್ತಕ್ಕೂ ಹೆಚ್ಚು ಕಲಾಕೃತಿಗಳನ್ನು ಪ್ರದರ್ಶನ ಮಾಡಿದ್ದಾರೆ. ಹಾಗೂ ಮುಂಬೈನಲ್ಲಿ ತಾಜ ಆರ್ಟ್ ಗ್ಯಾಲರಿ ಸುಪ್ರಸಿದ್ಧ ತಾಜ್ ಹೋಟೆಲ್‌ನಲ್ಲಿ ಬೆಂಗಳೂರಿನ ಮ್ಯಾಕ್ಸ್‌ಮುಲ್ಲರ್ ಭವನದಲ್ಲಿ, ಧಾರವಾಡ ನಗರದ ಡಿ.ವಿ. ಹಾಲಭಾವಿ ಕಲಾ ಶಾಲೆಯಲ್ಲಿ ಮತ್ತು ದಾವಣಗೆರೆಯ ಕಲಾಗುರು ಆರ್ಟ್ ಗ್ಯಾಲರಿಯಲ್ಲಿ ಅಲ್ಲದೇ ಮನಾಜೆಸ್ ಬ್ರೆಗೆಂಜಾ ಪ್ರದರ್ಶನಾಲಯ ಗೋವಾ, ಲಲಿತಕಲಾ ಅಕಾಡೆಮಿ ಪ್ರದರ್ಶನಾಲಯ, ಆಂಧ್ರಪ್ರದೇಶ,

ಹೈದಾರಾಬಾರ್, ಮದ್ರಾಸ ಮುಂತಾದ ಪ್ರಮುಕ ನಗರಗಳಲ್ಲಿ ಯು.ಎಸ್.ಎ., ಕೆನಡಾ, ನ್ಯೂಯಾರ್ಕ್, ಮುಂತಾದ ಹೊರ ರಾಷ್ಟ್ರಗಳಲ್ಲಿ ಮೂವತ್ತಕ್ಕೂ ಹೆಚ್ಚು ನಗರಗಳಲ್ಲಿ ಪ್ರಸಿದ್ಧ ಕಲಾಪ್ರದರ್ಶನಾಲಯಗಳಲ್ಲಿ ವಿದೇಶಿಗರಲ್ಲಿ ಭಾರತೀಯ ಕಲೆಯ ಕಲ್ಪನೆ ಸಂಸ್ಕೃತಿ ಮತ್ತು ಪರಂಪರೆಯ ದೇಶೀಯ ಸೊಗಡನ್ನು ತಮ್ಮ ಕಲಾಕೃತಿಗಳ ವಿಷಯ ವಸ್ತುವನ್ನಾಗಿ ಬಳಸಿಕೊಂಡು ಚಿತ್ರಿಸಿದ ಸಾಕಷ್ಟು ಕಲಾಕೃತಿಗಳನ್ನು ಏಕವ್ಯಕ್ತಿ ಚಿತ್ರಕಲೆಯ ಪ್ರದರ್ಶನವನ್ನು ಏರ್ಪಡಿಸಿದ್ದಾರೆ. ಈ ರೀತಿಯಾಗಿ ಪಾಟೀಲರು ೧೯೭೨ ರಿಂದ ಸುಮಾರು ೨೮ ವರ್ಷಗಳಲ್ಲ ಕಾಲ ಅವಿರತವಾಗಿ ರಾಜ್ಯ ಮತ್ತು ರಾಷ್ಟ್ರೀಯ ಸಮಕಾಲೀನ ಕಲಾವಿದರೊಂದಿಗೆ ಸಮೂಹ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

“೧೯೭೮ರಲ್ಲಿ ಅಂತರಾಷ್ಟ್ರೀಯ ರೋಟರಿ ಸಂಸ್ಥೆಯ ಪ್ರತಿನಿಧಿಯಾಗಿ ಭಾರತದ ಕಲೆಯನ್ನು ಪ್ರತಿನಿಧಿಸಿ ಅಮೇರಿಕವನ್ನು ಸಂದರ್ಶಿಸಿ ಬರುವ ಸದಾವಕಾಶ ಇವರಿಗೆ ದೊರೆಯಿತು. ಇದು ಕರ್ನಾಟಕದ ಮೊದಲ ಕನ್ನಡಿಗ ಕಲಾವಿದನಿಗೆ ಸಂದಗೌರವ ಎನ್ನಬೇಕು.” ಬೊಸ್ಮನ್, ಚಿಕ್ಯಾಗೋ, ನ್ಯೂಯಾರ್ಕ, ವಾಷಿಂಗಟನ್, ಪಿಲಿಡಲ್ಪಿಯಾ, ಕ್ಯೂವಾ, ಒಟ್ಟಾವ, ಮ್ಯಾಂಟ್ರಿಯತ್ ಟೂರೆಂಟೂ, ಮುಂತಾದ ಅಮೇರಿಕ ಮತ್ತು ಕೆನಡಾ ಮಹಾನಗರಗಳನ್ನು ಸಂದರ್ಶಿಸಿ ಅಲ್ಲಿಯ ಪ್ರಮುಖ ಕಲಾವಸ್ತು, ಸಂಗ್ರಹಾಲಯ, ಚಿತ್ರ ಸಂಗ್ರಹಾಲಯಗಳನ್ನು ಅಧ್ಯಯನ ಮಾಡಿಬಂದರು.

೧೯೭೯ ಅಲ್ಲದೆ ವಿದೇಶಿ ನೆಲದಲ್ಲಿ ತಮ್ಮ ಕಲಾಕೃತಿಗಳ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ತಾವು ತಗೆದ ಛಾಯಾಚಿತ್ರಗಳ ಪ್ರದರ್ಶನ ಅಲ್ಲದೆ ಭಾರತೀಯ ಕಲೆ ಮತ್ತು ಸಂಸ್ಕೃತಿ ಕುರಿತು ಉಪನ್ಯಾಸ ನೀಡಿ ಚರ್ಚಾಕೂಟಗಳಲ್ಲಿ ಭಾಗವಹಿಸಿದರು. ಹೀಗೆ ವಿದೇಶಿಗರಿಗೆ ಭಾರತೀಯ ಕಲೆ ಮತ್ತು ಸಂಸ್ಕೃತಿಯನ್ನು ಪರಿಚಯಿಸಿ ಬಂದಿದ್ದಾರೆ.

ಶ್ರೀಯುತ ಶಂಕರ ಪಾಟೀಲರು ತಮ್ಮ ವಿದ್ಯಾಭ್ಯಾಸದ ತರುವಾಯ ಧಾರವಾಡ ಕಲಾಗ್ಯಾಲರಿಯಲ್ಲಿ ೧೯೬೮ರಲ್ಲಿ ಪ್ರಪ್ರಥಮ ಬಾರಿಗೆ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಏರ್ಪಡಿಸಿದರು. ಇವರ ಕಲಾಕೃತಿಗಳ ವಸ್ತುವಿಷಯ ತಂತ್ರಗಾರಿಕೆ, ಜೆ.ಜೆ ಕಲಾಶಾಲೆ ಮತ್ತು ಹಾಲಭಾವಿ ಸ್ಕೂಲ್ ಆಪ್ ಆರ್ಟ್ಸನಲ್ಲಿ ಅಧ್ಯಯನ ಮಾಡಿ ಬಂದ ಅನುಭವ ಕಲಾಕೃತಿಗಳಲ್ಲಿ ಜೀವ ತುಂಬಿ ಬಂದಿರುವುದನ್ನು ಪತ್ರಿಕೆಗಳು ವರದಿಮಾಡಿವೆ.

೧೯೬೯ರಲ್ಲಿ ರಾಜ್ಯ ಮಟ್ಟದ ಕಲಾಪ್ರದರ್ಶನವು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿದ್ದು ಅಲ್ಲಿಯೂ ಸಹ ಪಾಟೀಲರ ಕಲಾಕೃತಿಗಳು ಪ್ರದರ್ಶನಗೊಂಡವು ಮತ್ತೆ ೧೯೭೦ ಕರ್ನಾಟಕ

ವಿಶ್ವವಿದ್ಯಾಲಯ ಧಾರವಾಡದಲ್ಲಿ ರಾಜ್ಯಮಟ್ಟದಲ್ಲಿ ಕಲಾಕೃತಿಗಳು ಪ್ರದರ್ಶನಗೊಂಡಿವೆ. ೧೯೭೨ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಪ್ರದರ್ಶನಗೊಂಡಾಗ ಪ್ರಥಮ ಬಹುಮಾನವನ್ನು ಪಡೆದುಕೊಳ್ಳುತ್ತಾರೆ.

೧೮೭೪ ಮಾರ್ಚ ೬ ಮ್ಯಾಕ್ಸಮ್ಯುಲರ್ ಭವನ ಬೆಂಗಳೂರಿನಲ್ಲಿ ಹೊಸ ಹೊಸ ಪ್ರಯೋಗಾತ್ಮಕ ಸಮಕಾಲಿನ ಶೈಲಿಯ ಆಧುನಿಕ ಕಲೆಯ ಸುಮಾರು ೨೦ಕಲಾಕೃತಿಗಳನ್ನು ಪ್ರದರ್ಶನ ಮಾಡಿದರು. ಕಲಾಕೃತಿಗಳಲ್ಲಿ ಪಾಟೀಲರ ಮನಸ್ಸಿನ ಭಾವನೆಗಳು ಪಾರದರ್ಶ ವರ್ಣಗಳಿಂದ ಕೂಡಿದ್ದು ಮತ್ತು ಇವರು ರಚಿಸಿದ ಮಾನವಾಕೃತಿಗಳಾದ "ಜೋಜೊ" ಮತ್ತು "ದಿದಿ" "ತಾಯಿ ಮತ್ತು ಮಗು" ತುಂಬಾ ಪ್ರಸಿದ್ಧಿ ಪಡೆದ ಕಲಾಕೃತಿಗಳಾಗಿವೆ. ೧೯೭೩ರಲ್ಲಿ ಮುಂಬೈಯಿಯ ಪ್ರಸಿದ್ಧ ತಾಜ್ ಆರ್ಟ್ಸ ಗ್ಯಾಲರಿಯಲ್ಲಿ ಮೊದಲಬಾರಿಗೆ ವರ್ಣರಂಜಿತ ಛಾಯಾಚಿತ್ರಣಗಳ ಪ್ರದರ್ಶನವನ್ನು ಏರ್ಪಡಿಸಿದ್ದರು. ೧೯೭೬ರಲ್ಲಿ ಹೈದರಾಬಾದನಲ್ಲಿ ಪ್ರಕೃತಿ ಚಿತ್ರಣದ ಕಲಾಕೃತಿಗಳ ಪ್ರದರ್ಶನ ಏರ್ಪಡಿಸಲಾಯಿತು. ಆಂಧ್ರಪ್ರದೇಶದ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಮಾನ್ಯ ಡಿ.ಟಿ. ರೆಡ್ಡಿಯವರು ಪ್ರದರ್ಶನ ಉದ್ಘಾಟಿಸಿದರು. ಈ ಪ್ರದರ್ಶನದ ವಿಶೇಷವೆಂದರೆ ಇವರು ರಚಿಸಿದ ಕಲಾಕೃತಿಗಳಲ್ಲಿ ಜಲವರ್ಣ ಮಾದ್ಯಮವಾದ "ಕಲರ್ ಇಂಡಿಯನ್ ಇಂಕ"ಗಳನ್ನು ಬಳಸಿ ಚಿತ್ರಗಳನ್ನು ಚಿತ್ರಿಸಲಾಗಿತ್ತು.

೧೯೭೮ರಲ್ಲಿ ಅಮೇರಿಕಾದ ಇಲಿಗಾನ ನಗರದಲ್ಲಿ ಪಾಟೀಲರ ವರ್ಣಚಿತ್ರಗಳು ಪ್ರದರ್ಶನಗೊಂಡವು. ಮತ್ತು ರೋಟರಿ ಸಂಸ್ಥೆಯ ಅಡಿಯಲ್ಲಿ ಅಮೇರಿಕಕ್ಕೆ ಹೋಗಿ ಅಲ್ಲಿನ ಪ್ರಕೃತಿಯನ್ನು ಛಾಯಚಿತ್ರಗಳ ಮೂಲಕ ಸೆರೆ ಹಿಡಿದು ರಮ್ಯ ದೃಶ್ಯಗಳನ್ನು ಪ್ರದರ್ಶಿಸಿದ್ದಾರೆ.

ಪಾಟೀಲರು ೧೯೮೧ರಲ್ಲಿ ನ್ಯಾಷನಲ್ ಲಲಿತಕಲಾ ಅಕಾಡೆಮಿ, ರಿಜನಲ್ ಸೆಂಟರ್ ಮದ್ರಾಸ್ ಇವರು ಕರ್ನಾಟಕ ಪ್ರಿಂಟ ಮೆಕಿಂಗ್ ವರ್ಕಶಾಪನಲ್ಲಿ ಕರ್ನಾಟಕರಿಂದ ಪ್ರತಿನಿಧಿಸಿದ್ದಾರೆ. ೧೯೮೨ರಲ್ಲಿ ರಾಷ್ಟ್ರಮಟ್ಟದಲ್ಲಿ ಏಕವ್ಯಕ್ತಿ ಚಿತ್ರ ಪ್ರದರ್ಶನ ಅದೇ ವರ್ಷ ಪ್ರಥಮ ಬಾರಿಗೆ ಇಂಡಿಯಾ ಛಾಯಾಚಿತ್ರಣ ಸಮ್ಮೇಳನವನ್ನು ಏರ್ಪಡಿಸಿದ್ದಾರೆ.

೧೯೮೪ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ "ಕಲಾಮಾತ್ರೆ"ಯಲ್ಲಿ ವಿ ಜಿ ಅಂದಾನಿ. ಸಿ.ಚಂದ್ರಶೇಖರ. ಎಸ್.ಧನಲಕ್ಷ್ಮೀ ಆರ್.ಎಂ.ಹಡಪದ ಜಿ.ಎಸ್.ಖಂಡೇರಾವ ಚಿ.ಸು.ಕೃಷ್ಣಸೆಟ್ಟಿ ಪ.ಸ.ಕುಮಾರ ಜೆ.ಎಂ.ಎಸ್.ಮಣಿ, ಎನ್.ಮರಿಶಾಮಾಚಾರ ಅ.ಲ.ನರಸಿಂಹನ್, ಎಂ.ಬಿ.ಪಾಟೀಲ ಕೆ.ಟಿ.ಶಿವಪ್ರಸಾದ ವೆಂಕಟಾಚಲಪತಿ ವಿಜಯ ಸಿಂಧೂರ ಎ.ಯುಸೂಪ್ ಹಿರಿಯ ಕಲಾವಿದರ

ಜೊತೆ ಶಂಕರ ಪಾಟೀಲರು ಸೇರಿ ಒಟ್ಟು ೧೬ಸಮಕಾಲೀನ ಕಲಾವಿದರ ಗುಂಪು ಕಲಾಕೃತಿಗಳು ರಾಜ್ಯ ವಿವಿಧ ೩೦ ಪ್ರದೇಶಗಳಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಂಡವು. ಪಾಟೀಲರು ತಮ್ಮ ಕಲಾಕೃತಿಗಳಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತ ಚಿತ್ರಿಸಿದ್ದಾರೆ.

೧೯೮೫ರಲ್ಲಿ "ಕರ್ನಾಟಕ ಕಲಾ ಮೇಳ" ಬೆಂಗಳೂರಿನಲ್ಲಿ ಶಂಕರ ಪಾಟೀಲರು ಭಾಗವಹಿಸಿದ್ದರು.

೧೯೮೫ ಭಾರತ ಸರ್ಕಾರದ ವೊಕೇಶನಲ್ ಎಜ್ಯುಕೇಶನ್ ಮತ್ತು ಹ್ಯೋಮನ್ ರಿಸರ್ಚ ಡೆವಲಪ್‌ಮೆಂಟ್"ನವರು ಏರ್ಪಡಿಸಿದ ಕಾರ್ಯಾಗಾರದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದಾರೆ. ಇವರು ಕಲಾಕ್ಷೇತ್ರದಲ್ಲಿ ಮಾಡಿರುವ ಸಾಧನೆಗೆ ಹೈದರಾಬಾದನ ಸಾಲರಜಂಗ ಪ್ರಾಚ್ಯವಸ್ತು ಸಂಗ್ರಹಾಲಯದ ಆಡಳಿತ ಮಂಡಳಿಯ ಸದಸ್ಯರಾಗಿ ನೇಮಕವಾಗಲು ಸಹಾಯವಾಗುತ್ತದೆ.

೧೯೭೫ರಲ್ಲಿ ಧಾರವಾಡದ ಸ್ಕೂಲ ಆರ್ಫ್ ಆರ್ಟ್‌ನ ಕಲಾಶಾಲೆಯಲ್ಲಿನ ಪ್ರದರ್ಶನಾಲಯದಲ್ಲಿ ಸುಮಾರು ೭೦ ಛಾಯಾಚಿತ್ರಗಳನ್ನು ಪಾಟೀಲರು ಪ್ರದರ್ಶಸಿದ್ದರು ನಿಸರ್ಗ, ಮಾನವಿಯಶ್ರದ್ಧೆಯ ರಚನೆಗಳು, ನೆರಳು-ಬೆಳಕಿನ ವ್ಯಕ್ತಿಚಿತ್ರ ಮುಂತಾದ ಅನೇಕ ಮಾದರಿಯ ಛಾಯಾಚಿತ್ರಗಳು ನೆರಳು-ಬೆಳಕಿನ ತಂತ್ರ, ಭಾವ ಪ್ರದರ್ಶನದ ತಂತ್ರ, ಪರಿಸರಗಳ ರಚನೆ ಮುಂತಾದ ಛಾಯಾಚಿತ್ರಗಳಲ್ಲಿ ಪಾಟೀಲರು ತಮ್ಮ ತಜ್ಞತೆಯನ್ನು ತೋರಿಸಿದ್ದಾರೆ. ಸಾಮಾನ್ಯ ಸನ್ನಿವೇಶಗಳು ಇವರ (ಛಾಯಾಚಿತ್ರಣ)ದಲ್ಲಿ ಅಸಾಮಾನ್ಯ ಛಾಯಾಚಿತ್ರಗಳಾಗಿ ಮೂಡಿಬಂದಿವೆ.

ಚಿತ್ರಕಲೆ ಜೊತೆ ಛಾಯಾಚಿತ್ರಣದಲ್ಲೂ ಪಳಗಿದ ಶಂಕರ ಪಾಟೀಲರು ತಮ್ಮ ಕಲಾಕೃತಿಗಳೊಂದಿಗೆ ಕರ್ನಾಟಕದಲ್ಲಿ ಅಲ್ಲದೇ ರಾಷ್ಟ್ರ-ಅಂತರಾಷ್ಟ್ರೀಯ ಮಟ್ಟದಲ್ಲಿ ಕಲಾಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ಅಮೇರಿಕಾದ ಮೈನಾ ವಿಶ್ವವಿದ್ಯಾಲಯ ಮತ್ತು ಕ್ವೀನಿ ಆರ್ಟ್ಸಸೊಸೈಟಿ ಮ್ಯಾಸಿಯಂ, ದಿಲ್ಲಿ ಲಲಿತಕಲಾ ಅಕಾಡೆಮಿ, ಚೆನ್ನೈಲಲಿತಕಲಾ ಅಕಾಡೆಮಿ ಹೈದರಾಬಾದ್ ಬೆಂಗಳೂರು ಸರ್ಕಾರಿ ವಸ್ತುಸಂಗಹಾಲಯ, ವೆಂಕಟಪ್ಪ ಆರ್ಟ್ಸಗ್ಯಾಲರಿ ಬೆಂಗಳೂರು, ಏರ್ ಇಂಡಿಯಾ, ಮುಂಬೈ, ಬ್ರಿಟಿಷ್ ಕೌನ್ಸಿಲ್ ಚೆನ್ನೈ, ಮೈಸೂರು, ಧಾರವಾಡ, ಧರ್ಮಸ್ಥಳ, ಗುಲ್ಬರ್ಗಾ ಹಾಗೂ ಬೆಳಗಾವಿ ನಗರಗಳಲ್ಲಿ ಪಾಟೀಲರು ಕಲಾ ಪ್ರದರ್ಶನ ಮಾಡಿದ್ದಾರೆ ಅಂತರಾಷ್ಟ್ರೀಯ ರೋಟರಿ ಸಂಸ್ಥೆಯಿಂದ ಅಮೇರಿಕಕ್ಕೆ ಹೋಗಿ ಬೂಸ್ಟಾನ್, ಚಿಕಾಗೋ, ನ್ಯೂಯಾರ್ಕ, ವಾಶಿಂಗಟನ್, ಒಟ್ಟಾವ, ಮಂಟ್ರಿಯಲ್, ಟೊರೂಂಟೋ, ಕೆನಡಾದಂತಹ ಮಹಾನಗರಗಳನ್ನು ಅಲೆದಾಡಿ ಮೂರು ತಿಂಗಳಿನಲ್ಲಿ ತಮ್ಮ ಪ್ರಯೋಗಾತ್ಮಕ ಚಟುವಟಿಕೆಯ ಮೂಲಕ ಅಲ್ಲಿ ಕಂಡ ನೋಟಗಳ ಎರಡು ಸಾವಿರ ಛಾಯಾಚಿತ್ರಣಗಳ ಸ್ಲೈಡ್‌ಗಳಲ್ಲಿ

ಅಮೇರಿಕಯ ಬದುಕಿನ ವೈವಿಧ್ಯವನ್ನು ಅಲ್ಲಿನ ನಿಸರ್ಗ ರಮ್ಯ ದೃಶ್ಯಗಳನ್ನು ಸೆರೆ ಹಿಡಿದಿದ್ದಾರೆ. ಅವರ ಈ ಅಮೂಲ್ಯ ಸಂಗ್ರಹದಲ್ಲಿ ಅಲ್ಲಿನ ಹದಿಹರೆಯದ ಮೈಮಾಟದ ನೀರೆಯರ ಚಲುವಿನಿಂದ ಹಿಡಿದು ನಗರ–ಹಳ್ಳಿ ಬೆಟ್ಟ, ಹಳ್ಳ–ಕೊಳ್ಳ, ನೆರಳು–ಬೆಳಕುಗಳ ರಮಣೀಯ ದೃಶ್ಯಾವಳಿಗಳ ಸ್ಥಬ್ಧ ಛಾಯಾಚಿತ್ರಗಳಿವೆ. ಹೀಗೆ ಪಾಟೀಲರು ವಿದ್ಯಾರ್ಥಿ ದೆಸೆಯಿಂದ ಅಧ್ಯಾಪಕ ವೃತ್ತಿಯವರೆಗೆ ನಿರಂತರವಾಗಿ ಹೊಸ–ಹೊಸ ಪ್ರಯೋಗಗಳನ್ನು ಮಾಡುತ್ತ ತಮ್ಮ ಕಲೆಯಲ್ಲಿ ಹೊಸತೊಂದನ್ನು ಕಂಡುಕೊಳ್ಳುವ ಪ್ರಯತ್ನಮಾಡಿದ್ದಾರೆ.

ಅವರು ರಾಜ್ಯ ಮತ್ತು ಹೊರರಾಜ್ಯಗಳ ಕಲಾಶಾಲೆಗಳ ವಿಶೇಷ ಅಹ್ವಾನಿತ ಕಲಾವಿದರಾಗಿ ಭೇಟಿನೀಡಿ ಅಲ್ಲಿನ ವಿದ್ಯಾರ್ಥಿಗಳಿಗೆ ವಿವಿಧ ಮಾಧ್ಯಮಗಳನ್ನು ಪರಿಚಯಿಸಿ ರೇಖಾವಿನ್ಯಾಸ, ಸಂಯೋಜನಾ ಚಿತ್ರಣ, ಭಾವಚಿತ್ರಣ, ಆಧುನಿಕಕಲೆ, ವಾಣಿಜ್ಯಕಲೆ, ಸಂಯೋಜನಾ ಚಿತ್ರಣಗಳ ಪ್ರಾತ್ಯಕ್ಷಿಕೆಯನ್ನು ಅಭ್ಯಾಸ ವಿಷಯಗಳಿಗೆ ಪೂರಕವಾಗಿ ಚರ್ಚೆ, ಉಪನ್ಯಾಸ, ಸ್ಲೈಡ್ ಶೋ ಮುಂತಾದ ಹಲವಾರು ಕಾರ್ಯಕ್ರಮಗಳನ್ನು ನೀಡಿ ಯಶಸ್ಸನ್ನು ಸಾಧಿಸಿದ್ದಾರೆ.

ಕಲಾಶಿಬಿರಗಳು

ಪಾಟೀಲರು ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶಗಳಲ್ಲಿ ಭಾಗವಹಿಸಿವುದರ ಜೊತೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಏರ್ಪಡಿಸಿದ ಕಲಾಶಿಬಿರಗಳಲ್ಲಿ ಭಾಗವಹಿಸಿ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ೧೯೮೦ರಲ್ಲಿ ಕರ್ನಾಟಕ ಕಲಾಮೇಳ, ಬೆಂಗಳೂರು ಕಲಾಶಿಬಿರ ವೊಂದನ್ನು ಏರ್ಪಡಿಸಿತ್ತು. ಕರ್ನಾಟಕದ ವಿವಿಧ ಪ್ರದೇಶಗಳಿಂದ ಬಂದ ಹಿರಿಯ ಕಲಾವಿದರ ಗುಂಪಿನಲ್ಲಿ ಬೆರೆತ ಪಾಟೀಲರು ವರ್ಣ ಕಲಾಕೃತಿಗಳನ್ನು ರಚಿಸಿಕೊಟ್ಟು ಶಿಬಿರದಲ್ಲಿನ ಹಿರಿಯ ಕಲಾವಿದರುಗಳ ಕಲಾಕೃತಿಗಳ ಪ್ರೇರಣೆ ಪಡೆಯುತ್ತಿದ್ದರು ಮತ್ತು ರಾಜ್ಯ, ಹೊರರಾಜ್ಯದ ಕಲಾವಿದರೊಡನೆ ಬೆರೆತು ಕಲಾಚಟುವಟಿಕೆಗಳಲ್ಲಿ ನಿರಂತರವಾಗಿ ಪಾಲ್ಗೊಂಡರು.

೧೯೮೮ರಲ್ಲಿ ಬ್ರಿಟಿಷ್ ಕೌನ್ಸಿಲ್ ಮತ್ತು ರಾಷ್ಟ್ರೀಯ ಲಲಿತಕಲಾ ಅಕಾಡೆಮಿಯ ಸಂಯುಕ್ತ ಆಶ್ರಯದಲ್ಲಿ ದಕ್ಷಿಣ ಭಾರತ ಪೊಸ್ಟರ್ ಪ್ರೀಂಟ್ ಮೆಕಿಂಕ್ ಗ್ರಾಫಿಕ್ ಶಿಬಿರದಲ್ಲಿ ಪಾಟೀಲರು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದ್ದರು. ಮದ್ರಾಸ್‌ನಲ್ಲಿ ನಡೆಯುತ್ತಿದ್ದ ಈ ಕಲಾಶಿಬಿರದಲ್ಲಿ ಭಾಗವಹಿಸಿ ಗ್ರಾಫಿಕ್ ಕಲಾಕೃತಿಗಳನ್ನು ರಚಿಸಿದರು. ಮತ್ತು ದೇಶದ ವಿವಿಧ ಭಾಗಗಳಿಂದ ಬಂದ ಖ್ಯಾತ ಕಲಾವಿದರುಗಳನ್ನು ಪರಿಚಯಿಸಿಕೊಂಡು ಅವರ ಕಲಾಕೃತಿಗಳನ್ನು ಕುರಿತು ಚರ್ಚಿಸಿ ಚಿತ್ರ ರಚನೆಯಲ್ಲಿ

ಹೊಸ ಹೊಸ ಪ್ರಯೋಗಗಳನ್ನು, ತಂತ್ರಗಾರಿಕೆಗಳ ಕುರಿತು ಚಿಂತನೆ ನಡೆಸುತ್ತದ್ದರು. ಈ ಹಿನ್ನೆಲೆಯಲ್ಲಿ ಪಾಟೀಲರು ಹೊಸ ಹೊಸ ವಿಷಯಗಳನ್ನು ಗ್ರಹಿಸುತ್ತ ಕೆಲವು ಅಂಶಗಳನ್ನು ತಮ್ಮ ಕೃತಿಗಳಲ್ಲಿ ಅಳವಡಿಸಿಕೊಳ್ಳುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದರು. ಕಲಾಶಿಬಿರದ ಬಿಡುವಿನ ಸಂದರ್ಭದಲ್ಲಿ ಕಲಾವಿದರನ್ನು ಭೇಟಿಮಾಡುವುದು, ತಮ್ಮ ಕಲಾಕೃತಿ ಪೂರ್ಣಗೊಂಡಾಗ ಆಪ್ತ ಕಲಾವಿದರನ್ನು, ಗೆಳೆಯರನ್ನು ಕಲಾಪ್ರೇಮಿಗಳನ್ನು ಆಹ್ವಾನಿಸಿ ಕಲಾಕೃತಿಗಳನ್ನು ತೋರಿಸಿ ಕಲಾಕೃತಿಯ ಕುರಿತು ಚರ್ಚಿಸಿ ಸಲಹೆಗಳನ್ನು ಪಡೆಯುವುದು ಹೀಗೆ ನಿರಂತರವಾಗಿ ಈ ಕಲಾಶಿಬಿರದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳುವುದರ ಜೊತೆಗೆ ಶಿಬಿರದಲ್ಲಿ ಕ್ರಿಯಾಶೀಲರಾಗಿ ತೊಡಗಿಸಿಕೊಳ್ಳುತ್ತಿದ್ದರು.

೧೯೮೨ರಲ್ಲಿ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯು ಗುಲಬರ್ಗಾದಲ್ಲಿ ಕಲಾಶಿಬಿರ ಏರ್ಪಡಿಸಿತ್ತು. ಈ ಕಲಾ ಶಿಬಿರದಲ್ಲಿ ಪಾಟೀಲರು ವಿವಿಧಡೆಗಳಿಂದ ಬಂದು ಶಿಬಿರದಲ್ಲಿ ಭಾಗವಹಿಸಿದ ಕಲಾವಿದರುಗಳನ್ನು ಸಂಪರ್ಕಿಸಿ ಕಲಾ ಕ್ಷೇತ್ರದಲ್ಲಿ ಕಲೆಯ ಬೆಳವಣಿಯ ಇತಿಮೀತಿ ಹಾಗೂ ಇತರ ಕ್ಷೇತ್ರಗಳಂತೆ ಮುನ್ನಡೆಸಿಕೊಂಡು ಹೋಗುವುದರಲ್ಲಿ ಮಾಡಬೇಕಾದ ಕಾರ್ಯ ಕುರಿತು ಚರ್ಚಿಸುತ್ತಿದ್ದರು.

ಇದೇ ಸಂದರ್ಭದಲ್ಲಿ ಪಾಟೀಲರು ತಾವು ಛಾಯಾಚಿತ್ರಣ ಕಲೆಯಲ್ಲಿ ಸೆರೆಹಿಡಿದ ಹಲವಾರು ವಿವಿಧ ದೃಶ್ಯಾತ್ಮಕ ಛಾಯಾಚಿತ್ರಣಗಳ ಸ್ಲೈಡ್‌ಗಳನ್ನು ಪ್ರದರ್ಶಿಸಿದರು. ಶಿಬಿರದಲ್ಲಿ ಭಾಗವಹಿಸಿದ ಕಲಾವಿದರಿಗೆ ಮತ್ತು ವಿದ್ಯಾರ್ಥಿಗಳಿಗೆ ಛಾಯಾಚಿತ್ರಣಗಳಲ್ಲಿ ಬಳಸುವ ಸಲಕರಣೆ ಮತ್ತು ಉಪಕರಣಗಳ ಬಳಕೆಯ ಕುರಿತು ಉಪಯುಕ್ತ ಮಾಹಿತಿ ನೀಡುವುದರ ಜೊತೆಗೆ ಛಾಯಾಚಿತ್ರಣ ಕಲೆಯಲ್ಲಿ ಕಲಾವಿದನಾದವನು ಅರಿತು ಕೊಳ್ಳಬೇಕಾದ ಕೆಲವು ತಂತ್ರ, ಕೌಶಲ್ಯಗಳ ಬಳಕೆಯ ವಿಧಾನ, ವೈಖರಿಗಳ ಮನವರಿಕೆ ಮಾಡಿ ಕೊಟ್ಟು ಒಟ್ಟು ಕಲಾಶಿಬಿರ ಯಶಸ್ವಿಯಾಗುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು.

ಕಲಾ ಪ್ರಾತ್ಯಕ್ಷಿಕೆ ಮತ್ತು ಉಪನ್ಯಾಸ

ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದ ದಿನಗಳಲ್ಲಿ ಪಾಟೀಲರಿಗೆ ವಿವಿಧ ಕಲಾಶಾಲೆಗಳ ಪ್ರಾಚಾರ್ಯರು ಇವರನ್ನು ಆಮಂತ್ರಿಸಿ ವಿವಿಧ ಕಲಾ ಮಾಧ್ಯಮಗಳ ಮೂಲಕ ಪ್ರಾತ್ಯಕ್ಷಿಕೆಯನ್ನು ಪಡೆದುಕೊಳ್ಳುತ್ತಿದ್ದರು. ಪಾಟೀಲರು ಧಾರವಾಡದ ಡಿ.ವಿ. ಹಾಲಭಾವಿ ಕಲಾಶಾಲೆ, ಹುಬ್ಬಳ್ಳಿಯ ವಿಜಯ ಮಹಾಂತೇಶ ಕಲಾಶಾಲೆ, ಐಡಿಯಲ್ ಸ್ಕೂಲ್ ಆಫ್ ಆರ್ಟ್ ಗುಲಬರ್ಗಾ, ಹಿಮಾಲಯ

ಪ್ರದೇಶದಲ್ಲಿನ ಬ್ಯಾಚುಲರ್ ಆಫ್ ಫೈನ್ ಆರ್ಟ್ ಕಲಾಶಾಲೆಯಲ್ಲಿ ಹಾಗೂ ರಾಜ್ಯ ಮತ್ತು ಹೊರ ರಾಜ್ಯದ ಕಲಾಶಾಲೆಯಲ್ಲಿ ಚಿತ್ರಕಲೆಯ ಪ್ರಾತ್ಯಕ್ಷಿಕೆಯನ್ನು ನೀಡಿದ್ದಾರೆ.

ಇದರ ಜೊತೆ ಜೊತೆಗೆ ೧೯೮೮ರಲ್ಲಿ ಮದ್ರಾಸಿನ ಟಿ.ಟಿ.ಆಯ್ ಎಕ್ಸ್‌ಟೆನ್ಷನ್ ಸೆಂಟರ್, ಬೆಂಗಳೂರು ಇವರ ಸಹಯೋಗದಲ್ಲಿ ಜರುಗಿದ ಶಿಕ್ಷಣದಲ್ಲಿ ಹೊಸ ಚಟುವಟಿಕೆಗಳಲ್ಲಿ ಸುಧಾರಣೆಗಳ ಕೆಲಸ, ವಿಷಯದ ಕುರಿತು ಉಪನ್ಯಾಸವನ್ನು ನೀಡಿದರು. ೧೯೮೨ರಲ್ಲಿ ರಾಷ್ಟ್ರೀಯ ಲಲಿತಕಲಾ ಅಕಾಡೆಮಿ ಮತ್ತು ಚಿತ್ರಕಲಾ ಪರಿಷತ್ ಇವರ ಸಹಭಾಗಿತ್ವದಲ್ಲಿ ಭಾರತದಲ್ಲಿ ಕಲಾಶಿಕ್ಷಣ ವಿಷಯದ ಕುರಿತು ಸುರ್ದಿರ್ಘವಾಗಿ ಉಪನ್ಯಾಸ ನೀಡಿ ಕಲಾವಿದರು ಕಲಾ ವಿದ್ಯಾರ್ಥಿಗಳಿಗೆ ಉಪಯುಕ್ತ ವಿಷಯದ ಮಾಹಿತಿಯನ್ನು ನೀಡಿರುವರು. ಅಲ್ಲದೆ ಕಲೆಯ ಅಭಿರುಚಿಯ ಕುರಿತು ಸ್ಕೂಲ್ ಆಫ್ ಆರ್ಟ್, ಧಾರವಾಡದಲ್ಲಿ ಸ್ಲೈಡ್ ಶೋ ಮತ್ತು ಅವುಗಳ ಕುರಿತು ಚರ್ಚೆ ಕಲಾಶಾಲೆ, ಬೆಳಗಾವಿಯಲ್ಲಿ ಹಾಗೂ ಇನ್ನಿತರ ಕಲಾಶಾಲೆಗಳಲ್ಲಿ ಕಲೆಯ ವಿಷಯವನ್ನಾಧರಿಸಿ ಪ್ರಾಯೋಗಿಕ ಹಾಗೂ ವಿಮರ್ಶಾತ್ಮಕ ಉಪನ್ಯಾಸಗಳನ್ನು ನೀಡಿರುವುದರ ಜೊತೆಗೆ ರಾಷ್ಟ್ರಮಟ್ಟದ ಕಲಾ ಸಮ್ಮೇಳನಗಳಲ್ಲಿ ಕಲೆಯ ಕುರಿತು ಪುಸ್ತಕ ಪ್ರಕಟಣೆಯ ಅವಶ್ಯಕತೆ ಕಲೆಯಲ್ಲಿ ಯುವಕರ ಪಾತ್ರ ಎಂಬ ವಿಷಯದ ಪತ್ರಿಕೆ ಮಂಡನೆ ಮಾಡಿರುವರು. ಹಾಗೂ ೧೯೯೪ರಲ್ಲಿ ಕರ್ನಾಟಕದಲ್ಲಿ ಕಲೆ ಪರಂಪರೆ ಹಾಗೂ ಸಮಕಾಲೀನ ವಿಷಯ ಕುರಿತು ವಿಶೇಷ ಉಪನ್ಯಾಸಗಳನ್ನು ಕನ್ನಡ ವಿ.ವಿ.ಯಲ್ಲಿ ನೀಡಿದ್ದಾರೆ.

ಪಾಟೀಲರ ಇನ್ನಿತರೆ ಚಟುವಟಿಕೆಗಳು

ದಾವಣಗೆರೆಯಲ್ಲಿ ಪಾಟೀಲರು ತಾಯಿ ಸಾವಿತ್ರಿದೇವಿಯವರ ಸ್ಮರಣಾರ್ಥ ಮಾಡರ್ನ್ ನರ್ಸರಿ ಸ್ಕೂಲ್ ತಂದೆ ಚಂದ್ರಶೇಖರ ಗೋಗೇರಿ (ಪಾಟೀಲ) ಅವರ ಸ್ಮರಣಾರ್ಥವಾಗಿ ಮಾಡರ್ನ್ ಪ್ರಾಥಮಿಕ ಶಾಲೆಯನ್ನು ಮತ್ತು ಬಿ.ಎಸ್. ಚೆನ್ನಬಸಪ್ಪ ಸ್ಮರಣಾರ್ಥವಾಗಿ ಮಾಡರ್ನ್ ಮಿಡಲ್ ಸ್ಕೂಲ್ ಸ್ಥಾಪಿಸಿದರು. ಚಿಕ್ಕಮಕ್ಕಳಿಂದ ಪ್ರೌಢಶಿಕ್ಷಣವನ್ನು ನೀಡುವ ಮಹತ್ವಕಾಂಕ್ಷೆಯನ್ನಿಟ್ಟು ಪಾಟೀಲರು ಸುತ್ತಲಿನ ಪ್ರದೇಶದ ನಾಗರಿಕರಿಗೆ ಬಡಜನರಿಗೆ ಅನುಕೂಲ ಕಲ್ಪಿಸಿ ಕೊಟ್ಟರು.

ಶ್ರೀಯುತ ಶಂಕರ ಪಾಟೀಲರ ಮರಣಾನಂತರ ಇವರ ಸವಿನೆನಪಿಗಾಗಿ ದಾವಣಗೆರೆಯ ಮೃತ್ಯುಂಜಯ ನಗರದ ಮೂರನೇ ಅಡ್ಡರಸ್ತೆಯಲ್ಲಿ ಮಾಡರ್ನ್ ಹೈಸ್ಕೂಲ್ ಹತ್ತನೆಯ ತರಗತಿಯವರೆಗೆ ವಸತಿ ಶಾಲೆಯನ್ನು ಅವರ ಹಿರಿಯ ಮಗನಾದ ನಯನ ಎಸ್. ಪಾಟೀಲರು ಇಂದಿಗೂ ಮುನ್ನಡೆಸಿಕೊಂಡು ಬರುತ್ತಿದ್ದಾರೆ.

೨೦೦೧ರಲ್ಲಿ ಸ್ಥಾಪಿಸಿದ ಕಲಾಭವನ ಎಜುಕೇಷನಲ್ ಅಸೋಶಿಯೇಷನ್ (ರಿ). ದಾವಣಗೆರೆ ಅಡಿಯಲ್ಲಿ ರಾಜ್ಯಮಟ್ಟದ ಶಂಕರ ಪಾಟೀಲರ ಕಲಾಪ್ರಶಸ್ತಿ ಸಮಿತಿಯಿಂದ ಕೊಡಮಾಡುವ ಶ್ರೀ ಶಂಕರ ಪಾಟೀಲ ಕಲಾ ಪ್ರಶಸ್ತಿಯನ್ನು ನಾಡೋಜ ಚೆನ್ನವೀರ ಕಣವಿಯವರ ಅಧ್ಯಕ್ಷತೆಯಲ್ಲಿ ನಯನ ಪಾಟೀಲ ಕಾರ್ಯದರ್ಶಿ, ಶ್ರೀಮತಿ ಪಾರ್ವತಿ ಪಾಟೀಲ ಖಜಾಂಚಿ, ಪ್ರೊ. ಎಂ.ಎಚ್. ಕೃಷ್ಣಯ್ಯ ಅಧ್ಯಕ್ಷರು ಜೆ.ಎಸ್.ಖಂಡೇರಾವ್, ಶ್ರೀಮತಿ ರೇಖಾನಯನ ಪಾಟೀಲರ ಸದಸ್ಯತ್ವದಲ್ಲಿ ಪ್ರತಿವರ್ಷವು ಹಿರಿಯ ಕಲಾವಿದರಿಗೆ ತಲಾ ೧೦,೦೦೦ ರೂ. ಪ್ರಶಸ್ತಿ ಫಲಕ, ನೆನಪಿನ ಕಾಣಿಕೆ ನೀಡಿ ಗೌರವಿಸಲಾಗುತ್ತದೆ. ಹೀಗೆ ಇವರ ಕುಟುಂಬವರ್ಗ ಪಾಟೀಲರ ನಿಧನದ ನಂತರವೂ ಕಲಾ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

❖❖❖



ಕಲಾವಿದ ಶಂಕರ ಪಾಟೀಲರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳು



ಕಲಾವಿದ ಶಂಕರ ಪಾಟೀಲರ ಆರ್ಟ್ ಗ್ಯಾಲರಿ



ಸಂಗೀತದಲ್ಲಿ ನಿರತ ಯುವಕ ಶಂಕರ ಪಾಟೀಲರು



ಶಂಕರ ಪಾಟೀಲರು ಸ್ಥಾಪಿಸಿದ ಸಂಗೀತ ಶಾಲೆಯ ಒಳನೋಟ.



೧೯೬೮ ರಲ್ಲಿ ಶಂಕರ ಪಾಟೀಲರು ಹುಬ್ಬಳ್ಳಿಯ ಚೇಂಬರ್ ಆಫ್ ಕಾಮರ್ಸ್‌ನ ಹಾಲ್‌ನಲ್ಲಿ ಏರ್ಪಡಿಸಿದ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನದಲ್ಲಿ ಆಗಮಿಸಿದ್ದ ಪ್ರಮುಖರು,ಡಾ. ದ.ರಾ.ಬೇಂದ್ರೆ, ಎಂ.ವ್ಹಿ. ಮಿಣಜಗಿ, ಜಿ.ಎಸ್.ದಂಡಾವತಿಮಠರು



ಡಾ. ದ.ರಾ.ಬೇಂದ್ರೆಯವರು ಪ್ರದರ್ಶನ ಉದ್ಘಾಟಿಸಿ



ಶಂಕರ್ ಪಾಟೀಲರ ಭಾವಂದಿರಾದ ಖ್ಯಾತ ಕವಿಗಳು, ಡಾ.ಚನ್ನವೀರ ಕಣವಿ ದಂಪತಿಗಳು



ಡಾ.ಚನ್ನವೀರ ಕಣವಿ ದಂಪತಿಗಳು ಹಾಗೂ ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ಅವರೊಂದಿಗೆ ಶಂಕರ ಪಾಟೀಲ ದಂಪತಿಗಳು



ಖ್ಯಾತಸಾಹಿತಿ ಡಾ. ಹಾ. ಮಾ. ನಾಯಕರೊಂದಿಗೆ ಶಂಕರ ಪಾಟೀಲರು



ಖ್ಯಾತ ನೇತ್ರ ತಜ್ಞ ಡಾ. ಮೋದಿಯವರೊಂದಿಗೆ ಕಲಾವಿದ ಶಂಕರ ಪಾಟೀಲರು



ಶಂಕರ ಪಾಟೀಲರ 'ಚಿತ್ರಕಲಾ ಚಿಂತನೆ' ಪುಸ್ತಕ ಬಿಡುಗಡೆ ಮಾಡಿದ ಹಿರಿಯ ಕಲಾವಿದರಾದ ಡಾ. ಆರ್.ಎಂ.ಹಡಪದ ಹಾಗೂ ಈ ಸಮಾರಂಭದಲ್ಲಿ ಪಾಲ್ಗೊಂಡ ಡಾ.ಹಾ.ಮಾ.ನಾ, ಚನ್ನವೀರ ಕಣವಿ



ಪ್ರೊ. ವ್ಹಿ.ಬಿ. ಹಿರೇಗೌಡರ ಹಾಗೂ ನಟ ಲೋಹಿತಾಶ್ವರೊಂದಿಗೆ ಶಂಕರ್ ಪಾಟೀಲ

ಅಧ್ಯಾಯ : ಎಂಟು

ಸಮಾರೋಪ

ಒಂದು ದೇಶದ ಸಂಸ್ಕೃತಿಯನ್ನು ಅರಿಯಬೇಕಾದರೆ ಸಂಸ್ಕೃತಿಯ ಹಿನ್ನೆಲೆಯಾಗಿ ಇತಿಹಾಸ ಗರ್ಭದಲ್ಲಿ ಹುದುಗಿರುವ ಅಂಶಗಳ ಆಧ್ಯಯನ ಅವಶ್ಯ. ವಾಸ್ತುಕಲೆ, ಶಿಲ್ಪಕಲೆ, ಚಿತ್ರಕಲೆ, ನಾಟ್ಯಕಲೆ, ನೃತ್ಯಕಲೆ, ಸಾಹಿತ್ಯಕ ಸಾಮಗ್ರಿಗಳು ಅವಶ್ಯಕವಾಗಿದ್ದು ಅವುಗಳ ಮುಲಕ ಕಲೆಗಳು ಹೇಗೆ ಕಾಲ ಕಾಲಕ್ಕೆ ಪ್ರವರ್ಧಮಾನಕ್ಕೆ ಬಂದಿವೆ ಎಂಬಿತ್ಯಾದಿ ಅಂಶಗಳನ್ನು ತಿಳಿಸುವ ಮೂಲಕ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡಲಾಗಿದೆ. ಈ ಕಲಾತ್ಮಕ ಹಾದಿ ಬಹಳ ಹಿಂದಿನಿಂದ ಬಂದ ಪರಂಪರೆಯಾಗಿದ್ದು ಪೂರ್ವ ಕಲಾವಿದರ ನೆರಳು ನಮ್ಮ ಇಂದಿನ ಕಲಾವಿದರ ಮೇಲಾಗಿದ್ದುದನ್ನು ಕಲಾಕೃತಿಗಳ ಮೂಲಕ ತಿಳಿದುಕೊಳ್ಳುವ ಪ್ರಯತ್ನ ನಡೆದಿದೆ. ಈ ಹಿನ್ನೆಲೆಯಲ್ಲಿ ನಮ್ಮ ನಾಡಿನ ಅನೇಕ ಹಿರಿಯ ಕಲಾವಿದರು ತಮ್ಮ ಬದುಕಿನ ದಾರಿಯನ್ನು ಕಂಡುಕೊಳ್ಳಲು ನಾಡಿನ ಹಿರಿಮೆಯನ್ನು ಹೆಚ್ಚಿಸಲು ಸ್ವಾತಂತ್ರ್ಯ ಪೂರ್ವದಲ್ಲಿ ದೂರದ ಮುಂಬೈಯಲ್ಲಿ ಕಲಾ ಶಿಕ್ಷಣ ಪಡೆಯಬೇಕಾಯಿತು. ಬ್ರೀಟಿಷ ಕಲಾ ಶಿಕ್ಷಣ ಪಾಶ್ಚಾತ್ಯ ಪ್ರಭಾವವಿದ್ದರೂ ನಮ್ಮ ಕರ್ನಾಟಕದ ಕಲಾವಿದರು ತಮ್ಮದೇ ಆದ ಸ್ವತಂತ್ರ ರೀತಿಯಲ್ಲಿ, ನಮ್ಮ ಪರಂಪರೆಯ ಹಿನ್ನಲೆಯಲ್ಲಿ, ಸಂಸ್ಕೃತಿಯ ನೆರಳಲ್ಲಿ ಚಿತ್ರ ರಚಿಸುವ ಪದ್ಧತಿಯನ್ನು ಬೆಳೆಸಿಕೊಂಡರು.

ಸ್ವಾತಂತ್ರ್ಯ ನಂತರದ ದಿನಗಳಲ್ಲಿಯೂ ಕರ್ನಾಟಕದ ಕಲಾವಿದರು ವೈಯಕ್ತಿಕ ಕಾಳಜಿಯೊಂದಿಗೆ ನಾಡಿನ ಸಂಸ್ಕೃತಿ ಹಾಗೂ ಧಾರ್ಮಿಕ ಪರಂಪರೆಯೊಂದಿಗೆ ಕಲಾಕೃತಿಗಳನ್ನು ರಚಿಸುತ್ತಾ ನಾಡಿಗೆ ತಮ್ಮ ಕಲಾಕೃತಿಗಳನ್ನು ನೀಡುವುದರೊಂದಿಗೆ ಕಲೆಗೆ ಭದ್ರ ಬುನಾದಿ ಒದಗಿಸಿದರು. ಅವರಲ್ಲಿ ಶಂಕರ ಪಾಟೀಲರು ಒಬ್ಬರಾಗಿದ್ದಾರೆ.

ಸಾಂಸ್ಕೃತಿಕ ರಾಜಧಾನಿ, ಧಾರವಾಡ ಜಿಲ್ಲೆಯ ಗದಗದಲ್ಲಿ ಜನಿಸಿದ ಶಂಕರ ಪಾಟೀಲರು ಉನ್ನತ ಚಿತ್ರಕಲಾ ವ್ಯಾಸಂಗವನ್ನು ದೂರದ ಮುಂಬೈಯ ಪ್ರತಿಷ್ಠಿತ ಕಲಾಸಂಸ್ಥೆಯಾದ ಜೆ. ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಅಪ್ಲೈಡ್ ಆರ್ಟ್‌ನಲ್ಲಿ ಶಿಕ್ಷಣ ಪೂರೈಸಿ ಮುಂಬೈಯ ಕಲಾವಾತಾವರಣದೊಂದಿಗೆ ಒಬ್ಬ ರಾಷ್ಟ್ರೀಯ ಕಲಾವಿದರಾಗಿ ಹೊರ ಹೊಮ್ಮಿದ್ದಾರೆ.

ಚಿತ್ರಕಲಾ ಕ್ಷೇತ್ರಕ್ಕೆ ಅಪಾರವಾದ ಸೇವೆ ಮಾಡುವುದರೊಂದಿಗೆ ಒಬ್ಬ ಸೃಜನಶೀಲ ಕಲಾವಿದರಾಗಿ ಭಾವಚಿತ್ರಗಳು, ರೇಖಾಚಿತ್ರಗಳು, ಸಂಯೋಜನಾ ಚಿತ್ರಗಳು ವ್ಯಕ್ತಿಚಿತ್ರಗಳು, ಜನಪದ ಚಿತ್ರಗಳು, ತಾಂತ್ರಿಕ ಕಲಾಕೃತಿಗಳು ಮುಂತಾದ ವಿಷಯಗಳಲ್ಲಿ ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಚಿತ್ರಕಲಾಕೃತಿಗಳನ್ನು ರಚಿಸುತ್ತ ಪ್ರತಿಷ್ಠಿತ ದಾವಣಗೆರೆ ಸರಕಾರಿ ಚಿತ್ರಕಲಾ ಮತ್ತು ಕರಕುಶಲಕಲೆ ಕಲಾ ಶಾಲೆಯಲ್ಲಿ ವಾಣಿಜ್ಯ ಕಲಾ ವಿಭಾಗದ ಅಧ್ಯಾಪಕರಾಗಿ, ಮುಖ್ಯಸ್ಥರಾಗಿ ಸೇವೆ ಸಲ್ಲಿಸುವದರೊಂದಿಗೆ ಸಾವಿರಾರು ವಿದ್ಯಾರ್ಥಿಗಳಿಗೆ ಕಲಾ ಶಿಕ್ಷಣವನ್ನು ನೀಡಿದ್ದಾರೆ. ಕಲಾಸೇವೆ ಮಾಡಿದ್ದಕ್ಕಾಗಿ ವಿವಿಧ ಸಂಘ ಸಂಸ್ಥೆಗಳಿಂದ ಸನ್ಮಾನಿತರಾಗಿದ್ದು ಅಲ್ಲದೆ ಅಕಾಡೆಮಿಗಳು, ಸರಕಾರ ಇವರ ಸೇವೆಯನ್ನು ಗೌರವಿಸಿ ಸನ್ಮಾನಿಸಲ್ಪಟ್ಟಿವೆ. ಹೀಗೆ ಇವರು ಕಲಾಕ್ಷೇತ್ರಕ್ಕೆ ತಮ್ಮ ಅವಿರತ ಪ್ರಯತ್ನದ ಮೂಲಕ ಉತ್ತಮ ಕಲಾಕೃತಿಗಳನ್ನು ನಾಡಿಗೆ ನೀಡಿದ್ದಾರೆ.

ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳ ಅಧ್ಯಯನವನ್ನು ಇಲ್ಲಿ ಕೈಗೊಂಡಿದ್ದು, ಪಾಟೀಲರ ಕಲಾ ಬದುಕನ್ನು ಹಿಡಿದಿಡುವ ಒಂದು ಸಣ್ಣ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ನೂರಾರು ಕಲಾಕೃತಿಗಳನ್ನು ವಿವಿಧ ವಿಷಯಗಳ ಮೇಲೆ ಹಾಗೂ ವಿವಿಧ ಮಾಧ್ಯಮಗಳಲ್ಲಿ ಚಿತ್ರಿಸಿದ್ದು ಅವರ ಸಾಧನೆಯ ಒಟ್ಟು ನೋಟವನ್ನು ಈ ಕೆಳಗಿನ ಅಧ್ಯಯನಗಳಲ್ಲಿ ಚರ್ಚಿಸಲಾಗಿದೆ.

ಪ್ರಸ್ತುತ ಅಧ್ಯಯನವನ್ನು ಎಂಟು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡು ಚರ್ಚೆ ಮಾಡಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಉದ್ದೇಶವನ್ನು ವಿವರಿಸುವುದರೊಂದಿಗೆ ಅಧ್ಯಯನದ ಸ್ವರೂಪ, ಅಧ್ಯಯನದ ವೈಧಾನಿಕತೆ ಮತ್ತು ವ್ಯಾಪ್ತಿ ಕುರಿತಾಗಿ ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕಲಾವಿದ ಶಂಕರ ಪಾಟೀಲರ ಬದುಕಿನ ಸಾಂಸ್ಕೃತಿಕ ಪರಿಸರ, ಪ್ರೋತ್ಸಾಹ, ಕೌಟುಂಬಿಕ ಹಿನ್ನೆಲೆ, ಬಾಲ್ಯದಲ್ಲಿ ಕಳೆದ ದಿನಗಳು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಪೂರೈಸಿದ ವ್ಯಾಸಂಗದ ದಿನಗಳು, ಕಲೆಯ ಒಲವು, ಕಲಾಚಟುವಟಿಕೆಗಳು, ಕಲಾಭ್ಯಾಸಕ್ಕೆ ಪ್ರೇರಣೆ ನೀಡಿದ ಗುರುಬಳಗ, ನಂತರ ಜೆ. ಜೆ. ಸ್ಕೂಲ್ ಆಫ್ ಆರ್ಟ್ ಮುಂಬೈ ಹಾಗೂ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಧಾರವಾಡದಲ್ಲಿ ಉನ್ನತ ಚಿತ್ರಕಲಾ ಅಧ್ಯಯನದ ಸಂದರ್ಭದಲ್ಲಿ ಪ್ರೇರಕ ಶಕ್ತಿಯಾಗಿ ಬೋಧನೆಗೈದ ಕಲಾಗುರುಗಳು, ಮತ್ತು ಶಂಕರ ಪಾಟೀಲರು ಅಧ್ಯಾಪಕರಾಗಿ ಸೇವೆಗೈದ ವಿವರದ ಚರ್ಚೆಯಿದೆ.

ಮೂರನೆಯ ಅಧ್ಯಾಯದಲ್ಲಿ ಶಂಕರ ಪಾಟೀಲರ ರೇಖಾಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಸೃಜನಶೀಲ ವರ್ಣಚಿತ್ರ, ಅಮೂರ್ತ ಚಿತ್ರ ನವ್ಯಕಲೆ ಮುಂತಾದ ಕಲೆಗಳಿಗೂ ಮೊದಲು ರೇಖಾ ಚಿತ್ರವನ್ನು ಚಿತ್ರಿಸಿಕೊಳ್ಳಬೇಕು. ಕಲಾವಿದನಾಗಬೇಕಾದರೆ ರೇಖೆಯ ಸೊಬಗು, ರೇಖಾಲಾಲಿತ್ಯ ಅವಶ್ಯವಾಗಿರಬೇಕು. ಶಂಕರ ಪಾಟೀಲರ ರೇಖಾ ಕಲಾಕೃತಿಗಳಲ್ಲಿ ಈ ಎಲ್ಲಾ ಅಂಶಗಳು ಸ್ಪಷ್ಟವಾಗಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಇವರು ರಚಿಸಿದ ವಿವಿಧ ಮಾಧ್ಯಮ ಹಾಗೂ ಪರಿಕರಗಳ ಮೂಲಕ, ಹಲವಾರು ವಿಷಯಗಳ ಮೇರೆಗೆ ರೇಖಾ ಚಿತ್ರಗಳನ್ನು ರಚಿಸಿದ್ದು ಅವುಗಳಲ್ಲಿ ಸೃಜನಶೀಲ ಅಭಿವ್ಯಕ್ತತೆ ಎದ್ದು ಕಾಣುತ್ತದೆ. ಶಂಕರ ಪಾಟೀಲರು ರಚಿಸಿದ ರೇಖಾಕೃತಿಗಳಲ್ಲಿ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ವಿಷಯಗಳನ್ನು ಇಟ್ಟುಕೊಂಡು ಪ್ರಾಣಿ, ಪಕ್ಷಿ, ಮಾನವರು, ಗುಡ್ಡ-ಬೆಟ್ಟಗಳು, ಪ್ರಕೃತಿ, ಮರ, ಗಿಡ, ಬಳ್ಳಿ ಮುಂತಾದವುಗಳನ್ನು ಬಳಸಿಕೊಂಡು ಸಂಯೋಜಿಸಿ ರೇಖಾಚಿತ್ರಗಳನ್ನು ಸೃಷ್ಟಿಸಿದ್ದಾರೆ. ಈ ಎಲ್ಲಾ ವಿಷಯಗಳನ್ನು ಅವಲೋಕಿಸಿ ಅವುಗಳನ್ನು ಈ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಶಂಕರ ಪಾಟೀಲರು ರಚಿಸಿದ ವರ್ಣಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದು, ರೇಖಾಚಿತ್ರ, ನಕ್ಷಾಚಿತ್ರ, ಛಾಯಾಚಿತ್ರ ಇತರ ಪ್ರಯೋಗಗಳಂತೆ ವರ್ಣ ಚಿತ್ರಗಳಲ್ಲಿ ಹಲವಾರು ಪ್ರಯೋಗಗಳನ್ನು ಮಾಡಿ ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದಾರೆ. ವರ್ಣಚಿತ್ರಗಳು ಸಮಾಜದ ಸಂಸ್ಕೃತಿಯ ಪರಂಪರೆಯಲ್ಲಿ ಯಾವ ರೀತಿಯಾಗಿ ಬಿಂಬಿತವಾಗಿವೆ ಎಂದು ಪರಿಶೀಲಿಸುವುದರೊಂದಿಗೆ ರಾಜಕೀಯ, ಸಾಮಾಜಿಕ, ಶೃಂಗಾರಾತ್ಮಕ ಈ ಕಲ್ಪನೆಗಳನ್ನು ತಮ್ಮ ಕಲಾಕೌಶಲ್ಯದ ಮೂಲಕ, ಬಣ್ಣಗಳ ಮೈವಳಿಕೆಗಳಿಂದ ಸುಂದರವಾಗಿ ಚಿತ್ರಿಸಿದ್ದಾರೆ. ಪ್ರಾರಂಭದ ದಿನಗಳಲ್ಲಿ ಶೃಂಗಾರ, ನಿಸರ್ಗ,

ವಿಜಯೋತ್ಸವ, ಸಂತೋಷ, ಸಂಭ್ರಮದ ಚಿತ್ರಣವನ್ನು ಚಿತ್ರಿಸಿ ಕಲಾ ಪ್ರೌಢಿಮೆಯನ್ನು ಮೆರೆದಿದ್ದು ಕಂಡುಬರುತ್ತದೆ. ನಂತರದ ದಿನಗಳಲ್ಲಿ ರಚಿತಗೊಂಡ ಇವರ ವರ್ಣ ಕಲಾಕೃತಿಗಳಲ್ಲಿ ಕೆಲವು ಸರಣಿ ಕಲಾಕೃತಿಗಳು ಧಾರ್ಮಿಕ ಹಿನ್ನೆಲೆವುಳ್ಳದ್ದಾಗಿದ್ದರೆ ಇನ್ನೂ ಕೆಲವು ಕಲಾಕೃತಿಗಳು ತಂತ್ರಗಾರಿಕೆಯ ಕಲಾಕೃತಿಗಳನ್ನು ಅಲ್ಲದೆ ಕೆಳಸ್ತರದ, ಬುಡಕಟ್ಟು ಜನರ ಬದುಕಿನ ಭವಣೆಗಳನ್ನು ಆಯಾ ವಿಷಯಕ್ಕನುಗುಣವಾಗಿ ಸರಣಿ ಕಲಾಕೃತಿಗಳನ್ನು ರಚಿಸಿದ್ದಾರೆ. ಸರಣಿ ಕಲಾಕೃತಿಗಳನ್ನು ರಚಿಸುವಾಗ ತಂತ್ರಗಾರಿಕೆಯ ಕಲಾಕೃತಿಗಳಲ್ಲಿ ಆಧ್ಯಾತ್ಮಿಕ, ಧಾರ್ಮಿಕ, ಧ್ಯಾನ ದೈವತ್ವದ ಕಲ್ಪನೆ ಹಾಗೂ ಕಾಮದಭಾವನೆಯ ಕಲ್ಪನೆಗಳನ್ನು ಸಾಂಕೇತಿಕವಾಗಿ ಸೂಚಿಸುವ ಕಲಾಕೃತಿಗಳನ್ನು ರಚಿಸಿದ್ದಾರೆ.

ಇವೆಲ್ಲಾ ಕಲಾಕೃತಿಗಳನ್ನು ಗಮನಿಸಿದಾಗ ಮೊದ ಮೊದಲು ಪ್ರಕೃತಿ, ನಿಸರ್ಗ ಕಾವ್ಯಮಯ, ಸಂಗೀತ, ಸಾಹಿತ್ಯ ವಿವಿಧ ಪ್ರಕಾರಗಳತ್ತ ಒಲವುಹೊಂದಿದ್ದನ್ನು ಗಮನಿಸಲಾಗಿದೆ. ನಂತರದಲ್ಲಿ ಅವರು ರಚಿಸಿರುವ ಕಲಾಕೃತಿಗಳನ್ನು ಅವಲೋಕಿಸಿದಾಗ ಅವರ ಮೇಲೆ ವಿಶೇಷವಾಗಿ ಆಧ್ಯಾತ್ಮದ ಒಲವು ಹೊಂದಿದ ಕಲಾಕೃತಿಗಳ, ಬುಡಕಟ್ಟು ಅಂಶಗಳು, ಮಾಟ, ಮಂತ್ರ, ತಂತ್ರಗಾರಿಕೆಯ ಅಂಶಗಳ ಮೇಲೆ ಚಿತ್ರಗಳು ರಚಿತವಾಗಿರುವುದನ್ನು ಅಧ್ಯಯನದ ಮೂಲಕ ಗುರುತಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಶಂಕರ ಪಾಟೀಲರು ಕ್ಲಿಕ್ಕಿಸಿದ ಪೋಟೋಗ್ರಾಫಿ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಲಲಿತಕಲೆಗಳಿಗೆ ಹತ್ತಿರವಾದ ಛಾಯಾಚಿತ್ರ ಕಲೆಯೂ ವಾಸ್ತವತೆಯನ್ನು ಯಥಾವತ್ತಾಗಿ ನಿರೂಪಿಸುವ ಯಾಂತ್ರಿಕ ಮಾಧ್ಯಮವನ್ನು ಉಪಯೋಗಿಸಿ ಶ್ರೇಷ್ಠ ಛಾಯಾಚಿತ್ರಗಳನ್ನು ಸೆರೆಹಿಡಿದಿದ್ದಾರೆ. ಇವುಗಳಲ್ಲಿ ವಿಶೇಷ ಪ್ರಯೋಗ ಮಾಡುತ್ತಾ ನೆರಳು–ಬೆಳಕಿನ ಸೆರೆ ಹಿಡಿಯುವಿಕೆಯಲ್ಲಿ ಸಿದ್ಧಹಸ್ತರಾಗಿದ್ದಾರೆ. ಈ ಬಗೆಯ ಪ್ರಯೋಗಶೀಲನ ಶಕ್ತಿಯುಳ್ಳ ಈ ಕಲಾವಿದರು ಸ್ಥಿರಾಂಗಣ ಹಾಗೂ ಹೊರಾಂಗಣ ಛಾಯಾಚಿತ್ರಗಳನ್ನು ಸೆರೆಹಿಡಿಯುವ ಸಂದರ್ಭದಲ್ಲಿ ಇವರು ಪ್ರಮುಖವಾಗಿ ನೆರಳು–ಬೆಳಕಿನ ಪ್ರಮಾಣ ಮತ್ತು ಅದರ ಪ್ರಾಮುಖ್ಯತೆಯನ್ನು ಗಮನಿಸಿ ಸಾಯಂಕಾಲದ ಅಥವಾ ಗೋದೂಳಿ ಸಂದರ್ಭದಲ್ಲಿ ಇವರು ಕಣ್ಣುಗಳು ಕ್ಯಾಮರಾದಂತೆ ಕೆಲಸ ಮಾಡಿವೆ. ಈ ರೀತಿ ಸೆರೆ ಹಿಡಿದ ಕಲಾಕೃತಿಗಳಲ್ಲಿ ಪ್ರಮುಖವಾಗಿ ಗ್ರಾಮೀಣ ಪ್ರದೇಶ, ನಿಸರ್ಗ, ಮತ್ತು ವ್ಯಕ್ತಿ ಭಾವಚಿತ್ರಗಳನ್ನು ಕುರಿತು ವಿವೇಚಿಸಲಾಗಿದೆ. ಅಲ್ಲದೆ ಶಂಕರ ಪಾಟೀಲರು ಭಾರತೀಯ ಶಾಸ್ತ್ರೀಯ ಸಂಗೀತಕ್ಕೆ ಸಂಬಂಧಿಸಿದಂತೆ ಉತ್ತಮ ಛಾಯಾಚಿತ್ರಗಳನ್ನು ಅಲ್ಲದೇ ಜನಸಮುದಾಯದ ತಾತ್ವಿಕ, ಮನೋವೈಜ್ಞಾನಿಕ ಧಾರ್ಮಿಕೇತರ ವಿಷಯಗಳನ್ನು ತಮ್ಮ ಛಾಯಾಚಿತ್ರಗಳಲ್ಲಿ ಭಿನ್ನ ಭಿನ್ನವಾಗಿ

ಸೆರೆ ಹಿಡಿದ ಬಹುತೇಕ ಛಾಯಾ ಚಿತ್ರಗಳು ಬೆಳಗಾವಿ, ಧಾರವಾಡ, ದಾವಣಗೆರೆ, ಚಿತ್ರದುರ್ಗ, ಹಂಪೆ ಪರಿಸರ ಮುಂತಾದ ಸ್ಥಳಗಳ ದೃಶ್ಯಗಳನ್ನು ಸೆರೆ ಹಿಡಿದಿದ್ದಾರೆ. ಬಹು ಮುಖ್ಯವಾಗಿ ಅಮೇರಿಕಾದ ಪ್ರವಾಸದ ದಿನಗಳಲ್ಲಿ ಅಲ್ಲಿನ ಪರಿಸರ, ಜನಜೀವನ, ಅಲ್ಲಿಯ ಸಂಸ್ಕೃತಿ ಕುರಿತಾದ ಛಾಯಾ ಚಿತ್ರಗಳಲ್ಲಿ ಇವರಲ್ಲಿರುವ ತಮ್ಮ ಕ್ರೀಯಾಶೀಲತೆಯನ್ನು ಅನಾವರಣಗೊಳಿಸಿದ್ದಾರೆ.

ಆರನೆಯ ಅಧ್ಯಾಯದಲ್ಲಿ ಶಂಕರ ಪಾಟೀಲರ ಮೇಲಾದ ಪ್ರಭಾವ, ಪ್ರೇರಣೆ, ಅನುಸರಿಸಿದ ಶೈಲಿ ಮತ್ತು ತಂತ್ರಗಾರಿಕೆಯ ಅಧ್ಯಯನವನ್ನು ಈ ಅಧ್ಯಾಯದಲ್ಲಿ ಕೈಗೊಳ್ಳಲಾಗಿದೆ.

ಪ್ರತಿಯೊಂದು ಕಲಾಕೃತಿಯ ನಿರ್ಮಾಣದ ಹಿಂದಿನ ಅನುಭವ, ಪ್ರಭಾವ, ಪ್ರೇರಣೆ, ತಂತ್ರಗಾರಿಕೆ, ಕಲಾಮಾಧ್ಯಮ, ಚಿತ್ರರಚನಾ ಶೈಲಿ, ವರ್ಣಗಾರಿಕೆ ಮುಂತಾದ ಅಂಶಗಳು ಗಾಢವಾದ ಪರಿಣಾಮವನ್ನು ಬೀರುತ್ತವೆ.

ಬಾಲ್ಯದಲ್ಲಿ ತಂದೆ-ತಾಯಿಗಳ ಪ್ರೇರಣೆ, ಶಿಸ್ತು, ಸಂಸ್ಕೃತಿ, ಧಾರ್ಮಿಕ ಪ್ರಭಾವ ನಂತರದಲ್ಲಿ ಪ್ರಕೃತಿ, ಸೌಂದರ್ಯ, ಪರಿಸರ ನಂತರದಲ್ಲಿ ಬಿಜಾಪೂರದ ಪರಿಸರ, ಕಲೆಗಳ ಪ್ರಭಾವ ಪ್ರೇರಣೆ ಮುಂದೆ ಮಂಬೈಯ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಕಲಾಭ್ಯಾಸದ ಹಿನ್ನೆಲೆ, ಗುರುಗಳ ಮಾರ್ಗದರ್ಶನ, ಮುಂಬೈಯ ಕಲಾ ವಾತಾವರಣ ಕಲಾಅಧ್ಯಯನ ಮಾಡುವ ಸಂದರ್ಭದಲ್ಲಿ ಶಂಕರ ಪಾಟೀಲರಿಗೆ ಕಲಾಬೋಧನೆ ಮಾಡಿದ ಗುರುಗಳಾದ ಜಿ.ಎಸ್. ದಂಡಾವತಿಮಠ, ಸಿ.ವಿ. ಶಿರೋಡಕರ್, ವಿ.ಆರ್. ಅಂಬೇಕರ್ ಅಲ್ಲದೆ ಕರ್ನಾಟಕದ ಮಿಣಜಗಿಯವರ ಪ್ರೇರಣೆ ಯಾಗಿರುವುದನ್ನು ಅವರ ಕಲಾಕೃತಿಗಳಲ್ಲಿ ಕಂಡುಕೊಳ್ಳಲಾಗಿದೆ. ರೇಖಾ ಕೃತಿಗಳಲ್ಲಿ ವಾಸ್ತವವಾದ ನೈಜತೆಯಿಂದ ಕೂಡಿದ ರೇಖಾಚಿತ್ರಗಳನ್ನು ರಚಿಸುತ್ತಿದ್ದರು. ನಂತರದಲ್ಲಿ ನವ್ಯ ಪ್ರಯೋಗಗಳನ್ನು ಕಂಡುಕೊಳ್ಳತ್ತಾ ಸಮಕಾಲೀನ ಆಧುನಿಕತೆಯಲ್ಲಿ ಘನಾಕೃತಿಗಳ ಶೈಲಿಯತ್ತ ರಚನೆ ಮಾಡಿರುದನ್ನು ಕಂಡುಕೊಳ್ಳಲಾಗಿದೆ.

ವರ್ಣಚಿತ್ರಗಳ ರಚನೆಯಲ್ಲಿ ಭಾರತೀಯ ಕಲಾ ಪರಂಪರೆಯ ಸಾಂಪ್ರದಾಯಿಕ ಜಾನಪದ ಶೈಲಿಯಲ್ಲಿ ಸಂಯೋಜನ ವರ್ಣ ಚಿತ್ರಗಳನ್ನೂ ರಚಿಸಿದ್ದಾರೆ. ರಮಣೀಯ ಶೈಲಿ, ಅಮೂರ್ತ ಶೈಲಿ, ಕ್ಯೂಬಿಸಂ ಶೈಲಿ, ಫೋಟೋ ರಿಯಾಲಿಸಂ ಶೈಲಿ, ಪಾಶ್ಚಾತ್ಯ ಹಾಗೂ ಭಾರತೀಯ ಶೈಲಿಯ ಸಮ್ಮಿಲನ ಶೈಲಿಯ ಚಿತ್ರಗಳಿವೆ. ಹೀಗೆ ಅನೇಕ ಶೈಲಿಗಳಲ್ಲಿ ಭಾವಚಿತ್ರ, ಪ್ರಕೃತಿಚಿತ್ರ, ಸಂಯೋಜನಾ ಚಿತ್ರಗಳು ಜಲವರ್ಣ, ತೈಲವರ್ಣ, ವುಡ್‌ಬರ್ನಿಂಗ್‌ನಂತಹ ಮಾಧ್ಯಮಗಳನ್ನು ಬಳಸಿಕೊಂಡು

ರಚಿಸಿದ ಅವರ ಕಲಾ ಕೃತಿಗಳಲ್ಲಿ ತಂತ್ರಗಾರಿಕೆ, ಸಾಂಕೇತಿಕ ಛಾಯೆಗಳು ಮೂ ಪರಿಣಾಮ, ಅರ್ಥ ಸ್ವರೂಪಗಳನ್ನು ಈ ಪ್ರಸ್ತುತ ಅಧ್ಯಾಯದಲ್ಲಿ ಗುರುತಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಶಂಕರ ಪಾಟೀಲರ ಕಲಾ ಸಾಹಿತ್ಯ ಮತ್ತು ಕಲಾ ಚಟುವಟಿಕೆಗಳ ಬಗ್ಗೆ ಚರ್ಚಿಸಲಾಗಿದೆ. ಕಲಾವಿದರಾದ ಶಂಕರ ಪಾಟೀಲರು ಕಲೆಯ ಜೊತೆಗೆ, ಸಾಹಿತ್ಯದ ಕ್ಷೇತ್ರದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ಒಬ್ಬ ಕಲಾ ವಿಮರ್ಶಕರಾಗಿ, ಕಲಾ ಸಾಹಿತಿಯಾಗಿ, ಹಲವಾರು ಲೇಖನಗಳನ್ನು, ಗ್ರಂಥಗಳನ್ನು, ಕವನ ಸಂಕಲನಗಳನ್ನು, ಪ್ರವಾಸ ಕಥನಗಳನ್ನು ರಚಿಸಿದ್ದು ಅವುಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಿ ವಿವೇಚಿಸಲಾಗಿದೆ. ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಏಕವ್ಯಕ್ತಿ ಕಲಾಪ್ರದರ್ಶನ, ಕಲಾ ಪ್ರಾತ್ಯಕ್ಷಿಕೆ, ಉಪನ್ಯಾಸ, ಪಾಲ್ಗೊಂಡ ಶಿಬಿರಗಳು, ಸಂವಾದ ಗೋಷ್ಠಿ ಹಾಗೂ ಸಂಘ ಸಂಸ್ಥೆಗಳಲ್ಲಿ ಕಾರ್ಯನಿರ್ವಾಹಕರಾಗಿ ಸೇವೆ ಸಲ್ಲಿಸಿದ ವಿವರಗಳನ್ನು ಸ್ಥೂಲವಾಗಿ ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನಕ್ಕೆ ಒಳಪಡಿಸಿ ಸಮೀಕ್ಷಿಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಮಹಾಪ್ರಬಂಧದ ಎಲ್ಲಾ ಅಧ್ಯಾಯಗಳ ಸಮೀಕ್ಷೆಯನ್ನು ಒಳಗೊಂಡ ಒಟ್ಟಾರೆ ಅಧ್ಯಾಯಗಳ ಫಲಿತಗಳಿವೆ.

ಅಧ್ಯಯನದ ಫಲಿತಗಳು:

ಸೃಜನಶೀಲ ಕಲಾವಿದರಾಗಿ

೧. ರೇಖಾ ಚಿತ್ರಗಳು, ಭಾವಚಿತ್ರಗಳು, ವರ್ಣ ಸಂಯೋಜನಾ ಚಿತ್ರಗಳು, ಪ್ರಕೃತಿ ಚಿತ್ರಗಳು ಹೀಗೆ ಅನೇಕ ಪ್ರಕಾರಗಳಲ್ಲಿ ಚಿತ್ರ ರಚಿಸಿದ್ದಾರೆ.

೨. ರೇಖಾ ಚಿತ್ರಗಳಲ್ಲಿ ಭಾವಚಿತ್ರಗಳು, ನೃತ್ಯದ ವಿವಿಧ ಭಂಗಿಗಳು, ಪ್ರಕೃತಿ, ಪ್ರಾಣಿ, ಪಕ್ಷಿಗಳು ವಿವಿಧ ವಿಷಯಗಳ ಮೇರೆಗೆ ಕೃತಿಗಳ ರಚನೆಯಲ್ಲಿ ರೇಖಾಲಾಲಿತ್ಯ, ರೇಖಾ ಪ್ರಭುತ್ವ, ರೇಖಾ ಸೊಬಗು ಮುಂತಾದ ಅಂಶಗಳು ಗಮನ ಸೆಳೆಯುವವು.

೩. ವರ್ಣಚಿತ್ರಗಳಲ್ಲಿ, ಸಂಯೋಜನಾ ಚಿತ್ರಗಳು, ಭಾವ ಚಿತ್ರಗಳು, ವ್ಯಕ್ತಿ ಚಿತ್ರಗಳು, ಪ್ರಕೃತಿ ಚಿತ್ರಣ ಮುಂತಾದ ವಿಷಯಗಳಲ್ಲಿ ಚಿತ್ರ ರಚಿಸಿದ್ದು, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಜನಪದ ಹಿನ್ನೆಲೆಯ ವಿಷಯಗಳನ್ನೊಳಗೊಂಡ ಕಲಾಕೃತಿಗಳನ್ನು ರಚಿಸುವದರ ಮೂಲಕ ಸಮಾಜಕ್ಕೆ ಉತ್ತಮ ಸಂಸ್ಕಾರ ಕೊಡುವ ಸಂದೇಶವನ್ನು ಪ್ರತಿಬಿಂಬಿಸಿದ್ದಾರೆ.

೪. ಫೋಟೋಗ್ರಾಫಿ ಕಲೆಯಲ್ಲಿ ಕಪ್ಪು-ಬಿಳುಪಿನ ಚಿತ್ರಗಳು, ವರ್ಣಚಿತ್ರಗಳು ಇವೆ.

೫. ಇವರ ಕಲಾಕೃತಿಗಳು ಮೂರು ತಿಂಗಳ ಕಾಲ ದೇಶವಿದೇಶಗಳಲ್ಲಿ ಪ್ರದರ್ಶನಗೊಂಡಿದ್ದು ಕಲಾಸಕ್ತರ ಮೆಚ್ಚುಗೆ ವ್ಯಕ್ತಪಡಿಸಿವೆ. ಭಾರತೀಯ ಕಲೆಯನ್ನು ವಿದೇಶಿಯರಿಗೆ ಪರಿಚಯಿಸುವಲ್ಲಿ ಪಾಟೀಲರ ಪ್ರಯತ್ನವನ್ನು ಗುರುತಿಸಲಾಗಿದೆ.

೬. ಪಾಟೀಲರ ಚಿತ್ರಗಳಲ್ಲಿ ಗ್ರಾಮ ಪರಿಸರದ ಚಿತ್ರಗಳು ಸಮಾಜಮುಖಿಯಾದ ಚಿತ್ರಗಳ ಸಂಖ್ಯೆಯೇ ಹೆಚ್ಚಾಗಿ ಕಂಡುಬರುತ್ತವೆ.

೭. ಪಾಟೀಲರು ಆಡಳಿತಗಾರರಾಗಿ, ಅಧ್ಯಾಪಕರಾಗಿ, ಛಾಯಾಚಿತ್ರಕಾರರಾಗಿ, ಕಲಾಸಾಹಿತಿಯಾಗಿ, ರೇಖಾಚಿತ್ರ ವರ್ಣಚಿತ್ರಕಾರರಾಗಿ, ಶಿಕ್ಷಣ ಸಂಸ್ಥೆಯ ರೂವಾರಿಯಾಗಿ, ಹೊಯ್ಸಳ ವಾರಪತ್ರಿಕೆಯ ಸಂಪಾದಕರಾಗಿ, ಸಂಗೀತಗಾರರಾಗಿ, ಕಲಾಕೃತಿಗಳ ಸಂಗ್ರಹಕಾರರಾಗಿ ಹೀಗೆ ಹತ್ತು ಹಲವು ಅಭಿರುಚಿಗಳನ್ನು ಹೊಂದಿದ ಅಪರೂಪದ ಕಲಾವಿದ, ಅವರ ವೈವಿಧ್ಯಮಯವಾದ ಕಲಾಬದುಕನ್ನು ಕಟ್ಟಿಕೊಡುವ ಪ್ರಯತ್ನ ಇಲ್ಲಿ ಸ್ಥೂಲವಾಗಿ ಮಾಡಿಕೊಡಲಾಗಿದೆ.

೮. ಚದುರಿಹೋದ ಪಾಟೀಲರ ಕಲಾಕೃತಿಗಳನ್ನು ಒಂದೆಡೆಗೆ ದಾಖಲಿಸುವ ಮತ್ತು ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನವಿಲ್ಲಿದೆ.

೯. ಪಾಟೀಲರ ಕಲಾಕೃತಿಗಳ ಹಿಂದಿರುವ ಆಶಯಗಳನ್ನು ಹಲವಾರು ಅವರ ಸ್ನೇಹಿತರು, ಗುರುಗಳು, ಸಮಕಾಲಿನ ಕಲಾವಿದರಿಂದ ಸಂದರ್ಶನ ನೆಡೆಸಿ ಅಧ್ಯಯನ ಮಾಡಲಾಗಿದೆ.

೧೦. ದಿನಪತ್ರಿಕೆ, ವಾರ ಪತ್ರಿಕೆ, ತಿಂಗಳ ಪತ್ರಿಕೆಗಳಲ್ಲಿ ಕಲೆಗೆ ಸಂಬಂಧಿಸಿ ಹಲವಾರು ಲೇಖನಗಳು ಪ್ರಕಟವಾಗಿವೆ. ಇವು ಅವರ ಕಲಾ ಸಾಹಿತ್ಯಕ್ಕೆ ನೀಡಿದ ಕೊಡುಗೆಯಾಗಿವೆ.

ಪಾಟೀಲರು ಕಲಾ ಶಿಕ್ಷಣ ಪಡೆದದ್ದು ಅಕಾಡೆಮಿಕ್ ಮತ್ತು ಪಾಶ್ಚಾತ್ಯ ಕಲೆಯ ಪ್ರಭಾವಗಳ ಅವಧಿಯಲ್ಲಿ. ಆಗಿನ ಸಂದರ್ಭದಲ್ಲಿ ಕಲೆಯಲ್ಲಿ ಭಾರತೀಯತೆಯನ್ನು ಕಾಯ್ದುಕೊಳ್ಳುವ ಪ್ರಯತ್ನಗಳು ನಡೆದಿದ್ದವು. ಪಾಶ್ಚಾತ್ಯ ಕಲೆಯ ನೈಜಶೈಲಿಯ ಪ್ರಭಾವ ತೀವ್ರವಾಗಿಯೇ ಇತ್ತು. ಭಾರತೀಯ ಕಲಾಕ್ಷೇತ್ರದಲ್ಲಿ ಇದೊಂದು ಸಂದಿಗ್ಧತೆ ಹಾಗೂ ದ್ವಂದ್ವಗಳ ಕಾಲ.

ಭಾರತೀಯ ಕಲಾಪರಂಪರೆ ಸಾಂಪ್ರದಾಯಿಕ ಕಲಾತತ್ವ, ಪಾಶ್ಚಾತ್ಯ ತಂತ್ರಶೈಲಿ, ಸಮಕಾಲೀನ ರೂಪಗಳ ಮೂಲಕ ನವ್ಯ ರೂಪದಲ್ಲಿ ಅಭಿವ್ಯಕ್ತಿಸಿ ಅವೆರಡರ ನಡುವೆ ಸಮನ್ವಯವನ್ನು ಪಾಟೀಲರು ತಮ್ಮ ಕಲಾಕೃತಿಗಳಲ್ಲಿ ಮೂಡಿಸಿದ್ದಾರೆ.

ಪಾಟೀಲರು ಭಾರತದ ವಿವಿಧ ಪ್ರದೇಶಗಳ ಸಂಸ್ಕೃತಿ, ಪರಂಪರೆ, ದೈನಂದಿನ ಬದುಕಿನ ಅಂಶಗಳನ್ನು ತಮ್ಮ ಕಲಾಕೃತಿಯ ವಸ್ತು ವಿಷಯವನ್ನಾಗಿ ಬಳಸಿಕೊಳ್ಳುತ್ತಿದ್ದುದು ವಿಶೇಷವಾಗಿದೆ. ಇವರ ಕಲಾಕೃತಿಗಳು ರಮಣೀಯತೆ, ಸಂಭ್ರಮ, ಉತ್ಸಾಹ, ಆಧ್ಯಾತ್ಮಿಕತೆಗಳ ದರ್ಶನವನ್ನು ನೀಡುತ್ತವೆ. ಲ್ಯಾಂಡ್‌ಸ್ಕೇಪ್ ಚಿತ್ರಣ ರಚನೆಯಲ್ಲಿ ಬೆಟ್ಟ, ಗುಡ್ಡ, ಗಿಡ–ಮರ, ಮೋಡಗಳನ್ನು ಮತ್ತು ಪ್ರಕೃತಿಯ ವೈಶಿಷ್ಟ್ಯವನ್ನು ಕಲಾಕೃತಿಯಲ್ಲಿ ರೂಪಗೊಂಡು ಜೀವಂತಿಕೆಯ ಹಾಗೂ ಮೋಡ ಕವಿದ ವಾತಾವರಣದ ಅನುಭವ ನೀಡುತ್ತದೆ.

ಭಾರತೀಯ ಕಲೆಯ ಅವಿಭಾಜ್ಯ ಅಂಗಗಳಾದ ಸಂಗೀತ, ನೃತ್ಯ ಹಾಗೂ ಗ್ರಾಮೀಣ ಪ್ರದೇಶದ ಜನಪದರ ಆಚರಣೆಗಳಿಗೆ ಪ್ರಭಾವಿತರಾಗಿ 'ಜಾಯ್ ಆಫ್ ಲೈಫ್' ಸರಣಿ ಕಲಾಕೃತಿಗಳನ್ನು ರಚಿಸಿದ್ದಾರೆ. ಈ ಜನಪದರ ಧಾರ್ಮಿಕ ಆಚರಣೆಯ ನೃತ್ಯಗಳ ಕ್ರಿಯೆಗಳಿಗೆ ಪ್ರಾಮುಖ್ಯತೆ ನೀಡಿ ಚಿತ್ರಕಲಾಕೃತಿಯ ವಿಷಯವಸ್ತುವನ್ನಾಗಿ ಬಳಸಿ ವಾರ್ಲಿಕಲೆಯ ರೇಖೆಗಳನ್ನು ಬಳಸಿ ತಮ್ಮದೇ ಆದ ವರ್ಣಸಂಯೋಜನೆಯಲ್ಲಿ ದಾಖಲಿಸುವ ಪ್ರಯತ್ನ ಪಾಟೀಲರದು.

ಪಾಟೀಲರು ಪಾಶ್ಚಾತ್ಯ ಶೈಲಿಯಲ್ಲಿ ಕಲೆಯ ಅಧ್ಯಯನ ಮಾಡಿದರೂ, ಭಾರತೀಯ ಪರಂಪರೆಯ ಸಮನ್ವಯವನ್ನು ಅಭಿವ್ಯಕ್ತಿಸಿದ್ದಾರೆ. ಪಾಟೀಲರ 'ತಂತ್ರ' ಸರಣಿ ಕೃತಿಗಳು ಪಂಚಭೂತಗಳನ್ನೊಳಗೊಂಡ ಸಾಂಕೇತಿಕ ನಿರೂಪಣೆಯೊಂದಿಗೆ ಇಂದಿನ ಸಮಕಾಲೀನ ಅಂಶಗಳನ್ನು ಅಳವಡಿಸಿಕೊಂಡಿದ್ದಾರೆ. ಕಲೆಯು ಏನೇ ಇದ್ದರೂ ಅದು ಪ್ರಕೃತಿಯನ್ನು ಅನುಸರಿಸುತ್ತದೆ ಎಂಬುದಕ್ಕೆ ಪಾಟೀಲರ 'ತಂತ್ರ' ಸರಣಿ ಚಿತ್ರಗಳೇ ಸಾಕ್ಷಿ. ಹೀಗೆ ಸೃಷ್ಟಿಯ ಹುಟ್ಟಿಗೆ ಕಾರಣವಾದ ಪಂಚಭೂತಗಳಾದ ಭೂಮಿ, ನೀರು, ಗಾಳಿ, ಆಕಾಶ ಮತ್ತು ಬೆಂಕಿಗಳನ್ನು ಸಾಂಕೇತಿಕವಾಗಿ ಬಳಸಿ ಸ್ಪಷ್ಟವಾಗಿ ನಿರೂಪಿಸಿದ್ದಾರೆ.

ನಮ್ಮ ನವ್ಯದ ಸಂದರ್ಭದಲ್ಲಿ 'ಚಿತ್ರ ಮಾತನಾಡಬೇಕು ಕಲಾವಿದನಲ್ಲ' ಎಂದು ಕಲೆಯ ಬಗ್ಗೆ ಬಹುತೇಕ ಕಲಾವಿದರು ಹೇಳಿರುವುದನ್ನು ನಾವು ಕೇಳಿದ್ದೇವೆ. ಈ ಮಾತುಗಳು ನಮಗೆ ಮೊದಲು ಕೇಳಿಬಂದದ್ದು ಪಾಶ್ಚಾತ್ಯರಲ್ಲಿ. ಬಹುಜನ ಕಲಾವಿದರು ಈ ವಿಚಾರವನ್ನು ಒಪ್ಪಿಕೊಂಡಿದ್ದಾರೆ. ಪಾಟೀಲರ ಕಲಾಕೃತಿ ರಚನೆಯಲ್ಲಿ ಈ ಮೇಲಿನ ಅಂಶಗಳನ್ನುಅಳವಡಿಸಿಕೊಂಡು ಕ್ರಿಯಾತ್ಮಕವಾಗಿ ಹೊಸ ಹೊಸ ಪ್ರಯೋಗಗಳ ಮೂಲಕ ರಚಿಸಿದ ವುಡ್‌ಬರ್ನ್ ಕಲಾಕೃತಿಗಳು, ಆಧುನಿಕ ಕಲಾಕೃತಿಗಳು, ಪ್ರಕೃತಿ ದೃಶ್ಯಗಳು ಮುಂತಾದ ಚಿತ್ರಗಳಲ್ಲಿ ನೋಡುಗನನ್ನು ಅಚ್ಚರಿಗೊಳಿಸುವಂತಹ ಭಾವನೆಯನ್ನು

ಅಭಿವ್ಯಕ್ತಿಸಿದ್ದಾರೆ. ಈ ಎಲ್ಲ ಕೃತಿಗಳಲ್ಲಿ ಅವರ ಹಿಂದಿನ ಅನುಭವ, ಕಾಲ ಮತ್ತು ಶೈಲಿಗಳು ಭಿನ್ನವಾಗಿರದೇ ತಮ್ಮದೇ ಆದ ನಿಲುವಿನಲ್ಲಿ ನಿಲ್ಲುತ್ತವೆ.

ಪಾಟೀಲರ ಕಲಾಕೃತಿಗಳಲ್ಲಿ ಅವರ ಬದುಕಿನ ತುಡಿತ, ಪರಿಸರ ಆಚರಣೆಗಳನ್ನು ರಾಷ್ಟ್ರ-ಅಂತರಾಷ್ಟ್ರೀಯ ಮಟ್ಟಕ್ಕೆ ತೆರೆದಿಟ್ಟ ಕೃತಿಗಳು ನಮ್ಮ ದೇಶದ ಶ್ರೀಮಂತ ಆಸ್ತಿಯಾಗಿವೆ.

❖ ❖ ❖

ಅನುಬಂಧಗಳು

- ಗ್ರಂಥಋಣ
- ಶಂಕರ ಪಾಟೀಲರ ಕುರಿತ ಪತ್ರಿಕಾ ಲೇಖನಗಳು
- ಸಂದರ್ಶನಗೈದ ವಕ್ತೃಗಳ ವಿವರ
- ಪಾಟೀಲರು ಪಾಲ್ಗೊಂಡ ರಾಜ್ಯಮಟ್ಟದ ಕಲಾಪ್ರದರ್ಶನಗಳು
- ಪಾಟೀಲರು ಪಾಲ್ಗೊಂಡ ರಾಷ್ಟ್ರಮಟ್ಟದ ಕಲಾಪ್ರದರ್ಶನಗಳು
- ಪಾಟೀಲರ ಏಕವ್ಯಕ್ತಿ ಕಲಾಪ್ರದರ್ಶನಗಳು
- ಪಾಟೀಲರ ಕಲಾಕೃತಿಗಳ ಸಂಗ್ರಹದ ನೆಲೆಗಳು
- ಪಾಟೀಲರು ನೀಡಿದ ಉಪನ್ಯಾಸ ಮತ್ತು ಭಾಗವಹಿಸುವಿಕೆ
- ಪಾಟೀಲರ ಗ್ರಂಥಗಳು
- ಶ್ರೀ ಶಂಕರ ಪಾಟೀಲ ಸ್ಮಾರಕ ಕಲಾಪ್ರಶಸ್ತಿ ಪುರಸ್ಕೃತರು

ಅನುಬಂಧ

ಗ್ರಂಥಋಣ

* ಆಧುನಿಕ ಕಲೆ — ಕೆ.ಎಸ್. ಶ್ರೀನಿವಾಸಮೂರ್ತಿ
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೧
* ಇನ್‌ಸ್ಟಾಲೇಷನ್ ಕಲಾ ಪ್ರಪಂಚ — ಕೆ.ವಿ. ಸುಬ್ರಮಣ್ಯಂ
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೮
* ಎಂ.ಬಿ. ಪಾಟೀಲ — ವೆಂಕಟಲಕ್ಷ್ಮಿ
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೦
* ಎಸ್.ಜಿ. ವಾಸುದೇವ್ — ಕೆ.ವಿ. ಸುಬ್ರಮಣ್ಯಂ
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೧
* ಕರ್ನಾಟಕದ ಜನಪದ ಚಿತ್ರಕಲೆ — ಡಾ. ಎಸ್.ಸಿ. ಪಾಟೀಲ
  ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೩
* ಕಲಾವಿದ ಡಿ.ವಿ. ಹಾಲಭಾವಿ — ಶಂಕ್ರಪ್ಪ ಕುಂದಗೋಳ
  ಅವಿರತ ಪುಸ್ತಕ ಸಂಸ್ಥೆ, ಬೆಂಗಳೂರು, ೨೦೦೯
* ಕಲಾವಿದ ಆರ್.ಎಂ. ಹಡಪದ
  ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ
  ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೨೦೦೩
* ಕಲಾ ಚರಿತ್ರೆ — ಅಶೋಕ ಟಿ. ಅಕ್ಕಿ
  ಎಂ.ಎಸ್. ಶಾಬಾದಿ ಮಠ ಬುಕ್‌ಡಿಪೋ, ಗದಗ, ೧೯೯೩-೯೪
* ಕಲೆಗಳು — ಮ. ಶ್ರೀಧರಮೂರ್ತಿ
  ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
* ಕಲಾ ಸಂಪದ — ಬಿ.ಜಿ. ಅವಟಿ
  ಕರ್ನಾಟಕ ಚಿತ್ರಕಲಾ ಶಿಕ್ಷಣ ಸಂಸ್ಥೆಗಳ ಒಕ್ಕೂಟ, ಬೆಂಗಳೂರು
* ಕಲೆ ಮತ್ತು ನಾನು — ಎಂ.ಟಿ.ವಿ. ಆಚಾರ್ಯ
  ಆಚಾರ್ಯ ಚಿತ್ರಕಲಾಭವನ, ಬೆಂಗಳೂರು, ೧೯೯೫
* ಕಣ್ಣುಚ್ಚಿ ಕಂಡವರು — ಶಂಕರ ಪಾಟೀಲ
  ಲೋಹಿಯಾ ಪ್ರಕಾಶನ, ಗಾಂಧಿನಗರ, ಬೆಂಗಳೂರು, ೨೦೦೧
* ಕಲೆಗಳಲ್ಲಿ ಸಂಸ್ಕೃತಿ ಹಾಗೂ ಪರಂಪರೆ — ಸಂ. ಆರ್.ವಿ. ಶಾಂತರಾಜ
  ಸ್ಪಂದನಾ ಚಿತ್ರಕಲಾವಿದರ ಯುವಬಳಗ, ೧೯೮೯
* ಕಲಾವಿದ ಹೆಬ್ಬಾರರ ರೇಖಾ ಲಾವಣ್ಯ — ವ್ಯಾಸರಾಯಬಲ್ಲಾಳ
  ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೯
* ಕಟ್ಟಿಂಗೇರಿ ಕೃಷ್ಣ ಹೆಬ್ಬಾರ ಕಲೆ ಮತ್ತು ಬದುಕು — ಕು.ಶಿ. ಹರಿದಾಸಭಟ್ಟ
  ಗೋವಿಂದ ಪೈ ಸಂಶೋಧನ ಸಂಸ್ಥೆ, ಉಡುಪಿ
* ಕಲಾನುಭವ — ವಿ.ಸಿತಾರಾಮಯ್ಯ
  ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೬

* **ಕಲೆಯ ನೆಲೆ** — ವಿ.ಕೃ. ಗೋಕಾಕ
  ನಿರ್ದೇಶಕರು
  ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು
* **ಕಲಾ ಸಿದ್ಧಾಂತ** — ವಿ.ಕೃ. ಗೋಕಾಕ
  ಸಾಹಿತ್ಯ ಭಂಡಾರ, ಹುಬ್ಬಳ್ಳಿ
* **ಕಲೆ ಮತ್ತು ರಸ ಸ್ವಾದನೆ** — ಪ್ರೊ. ಎಂ.ಎಚ್. ಕೃಷ್ಣಯ್ಯ
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೮
* **ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಚಿತ್ರಕಲೆ** — ಅ. ಸುಂದರ
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೪
* **ಕರ್ನಾಟಕ ದೃಶ್ಯಕಲಾ ಸಾಹಿತ್ಯ** — ಡಾ. ಪ್ರೇಮಾನಂದ ಲಕ್ಕಣ್ಣವರ
  ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ
  ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
* **ಕಲಾ ಪ್ರಪಂಚ** — ಶಿವರಾಮ ಕಾರಂತ
  ಎಸ್.ಬಿ.ಎಸ್. ಪಬ್ಲಿಷರ್ಸ್, ಬೆಂಗಳೂರು, ೨೦೦೯
* **ಕಲಾ ಕೋಶ** — ಎನ್. ಮರಿಶಾಮಾಚಾರ್
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೯
* **ಕಲಾ ಚರಿತ್ರೆ** — ಎನ್. ಮರಿಶಾಮಾಚಾರ್
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
* **ಕರ್ನಾಟಕದ ಕಲೆಗಳು ಸಂಪುಟ–೩** — ಬೆನಕನಹಳ್ಳಿ ಜಿ. ನಾಯಕ
  ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
* **ಕೆ.ಟಿ. ಶಿವಪ್ರಸಾದ** — ಎಚ್. ಎಲ್. ಅನಿಲಕುಮಾರ
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೦
* **ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು** — (ಸಂ.) ಎಸ್.ಸಿ. ಪಾಟೀಲ
  ವಜ್ರಮಹೋತ್ಸವ ಸ್ಮರಣ ಸಂಚಿಕೆ
  ಹಾಲಭಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡ, ೧೯೯೫
* **ಚಿತ್ರ–ಚಿತ್ತ** — ಚಿ.ಸು. ಕೃಷ್ಣಶೆಟ್ಟಿ
  ಇಳಾ ಪ್ರಕಾಶನ, ಬೆಂಗಳೂರು, ೨೦೦೦
* **ಚಿತ್ರಕಲಾ ದರ್ಪಣ** — ವಿ.ಟಿ. ಕಾಳೆ
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೭
* **ಚಿತ್ರಾಕ್ಷಿ** — (ಸಂ.) ಡಾ. ಎಸ್.ಸಿ. ಪಾಟೀಲ
  ವಜ್ರಮಹೋತ್ಸವ ಸ್ಮರಣ ಸಂಚಿಕೆ
  ಹಾಲಭಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡ, ೧೯೯೫
* **ಚಿತ್ರಕಲಾವಿದ ಎ.ಬಿ. ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು** — ರವೀಂದ್ರ ಎಸ್. ಕಮ್ಮಾರ
  ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ
  ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೨೦೦೮
* **ಚಿತ್ರಾಂತರಂಗ** — ಶಂಕರ ಪಾಟೀಲ
  ಪ್ರಗತಿ ಪ್ರಕಾಶನ, ದಾವಣಗೆರೆ

* **ಜೆ.ಎಸ್. ಖಂಡೇರಾವ್** — ಕುಪ್ಪಣ್ಣ ಕಂದಗಲ್ಲ
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
* **ದೃಶ್ಯ ಕಲಾವಿದರು** — ಎನ್. ಮರಿಶಾಮಾಚಾರ್
  ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩
* **ದೃಶ್ಯಕಲಾ ವಿಮರ್ಶೆ** — (ಸಂ.) ಪ್ರೊ. ವಿ.ಜಿ. ಅಂದಾನಿ
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೮-೯೯
* **ದೃಶ್ಯಕಲೆಯ ಸೃಜನಶೀಲರು** — ಎನ್. ಮರಿಶಾಮಾಚಾರ್
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೦
* **ದೃಶ್ಯ ಸಂಚಲನ** — ಡಾ. ಎಸ್.ಸಿ. ಪಾಟೀಲ
  ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ, ಧಾರವಾಡ, ೨೦೧೦
* **ದೃಶ್ಯಾನುಭವ** — ಡಾ. ಮೋಹನರಾವ. ಬಿ. ಪಂಚಾಳ
  ಅನ್ನಪೂರ್ಣ ಪ್ರಕಾಶನ, ಬೀದರ, ೨೦೧೦
* **ನಿಜದ ನೆಲೆ ಡಾ.ಬಿ.ಕೆ. ಹಿರೇಮಠ ಅಭಿನಂದನಾ ಗ್ರಂಥ** — (ಸಂ.) ಡಾ. ಎಸ್.ಸಿ. ಪಾಟೀಲ, ಸತ್ಯಾನಂದ ಪಾತ್ರೋಟ
  ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ, ಬಾಗಲಕೋಟೆ, ೨೦೦೩
* **ಪಿ.ಆರ್. ತಿಪ್ಪೇಸ್ವಾಮಿ** — ಡಾ. ಜಿ.ಶಂ. ಪರಮಶಿವಯ್ಯ
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೪
* **ಪೋಟೋರಿಯಾಲಿಸಂ** — ಕೆ.ವಿ. ಸುಬ್ರಮಣ್ಯಂ
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೫
* **ಬಾರೋಕ ಕಲೆ** — ಡಾ. ಎಸ್.ಸಿ. ಪಾಟೀಲ
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೯
* **ಭಾವಾಭಿವ್ಯಂಜಕ ಛಾಯಾಚಿತ್ರಕಲೆ** — ಡಾ. ದೊಡ್ಡೇರಿ ವೆಂಕಟಗಿರಿ ರಾವ್
  ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* **ಭಿತ್ತಿ ಚಿತ್ರಕಲೆ** — ಅ.ಲ. ನರಸಿಂಹನ್
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
* **ರಂಗೋಲಿ ಚಿತ್ರಕಲೆ** — ಡಾ. ಎಸ್.ಸಿ. ಪಾಟೀಲ
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೪
* **ರೇಖಾ ಚಿತ್ರಕಲೆಯ ತಾಯಿ** — ಡಾ. ಡಿ.ಎ. ಉಪಾಧ್ಯ
  ಉರ್ಮಿಳಾ ಪ್ರಕಾಶನ ಅಬ್ಬಿಗೇರಿ, ೨೦೦೭
* **ರೇಖಾಚಿತ್ರ** — ಸಂ. ಬಿ.ವಿ.ಕೆ. ಶಾಸ್ತ್ರೀ
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೧
* **ವರ್ಣಾವರಣ** — ಚಿ.ಸು. ಕೃಷ್ಣಶೆಟ್ಟಿ
  ಚಿತ್ತಾರ ಪ್ರಕಾಶನ, ಬೆಂಗಳೂರು, ೨೦೦೧
* **ವಿಜಯ ಸಿಂಧೂರ** — ಕೆ.ವಿ. ಸುಬ್ರಮಣ್ಯಮ್
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೦
* **ವರ್ಣಸಂಚಯ** — ಡಾ. ಎಸ್.ಸಿ. ಪಾಟೀಲ
  ವಿಜಯ ಚಿತ್ರಕಲಾ ಮಹಾವಿದ್ಯಾಲಯ, ಇಳಕಲ್, ೨೦೦೧
* **ವ್ಹಿ. ಟಿ. ಕಾಳೆ** — ಡಾ. ಎಸ್.ಸಿ. ಪಾಟೀಲ
  ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೪

* **ವೈ. ಸುಬ್ರಮಣ್ಣಂರಾಜು** ಎಸ್.ಎನ್. ಚಂದ್ರಶೇಖರ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೭
* **ಸಂಕುಲ** ಡಾ. ವಿಜಯಾ
ಅಸೀಮಾ ಪ್ರಕಾಶನ, ಬೆಂಗಳೂರು, ೧೯೯೦
* **ಸಾಧನೆಯ ಸಮುಚ್ಚಯ** ಡಾ. ಎಸ್.ಸಿ. ಪಾಟೀಲ
ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ, ಧಾರವಾಡ, ೨೦೧೦
* **ಸೌಂದರ್ಯ ಮತ್ತು ಕಲೆ** ಕೆ.ಬಿ. ರಾಮಕೃಷ್ಣರಾವ್
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು
* **ಹಚ್ಚೆ ಚಿತ್ರಕಲೆ** ಡಾ. ಎಸ್.ಸಿ. ಪಾಟೀಲ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೪

ನಿಯತಕಾಲಿಕೆಗಳು

* **ಕಲಾ ವಾರ್ತೆ** (ಸಂ.) ಅ.ಲ.ನರಸಿಂಹನ್
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೯
* **ಕಲಾ ವಾರ್ತೆ ೧೯೯೯, ಸಂಚಿಕೆ–೫೬** (ಪ್ರ.ಸಂ.) ವಿ.ಜಿ. ಅಂದಾನಿ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
* **ಕಲಾವಾರ್ತೆ** (ಪ್ರ.ಸಂ.) ಪೀಟರ್ ಲೂಯಿಸ್
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು,
ಜನವರಿ–ಮಾರ್ಚ್, ೨೦೦೩.
* **ಕಲಾ ವಾರ್ತೆ** (ಸಂ.) ಅ.ಲ.ನರಸಿಂಹನ್
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೩
ಸಂಚಿಕೆ ೬೮
* **ಕಲಾ ವಾರ್ತೆ** (ಪ್ರ.ಸಂ.) ಪೀಟರ್ ಲೂಯಿಸ್
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು,
೨೦೦೪ ಸಂಚಿಕೆ ೭೩

ಶಂಕರ ಪಾಟೀಲರ ಕುರಿತ ಪತ್ರಿಕಾ ಲೇಖನಗಳು

♦ ಕಲರ್ಸ್ ಎಕ್ಸ್‌ಪ್ಲೋರೇಶನ್ ಇನ್ ಪಾಟೀಲ ಪೆಂಟಿಂಗ್ಸ್
ಡೆಕ್ಕನ್ ಹೆರಾಲ್ಡ್ ಇಂಗ್ಲೀಷ್ ದಿನಪತ್ರಿಕೆ, ೭.೩.೧೯೭೪

♦ ಪ್ರತಿಭಾವಂತ ಯುವ ಕಲಾವಿದ ಶಂಕರ ಪಾಟೀಲ ಎಸ್.ಎಸ್. ಸಾಲಿಮಠ
ಪ್ರಪಂಚ ಕನ್ನಡ ದಿನಪತ್ರಿಕೆ ೨೪.೧೯೭೫

♦ ಶಂಕರ ಪಾಟೀಲರ ಕಲೆ ಪ್ರಶಂಸೆ (ಪಾಟೀಲ ಪುಟ್ಟಪ್ಪ)
ವಿಶ್ವವಾಣಿ ಕನ್ನಡ ದೈನಂದಿನ ಪತ್ರಿಕಾ ೨೭.೧೦.೧೯೭೫

♦ ಪಾಟೀಲರ ಛಾಯಾಚಿತ್ರಣ ಪ್ರದರ್ಶನ
ಸಂಯುಕ್ತ ಕರ್ನಾಟಕ ಕನ್ನಡ ದಿನಪತ್ರಿಕೆ ೨೭.೧೨.೧೯೭೫

- ಕಲಾದರ್ಶನ ಮೂಡಿಸುವ ಶಂಕರ ಪಾಟೀಲ (ಜಿ.ಎಚ್. ರಾಘವೇಂದ್ರ) ೪.೭.೧೯೭೪

- ಏಕ ಉಮದಾ ಚಿತ್ರಕಾರ ಶಂಕರ ಪಾಟೀಲ (ರವಿ ಪ್ರಭಗಾಂವಂಕರ್)
  ಗೋಮಂತಕ ಮರಾಠಿ ದಿನಪತ್ರಿಕೆ

- ಕವಿ, ಕಲಾವಿದ ಶಂಕರ ಪಾಟೀಲ (ಈಶ್ವರ ಪ್ರಸಾದ)
  ಸಂಯುಕ್ತ ಕರ್ನಾಟಕ ದಿನಪತ್ರಿಕೆ ೧೭.೦೯.೧೯೭೮

- ಬಂಧನಕ್ಕೆ ಒಳಗಾದ ಶಂಕರ ಪಾಟೀಲ (ಪಾಟೀಲ ಪುಟ್ಟಪ್ಪ)
  ಪ್ರಪಂಚ ಕನ್ನಡ ದಿನಪತ್ರಿಕೆ ೨೫.೦೨.೧೯೭೯

- ಕ್ಲಿಷ್ಟ ಮಾಧ್ಯಮದ ಕಲಾ ಕೌಶಲ (ಬಿ.ವಿ.ಕೆ.)
  ಪ್ರಜಾವಾಣಿ ಕನ್ನಡ ದಿನಪತ್ರಿಕೆ ೩೧.೦೩.೧೯೭೯

- ಕಲಾವಿದ ಶಂಕರ ಪಾಟೀಲರ ಕಲಾಕೃತಿಗಳ ಪ್ರದರ್ಶನ (ಪಿ.ಆರ್.ತಿಪ್ಪೇಸ್ವಾಮಿ)
  ಜನತಾವಾಣಿ ಕನ್ನಡ ದಿನಪತ್ರಿಕೆ ೨೬.೦೩.೧೯೭೯

- ಸ್ಫೂರ್ತಿ ಭಾವೋದ್ವೇಗದ ಹಲವು ಮುಖ
  ಪ್ರಜಾವಾಣಿ ೧೪.೧೧.೧೯೮೦

- Evocative Paintings by Art Teacher
  ಡೆಕ್ಕನ್ ಹೆರಾಲ್ಡ, ಇಂಗ್ಲೀಷ್ ದೈನಂದಿನ ಪತ್ರಿಕೆ ೧೩.೧೧.೧೯೮೦

- ಕಲಾಯಾತ್ರೆಯ ಕಲಾವಿದರು
  ಜನತಾವಾಣಿ ಕನ್ನಡ ದಿನಪತ್ರಿಕೆ ೧೪.೦೪.೧೯೮೪

- ಪ್ರತಿಭಾವಂತ ಕಲಾವಿದನ ಹೊಸ ಮಾದರಿಯ ಪ್ರದರ್ಶನ
  ಕನ್ನಡಮ್ಮ ಕನ್ನಡ ದಿನಪತ್ರಿಕೆ ೧೬.೧೦.೧೯೮೬

- ಖುಷಿ ಪಡಿಸುವ ಕೃತಿಗಳು (ಕೆ.ವಿ. ಸುಬ್ರಮಣ್ಯಂ)
  ಸಂಯುಕ್ತ ಕರ್ನಾಟಕ ದೈನಂದಿನ ಪತ್ರಿಕೆ ೧೨.೧೦.೧೯೮೭

- ಚಿತ್ರಕಲೆಯಲ್ಲಿ ಹೊಸ ಪ್ರಯೋಗ
  ಉದಯವಾಣಿ ಕನ್ನಡ ದಿನಪತ್ರಿಕೆ ೨೩.೧೦.೧೯೮೭

- Patterns onwood (Martajakimo wicz karkle)
  ಡೆಕ್ಕನ್ ಹೆರಾಲ್ಡ, ಇಂಗ್ಲೀಷ್ ದೈನಂದಿನ ಪತ್ರಿಕೆ ೦೮.೦೯.೧೯೮೭

- Experimental Imagery
  ಇಂಡಿಯನ್ ಎಕ್ಸ್‌ಪ್ರೆಸ್, ಇಂಗ್ಲಿಷ್ ದಿನಪತ್ರಿಕೆ ೧೦.೦೯.೧೯೮೭

- ರೋಮ್ಯಾನ್ಸ್ ಆನ್ ವುಡ್ ಕಲಾಕೃತಿಚೆ
  ತರುಣ ಭಾರತ ಮರಾಠಿ ದಿನಪತ್ರಿಕೆ ೧೩.೧೦.೧೯೮೩

- Wood Burning Art and Entertainment
  ದಿ ಸಿಟಿ ಟ್ಯಾಬ್ ಇಂಗ್ಲೀಷ್ ದೈನಂದಿನ ಪತ್ರಿಕೆ

- ನಿಂತ ಪತ್ರಿಕೆಯ ಸ್ಥಳದಲ್ಲಿ ಸಾಗುತ್ತಿರುವ ಅಕ್ಷರ ದಾಸೋಹ (ಎಸ್.ನಿಂಗರಾಜ)
  ಅಗ್ನಿಗಾನ ಕನ್ನಡ ಪಾಕ್ಷಿಕ ಪತ್ರಿಕೆ ೦೧.೧೫. ೨೦೧೦

- ಡೆಕ್ಕನ್ ಹೆರಾಲ್ಡ (ಇಂಗ್ಲೀಷ್ ದೈನಂದಿನ ಪತ್ರಿಕೆ) ೦೭.೦೩.೧೯೭೪
- ಪ್ರಪಂಚ (ಕನ್ನಡ ದಿನಪತ್ರಿಕೆ) ೨೪.೦೯.೧೯೭೫
- ವಿಶ್ವವಾಣಿ (ಕನ್ನಡ ದಿನಪತ್ರಿಕೆ) ೨೭.೧೨.೧೯೭೫
- ಸಂಯುಕ್ತ ಕರ್ನಾಟಕ (ಕನ್ನಡ ದಿನಪತ್ರಿಕೆ) ೨೭.೧೨.೧೯೭೫
- ಗೋಮಂತಕ (ಮರಾಠಿ ದಿನಪತ್ರಿಕೆ) ೨೩.೦೬.೧೯೭೬
- ಸಂಯುಕ್ತ ಕರ್ನಾಟಕ (ಕನ್ನಡ ದಿನಪತ್ರಿಕೆ) ೧೭.೦೯.೧೯೭೮
- ಪ್ರಪಂಚ (ಕನ್ನಡ ದಿನಪತ್ರಿಕೆ) ೨೩.೦೨.೧೯೭೯
- ಪ್ರಜಾವಾಣಿ (ಕನ್ನಡ ದಿನಪತ್ರಿಕೆ) ೩೧.೦೩.೧೯೭೯
- ಜನತಾ ವಾಣಿ (ಕನ್ನಡ ದಿನಪತ್ರಿಕೆ) ೨೬.೦೩.೧೯೭೯
- ಜನತಾ ವಾಣಿ (ಕನ್ನಡ ದಿನಪತ್ರಿಕೆ) ೧೮.೧೨.೧೯೮೦
- ಪ್ರಜಾವಾಣಿ (ಕನ್ನಡ ದಿನಪತ್ರಿಕೆ) ೧೪.೧೧.೧೯೮೦
- ಡೆಕ್ಕನ್ ಹೆರಾಲ್ಡ (ಇಂಗ್ಲೀಷ್ ದೈನಂದಿನ ಪತ್ರಿಕೆ) ೧೩.೧೧.೧೯೮೦
- ಜನತಾ ವಾಣಿ (ಕನ್ನಡ ದಿನಪತ್ರಿಕೆ) ೧೪.೦೪.೧೯೮೪
- ಕನ್ನಡಮ್ಮ (ಕನ್ನಡ ದಿನಪತ್ರಿಕೆ) ೧೬.೧೦.೧೯೮೬
- ಸಂಯುಕ್ತ ಕರ್ನಾಟಕ (ಕನ್ನಡ ದಿನಪತ್ರಿಕೆ) ೧೨.೧೦.೧೯೮೭
- ಉದಯವಾಣಿ (ಕನ್ನಡ ದಿನಪತ್ರಿಕೆ) ೨೩.೧೦.೧೯೮೭
- ಡೆಕ್ಕನ್ ಹೆರಾಲ್ಡ (ಇಂಗ್ಲೀಷ್ ದೈನಂದಿನ ಪತ್ರಿಕೆ) ೦೮.೧೦.೧೯೮೭
- ಇಂಡಿಯನ್ ಎಕ್ಸ್‌ಪ್ರೆಸ್ ೧೦.೧೦.೧೯೮೭
- ತರುಣ ಭಾರತ (ಕನ್ನಡ ದಿನಪತ್ರಿಕೆ) ೧೩.೧೦.೧೯೮೩
- ದ ಸಿಟಿ ಟ್ಯಾಬ್ (ಇಂಗ್ಲೀಷ್ ದೈನಂದಿನ ಪತ್ರಿಕೆ)
- ಅಗ್ನಿಗಾನ (ಕನ್ನಡ ವಾರಪತ್ರಿಕೆ) ೦೧.೧೫.೨೦೧೦
- ಪ್ರಪಂಚ (ಕನ್ನಡ ದಿನಪತ್ರಿಕೆ) ೨೪.೦೯.೧೯೭೫
- ಸಂಯುಕ್ತ ಕರ್ನಾಟಕ (ಕನ್ನಡ ದಿನಪತ್ರಿಕೆ) ೧೭.೦೯.೧೯೭೮

ಸಂದರ್ಶನಗೈದ ವಕ್ತೃಗಳ ವಿವರ

- ಶ್ರೀ ಚನ್ನವೀರ ಕಣವಿ – ಧಾರವಾಡ
- ಶ್ರೀಮತಿ ಪಿ.ಎಸ್. ಪಾಟೀಲ – ದಾವಣಗೆರೆ
- ಶ್ರೀ ನಯನ ಎಸ್. ಪಾಟೀಲ – ದಾವಣಗೆರೆ
- ಶ್ರೀ ಆರ್ಯ ಆಚಾರ್ಯ – ಧಾರವಾಡ
- ಶ್ರೀ ಎಂ.ಆರ್. ಬಾಳಿಕಾಯಿ – ಧಾರವಾಡ
- ಶ್ರೀ ಸಿ. ಚಂದ್ರಶೇಖರ – ಬೆಂಗಳೂರು
- ಶ್ರೀ ಎಂ.ಬಿ. ಪಾಟೀಲ – ಬೆಂಗಳೂರು
- ಶ್ರೀ ಮಲ್ಲಿಕಾರ್ಜುನ ಜಾಧವ – ದಾವಣಗೆರೆ

ಪಾಟೀಲರು ಪಾಲ್ಗೊಂಡ ರಾಜ್ಯಮಟ್ಟದ ಕಲಾ ಪ್ರದರ್ಶನಗಳು

- ೧೯೬೯ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ೧೯೭೦ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ೧೯೭೨ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ೧೯೭೬ ಲಾಯನ್ಸ್ ಕ್ಲಬ್, ಧಾರವಾಡ
- ೧೯೮೦ ಕರ್ನಾಟಕ ಕಲಾಮೇಳ, ಬೆಂಗಳೂರು
- ೧೯೮೧ ಕರ್ನಾಟಕ ಕಲಾಮೇಳ, ಬೆಂಗಳೂರು
- ೧೯೮೩ ಕರ್ನಾಟಕ ಕಲಾಮೇಳ, ಬೆಂಗಳೂರು
- ೧೯೮೪ ಕರ್ನಾಟಕ ಕಲಾಮಹೋತ್ಸವ, ಬೆಂಗಳೂರು
- ೧೯೮೫ ಕರ್ನಾಟಕ ಕಲಾಮೇಳ, ಬೆಂಗಳೂರು
- ೧೯೮೮ ಕರ್ನಾಟಕ ಕಲಾಮೇಳ, ಬೆಂಗಳೂರು
- ೧೯೯೦ ಮಂಜಯ್ಯ ಹೆಗ್ಗಡೆ ಸ್ಮಾರಕ ಕಲಾಪ್ರದರ್ಶನ, ಮಂಗಳೂರು
- ೧೯೯೧ ಜನಪದ ಕಲಾಮೇಳ

ಪಾಟೀಲರು ಪಾಲ್ಗೊಂಡ ರಾಷ್ಟ್ರಮಟ್ಟದ ಕಲಾ ಪ್ರದರ್ಶನಗಳು

- ೧೯೮೩ ಅಖಿಲ ಭಾರತ ವೀರಶೈವ ಮಹಾಸಭಾ, ಮೈಸೂರು
- ೧೯೮೮ ೫೦ನೇ ವರ್ಷದ ಮೈಸೂರು ದಸರಾ ಪ್ರದರ್ಶನ, ಮೈಸೂರು
- ೧೯೯೧ ವಿಜಯ ಕಲಾಮಂದಿರ, ಗದಗ
- ೧೯೯೧ ಅಖಿಲ ಭಾರತ ಸುವರ್ಣ ಮಹೋತ್ಸವ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ೧೯೯೨ ೨೫ನೇ ವರ್ಷದ ವಾರ್ಷಿಕ ಮಹೋತ್ಸವ
- ೧೯೯೨ ಅಖಿಲ ಭಾರತ ಸಾಹಿತ್ಯ ಸಮ್ಮೇಳನ, ದಾವಣಗೆರೆ
- ೧೯೯೩ ವಾರ್ಷಿಕ ಕಲಾಪ್ರದರ್ಶನ, ಕೊಚ್ಚಿನ್
- ೧೯೯೩ ಅಖಿಲ ಭಾರತ ಛಾಯಾಚಿತ್ರ ಪ್ರದರ್ಶನ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
- ೧೯೯೪ ರಾಷ್ಟ್ರೀಯ ಲಲಿತಕಲಾ ಅಕಾಡೆಮಿ, ಮದ್ರಾಸ
- ೧೯೯೪ ಅಖಿಲ ಭಾರತ ಕಲಾ ಪ್ರದರ್ಸನ, ಬಿಜಾಪುರ
- ೧೯೯೪ ೭ನೇ ರಾಷ್ಟ್ರೀಯ ಕಲಾಮೇಳ, ದೆಹಲಿ
- ೧೯೯೪ ವಾರ್ಷಿಕ ಕಲಾಪ್ರದರ್ಶನ, ಕೊಚ್ಚಿನ್
- ೧೯೯೫ ೮ನೇ ರಾಷ್ಟ್ರೀಯ ಕಲಾಮೇಳ, ಬೆಂಗಳೂರು
- ೧೯೯೬ ೯ನೇ ರಾಷ್ಟ್ರೀಯ ಕಲಾಮೇಳ, ಕಲ್ಕತ್ತಾ

ಪಾಟೀಲರ ಏಕವ್ಯಕ್ತಿ ಕಲಾಪ್ರದರ್ಶನಗಳು

- ೧೯೬೮ ಡಿ.ವ್ಹಿ. ಹಾಲಭಾವಿ ಕಲಾಶಾಲೆ, ಧಾರವಾಡ
- ೧೯೭೨ ಚೆಂಬರ್ ಆಫ್ ಕಾಮರ್ಸ್ ಹಾಲ್, ಹುಬ್ಬಳ್ಳಿ
- ೧೯೭೩ ತಾಜ್ ಆರ್ಟ್ ಗ್ಯಾಲರಿ, ಮುಂಬಯಿ
- ೧೯೭೪ ಮ್ಯಾಕ್ಸ್‌ಮುಲ್ಲರ್ ಭವನ
- ೧೯೭೭ ಮನಾಜಿಸಂ ಬ್ರೆಗ್ರಾಂಜಾ ಹಾಲ್, ಪಣಜಿ ಗೋವಾ
- ೧೯೭೮ ಯುನೈಟೆಡ್ ಸ್ಟೇಟ್ ಆಫ್ ಅಮೇರಿಕಾದಲ್ಲಿ ೧೦ ಸ್ಥಳಗಳಲ್ಲಿ
- ೧೯೭೯ ಆಂಧ್ರಪ್ರದೇಶ ಲಲಿತಕಲಾ ಅಕಾಡೆಮಿ ಗ್ಯಾಲರಿ, ಹೈದರಾಬಾದ್
- ೧೯೮೩ ಕಲಾಗುರು ಆರ್ಟ್‌ಗ್ಯಾಲರಿ, ದಾವಣಗೆರೆ
- ೧೯೮೬ ವಾಗ್ಮಯ ಚರ್ಚಾಮಂಡಳ, ಬೆಳಗಾವಿ
- ೧೯೮೭ ಚಿತ್ರಕಲಾ ಪರಿಷತ್, ಬೆಂಗಳೂರು
- ೧೯೮೭ ಫ್ರೆಂಚ್ ಕಲ್ಚರಲ್ ಸೆಂಟರ, ಬೆಂಗಳೂರು
- ೧೯೯೧ ಕಲಾಗುರು ಆರ್ಟ್‌ಗ್ಯಾಲರಿ, ದಾವಣಗೆರೆ
- ೧೯೯೨ ಕಲಾಗುರು ಆರ್ಟ್‌ಗ್ಯಾಲರಿ, ದಾವಣಗೆರೆ
- ೧೯೯೪ ಚಿತ್ರಕಲಾ ಪರಿಷತ್, ಬೆಂಗಳೂರು

ಪಾಟೀಲರ ಕಲಾಕೃತಿಗಳ ಸಂಗ್ರಹದ ನೆಲೆಗಳು

- ಕೊಯ್ನಿ ಆರ್ಟ್ ಸೊಸೈಟಿ ಮ್ಯಾಸಿಯಂ, ಯು.ಎಸ್.ಎ.
- ಮೊಯಿನೆ ವಿಶ್ವವಿದ್ಯಾಲಯ, ಯು.ಎಸ್.ಎ.
- ರಾಷ್ಟ್ರೀಯ ಲಲಿತಕಲಾ ಅಕಾಡೆಮಿ, ದೆಹಲಿ

- ರಾಷ್ಟ್ರೀಯ ಲಲಿತಕಲಾ ಅಕಾಡೆಮಿ, ಮದ್ರಾಸ
- ಆಂಧ್ರಪ್ರದೇಶ ಲಲಿತಕಲಾ ಅಕಾಡೆಮಿ, ಹೈದರಾಬಾದ್
- ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
- ಕರ್ನಾಟಕ ಸರ್ಕಾರ ವಸ್ತು ಸಂಗ್ರಹಾಲಯ, ಬೆಂಗಳೂರು
- ವೆಂಕಟಪ್ಪ ಆರ್ಟ್‌ಗ್ಯಾಲರಿ, ಬೆಂಗಳೂರು
- ಜನಪದ ವಸ್ತು ಸಂಗ್ರಹಾಲಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು
- ಏರ್ ಇಂಡಿಯಾ, ಮುಂಬೈ
- ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಚಿತ್ರಕಲಾ ಮ್ಯಾಸಿಯಂ ಕುವೆಂಪು ವಿಶ್ವವಿದ್ಯಾಲಯ, ದಾವಣಗೆರೆ
- ನಿಪ್ಪೋನ್ ಎಂಟರ್‌ಪ್ರೆಸ್ ದಕ್ಷಿಣ ಭಾಗ, ಬೆಂಗಳೂರು
- ಮಂಜೂಶಾ ಮ್ಯೂಜಿಯಂ, ಧರ್ಮಸ್ಥಳ
- ಐಡಿಯಲ್ ಫೈನ್ ಆರ್ಟ್ ಕಾಲೇಜು, ಗುಲಬರ್ಗಾ
- ಹಾಲಭಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡ
- ಸಪ್ತರಂಗ, ಬೆಳಗಾವಿ

ಪಾಟೀಲರು ನೀಡಿದ ಉಪನ್ಯಾಸ ಮತ್ತು ಭಾಗವಹಿಸುವಿಕೆ

ರಾಜ್ಯಮಟ್ಟದಲ್ಲಿ ಭಾಗವಹಿಸುವಿಕೆ

* ೧೯೭೪ ಚಲನಚಿತ್ರ ಮತ್ತು ದೂರದರ್ಶನ ಕೇಂದ್ರ ಪುಣೆ ಇವರ ಸಹಯೋಗದಲ್ಲಿ ಬೆಂಗಳೂರು
  ೧೯೮೧ ಮಾರ್ಡನ್ ಶೈಕ್ಷಣಿಕ ಚಟುವಟಿಕೆ, ಟಿ.ಟಿ.ಟಿ.ಐ., ಮದ್ರಾಸ
  ೧೯೮೪ ಕ್ಯೂರಿಕೂಲಂ ಶೈಕ್ಷಣಿಕ ಬೆಳವಣಿಗೆ ಟಿ.ಟಿ.ಟಿ.ಐ., ಬೆಂಗಳೂರು
* ೧೯೮೮ ಪ್ರೋಪೆಶನಲ್ ಎಜುಕೇಶನ್ ಮತ್ತು ಹ್ಯೂಮನ್ ರಿಸೋರ್ಸ್ ಡೆವಲಪ್ಮೆಂಟ್ ಯುನೈಟೆಡ್ ಸ್ಟೇಟ್ಸ್ ಎಜುಕೇಶನ್, ಬೆಂಗಳೂರು
* ೧೯೯೧ ರೋಲ್ ಆಫ್ ಯುಥ್ ಇನ್ ಆರ್ಟ್ ಹಾವೇರಿ ವಸಂತೋತ್ಸವ
* ೧೯೯೪ ಕರ್ನಾಟಕದ ಸಾಂಪ್ರದಾಯಿಕ ಮತ್ತು ಸಮಕಾಲೀನ ಕಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ೧೯೯೫ ಜಾಹಿರಾತು ಕಲೆ ಮತ್ತು ಪೆಂಟಿಂಗ್ ಡೈಮಂಡ್ ಜೂಬ್ಲಿಯ ಉಪನ್ಯಾಸ
* ೧೯೯೯ ಪೋಕ್ ಪೆಂಟಿಂಗ್ ಆನ್ ಪೇಪರ್ ಸಿಲ್ವರ್ ಜ್ಯೂಬ್ಲಿ ಉಪನ್ಯಾಸ ಜನಪದ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ರಾಷ್ಟ್ರಮಟ್ಟದಲ್ಲಿ ಭಾಗವಹಿಸುವಿಕೆ

* ೧೯೮೧ ಪ್ರಿಂಟ್ ಮೆಕಿಂಗ್ ವರ್ಕಶಾಪ್, ಬ್ರಿಟಿಷ್ ಕೌನ್ಸಿಲ್ ಸಹಯೋಗದಲ್ಲಿ ನ್ಯಾಷನಲ್ ಲಲಿತಕಲಾ ಅಕಾಡೆಮಿ ಮದ್ರಾಸ,
* ೧೯೮೨ ಆರ್ಟ್ ಎಜುಕೇಶನ್ ಇನ್ ಇಂಡಿಯಾ ನ್ಯಾಶನಲ್ ಲಲಿತಕಲಾ ಅಕಾಡೆಮಿ, ದೆಹಲಿ
* ೧೯೮೭ ಅಖಿಲ ಭಾರತ ಕಲಾಶಿಕ್ಷಣ ರಾಷ್ಟ್ರೀಯ ಲಲಿತಕಲಾ ಅಕಾಡೆಮಿ, ದೆಹಲಿ

ಪಾಟೀಲರ ಗ್ರಂಥಗಳು

- ೧೯೯೧ ಹೊಯ್ಸಳ ಕನ್ನಡ ವಾರಪತ್ರಿಕೆ
- ೧೯೯೩ ನಾ ಕವಿತೆ ಬರೆದಿಲ್ಲ (ಕವನ ಸಂಕಲನ)
- ೧೯೯೫ ಚಿತ್ರಕಲಾ ಚಿಂತನೆ (ಚಿತ್ರಕಲೆಯ ಕುರಿತಾದ ಲೇಖನಗಳು)
- ೧೯೯೬ ದ ಲಿವ್ಹಿಂಗ್ ಲೈನ್ಸ್ (ರೇಖಾಚಿತ್ರಗಳ ಸಂಕಲನ)
- ೧೯೯೭ ಹಿಮಾಚಲದ ಮಡಿಲಲ್ಲಿ (ಪ್ರವಾಸ ಕಥನ)
- ೧೯೯೮ ಚಿತ್ರಾಂತರಂಗ (ಚಿತ್ರಕಲೆಯ ಲೇಖನಗಳು)
- ೨೦೦೧ ಕಣ್ಮುಚ್ಚಿ ಕಂಡವರು (ಕವನ ಸಂಕಲನ)

ಶ್ರೀ ಶಂಕರ ಪಾಟೀಲ ಸ್ಮಾರಕ ಕಲಾಪ್ರಶಸ್ತಿ ಪುರಸ್ಕೃತರು

- ೨೦೦೨ನೇ ಸಾಲಿನ ಶ್ರೀ ಜೆ.ಎಸ್.ಖಂಡೇರಾವ್, ಗುಲಬರ್ಗಾ
- ೨೦೦೩ನೇ ಸಾಲಿನ ಶ್ರೀ ಎಸ್. ಜಿ. ವಾಸುದೇವ, ಬೆಂಗಳೂರು
- ೨೦೦೪ನೇ ಸಾಲಿನ ಶ್ರೀ ವಿಜಯ ಸಿಂಧೂರ, ಜಮಖಂಡಿ
- ೨೦೦೫ನೇ ಸಾಲಿನ ಶ್ರೀ ಎ.ಎಸ್. ಚಂದ್ರಶೇಖರ, ಬೆಂಗಳೂರು
- ೨೦೦೬ನೇ ಸಾಲಿನ ಶ್ರೀ ಪಿ.ಎನ್. ಆರ್ಯ, ಧಾರವಾಡ
- ೨೦೦೭ನೇ ಸಾಲಿನ ಶ್ರೀ ಪೀಟರ್ ಲೂಯಿಸ್, ಉಡುಪಿ
- ೨೦೦೮ನೇ ಸಾಲಿನ ಶ್ರೀ. ಕೆ.ಟಿ. ಶಿವಪ್ರಸಾದ.

